ಕರ್ನಾಟಕ ವಿಮುಕ್ತ ಬುಡಕಟ್ಟುಗಳ ಸಾಮಾಜಿಕ ಅಧ್ಯಯನ

(ಸಮಾಜಶಾಸ್ತ್ರ ವಿಷಯದಲ್ಲಿ ಪಿಎಚ್ ಡಿ ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಮಹಾಪ್ರಬಂಧ)





ಸಂಶೋಧಕರು
ಮಲಿಕಾರ್ಜುನ ಭೀಮರಾಯ

...ಕರು
...ಂ ಮೇತ್ರಿ
ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೮

ಕರ್ನಾಟಕ ವಿಮುಕ್ತ ಬುಡಕಟ್ಟುಗಳ ಸಾಮಾಜಿಕ ಅಧ್ಯಯನ

(ಸಮಾಜಶಾಸ್ತ್ರ ವಿಷಯದಲ್ಲಿ ಪಿಎಚ್ ಡಿ ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು
ಮಲ್ಲಿಕಾರ್ಜುನ ಭೀಮರಾಯ

ಮಾರ್ಗದರ್ಶಕರು
ಡಾ.ಕೆ ಎಂ ಮೇತ್ರಿ
ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೯

ದೃಢೀಕರಣ ಪತ್ರ

ಶ್ರೀ ಮಲ್ಲಿಕಾರ್ಜುನ ಭೀಮರಾಯ ಅವರು **"ಕರ್ನಾಟಕ ವಿಮುಕ್ತ ಬುಡಕಟ್ಟುಗಳ ಸಾಮಾಜಿಕ ಅಧ್ಯಯನ"** **(A sociological Study of de-notified Tribes of Karnataka)** ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಪಿಎಚ್ ಡಿ ಪದವಿಗಾಗಿ ಸಮಾಜಶಾಸ್ತ್ರ ವಿಷಯದಲ್ಲಿ ಸಿದ್ಧಪಡಿಸಿದ್ದಾರೆ. ಇದು ಅವರು ಸ್ವತಃ ಕ್ಷೇತ್ರಕಾರ್ಯ ಕೈಗೊಂಡು ಸಂಗ್ರಹಿಸಿದ ಸಂಶೋಧನ ಸಾಮಗ್ರಿಯ ಆಧಾರದ ಮೇಲೆ ರಚಿತವಾಗಿದೆ. ಇದನ್ನು ಭಾಗಶಃ ಆಗಲಿ, ಪೂರ್ಣವಾಗಿಯಾಗಲಿ, ಬೇರಾವುದೇ ಡಿಪ್ಲೊಮ ಅಥವಾ ಪದವಿಗಾಗಿ ಒಪ್ಪಿಸಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಸ್ಥಳ: ವಿದ್ಯಾರಣ್ಯ
ದಿನಾಂಕ: 22.12.2009

ಡಾ ಕೆ ಎಂ ಮೇತ್ರಿ
ಪ್ರಾಧ್ಯಾಪಕರು ಹಾಗೂ ಮಾರ್ಗದರ್ಶಕರು
ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

"ಕರ್ನಾಟಕ ವಿಮುಕ್ತ ಬುಡಕಟ್ಟುಗಳ ಸಾಮಾಜಿಕ ಅಧ್ಯಯನ" (**A sociological Study of de-notified Tribes of Karnataka**) ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್ ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಡಾ ಕೆ ಎಂ ಮೇತ್ರಿ ಅವರ ಮಾರ್ಗದರ್ಶನದಲ್ಲಿ ಸಮಾಜಶಾಸ್ತ್ರ ವಿಷಯದಲ್ಲಿ ಸಿದ್ಧಪಡಿಸಲಾಗಿದೆ. ಈ ಮಹಾಪ್ರಬಂಧವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಇಲ್ಲವೆ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ

ಸ್ಥಳ: ವಿದ್ಯಾರಣ್ಯ
ದಿನಾಂಕ: 22.12.2009

ಮಲ್ಲಿಕಾರ್ಜುನ ಭೀಮರಾಯ
ಸಂಶೋಧಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬

ಪರಿವಿಡಿ

ಅಧ್ಯಾಯ ಒಂದು

ಪ್ರವೇಶ \ ೧

ಇದುವರೆಗಿನ ಅಧ್ಯಯನಗಳು
ಅಧ್ಯಯನದ ವ್ಯಾಪ್ತಿ
ಅಧ್ಯಯನದ ಉದ್ದೇಶಗಳು
ಸಮಕಾಲಿನ ಸಮಸ್ಯೆಗಳಿಗೆ ಪ್ರಸ್ತುತ ಅಧ್ಯಯನದ ಸಂಬಂಧ
ಸಮಾಜ ಅಥವಾ ರಾಷ್ಟ್ರಕ್ಕೆ ಪ್ರಸ್ತುತ ಅಧ್ಯಯನದ ಅವಶ್ಯಕತೆ
ಜ್ಞಾನ ಶಾಖೆಗೆ ಪ್ರಸ್ತುತ ಅಧ್ಯಯನದ ಕೊಡುಗೆ
ವಿಮುಕ್ತ ಬುಡಕಟ್ಟುಗಳ ಪ್ರಸ್ತುತ ಸ್ಥಿತಿ–ಗತಿ
ಅಧ್ಯಯನದ ವಿನ್ಯಾಸ ಮತ್ತು ವಿಧಾನ

ಅಧ್ಯಾಯ ಎರಡು

ವಿಮುಕ್ತಿ ಬುಡಕಟ್ಟುಗಳ ಚಾರಿತ್ರಿಕ ಹಿನ್ನೆಲೆ / ೧೬

ಬುಡಕಟ್ಟುಗಳ ಸ್ವರೂಪ
೧೮೯೭ರ ಅಪರಾಧಿ ಬುಡಕಟ್ಟುಗಳ ಕಾಯ್ದೆ
೧೯೧೧ರ ಅಪರಾಧಿ ಬುಡಕಟ್ಟು ಕಾಯ್ದೆ
೧೯೨೩ರ ಅಪರಾಧಿ ಬುಡಕಟ್ಟು ಕಾಯ್ದೆ
೧೯೨೪ರ ಅಪರಾಧಿ ಬುಡಕಟ್ಟು ಕಾಯ್ದೆ
೧೯೪೮ರ ಮದ್ರಾಸ್‌ನ ನಿರ್ಬಂಧಿತ ರೂಢಿಗತ ಅಪರಾಧಿಗಳ ಕಾಯ್ದೆ
ಬಾಂಬೆ ಪ್ರಾಂತದ ಅಪರಾಧಿ ಬುಡಕಟ್ಟುಗಳ ಅನುಸೂಚಿಯ ಇತಿಹಾಸ
ಬಾಂಬೆ ಪ್ರಾಂತ ಸೆಟಲ್‌ಮೆಂಟ್‌ಗಳಲ್ಲಿದ್ದ ಅಲೆಮಾರಿ ಬುಡಕಟ್ಟುಗಳು
ವಿಮುಕ್ತ ಬುಡಕಟ್ಟು ಎನ್ನುವುದಕ್ಕೆ ವರದಿಯಲ್ಲಿ ನೀಡಿರುವ ವ್ಯಾಖ್ಯೆ

ಅಧ್ಯಾಯ ಮೂರು

ಭೌಗೋಳಿಕ ಸ್ವರೂಪ ಮತ್ತು ಜನಸಂಖ್ಯೆ / ೫೦

ವಿಮುಕ್ತ ಬುಡಕಟ್ಟುಗಳು ನೆಲೆಸಿರುವ ಸೆಟ್ಲ್‌ಮೆಂಟ್‌ಗಳು
ಅಪರಾಧಿ ಬುಡಕಟ್ಟು ವಸಾಹತುಗಳು ಜನಸಂಖ್ಯಾ ವಿವರ

ಅಧ್ಯಾಯ ನಾಲ್ಕು

ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿ–ಗತಿ / ೮೭

ಸೆಟಲಮೆಂಟ್‌ನಲ್ಲಿ ನೆಲೆಸಿರುವ ವಿಮುಕ್ತ ಬುಡಕಟ್ಟುಗಳ
ಕೌಟಂಬಿಕ ಮತ್ತು ಸಾಂಸ್ಕೃತಿಕ ಜೀವನ

ಸೆಟಲಮೆಂಟ್‌ನಲ್ಲಿ ನೆಲೆಸಿರುವ ವಿಮುಕ್ತ ಬುಡಕಟ್ಟುಗಳ
ಧಾರ್ಮಿಕ ವಿಧಿ ಆಚರಣೆಗಳು
ಸೆಟಲಮೆಂಟ್‌ನಲ್ಲಿ ನೆಲೆಸಿರುವ ವಿಮುಕ್ತ ಬುಡಕಟ್ಟುಗಳ
ನ್ಯಾಯ ಪಂಚಾಯತಿ ರಚನೆ, ಸಾಹಿತ್ಯ ಮತ್ತು ಭಾಷೆ

ಅಧ್ಯಾಯ ಐದು
ಆರ್ಥಿಕ ಸ್ಥಿತಿ-ಗತಿ / ೨೨೩
ಆರ್ಥಿಕ ಜೀವನ
ಉಡುಗೆ ತೊಡುಗೆಗಳು
ವಿಮುಕ್ತ ಬುಡಕಟ್ಟು ಸಮುದಾಯಗಳ ವೃತ್ತಿಗಳು

ಅಧ್ಯಾಯ ಆರು
ಶೈಕ್ಷಣಿಕ ಮತ್ತು ಆರೋಗ್ಯ ಸ್ಥಿತಿ-ಗತಿ / ೨೪೮
ವಿಮುಕ್ತ ಬುಡಕಟ್ಟು ಸಮುದಾಯಗಳ ಶೈಕ್ಷಣಿಕ ಸ್ಥಿತಿಗತಿ
ಸೆಟ್ಲಮೆಂಟ್ ಜನರ ಆರೋಗ್ಯದ ಸ್ಥಿತಿಗತಿ

ಅಧ್ಯಾಯ ಏಳು
ರಾಜಕೀಯ ಸ್ಥಿತಿಗತಿ / ೨೬೯

ಅಧ್ಯಾಯ ಎಂಟು
ಶೋಷಣೆಯ ವಿವಿಧ ಮುಖಗಳು ಮತ್ತು ವಿಮುಕ್ತ ಬುಡಕಟ್ಟುಗಳು \ ೨೮೦

ಅಧ್ಯಾಯ ಒಂಬತ್ತು
ಇತರ ಸಮುದಾಯಗಳೊಂದಿಗೆ ವಿಮುಕ್ತ
ಬುಡಕಟ್ಟುಗಳ ಸಾಮಾಜಿಕ ಸಂಬಂಧಗಳು \ ೨೮೮

ಅಧ್ಯಾಯ ಹತ್ತು
ಸಮಾರೋಪ \ ೨೯೪
ಸಮಸ್ಯೆಗಳು
ಫಲಿತಗಳು
ಸಲಹೆಗಳು

ಅನುಬಂಧಗಳು \ ೩೦೬
೧. ಪರಾಮರ್ಶನ ಗ್ರಂಥಗಳು
೨. ಮಾಹಿತಿದಾರರ ಪಟ್ಟಿ
೩. ದಾಖಲೆಗಳು
೪. ನಕಾಶೆ
೫. ಅಂಕಿಅಂಶಗಳು
೬. ಛಾಯಾಚಿತ್ರಗಳು

ಪರಿಶಿಷ್ಟಗಳು

ಪರಿಶಿಷ್ಟ ೧: ಕೋಷ್ಟಕಗಳು

೩.೧. ಬಾಗಲಕೋಟ ಸೆಟ್ಲ್‌ಮೆಂಟ್ ಜನಸಂಖ್ಯೆ / ೬೫
೩.೨. ಬಿಜಾಪುರ ಸೆಟ್ಲ್‌ಮೆಂಟ್ ಜನಸಂಖ್ಯೆ / ೬೭
೩.೩. ದಾಂಡೇಲಿ ಸೆಟ್ಲ್‌ಮೆಂಟ್ ಜನಸಂಖ್ಯೆ / ೬೮
೩.೪. ಗದಗ ಸೆಟ್ಲ್‌ಮೆಂಟ್ ಜನಸಂಖ್ಯೆ / ೬೮
೩.೫. ಗೋಕಾಕ್ ಸೆಟ್ಲ್‌ಮೆಂಟ್ ಜನಸಂಖ್ಯೆ / ೬೯
೩.೬. ಹುಬ್ಬಳ್ಳಿ ಸೆಟ್ಲ್‌ಮೆಂಟ್ ಜನಸಂಖ್ಯೆ / ೭೦
೩.೭. ವಸಾಹತುಗಳ ಜನಸಂಖ್ಯೆ, ಜನನ ಪ್ರಮಾಣ, ಮರಣ ಪ್ರಮಾಣಗಳ ವಿವರ / ೭೨
೩.೮. ಜನಸಂಖ್ಯೆ (ಜಾತೀವಾರು) / ೭೩
೩.೯. ಭೋವಿ ಜನಸಂಖ್ಯೆ ವಿವರ / ೭೪
೩.೧೦.ಭೋವಿ ವಯೋಗುಂಪು / ೭೪
೩.೧೧.ಕುಟುಂಬದ ಗಾತ್ರ ಮತ್ತು ಲಿಂಗ ಪ್ರಮಾಣ / ೭೫
೩.೧೨.ಗಂಟಿಚೋರರ ಜನಸಂಖ್ಯೆ / ೭೬
೩.೧೩.ಗಂಟಿಚೋರರ ವಯೋಗುಂಪು / ೭೬
೩.೧೪.ಗಂಟಿಚೋರರ ಕುಟುಂಬದ ಗಾತ್ರ ಮತ್ತು ಲಿಂಗ ಪ್ರಮಾಣ / ೭೭
೩.೧೫.ಕೊರಮರ ಲಿಂಗವಾರು ಜನಸಂಖ್ಯೆ / ೭೮
೩.೧೬.ಕೊರಮರ ಕುಟುಂಬಗಳ ಗಾತ್ರ / ೭೮
೩.೧೭.ಸಮೀಕ್ಷೆಗೊಳಪಟ್ಟ ಕೊರಮರ ವಯೋಗುಂಪುವಾರು ಜನಸಂಖ್ಯೆ / ೭೯
೩.೧೮.ಸಮೀಕ್ಷೆಗೊಳಪಟ್ಟ ಕೊರಮರ ಲಿಂಗಾನುಪಾತ / ೮೦
೩.೧೯.ಸಮೀಕ್ಷೆಗೊಳಪಟ್ಟ ಪಾರ್ಧಿ ಜನಸಂಖ್ಯೆ / ೮೦
೩.೨೦.ಸಮೀಕ್ಷೆಗೊಳಪಟ್ಟ ಪಾರ್ಧಿಯವರ ವಯೋಗುಂಪು / ೮೧
೩.೨೧.ಸಮೀಕ್ಷೆಗೊಳಪಟ್ಟ ಪಾರ್ಧಿಯರ ಲಿಂಗಾನುಪಾತ ಮತ್ತು ಕುಟುಂಬ ಗಾತ್ರ / ೮೨
೩.೨೨.ಸಮೀಕ್ಷೆಗೊಳಪಟ್ಟ ಚಪ್ಪರಬಂದರ ಜನಸಂಖ್ಯೆ / ೮೨
೩.೨೩.ಸಮೀಕ್ಷೆಗೊಳಪಟ್ಟ ವಯೋಗುಂಪುವಾರು ಜನಸಂಖ್ಯೆ / ೮೩
೩.೨೪.ಸಮೀಕ್ಷೆಗೊಳಪಟ್ಟ ಕುಟುಂಬದ ಗಾತ್ರ ಮತ್ತು ಲಿಂಗ ಪ್ರಮಾಣ / ೮೩
೩.೨೫.ಸಮೀಕ್ಷೆಗೊಳಪಟ್ಟ ಕಂಜರಭಾಟರ ಜನಸಂಖ್ಯೆ / ೮೪
೩.೨೬.ಸಮೀಕ್ಷೆಗೊಳಪಟ್ಟ ಕಂಜರಬಾಟರ ವಯೋಗುಂಪುವಾರು ಜನಸಂಖ್ಯೆ / ೮೪
೩.೨೭.ಸಮೀಕ್ಷೆಗೊಳಪಟ್ಟ ಕಂಜರಭಾಟರ ಕುಟುಂಬದ ಗಾತ್ರ ಮತ್ತು ಲಿಂಗ ಪ್ರಮಾಣ / ೮೫

೩.೨೮. ಮಾರ್ಚ್ ೩೧, ೧೯೪೮ರಲ್ಲಿ ಸೆಟ್ಲಮೆಂಟ್‌ಗಳಲ್ಲಿರುವ ಜನಸಂಖ್ಯೆ / ೮೬
೩.೨೯. ಮಾರ್ಚ್ ೩೧, ೧೯೪೮ರಲ್ಲಿ ಫ್ರೀಕಾಲೋನಿಯ ಜನಸಂಖ್ಯೆ / ೮೬
೪.೧. ಸಮೀಕ್ಷೆಗೊಳಪಟ್ಟ ಭೋವಿಗಳ ವೈವಾಹಿಕ ಸ್ಥಾನಮಾನ / ೯೭
೪.೨. ಸಮೀಕ್ಷೆಗೊಳಪಟ್ಟ ಗಂಟಿಚೋರರ ವೈವಾಹಿಕ ಸ್ಥಾನಮಾನ / ೧೧೩
೪.೩. ಸಮೀಕ್ಷೆಗೊಳಪಟ್ಟ ಕೊರಮರ ಒಳಪಂಗಡಗಳು / ೧೨೪
೪.೩.೧. ಸಮೀಕ್ಷೆಗೊಳಪಟ್ಟ ಕೊರಮರ ವೈವಾಹಿಕ ಸ್ಥಾನಮಾನ / ೧೩೩
೪.೪. ಸಮೀಕ್ಷೆಗೊಳಪಟ್ಟ ಪಾರ್ಧಿ ಸಮುದಾಯದ ವೈವಾಹಿಕ ಸ್ಥಾನಮಾನ / ೧೪೮
೪.೫. ಕಂಜರಭಾಟರ ರಾಜ್ಯ ಮತ್ತು ಕೇಂದ್ರಾಡಳಿತ
ಪ್ರದೇಶವಾರು ಪರ್ಯಾಯ ಪದಗಳ ಪಟ್ಟಿ / ೧೭೦
೪.೬. ಸಮೀಕ್ಷೆಗೊಳಪಟ್ಟ ಕಂಜರಭಾಟರ ವೈವಾಹಿಕ ಸ್ಥಾನಮಾನ / ೧೭೦
೪.೭. ಸಮೀಕ್ಷೆಗೊಳಪಟ್ಟ ಕೊರಮರ ಕುಳಿರ್ (ಕುಳುವ) ವಾಕ್ಯಗಳ ರಚನೆ / ೨೦೫
೫.೧. ಭೋವಿಗಳ ಕುಶಲಕರ್ಮಿ ಪಂಗಡಗಳ ವಿವರ / ೨೨೫
೫.೨. ಸಮೀಕ್ಷೆಗೊಳಪಟ್ಟ ಭೋವಿಗಳ ಕಾಯಕಾರ್ಹವಲ್ಲದ ಆಶ್ರಿತರ ಗುಂಪು / ೨೨೬
೫.೩. ಸಮೀಕ್ಷೆಗೊಳಪಟ್ಟ ಭೋವಿ ಸಮುದಾಯದ ಕಸಬುಗಳು / ೨೨೭
೫.೪. ಸಮೀಕ್ಷೆಗೊಳಪಟ್ಟ ಭೋವಿ ಸಮುದಾಯದ ಮಾಸಾಶನ ಪಟ್ಟಿ / ೨೨೮
೫.೫. ಸಮೀಕ್ಷೆಗೊಳಪಟ್ಟ ಇತರೆ ಸೌಲಭ್ಯಗಳು / ೨೨೯
೫.೬. ೧೯೬೧-೨೦೦೧ರವರೆಗಿನ ಗಂಟಿಚೋರರ ವಿವಿಧ ವೃತ್ತಿಗಳ ಮಾಹಿತಿ / ೨೩೦
೫.೭. ಸಮೀಕ್ಷೆಗೊಳಪಟ್ಟ ಗಂಟಿಚೋರರ ಕಾಯಕಾರ್ಹವಲ್ಲದ ಗುಂಪು / ೨೩೨
೫.೮. ಸಮೀಕ್ಷೆಗೊಳಪಟ್ಟ ಗಂಟಿಚೋರ ಸಮುದಾಯದ ಕಸಬುಗಳು / ೨೩೩
೫.೯. ಸಮೀಕ್ಷೆಗೊಳಪಟ್ಟ ಗಂಟಿಚೋರರ ಮಾಸಾಶನ ಪಟ್ಟಿ / ೨೩೪
೫.೧೦. ಸಮೀಕ್ಷೆಗೊಳಪಟ್ಟ ಕೊರಮರ ಆಶ್ರಿತರ ವಯೋಗುಂಪು / ೨೩೫
೫.೧೧. ಸಮೀಕ್ಷೆಗೊಳಪಟ್ಟ ಕೊರಮರ ಕಾಯಕಾರ್ಹ ವಯೋಗುಂಪು / ೨೩೬
೫.೧೨. ಸಮೀಕ್ಷೆಗೊಳಪಟ್ಟ ಕೊರಮರ ವಿವಿಧ ಕೆಲಸಗಳಲ್ಲಿ ತೊಡಗಿಕೊಂಡವರ ಪ್ರಮಾಣ / ೨೩೬
೫.೧೩. ಸಮೀಕ್ಷೆಗೊಳಪಟ್ಟ ಪಾರ್ಧಿಯರ ಆಶ್ರಿತರ ವಯೋಗುಂಪು / ೨೩೮
೫.೧೪. ಸಮೀಕ್ಷೆಗೊಳಪಟ್ಟ ಪಾರ್ಧಿಯರಲ್ಲಿಯ ಕಾಯಕರ್ಹ ವಯೋಗುಂಪು / ೨೩೮
೫.೧೫. ಸಮೀಕ್ಷೆಗೊಳಪಟ್ಟ ಪಾರ್ಧಿಯರು ಕೆಲಸಗಳಲ್ಲಿ ತೊಡಗಿಕೊಂಡಿರುವ ಪ್ರಮಾಣ / ೨೩೯
೫.೧೬. ಸಮೀಕ್ಷೆಗೊಳಪಟ್ಟ ಕಂಜರಭಾಟರ ಕಾಯಕಾರ್ಹವಲ್ಲದ ವಯೋಗುಂಪು / ೨೪೧
೫.೧೭. ಸಮೀಕ್ಷೆಗೊಳಪಟ್ಟ ಕಂಜರಭಾಟರ ಮೂಲವೃತ್ತಿಯೊಂದಿಗೆ
ಇತರೆ ಕೆಲಸಗಳಲ್ಲಿ ತೊಡಗಿಕೊಂಡಿರುವರ ಪ್ರಮಾಣ / ೨೪೨
೬.೧. ಸಮೀಕ್ಷೆಗೊಳಪಟ್ಟ ಭೋವಿ ಸಮುದಾಯದ ಸಾಕ್ಷರತೆ ಅರ್ಹ ಮತ್ತು
ಅನರ್ಹ ಗುಂಪು / ೨೫೧
೬.೨. ಸಮೀಕ್ಷೆಗೊಳಪಟ್ಟ ಭೋವಿ ಸಮುದಾಯದ ಸಾಕ್ಷರತೆ ಪ್ರಮಾಣ / ೨೫೧
೬.೩. ೧೯೬೧-೨೦೦೧ರವರೆಗಿನ ಗಂಟಿಚೋರರ ಸಾಕ್ಷರತಾ ಪ್ರಮಾಣ / ೨೫೩
೬.೪. ಸಮೀಕ್ಷೆಗೊಳಪಟ್ಟ ಗಂಟಿಚೋರರ ಸಮುದಾಯದ ಸಾಕ್ಷರತೆ ಪ್ರಮಾಣ / ೨೫೪
೬.೫. ಸಮೀಕ್ಷೆಗೊಳಪಟ್ಟ ಕೊರಮ ಸಮುದಾಯದ ಸಾಕ್ಷರತೆ ಪ್ರಮಾಣ / ೨೫೬
೬.೬. ಸಮೀಕ್ಷೆಗೊಳಪಟ್ಟ ಪಾರ್ಧಿ ಸಮುದಾಯದ ಸಾಕ್ಷರತೆ ಪ್ರಮಾಣ / ೨೫೭
೬.೭. ಸಮೀಕ್ಷೆಗೊಳಪಟ್ಟ ಚಪ್ಪರ್‌ಬಂದರ ಸಾಕ್ಷರತೆ ಪ್ರಮಾಣ / ೨೫೯
೬.೮. ಸಮೀಕ್ಷೆಗೊಳಪಟ್ಟ ಕಂಜರಭಾಟರ ಸಾಕ್ಷರತೆ ಪ್ರಮಾಣ / ೨೬೦

೬.೯. ೩೧ ಮಾರ್ಚ್ ೧೯೪೮ ರ ಪ್ರಕಾರ ಸೆಟ್ಲಮೆಂಟಿನ ಮತ್ತು
ಇತರ ಶಾಲೆಗಳಲ್ಲಿ ಓದುತ್ತಿರುವ ಹುಡುಗ ಮತ್ತು ಹುಡುಗಿಯರ ಸಂಖ್ಯೆ / ೨೬೩
೬.೧೦.೧೯೨೪ರ ಅಪರಾಧಿ ಬುಡಕಟ್ಟು ಸೆಟ್ಲಮೆಂಟ್ ವರದಿ / ೨೬೪
೭.೧. ಸಮೀಕ್ಷೆಗೊಳಪಟ್ಟ ಮತದಾರರ ಪಟ್ಟಿಯಿಂದ ವಂಚಿತಗೊಂಡ
ಸಮುದಾಯಗಳ ಪಟ್ಟಿ / ೨೭೧
೭.೨. ಸಮೀಕ್ಷೆಗೊಳಪಟ್ಟ ಭೋವಿ ಸಮುದಾಯದ ಮತದಾನ ಸೌಲಭ್ಯ ಪಟ್ಟಿ / ೨೭೫
೭.೩. ಸಮೀಕ್ಷೆಗೊಳಪಟ್ಟ ಗಂಟಿಚೋರರ ಮತದಾನ ಸೌಲಭ್ಯ ಪಟ್ಟಿ / ೨೭೬
೭.೪. ಸಮೀಕ್ಷೆಗೊಳಪಟ್ಟ ಕೊರಮರ ಮತದಾನ ಸೌಲಭ್ಯ ಪಟ್ಟಿ / ೨೭೭
೭.೫. ಸಮೀಕ್ಷೆಗೊಳಪಟ್ಟ ಚಪ್ಪರಬಂದರ ಮತದಾನ ಸೌಲಭ್ಯ ಪಟ್ಟಿ / ೨೭೮
೭.೬. ಸಮೀಕ್ಷೆಗೊಳಪಟ್ಟ ಕಂಜರಭಾಟರ ಮತದಾನ ಸೌಲಭ್ಯ ಪಟ್ಟಿ / ೨೭೯

ಪರಿಶಿಷ್ಟ ೨ : ದಾಖಲೆಗಳು

೧. ಪಾತ್ರೋಟ ಜಾತಿಯನ್ನು ಗಿರಣಿ ವಡ್ಡರ, ತುಡುಗ ವಡ್ಡರ ಜಾತಿಗಳ ಪಟ್ಟಿಯಲ್ಲಿ ಸೇರಿಸುವ ಕುರಿತು ತಹಸಿಲ್ದಾರರ ಪತ್ರ / ೩೨೩
೨.. ಮುಕ್ತ ಪೂರ್ವ ಬುಡಕಟ್ಟುಗಳಿಗೆ ಬ್ರಿಟೀಷರು ನೀಡಿದ್ದ ಗುರುತಿನ ಪತ್ರ / ೩೨೪
೩. ಕ್ರಿಮಿನಲ್ ಟ್ರಾಯಿಬ್ಸ ಸೆಟ್ಲಮೆಂಟ ಆಫೀಸರ ಧಾರವಾಡ ಅವರು ೧೯೨೮ರಲ್ಲಿ ಹುಬ್ಬಳ್ಳಿ ಸೆಟ್ಲಮೆಂಟಿನ ವಿಮುಕ್ತ ಪೂರ್ವ ಬುಡಕಟ್ಟುಗಳಿಗೆ ಬ್ರಿಟೀಷ್ ಅಧಿಕಾರಿ ನೀಡಿದ ಕರಾರು ಪತ್ರ / ೩೨೫
೪. ಬ್ಯಾಕವರ್ಡ ಕ್ಲಾಸ ಆಫೀಸರ ನೀಡಿದ (ಫ್ರೀ ಕಾಲನಿ) ಬಿಡುಗಡೆ
ಕರಾರು ಪತ್ರಿಕೆ. (ದಿನಾಂಕ.೨೩.೦೩.೧೯೩೯) / ೩೨೬
೫. ಬ್ರಿಟೀಷರು ೧೯೧೯ರಲ್ಲಿ ಹುಬ್ಬಳ್ಳಿ ಸೆಟ್ಲಮೆಂಟಿನ ವಿಮುಕ್ತ ಪೂರ್ವ ಬುಡಕಟ್ಟುಗಳಿಗೆ ನಿವೇಶನ ನೀಡಿದ ದಾಖಲೆ ಪತ್ರ / ೩೨೭
೬. ಎಸ್ ವಿ ಹಲ್ದಿಪುರ ಅವರು "ಕ್ರಿಮಿನಲ್ ಕ್ಲಾಸಿಸ್ ಇನ್ ಬಾಂಬೆ ಪ್ರೆಸಿಡೆನ್ಸಿ" ಎಂಬ ಕೃತಿಯ ಆಧಾರದ ಮೇಲೆ ರಚಿಸಿರುವ ಕೃತಿಯಲ್ಲಿರುವ ಮಾಹಿತಿ(ಬಾಸೆಲ್ ಮಿಶನ್ ಪ್ರೆಸ್, ಮಂಗಳೂರು.೧೯೧೪) / ೩೨೮ –೩೩೧

ಪರಿಶಿಷ್ಟ ೩ : ನಕಾಶೆಗಳು

೧. ಬಾಗಲಕೋಟ ಸೆಟ್ಲಮೆಂಟ ನಕಾಶೆ / ೩೩೨
೨. ಬಿಜಾಪುರ ಸೆಟ್ಲಮೆಂಟ ನಕಾಶೆ / ೩೩೩
೩. ಗದಗ ಸೆಟ್ಲಮೆಂಟ ನಕಾಶೆ / ೩೩೪
೪. ಗೋಕಾಕ್ ಫಾಲ್ಸ್ ಸೆಟ್ಲಮೆಂಟ ನಕಾಶೆ / ೩೩೫
೫. ಹುಬ್ಬಳ್ಳಿ ಸೆಟ್ಲಮೆಂಟ ನಕಾಶೆ / ೩೩೬

ಪರಿಶಿಷ್ಟ ೪ : ಅಂಕಿಅಂಶಗಳು

೧. ಸಮೀಕ್ಷೆಗೊಳಪಟ್ಟ ಕರ್ನಾಟಕ ವಿಮುಕ್ತ ಬುಡಕಟ್ಟುಗಳ, ಸೆಟ್ಲಮೆಂಟವಾರು, ಕುಟುಂಬವಾರು, ಲಿಂಗವಾರು, ವಯೋ ಗುಂಪುವಾರು ಜನಸಂಖ್ಯೆ / ೩೩೭
೨. ಸಮೀಕ್ಷೆಗೊಳಪಟ್ಟ ಕರ್ನಾಟಕ ವಿಮುಕ್ತ ಬುಡಕಟ್ಟುಗಳ ವೈವಾಹಿಕ ಸ್ಥಾನಮಾನ / ೩೪೦
೩. ಸಮೀಕ್ಷೆಗೊಳಪಟ್ಟ ಕರ್ನಾಟಕ ವಿಮುಕ್ತ ಬುಡಕಟ್ಟುಗಳ ಸಾಕ್ಷರತೆ ಪ್ರಮಾಣ / ೩೪೨
೪. ಸಮೀಕ್ಷೆಗೊಳಪಟ್ಟ ಕರ್ನಾಟಕ ವಿಮುಕ್ತ ಬುಡಕಟ್ಟುಗಳ ಕಸುಬುಗಳು / ೩೪೪
೫. ಸಮೀಕ್ಷೆಗೊಳಪಟ್ಟ ಕರ್ನಾಟಕ ವಿಮುಕ್ತ ಬುಡಕಟ್ಟುಗಳ ಪಡೆದ ಸರಕಾರಿ ಸೌಲಭ್ಯಗಳು / ೩೪೭
೬. ಸಮೀಕ್ಷೆಗೊಳಪಟ್ಟ ಕರ್ನಾಟಕ ವಿಮುಕ್ತ ಬುಡಕಟ್ಟುಗಳ ಮನೆಗಳ ಸ್ವರೂಪ / ೩೫೦

ಪರಿಶಿಷ್ಟ ೫: ಛಾಯಾಚಿತ್ರಗಳು

೧. ವಿಮುಕ್ತ ಬುಡಕಟ್ಟುಗಳೆ ರಚಿಸಿರುವ ಸಹಕಾರಿ ಸಂಘ(ರಿ) ಬಾಗಲಕೋಟ / ೩೫೨

೨. ವಿಮುಕ್ತ ಬುಡಕಟ್ಟುಗಳ ವಾಸಸ್ಥಾನ ಬಾಗಲಕೋಟ / ೩೫೨

೩. ಪಾರ್ಧಿಯರ ದಂಡಿನ ದುರ್ಗಮ್ಮನ ಕಟ್ಟೆ / ೩೫೨

೪. ಪಾರ್ಧಿಯರ ದಂಡಿನ ದುರ್ಗಮ್ಮನ ಕಟ್ಟೆ, ಬಿಜಾಪುರ / ೩೫೩

೫. ಬ್ರಿಟೀಷರು ವಿಮುಕ್ತಪೂರ್ವ ಬುಡಕಟ್ಟುಗಳಿಗೆ ಶಿಕ್ಷೆ ನೀಡುತ್ತಿದ್ದ ಬಂದಿಖಾನೆ. ಬಿಜಾಪುರ /೩೫೩

೬. ಬ್ರಿಟೀಷ್ ಸಮಾಜ ಕಲ್ಯಾಣಾಧಿಕಾರಿಯ ಚಿತ್ರ, ಗದಗ / ೩೫೩

೭. ಬಡಿಗೇರ ಕಾರಖಾನೆಯ ನಾಮಫಲಕ, ಗದಗ / ೩೫೪

೮. ಬ್ರಿಟೀಷರು ವಿಮುಕ್ತ ಪೂರ್ವ ಬುಡಕಟ್ಟುಗಳಿಗಾಗಿ ನಿರ್ಮಿಸಿದ ಬಡಿಗೇರ ಕಾರಖಾನೆ, ಗದಗ / ೩೫೪

೯. ಚಪ್ಪರಬಂದರು ಪಾರ್ಥನೆ ಸಲ್ಲಿಸುವ ಮಸಿದಿ, ಗದಗ / ೩೫೪

೧೦. ಸ್ವತಂತ್ರ ಪೂರ್ವದಲ್ಲಿ ಚಪ್ಪರಬಂದರು ತಯಾರಿಸಿದ ನಾಣ್ಯಗಳು / ೩೫೫

೧೧. 'ಡಾಲಿ' ಶಾಸ್ತ್ರದಲ್ಲಿ ಪಾಲ್ಗೊಂಡ ಚಪ್ಪರಬಂದ ಮಹಿಳೆಯರು, ಗದಗ / ೩೫೫

೧೨. ಮದುವೆ ಸಂದರ್ಭದಲ್ಲಿ ರಂಗೋಲಿಯಿಂದ ಸುರಿಗೆ ಬಿಡಿಸುತ್ತಿರುವ ಚಪ್ಪರಬಂದ ಸಮುದಾಯದ ಮಹಿಳೆಯರು, ಗದಗ / ೩೫೫

೧೩. ವಿಮುಕ್ತಬುಡಕಟ್ಟುಗಳ ಏಳು ಮಕ್ಕಳ ತಾಯಿ, ಗದಗ / ೩೫೬

೧೪. ಬ್ರಿಟೀಷರು ವಿಮುಕ್ತ ಪೂರ್ವ ಬುಡಕಟ್ಟುಗಳಿಗೆ ಶಿಕ್ಷೆ ನೀಡುತಿದ್ದ ಬಂದಿಖಾನೆ, ಹುಬ್ಬಳ್ಳಿ / ೩೫೬

೧೫. ಖಾಸಗಿ ಶಿಕ್ಷಣ ಸಂಸ್ಥೆ, ಹುಬ್ಬಳ್ಳಿ ಸೆಟ್ಲಮೆಂಟ / ೩೫೬

೧೬. ಬ್ರಿಟೀಷರ ಕಾಲದಲ್ಲಿ ವಿಮುಕ್ತ ಪೂರ್ವ ಬುಡಕಟ್ಟುಗಳೆ ಕಟ್ಟಿರುವ ಚರ್ಚ್, ಹುಬ್ಬಳ್ಳಿ / ೩೫೭

೧೭. ಯಂಗ್‌ಸ್ಟಾರ್ ಸ್ಪೋರ್ಟ್ಸ್ ಕ್ಲಬ್, ಹುಬ್ಬಳ್ಳಿ / ೩೫೭

೧೮. ವಿಮುಕ್ತ ಬುಡಕಟ್ಟಗಳು ವಾಸಿಸುತ್ತಿರುವ ಮನೆಗಳು, ಹುಬ್ಬಳ್ಳಿ / ೩೫೭

೧೯. ಚರ್ಚೆಯಲ್ಲಿ ಪಾಲ್ಗೊಂಡಿರುವ ಚಪ್ಪರಬಂದ ಸಮುದಾಯದ ಹಿರಿಯರು / ೩೫೮

೨೦. ಬ್ರಿಟೀಷರು ವಿಮುಕ್ತ ಪೂರ್ವ ಬುಡಕಟ್ಟುಗಳಿಗೆ ಕುಡಿಯುವ ನೀರಿಗಾಗಿ ನಿರ್ಮಿಸಿದ ಬಾವಿ, ಹುಬ್ಬಳ್ಳಿ / ೩೫೮

೨೧. ಬ್ರಿಟೀಷರು ವಿಮುಕ್ತ ಪೂರ್ವ ಬುಡಕಟ್ಟುಗಳಿಗಾಗಿ ನಿರ್ಮಿಸಿದ್ದ ಮುಳ್ಳು ತಂತಿ ಬೇಲಿ ಕಂಬದ ಚಿತ್ರ / ೩೫೮

೨೨. ಬಳ್ಳಾರಿ ದುರ್ಗಮ್ಮನ ಕಟ್ಟೆ, ಹುಬ್ಬಳ್ಳಿ / ೩೫೯

೨೩. ಬ್ರಿಟೀಷರ ಕಾಲದಲ್ಲಿ ಪೋಲೀಸ್ ಆಗಿದ್ದ ಗುಂಡಪ್ಪ ದತ್ತವಾಡ (ವಯಸ್ಸು ೯೮), ಹುಬ್ಬಳ್ಳಿ /೩೫೯

೨೪. ಕಂಜರಭಾಟ ಸಮುದಾಯದ ಹಿರಿಯ ಮಹಿಳೆ / ೩೫೯

೨೫. ಕಂಜರಭಾಟ ಆಧುನಿಕ ಶೈಲಿಯ ಕೃಷ್ಣ ಮಂದಿರ / ೩೬೦

೨೬. ಅಂತ್ಯಸಂಸ್ಕಾರಕ್ಕೆ ಶವ ಹೊತ್ತೊಯುತ್ತಿರುವ ಕಂಜರಭಾಟರು / ೩೬೦

೨೭. ಪಿಂಡ ಬಿಡುವ ಕಾರ್ಯಕ್ರಮದಲ್ಲಿ ಭಾಗಿಯಾದ ಕಂಜರಭಾಟ ಮಹಿಳೆಯರು / ೩೬೦

ಅಧ್ಯಾಯ ಒಂದು

ಪ್ರವೇಶ

ಇದುವರೆಗಿನ ಅಧ್ಯಯನಗಳು

ಅಧ್ಯಯನದ ವ್ಯಾಪ್ತಿ

ಅಧ್ಯಯನದ ಉದ್ದೇಶಗಳು

ಸಮಕಾಲಿನ ಸಮಸ್ಯೆಗಳಿಗೆ ಪ್ರಸ್ತುತ ಅಧ್ಯಯನದ ಸಂಬಂಧ

ಸಮಾಜ ಅಥವಾ ರಾಷ್ಟ್ರಕ್ಕೆ ಪ್ರಸ್ತುತ ಅಧ್ಯಯನದ ಅವಶ್ಯಕತೆ

ಜ್ಞಾನ ಶಾಖೆಗೆ ಪ್ರಸ್ತುತ ಅಧ್ಯಯನದ ಕೊಡುಗೆ

ವಿಮುಕ್ತ ಬುಡಕಟ್ಟುಗಳ ಪ್ರಸ್ತುತ ಸ್ಥಿತಿ–ಗತಿ

ಅಧ್ಯಯನದ ವಿನ್ಯಾಸ ಮತ್ತು ವಿಧಾನ

ಅಧ್ಯಾಯ ಒಂದು

ಪ್ರವೇಶ

ಮುಖ್ಯವಾಹಿನಿಯ ಜನರ ತಿಳುವಳಿಕೆಗಳಿಂದ ಅಲೆಮಾರಿ ಹಾಗೂ ವಿಮುಕ್ತ ಪಂಗಡಗಳು ಯಾವಾಗಲೂ ಹೊರಗೆ ಉಳಿದಿವೆ. ಈ ಪಂಗಡಗಳು ಹಳ್ಳಿಗಳಲ್ಲಿ ದವಸ-ಧಾನ್ಯ, ಉಪ್ಪು, ಅರಣ್ಯೋತ್ಪಾದನೆಗಳ ವಿತರಕರಾಗಿ ಮತ್ತು ಮನರಂಜಕರಾಗಿ ಬಹುಮುಖ್ಯವಾದ ಭೂಮಿಕೆಯನ್ನು ಹೊಂದಿದ್ದರೂ ಇವರ ಕ್ಷಣಿಕ ಇರುವಿಕೆ ಇವರ ಬಗೆಗೆ ಸಂಶಯ ಮತ್ತು ಇವರ ಸುತ್ತಲು ರಹಸ್ಯಗಳನ್ನು ಹೆಣೆದುಕೊಳ್ಳಲು ಕಾರಣವಾಯಿತು. ಬ್ರಿಟೀಷ್ ಸರ್ಕಾರ ಉತ್ತರ ಭಾರತದಲ್ಲಿ ೧೮೭೧ರಲ್ಲಿ ಈ ತರಹದ ಪ್ರಕೃತಿ ಅವಲಂಬಿತ ಮತ್ತು ತನ್ನ ಆಡಳಿತದ ಪರಿಧಿಗೆ ಬಾರದೇ ಇರುವ ಸಮುದಾಯಗಳನ್ನು ಗುರುತಿಸಿ ಅವುಗಳನ್ನು ಅಪರಾಧಿ ಬುಡಕಟ್ಟುಗಳೆಂದು ಅಧಿಸೂಚಿಸಿತು. ಈ ಅಧಿನಿಯಮವನ್ನು ೧೯೧೧ರಲ್ಲಿ ಬ್ರಿಟೀಷರು ಆಳುವ ಭಾರತದಲ್ಲಿ ಪರಿಷ್ಕರಿಸಿ ವಿಸ್ತರಿಸಲಾಯಿತು. ಮುಂದುವರಿದು ೧೮೯೭, ೧೯೧೧, ೧೯೨೩, ೧೯೨೪ ಮತ್ತು ೧೯೪೭ ಈ ವರ್ಷಗಳಲ್ಲಿ ಈ ಅಧಿನಿಯಮಕ್ಕೆ ತಿದ್ದುಪಡಿ ಮಾಡಿ ಪರಿಷ್ಕರಿಸಲಾಯಿತು (ಮೇತ್ರಿ ಕೆ ಎಂ: ೨೦೦೮). ಅಲೆಮಾರಿಗಳು ಬ್ರಿಟೀಷರ ಕಾನೂನುಗಳನ್ನು ಒಪ್ಪುತ್ತಿರಲಿಲ್ಲ. ಅವರು ಪ್ರಬಲವಾಗಿ ವಿರೋಧಿಸುತ್ತಿದ್ದರು. ಬ್ರಿಟೀಷರ ವಸಾಹತು ಯೋಜನೆಯಡಿಯಲ್ಲಿ ದೊಡ್ಡ ಪ್ರಮಾಣದ ಸಂಪರ್ಕ ಜಾಲಗಳಾದ ರಸ್ತೆಗಳು, ರೈಲುಗಳು ಮತ್ತು ಉದ್ಯಮಗಳು ಉದಯವಾದವು.

ಅಲೆಮಾರಿಗಳಿಗೆ ಯಾವುದೇ ಭೂಮಿ ಅಥವಾ ಸಂಪನ್ಮೂಲಗಳಿಲ್ಲದೆ ಕೆಲವು ಪಂಗಡಗಳು ಅನಾಥವಾದವು. ಅಲೆಮಾರಿ ಪಂಗಡದ ಜೀವನ ಕ್ರಮವನ್ನು ಅರ್ಥಮಾಡಿಕೊಳ್ಳದ ಬ್ರಿಟೀಷರಿಗೆ ಈ ಸಮುದಾಯದ ಕೆಲವೊಂದು ಗುಂಪುಗಳು ದರೋಡೆಕೋರರಂತೆ ಕಂಡವು. ಭಾರತದ ಜಾತಿ ಪದ್ಧತಿಗಳನ್ನು ನೋಡಿ ಬ್ರಿಟೀಷರು ಅಪರಾಧವು ಸಹ ಒಂದು ಜಾತಿ ಆಧಾರಿತ ಲಕ್ಷಣವೆಂದು ಅರ್ಥೈಸಿದರು. ಸಂಚಾರಿ ಗುಂಪುಗಳ ದೊಡ್ಡ ಜನಸಮೂಹವು ವಸಾಹತು ನಿಯಮದಡಿಯಲ್ಲಿ ಮತ್ತು ಕಠಿಣ ಸರಬರಾಜುವಿನ

ಅಪರಾಧಿ ಪಂಗಡದ ಕಾಯ್ದೆಯಡಿಯಲ್ಲಿ ಪರಿಗಣಿಸಲಾಯಿತು. ಇದರಿಂದ ಪೊಲೀಸರಿಗೆ ಈ ಗುಂಪುಗಳನ್ನು ಹಿಡಿತದಲ್ಲಿರಿಸಲು ಮತ್ತು ದಂಡಿಸಲು ಹೆಚ್ಚಿನ ಅಧಿಕಾರ ಪ್ರಾಪ್ತವಾಯಿತು.

ಈ ಗುಂಪುಗಳನ್ನು ವಸಾಹತುಗಳಲ್ಲಿ ಬೇಲಿ ಹಾಕಿ ಇಡಲಾಗುತ್ತಿತ್ತು. ಇವರು ದಿನಾಲು ಪೊಲೀಸರಿಗೆ ಹಾಜರಿಯನ್ನು ನೀಡುವುದು ಕಡ್ಡಾಯವಾಗಿತ್ತು. ಒಮ್ಮೆ ಅಪರಾಧಿ ಪಂಗಡವೆಂದು ಘೋಷಿಸಲ್ಪಟ್ಟ ಪಂಗಡದ ಪ್ರತಿಯೊಬ್ಬ ಸದಸ್ಯನು ಅಪರಾಧ ಮಾಡಿದ್ದಾನೊ ಇಲ್ಲವೊ ಎನ್ನುವುದನ್ನು ಪರಿಗಣಿಸದೆ ಬಂಧಿಸಲಾಗುತ್ತಿತ್ತು. ಜೈಲಿಗೆ ಕಳುಹಿಸಲಾದ ಸಾಮಾನ್ಯ ಕೈದಿಯ ಶಿಕ್ಷೆಗೆ ಕೊನೆ ಇದೆ ಮತ್ತು ಬಿಡುಗಡೆಯಾಗುವ ಆಸೆ ಇದ್ದೇ ಇರುತ್ತದೆ. ಆದರೆ ಅಪರಾಧಿ ಪಂಗಡಗಳ ಕಾಯ್ದೆಯಡಿಯಲ್ಲಿಯ ಅಪರಾಧಿ ಪಂಗಡದ ಸದಸ್ಯನಿಗೆ ಈ ಯಾವ ಆಸೆಗಳಿಗೂ ಅವಕಾಶ ಇರಲಿಲ್ಲ. ಇವರ ವಸಾಹತುಗಳು ಇವರಿಗೆ ಜೈಲುಗಳಾಗಿದ್ದವು. ಒಮ್ಮೆ ಅಪರಾಧಿ ಎಂದು ನಿರ್ಧರಿಸಲ್ಪಟ್ಟರೆ ಅದು ಜೀವನ ಪರ್ಯಂತ ಅಲ್ಲದೇ ಅವರ ಮುಂದಿನ ಪೀಳಿಗೆಗೂ ಸಹ ಅಪರಾಧಿ ಎಂಬ ಹಣೆಪಟ್ಟಿಯನ್ನು ಕಟ್ಟಲಾಗುತಿತ್ತು. ಮುಖ್ಯವಾಗಿ ಬ್ರಿಟೀಷರು ಆಗ ತಾನೇ ಭಾರತಕ್ಕೆ ಪರಿಚಯಿಸಿದ ಉದ್ದಿಮೆಗಳು, ರೈಲ್ವೆ ಇಲಾಖೆ ಮುಂತಾದವುಗಳಲ್ಲಿ ಒತ್ತಾಯಪೂರ್ವಕವಾಗಿ ಪುಕ್ಕಟೆ ಆಳುಗಳಾಗಿ ಈ ಸಮುದಾಯದ ಜನರನ್ನು ಬಳಕೆ ಮಾಡಿಕೊಳ್ಳುತ್ತಿದ್ದರು. ಈ ಸಂದರ್ಭದಲ್ಲಿ ಇವರ ಮಕ್ಕಳಿಗಾಗಿ ಶಾಲೆಗಳನ್ನು ಹಾಗೂ ಇವರಿಗೆ ಕೆಲಸಗಳಲ್ಲಿ ಕುಶಲತೆ ಹೆಚ್ಚಿಸುವುದಕ್ಕಾಗಿ ತರಬೇತಿ ಕೇಂದ್ರಗಳನ್ನು ಬ್ರಿಟೀಷರು ಆರಂಭಿಸಿದರು. ಇವರನ್ನು ನೋಡಿಕೊಳ್ಳಲು ಪ್ರತಿಯೊಂದು ವಸಾಹತುವಿಗೆ ಒಬ್ಬ ಸಮಾಜಕಲ್ಯಾಣ ಅಧಿಕಾರಿಯನ್ನು ನೇಮಿಸಲಾಗಿರುತ್ತಿತ್ತು. ಈ ತರಹದ ಅಪರಾಧಿ ಬುಡಕಟ್ಟುಗಳ ವಸಾಹತುಗಳು ಕರ್ನಾಟಕದ ಗದಗ, ಹುಬ್ಬಳ್ಳಿ, ಬಿಜಾಪುರ, ಬೆಳಗಾವಿ, ಬಾಗಲಕೋಟ ಇತ್ಯಾದಿಗಳಲ್ಲಿ ಕಾಣಸಿಗುತ್ತವೆ.

ವ್ಯಕ್ತಿಗತ ಮಾಡುವ ತಪ್ಪುಗಳನ್ನು ಅಥವಾ ಅಪರಾಧಗಳನ್ನು ಸಮುದಾಯಕ್ಕೆ ಸಮೀಕರಿಸುವುದು ತಪ್ಪೆಂದು ತಿಳಿದ ಸರ್ಕಾರವು ೧೯೪೭ರಲ್ಲಿ ಮದ್ರಾಸ್ ಪ್ರಾಂತದಲ್ಲಿ ಮತ್ತು ೧೯೪೯ರಲ್ಲಿ ಮುಂಬೈ ಅಧಿಪತ್ಯದಲ್ಲಿದ್ದ ಅಪರಾಧಿ ಬುಡಕಟ್ಟು ಅಧಿನಿಮಯವನ್ನು ಹಿಂದಕ್ಕೆ ಪಡೆಯಿತು.

ಭಾರತೀಯ ಅಪರಾಧಿ ಬುಡಕಟ್ಟುಗಳ ತನಿಖಾ ಸಮಿತಿಯ ಮೌಲ್ಯಮಾಪನದ ವರದಿಯ ಮೇರೆಗೆ ೧೯೫೨ರಲ್ಲಿ ಅಪರಾಧಿ ಬುಡಕಟ್ಟುಗಳನ್ನು ವಿಮುಕ್ತಗೊಳಿಸಲು ಈ ಸಂಬಂಧದ ಅಧಿನಿಯಮವನ್ನು ರದ್ದುಪಡಿಸಲಾಯಿತು. ಅಂದಿನಿಂದ ಈ ಗುಂಪುಗಳನ್ನು ವಿಮುಕ್ತ ಬುಡಕಟ್ಟುಗಳು ಇಲ್ಲವೆ ಡಿನೋಟಿಫೈಡ್ ಟ್ರೈಬ್ಸ್ ಎಂದು ಕರೆಯಲಾಗುವುದು. ವಿಮುಕ್ತಗೊಳಿಸಿದ ೪೪೯ ಸಮುದಾಯಗಳಲ್ಲಿ ೨೯೫ ಪರಿಶಿಷ್ಟ ಜಾತಿ, ೪೭ ಪರಿಶಿಷ್ಟ ಪಂಗಡ ಮತ್ತು ೨೦೭ ಸಮುದಾಯಗಳು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಇಂದು ಕಾಣಸಿಗುವವು. ಅದೆ ರೀತಿಯಲ್ಲಿ ಕರ್ನಾಟಕದಲ್ಲಿಯ ವಿಮುಕ್ತ ಬುಡಕಟ್ಟು ಸಮುದಾಯಗಳು ಇಪ್ಪತ್ನಾಲ್ಕು ಎಂದು ಅಯ್ಯಂಗಾರ ಸಮಿತಿ ವರದಿಯಲ್ಲಿ ಗುರುತಿಸಲಾಗಿದೆ. ವಿಮುಕ್ತ ಬುಡಕಟ್ಟುಗಳ ಪಟ್ಟಿಯಲ್ಲಿರುವ ಪರಿಶಿಷ್ಟ ಜಾತಿಗಳು ಕ್ರಮವಾಗಿ ೧. ಆದಿ ದ್ರಾವಿಡ ೨. ಬಂಜಾರ, ಲಂಬಾಣಿ, ಲಂಬಾಡಾ, ಲಮಾನಿ, ಸುಗಾಲಿ, ಸುಕಾಲಿ ೩. ದೋಮ್, ದೊಂಬರ್, ಪೈದಿ, ಪಾನೊ ೪. ಗಂಟಿಚೋರ್ಸ್ ೫.

ಹಂಡಿಜೋಗೀಸ್ ೬. ಕೇಪಮಾರಿಸ್ ೭. ಕೊರಚ, ಕೊರಚರ್ ೮. ಮಾಲ ೯. ಮಾಂಗಗಾರೂಡಿ. **ಪರಿಶಿಷ್ಟ ಪಂಗಡದ** ಪಟ್ಟಿಯಲ್ಲಿರುವ ವಿಮುಕ್ತ ಬುಡಕಟ್ಟುಗಳು ೧. ಭಿಲ್ ೨. ಪಾರ್ಧಿ, ಅಡ್ವಿ ಚಿಂಚೇರ್, ಫಾನ್ಸೆಫಾರ್ಧಿ, ಹರಣಶಿಕಾರಿ. ಅದೇ ರೀತಿ **ಹಿಂದುಳಿದ ವರ್ಗಗಳಲ್ಲಿ** ೧. ಬೈರಾಗಿ, ಬವಾನಿ, ಬಾವಾ, ೨. ಬೇಡರು ೩. ಬೆರಿಯಾ ೪. ಭಾಮ್ಟಾ ೫. ಚಾರಾ, ಛಾರ, ಛಾರಾ, ೬. ಫಿಸಾಡಿ ೭. ಜೋಗಿ, ಜ್ಯೋಗರ್, ಸನ್‌ಜೋಗಿ ೮. ಕಂಜರಭಾಟ ೯. ಕಂಜರಿ, ಕಂಜರ್ ೧೦. ಮಸಣಜ್ಯೋಗಿ ೧೧. ನಟ್ ೧೨. ಗುಜರ್ ೧೩. ಮರವರ್, ಇವೆ ಎಂದು ಅಯ್ಯಂಗರ್ ಸಮಿತಿಯ ವರದಿಯ ಪಟ್ಟಿಯಲ್ಲಿ ದಾಖಲಾಗಿವೆ.

ಇದುವರೆಗಿನ ಅಧ್ಯಯನಗಳು

ಕರ್ನಾಟಕದ ಬುಡಕಟ್ಟು ಸಮುದಾಯಗಳ ಕುರಿತು ಹಲವು ಅಧ್ಯಯನಗಳು ನಡೆದಿರುವುದು ಕಂಡು ಬರುತ್ತದೆ. ಆದರೆ ವಿಮುಕ್ತ ಬುಡಕಟ್ಟುಗಳ ಅದರಲ್ಲಿ ವಿಶೇಷವಾಗಿ ಬ್ರಿಟೀಷ್ ಸರಕಾರ ೧೮೭೧ರ ಅಪರಾಧಿ ಬುಡಕಟ್ಟು ಕಾಯಿದೆ ಅಡಿಯಲ್ಲಿ ಬರುವಂತಹ ಅಪರಾಧಿ ಬುಡಕಟ್ಟುಗಳ ಕುರಿತು ನಡೆದಿರುವ ಅಧ್ಯಯನಗಳು ಅತ್ಯಲ್ಪವೆಂದೇ ಹೇಳಬಹುದು. ಒಟ್ಟಾರೆಯಾಗಿ ವಿಮುಕ್ತ ಬುಡಕಟ್ಟುಗಳ ಕುರಿತು ನಡೆದಿರುವ ಅಧ್ಯಯನಗಳು ಈ ಕೆಳಗಿನಂತಿವೆ.

ಆಡಮ್ ಹೆಚ್ ಎಲ್ ರವರ The Indian Criminal (1909) ಎನ್ನುವ ಕೃತಿಯಲ್ಲಿ ಭಾರತೀಯ ಅಪರಾಧಗಳ ಸ್ವರೂಪ ಎಂತಹದ್ದು, ಅಪರಾಧಗಳನ್ನು ಮಾಡುವ ಸಮುದಾಯಗಳ ಕುರಿತು ಸಂಕ್ಷಿಪ್ತ ಮಾಹಿತಿ ಈ ಕೃತಿಯಲ್ಲಿ ದೊರೆಯುತ್ತದೆ.

ಭಾರ್ಗವ ಬಿ ಎಸ್ ರವರ The Criminal Tribes - A Socio - Economic Study of the Principal Criminal Tribes and Castes in Northren India. (1949), ಕೃತಿಯು ಉತ್ತರ ಭಾರತದ ಅಪರಾಧಿ ಬುಡಕಟ್ಟುಗಳು ಹಾಗೂ ಜಾತಿಗಳ ಸಮಾಜೋ-ಆರ್ಥಿಕ ಸ್ವರೂಪವನ್ನು ಇದರಲ್ಲಿ ವಿಶ್ಲೇಷಿಸಲಾಗಿದೆ. ಹಾಗೆ ಉತ್ತರ ಭಾರತದಲ್ಲಿರುವ ಅಪರಾಧಿ ಬುಡಕಟ್ಟು, ಜಾತಿಗಳು ಯಾವ ಕಾರಣಕ್ಕಾಗಿ ಅಪರಾಧ ವೃತ್ತಿಗಳನ್ನು ಮಾಡುತ್ತಿವೆ. ಅವುಗಳನ್ನು ಆ ಕಳಂಕದಿಂದ ಪಾರು ಮಾಡಬೇಕಾದರೆ ಯಾವ ರೀತಿಯ ಯೋಜನೆಗಳನ್ನು ರೂಪಿಸಿ ಅವುಗಳನ್ನು ಅನುಷ್ಠಾನ ಮಾಡಬಹುದು ಎಂಬುದನ್ನು ಈ ಕೃತಿ ತಿಳಿಸುತ್ತದೆ.

ಭೌಮಿಕ್ ಪಿ ಕೆ ರವರ The Lodha a De-notified community of West Bengal (1963) ಲೇಖನದಲ್ಲಿ ಪಶ್ಚಿಮ ಬಂಗಾಳದ ಲೋಧಾ ಎನ್ನುವ ವಿಮುಕ್ತ ಬುಡಕಟ್ಟಿನ ಜೀವನ ಶೈಲಿ, ಅಪರಾಧಗಳು, ಅಲ್ಲಿಯ ಸಮಾಜ ಆ ಸಮುದಾಯವನ್ನು ಯಾವ ದೃಷ್ಟಿಕೋನದಿಂದ ನೋಡುತ್ತದೆ, ಆ ಬುಡಕಟ್ಟಿನ ಆಚರಣೆ, ವಿಧಿ ನಿಷೇಧಗಳು ಮುಂತಾದವುಗಳ ಕುರಿತು ವಿಸ್ತಾರವಾಗಿ ತಿಳಿಸುತ್ತದೆ.

ಮೇಲಿನ ಕೃತಿಯ ಮಾದರಿಯಲ್ಲಿಯೇ ಬಿಸ್ವಾಸ್ ಪಿ ಡಿ ಯವರ Ex-Criminal Tribes of

Delhi State (1960) ಕೃತಿಯು ದೆಹಲಿಯಲ್ಲಿ ಹಿಂದೆ ಅಪರಾಧಿ ಬುಡಕಟ್ಟುಗಳು ಯಾವ ರೀತಿಯ ಜೀವನ ನಡೆಸುತ್ತಿದ್ದವು ಎಂಬುದು ತಿಳಿದು ಬರುತ್ತದೆ.

೧೯೭೭ರಲ್ಲಿ ಗೆಜಟಿಯರ್ ಆಫ್ ಇಂಡಿಯ ಸಂಪುಟವನ್ನು ಸೊಲ್ಲಾಪುರ ಜಿಲ್ಲೆ, ಮಹರಾಷ್ಟ್ರ ರಾಜ್ಯ ಪ್ರಕಟಿಸಿದೆ. ಈ ಕೃತಿಯಲ್ಲಿ ಮಹಾರಾಷ್ಟ್ರದ ಗಂಟಿಚೋರ್, ಪಾರ್ಧಿ ಮುಂತಾದ ಅಪರಾಧಿ ಬುಡಕಟ್ಟುಗಳ ಕುರಿತ ವಿವರಣೆ ದೊರೆಯುತ್ತದೆ.

ನಂಜುಂಡಯ್ಯ ಹೆಚ್ ವಿ ಮತ್ತು ಎಲ್ ಕೆ ಎ ಅಯ್ಯರ್‌ರವರ ಮೈಸೂರ್ ಟ್ರೈಬ್ಸ್ ಅಂಡ್ ಕಾಸ್ಟ್ ಸಂ–೧ರಲ್ಲಿ ಮೈಸೂರು ಪ್ರದೇಶದಲ್ಲಿರುವ ಗಂಟಿಚೋರ್ ಸಮುದಾಯದ ಕುರಿತು ವಿವರಣೆ ನೀಡುತ್ತದೆ.

ಷಾ ಪಿ ಜಿ ಯವರ Vimukta Jati : De-notified Communities in Western India (1967) ಕೃತಿಯು ಪಶ್ಚಿಮ ಭಾರತದ ವಿಮುಕ್ತ ಬುಡಕಟ್ಟುಗಳ ಕುರಿತು ವಿವರಣೆ ನೀಡುತ್ತದೆ.

ಕಪಾಡಿಯ ಕೆ ಎಮ್ ರವರು ಸೋಷಿಯಲ್ ಬುಲೆಟಿನ್–೨ರಲ್ಲಿ The Criminal Tribes of India ಇದರಲ್ಲಿ ಭಾರತದ ಅಪರಾಧಿಗಳ ಕುರಿತಾದ ಸಂಕ್ಷಿಪ್ತ ಪರಿಚಯ ದೊರೆಯುತ್ತದೆ.

ಮೆಹ್ತಾ ಬಿ ಎಚ್ ರವರು ಇಂಡಿಯನ್ ಜರ್ನಲ್ ಆಫ್ ಸೋಷಿಯಲ್ ವರ್ಕ್ Vol -16, Ex-Criminal groups in India (1955) ಭಾರತದಲ್ಲಿ ಹಿಂದೆ ಅಪರಾಧಿ ಬುಡಕಟ್ಟುಗಳೆಂದು ಗುರುತಿಸುತ್ತಿದ್ದ ಸಮುದಾಯಗಳ ಕುರಿತ ವಿವರಣೆ ದೊರೆಯುತ್ತದೆ.

ಎಡ್ಗರ್ ಥರ್ಸ್ಟನ್ ರವರು ತಮ್ಮ ಕಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರ್ನ್ ಇಂಡಿಯ ಸಂಪುಟಗಳಲ್ಲಿ (೧೯೦೯) ನೇರವಾಗಿ ಅಪರಾಧಿ ಬುಡಕಟ್ಟು ಸಮುದಾಯಗಳು ಎನ್ನುವ ಹಣೆಪಟ್ಟಿಯಲ್ಲಿ ಆ ಸಮುದಾಯಗಳ ಕುರಿತು ಪ್ರಸ್ತಾಪಿಸಿಲ್ಲ. ಆದರೆ ಅಪರಾಧಿ ಬುಡಕಟ್ಟು ಪಟ್ಟಿಯಲ್ಲಿ ಬರುವ ಸಮುದಾಯಗಳ ಕುರಿತು ಅಲ್ಪ ಪ್ರಮಾಣದ ವಿವರಣೆ ದೊರೆಯುತ್ತವೆ.

ಡಾ ಮಲ್ಲಿ ಗಾಂಧಿಯವರ Development of De-notified Tribes policy and practice (Setlement in Andhra Pradesh) ಕೃತಿ ಆಂಧ್ರಪ್ರದೇಶದ ವಿಮುಕ್ತ ಬುಡಕಟ್ಟುಗಳ ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಸ್ಥಿತಿಗತಿಗಳ ಕುರಿತು ಮತ್ತು ಅದೇ ರೀತಿಯಾಗಿ ಯಾವ ಯಾವ ಸಮುದಾಯದ ಜನರು ಬ್ರಿಟೀಷರ ವಸಾಹತು ನೆಲೆಯಲ್ಲಿ ವಾಸಿಸುತ್ತಿದ್ದರು ಎನ್ನುವುದರ ಕುರಿತು ಮಾಹಿತಿ ಒದಗಿಸುತ್ತದೆ.

ಇವರ ಇನ್ನೊಂದು ಕೃತಿ De-notified Tribes Dimensions of change (೨೦೦೮) ಎನ್ನುವ ಕೃತಿಯಲ್ಲಿ ವಸಾಹತು ಅಪರಾಧಿ ಬುಡಕಟ್ಟು ಕಾಯ್ದೆಗಳ ಸ್ವರೂಪ ತಿಳಿಸುವುದರೊಂದಿಗೆ ಆಂಧ್ರದ ವಿಮುಕ್ತ ಬುಡಕಟ್ಟು ಸಮುದಾಯಗಳು ಎದುರಿಸುತ್ತಿರುವ ಪುನರ್ವಸತಿ ಸಮಸ್ಯೆಗಳು, ಭೂ ಹಂಚಿಕೆ ಸ್ವರೂಪಗಳನ್ನು ಅವುಗಳ ಇತಿಹಾಸವನ್ನು ಕುರಿತು ಈ ಕೃತಿಯಲ್ಲಿ ತಿಳಿಸಿದ್ದಾರೆ

ಡಾ ಮೀನಾ ರಾಧಕೃಷ್ಣ ರವರು Dishonoured by History 'Criminal tribes'and British colonial policy (೨೦೦೧) ಎನ್ನುವ ಕೃತಿಯಲ್ಲಿ ಆಂಧ್ರ ಪ್ರದೇಶದ ಅಪರಾಧಿ ಬುಡಕಟ್ಟುಗಳಲ್ಲಿ ಕೊರವ ಸಮುದಾಯದ ಸ್ಥಿತಿಗತಿಗಳನ್ನು ತಿಳಿಸಿದ್ದಾರೆ.

ಅರ್ನಾಲ್ಡ್ ಡೇವಿಡ್ ವಸಾಹತು ಕಾಲಘಟ್ಟದಲ್ಲಿ ಪೊಲೀಸ್ ವ್ಯವಸ್ಥೆ ಹೇಗಿತ್ತು, ಅಪರಾಧಿ ಬುಡಕಟ್ಟುಗಳನ್ನು ಅವರು ನೋಡುವ ದೃಷ್ಟಿಕೋನಗಳು ಹೇಗಿದ್ದವೆಂಬುದನ್ನು ೧೮೫೯ರಿಂದ ೧೯೪೭ ರವರೆಗಿನ ಕಾಲಘಟ್ಟವನ್ನು ಇರಿಸಿಕೊಂಡು Police power and colonial rule, Madras (೧೯೮೮) ವಿವರಿಸಿದ್ದಾರೆ.

ಮೈತ್ರಿ ಕೆ ಎಂ ಅವರು ಬುಡಕಟ್ಟು ಕುಲಕಸಬುಗಳು ಎಂಬ ಗ್ರಂಥದಲ್ಲಿ ಕರ್ನಾಟಕದ ೪೯ ಬುಡಕಟ್ಟುಗಳ ಕುರಿತು ಮಾಹಿತಿ ದೊರೆಯುತ್ತದೆ. ಅದರಲ್ಲಿ ಪ್ರತಿಯೊಂದು ಬುಡಕಟ್ಟಿಗಿರುವ ಪರ್ಯಾಯ ಪದಗಳನ್ನು ಗುರುತಿಸಿದ್ದಾರೆ.

ಹರ್ಬರ್ಟ್ ರಿಸ್ಲೆಯವರು Tribes and caste of Bengal (೧೮೬೧) ಬುಡಕಟ್ಟು ಮತ್ತು ಸಮುದಾಯಗಳ ವಿವರ ಒದಗಿಸಿದ್ದಾರೆ. ಪಿ ಕೆ ಮಿಶ್ರಾ ಅವರು ೧೯೭೧ರಲ್ಲಿ ಪ್ರಕಟಿಸಿದ Nomads of Mysore city, ಎಂಬ ಗ್ರಂಥದಲ್ಲಿ ಮೈಸೂರು ಪ್ರದೇಶದ ಅಲೆಮಾರಿಗಳ ಕುರಿತು ಕೆಲವೊಂದು ಮಾಹಿತಿಗಳನ್ನು ಒದಗಿಸಿದ್ದಾರೆ.

ಬುದನ್, ಸೋಷಿಯಾಲಾಜಿಕಲ್ ಬುಲೆಟಿನ್, ಜರ್ನಲ್ ಆಫ್ ಇಂಡಿಯನ್ ಕ್ರಿಮಿನಾಲಾಜಿ, ಎಕನಾಮಿಕ್ ಅಂಡ್ ಪೊಲಿಟಿಕಲ್ ಛೇಂಜಸ್, ಬುಡಕಟ್ಟು ಅಧ್ಯಯನ, ಜಾನಪದ ಅಧ್ಯಯನ, ಅಭಿವೃದ್ಧಿ ಅಧ್ಯಯನ, ಪ್ರಜಾವಾಣಿ ಪತ್ರಿಕೆಗಳಲ್ಲಿ ಬಂದ ಹಲವಾರು ಲೇಖನಗಳನ್ನು ಇಲ್ಲಿ ಸಾಂದರ್ಭಿಕವಾಗಿ ಪರಾಮರ್ಶಿಸಲಾಗಿದೆ.

ಡಾ ಬಿ ಪಿ ರಾಮಯ್ಯನವರ *ದಕ್ಷಿಣ ಕರ್ನಾಟಕದ ಕೊರವರ ಸಾಂಸ್ಕೃತಿಕ ಅಧ್ಯಯನ*, ಕರ್ನಾಟಕ ಸಾಹಿತ್ಯ ಅಕಾಡೆಮಿಯವರ *ಕೊರವರ ಸಂಸ್ಕೃತಿ* ಮತ್ತು ಮೈತ್ರಿ ಕೆ ಎಂ ಅವರ ಸಂಪಾದಕತ್ವದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿದ ಅಲೆಮಾರಿ ಬುಡಕಟ್ಟು ಮಾಲೆಯ ೨೨ ಕೃತಿಗಳು ಅಲೆಮಾರಿ ಹಾಗೂ ಕೆಲವು ವಿಮುಕ್ತ ಬುಡಕಟ್ಟುಗಳ ಕುರಿತು ಮಾಹಿತಿ ಒದಗಿಸುತ್ತವೆ. ಆದರೆ ಕರ್ನಾಟಕ ವಸಾಹತು ನೆಲೆಗಳಲ್ಲಿ ವಾಸಿಸುವ ವಿಮುಕ್ತ ಬುಡಕಟ್ಟುಗಳ ಕುರಿತು ಅಂತಹ ಮಹತ್ತರವಾದ ಅಧ್ಯಯನಗಳು ನಡೆದಿಲ್ಲವೆಂದೇ ಹೇಳಬಹುದಾಗಿದೆ. ಆದಕಾರಣ ಕರ್ನಾಟಕದ ವಸಾಹತು ನೆಲೆಗಳಲ್ಲಿ ವಾಸಿಸುವ ವಿಮುಕ್ತ ಬುಡಕಟ್ಟುಗಳ ಅಧ್ಯಯನವನ್ನು ಕೈಗೊಂಡಿದ್ದು ಅವರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಅಂಶಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಇಲ್ಲಿ ಮಾಡಲಾಗಿದೆ.

ಅಧ್ಯಯನದ ವ್ಯಾಪ್ತಿ

ಕರ್ನಾಟಕದಲ್ಲಿರುವ ಹುಬ್ಬಳ್ಳಿ, ಬಿಜಾಪುರ, ಗದಗ, ಬಾಗಲಕೋಟ, ಬೆಳಗಾವಿ, ಖಾನಾಪೂರ ಮುಂತಾದ ನಗರ ಪ್ರದೇಶಗಳಲ್ಲಿ ಬ್ರಿಟೀಷರು ಅಪರಾಧಿ ಬುಡಕಟ್ಟುಗಳನ್ನು ಇರಿಸಲು ಸೆಟ್ಲ್‌ಮೆಂಟ್‌ಗಳನ್ನು ನಿರ್ಮಿಸಿದ್ದರು. ಈ ಸೆಟ್ಲ್‌ಮೆಂಟ್‌ಗಳಲ್ಲಿ ಮುಖ್ಯವಾಗಿ ಪ್ರಸ್ತುತ ನೆಲೆಸಿರುವ ವಿಮುಕ್ತ ಬುಡಕಟ್ಟು ಸಮುದಾಯಗಳು ಕಂಜರಬಾಟ, ಕೊರಮ, ಗಂಟಿಚೋರ್, ಹರಿಣಶಿಕಾರಿ, ಪಾರ್ಧಿ, ಛಪ್ಪರಬಂದ, ಭೋವಿ/ ವಡ್ಡರ ಮುಂತಾದ ಸಮುದಾಯಗಳನ್ನು ಕಾಣಬಹುದಾಗಿದೆ.

ಸೆಟ್ಲಂಮೆಂಟ್‌ಗಳಲ್ಲಿ ನೆಲೆಸಿರುವ ಈ ಸಮುದಾಯಗಳ ಸಾಮಾಜಿಕ ಅಧ್ಯಯನವನ್ನು ಮಾತ್ರ ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಳ್ಳಲಾಗಿದೆ.

ಅಧ್ಯಯನದ ಉದ್ದೇಶಗಳು

೧. ವಿಮುಕ್ತ ಬುಡಕಟ್ಟು ಸಮುದಾಯಗಳ ಬಗ್ಗೆ ಇವತ್ತಿಗೂ ಅಪರಾಧಿ ಬುಡಕಟ್ಟು ಎಂಬ ಹಣೆಪಟ್ಟಿ ನೀಡುವ ಪೂರ್ವಾಗ್ರಹಪೀಡಿತ ಮನೋಭಾವನೆಯ ಹಿಂದಿನ ಉದ್ದೇಶವನ್ನು ತಿಳಿದುಕೊಳ್ಳುವುದು. ಮತ್ತು ಇಂತಹ ಮನೋಭಾವನೆಯನ್ನು ಹೋಗಲಾಡಿಸಲು ಇರುವ ಸಾಧ್ಯತೆಗಳನ್ನು ಅರಿಯಲು ಪ್ರಯತ್ನಿಸುವುದು.

೨. ಈ ಸಮುದಾಯಗಳ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ರಾಜಕೀಯ ಸ್ಥಿತಿ–ಗತಿಗಳ ಬಗ್ಗೆ ತಿಳಿದುಕೊಳ್ಳುವುದು.

೩. ಈ ಸಮುದಾಯದಲ್ಲಿರುವ ಮಹಿಳಾ ಮತ್ತು ಪುರುಷ ವರ್ಗದ ಲಿಂಗಾನುಪಾತದ ಪ್ರಮಾಣ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಅವರ ಬೆಳವಣಿಗೆಯ ಪ್ರಮಾಣವನ್ನು ತುಲನಾತ್ಮಕವಾಗಿ ತಿಳಿದುಕೊಳ್ಳುವುದು.

೪. ಈ ಸಮುದಾಯಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಮತ್ತು ವಿವಿದ ಸಂಘ ಸಂಸ್ಥೆಗಳಿಂದ ಸಿಗುತ್ತಿರುವ ಆರ್ಥಿಕ ಮತ್ತು ಕಾನೂನು ನೆರವು ಹಾಗೂ ಅವುಗಳ ಬಳಕೆಯ ಕುರಿತು ಮಾಹಿತಿ ಸಂಗ್ರಹಿಸುವುದು.

೫. ಈ ಸಮುದಾಯಗಳಲ್ಲಿನ ಭಾಷೆ, ಕಲೆ ಹಾಗೂ ಸಾಹಿತ್ಯ ಕುರಿತು ಅಧ್ಯಯನಿಸುವುದು.

೬. ಈ ಸಮುದಾಯಗಳ ಮೂಲ ವೃತ್ತಿ ಹಾಗೂ ಬದುಕಿನ ನಿರ್ವಹಣೆಗಾಗಿ ಪ್ರಸ್ತುತ ಅನುಸರಿಸುತ್ತಿರುವ ಅವಲಂಬಿತ ವೃತ್ತಿಗಳನ್ನು ಅರಿಯುವುದು.

೭. ಈ ಸಮುದಾಯ ಸಂಘಟನೆಗಳ ಕಾರ್ಯಸ್ವರೂಪವನ್ನು ಅರಿಯುವುದು.

೮. ವಿಮುಕ್ತ ಬುಡಕಟ್ಟುಗಳ ಮೇಲೆ ಇತರ ಸಮುದಾಯಗಳ ಪ್ರಭಾವ ಹಾಗೂ ಸಂಸ್ಕೃತೀಕರಣದ ಪ್ರಭಾವವು ಯಾವ ರೀತಿಯಾಗಿದೆ ಎಂಬುದನ್ನು ಅರಿಯುವುದು.

ಪ್ರಮೇಯಗಳು

೧. ಈಗಲೂ ಪೋಲೀಸರು ಮತ್ತು ಕೆಲವು ಪಟ್ಟಭದ್ರ ಹಿತಸಾಕ್ತಿಗಳು ಈ ಸಮುದಾಯಗಳನ್ನು ಅಪರಾಧಿ ಬುಡಕಟ್ಟುಗಳೆಂದು ಪರಿಗಣಿಸುವವು.

೨. ವಿಮುಕ್ತ ಬುಡಕಟ್ಟುಗಳು ಸಂವಿಧಾನದ ಮುಖ್ಯವಾಹಿನಿಗೆ ಸೇರಲು ಹವಣಿಸುತ್ತಿವೆ.

೩. ವಿಮುಕ್ತ ಬುಡಕಟ್ಟುಗಳು ಸಂಘಟನೆ ಮತ್ತು ಅಭಿವೃದ್ಧಿಯ ಕನಸಿನ ಹೊಸ್ತಿಲಲ್ಲಿರುವವು.

ಶೈಕ್ಷಣಿಕ ಮಹತ್ವ

ಮುಖ್ಯವಾಹಿನಿಯಲ್ಲಿರುವ ಜನರ ತಿಳುವಳಿಕೆಗಳಿಂದ ಅಲೆಮಾರಿ ಹಾಗೂ ವಿಮುಕ್ತ ಬುಡಕಟ್ಟುಗಳು ಯಾವಾಗಲೂ ಹೊರಗೆ ಉಳಿದಿವೆ. ಈ ಪಂಗಡಗಳು ಸಮಾಜಶಾಸ್ತ್ರೀಯ ಅಧ್ಯಯನದಿಂದ, ತಿರಸ್ಕೃತ ಲೋಕವೊಂದರ ವಿವರಣಾತ್ಮಕ ಸಂಶೋಧನೆಯಿಂದ ದೊರಕುವ ದತ್ತಾಂಶಗಳು ಹಾಗೂ ಒಳನೋಟಗಳು ಸಹಜವಾಗಿ ಶೈಕ್ಷಣಿಕ ಪ್ರಾಮುಖ್ಯತೆಯನ್ನು ಪಡೆಯುತ್ತವೆ. ಶತಮಾನಗಳ ಕಾಲ ವಸಾಹತುಗಳ ನೆಲೆಯಲ್ಲಿ ಬದುಕಿದ ಭಾರತೀಯ ಸಮಾಜದ ಅವಿಭಾಜ್ಯ ಅಂಗಗಳಾಗಿದ್ದ ಸಮುದಾಯಗಳ ಸ್ಪಷ್ಟ ಚಿತ್ರಣ ಈ ಅಧ್ಯಯನದಿಂದ ಪತ್ತೆ ಹಚ್ಚಲು ಸಾಧ್ಯವಾಗಿದೆ. ವಿಮುಕ್ತ ಬುಡಕಟ್ಟು ಸಮುದಾಯಗಳು ಒಂದು ಘಟಕವಾಗಿ ತನ್ನನ್ನು ತಾನು ಸ್ವ-ನಿರೂಪಿಸಿಕೊಳ್ಳುವಲ್ಲಿ ಹೇಗೆ ಶಕ್ತವಾಗಿವೆ ಎಂಬುದನ್ನು ಪರಿಶೋಧಿಸಲಾಗಿದೆ.

ಈ ಸಂಶೋಧನೆಯಲ್ಲಿಯ ಫಲಿತಗಳು ಮುಂದೊಂದು ದಿನ ಪ್ರಾಯೋಗಿಕ ಪ್ರಾಮುಖ್ಯವನ್ನು ಪಡೆದು ಹಲವಾರು ಕಾರ್ಯಯೋಜನೆಗಳಿಗೆ ಮಾರ್ಗದರ್ಶಿಯಾಗಬಲ್ಲವು ಎಂಬ ಆಶಯವನ್ನು ಹೊಂದಲಾಗಿದೆ.

ಸಮಕಾಲಿನ ಸಮಸ್ಯೆಗಳಿಗೆ ಪ್ರಸ್ತುತ ಅಧ್ಯಯನದ ಸಂಬಂಧ

ಪ್ರಸ್ತುತ ಅಧ್ಯಯನವು ಸಮಕಾಲೀನ ಸಮಸ್ಯೆಗಳ ಜೊತೆ ನೇರ ಹಾಗೂ ಪರೋಕ್ಷ ಸಂಬಂಧ ಹೊಂದಿರುತ್ತದೆ. ಸೂಕ್ಷ್ಮಾರ್ಥದಲ್ಲಿ ವಿಮುಕ್ತ ಬುಡಕಟ್ಟು ಸಮುದಾಯಗಳು ಎದುರಿಸುತ್ತಿರುವ ವಿವಿಧ ಕ್ಷೇತ್ರಗಳಲ್ಲಿನ ಸಮಸ್ಯೆಗಳು ಈ ಸಮುದಾಯಗಳಿಗೆ ಮಾತ್ರ ಸೀಮಿತವಾದಂತೆ ಕಂಡುಬಂದರೂ ವಿಶಾಲಾರ್ಥದಲ್ಲಿ ಭಾರತದಲ್ಲಿನ ಹಲವಾರು ಅಲೆಮಾರಿ ಸಮುದಾಯಗಳು ಅದರಲ್ಲೂ ನಿರ್ಲಕ್ಷಿತ ಸಮುದಾಯಗಳು ಎದುರಿಸುತ್ತಿರುವ ಸಾಮಾಜಿಕ ಸಮಸ್ಯೆಗಳ ಒಂದು ಭಾಗವಾಗಿ ಗೋಚರವಾಗುವುವು.

ವಿಮುಕ್ತ ಬುಡಕಟ್ಟುಗಳು ಬ್ರಿಟೀಷರ ವಸಾಹತು ನೀತಿಗೆ ಮತ್ತು ಪಟ್ಟಭದ್ರ ಹಿತಾಸಕ್ತಿಗಳಿಗೆ ಹಾಗೂ ಮೇಲ್ವರ್ಗಗಳ ತುಳಿತಕ್ಕೆ ಬಲಿಯಾಗಿರುವುದು ವಾಸ್ತವ ಸಂಗತಿ. ಭಾರತೀಯ ಮುಕ್ತ ಮಾರುಕಟ್ಟೆಯನ್ನು ಬಹುರಾಷ್ಟ್ರೀಯ ಕಂಪನಿಗಳು ಪ್ರವೇಶಿಸಿದ್ದರಿಂದ ಈ ಸಮುದಾಯಗಳು ತಮ್ಮ ಮೂಲ ವೃತ್ತಿ ಕೌಶಲ್ಯತೆಯನ್ನು ಕಳೆದುಕೊಂಡು ಆರ್ಥಿಕವಾಗಿ ತಲ್ಲಣಿಸಿ ಹೋಗುವಂತಾಯಿತು. ೧೮೭೧ರಲ್ಲಿ ಬ್ರಿಟೀಷ್ ಸರ್ಕಾರ ಹಲವು ಬುಡಕಟ್ಟು ಸಮುದಾಯಗಳಿಗೆ ಅಪರಾಧಿ ಬುಡಕಟ್ಟು ಎಂದು ಆದೇಶಿಸಿದೆ. ಆದರೆ, ಭಾರತ ಸ್ವತಂತ್ರವಾಗಿ ಆರು ದಶಕಗಳೆ ಕಳೆದರೂ ಈ ಸಮುದಾಯಗಳು ಅಪರಾಧಿ ಸಮುದಾಯಗಳು ಎಂಬ ಹಣೆಪಟ್ಟಿಯಿಂದ

ಮಾತ್ರ ಬಿಡುಗಡೆ ದೊರೆಯಲಿಲ್ಲ. ಕಾಯ್ದೆ-ಕಾನೂನುಗಳಿಂದ ಅವುಗಳು ಬಿಡುಗಡೆಯಾದರೂ ಪಟ್ಟಭದ್ರ ಹಿತಾಸಕ್ತಿಗಳು ಮತ್ತು ಪೊಲೀಸರು ಅವರನ್ನು ಆಜನ್ಮ ಅಪರಾಧಿಗಳಂತೆ ನೋಡುತ್ತಿದ್ದಾರೆ. ರಾಷ್ಟ್ರೀಯ ಮಟ್ಟದಲ್ಲಿ, ಅದರಲ್ಲೂ ಕರ್ನಾಟಕದ ವಸಾಹತು ನೆಲೆಗಳಲ್ಲಿ ಈ ಸಮುದಾಯಗಳು ಹಲವು ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳ ಬಿಕ್ಕಟ್ಟಿನಲ್ಲಿವೆ ಎಂದರೆ ಅತಿಶಯೋಕ್ತಿಯಾಗಲಾರದು.

ಪ್ರಸ್ತುತ ಅಧ್ಯಯನದಿಂದ ನಮಗೆ ದೊರೆತಿರುವ ಫಲಿತಗಳಲ್ಲಿ ಈ ಸಮುದಾಯಗಳು ಎದುರಿಸುತ್ತಿರುವ ಹಲವಾರು ಸಮಸ್ಯೆಗಳಿಗೆ ನಿವಾರಣೋಪಾಯಗಳ ಹೊಳವು ದೊರಕಬಲ್ಲದು.

ಸಮಾಜ ಅಥವಾ ರಾಷ್ಟ್ರಕ್ಕೆ ಪ್ರಸ್ತುತ ಅಧ್ಯಯನದ ಅವಶ್ಯಕತೆ

ಪ್ರಸ್ತುತ ಅಧ್ಯಯನದಿಂದ ಭಾರತೀಯ ಸಮಾಜ ಅಥವಾ ರಾಷ್ಟ್ರದಿಂದ ನೇಪತ್ಯಕ್ಕೆ ಸರಿಯುತ್ತಿರುವ ಸಮುದಾಯಗಳ ಸಾಮಾಜಿಕ ಬದುಕಿನ ವಾಸ್ತವ ಚಿತ್ರಣವನ್ನು ಕಟ್ಟಿಕೊಟ್ಟಂತಾಗುತ್ತದೆ. ಇಂತಹ ಅಧ್ಯಯನಗಳನ್ನು ಕೈಗೆತ್ತಿಕೊಳ್ಳದಿದ್ದರೆ ಕೆಲವು ಸಮುದಾಯಗಳು ಸಮಾಜದ ಮುಖ್ಯವಾಹಿನಿಯಿಂದ ಹೊರಗೆ ಉಳಿಯುವ ಅಪಾಯವುಂಟಾಗಬಹುದಾದ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಹಾಗೇ ಅಂತಹ ಸಮುದಾಯಗಳು ಅಪರಾಧಿ ಎಂಬ ಹಣೆಪಟ್ಟಿಯಿಂದ ಹೊರಬರಲು ಎಷ್ಟೆಲ್ಲಾ ಒಳ್ಳೆಯ ಕೆಲಸ, ಸಮಾಜ ಮುಖಿಯಾಗಿರಲು ಪ್ರಯತ್ನಿಸಿದರೂ ಪಟ್ಟಭದ್ರ ಹಿತಾಸಕ್ತಿಗಳು ಅವುಗಳಿಗೆ ಅವಕಾಶ ಮಾಡಿಕೊಡದೆ ಇರುವುದು, ಇದೆಲ್ಲವನ್ನೂ ನೋಡಿದಾಗ ಭಾರತೀಯ ಸಮಾಜ, ಸಂಸ್ಕೃತಿಯು ಎಷ್ಟೇ ದೊಡ್ಡದೆನಿಸಿದರೂ ಅದು ಯಾವುದೋ ಅಂಗವೈಕಲ್ಯದಿಂದ ಕೂಡಿದೆ ಎಂಬುದು ತಳಮಟ್ಟದ ಸಮುದಾಯಗಳು ಅನುಭವಿಸುತ್ತಿರುವ ಸಂಕಷ್ಟಗಳನ್ನು ನೋಡಿದಾಗ ತಿಳಿದುಬರುತ್ತದೆ. ಅದರಲ್ಲೂ ನಮ್ಮ ರಾಷ್ಟ್ರೀಯ ಸಮಗ್ರತಾ ಪರಿಕಲ್ಪನೆಯೇ ಊನಗೊಂಡಿದೆಯೇನೋ ಎನಿಸುತ್ತದೆ.

ಅಪರಾಧಿ ಬುಡಕಟ್ಟು ಎನ್ನುವ ಹಣೆಪಟ್ಟಿಯನ್ನು ಕಿತ್ತೆಸೆಯಲು ಆ ಸಮುದಾಯಗಳ ಸಮಗ್ರ ಅಭಿವೃದ್ಧಿಗಾಗಿ ಅವುಗಳ ಅಧ್ಯಯನದ ಅವಶ್ಯಕತೆ ಇಂದು ಹೆಚ್ಚಾಗಿದೆ. ಆ ನಿಟ್ಟಿನಲ್ಲಿ ಈ ಅಧ್ಯಯನವು ಒಂದು ಸಣ್ಣ ಪ್ರಯತ್ನವೆಂದು ಭಾವಿಸಲಾಗಿದೆ.

ಜ್ಞಾನ ಶಾಖೆಗೆ ಪ್ರಸ್ತುತ ಅಧ್ಯಯನದ ಕೊಡುಗೆ

ಮಾನವ ಜ್ಞಾನಶಾಖೆ ಎದುರಿಸುತ್ತಿರುವ ಹತ್ತು ಹಲವು ಬಿಕ್ಕಟ್ಟುಗಳಿಗೆ ಪರಿಹಾರ ಕಂಡುಕೊಳ್ಳಬೇಕಾದರೆ ಬೃಹತ್ ನಾಗರೀಕ ಸಮಾಜದ ನಯ-ನಾಜೂಕಿನ ಕೃತ್ರಿಮ ಬದುಕಿಗೂ ಮತ್ತು ಇಂತಹ ಸಮುದಾಯಗಳಿಗೂ ಇರುವ ಸಾಮಾಜಿಕ ಸಂಬಂಧಗಳನ್ನು ನೋಡಿದರೆ ಸಾಕಾಗಲಾರದು. ಅತ್ಯಂತ ಕಡೆಗಣಿಸಲ್ಪಟ್ಟ ನಿರ್ಲಕ್ಷ್ಯತೆಗೊಳಗಾದ ಸಮುದಾಯಗಳು ಬೇರೆ ಸಮುದಾಯಗಳ ಜೊತೆ ಬೆರೆಯುವ, ಅವರ ಜೊತೆ ಸ್ಪರ್ಧೆ ಮಾಡಲು ಆಗದಿರುವ ಅವಮಾನಿತ ಸ್ಥಿತಿಗಳನ್ನು ಅನುಭವಿಸುತ್ತಿವೆ. ಇಂತಹ ಅಧ್ಯಯನಗಳಿಂದ ಆ ಸಮುದಾಯಗಳು ಎದುರಿಸುತ್ತಿರುವ ಹಲವು ಸಮಸ್ಯೆಗಳಿಗೆ ಸಾಂತ್ವನಗಳು, ಸಮಾದಾನಗಳು, ಪರಿಹಾರಗಳನ್ನು ಕಂಡುಕೊಳ್ಳುವ ಮೂಲಕ ಜ್ಞಾನವನ್ನು ದೊರಕಿಸಿಕೊಳ್ಳಬಹುದಾಗಿದೆ.

ಅಂತೆಯೇ ಭಾರತೀಯ ಸಾಮಾಜಿಕ ಜ್ಞಾನ ಪರಂಪರೆಗೆ ಈ ಅಧ್ಯಯನದಿಂದ ಮತ್ತೊಂದಿಷ್ಟು ಅಳಿಲು ಗಾತ್ರದ ಜ್ಞಾನ ಸಂಪತ್ತು ಸೇರ್ಪಡೆಗೊಂಡರೆ ಅಚ್ಚರಿ ಪಡಬೇಕಿಲ್ಲ. ಅಲಕ್ಷಿತ ಸಮುದಾಯಗಳ ಅಧ್ಯಯನ ಅಧಿಕವಾಗಿ ನಡೆಯುವುದರ ಮೂಲಕ ಅಸ್ತಿತ್ವದಲ್ಲಿರುವ ಜ್ಞಾನ ಶಾಖೆ ಹೆಚ್ಚು-ಹೆಚ್ಚು ಬೆಳೆಯುತ್ತಾ, ಬಲಿಷ್ಟವಾಗುತ್ತಾ ಹೋಗುತ್ತದೆ ಎಂಬ ನಂಬುಗೆಯಿಂದ ಈ ಅಧ್ಯಯನ ಮಾಡಲಾಗಿದೆ. ಆ ನಿಟ್ಟಿನಲ್ಲಿ ಈ ಅಧ್ಯಯನ ಪುಟ್ಟ ಪ್ರಯತ್ನವಾಗಿದೆ.

ವಿಮುಕ್ತ ಬುಡಕಟ್ಟುಗಳ ಪ್ರಸ್ತುತ ಸ್ಥಿತಿ-ಗತಿ

ಸ್ವಾತಂತ್ರ್ಯ ನಂತರ ಮೊದಲ ಪ್ರಧಾನಿಯಾಗಿದ್ದ ಜವಾಹರಲಾಲ್ ನೆಹರೂರವರು ಬ್ರಿಟೀಷರು ಸೆಟ್ಲ್‌ಮೆಂಟ್‌ಗಳಿಗೆ ಹಾಕಿದ್ದ ತಂತಿ ಬೇಲಿಯನ್ನು ೧೯೫೨ರಲ್ಲಿ ಸಾಂಕೇತಿಕವಾಗಿ ಕತ್ತರಿಸಿ ಬ್ರಿಟೀಷರಿಂದ ಸೆರೆಯಾಳುಗಳಾಗಿದ್ದ ಬುಡಕಟ್ಟುಗಳನ್ನು ವಿಮುಕ್ತಗೊಳಿಸಿದರು. ಅಂದಿನಿಂದ ಇವುಗಳನ್ನು ವಿಮುಕ್ತ ಬುಡಕಟ್ಟುಗಳೆಂದೇ ಪರಿಗಣಿಸಲಾಗುತ್ತಿದೆ. ಆದರೆ ಸಮಾಜದ ದೃಷ್ಟಿಯಲ್ಲಿ ಈ ಸಮುದಾಯಗಳಾವುವು ವಿಮುಕ್ತಗೊಳ್ಳಲಿಲ್ಲ. ಅವುಗಳು ಅಪರಾಧಿ ಬುಡಕಟ್ಟುಗಳಾಗಿಯೇ ಸಾರ್ವಜನಿಕರ ದೃಷ್ಟಿಯಲ್ಲಿ ಉಳಿದವು. ಇವರನ್ನು ಮುಖ್ಯವಾಹಿನಿಯಲ್ಲಿರುವ ಯಾರು ನಂಬುತ್ತಿರಲಿಲ್ಲ. ಹೀಗಾಗಿ ಈ ಸಮುದಾಯಗಳು ಶಿಕ್ಷಣ ಹಾಗೂ ಉದ್ಯೋಗದಿಂದ ವಂಚಿತಗೊಂಡವು. ಒಂದು ಕಡೆ ಸಾರ್ವಜನಿಕರ ಉಪೇಕ್ಷೆ, ಮತ್ತೊಂದು ಕಡೆ ಪೊಲೀಸ್ ವ್ಯವಸ್ಥೆಯ ಕಿರುಕುಳ ಈ ಎರಡರ ಮಧ್ಯ ಸಿಲುಕಿ ಈ ಸಮುದಾಯಗಳು ನಲುಗುವಂತಾಯಿತು. ಬ್ರಿಟೀಷರ ಕಾಲದಲ್ಲಿ ವಸಾಹತುಗಳಲ್ಲಿ ಒಂದು ನೆಲೆಯಾದರೂ ಇವರಿಗೆ ದೊರಕಿತ್ತು. ಆದರೆ ಸ್ವಾತಂತ್ರ್ಯ ಭಾರತದಲ್ಲಿ ಆ ನೆಲೆಯೂ ಇಲ್ಲದಂತಾಯಿತು. ಪೊಲೀಸರು ಈ ಸಮುದಾಯಗಳನ್ನು ಅಪರಾಧಿ ಸಮುದಾಯಗಳಾಗಿ ನೋಡುವ ಮನೋಭಾವನೆ ಇಂದಿಗೂ ಬದಲಾಗಿಲ್ಲ.

ಕೆಲವು ಬುಡಕಟ್ಟುಗಳು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ಗುಂಪಿಗೆ ಸೇರಿಸಲ್ಪಟ್ಟವು ಎಂಬುದನ್ನು ಸಮೀಕ್ಷೆಯಲ್ಲಿ ಕಾಣಲಾಯಿತು. ವಿಮುಕ್ತ ಬುಡಕಟ್ಟುಗಳು ಬ್ರಿಟೀಷರಿಂದ ಮಾತ್ರ ಶೋಷಣೆಗೆ ಒಳಗಾಗಲಿಲ್ಲ. ಸ್ವಾತಂತ್ರ್ಯ ಭಾರತದಲ್ಲಿಯೂ ಶೋಷಣೆಗೆ ಒಳಗಾದವು. ಆದರೆ ಬ್ರಿಟೀಷ್ ಮತ್ತು ಭಾರತದ ಶೋಷಣೆಯ ರೂಪಗಳು ಮಾತ್ರ ಭಿನ್ನವಾದವುಗಳಾಗಿದ್ದವು. ಸ್ವಾತಂತ್ರ್ಯ ಭಾರತದಲ್ಲಿ ವಿಮುಕ್ತ ಬುಡಕಟ್ಟುಗಳು ಹಲವಾರು ರೀತಿಯ ಪಕ್ಷಪಾತಕ್ಕೊಳಗಾದವು. ಸರ್ಕಾರದ ಯೋಜನೆಗಳು, ಹತ್ತು ಹಲವು ಕಾರ್ಯಕ್ರಮಗಳು ಈ ಜನರನ್ನು ತಲುಪುವಲ್ಲಿ ಸೋತವು. ಈ ಬುಡಕಟ್ಟುಗಳು ಹಿಂದೆ ತಮ್ಮದೇ ಆದ ರೀತಿಯಲ್ಲಿ ಸ್ವಾಭಿಮಾನದಿಂದ ಬದುಕುತ್ತಿದ್ದವು. ಅವುಗಳು ತಮ್ಮ ಬದುಕಿಗೆ ಅವಶ್ಯಕವಾದ ಕುಶಲತೆ, ಗುಡಿಕೈಗಾರಿಕೆಗಳಲ್ಲಿ ತೊಡಗಿಕೊಂಡಿದ್ದವು. ಆದರೆ ಬ್ರಿಟೀಷರ ಪ್ರವೇಶದಿಂದಾಗಿ ಈ ಸಮುದಾಯಗಳು ತಮ್ಮ ಮೂಲ ವೃತ್ತಿಗಳನ್ನು ಕಳೆದುಕೊಂಡವು. ಬ್ರಿಟೀಷರ ದೃಷ್ಟಿಯಲ್ಲಿ ಈ ಸಮುದಾಯಗಳೆಲ್ಲ ಅಪರಾಧಿಗಳಾಗಿ ಇಲ್ಲವೇ ಗುಲಾಮರಾಗಿ ಮಾತ್ರ ಕಾಣುತ್ತಿದ್ದವು. ಹೀಗಾಗಿ ಈ ಸಮುದಾಯಗಳು ಇಲ್ಲದ ಕಿರುಕುಳ, ಅವಮಾನಗಳನ್ನು ಅನುಭವಿಸುವಂತಾಯಿತು. ಜೊತೆಗೆ ತಮ್ಮ

ಮೂಲ ವೃತ್ತಿಗಳನ್ನು ಕಳೆದುಕೊಂಡು ಅವು ಅನಾಥವಾದವು. ಈ ರೀತಿ ಅನಾಥವಾದ ಸಮುದಾಯದ ಜನರಲ್ಲಿ ಕೆಲವರು ತಮ್ಮ ಹೊಟ್ಟೆಪಾಡಿಗಾಗಿ ಸಣ್ಣ-ಪುಟ್ಟ ಅಪರಾಧಗಳನ್ನು ಮಾಡುವ ಅನಿವಾರ್ಯತೆ ಉಂಟಾಯಿತು. ಇದರಿಂದಾಗಿ ಸಾಮಾಜಿಕವಾಗಿ ಇವರನ್ನು ಹೀನಾಯ ದೃಷ್ಟಿಯಿಂದ ನೋಡುವಂತಾಯಿತು. ಎಷ್ಟೋ ಸಾರಿ ಯಾರೋ ಮಾಡಿದ ಅಪರಾಧಗಳಿಗೆ ಈ ಸಮುದಾಯಗಳು ಶಿಕ್ಷೆ ಅನುಭವಿಸಬೇಕಾದ ಸ್ಥಿತಿ ಬಂತು.

ಅಧ್ಯಯನದ ವಿನ್ಯಾಸ ಮತ್ತು ವಿಧಾನ

ಪ್ರಸ್ತುತ ಅಧ್ಯಯನದಲ್ಲಿ ಸೆಟ್ಲ್‌ಮೆಂಟ್‌ಗಳು ಮತ್ತು ವಿಮುಕ್ತ ಬುಡಕಟ್ಟುಗಳ ಕುರಿತಾಗಿ ಬಂದಿರುವ ಕೃತಿಗಳು, ಗೆಜೆಟಿಯರ್‌ಗಳು, ಪತ್ರಿಕೆಗಳು, ಲೇಖನಗಳು, ಜನಗಣತಿ ವರದಿಗಳು, ಮಾನವ ಅಭಿವೃದ್ಧಿ ವರದಿಗಳು ಹಾಗೂ ಇತರ ವರದಿಗಳಿಂದ ಮಾಹಿತಿಗಳನ್ನು ಪಡೆಯಲಾಗಿದೆ. ಹಾಗೆ ಪ್ರತಿ ಸೆಟ್ಲ್‌ಮೆಂಟಿಗೆ ನೇರವಾಗಿ ಹೋಗಿ ಸಮೀಕ್ಷೆ ಹಾಗೂ ಸಂದರ್ಶನ ಮಾಡುವುದರ ಮೂಲಕಮೂ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಮಾಹಿತಿಯನ್ನು ಪಡೆಯಲು ಕ್ಷೇತ್ರ ಕಾರ್ಯದಲ್ಲಿ ಎರಡು ವಿಧಾನಗಳನ್ನು ಅನುಸರಿಸಲಾಗಿದೆ. ಮೊದಲನೆಯದಾಗಿ ಸೆಟ್ಲಮೆಂಟ್‌ಗಳಲ್ಲಿ ವಾಸಿಸುವ ವಿಮುಕ್ತ ಬುಡಕಟ್ಟುಗಳ ಕುಟುಂಬವಾರು ಸಮಿಕ್ಷೆಯನ್ನು ನಡೆಸಲಾಗಿದೆ. ಎರಡನೆಯದಾಗಿ ಮಾಹಿತಿಯನ್ನು ಪಡೆಯುವ ಉದ್ದೇಶದಿಂದ ವ್ಯಕ್ತಿಗಳ ಸಂದರ್ಶನವನ್ನು ಕೈಗೊಳ್ಳಲಾಗಿದೆ. ಪ್ರತಿ ಸೆಟ್ಲಮೆಂಟಿನ ಪ್ರತಿಯೊಂದು ಸಮುದಾಯದಲ್ಲಿ ೧೦ ಜನ ಪುರುಷರು ಹಾಗೂ ೧೦ ಜನ ಮಹಿಳೆಯರನ್ನು ವ್ಯಕ್ತಿಗಳ ಸಂದರ್ಶನದ ಮಾದರಿ ಸಮೀಕ್ಷೆಗಾಗಿ ಆಯ್ಕೆ ಮಾಡಿಕೊಂಡು ಮಾಹಿತಿಯನ್ನು ಪಡೆಯಲಾಗಿದೆ. ಸೆಟ್ಲಮೆಂಟ್‌ನ ಮಕ್ಕಳ ಶೈಕ್ಷಣಿಕ ಪ್ರಗತಿಯನ್ನು ಅರಿಯಲು ಸೆಟ್ಲಮೆಂಟ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳ ಕಾರ್ಯಕರ್ತೆಯರು, ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆಗಳ ಮುಖ್ಯಗುರುಗಳು ಹಾಗೂ ಸಹಾಯಕ ಶಿಕ್ಷಕರನ್ನು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ಸಂದರ್ಶನ ಮಾಡಲಾಗಿದೆ ಹಾಗೂ ಸೆಟ್ಲಮೆಂಟ್‌ಗಳ ಜನರ ಆರೋಗ್ಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಆಯಾ ಪ್ರದೇಶದ ಸರಕಾರಿ ವೈದ್ಯಾಧಿಕಾರಿಗಳ ಮೂಲಕ ಪಡೆಯಲಾಗಿದೆ. ಅದೇ ರೀತಿಯಾಗಿ ಸಂಬಂಧಿಸಿದ ಇತರ ಇಲಾಖೆಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ರೀತಿ ಕ್ಷೇತ್ರ ಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿಗಳನ್ನು ಕ್ರೋಢಿಕರಿಸಿ ಅವುಗಳಿಂದ ಬಂದ ಅಂಶಗಳನ್ನು ತುಲನಾತ್ಮಕವಾಗಿ ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

ಮುಖ್ಯವಾಗಿ ಈ ಅಧ್ಯಯನ ಪೂರ್ಣಗೊಳಿಸಲು ಚಾರಿತ್ರಿಕ ವಿಧಾನ, ಸಂಖ್ಯಾಶಾಸ್ತ್ರೀಯ ವಿಧಾನ, ತುಲನಾತ್ಮಕ ವಿಧಾನ, ಸಂದರ್ಶನ, ಸಮೀಕ್ಷೆ ಹಾಗೂ ಸಹಭಾಗಿತ್ವ ವಿಧಾನ ಮತ್ತು ಪ್ರಶ್ನಾವಳಿಯ ವಿಧಾನಗಳನ್ನು ಅನುಸರಿಸಲಾಗಿದೆ. ಹಾಗೇ ಛಾಯಾಚಿತ್ರಗಳು, ರೇಖಾಚಿತ್ರಗಳು, ಕೋಷ್ಟಕಗಳು ಮುಂತಾದವುಗಳನ್ನು ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಅಧ್ಯಯನದ ಸ್ವರೂಪ

ಅಧ್ಯಾಯ ೧. ಪ್ರಸ್ತಾವನೆ

ಭಾರತದಲ್ಲಿರುವ ವಿಮುಕ್ತ ಬುಡಕಟ್ಟುಗಳ ಕುರಿತು ಬೇರೆ-ಬೇರೆ ರಾಜ್ಯಗಳಲ್ಲಿ ಹಲವಾರು ಅಧ್ಯಯನಗಳು ನಡೆದಿವೆ. ಹಾಗೇ ವರದಿಗಳು, ಲೇಖನಗಳು ಪ್ರಕಟಗೊಂಡಿವೆ. ಆದರೆ ಕರ್ನಾಟಕದ ಸೆಟ್ಲ್‌ಮೆಂಟ್‌ಗಳ ಕುರಿತಾಗಲಿ, ಅವುಗಳಲ್ಲಿ ವಾಸಿಸುತ್ತಿರುವ ವಿಮುಕ್ತ ಬುಡಕಟ್ಟುಗಳ ಕುರಿತಾಗಲಿ ಇಲ್ಲಿಯವರೆಗೂ ಅಂತಹ ಮಹತ್ವದ ಅಧ್ಯಯನಗಳು ನಡೆದಿಲ್ಲವೆಂದೇ ಹೇಳಬಹುದು. ಅಂತಹ ಕೊರತೆಯನ್ನು ಈ ಅಧ್ಯಯನವು ಅಲ್ಪಮಟ್ಟಿಗಾದರೂ ಪೂರೈಸಲಿದೆ ಎಂದು ಹೇಳಬಹುದು. ಹಾಗೂ ಮುಂದೆ ಕರ್ನಾಟಕದ ಸೆಟ್ಲ್‌ಮೆಂಟ್‌ಗಳ ಕುರಿತು ಆಳವಾಗಿ ಅಧ್ಯಯನ ಮಾಡುವವರಿಗೆ ಈ ಅಧ್ಯಯನವು ಸಹಕಾರಿಯಾದೀತೆಂದು ಭಾವಿಸಲಾಗಿದೆ. ಈ ಅಧ್ಯಯನದಲ್ಲಿ ಸೆಟ್ಲ್‌ಮೆಂಟ್‌ಗಳು ಬ್ರಿಟೀಷ್ ಕಾಲದಲ್ಲಿ ಯಾವ ರೀತಿಯಾಗಿದ್ದವು? ಸೆಟ್ಲ್‌ಮೆಂಟ್‌ನಲ್ಲಿದ್ದ ಬುಡಕಟ್ಟುಗಳನ್ನು ಯಾವ ಕಾರಣಕ್ಕಾಗಿ ಆ ಕಾಲದಲ್ಲಿ ವಸಾಹತುಗಳಲ್ಲಿ ಕೂಡಿ ಹಾಕಲಾಗಿತ್ತು. ಆ ಸಮುದಾಯಗಳಿಂದ ಅಂದಿನ ಬ್ರಿಟೀಷರು ಯಾವ ರೀತಿಯ ಉಪಯೋಗಗಳನ್ನು ಪಡೆಯುತ್ತಿದ್ದರು ಎಂಬುದನ್ನು ಪತ್ತೆ ಹಚ್ಚುವುದರೊಂದಿಗೆ ಪ್ರಸ್ತುತ ವಿಮುಕ್ತ ಬುಡಕಟ್ಟುಗಳು ಇಂದು ಯಾವ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿವೆ? ಅವುಗಳ ಸ್ಥಿತಿ-ಗತಿಗಳು ಹೇಗಿವೆ? ಮುಂತಾದವುಗಳನ್ನು ಈ ಅಧ್ಯಯನದಲ್ಲಿ ಪರಿಶೋಧಿಸಲಾಗಿದೆ.

ಕರ್ನಾಟಕದಲ್ಲಿರುವ ಸೆಟ್ಲ್‌ಮೆಂಟ್‌ಗಳಲ್ಲಿ ಇನ್ನೂ ಜೀವಂತವಾದ ಕುರುಹುಗಳನ್ನು ಉಳಿಸಿಕೊಂಡಿರುವ ಸೆಟ್ಲ್‌ಮೆಂಟ್‌ಗಳು ಎಷ್ಟು? ಹಾಗೆ ಎಷ್ಟು ಸಮುದಾಯಗಳು ಸೆಟ್ಲ್‌ಮೆಂಟ್‌ಗಳಲ್ಲಿಯೇ ಇದ್ದಾವೆ ಎಂಬುದನ್ನು ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

ಇಂದಿಗೂ ವಿಮುಕ್ತ ಬುಡಕಟ್ಟುಗಳನ್ನು ಅಪರಾಧಿ ಸಮುದಾಯಗಳೆಂದೇ ಪರಿಗಣಿಸಲಾಗುತ್ತಿದೆ. ಇದಕ್ಕೆ ಕಾರಣಗಳೇನಿರಬಹುದು ಎಂಬುದನ್ನು ಈ ಅಧ್ಯಯನದಲ್ಲಿ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ. ಹಾಗೆ ವಿಮುಕ್ತ ಬುಡಕಟ್ಟುಗಳ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ ಸ್ಥಿತಿ-ಗತಿಗಳ ಕುರಿತು ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

ಸೆಟ್ಲ್‌ಮೆಂಟ್‌ಗಳಲ್ಲಿ ನೆಲೆಸಿರುವ ವಿಮುಕ್ತ ಬುಡಕಟ್ಟುಗಳ ಜನಸಂಖ್ಯೆ, ಪುರುಷ ಹಾಗೂ ಮಹಿಳೆಯರ ಮಧ್ಯ ಇರುವ ಲಿಂಗಾನುಪಾತ ಪ್ರಮಾಣ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಅವುಗಳ ಅಭಿವೃದ್ಧಿಯ ಮಟ್ಟ ಇತ್ಯಾದಿಗಳನ್ನು ತಿಳಿಯಲು ಪ್ರಯತ್ನಿಸಲಾಗಿದೆ.

ಹಾಗೆ ವಿಮುಕ್ತ ಬುಡಕಟ್ಟುಗಳ ಕುರಿತು ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳು ಯಾವ ರೀತಿಯ ಯೋಜನೆ, ಕಾರ್ಯಕ್ರಮಗಳನ್ನು ಹಾಕಿಕೊಂಡಿವೆ. ಆ ಯೋಜನೆ ಹಾಗೂ ಕಾರ್ಯಕ್ರಮಗಳು ಸೆಟ್ಲ್‌ಮೆಂಟ್‌ನಲ್ಲಿರುವ ವಿಮುಕ್ತ ಬುಡಕಟ್ಟುಗಳನ್ನು ತಲುಪುತ್ತಿವೆಯೇ? ತಲುಪಿದ್ದರೆ ಅವುಗಳ ಪರಿಣಾಮ ಆ ಸಮುದಾಯಗಳ ಮೇಲೆ ಹೇಗೆ ಉಂಟಾಗಿದೆ? ತಲುಪದಿದ್ದರೆ ಅದಕ್ಕೆ ಕಾರಣಗಳು ಯಾವುವು?

ಅದರಿಂದಾಗಿ ಆ ಸಮುದಾಯಗಳು ಯಾವ ರೀತಿಯ ಸಂಕಷ್ಟಗಳನ್ನು ಅನುಭವಿಸಬೇಕಾಗಿದೆ? ಮುಂತಾದವುಗಳನ್ನು ಈ ಅಧ್ಯಯನದಲ್ಲಿ ಶೋಧಿಸಲಾಗಿದೆ.

ವಿಮುಕ್ತ ಬುಡಕಟ್ಟುಗಳು ಒಂದೇ ಪ್ರದೇಶದಲ್ಲಿ ಒಟ್ಟಾಗಿ ನೆಲೆಸಿದರೂ ಅವುಗಳು ಪ್ರತ್ಯೇಕವಾಗಿ ತಮ್ಮದೇ ಆದ ಭಾಷೆ, ಸಂಸ್ಕೃತಿ, ಕಲೆ, ಆಚರಣೆ, ವಿಧಿ-ನಿಷೇಧಗಳನ್ನು ಅನುಸರಿಸುತ್ತವೆ. ಅವುಗಳ ಸ್ವರೂಪ ರೀತಿ-ನೀತಿಗಳ ಕುರಿತು ಈ ಅಧ್ಯಯನದಲ್ಲಿ ವಿಶ್ಲೇಷಿಸುವುದರೊಂದಿಗೆ, ಪುರೋಹಿತಶಾಹಿ ವ್ಯವಸ್ಥೆ ಹಾಗೂ ಇತರ ಧರ್ಮಗಳ ಸ್ವಭಾವ ಈ ಸಮುದಾಯಗಳ ಮೇಲೆ ಉಂಟುಮಾಡಿರಬಹುದಾದ ಪರಿಣಾಮಗಳನ್ನು ಅರಿಯುವ ಪ್ರಯತ್ನ ಈ ಅಧ್ಯಯನದಲ್ಲಿ ಮಾಡಲಾಗಿದೆ.

ಪ್ರಸ್ತುತ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ, ವಿಮುಕ್ತ ಬುಡಕಟ್ಟುಗಳ ಕುರಿತು ಇಲ್ಲಿಯವರೆಗೂ ನಡೆದ ಅಧ್ಯಯನಗಳು, ಅಧ್ಯಯನಕ್ಕಾಗಿ ಕೈಗೊಂಡ ವಿಧಾನಗಳು, ಅಧ್ಯಯನದ ರೂಪುರೇಷೆಗಳ ಕುರಿತು ಪರಿಶೋಧಿಸಲಾಗಿದೆ.

ಅಧ್ಯಾಯ ೨. ವಿಮುಕ್ತ ಬುಡಕಟ್ಟುಗಳ ಚಾರಿತ್ರಿಕ ಹಿನ್ನೆಲೆ

ಈ ಅಧ್ಯಾಯದಲ್ಲಿ ವಿಮುಕ್ತ ಬುಡಕಟ್ಟುಗಳ ಚಾರಿತ್ರಿಕ ಹಿನ್ನೆಲೆಯನ್ನು ಶೋಧಿಸಲಾಗಿದೆ. ಇದರಲ್ಲಿ ಬುಡಕಟ್ಟುಗಳೆಂದರೆ ಯಾರು? ಅವರ ಸ್ವಭಾವ ಸ್ವರೂಪಗಳು ಹೇಗಿರುತ್ತವೆ? ವಿಮುಕ್ತ ಬುಡಕಟ್ಟುಗಳೆಂದರೆ ಯಾರು? ವಿಮುಕ್ತ ಬುಡಕಟ್ಟು ಎಂಬ ಪದದ ಅರ್ಥ ಹಾಗೂ ೧೮೭೧ರಿಂದ ೧೯೫೨ರವರೆಗೆ ವಿಮುಕ್ತ ಬುಡಕಟ್ಟುಗಳು ನಡೆದು ಬಂದ ದಾರಿ ಮತ್ತು ಅವುಗಳ ಚಾರಿತ್ರಿಕ ಹಿನ್ನೆಲೆ, ವಿಮುಕ್ತ ಬುಡಕಟ್ಟುಗಳು ಹಾಗೂ ಅವುಗಳ ಸಂಬಂಧಿತ ಸಮುದಾಯಗಳು ಯಾವುವು ಎಂಬುದನ್ನು ಈ ಅಧ್ಯಾಯದಲ್ಲಿ ಪತ್ತೆ ಹಚ್ಚಲಾಗಿದೆ.

ಅಧ್ಯಾಯ ೩. ಕರ್ನಾಟಕದ ಸೆಟ್ಲ್‌ಮೆಂಟ್‌ಗಳ ಭೌಗೋಳಿಕ ಸ್ವರೂಪ

ಈ ಅಧ್ಯಾಯದಲ್ಲಿ ಕರ್ನಾಟಕದ ಸೆಟ್ಲ್‌ಮೆಂಟ್(ವಸಾಹತು)ಗಳ ಭೌಗೋಳಿಕ ಸ್ವರೂಪವನ್ನು ಅರಿಯಲಾಗಿದೆ. ಹಾಗೂ ಸೆಟ್ಲ್‌ಮೆಂಟ್‌ಗಳನ್ನು ನಿರ್ಮಿಸಲು ಹುಬ್ಬಳ್ಳಿ, ಬಿಜಾಪುರ, ಬಾಗಲಕೋಟ, ಗದಗ, ಬೆಳಗಾವಿ ಮುಂತಾದ ನಗರ ಪ್ರದೇಶಗಳನ್ನೇ ಬ್ರಿಟೀಷರು ಆಯ್ಕೆ ಮಾಡಿಕೊಂಡ ಉದ್ದೇಶವೇನು ಎಂಬುದನ್ನು ಗುರುತಿಸುವುದರೊಂದಿಗೆ ಅದಕ್ಕೆ ಸಂಬಂಧಿಸಿದ ಇತರ ವಿಚಾರಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ೪. ಸಾಮಾಜಿಕ ಹಾಗೂ ಧಾರ್ಮಿಕ ಸ್ಥಿತಿ-ಗತಿ

ಸೆಟ್ಲ್‌ಮೆಂಟ್‌ಗಳಲ್ಲಿರುವ ವಿಮುಕ್ತ ಬುಡಕಟ್ಟುಗಳ ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಸ್ಥಿತಿ–ಗತಿಗಳನ್ನು ಪರಿಶೋಧಿಲಾಗಿದೆ. ಇದರಲ್ಲಿ ವಿಮುಕ್ತ ಬುಡಕಟ್ಟುಗಳ ಸಾಮಾಜಿಕ ಏಣಿ–ಶ್ರೇಣಿ ಮತ್ತು ಕೌಡುಂಬಿಕ ಪದ್ಧತಿ, ವಿಮುಕ್ತ ಬುಡಕಟ್ಟುಗಳ ಮನೆಗಳ ರಚನೆ, ಸ್ವರೂಪ, ಆ ಸಮುದಾಯಗಳ ನ್ಯಾಯ ಪದ್ಧತಿ, ಆಹಾರ ಪದ್ಧತಿ, ಉಡುಗೆ–ತೊಡುಗೆ, ವೈದ್ಯ ಪದ್ಧತಿ, ಬೇಟೆ, ಜಾತಿ ಬಹಿಷ್ಕಾರ ಮತ್ತು ಜಾತಿಗೆ ಸೇರಿಸಿಕೊಳ್ಳುವುದು, ಗೃಹಪ್ರವೇಶ, ಸಾಮಾಜಿಕ ಸಂಘ ಸಂಸ್ಥೆಗಳು, ನಂಬಿಕೆಗಳು, ಹಾಗೆ ಜೀವನ

ವಿಧಾನ, ಹುಟ್ಟು, ಸಾವು, ಹುಡುಗಿ ಮೈನೆರೆತಾಗ ಕೈಗೊಳ್ಳುವ ಆಚರಣೆ, ವಿಧಿ ವಿಧಾನಗಳು, ವಿವಾಹ ಹಾಗೂ ವಿಚ್ಛೇದನ, ಮಕ್ಕಳಿಗೆ ಮಾಡುವ ಜವಳಕಾರ್ಯ ಮುಂತಾದ ಜೀವನಾವರ್ತನ ಕ್ರಿಯೆಗಳನ್ನು ಅವಲೋಕಿಸುವುದರೊಂದಿಗೆ ಅವರು ಆರಾಧಿಸುವ ದೈವಗಳು, ಬಲಿಪದ್ಧತಿ, ಆಚರಣೆ, ವಿಧ್ಧಿ-ನಿಷೇಧಗಳು, ಹಬ್ಬ-ಹರಿದಿನಗಳು ಮುಂತಾದವುಗಳೊಂದಿಗೆ ವಿಮುಕ್ತ ಬುಡಕಟ್ಟುಗಳ ಭಾಷೆ ಅವರ ಸಂಸ್ಕೃತಿ, ಕಲೆ, ನೃತ್ಯ, ಹಾಡುಗಳು, ವಾದ್ಯ ಪರಿಕರಗಳು ಮುಂತಾದವುಗಳನ್ನು ಪತ್ತೆ ಹಚ್ಚಲಾಗಿದೆ.

ಅಧ್ಯಾಯ ೫. ಆರ್ಥಿಕ ಸ್ಥಿತಿ-ಗತಿ

ಈ ಅಧ್ಯಾಯದಲ್ಲಿ ವಿಮುಕ್ತ ಬುಡಕಟ್ಟುಗಳ ಆರ್ಥಿಕ ಸ್ಥಿತಿ-ಗತಿಗಳನ್ನು ವಿಶ್ಲೇಷಿಸಲಾಗಿದೆ. ಇದರಲ್ಲಿ ವಿಮುಕ್ತ ಬುಡಕಟ್ಟುಗಳ ಮೂಲ ವೃತ್ತಿಗಳು ಯಾವುವು? ತಮ್ಮ ವೃತ್ತಿಗಳಿಂದ ಆ ಸಮುದಾಯಯಗಳು ದೂರ ಉಳಿಯಲು ಕಾರಣಗಳೇನು? ಇಂದಿಗೂ ಮೂಲ ವೃತ್ತಿಗಳನ್ನು ಅನುಸರಿಸುತ್ತಿರುವ ವಿಮುಕ್ತ ಬುಡಕಟ್ಟು ಕುಟುಂಬಗಳು ಸೆಟ್ಲ್‌ಮೆಂಟ್‌ಗಳಲ್ಲಿ ಎಷ್ಟಿವೆ? ವಿಮುಕ್ತ ಬುಡಕಟ್ಟುಗಳು ಪ್ರಸ್ತುತ ದಿನಗಳಲ್ಲಿ ಜೀವನಾಧಾರಕ್ಕಾಗಿ ಆಯ್ಕೆ ಮಾಡಿಕೊಂಡ ವೃತ್ತಿಗಳು ಯಾವುವು? ಹಾಗೂ ಸೆಟ್ಲ್‌ಮೆಂಟ್‌ನಲ್ಲಿರುವ ಒಟ್ಟು ಸಮುದಾಯಗಳಲ್ಲಿ ಆರ್ಥಿಕವಾಗಿ ಮುಂದಿರುವ ಹಾಗೂ ಆರ್ಥಿಕವಾಗಿ ಹಿಂದಿರುವ ಸಮುದಾಯಗಳು ಯಾವುವು? ಎಂಬುದನ್ನು ತೌಲನಿಕವಾಗಿ ನೋಡುವುದರೊಂದಿಗೆ ಸೆಟ್ಲ್‌ಮೆಂಟ್‌ನಲ್ಲಿರುವ ಒಟ್ಟು ಜನ ಸಂಖ್ಯೆಯಲ್ಲಿ ಕಾಯಕಾರ್ಹವಾದ ಜನರು ಎಷ್ಟಿದ್ದಾರೆ? ಕಾಯಕರ್ಹವಾಗಿಲ್ಲದ ಜನರು ಎಷ್ಟಿದ್ದಾರೆ? ಕಾಯಕ ಮಾಡಲು ಅನರ್ಹವಾಗಿದ್ದರೂ ಕಾಯಕದಲ್ಲಿ ನಿರತವಾದ ಜನರ ಪ್ರಮಾಣ ಎಷ್ಟಿದೆ ಎಂಬುದನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ. ಜೊತೆಗೆ ಅವರ ಮನೆಗಳ ಸ್ವರೂಪದ ಕುರಿತು ಚರ್ಚಿಸಲಾಗಿದೆ.

ಅಧ್ಯಾಯ ೬. ವಿಮುಕ್ತ ಬುಡಕಟ್ಟುಗಳ ಶೈಕ್ಷಣಿಕ ಮತ್ತು ಆರೋಗ್ಯ ಸ್ಥಿತಿಗತಿ

ಸೆಟ್ಲ್‌ಮೆಂಟ್‌ಗಳಲ್ಲಿ ನೆಲೆಸಿರುವ ವಿಮುಕ್ತ ಬುಡಕಟ್ಟುಗಳ ಶೈಕ್ಷಣಿಕ ಸ್ಥಿತಿ-ಗತಿಗಳು ಏನಿವೆ? ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರವು ಶಿಕ್ಷಣದ ಕುರಿತು ಹಾಕಿಕೊಂಡಿರುವ ಯೋಜನೆಯ ಕಾರ್ಯಕ್ರಮಗಳು ಸೆಟ್ಲ್‌ಮೆಂಟ್‌ನ ವಿಮುಕ್ತ ಬುಡಕಟ್ಟುಗಳ ಮಕ್ಕಳಿಗೆ ತಲುಪಲು ಸಾಧ್ಯವಾಗಿದೆಯೇ? ಬ್ರಿಟೀಷ್ ಕಾಲದ ಸೆಟ್ಲ್‌ಮೆಂಟ್‌ಗಳ ಶಾಲೆಗಳು ಹಾಗೂ ಪ್ರಸ್ತುತ ಸೆಟ್ಲಮೆಂಟ್‌ಗಳಲ್ಲಿರುವ ಸರ್ಕಾರಿ ಮತ್ತು ಸರ್ಕಾರೇತರ ಶಾಲೆಗಳ ಸ್ವರೂಪಗಳು ಯಾವ ರೀತಿಯಲ್ಲಿವೆ? ಹಾಗೂ ಪುರುಷ ಹಾಗೂ ಸ್ತ್ರೀಯರ ಮಧ್ಯ ಶಿಕ್ಷಣದ ಕುರಿತಾಗಿರುವ ಅಸಮತೋಲನಗಳಿಗೆ ಕಾರಣಗಳೇನು? ಮತ್ತು ಅವರ ಆರೋಗ್ಯ, ನೈರ್ಮಲ್ಯ ಮುಂತಾದವುಗಳನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಅಧ್ಯಾಯ ೭. ರಾಜಕೀಯ ಸ್ಥಿತಿ-ಗತಿ

ಸೆಟ್ಲ್‌ಮೆಂಟ್‌ಗಳಲ್ಲಿ ನೆಲೆಸಿರುವ ವಿಮುಕ್ತ ಬುಡಕಟ್ಟುಗಳ ರಾಜಕೀಯ ಸ್ಥಿತಿ-ಗತಿಗಳನ್ನು ಚರ್ಚಿಸಲಾಗಿದೆ. ರಾಜಕೀಯದಲ್ಲಿ ವಿಮುಕ್ತ ಬುಡಕಟ್ಟಿನ ಜನ ಯಾವ ಪ್ರಮಾಣದಲ್ಲಿ ಭಾಗವಹಿಸುತ್ತಾರೆ? ಇವರ ಪಾತ್ರ ಏನು? ಇವರನ್ನು ರಾಜಕಾರಣಿಗಳು ಯಾವ ಪ್ರಮಾಣದಲ್ಲಿ ಬಳಸಿಕೊಳ್ಳುತ್ತಾರೆ? ಸ್ಥಳೀಯ, ರಾಜ್ಯ

ಮತ್ತು ರಾಷ್ಟ್ರಮಟ್ಟದ ಚುನಾವಣೆಗಳಲ್ಲಿ ಇವರು ಚುನಾವಣೆಗೆ ನಿಂತು ಆಯ್ಕೆಯಾಗಲು ಸಾಧ್ಯವಾಗಿದೆಯೇ? ಸಾಧ್ಯವಾಗಿಲ್ಲವೆಂದರೆ ಅದಕ್ಕೆ ಕಾರಣಗಳೇನು ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ವಿಮುಕ್ತ ಬುಡಕಟ್ಟು ಮಹಿಳೆಯರು ಎಷ್ಟರ ಮಟ್ಟಿಗೆ ಭಾಗವಹಿಸುತ್ತಾರೆ? ಮುಂತಾದವುಗಳನ್ನು ಈ ಅಧ್ಯಾಯದಲ್ಲಿ ಶೋಧಿಸಲಾಗಿದೆ.

ಅಧ್ಯಾಯ ೮. ಶೋಷಣೆಯ ವಿವಿಧ ಮುಖಗಳು ಮತ್ತು ವಿಮುಕ್ತ ಬುಡಕಟ್ಟುಗಳು

ಸೆಟ್ಲ್‌ಮೆಂಟ್‌ಗಳಲ್ಲಿನ ವಿಮುಕ್ತ ಬುಡಕಟ್ಟುಗಳು ಅನುಭವಿಸಿದ ಮತ್ತು ಅನುಭವಿಸುತ್ತಿರುವ ಶೋಷಣೆಯ ವಿವಿಧ ಮುಖಗಳನ್ನು ನೋಡಲಾಗಿದೆ. ಬ್ರಿಟೀಷರ ಕಾಲದಲ್ಲಿರುವ ಶೋಷಣೆ ಯಾವ ಪ್ರಮಾಣದಲ್ಲಿತ್ತು? ಸ್ವತಂತ್ರ ಭಾರತದಲ್ಲಿನ ಶೋಷಣೆಗಳು ಯಾವ ತೆರನಾಗಿವೆ ಎಂಬುದನ್ನು ಈ ಅಧ್ಯಾಯದಲ್ಲಿ ಪತ್ತೆಹಚ್ಚಲಾಗಿದೆ.

ಅಧ್ಯಾಯ ೯. ಇತರೆ ಸಮುದಾಯಗಳೊಂದಿಗೆ ವಿಮುಕ್ತ ಬುಡಕಟ್ಟುಗಳ ಸಾಮಾಜಿಕ ಸಂಬಂಧಗಳು

ವಿಮುಕ್ತ ಬುಡಕಟ್ಟುಗಳು ಸಮಾಜದ ಇತರ ಸಮುದಾಯಗಳೊಂದಿಗೆ ಹೊಂದಿರುವ ಸಮಾಜಿಕ ಸಂಬಂಧಗಳು ಯಾವ ರೀತಿಯಲ್ಲಿವೆ. ವಿಮುಕ್ತ ಬುಡಕಟ್ಟುಗಳ ನಡುವಿನ ಸಮಾಜಿಕ ಸಂಬಂಧಗಳು ಹೇಗಿವೆ. ಇತರ ಸಮುದಾಯಗಳೊಂದಿಗಿನ ಸಾಮಾಜಿಕ ಸಂಬಂಧಗಳನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ೧೦. ಸಮಾರೋಪ

ಸಮಾರೋಪದಲ್ಲಿ ಈ ಅಧ್ಯಯನದಿಂದ ಬಂದ ಫಲಿತಗಳು ಹಾಗೂ ಸಲಹೆಗಳನ್ನು ಕೊಡಲಾಗಿದೆ. ಹಾಗೇ ಅನುಬಂಧ ಒಂದರಲ್ಲಿ ಸರ್ಕಾರದ ದಾಖಲೆ ಪತ್ರಗಳು, ಇತರೆ ದಾಖಲೆ ಪತ್ರಗಳನ್ನು ಕೊಡಲಾಗಿದೆ. ಅನುಬಂಧ ಎರಡರಲ್ಲಿ ವಕ್ತೃವಿವರ, ಅನುಬಂಧ ಮೂರರಲ್ಲಿ ಛಾಯಾಚಿತ್ರಗಳು, ರೇಖಾಚಿತ್ರಗಳು, ನಕ್ಷೆಗಳು ಕೊಡಲಾಗಿದೆ. ಕೊನೆಯಲ್ಲಿ ಅಧ್ಯಯನಕ್ಕೆ ಪೂರಕ ಮಾಹಿತಿಗಳನ್ನು ಒದಗಿಸಿದ ಪರಾಮರ್ಶನ ಗ್ರಂಥಗಳ ವಿವರಗಳನ್ನು ನೀಡಲಾಗಿದೆ.

ಅಧ್ಯಾಯ ಎರಡು

ವಿಮುಕ್ತ ಬುಡಕಟ್ಟುಗಳ ಚಾರಿತ್ರಿಕ ಹಿನ್ನೆಲೆ

ಬುಡಕಟ್ಟುಗಳ ಸ್ವರೂಪ

೧೮೭೧ರ ಅಪರಾಧಿ ಬುಡಕಟ್ಟುಗಳ ಕಾಯ್ದೆ

೧೯೧೧ರ ಅಪರಾಧಿ ಬುಡಕಟ್ಟು ಕಾಯ್ದೆ

೧೯೨೩ರ ಅಪರಾಧಿ ಬುಡಕಟ್ಟು ಕಾಯ್ದೆ

೧೯೨೪ರ ಅಪರಾಧಿ ಬುಡಕಟ್ಟು ಕಾಯ್ದೆ

೧೯೪೮ರ ಮದ್ರಾಸ್‌ನ ನಿರ್ಬಂಧಿತ ರೂಢಿಗತ ಅಪರಾಧಿಗಳ ಕಾಯ್ದೆ

ಬಾಂಬೆ ಪ್ರಾಂತದ ಅಪರಾಧಿ ಬುಡಕಟ್ಟುಗಳ ಅನುಸೂಚಿಯ ಇತಿಹಾಸ

ಬಾಂಬೆ ಪ್ರಾಂತ ಸೆಟಲ್‌ಮೆಂಟ್‌ಗಳಲ್ಲಿದ್ದ ಅಲೆಮಾರಿ ಬುಡಕಟ್ಟುಗಳು

ವಿಮುಕ್ತ ಬುಡಕಟ್ಟು ಎನ್ನುವುದಕ್ಕೆ ವರದಿಯಲ್ಲಿ ನೀಡಿರುವ ವ್ಯಾಖ್ಯೆ

ಅಧ್ಯಾಯ ಎರಡು

ವಿಮುಕ್ತ ಬುಡಕಟ್ಟುಗಳ ಚಾರಿತ್ರಿಕ ಹಿನ್ನೆಲೆ

ಅಪರಾಧಿ ಬುಡಕಟ್ಟು ಎನ್ನುವ ಪದ ಬಳಕೆಗೊಳ್ಳುವುದರ ಹಿಂದೆ ಬ್ರಿಟಿಷ್ ಆಳ್ವಿಕೆಯ ಭಾರತದ ಚರಿತ್ರೆ ಅಡಗಿದೆ. ಭಾರತದ ಸಂಸ್ಕೃತಿಯನ್ನು ಅರಿಯದ ಭಾರತಕ್ಕಿಂತ ಭಿನ ಸಂಸ್ಕೃತಿಯಿಂದ ಬಂದ ಬ್ರಿಟಿಷರಿಗೆ ಭಾರತವನ್ನು ಅರ್ಥಮಾಡಿಕೊಳ್ಳುವುದು ಅಷ್ಟು ಸುಲಭವಾಗಿರಲಿಲ್ಲ. ಭಾರತದ ಸಾಮಾನ್ಯನನ್ನು ಅರ್ಥಮಾಡಿಕೊಳ್ಳದೆ ಅವರು ಇಲ್ಲಿ ಯಾವುದೇ ವಹಿವಾಟು ಮತ್ತು ರಾಜ್ಯಭಾರ ಮಾಡುವುದು ಕಷ್ಟದ ವಿಚಾರವೇ ಆಗಿತ್ತು. ಹೀಗಾಗಿ ಇಲ್ಲಿಯ ಜನರ ಆಚಾರ ವಿಚಾರಗಳನ್ನು ಅರಿಯುವ ಉದ್ದೇಶವನ್ನು ಇರಿಸಿಕೊಂಡೇ ಪಾಶ್ಚಿಮಾತ್ಯರು ಇಲ್ಲಿಯ ಸಮುದಾಯಗಳ ಅಧ್ಯಯನಗಳನ್ನು ೧೮-೧೯ನೇ ಶತಮಾನದಲ್ಲಿ ಕೈಗೊಂಡು ಪಾಶ್ಚಿಮಾತ್ಯರು ಮುಖ್ಯವಾಹಿನಿಯಲ್ಲಿರುವ ಜಾತಿಗಳಿಗಿಂತ ಭಾರತದ ಕುಶಲಕರ್ಮಿ, ಆದಿಮಾಸಿ, ಅಲೆಮಾರಿ ಸಮುದಾಯಗಳ ಮೇಲೆ ಹೆಚ್ಚು ಒತ್ತನ್ನು ಕೊಟ್ಟು ಅಧ್ಯಯನ ನಡೆಸಿದರು. "ಇವತ್ತು ಹೆಚ್ಚಾಗಿ ಕಂಪನಿ ಆಡಳಿತದ ಸಂದರ್ಭದಲ್ಲಿ ನಡೆದ ಜಾತಿ ಮತ್ತು ಬುಡಕಟ್ಟುಗಳ ಅಧ್ಯಯನ ಸಂಪುಟಗಳನ್ನು ತೆರೆದು ನೋಡಿದರೆ ಅಲ್ಲಿನ ಪುಟಗಳು ಹೆಚ್ಚಾಗಿ ಈ ಮೂರು ಗುಂಪಿನ ಸಮುದಾಯಗಳಿಗೆ ಹೆಚ್ಚು ಆದ್ಯತೆಯನ್ನು ಕೊಟ್ಟಿರುವುದನ್ನು ಕಾಣಬಹುದಾಗಿದೆ (ಪ್ರಭಾಕರ ಎ ಎಸ್:೨೦೦೭:೪೬). ಕಂಪನಿ ಆಡಳಿತ ಪೂರ್ವದಲ್ಲಿ ಭಾರತದ ಪ್ರತಿಯೊಂದು ಹಳ್ಳಿಯೂ ಹಲವು ಸಮುದಾಯಗಳನ್ನು ಒಳಗೊಂಡಿದ್ದು, ಆ ಸಮುದಾಯಗಳು ಒಂದಕ್ಕೊಂದು ಪೂರಕವಾಗಿದ್ದು ಇಡೀ ಹಳ್ಳಿಯನ್ನೇ ಸ್ವಾವಲಂಬಿಯಾಗುವ ರೀತಿಯ ಸಂರಚನೆ ಮಾಡಿಕೊಂಡಿದ್ದರು. ಇಲ್ಲಿಯ ಪ್ರತಿ ಸಮುದಾಯವೂ ಒಂದಕ್ಕೊಂದು ಪೂರಕವಾಗಿ ಗೌರವ ಕೊಟ್ಟುಕೊಳ್ಳುತ್ತಲೆ ಕಾರ್ಯನಿರ್ವಹಿಸುತ್ತಾ ಸ್ವಯಂ ಪರಿಪೂರ್ಣ ಎನ್ನುವಂತಹ ಜೀವನ ನಡೆಸುತ್ತಿದ್ದವು. ಇದು ಕೇವಲ ಒಂದು ಹಳ್ಳಿಯ ಕಥೆಯಲ್ಲ. ಒಟ್ಟಾರೆಯಾಗಿ ಇಡೀ ಭಾರತದ ಕತೆಯೇ ಇದಾಗಿದೆ. ಆದರೆ ಕಂಪನಿ ಸರ್ಕಾರ ಭಾರತದ ಆಳ್ವಿಕೆಗೆ ತೊಡಗಿದ ತರುವಾಯ ಭಾರತದ ಸ್ಥಿತಿಯೇ ನಿಧಾನಕ್ಕೆ

ಬದಲಾಗತೊಡಗಿತು. ಕಂಪನಿ ಆಡಳಿತವು ಹೊಸ ಕೃಷಿ ನೀತಿ ಮತ್ತು ಭೂಕಂದಾಯ ವ್ಯವಸ್ಥೆ ಜಾರಿಗೆ ತಂದಿತು. ಇವರ ಈ ಹೊಸ ಕ್ರಮದಿಂದ ದೇಶೀಯ ಕೃಷಿ ಮತ್ತು ಊಳಿಗಮಾನ್ಯ ವ್ಯವಸ್ಥೆ ಮತ್ತು ಅದಕ್ಕೆ ಪೂರಕವೆಂಬಂತೆ ನಡೆಯುತ್ತಿದ್ದ ವ್ಯಾಪಾರ ವಹಿವಾಟು ಮತ್ತು ಆರ್ಥಿಕ ವ್ಯವಸ್ಥೆಗಳನ್ನು ಕಂಪನಿಯು ಹೊಸ ಕಾಯ್ದೆಗಳು ನಿಯಂತ್ರಣಕ್ಕೆ ತೆಗೆದುಕೊಳ್ಳತೊಡಗಿದವು. ಭಾರತದ ಊಳಿಗಮಾನ್ಯ ಆರ್ಥಿಕ ವ್ಯವಸ್ಥೆಯೊಂದಿಗೆ ಸಂಬಂಧವಿರಿಸಿಕೊಂಡಿದ್ದ ಕುಶಲಕರ್ಮಿ, ವ್ಯಾಪಾರಿ, ಸೇವಕ ವರ್ಗಗಳು ತಮ್ಮ ಮೂಲ ಕಸುಬಿನಿಂದ ದೂರ ಸರಿಯಬೇಕಾದ ಅನಿವಾರ್ಯತೆಯು ಉಂಟಾಯಿತು. ಪ್ರಾಯಶಃ ಕಂಪನಿ ಆಡಳಿತದ ಉದ್ದೇಶವೂ ಅದೇ ಆಗಿದ್ದಿತು. "ಅಲೆಮಾರಿ ವ್ಯಾಪಾರಿಗಳು ನಗರ ಮತ್ತು ಹಳ್ಳಿಗಳ ನಡುವೆ ಸೇತುವೆಯಾಗಿದ್ದುಕೊಂಡು ಸ್ಥಳೀಯ ವ್ಯವಹಾರ ಪೋಷಿಸುತ್ತಿದ್ದರು. ಸೇವಕ ವರ್ಗವಂತೂ ಇನ್ನಿಲ್ಲದಂತೆ ಊಳಿಗಮಾನ್ಯ ವ್ಯವಸ್ಥೆಯನ್ನು ಆರ್ಥಿಕವಾಗಿ ಅವಲಂಬಿಸಿತ್ತು. ಇಂತಹ ಸಂದರ್ಭದಲ್ಲಿ ಕೃಷಿ ಮತ್ತು ವ್ಯಾಪಾರಿಗಳ ಮೇಲೆ ಕಂಪನಿ ಆಡಳಿತ ತಂದ ಕಾಯ್ದೆಗಳು ಭಾರತದ ಪಾರಂಪರಿಕ ಉತ್ಪಾದನೆ ಸಂಬಂಧಗಳನ್ನು ನಿರ್ಣಾಯಕವಾಗಿ ತಲೆಕೆಳಗೆ ಮಾಡಿದವು' (ಅದೇ: ೪೬). ಕಂಪನಿ ಆಡಳಿತದ ಪ್ರವೇಶದಿಂದಾಗಿ ಸ್ವಚ್ಛಂದವಾಗಿ ತಮ್ಮದೇ ಆದ ರೀತಿಯಲ್ಲಿ ಜೀವನ ನಿರ್ವಹಣೆ ಮಾಡುತ್ತಿದ್ದ ಇಲ್ಲಿಯ ಅಲೆಮಾರಿ, ಆದಿವಾಸಿ ಬುಡಕಟ್ಟುಗಳು ತಮ್ಮ ಮೂಲ ಕಸುಬುಗಳನ್ನು ಕಳೆದುಕೊಳ್ಳುವುದರೊಂದಿಗೆ, ದಿಕ್ಕೇಡಿಗಳಾಗಿ ಉಳಿಯಬೇಕಾಯಿತು. ಈ ರೀತಿ ದಿಕ್ಕೇಡಿಗಳಾಗಿ ಉಳಿದ ಸಮುದಾಯಗಳು ತಮ್ಮ ಅನ್ನ ಕಸಿದುಕೊಂಡವರ ವಿರುದ್ಧ ನಿಲ್ಲುವುದು ಸಹಜವೂ, ಅನಿವಾರ್ಯವೂ ಆಗಿದ್ದಿತು. ಹೀಗಾಗಿ ಆ ಸಮುದಾಯಗಳೆಲ್ಲಾ ನೇರವಾಗಿಯೋ ಪರೋಕ್ಷವಾಗಿಯೋ ಕಂಪನಿ ಆಡಳಿತ ವ್ಯವಸ್ಥೆಯನ್ನು ನಿರಾಕರಿಸಿದವು. ಈ ನಿರಾಕರಣೆಯೇ ತರುವಾಯ ಆಕ್ರೋಶವಾಗಿ ಹೊರಹೊಮ್ಮಲ್ಪಟ್ಟಿತು.

೧೭೭೩ರಲ್ಲಿ ವಾರನ್ ಹೆಸ್ಟಿಂಗ್ಸ್‌ನು ಖಾಯಂ ಜಮಿನ್ದಾರಿ ಪದ್ಧತಿಯನ್ನು ಜಾರಿಗೊಳಿಸಿದನು. ಇದರಿಂದಾಗಿ ಇಲ್ಲಿಯ ಜಮಿನ್ದಾರಿ ವ್ಯವಸ್ಥೆ ಅಲುಗಾಡುವಂತಾಯಿತು. ಜಮಿನ್ದಾರಿ ಕೃಷಿ ವ್ಯವಸ್ಥೆಗೆ ಪೂರಕವಾಗಿದ್ದ ಇತರ ಸಮುದಾಯಗಳು ಜಮೀನ್ದಾರರಿಂದ ಪೋಷಣೆ ದೊರೆಯದೆಂದು ತಿಳಿದ ತುರವಾಯ ಬೇರೆಡೆಗೆ ವಲಸೆ ಹೋಗುವುದು ಅನಿವಾರ್ಯವಾಯಿತು. ಹೀಗೆ ನೆಲೆ ಕಳೆದುಕೊಂಡ ಸಮುದಾಯಗಳು ಅದಕ್ಕೆ ಕಾರಣೀಭೂತವಾದ ವ್ಯವಸ್ಥೆಯನ್ನು ಧಿಕ್ಕರಿಸುವತ್ತ ಹೆಜ್ಜೆ ಇರಿಸಿದವು. ಆದರೆ ದೇಶೀಯ ಸಮುದಾಯಗಳಿಗಿಂತ ಕಂಪನಿ ಆಡಳಿತ ಗಟ್ಟಿಯಾಗಿದ್ದುದರಿಂದ ಅದು ತನ್ನ ನಿಯಂತ್ರಣವನ್ನು ದಿನದಿಂದ ದಿನಕ್ಕೆ ಬಿಗಿಗೊಳಿಸುತ್ತ ಸಾಗಿತು.

ಇದಕ್ಕೂ ಪೂರ್ವದಲ್ಲಿ ೧೭೬೧ರಲ್ಲಿ ಮರಾಠ ಹಾಗೂ ಮೊಘಲರ ನಡುವೆ ಪಾಣೀಪತ್ ಯುದ್ಧ ಜರುಗಿತು. ಪ್ರತಿಯೊಬ್ಬ ಹೋರಾಟಗಾರ ಸೈನಿಕನಿಗೆ ಪೂರಕವಾಗಿ ಸುಮಾರು ೨೦೦೦ದಷ್ಟು ಕೆಲಸಗಾರರು ಕಾರ್ಯನಿರ್ವಹಿಸುತ್ತಿದ್ದರು. ಅವರಲ್ಲಿ ಆಯುಧ ತಯಾರಿಸುವವರು, ಪ್ರಾಣಿಗಳನ್ನು ನೋಡಿಕೊಳ್ಳುವವರು, ನೀರು ಸರಬರಾಜು ಮಾಡುವವರು, ಔಷಧಿ ನೀಡುವಂತಹ ವೈದ್ಯರು, ಜೊತೆಗೆ ವಿರೋಧಿಗಳನ್ನು ದೋಚುವವರು ಎಲ್ಲರೂ ಕಾರ್ಯನಿರ್ವಹಿಸುತ್ತಿದ್ದರು. ಹೋರಾಟದಲ್ಲಿ ಸೈನಿಕ

ಕೊನೆಗೊಂಡರೆ ಅವನೊಂದಿಗೆ ವ್ಯವಹಾರಿಕವಾಗಿ ಸಂಬಂಧವಿರಿಸಿಕೊಂಡವರು ಇನ್ನೊಬ್ಬರನ್ನು ಅವಲಂಭಿಸಬೇಕಾಗಿತ್ತು. ಇಲ್ಲವೆ ಜೀವನೋಪಾಯಕ್ಕಾಗಿ ಅನ್ಯ ಮಾರ್ಗಗಳನ್ನು ಅನುಸರಿಸಬೇಕಾದ ಅನಿವಾರ್ಯತೆ ಇದ್ದಿತು. ಜೊತೆಗೆ ಸೈನ್ಯದೊಂದಿಗೆ ಸಂಪರ್ಕ ಕಳೆದುಕೊಂಡ ಇಂತಹ ಕೆಲಸಗಾರ ಪಂಗಡಗಳೆಲ್ಲಾ ಬೇರೆ ಬೇರೆ ಕಡೆ ಚದುರಿಹೋದವು. ಇದೇ ರೀತಿಯ ಪರಿಸ್ಥಿತಿ ಉತ್ತರ ಭಾರತದಲ್ಲಿಯೂ ಉಂಟಾದುದನ್ನು ಕಾಣಬಹುದು. ರಾಣಾ ಪ್ರತಾಪನ ಆಳ್ವಿಕೆ ಕೊನೆಗೊಂಡ ತರುವಾಯ ರಾಜಾಶ್ರಯವನ್ನೇ ನಂಬಿ ಬದುಕುತ್ತಿದ್ದ ಎಷ್ಟೋ ಸಮುದಾಯಗಳು ದಕ್ಷಿಣ ಭಾರತದತ್ತ ವಲಸೆ ಬಂದುದು ಕಂಡುಬರುತ್ತದೆ. ಭಿಲ್, ಕಂಜರಭಾಟ, ಪಾರ್ಧಿ, ಫಿಸಾಡಿ, ಲಂಬಾಣಿ ಮುಂತಾದ ಸಮುದಾಯಗಳು ಮಧ್ಯಭಾರತ ಮತ್ತು ಉತ್ತರ ಭಾರತಗಳಿಂದ ಇಂಥದೇ ಕಾರಣಕ್ಕಾಗಿ ದಕ್ಷಿಣ ಭಾರತದತ್ತ ವಲಸೆ ಬಂದವು. "೧೭೭೪ ರಿಂದ ೧೮೭೧ರ ನಡುವೆ ಭಾರತದಲ್ಲಾದ ವಿದ್ಯಮಾನಗಳು ಅತೀ ಭಯಂಕರವಾದವುಗಳು. ಈ ಕಾಲಾವದಿಯೊಳಗೆ ಕಂಪನಿ ಆಡಳಿತವು ಅತೀ ಕ್ರೂರವಾದ ರೀತಿಯಲ್ಲಿ ಯುದ್ಧಗಳನ್ನು ಮಾಡಿತು. ಆಂಗ್ಲೋ ಮರಾಠಯುದ್ಧ, ಮೈಸೂರುಯುದ್ಧ, ಹೋಳ್ಕರ ಶರಣಾಗತಿ, ಪೇಶ್ವೆಗಳ ಸೋಲು, ಮೈಸೂರು ಮತ್ತು ಕೊಡಗನ್ನು ವಶಪಡಿಸಿಕೊಂಡಿದ್ದು, ವೆಲ್ಲೂರಿನ ಸಿಪಾಯಿ ದಂಗೆ, ಸಿಂಧ್, ಸಿಖ್, ಔಧ್ ಪ್ರದೇಶಗಳನ್ನು ಯುದ್ಧಗಳ ಮೂಲಕ ವಶಪಡಿಸಿಕೊಂಡಿದ್ದು, ೧೮೫೭ರಲ್ಲಿ ನಡೆದ ಸಿಪಾಯಿ ದಂಗೆ ಮುಂತಾದವುಗಳು ಸ್ಥಳೀಯ ಸಮುದಾಯಗಳನ್ನು ನೆಲೆ ಇಲ್ಲದಂತೆ ಮಾಡಿದವು. ಈ ಸಮುದಾಯಗಳೇ ಮುಂದೆ ಅಲೆಮಾರಿ ಸಮುದಾಯಗಳಾಗಿ ಪರಿವರ್ತಿತವಾದವು"(ಮಹಾಶ್ವೇತಾ ದೇವಿ:೨೦೦೩:೩).

ಒಂದು ಕಡೆ ಉತ್ತರ ಭಾರತದಿಂದ ವಲಸೆ ಬಂದ ಅಲೆಮಾರಿ ಸಮುದಾಯಗಳು, ಮತ್ತೊಂದು ಕಡೆ ಸ್ಥಳೀಯ ಅರಸರ ಅವನತಿಯ ನಂತರ ಚದುರಿ ಹೋದ ಕುಶಲಕರ್ಮಿ ಮತ್ತು ಮೂಲನಿವಾಸಿ ಸಮುದಾಯಗಳು. ತಾವು ನೆಲೆನಿಂತ ಪ್ರದೇಶಗಳಲ್ಲಿಯೇ ಪರ್ಯಾಯ ಜೀವನ ಮಾರ್ಗಗಳನ್ನು ಕಂಡುಕೊಂಡವು. ಆದರೆ ಕಂಪನಿ ಆಡಳಿತ ವ್ಯವಸ್ಥೆ ಪ್ರವೇಶವಾದ ನಂತರ ಅವರ ಹೊಸ ನೀತಿ-ಕಾಯ್ದೆಗಳು ಇವರನ್ನು ಮತ್ತಷ್ಟು ಅಧೋಗತಿಗೆ ತಳ್ಳಿದವು. ಮೊದಲೆ ತಿಳಿಸಿದಂತೆ ಕಂಪನಿ ಅಧಿಕಾರಿಗಳು ಈ ಸಮುದಾಯಗಳನ್ನು ತುಂಬಾ ಅನುಮಾನದ ದೃಷ್ಟಿಯಿಂದ ನೋಡುತ್ತಿದ್ದರು. ಪ್ರಾಯಶಃ ಇದಕ್ಕೆ ಕಾರಣ ತಮ್ಮದಲ್ಲದ ಅನ್ಯದೇಶೀಯ ಜನರ ಅಂಕೆಯಲ್ಲಿ ತಾವು ಸಿಲುಕುವ ಸ್ಥಿತಿ ಬಂದಾಗ ಈ ಸಮುದಾಯಗಳು ವ್ಯವಸ್ಥೆಯ ವಿರುದ್ಧ ನಿಂತವು.

"ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನರ ಸೈನ್ಯದ ಪ್ರಮುಖ ತುಕಡಿಗಳಲ್ಲಿ ಕಾರ್ಯ ನಿರತವಾಗಿದ್ದ ಈ ಸಮುದಾಯಗಳನ್ನು ಟಿಪ್ಪುವಿನ ಮರಣದ ನಂತರ ಬ್ರಿಟೀಷರು ಹಿಂಸಾತ್ಮಕವಾಗಿ ಹತ್ತಿಕ್ಕಿದರು"(ಅದೇ–೩) ಹಾಗೇ ತಮ್ಮ ವಿರುದ್ಧ ಧ್ವನಿಯೆತ್ತಿದ ಸಮುದಾಯಗಳನ್ನು ನಿಯಂತ್ರಿಸಲೆಂದೇ ೧೭೯೩ರಲ್ಲಿ ರೆಗ್ಯುಲೇಷನ್ ಕಾಯ್ದೆಯನ್ನು ಜಾರಿಗೊಳಿಸಲಾಯಿತು. ಈ ಕಾಯ್ದೆಯು ಮುಂದೆ ೧೮೩೬ರಲ್ಲಿ ಮರಳಿ ಪರಿಷ್ಕರಣೆಗೆ ಒಳಗಾಯಿತು. ತರುವಾಯ ೧೮೬೧ರಲ್ಲಿ ಈ ಕಾಯ್ದೆಯನ್ನು ಸಾಕಷ್ಟು ಬದಲಾವಣೆಗೆ ಒಳಪಡಿಸಿ ಇಂಡಿಯನ್ ಪೀನಲ್ ಕೋಡ್ ಆಗಿ ಜಾರಿಗೆ ತರಲಾಯಿತು. ನಂತರ ೧೮೭೧ರಲ್ಲಿ ಅಪರಾಧಿ ಬುಡಕಟ್ಟು

ಕಾಯ್ದೆಯನ್ನು ತರಲಾಯಿತು. ಇದೇ ಕಾಯ್ದೆ ೧೯೧೧ ಮತ್ತು ೧೯೨೧ರಲ್ಲಿ ಹಲವು ತಿದ್ದುಪಡಿಗೆ ಒಳಗಾಗಿ ಜಾರಿಗೊಂಡಿತು." (ಅದೇ, ಪುಟ ೪). ಈ ಕಾಯ್ದೆಯ ಅಡಿಯಲ್ಲಿ ಯಾವ ಯಾವ ಸಮುದಾಯಗಳು ಬರಬೇಕು, ಯಾವ ಸಮುದಾಯವನ್ನು ಈ ಕಾಯ್ದೆಯಡಿ ನಿರ್ಧರಿಸಬೇಕೆಂಬುದನ್ನು ತೀರ್ಮಾನ ಮಾಡಲೆಂದೇ ಅಲೆಮಾರಿಗಳನ್ನು, ಕುಶಲಕರ್ಮಿ ಮತ್ತು ಆದಿವಾಸಿ ಸಮುದಾಯಗಳನ್ನು ಅಧ್ಯಯನ ಮಾಡಲು ಬ್ರಿಟೀಷ್ ಅಧಿಕಾರಿಗಳು ತೊಡಗಿದ್ದರು. ಅದರ ಫಲವಾಗಿಯೇ Ethnographic Survey of India ಸಂಸ್ಥೆಯನ್ನು ಪ್ರಾರಂಭಿಸಲಾಯಿತು. ಇಲ್ಲಿಯ ಇಂತಹ ಮೂಲನಿವಾಸಿಗಳ ವಿವರಗಳನ್ನು ಸ್ಥಳೀಯ ಜನರ ಸಹಾಯದಿಂದ ಆ ಜನ ಸಂಪಾದಿಸಿದರು.

"೧೮೯೩ರಲ್ಲಿ ಮುಂಬೈ ಕರ್ನಾಟಕದ ಗೆಜೆಟಿಯರನ್ನು ಸಂಪಾದಿಸಿದ ವೆಂಕಟರಂಗೋ ಕಟ್ಟಿಯವರು ಅಲೆಮಾರಿಗಳಿಗೆ "ಗುಹ್ನೆಗಾರರು" ಎಂದು ಕರೆದಿದ್ದಾರೆ. ಹಾಗೇ ಕರ್ನಾಟಕದ ಗುಹ್ನೆಗಾರ ಸಮುದಾಯಗಳ ಪಟ್ಟಿಯನ್ನು ನೀಡಿದ್ದಾರೆ ಮತ್ತು ಸಮುದಾಯಗಳ ಕುರಿತು ಯಾವ ಯಾವ ಠಾಣೆ ಮತ್ತು ನ್ಯಾಯಾಲಯಗಳಲ್ಲಿ ವಿಚಾರಣೆ ನಡೆಯುತ್ತಿದೆ ಎಂಬುದನ್ನು ವಿವರಿಸಿದ್ದಾರೆ" (ವೆಂಕಟರಂಗೋ ಕಟ್ಟಿ:೧೮೯೩).

ಬುಡಕಟ್ಟುಗಳ ಸ್ವರೂಪ

ಮೂಲತಃ ಮೂಲ ನಿವಾಸಿಗಳನ್ನೆ ಬುಡಕಟ್ಟು ಸಮುದಾಯಗಳೆಂದು ಅಧ್ಯಯನಕಾರರು ಗುರುತಿಸುತ್ತಾರೆ. ತಮ್ಮದೇ ಆದ ಪಂಗಡಗಳನ್ನು ರಚಿಸಿಕೊಂಡು ಅರಣ್ಯ–ಬೆಟ್ಟಗಳಲ್ಲಿ ನೆಲೆ ನಿಂತವರು, ವಿಶಿಷ್ಟ ಅಂಗ ರಚನೆಯನ್ನು ಉಳ್ಳವರು, ಕಾಡಿನಲ್ಲಿ ಬೇಟೆಯಾಡುವುದು ಮತ್ತು ಗಡ್ಡೆ ಗೆಣಸಿನಂತಹ ಕಂದಮೂಲಗಳನ್ನು ಆಹಾರವಾಗಿಸಿಕೊಂಡವರು, ತಮ್ಮದೇ ಆದ ವಿಶಿಷ್ಟ ಭಾಷೆಯನ್ನು, ಉಡುಗೆ-ತೊಡುಗೆ, ಆಚರಣೆ, ವಿಧಿ-ನಿಷೇಧಗಳನ್ನು ಹೊಂದಿದವರನ್ನು ಸಾಮಾನ್ಯವಾಗಿ ಬುಡಕಟ್ಟುಗಳೆಂದು ಗುರುತಿಸಲಾಗುತ್ತದೆ.

ಈ ಮೊದಲೆ ತಿಳಿಸಿದಂತೆ ಈ ಜನ ಅನ್ಯರ ಪ್ರವೇಶದಿಂದಾಗಿ ತಮ್ಮ ಮೂಲ ಕಸಬನ್ನು ಕಳೆದುಕೊಂಡವು. ಉದಾಹರಣೆಗೆ ಕೈಕಾಡಿಗಳಂತಹ ಸಮುದಾಯವು ದನ ಅಥವಾ ಕತ್ತೆಗಳ ಮೇಲೆ ಉಪ್ಪು ಮುಂತಾದ ಸಾಮಾಗ್ರಿಗಳನ್ನು ಹೇರಿಕೊಂಡು ಊರಿಂದೂರಿಗೆ ಅಲೆಯುತ್ತ ವ್ಯಾಪಾರ ಮಾಡುತ್ತಿದ್ದರು. ವ್ಯಾಪಾರವೇ ಅವರ ಮೂಲ ಕಸುಬಾಗಿತ್ತು. ಆದರೆ ಕಂಪನಿ ಆಡಳಿತ ಬಂದ ನಂತರ ಭಾರತಕ್ಕೆ ರಸ್ತೆ, ರೈಲ್ವೆ ಮಾರ್ಗಗಳು ಬಂದವು. ಹೊಸ ಹೊಸ ಉದ್ದಿಮೆಗಳ ಪ್ರವೇಶವಾಯಿತು. ಇದರಿಂದಾಗಿ ಇಂತಹ ಸಮುದಾಯಗಳು ತಮ್ಮ ಮೂಲ ಕಸುಬಿನಿಂದಲೂ ವಂಚನೆಗೊಳಗಾಗಬೇಕಾಯಿತು.

"ಸರ್ಕಾರ ವಿಧಿಸಿದ ಉಪ್ಪಿಗೆ ಸಂಬಂಧಿಸಿದ ನಿಯಮಗಳಿಂದಾಗಿ ಅದನ್ನೇ ಮಾರಿ ಜೀವನ ನಿರ್ವಹಣೆ ಮಾಡುತ್ತಿದ್ದ ಕೊರವ/ಎರಕುಲ, ಬಂಜಾರಿಗಳು/ಲಂಬಾಣಿಗಳ ಜೀವನ ಅತಂತ್ರಗೊಂಡಿತು. ಸರ್ಕಾರ ಅರಣ್ಯ ನೀತಿ (ಅರಣ್ಯ ಕಾನೂನು ೧೮೦೫)ಯಿಂದಾಗಿ ಪಶುಪಾಲನೆಯನ್ನೇ ಅವಲಂಬಿಸಿದ ಸಮುದಾಯಗಳು ಪಶುಪಾಲನೆ ಮಾಡುವುದನ್ನು ನಿಲ್ಲಿಸಬೇಕಾಯಿತು ಮತ್ತು ಅರಣ್ಯ ಉತ್ಪನ್ನಗಳನ್ನು

ಸಂಗ್ರಹಿಸಿ ವ್ಯಾಪಾರ ವಹಿವಾಟು ಮಾಡುವಂತಹ ಪಂಗಡಗಳು ಅರಣ್ಯೋತ್ಪನ್ನಗಳನ್ನು ಸಂಗ್ರಹಿಸುವುದನ್ನು ಬಿಡಬೇಕಾದ ಅನಿವಾರ್ಯ ಸ್ಥಿತಿ ಉಂಟಾಯಿತು (ಹಾರ್ಡಿಮಾನ್:೧೯೮೭:೧೫).

ಲಿಯೋಲಿಸೆಂಟ್ ಬಾಲೇಮಾರ್‌ರವರು (೨೨ ಮೇ ೧೮೬೫ ಸಂ. ೩೧೭) ಅಂದಿನ ಕಲೆಕ್ಟರ್‌ರವರಿಗೆ ಬರೆದ ಪತ್ರದಲ್ಲಿ ಹೀಗೆ ತಿಳಿಸುತ್ತಾರೆ. "ಎರಕುಲರು ಹೆದ್ದಾರಿಗಳಲ್ಲಿ ನಿಂತು ದೋಚುವ, ದರೋಡೆ ಮಾಡುವ ಕಾಯಕವನ್ನು ರೂಢಿಸಿಕೊಂಡಿದ್ದಾರೆ. ಇದರಿಂದಾಗಿ ದಾರಿಹೋಕ ಸಾಮಾನ್ಯ ಜನರಿಗೆ ಹೆಚ್ಚಿನ ಪ್ರಮಾಣದಲ್ಲಿ ತೊಂದರೆ ಉಂಟಾಗುತ್ತಿದೆ" ಎಂದು ತಿಳಿಸುತ್ತಾರೆ.

ಯಾವೊಬ್ಬ ವ್ಯಕ್ತಿಯೂ ಅಪರಾಧವನ್ನು ಆಪೇಕ್ಷೆಪಟ್ಟು ಮಾಡುವುದಿಲ್ಲ. ಬದುಕಿನ ಅನಿವಾರ್ಯತೆಗಾಗಿ ಚಿಕ್ಕಪುಟ್ಟ ಅಪರಾಧಗಳನ್ನು ಈ ಜನರು ಮಾಡಬೇಕಾದ ಅನಿವಾರ್ಯತೆ ಉಂಟಾಯಿತು ಎಂಬುದನ್ನು ಮರೆಯಲಾಗದು.

೧೮೨೪ರಲ್ಲಿ ಮದ್ರಾಸಿನ ಗವರ್ನರ್‌ರಾದ ಥಾಮಸ್ ಮನ್ರೊರವರು. ಭಾರತದಲ್ಲಿ ರಸ್ತೆ ಮತ್ತು ರೈಲ್ವೆ ಮಾರ್ಗಗಳ ಅಭಿವೃದ್ಧಿಯಿಂದಾಗಿ ಸಾವಿರಾರು ಜನರು ತಮ್ಮ ಮೂಲ ವೃತ್ತಿಯಿಂದ ವಂಚಿತರಾದರು. ಹೀಗಾಗಿ ಅಂತಹ ಜನ ಅನಿವಾರ್ಯವಾಗಿ ಅಪರಾಧಿ ವೃತ್ತಿಗೆ ಇಳಿಯುವಂತಾಯಿತು"(ಹೈಮೆನಡ್ರಾಫ್: ೧೯೪೫: ಪು:೬) ಎಂದು ತಿಳಿಸುತ್ತಾರೆ. ಈ ರೀತಿ ಸಮಾಜಕ್ಕೆ ವಿಮುಖವಾಗಿ ನಡೆದು ಅಪರಾಧವೆಸಗುವ ಸಮುದಾಯದ ಜನರನ್ನು ನಿಯಂತ್ರಿಸಲೆಂದೇ ಅಪರಾಧಿ ಬುಡಕಟ್ಟು ಕಾಯ್ದೆಯನ್ನು ಕಂಪನಿ ಸರ್ಕಾರ ಜಾರಿಗೆ ತಂದಿತು. ಈ ಕಾಯ್ದೆಗಳು ೧೮೭೧ರಿಂದ ೧೯೫೨ರವರೆಗೆ ಮುಂದುವರೆದವು. ಕೆಲವು ಪ್ರದೇಶಗಳಲ್ಲಿ ೧೯೬೨ರವರೆಗೂ ಇನ್ನು ಕೆಲವು ಕಡೆ ೧೯೬೫ರ ವರೆಗೂ ಮುಂದುವರೆದುದಾಗಿ ತಿಳಿದುಬರುತ್ತದೆ.

ಮುಖ್ಯವಾಗಿ ಈ ಕಾಯ್ದೆಯು ಕೇವಲ ಅಪರಾಧಿ ಜನಗಳನ್ನು ನಿಯಂತ್ರಿಸಿ ಅವರನ್ನು ಸನ್ಮಾರ್ಗದಲ್ಲಿ ಸಾಗಿಸುವ ಏಕ ಮಾತ್ರ ಉದ್ದೇಶದಿಂದ ಕೂಡಿರಲಿಲ್ಲ. ಅದು ತಮ್ಮ ವಿರುದ್ಧ ದಂಗೆ ಏಳುವ ಚಳುವಳಿಗಾರರು ಮತ್ತು ರಾಜಕೀಯ ಹೋರಾಟಗಾರರನ್ನು ಈ ಕಾಯ್ದೆಯಡಿಯಲ್ಲಿ ಹತ್ತಿಕ್ಕುವ ತಂತ್ರ ಮತ್ತು ಉದ್ದೇಶವೂ ಇತ್ತು ಎಂಬುದನ್ನು ಮೀನಾ ರಾಧಕೃಷ್ಣ, ಮಲ್ಲಿಗಾಂಧಿ, ಕೆ ಎಂ ಮೇತ್ರಿ ಮುಂತಾದ ವಿದ್ವಾಂಸರು ತಿಳಿಸುತ್ತಾರೆ. ಪ್ರಾಯಶಃ ಆ ಕಾರಣಕ್ಕಾಗಿಯೇ ಈ ಕಾಯ್ದೆಯನ್ನು ಕಂಪನಿ ಆಡಳಿತ ಹೆಚ್ಚಾಗಿ ಬಳಸಿಕೊಂಡಿತು.

'ಯಾವುದೇ ಅಪರಾಧ ಮಾಡದೆ ತಮ್ಮ ಪಾಡಿಗೆ ತಾವು' ಸ್ವತಂತ್ರವಾಗಿ ಸ್ವಾಭಿಮಾನದಿಂದ ಬದುಕುತ್ತಿದ್ದ ಜನರನ್ನು ಅಪರಾಧದಲ್ಲಿ ತೊಡಗಬೇಕಾದಂತಹ ಅನಿವಾರ್ಯತೆಗೆ ನೂಕಿದವರೇ ಬ್ರಿಟೀಷರು. ತರುವಾಯ ಸಮಾಜ ಸುಧಾರಣೆಯ ಹೆಸರಿನಲ್ಲಿ ಅಂತಹ ಸಮುದಾಯಗಳನ್ನು ವಸಾಹತುಗಳಲ್ಲಿ ಬಂಧನಗೊಳಿಸಿದವರೂ ಅವರೆ. ಒಟ್ಟಾರೆಯಾಗಿ ಹೇಳುವುದಾದರೆ ಅಪರಾಧಿ ಬುಡಕಟ್ಟು ಕಾಯ್ದೆಯನ್ನು ತಮ್ಮ ವಿರುದ್ಧ ನಿಲ್ಲುವವರ ಮೇಲೆ ಸೇಡು ತೀರಿಸಿಕೊಳ್ಳುವ ಒಂದು ಅಸ್ತ್ರವಾಗಿ ಬಳಸಿಕೊಂಡರೆಂಬುದಂತೂ ಸತ್ಯ.

ಕಂಪನಿ ಆಡಳಿತದ ಎಲ್ಲಾ ನಿರ್ಬಂಧಗಳಿಗೆ ಒಳಗಾಗಬೇಕಿತ್ತು. ಯಾವುದೇ ಗುಂಪು, ವರ್ಗ, ಯಾವುದೇ ಸಮುದಾಯದ ಒಂದು ಭಾಗವನ್ನು ಅಥವಾ ವ್ಯಕ್ತಿಯನ್ನು ಅಪರಾಧಿ ಬುಡಕಟ್ಟು ಕಾಯ್ದೆ ಅಡಿಯಲ್ಲಿ ಬಂಧಿಸುವ ಪೂರ್ಣ ಸ್ವಾತಂತ್ರ್ಯ ಕಂಪನಿ ಅಧಿಕಾರಿಗೆ ನೀಡಲಾಗಿತ್ತು.

ಯಾವುದೇ ಗುಂಪು, ಪಂಗಡ, ಸಮುದಾಯ ಅಥವಾ ವ್ಯಕ್ತಿ ಜಾಮೀನನ ಮೇಲೆ ಬಿಡುಗಡೆಯಾಗದಂತಹ ಅಪರಾಧದಲ್ಲಿ ತೊಡಗಿದ್ದರೆ, ಅಂತಹ ಗುಂಪುಗಳ ಕುರಿತು ಗವರ್ನರ್ ಜನರಲ್ ಕೌನ್ಸಿಲ್‌ಗೆ ವರದಿ ಮಾಡಿ ಅವುಗಳನ್ನು ಅಪರಾಧಿ ಬುಡಕಟ್ಟುಗಳೆಂದು ಘೋಷಿಸಲಾಗುತ್ತಿತ್ತು.

ನಿರ್ದಿಷ್ಟವಾದ ವಾಸಸ್ಥಳವಿಲ್ಲದ ಬುಡಕಟ್ಟು, ಅಲೆಮಾರಿ ಸಮುದಾಯ, ಅಥವಾ ಗುಂಪು, ವರ್ಗಗಳು ಕಂಡುಬಂದರೆ, ಅವು ಯಾವುದೇ ನ್ಯಾಯಬದ್ಧ ದುಡಿಮೆಯಲ್ಲಿತೊಡಗಿದ್ದರೆ ಸದರಿ ಆಯೋಗಕ್ಕೆ ಮೇಲ್ಕಂಡ ಸಮುದಾಯಗಳು ವಾಸಮಾಡಬಲ್ಲ ಸ್ಥಳವನ್ನು ಸೂಚಿಸಿ ವರದಿ ಮಾಡಬಹುದಾಗಿದೆ. ಆಯೋಗವು ಇಂತಹ ಅಲೆಮಾರಿಗಳ ಜೀವನೋಪಾಯಕ್ಕೆ ಸಂಬಂಧಿಸಿದಂತೆ ಎಲ್ಲಾ ವ್ಯವಸ್ಥೆಗಳನ್ನು ಮಾಡಬಹುದಾಗಿದೆ.

ಸ್ಥಳೀಯ ಸರ್ಕಾರ ಸೂಚಿಸಿದ ಪ್ರದೇಶದಲ್ಲಿ ಅಲೆಮಾರಿ ಸಮುದಾಯಗಳನ್ನು ನೆಲೆಗೊಳಿಸುವುದು, ಯಾವುದೇ ಸಮುದಾಯ, ಗುಂಪು, ವರ್ಗಗಳು ಅಪರಾಧಿ ಸಮುದಾಯಗಳೆಂದು ಪರಿಗಣಿಸಲ್ಪಟ್ಟಿದ್ದರೆ ಅಂತಹ ಸಮುದಾಯಗಳು ಅಲೆಮಾರಿಗಳಾಗಿದ್ದು ನಿರ್ದಿಷ್ಟವಾದ ವಾಸಸ್ಥಳವಿಲ್ಲದಿದ್ದಲ್ಲಿ, ಅಂತಹ ಸಮುದಾಯಗಳನ್ನು ಸ್ಥಳೀಯ ಸರ್ಕಾರವು ಸೂಚಿಸಿದ ಪ್ರದೇಶದಲ್ಲಿ ನೆಲೆನಿಲ್ಲಿಸಬಹುದು ಅಥವಾ ಅವರನ್ನು ಮತ್ತೊಂದು ಪ್ರದೇಶಕ್ಕೆ ಸ್ಥಳಾಂತರಿಸಬಹುದು, ಅಥವಾ ಅಪರಾಧಿಗಳಿಗಾಗಿಯೇ ನಿರ್ಮಿಸಿದ ವಸಾಹತುಗಳಲ್ಲಿ ಅವರನ್ನು ಇರಿಸಲಾಗುತ್ತಿತ್ತು.

ಸ್ಥಳಾಂತರಿತ ವ್ಯಕ್ತಿಗಳ ವರ್ಗಾವಣೆಯು ನೋಂದಣಿ ಕಾಯ್ದೆಯ ಪ್ರಕಾರ ಸ್ಥಳಾಂತರಗೊಂಡ ವ್ಯಕ್ತಿಗಳ ಹೆಸರು ಮತ್ತು ವಿವರಗಳನ್ನು ಜಿಲ್ಲಾ ಪೊಲೀಸ್ ವರಿಷ್ಠರಿಗೆ ನೀಡುವುದು ಹಾಗೂ ಸ್ಥಳಾಂತರಗೊಂಡು ನೆಲೆನಿಲ್ಲುವ ಸ್ಥಳದ ಜಿಲ್ಲೆಯ ವರಿಷ್ಠಾಧಿಕಾರಿಗಳಿಗೂ ಆ ವ್ಯಕ್ತಿಗಳ ವಿವರಗಳನ್ನು ಸೆಕ್ಷನ್ ೧೧/೧೨ರ ಪ್ರಕಾರ ನೀಡುವುದು.

ಅಪರಾಧಿ ಸಮುದಾಯವೆಂದು ಪರಿಗಣಿಸಲ್ಪಟ್ಟ ಯಾವುದೇ ಸಮುದಾಯ, ಗುಂಪು, ವರ್ಗ, ವ್ಯಕ್ತಿಗಳು ಯಾವುದೇ ಗ್ರಾಮದ ಬಳಿ ನೆಲೆಸಿದಲ್ಲಿ, ಆ ಸಮುದಾಯಗಳು ನೆಲೆ ನಿಂತ ಸ್ಥಳದ ಒಡೆಯ ಅಥವಾ ಗ್ರಾಮದ ಮುಖ್ಯಸ್ಥ, ಇಲ್ಲವೆ ಗ್ರಾಮದ ಕಾವಲುಗಾರನಾದ ತಳವಾರನು ಅಂತಹ ಸಮುದಾಯಗಳ ಕುರಿತು ವಿವರಗಳನ್ನು ಹತ್ತಿರದ ಪೊಲೀಸ್ ಠಾಣೆಗೆ ತಕ್ಷಣವೇ ನೀಡಬೇಕು.

ಅಪರಾಧಿ ಸಮುದಾಯಗಳನ್ನು, ಅಲೆಮಾರಿತನವನ್ನು ನಿಯಂತ್ರಿಸುವ ಮತ್ತು ನಿರ್ಬಂಧಿಸುವ ಅಧಿಕಾರ, ಸರ್ಕಾರ ಅಪರಾಧಿ ಸಮುದಾಯಗಳೆಂದು ಪರಿಗಣಿಸಲ್ಪಟ್ಟ ಸಮುದಾಯ ಅಥವಾ ವ್ಯಕ್ತಿಗಳು ಯಾರೇ ಆಗಿರಲಿ,

ಅ) ಸಮುದಾಯದ ಅಥವಾ ವ್ಯಕ್ತಿಗಳ ತಿರುಗಾಟವನ್ನು ನಿಶ್ಚಿತ ಪ್ರದೇಶಕ್ಕೆ ನಿರ್ಬಂಧಿಸುವುದು.

ಆ) ಇಲ್ಲವೇ ಅಂತಹ ನಿರ್ದಿಷ್ಟ ಸ್ಥಳದಲ್ಲಿ, ಅಂತಹ ಅಪರಾಧಿ ಬುಡಕಟ್ಟುಗಳು ನೆಲೆ ನಿಂತ ಕುರಿತು ಗೆಜೆಟಿಯರ್ ಇಲಾಖೆಯು ಪ್ರಕಟಣೆ ಹೊರಡಿಸುವುದು. ಇಂತಹ ಸಮುದಾಯಗಳು ಯಾವ ಯಾವ ಪ್ರದೇಶಗಳಲ್ಲಿ ವಾಸಿಸುತ್ತಿವೆ ಎಂಬ ನಿಶ್ಚಿತ ಪ್ರಕಟಣೆಯೂ ದಾಖಲಾಗಬೇಕು.

ನೊಂದಾಯಿತ ಅಪರಾಧಿ ಬುಡಕಟ್ಟುಗಳು, ವ್ಯಕ್ತಿಗಳ ಚಲನವಲನಗಳನ್ನು ನಿರ್ಬಂಧಿಸಲಾಗಿದೆ. ಅಥವಾ ಸೆಕ್ಷನ್ ೧೧ ಮತ್ತು ೧೨ರ ಘೋಷಣೆಯಂತೆ ಒಂದು ನಿಶ್ಚಿತ ಸ್ಥಳದಲ್ಲಿ ವಾಸಕ್ಕೆಂದು ನಿರ್ಧರಿಸಲ್ಪಟ್ಟ ವ್ಯಕ್ತಿಗಳು ನಿಗದಿಪಡಿಸಿದ ಸಮಯ, ಸ್ಥಳ ಮತ್ತು ನಿಶ್ಚಿತವಾದ ಪ್ರಾಧಿಕಾರದ ಮುಂದೆ ಹಾಜರಾಗತಕ್ಕದ್ದು.

ಆಕಸ್ಮಾತ್ ಗಡಿಯಾಚೆಗೆ ಸಂಚರಿಸುವ ನೊಂದಾಯಿತ ಅಪರಾಧಿ ಸಮುದಾಯದ ವ್ಯಕ್ತಿಗಳನ್ನು ಬಂಧಿಸುವುದು.

ನೊಂದಾಯಿತ ಅಪರಾಧಿ ಬುಡಕಟ್ಟಿನ ಯಾವುದೇ ವ್ಯಕ್ತಿಗಳು

ಅ) ಬ್ರಿಟೀಷ್ ಇಂಡಿಯಾದ ಯಾವುದೇ ಭಾಗದಲ್ಲಿ ಕಾಣಿಸಿಕೊಂಡರೆ, ನಿಗಧಿತವಾದ ಸ್ಥಳದ ಗಡಿಯಾಚೆ ಹೋಗಿದ್ದರೆ, ಯಾವುದೇ ಗುಂಪಿನ ಚಲನವಲನ ನಿರ್ಬಂಧಿಸಿದ್ದರೆ, ನಿಗದಿ ಮಾಡದ ಸ್ಥಳದಲ್ಲಿ ಸಮುದಾಯ ನೆಲೆ ನಿಂತಿದ್ದರೆ, ಕಾಯ್ದೆಯ ನಿಯಮಗಳನ್ನು ಮೀರಿ ನಡೆದುಕೊಂಡರೆ,

ಆ) ಯಾವುದೇ ಕೈಗಾರಿಕೆಯಿಂದ, ಕೃಷಿಯಿಂದ, ನಿರಾಶ್ರಿತ ಶಿಬಿರಗಳಿಂದ ತಪ್ಪಿಸಿಕೊಂಡಿದ್ದರೆ, ಅಂತಹ ವ್ಯಕ್ತಿಗಳನ್ನು ಯಾವುದೇ ಪೊಲೀಸ್ ಅಧಿಕಾರಿ, ಇಲ್ಲವೆ ಗ್ರಾಮದ ಮುಖ್ಯಸ್ಥ, ಇಲ್ಲವೆ ಗ್ರಾಮದ ತಳವಾರನು ವಾರೆಂಟ್ ನೀಡದೆ ಬಂಧಿಸಬಹುದು. ಜೊತೆಗೆ ಮ್ಯಾಜಿಸ್ಟ್ರೇಟರ್ ಮುಂದೆ ಸಾಕ್ಷಿ ಸಮೇತವಾಗಿ ಹಾಜರುಪಡಿಸುವುದು ಮತ್ತು ಆ ವ್ಯಕ್ತಿಗಳು ಆಯ್ದುಕೊಂಡ ಸ್ಥಳವನ್ನು ತೆರವುಗೊಳಿಸುವುದು. ಹಾಗೆಯೇ ಅಪರಾಧಿಗಳಿಗಾಗಿಯೇ ನಿಗದಿ ಪಡಿಸಿದ ವಸಾಹತುಗಳಲ್ಲಿ ಮತ್ತು ಶಾಲೆಗಳಿಗೆ ಅವರನ್ನು ಮರುಸೇರ್ಪಡೆ ಮಾಡಿ ಸದರಿ ಪ್ರಕರಣವನ್ನು ನ್ಯಾಯಾಲಯದಲ್ಲಿ ಮುಂದುವರೆಸುವುದು.

ಒಟ್ಟಾರೆಯಾಗಿ ೧೮೭೧ರ ಕಾಯ್ದೆಯ ಮುಖ್ಯಗುರಿ ಅಪರಾಧಿ ಬುಡಕಟ್ಟುಗಳ ಚಟುವಟಿಕೆಗಳನ್ನು ನಿಯಂತ್ರಿಸುವುದೇ ಆಗಿತ್ತು ಮತ್ತು ಅಪರಾಧಿ ಬುಡಕಟ್ಟು ಜನರಿಗೆ ಪುನರ್ವಸತಿ ಕಲ್ಪಿಸಿ ಅವರಿಗೆ ಸಹಾಯ ಮಾಡುವುದೇ ಆಗಿತ್ತು. ಯಾವುದೇ ಗುಂಪಿನ ಜನ ತಿದ್ದಲಾಗದಷ್ಟು ಮಟ್ಟಿಗೆ ಹೋಗಿದ್ದಾರೆ ಎಂಬ ಸಂಶಯ ಬಂದರೆ ಅಂಥವರ ಮೇಲೆ ಸರಕಾರವು ಆದೇಶಗಳನ್ನು ಹೊರಡಿಸಬಹುದಾಗಿತ್ತು. (ನೋಡಿ, ಇಲಾಖಾ ಆದೇಶ–ವಿಶೇಷ:೯೧೮,ಪು.೨)ಇಂತಹ ವ್ಯಕ್ತಿಗಳನ್ನು ನಿಯಂತ್ರಿಸಲು ಅವರ ಹೆಸರು ಇತ್ಯಾದಿ ವಿವರಗಳನ್ನು ಸಂಬಂಧಿಸಿದ ಅಧಿಕಾರಿಗೆ ಬರೆದುಕೊಡಬೇಕಾಗಿತ್ತು ಮತ್ತು ಅಂತಹ ವ್ಯಕ್ತಿಗಳು ದಿನಾಲೂ ನಿರಂತರವಾಗಿ ಇಲ್ಲವೆ ಕಾಲಕಾಲಕ್ಕೆ ಪೊಲೀಸ್ ಠಾಣೆಗೆ ಭೇಟಿ ನೀಡಬೇಕಾಗಿತ್ತು.

ಅಂತಹ ಕುಟುಂಬದ ಸದಸ್ಯರು ಚಿಕ್ಕಪುಟ್ಟ ಅಪರಾಧಗಳನ್ನು ಗುರುತಿಸಲು ಸಹಕರಿಸುತ್ತಿದ್ದರು. ಒಂದು ವೇಳೆ ಅಪರಾಧಿಯು ಜೈಲಿನಲ್ಲಿದ್ದರೆ, ಆ ಅಪರಾಧಿಯ ಕುಟುಂಬವು ತುಂಬಾ ಕೀಳರಿಮೆ ಅನುಭವಿಸಬೇಕಾಗಿತ್ತು ಮತ್ತು ಆರ್ಥಿಕ ಮುಗ್ಗಟ್ಟನ್ನು ಎದುರಿಸಬೇಕಾಗಿತ್ತು ಹಾಗೂ ಭಾವನಾತ್ಮಕ ಒತ್ತಡಗಳು ಆ ಕುಟುಂಬಗಳ ಮೇಲೂ ಉಂಟಾಗುತ್ತಿತ್ತು. ಈ ರೀತಿ ಜೈಲು ಅನುಭವಿಸಿ ಹೊರ ಬಂದ ವ್ಯಕ್ತಿಗೆ ೧೯೪೭ರ ಕಾಯ್ದೆ ಸಹಕಾರಿಯಾಗಿತ್ತು.

೧೮೭೦ರ ಅಪರಾಧಿ ಬುಡಕಟ್ಟುಗಳ ಕಾಯ್ದೆ

೧೮೭೦ರಲ್ಲಿ ವಸಾಹತುಶಾಹಿ ಸರ್ಕಾರವು ಅಪರಾಧಿ ಬುಡಕಟ್ಟುಗಳ ಕುರಿತು ಮತ್ತೊಂದು ಕಾಯ್ದೆಯನ್ನು ಹೊರತಂದಿತು. ಇದು ಅಪರಾಧಿ ಬಡುಕಟ್ಟು ಮಕ್ಕಳ ಪಾಲನೆಗೆ ಸಂಬಂಧಿಸಿದಂತೆ ವಸಾಹತುಗಳನ್ನು ನಿರ್ಮಿಸುವ ಕುರಿತಾಗಿದೆ. ಈ ಎಲ್ಲಾ ವಸಾಹತುಗಳು ಕೆಲಸಕಾರ್ಯಗಳನ್ನು ಮಾಡುವ ಕುರಿತು, ವೃತ್ತಿ ಕೌಶಲ್ಯತೆ ಮತ್ತು ವಿಧೇಯ ಜೀವನದ ಬಗ್ಗೆ ಮಾರ್ಗದರ್ಶನ ನೀಡುವ ಉದ್ದೇಶಗಳನ್ನು ಒಳಗೊಂಡಿದ್ದವು. ಅವರ ಮಕ್ಕಳನ್ನು ಶಾಲೆಗೆ ಕಳಿಸುವುದು ಮತ್ತು ಅವರಿಗೆ ಪುನರ್ವಸತಿ ಕಲ್ಪಿಸಿಕೊಟ್ಟು ಅವರ ಬದುಕಿನಲ್ಲಿ ಹೊಸತನದ ಹೆಜ್ಜೆಗಳನ್ನು ಇರಿಸುವಂತೆ ಮಾಡುವುದು. ಆಕಸ್ಮಾತ್ ಯಾವುದಾದರು ಕುಟುಂಬವು ಇವರ ನಿಬಂಧನೆಗಳನ್ನು ಒಪ್ಪಿಕೊಂಡು ನಡೆಯದಿದ್ದರೆ ಅಂತಹ ಕುಟುಂಬದ ಜನರಿಗೆ ಕಡ್ಡಾಯವಾಗಿ ಶಿಕ್ಷೆ ವಿಧಿಸಲಾಗುತ್ತಿತ್ತು. ಅಪರಾಧಿ ಬುಡಕಟ್ಟುಗಳು ತಮ್ಮ ಅಲೆಮಾರಿತನ ಬಿಟ್ಟು ಪುನಃ ನೆಲೆ ನಿಲ್ಲುವಂತೆ ಮಾಡುವುದು ಮತ್ತು ನ್ಯಾಯಕ್ಕೆ ವಿಧೇಯವಾಗಿರುವ ನಾಗರೀಕರನ್ನಾಗಿಸುವುದು. ಆಕಸ್ಮಾತ್ ಅವರು ಅವರ ಎಲ್ಲಾ ನಿಯಮಗಳನ್ನು ದಿಕ್ಕರಿಸಿ ನಡೆದರೆ ಅಂಥವರಿಗೆ ಶಿಕ್ಷೆ ಮತ್ತು ದಂಡಗಳನ್ನು ವಿಧಿಸುವುದಕ್ಕೆ ಅವಕಾಶವಿದ್ದಿತು, (ಮಲ್ಲಿ ಗಾಂಧಿ:೨೦೦೮,ಪು.೬)

ಅಪರಾಧಿ ಬುಡಕಟ್ಟು ಕಾಯ್ದೆ II,೧೮೭೦ರ ಕಾಯ್ದೆಯ ವಿವರಗಳಲ್ಲಿ ಕೆಲವು ನ್ಯೂನತೆಗಳಿವೆ. ೧೯೦೨-೦೩ರಲ್ಲಿ ಪೋಲೀಸ್ ಕಮೀಷನ್(ಆಯೋಗ)ರವರು ಮೇಲಿನ ಕಾಯ್ದೆಯ ವಿರುದ್ಧ ವಿಮರ್ಶಿಸಿದ್ದಾರೆ. ೧೮೭೬ ಮೇಲಿನ ಕಾಯ್ದೆಯ ಅವಗುಣಗಳನ್ನು ಅನುಲಕ್ಷಿಸಿ ೧೯೧೧ರಲ್ಲಿ ಹೊಸ ಕಾಯ್ದೆ (ಕಾಯ್ದೆ III-೧೯೧೧)ಯನ್ನು ಜಾರಿಗೊಳಿಸಲಾಯಿತು. ಕೆಲವು ಹೊಸ ನಿಯಮಗಳನ್ನು ಈ ಕಾಯ್ದೆಯಲ್ಲಿ ತರಲಾಗಿದೆ.

ನೊಂದಾಯಿತ ಅಪರಾಧಿ ಬುಡಕಟ್ಟು ಜನರ ಬೆರಳಿನ ಗುರುತುಗಳನ್ನು ಪಡೆಯುವುದು. ಅವರು ನೆಲೆ ಬದಲಿಸಿ ಬೇರೆ ಕಡೆ ಹೋಗಿ ವಾಸಿಸುತ್ತಿದ್ದರೆ ಅಂಥವರ ಮೇಲೆ ಕ್ರಮಕೈಗೊಳ್ಳುವುದು. ಈ ಕಾಯ್ದೆಯನ್ನು ಸರ್ಕಾರಕ್ಕೆ ಆ ವ್ಯಕ್ತಿಗಳು ತಾವು ಎಲ್ಲಿ ನೆಲೆ ಬದಲಿಸಿದ್ದೇವೆ ಎಂಬುದನ್ನು ತಿಳಿಸಬೇಕಾಗಿತ್ತು. ಹಾಗೆಯೇ ಪಾಲಕರಿಂದ ಬೇರ್ಪಡಿಸಿರುವ ಮಕ್ಕಳ ವಯಸ್ಸನ್ನು ನಾಲ್ಕರ ಬದಲಾಗಿ ಆರು ವರ್ಷಕ್ಕೆ ಏರಿಸಲ್ಪಟ್ಟಿತು. ಅಪರಾಧಿ ಬುಡಕಟ್ಟುಗಳ ಚಟುವಟಿಕೆಗಳು ಸಮಾಜವಿರೋಧಿ ಚಟುವಟಿಕೆ ಎಂದು ಗುರುತಿಸಲ್ಪಡುತ್ತಿದ್ದವು. ಅಂತಹ ಕಾಯ್ದೆಗಳಿಂದ ನಿರುಮ್ಮಳವಾಗುವಂತೆ ಮಾಡಿದವರಲ್ಲಿ ಗೋಪಾಲಕೃಷ್ಣ ಗೋಖಲೆಯವರು ಕಾರಣವಾಗಿದ್ದಾರೆ. (CTA Enquiry committee report of 1911, pp.1-2,)

೧೯೧೧ರ ಅಪರಾಧಿ ಬುಡಕಟ್ಟು ಕಾಯ್ದೆ

ಅಪರಾಧಿ ಬುಡಕಟ್ಟು ಕಾಯ್ದೆ ಪೋಲೀಸ್ ಕಮೀಷನ್ ೧೯೦೨-೦೩ರ ಮೂಲ ವರದಿಯು ಅಪರಾಧಿ ಬುಡಕಟ್ಟು ಕಾಯ್ದೆ ೧೯೧೧ರಲ್ಲಿದೆ. ಅಪರಾಧಿ ಬುಡಕಟ್ಟು ಕಾರ್ಯ ಚಟುವಟಿಕೆಗಳ ಮೇಲೆ ಪೋಲೀಸ್ ವ್ಯವಸ್ಥೆ ತಿಳುವಳಿಕೆ ಪಡೆಯುವುದು, ಮತ್ತು ನಿರಂತರವಾಗಿ ಅಪರಾಧಗಳಲ್ಲಿ ನಿರತವಾದ ಕೆಲವು ಗ್ಯಾಂಗ್‌ಗಳನ್ನು ಗುರುತಿಸುವ ಕೆಲಸ ಮಾಡುವ ಕುರಿತು ತಿಳಿಸುತ್ತದೆ.

ಅಪರಾಧಿ ಬುಡಕಟ್ಟುಗಳನ್ನು ಹಿಡಿತದಲ್ಲಿರಿಸಿಕೊಳ್ಳಲು ಪೊಲೀಸರಿಗೆ ಹೆಚ್ಚಿನ ಶಕ್ತಿ ಮತ್ತು ಅಧಿಕಾರ ಬೇಕೆಂಬುದನ್ನು ತಿಳಿಸುತ್ತಿದೆ. ಪೊಲೀಸ್ ಕಮೀಷನ್ ಶಿಫಾರಸ್ಸು ಮಾಡಿದಂತೆ ೧೯೦೨ರ ಅಪರಾಧಿ ಬುಡಕಟ್ಟು ಕಾಯ್ದೆಗೆ ಕೆಲವು ತಿದ್ದುಪಡಿಗಳನ್ನು ತರಲಾಯಿತಾದರೂ ಈ ಕಾಯ್ದೆಯು ಕೆಲವು ನ್ಯೂನ್ಯತೆಗಳಿಂದ ಕೂಡಿರುವುದನ್ನು ೧೯೧೧ರ ಕಾಯ್ದೆ ತೋರಿಸಿಕೊಟ್ಟಿತು. ಹೀಗಾಗಿ ೧೯೦೨ರ ಕಾಯ್ದೆ ಬದಲಾಗಿ ೧೯೧೧ರ ಕಾಯ್ದೆ ಜಾರಿಗೊಂಡಿತು.

೧೯೧೧ರ ಕಾಯ್ದೆಯ ಮಹತ್ವಗಳು

೧೯೧೧ರ ಕಾಯ್ದೆಯ ಪ್ರಮುಖ ವಿಷಯಗಳು ೧, ಅಧಿಸೂಚನೆ, ೨, ನೊಂದಣಿ, ೩, ಬುಡಕಟ್ಟುಗಳ ಮುನ್ನಡೆ ನಿರ್ಬಂಧಗಳು, ೪, ವಸಾಹತುಗಳು, ಶಾಲೆಗಳು ಮತ್ತು ದಂಡಗಳು ಕುರಿತಾದ ಸ್ಥಳೀಯ ಸರ್ಕಾರವು ಯಾವುದೇ ಗ್ಯಾಂಗ್, ವರ್ಗ ಮತ್ತು ಬುಡಕಟ್ಟು ವ್ಯಕ್ತಿ, ಯಾವುದೇ ಗುಂಪು, ಅಥವಾ ವರ್ಗವು ಜಾಮೀನುರಹಿತ ಅಪರಾಧಗಳಲ್ಲಿ ತೊಡಗಿದ್ದರೆ, ಅಥವಾ ತೊಡಗಿದೆಯೆಂದು ನಂಬಿಕೆ ಬಂದರೆ ಸ್ಥಳೀಯ ಕಛೇರಿಯ ಗೆಜೆಟ್‌ನ ಅನುಸೂಚಿಯ ಪ್ರಕಾರ ಅಂಥವರನ್ನು ಅಥವಾ ಅಂತಹ ಗುಂಪನ್ನು ಅಪರಾಧಿ ಬುಡಕಟ್ಟು (ಸೆಕ್ಷನ್-೩) ಎಂದು ಘೋಷಿಸಬಹುದು. ಈ ಜನಗಳ ಕುರಿತು ನೋಂದಾವಣೆ ಮಾಡಿಕೊಳ್ಳುವುದು ಮತ್ತು ವಸಾಹತುಗಳಲ್ಲಿರಿಸುವುದು ಈ ಎರಡೂ ಕ್ರಮಗಳನ್ನು ಅನುಸರಿಸಬಹುದು. ಅಂತಹ ಸಮುದಾಯಗಳು ಜೀವಿಸುವ ಸ್ಥಳಗಳನ್ನು ಪೊಲೀಸರು ತಮ್ಮ ನಿಯಂತ್ರಣದಲ್ಲಿರಿಸಿಕೊಳ್ಳುವುದು. ಎರಡನೆಯದಾಗಿ, ಸೆಟ್ಲಮೆಂಟ್‌ಗಳು ಅಂದರೆ ಅಂತಹ ಸಮುದಾಯಗಳನ್ನು ನಿಯಂತ್ರಣದಲ್ಲಿರಿಸಿಕೊಳ್ಳಲು ವಿಶೇಷ ಸ್ಥಳಗಳನ್ನು ನಿರ್ಮಿಸಿ ಅಲ್ಲಿ ಅವರನ್ನು ನೋಂದಾವಣೆ ಮಾಡಿ ತಮ್ಮ ನಿಯಂತ್ರಣದಲ್ಲಿರಿಸಿಕೊಳ್ಳುವುದು (Home judicial department ,1917.) ಮತ್ತು ಅಂತಹ ಜನರ ಗುರುತಿಗಾಗಿ ಅವರ ಕೈಬೆರಳಿನ ಮತ್ತು ಇತರ ಗುರುತುಗಳನ್ನು ಆ ಬುಡಕಟ್ಟುಗಳಿಂದ ಪಡೆಯಬಹುದು. (ಮಲ್ಲಿಗಾಂಧಿ:೨೦೦೮,ಪು,೭)

ಸೆಕ್ಷನ್ ೨೨ರ ಕಾಯ್ದೆಯೊಳಗೆ ಅಪರಾಧಿ ಬುಡಕಟ್ಟಿನ ಕುಟುಂಬದ ಯಾವುದೇ ಸದಸ್ಯರು ನಿಯಮಗಳನ್ನು ಮೀರಿ ನಡೆದರೆ ಅಂತಹ ವ್ಯಕ್ತಿಯನ್ನು ಅಥವಾ ಕುಟುಂಬವನ್ನು ಶಿಕ್ಷಿಸುವುದು ಮತ್ತು ಜೈಲಿನಲ್ಲಿರಿಸುವುದು. ಮೊದಲನೆ ಅಪರಾಧಕ್ಕೆ ಒಂದು ವರ್ಷ ಜೈಲು, ಎರಡನೆ ಅಪರಾಧಕ್ಕೆ ಎರಡು ವರ್ಷ ಜೈಲು ಅದಕ್ಕೂ ಮಿಕ್ಕಿದರೆ ಅಂಥವರನ್ನು ಕುರಿತು ಸಭೆ ಕರೆದು ಏನು ಮಾಡಬಹುದು ಎಂದು ನಿರ್ಣಯಿಸಲಾಗುತ್ತಿತ್ತು.(ಅದೇ ಪು,೭)

೧೮೭೧ ಮತ್ತು ೧೯೧೧ ಕಾಯ್ದೆಗಳ ನಡುವೆ ಇರುವ ವ್ಯತ್ಯಾಸಗಳು

೧೮೭೧ರ ಅಪರಾಧಿ ಬುಡಕಟ್ಟು ಕಾಯ್ದೆಯು ಕೆಲವೇ ನಿರ್ಧಿಷ್ಟ ಪ್ರದೇಶಗಳಿಗೆ ಅಂದರೆ, ಉತ್ತರ ಭಾರತದಲ್ಲಿ ಬೆನಾಲ್, United provines, ವಾಯುವ್ಯ ಪ್ರದೇಶ (Narth west province) ಮತ್ತು ಪಂಜಾಬ್‌ಗಳಿಗೆ ಮಾತ್ರ ಸೀಮಿತವಾಗಿತ್ತು. ಈ ಕಾಯ್ದೆ ಮದ್ರಾಸ್ ಪ್ರಾಂತ್ಯಕ್ಕೆ ವಿಸ್ತರಿಸಿರಲಿಲ್ಲ. ಆದರೆ ೧೯೧೧ರ ಅಪರಾಧಿ ಬುಡಕಟ್ಟು ಕಾಯ್ದೆಯು ಇಡೀ ಭಾರತಕ್ಕೆ ಅನ್ವಯವಾಗುತ್ತಿತ್ತು. ೧೮೭೧ರ ಅಪರಾಧಿ

ಬುಡಕಟ್ಟು ಕಾಯ್ದೆಯು ಬ್ರಿಟೀಷ್ ಆಳ್ವಿಕೆಯ ಸರ್ಕಾರದಲ್ಲಿ ಪೂರ್ಣವಾಗಿ ಅನ್ವಯಿಸಲು ಕೆಲವು ತೊಡಕುಗಳಿದ್ದವು. ಆದರೆ ೧೯೧೧ರ ಕಾಯ್ದೆಯು ೧೮೭೧ರ ಕಾಯ್ದೆಯನ್ನು ಮೀರಿ ಎಲ್ಲಾ ಪ್ರದೇಶಗಳಿಗೂ ಅದು ಅನ್ವಯವಾಗುವಂತೆ ತಿದ್ದುಪಡಿ ಮಾಡಲಾಯಿತು. ೧೯೧೧ರ ಕಾಯ್ದೆಯ ವಿಶೇಷತೆ ಏನೆಂದರೆ, ಅದರ ತಿದ್ದುಪಡಿಯಲ್ಲಿ ಸ್ಥಳೀಯ ಆಡಳಿತಕ್ಕೆ ಬಲ ನೀಡುವ ಮತ್ತು ಅಪರಾಧಿ ಬುಡಕಟ್ಟುಗಳನ್ನು ನಿಯಂತ್ರಿಸುವ ಶಕ್ತಿಯನ್ನು ದೊರೆಕಿಸಿಕೊಟ್ಟಿತು ಮತ್ತು ನೊಂದ ವ್ಯಕ್ತಿಗಳನ್ನು ಪ್ರಶ್ನೆ ಮಾಡದೇ ಅವರನ್ನು ನೊಂದಾವಣೆಗೆ ಗುರಿಪಡಿಸಿ ಸೆಟಲ್‌ಮೆಂಟ್‌ಗಳಲ್ಲಿ ಇರಿಸುವ ಅಧಿಕಾರವನ್ನು ದೊರೆಕಿಸಿಕೊಟ್ಟಿತು. (Semhadri Y C : 1990:pp 132)

೧೯೧೧ರ ಕಾಯ್ದೆಯಿಂದಾಗಿ ದೊರೆತ ಸವಲತ್ತುಗಳು

೧೯೧೧ರ ಅಪರಾಧಿ ಬುಡಕಟ್ಟು ಕಾಯ್ದೆಯು ಸ್ಥಳೀಯ ಆಡಳಿತಕ್ಕೆ ಬಲವನ್ನು ತಂದುಕೊಟ್ಟಿತು.

೧. ಯಾವುದೇ ಬುಡಕಟ್ಟು, ಪಂಗಡ, ಗುಂಪನ್ನು ಅಪರಾಧಿ ಬುಡಕಟ್ಟೆಂದು ಗುರುತಿಸುವ ಮತ್ತು ಅವುಗಳು ಅಪರಾಧಗಳನ್ನು ಎಸಗುತ್ತಿದ್ದರೆ ಅಂಥವುಗಳನ್ನು ಜಾಮೀನುರಹಿತ ಅಪರಾಧಗಳೆಂದು ಪರಿಗಣಿಸಬಹುದಾಗಿತ್ತು.

೨. ಯಾವುದೇ ಅಪರಾಧಿ ಬುಡಕಟ್ಟಿನ ನೊಂದಣಿಗೊಂಡ ಸದಸ್ಯರ ಬೆರಳಿನ ಗುರುತುಗಳನ್ನು ಪಡೆಯಬಹುದಾಗಿತ್ತು.

೩. ಪ್ರತಿಯೊಬ್ಬ ನೊಂದಣಿಗೊಂಡ ಸದಸ್ಯರು ತಾವು ಯಾವ ಕಾರಣಕ್ಕಾಗಿ ತಮ್ಮ ನೆಲೆಯನ್ನು ಬದಲಿಸುತ್ತಿದ್ದೇವೆ ಎಂದು ನೇರವಾಗಿ ವರದಿ ಮಾಡಬೇಕಾಗಿತ್ತು. ಅದನ್ನು ಸ್ಥಳೀಯ ಸರ್ಕಾರವು ಘೋಷಿಸಬೇಕು. ಅಪರಾಧಿ ಬುಡಕಟ್ಟುಗಳು ತಮ್ಮ ಚಲನವಲನಕ್ಕೆ ಸಂಬಂಧಸಿದಂತೆ, ನಿರ್ಧರಿತ ಪ್ರದೇಶಗಳಲ್ಲಿ ಅಥವಾ ಸ್ಥಳಗಳಲ್ಲಿ ನೆಲೆಸಬೇಕಾಗಿತ್ತು. (ಸೆಕ್ಷೆನ್ ೧೨) ಆದರೆ ಅದರ ಕುರಿತು ಮೊದಲೇ ಕ್ರಮಕೈಗೊಳ್ಳಬೇಕಾಗುತ್ತಿತ್ತು. ಜೀವನ ಶೈಲಿ, ಅವರು ಜೀವನಕ್ಕಾಗಿ ಯಾವ ರೀತಿಯ ದುಡಿಮೆ ಮಾಡುತ್ತಾರೆ ಎಂಬುದನ್ನು ಪರಿಗಣಿಸಿ ಅವರ ಕುರಿತು ತೃಪ್ತಿ ಎನಿಸಿದಾಗ ಮಾತ್ರ ಭಾರತ ಸರ್ಕಾರವು ಅವರ ನೆಲೆಯ ಕುರಿತು ಪರವಾನಿಗೆ ನೀಡಬಹುದಾಗಿತ್ತು.

ಇದರ ಹೊರತಾಗಿ ಆ ಕಾಯ್ದೆಯ ಮುಖ್ಯಾಂಶವೆಂದರೆ ಸ್ಥಳೀಯ ಸರ್ಕಾರವು ಅಂತಹ ಜನರಿಗಾಗಿ ಕೆಲವೊಂದು ಕಾರ್ಖಾನೆಗಳು, ವ್ಯವಸಾಯ ಕುರಿತು ತಿಳುವಳಿಕೆ ನೀಡುವ ಶಾಲೆಗಳು, ಪಾಲಕರು ಮತ್ತು ಮಕ್ಕಳನ್ನು ಬೇರ್ಪಡಿಸುವುದು, (ಸೆಕ್ಷನ್-೧೭) ಈ ಕಾಯ್ದೆಯ ಉಪಯುಕ್ತತೆಯಾಗಿದೆ.

ಅವರ ಎಲ್ಲಾ ಮಕ್ಕಳನ್ನು ಕಾಯುವ ಅಧಿಕಾರ ಸ್ಥಳೀಯ ಆಡಳಿತಕ್ಕೆ ದೊರೆಕಿತಲ್ಲದೆ ಆ ಮಕ್ಕಳ ವಾತಾವರಣ ಬದಲಿಸಿ ಅವರಿಗೆ ಶಿಕ್ಷಣ ಇತರೆ ತರಬೇತಿಯನ್ನು ನೀಡಲಾಗುತ್ತಿತ್ತು. ಈ ರೀತಿ ಮಾಡುವುದರಿಂದ ಆ ಮಕ್ಕಳು ವಿಧೇಯ ನಾಗರೀಕರಾಗಿ ಬೆಳೆಯುತ್ತಾರೆ ಎಂದು ಕಂಪನಿ ಸರ್ಕಾರವು ಭಾವಿಸಿದ್ದಿತು. ಈ ಕಾಯ್ದೆಯ ಸೆಕ್ಷನ್ ೨೦ರ ಅಡಿಯಲ್ಲಿ ಸ್ಥಳೀಯ ಸರ್ಕಾರವು ನಿಯಮಗಳನ್ನು

ರೂಪಿಸುವುದು ಮತ್ತು ಆ ನಿಯಮಗಳು ಯಾವ ಉದ್ದೇಶಕ್ಕಾಗಿ ರೂಪಿಸಲಾಗಿದೆಯೋ ಆ ಉದ್ದೇಶ ಈಡೇರಿಸಲು ಬಳಸುವುದಾಗಿತ್ತು. (ಮಲ್ಲಿಗಾಂಧಿ:೨೦೦೮:ಪು,೮) ಅಪರಾಧಿ ಬುಡಕಟ್ಟುಗಳಿಗೆ ನೋಟೀಸ್ ಕೊಡುವ ಮೂಲಕ ದಂಡಶುಲ್ಕವನ್ನು ವಿಧಿಸಿ ವಸೂಲು ಮಾಡಲಾಗುತ್ತಿತ್ತು.

೧೯೨೪ರ ಅಪರಾಧಿ ಬುಡಕಟ್ಟು ಕಾಯ್ದೆ

೧೯೧೯ರ ಅಪರಾಧಿ ಬುಡಕಟ್ಟು ಕಾಯ್ದೆಯನ್ನು ಪ್ರಶ್ನಿಸಿ ೧೯೨೪ರ ಕಾಯ್ದೆಯನ್ನು ಜಾರಿಗೆ ತರಲಾಯಿತು. ಅಪರಾಧಿ ಬುಡಕಟ್ಟುಗಳ ವಸಾಹತುಗಳನ್ನೊಳಗೊಂಡು, ಜೊತೆಗೆ ಭಾರತದ ಎಲ್ಲಾ ಬಂಧೀಖಾನೆ ಕಮಿಟಿಯನ್ನು ಇದು ಒಳಗೊಂಡಿದೆ. ಜೈಲ್ ಕಮಿಟಿಯು ಕೇವಲ ಇತರೆ ಸ್ವರೂಪದ ಜೈಲುಗಳಿಗೆ ಒತ್ತುಕೊಡುವುದಲ್ಲದೆ ವಸಾಹತುಗಳಿಗೂ (Settlements) ಒತ್ತು ನೀಡಿತು. ಅಪರಾಧಿ ಬುಡಕಟ್ಟು ವಸಾಹತು ಸ್ಥಳಗಳು ಅವರ ಆರ್ಥಿಕ ಅಭಿವೃದ್ಧಿಗೂ ಅವಕಾಶ ಕಲ್ಪಿಸುವಂತಿರಬೇಕೆಂದು ಯೋಚಿಸಿತು. ಅದು ಯಾವುದೇ ಸಂಭ್ರಮ, ಆರಾಧನೆ, ಧಾರ್ಮಿಕ ಪುರೋಹಿತಶಾಹಿಗೆ ಅವಕಾಶ ನೀಡದೆ ಕೇವಲ ವಸಾಹತುವಾಸಿ ಅಪರಾಧಿ ಬುಡಕಟ್ಟುಗಳ ಏಳಿಗೆಯನ್ನು ದೃಷ್ಟಿಯಲ್ಲಿರಿಸಿಕೊಂಡಿತು. ಅಪರಾಧಿ ಬುಡಕಟ್ಟು ವಸಾಹತುಗಳು ಕೇವಲ ಈ ಸಮುದಾಯಗಳಿಂದ ಸಮಾಜವನ್ನು ಕಾಯುವ ನಿಟ್ಟಿನಲ್ಲಿ ಸೀಮಿತವಾಗದೆ, ಸೆಟ್ಲಮೆಂಟಿನಲ್ಲಿರುವ ಜನರ ಕುರಿತು ಕಾಳಜಿಯನ್ನು ವ್ಯಕ್ತಪಡಿಸಿತು. ಈ ಸಮಿತಿಯು ಸೆಟ್ಲಮೆಂಟ್‌ಗಳ ಉದ್ದೇಶ ಈಡೇರಿಕೆಗೆ ಔದ್ಯಮಿಕ ಪ್ರದೇಶಗಳಲ್ಲಿ ವಸಾಹತುಗಳನ್ನು ನಿರ್ಮಿಸಲು ಶಿಫಾರಸ್ಸು ಮಾಡಿತು. ಈ ವಸಾಹತು ಜನ ಉದ್ದಿಮೆಗಳಲ್ಲಿ ಕೂಲಿ ಕಾರ್ಮಿಕರಾಗಿ ಕಾರ್ಯನಿರ್ವಹಿಸಲು ಸಾಧ್ಯವಾಯಿತು. ಸೆಟಲ್‌ಮೆಂಟ್ ವಾಸಿಗಳಿಗೆ ಕೃಷಿಯ ಕುರಿತು ತಿಳುವಳಿಕೆ ಕೊರತೆ ಇತ್ತು ಹಾಗೂ ಅವರಿಗೆಲ್ಲಾ ನೀಡುವಷ್ಟು ಭೂಮಿ ದೊರೆಯುವುದು ಅಸಂಭವವಾಗಿತ್ತು. ಇದರಿಂದಾಗಿ ಕೃಷಿಯನ್ನು ಕುರಿತು ಈ ಸಮಿತಿ ಶಿಫಾರಸ್ಸು ಮಾಡಲಿಲ್ಲ. ಹಾಗೆ ಈ ಸಮಿತಿಯು ಔದ್ಯಮಿಕ ವಸಾಹತುಗಳನ್ನು ತೆರೆಯಲೂ ಸಹ ಶಿಫಾರಸ್ಸು ಮಾಡಲಿಲ್ಲ. ಇದಕ್ಕೆ, ಅಪರಾಧಿ ಬುಡಕಟ್ಟು ಜನರು ತೃಪ್ತಿದಾಯಕವಾಗಿ ಉದ್ದಿಮೆಗಳಲ್ಲಿ ಕೆಲಸ ಮಾಡುವುದು ಅನುಮಾನದ ವಿಚಾರವೇ ಕಾರಣವಾಗಿತ್ತು. ಈ ಕಾರಣಕ್ಕಾಗಿಯೇ ಸಮಾಜಕ್ಕೆ ಉಪಯುಕ್ತ ಕೆಲಸಗಳನ್ನು ಇವರಿಂದ ಮಾಡಿಸಬಹುದು ಎಂಬ ಶಿಫಾರಸ್ಸನ್ನು ಈ ಸಮಿತಿ ಮಾಡಿತು. ಮೊದಲ ಬಾರಿಗೆ ಸರ್ಕಾರ ಅಪರಾಧಿ ಬುಡಕಟ್ಟುಗಳ ಸಮಸ್ಯೆಗಳನ್ನು ಪರಿಗಣಿಸಿ ಅವುಗಳ ಕುರಿತು ಹೆಚ್ಚಿನ ಒತ್ತನ್ನು ನೀಡಿತು ಹಾಗೂ ಆ ಸಮುದಾಯಗಳ ಆರ್ಥಿಕ ಅಭಿವೃದ್ಧಿಯತ್ತ ಗಮನ ಹರಿಸಿತು.

೧೯೨೮ರ ಅಪರಾಧಿ ಬುಡಕಟ್ಟು ಕಾಯ್ದೆ

೧೯೨೪ರ ಅಪರಾಧಿ ಬುಡಕಟ್ಟು ಕಾಯ್ದೆಯು ಮರಳಿ ತಿದ್ದುಪಡಿಗೊಂಡು ಭಾರತೀಯ ಬಂದೀಖಾನೆ (Jail) ವಿಚಾರಣಾ ಸಮಿತಿಗೆ ಶಿಫಾರಸ್ಸು ಮಾಡಿತು. ಇದು ೧೯೨೮ರ ಬ್ರಿಟೀಷ್ ಆಡಳಿತದ ಭಾರತದ ಎಲ್ಲಾ ಪ್ರದೇಶಕ್ಕೂ ಅನ್ವಯವಾಗುತ್ತಿತ್ತು. ೧೯೧೧ರ ಕಾಯ್ದೆಯು ಹಲವಾರು ನ್ಯೂನತೆಗಳಿಂದ ಕೂಡಿತ್ತು. ಅದು ಅಪರಾಧಿಗಳ ಪುನರ್ವಸತಿ ಮತ್ತು ಸುಧಾರಣೆಗಳ ಕುರಿತು ಪ್ರಯತ್ನಿಸಲಿಲ್ಲ. ಕೇವಲ ಅಪರಾಧಿ

ಪಾಲಕರಿಂದ ಮಕ್ಕಳನ್ನು ಬೇರ್ಪಡಿಸುವುದು ಮತ್ತು ಅಂತಹ ಮಕ್ಕಳಿಗೆ ಶಿಕ್ಷಣ ಒದಗಿಸುವುದಕ್ಕೆ ಸೀಮಿತವಾಗಿಬಿಟ್ಟಿತು. ಆಂತರಿಕವಾಗಿ ಪಾಲಕರು ಮತ್ತು ಮಕ್ಕಳ ಮಧ್ಯೆ ಹೊಸ ಸಮಸ್ಯೆಗಳು ಸೇರ್ಪಡೆಗೊಂಡವು. ಅಪರಾಧಿ ಭಾವನೆ ಅವರಲ್ಲಿ ಮುಂದುವರೆಯುವ ಸಾಧ್ಯತೆಗಳೇ ಹೆಚ್ಚಾಗಿದ್ದವು. ಮುಖ್ಯವಾಗಿ ಈ ಕಾಯ್ದೆಯು ಈ ಕೆಳಗಿನ ಕೆಲವು ಮಹತ್ವದ ಅಂಶಗಳನ್ನು ಒಳಗೊಂಡಿದೆ.

೧. ಅನುಸೂಚನೆ ೨. ನೋಂದಾವಣೆ ೩. ಬುಡಕಟ್ಟುಗಳ ವಲಸೆ, ಚಲನೆಗಳ ಮೇಲಿನ ನಿರ್ಬಂಧಗಳು ೪. ಅಪರಾಧಿ ಬುಡಕಟ್ಟುಗಳಿಗಾಗಿ ನಿರ್ಮಿಸಿದ ಶಾಲೆಗಳು ಮತ್ತು ವಸಾಹತುಗಳು ೫. ಶಿಕ್ಷೆ (ಅದೇ:ಪು.೯)

೧೯೨೪ರ ಕಾಯ್ದೆಯಲ್ಲಿದ್ದ ಸೌಲಭ್ಯಗಳು

೧. **ನೊಂದಣಿ:** ಪ್ರತಿಯೊಬ್ಬ ಸದಸ್ಯನನ್ನು ಅಪರಾಧಿಗಳು ಮತ್ತು ಕಾರ್ಯರೂಪಕ್ಕೆ ಬರಬಹುದಾದ ಅಪರಾಧಿಗಳು ಎಂದು ಹಣೆಪಟ್ಟಿಯನ್ನು ಹಚ್ಚಿ ವರ್ಗೀಕರಿಸಲಾಗುತ್ತಿತ್ತು. ಆ ಬುಡಕಟ್ಟುಗಳು ಯಾವ ಸ್ವರೂಪದವು ಎಂಬುದನ್ನು ಪೊಲೀಸ್ ಇಲಾಖೆ ಅಥವಾ ಗ್ರಾಮದ ಮುಖ್ಯಸ್ಥರಿಂದ ತಿಳಿದು ನಿರ್ಣಯಿಸಲಾಗುತ್ತಿತ್ತು. ಈ ರೀತಿ ವರ್ಗೀಕರಿಸುವ ಉದ್ದೇಶವು ಆ ಪಂಗಡಗಳನ್ನು ಯಾವ ಸ್ಥಳದಲ್ಲಿರಿಸಬೇಕೆಂಬ ಎಚ್ಚರಿಕೆ ವಹಿಸುವ ಉದ್ದೇಶವನ್ನು ಹೊಂದಿದೆ. ಹೊಸದಾಗಿ ಹುಟ್ಟಿದ ಪ್ರತಿಯೊಂದು ಮಗುವನ್ನು ದಾಖಲೆಗಳಲ್ಲಿ ನೊಂದಾಯಿಸಿಕೊಳ್ಳಲಾಗುತ್ತಿತ್ತು. ಶಿಕ್ಷೆಗೆ ಒಳಪಡಿಸುವಂತಹ ಅಪರಾಧಗಳನ್ನು ಇಂತಹ ನೊಂದಣಿಯಿಂದ ಸುಲಭವಾಗಿ ಪತ್ತೆಹಚ್ಚಬಹುದಾಗಿತ್ತು.

೨. **ನೊಂದಣಿಗೊಂಡ** ಪ್ರತಿಯೊಬ್ಬ ಅಪರಾಧಿ ಬುಡಕಟ್ಟಿನ ವ್ಯಕ್ತಿಯನ್ನು ಪೊಲೀಸರು ಅಥವಾ ಗ್ರಾಮಾಧಿಕಾರಿಗಳು ತಮ್ಮ ಕಣ್ಗಾವಲಿನಲ್ಲಿ ಹುಷಾರಾಗಿ ಕಾಯಬಹುದಾಗಿತ್ತು. ಆ ವ್ಯಕ್ತಿಗಳು ತಮ್ಮ ವಾಸಸ್ಥಾನವನ್ನು ಬಿಟ್ಟು ಹೊರತೆರಳಬೇಕಾದ ಸಂದರ್ಭ ಬಂದರೆ ತಾನು ಯಾವ ಉದ್ದೇಶಕ್ಕಾಗಿ ಹೊರಹೋಗಬೇಕಾಗಿದೆ. ಯಾವಾಗ ಮರಳಿ ಬರುತ್ತೇನೆ, ಇತ್ಯಾದಿ ಪ್ರತಿಯೊಂದು ವಿವರವನ್ನು ಹಾಗೂ ತನ್ನ ಹೆಸರು, ವಿಳಾಸ ಎಲ್ಲವನ್ನೂ ಬರೆದುಕೊಟ್ಟು ತೆರಳಬೇಕಾಗಿತ್ತು. ಒಟ್ಟಾರೆ ಆ ವ್ಯಕ್ತಿಯ ಹಿಂದಿನ ಚಾರಿತ್ರ್ಯವನ್ನು ಪರಿಗಣಿಸಿ ಆತನ ಕುರಿತು ಯಾವ ರೀತಿಯ ಕಾವಲು ವ್ಯವಸ್ಥೆ ರೂಪಿಸಬಹುದೆಂದು ನಿರ್ಣಯಿಸಲಾಗುತ್ತಿತ್ತು.

೩. **ಪ್ರತ್ಯೇಕಿಸಿಡುವಿಕೆ:** ಅಪರಾಧವನ್ನು ಭೇದಿಸಲು ಒಬ್ಬ ವ್ಯಕ್ತಿ ಅಥವಾ ಇಡೀ ಕುಟುಂಬವನ್ನು ಒಳಗು ಮಾಡಲು ನೊಂದಣಿ ಅಥವಾ ವರದಿಗಳು ಆಧಾರವಾಗಿ ಇರುತ್ತಿದ್ದವು. ಅವುಗಳು ಅವರನ್ನು ನಿಯಂತ್ರಿಸಲು ಮತ್ತು ಕಾಯಲು ಉಪಯುಕ್ತವಾಗುತ್ತಿತ್ತು. ತುಂಬಾ ಚಟುವಟಿಕೆಯ ಅಪರಾಧಿಗಳು ಮತ್ತು ಕುಟುಂಬಗಳನ್ನು ಪ್ರತ್ಯೇಕವಾಗಿ ವಿಶೇಷ ಸೆಟಲ್‌ಮೆಂಟ್‌ಗಳಲ್ಲಿ ಇರಿಸಬಹುದಾಗಿತ್ತು. ಈ ಸೆಟಲ್‌ಮೆಂಟ್‌ಗಳ ಮೇಲ್ವಿಚಾರಣೆ, (Mangament) ಕ್ರಿಶ್ಚಿಯನ್ ಮಿಷನರಿಗಳು ನೋಡಿಕೊಳ್ಳುತ್ತಿದ್ದವು. ಅವರಿಗೆ ನ್ಯಾಯಾಧೀಶನ ಮತ್ತು ಪೊಲೀಸರಿಗಿರುವ ಎಲ್ಲಾ ಅಧಿಕಾರಗಳನ್ನು ನೀಡಲಾಗಿತ್ತು. ಸ್ವಲ್ಪ ವ್ಯವಸಾಯ ಯೋಗ್ಯ ಭೂಮಿಯನ್ನು ವಸಾಹತುಗಳಲ್ಲಿ ನೆಲೆಸಿದವರಿಗೆ ನೀಡಿ ಅವರಿಂದ ಕೃಷಿ ಚಟುವಟಿಕೆ ಮಾಡಲು ಮತ್ತು ಅದರಿಂದ ಫಲ ತೆಗೆಸುವ ಪ್ರಯತ್ನ ಮಾಡಲಾಗುತ್ತಿತ್ತು.

ಮೇಲ್ವಿಚಾರಕರ ಅಥವಾ ಮ್ಯಾನೇಜಮೆಂಟ್‌ನ ವರದಿಯನ್ನು ಆಧರಿಸಿ ಅಂತಹ ವ್ಯಕ್ತಿ ಮತ್ತು ಕುಟುಂಬಗಳನ್ನು ದಿನಕ್ಕೆ ಮೂರು ಬಾರಿಯಂತೆ, ಅಂದರೆ ಬೆಳಿಗ್ಗೆ-ರಾತ್ರಿ-ಮಧ್ಯಾಹ್ನ ಅವರನ್ನು ಶೋಧಿಸುವುದು ಮತ್ತು ಅವರನ್ನು ನಿಯಂತ್ರಿಣದಲ್ಲಿಡುವ ಕಾರ್ಯ ನಡೆಯುತ್ತಿತ್ತು. ಕೆಲವು ವಸಾಹತುಗಳ ಗಡಿಗೆ ಮುಳ್ಳುತಂತಿ ಬೇಲಿಯನ್ನು ನಿರ್ಮಿಸಲಾಗಿತ್ತು. ಆಂಧ್ರಪ್ರದೇಶದಲ್ಲಿ ೧೯೦೬ರಿಂದ ೧೯೧೦ರೊಳಗೆ ಇಂತಹ ಐದು ಸೆಟ್ಲಮೆಂಟ್‌ಗಳನ್ನು ನಿರ್ಮಿಸಲಾಗಿತ್ತು. ಅದೇ ರೀತಿಯಾಗಿ ಕರ್ನಾಟಕದಲ್ಲಿ ಸುಮಾರು ಹತ್ತಕ್ಕಿಂತ ಹೆಚ್ಚು ಸೆಟ್ಲಮೆಂಟ್‌ಗಳನ್ನು ನಿರ್ಮಿಸಿರುವುದನ್ನು ಕಾಣಬಹುದು. ಹುಬ್ಬಳ್ಳಿ, ಗದಗ, ಬಳ್ಳಾರಿ, ಬಾಗಲಕೋಟ, ಖಾನಾಪುರ, ಬಿಜಾಪುರ, ಬೆಳಗಾಂ, ದಾಂಡೇಲಿ, ಕಮ್ಮಾರ ಗಣಿ, ಗೋಕಾಕ್ ಫಾಲ್ಸ್ ಇತ್ಯಾದಿಗಳಲ್ಲಿ ಇಂತಹ ಸೆಟ್ಲಮೆಂಟ್‌ಗಳನ್ನು ಕಾಣಬಹುದು. ಇತ್ತೀಚೆಗೆ ಕೆಲವು ಕಡೆ ಸೆಟ್ಲಮೆಂಟ್‌ಗಳು ನಾಮಾವಶೇಷಗೊಂಡಿವೆ. ಇನ್ನೂ ಕೆಲವು ಕಡೆ ಈ ಸೆಟಲ್‌ಮೆಂಟ್‌ಗಳ ಅಸ್ತಿತ್ವವನ್ನು ಕಾಣಬಹುದಾಗಿದೆ.

ಕಾಯ್ದೆಯ ಸೆಕ್ಷನ್ ೩ರಂತೆ ಸ್ಥಳೀಯ ಸರ್ಕಾರವು ಯಾವುದೆ ವರ್ಗ, ಬುಡಕಟ್ಟು ಅಥವಾ ವ್ಯಕ್ತಿಯನ್ನು ಅವರು ಜಾಮೀನುರಹಿತ ಅಪರಾಧಗಳಲ್ಲಿ ತೊಡಗಿದ್ದಾರೆ ಎಂಬ ನಂಬಿಕೆಗೆ ಅರ್ಹವಾದ ವಿಚಾರಗಳು ತಿಳಿದುಬಂದರೆ ಅಂತಹ ಸಮಯದಲ್ಲಿ ಅವರನ್ನು ಅಪರಾಧಿ ಬುಡಕಟ್ಟೆಂದು ಘೋಷಿಸಬಹುದಾಗಿತ್ತು. ಸೆಕ್ಷೆನ್ ೪ ಮತ್ತು ೫ರಂತೆ ಜಿಲ್ಲಾ ಮ್ಯಾಜಿಸ್ಟ್ರೇಟ್‌ರು ತಮ್ಮ ನ್ಯಾಯಾಧಿಕರಣದೊಳಗೆ ಅಪರಾಧಿ ಬುಡಕಟ್ಟುಗಳ ಪ್ರತಿಯೊಬ್ಬ ವ್ಯಕ್ತಿಯನ್ನು ಕುರಿತು ನಿರಂತರವಾಗಿ ನೊಂದಣಿ ಮಾಡಿಕೊಳ್ಳಬೇಕಾಗಿತ್ತು ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟರು ಬುಡಕಟ್ಟನ್ನು ಸಂಪರ್ಕಿಸಿ ಅವರಿಂದ ವಿಚಾರಿಸಿ ಅವರ ಕುರಿತು ವಿವರಗಳನ್ನು ಪಡೆಯಬೇಕಾಗಿತ್ತು. ಕಾಯ್ದೆಯ ಸೆಕ್ಷನ್ ೧೬ರ ಪ್ರಕಾರ ಉದ್ದಿಮೆಗಳು, ಕಾರ್ಖಾನೆಗಳು, ಕೃಷಿ, ಸೆಟಲ್‌ಮೆಂಟ್ ಮಕ್ಕಳಿಗಾಗಿ ಪುನರ್ವಸತಿ ಶಾಲೆ ಇತ್ಯಾದಿಗಳನ್ನು ಸ್ಥಾಪಿಸಬಹುದಾಗಿತ್ತು. ಸ್ಥಳೀಯ ಸರ್ಕಾರವು ಬುಡಕಟ್ಟುಗಳ ಸೆಟಲ್‌ಮೆಂಟ್‌ಗೆ ಯಾವುದೇ ಸ್ಥಳವನ್ನು ನಿಗದಿಗೊಳಿಸಬಹುದಾಗಿತ್ತು. ಅಪರಾಧಿ ಬುಡಕಟ್ಟು ಕಾಯ್ದೆಯ ಸೆಕ್ಷನ್ ೨೩ರ ಪ್ರಕಾರ ಆ ವರ್ಗದ ಅಪರಾಧವನ್ನು ಹೊತ್ತು, ದಂಡನೆ ಅನುಭವಿಸುತ್ತಿರುವ ಯಾವುದೇ ವ್ಯಕ್ತಿಯನ್ನು ಐ.ಪಿ.ಸಿ. (ಇಂಡಿಯನ್ ಪೀನಲ್ ಕೋಡ್) ಪ್ರಕಾರ ಮರಳಿ ಎರಡನೇ ಭಾರಿಯು ಅಪರಾಧವನ್ನು ಮಾಡಿದಲ್ಲಿ ಅಂತಹ ವ್ಯಕ್ತಿಗೆ ಕನಿಷ್ಟ ಏಳುವರ್ಷ ಶಿಕ್ಷೆ ವಿಧಿಸಲಾಗುತ್ತಿತ್ತು ಮತ್ತು ಮೂರನೆ ಭಾರಿ ಅಪರಾಧವೆಸಗಿದರೆ ಮರಣ ದಂಡನೆ ಶಿಕ್ಷೆಗೆ ಗುರಿಪಡಿಸಲಾಗುತ್ತಿತ್ತು. ಪೊಲೀಸ್ ಮತ್ತು ಗ್ರಾಮಾಧಿಕಾರಿಯ ವರದಿಯ ಮೇರೆಗೆ ಅವರಿಗೆ ಕೂಲಿ ಕಾರ್ಮಿಕರಾಗಿ ಕಾರ್ಯನಿರ್ವಹಿಸುವ ಪಾಸ್‌ಗಳನ್ನು ನೀಡಲಾಗುತ್ತಿತ್ತು.

೧೯೪೪ರ ಮದ್ರಾಸ್‌ನ ನಿರ್ಬಂಧಿತ ರೂಢಿಗತ ಅಪರಾಧಿಗಳ ಕಾಯ್ದೆ

೧೯೪೭ರ ಪ್ರಕಾರ, ಅಪರಾಧಿ ಬುಡಕಟ್ಟು ಕಾಯ್ದೆಯ ಅಡಿಯಲ್ಲಿ ಸೆಕ್ಷನ್ ೨೩ರ ಪ್ರಕಾರ ಎರಡನೆ ಬಾರಿ ಅಪರಾಧವೆಸಗಿದವನಿಗೆ ಕನಿಷ್ಟ ಏಳು ವರ್ಷ ಶಿಕ್ಷೆ ವಿಧಿಸಿಲಾಗುತ್ತಿತ್ತು ಮತ್ತು ಮೂರನೆ ಭಾರಿ ಅಪರಾಧವೆಸಗಿದರೆ ಮರಣ ದಂಡನೆಗೆ ಗುರಿಪಡಿಸಲಾಗುತ್ತಿತ್ತು. ಈ ಸಜೆಯನ್ನು ಮರುವಿನ್ಯಾಸಗೊಳಿಸಿ ಅದನ್ನು ಏಳು ವರ್ಷದ ಸಜೆಗೆ ಬದಲಿಸಲಾಯಿತು. ಅದೂ ನ್ಯಾಯಾಲಯವು ಅಪರಾಧಿ ಬುಡಕಟ್ಟುಗಳು

ಆ ಅಪರಾಧವನ್ನು ಮಾಡಿವೆ ಎಂದು ನಿರ್ಣಯಿಸಿದಲ್ಲಿ ಆ ರೀತಿಯ ಶಿಕ್ಷೆಗೆ ಗುರಿಪಡಿಸಬಹುದಾಗಿತ್ತು. ಇದು ಜಾರಿಗೆ ಬಂದದ್ದು ೨೯ ಏಪ್ರಿಲ್ ೧೯೪೮ರಲ್ಲಿ. ಈ ಕಾಯ್ದೆಯ ಗುರಿ ಅಪರಾಧಗಳನ್ನು ನಿಯಂತ್ರಿಸುವುದು ಮತ್ತು ಅಪರಾಧವನ್ನೇ ವೃತ್ತಿಯಾಗಿಸಿಕೊಳ್ಳುವುದನ್ನು ತಪ್ಪಿಸುವುದಾಗಿತ್ತು. ಈ ಕಾಯ್ದೆ ಜಾರಿಗೊಂಡ ತರುವಾಯ ಪೋರ್ಟ್‌ಸೈಂಟ್ ಜಾರ್ಜ್ ಗೆಜೆಟ್ ದಿನಾಂಕ ೨೨ ನವೆಂಬರ್ ೧೯೪೯ರಲ್ಲಿ ಪ್ರಕಟಗೊಳಿಸಲಾಯಿತು. ಈ ಕಾಯ್ದೆ ಅರ್ಜಿಯು ಕೇವಲ ಸೀಮಿತ ವಲಯಕ್ಕೆ ಸಂಬಂಧಿಸಿದುದು. ಇದು ಕೇವಲ ಅಪರಾಧಿಗಳಿಗೆ ಮಾತ್ರ ಸೀಮಿತವಾಗಿದೆ. ತೀವ್ರತರವಾದ ಅಪರಾಧಗಳನ್ನು ಮಾಡುವವರಿಗೆ ಮತ್ತು ಅಪರಾಧಿ ಮನೋಭಾವದ ವ್ಯಕ್ತಿಗಳನ್ನು ಮಾತ್ರ ಸೆಟಲ್‌ಮೆಂಟ್‌ನೊಳಗೆ ಇರಿಸಬಹುದೆಂದು ಈ ಕಾಯ್ದೆ ತಿಳಿಸುತ್ತದೆ. ಭಾರತ ಸರ್ಕಾರ ಪ್ರಕಟಿಸಿದ ಅಖಿಲಭಾರತ ರೂಢಿಗತ ಅಪರಾಧಿಗಳ ಬಿಲ್ ಅಪರಾಧವನ್ನು ತಡೆಗಟ್ಟುವಲ್ಲಿ ಈ ಕಾಯ್ದೆ ತುಂಬಾ ಪರಿಣಾಮಕಾರಿಯಾಯಿತು.(ಅದೇ:ಪು.೧೧-೧೨)

ಎನ್.ಜಿ. ರಂಗ ಅವರು. ಮದ್ರಾಸ್ ಪ್ರೆಸಿಡೆನ್ಸಿಯ ಅಪರಾಧಿ ಬುಡಕಟ್ಟು ಕಾಯ್ದೆಗಳನ್ನು ಹಿಂದಿನಂತೆ ಅನುಸರಿಸುವುದರ ಕುರಿತು ತೀವ್ರವಾಗಿ ವಿರೋಧಿಸಿ ಹೋರಾಟ ಮಾಡಿದರು. ಅವರ ಹೇಳಿಕೆ ಪ್ರಕಾರ "ಅಪರಾಧಿ ಬುಡಕಟ್ಟು ಕಾಯ್ದೆಯು ಆ ದಿನಗಳಲ್ಲಿ ರಾಜಕೀಯ ಕಾರ್ಯಕರ್ತರನ್ನು ದಮನ ಮಾಡಲು ಉಪಯೋಗಿಸಲಾಗುತ್ತಿತ್ತಂತೆ" (ಅದೇ: ೩೬) ಕೇಂದ್ರ ಸಚಿವ ಸಂಪುಟದಲ್ಲಿ (Central legislative Assembly) ಈ ವಿಚಾರವಾಗಿ ಎರಡು ಬಿಲ್‌ಗಳನ್ನು ಪಾಸು ಮಾಡಲಾಯಿತು. ಅಪರಾಧಿ ಬುಡಕಟ್ಟುಗಳಿಗೆ ಸಂಬಂಧಿಸಿದಂತೆ ಮೊದಲನೇ ಬಿಲ್ಲನ್ನು ಎಂ.ಎಲ್.ಎ. ವೆಂಕಟಸುಬ್ಬ ರೆಡ್ಡಿಯಾರ್ ಅವರ ಕೊಡುಗೆಯಾಗಿದೆ. ಎರಡನೇ ಬಿಲ್ಲಿನ ಕೊಡುಗೆ ಎನ್.ಜಿ. ರಂಗಾ ಅವರದು. ಅವರು ಸೆಕ್ಷನ್ ೧೦, ೧೧, ೧೨, ೧೩, ೧೬, ೧೮, ೧೯ ಮತ್ತು ೨೦ನ್ನು ಹಿಮ್ಮೆಟ್ಟಿಸುವ ಕಾಯ್ದೆಯನ್ನು ಕುರಿತು ಪ್ರಸ್ತಾಪಿಸಿದರು.

೧೯೫೨ರ ಅಪರಾಧಿ ಬುಡಕಟ್ಟು ಕಾನೂನು ರದ್ದುಪಡಿಸುವ ಕಾಯ್ದೆ, (೧೯೫೨ರ ಸಂ. xxiv)

ಇದನ್ನು ೧೯೫೨ರ ಅಪರಾಧಿ ಬುಡಕಟ್ಟು ಕಾನೂನು ಕಾಯ್ದೆ ಎಂದು ಕರೆಯುತ್ತಾರೆ. ಜಮ್ಮು ಮತ್ತು ಕಾಶ್ಮೀರಗಳನ್ನು ಹೊರತುಪಡಿಸಿ ಇಡೀ ಭಾರತಕ್ಕೆ ಈ ಕಾಯ್ದೆ ಅನ್ವಯಗೊಳ್ಳುತ್ತದೆ. ಅಪರಾಧಿ ಬುಡಕಟ್ಟು ಕಾಯ್ದೆ ಮತ್ತು ಇತರ ಕಾನೂನುಗಳಿಗೆ ಸಂಬಂಧಿಸಿದಂತೆ ೩೧ ಆಗಸ್ಟ್ ೧೯೫೨ರಲ್ಲಿ ರದ್ದುಗೊಳಿಸಲಾಯಿತು. ಹೇಗೆಂದರೆ ಕೇಂದ್ರ ಸರ್ಕಾರವು ಅಫಿಷಿಯಲ್ ಗೆಜೆಟ್‌ನಲ್ಲಿ ಅಧಿಸೂಚನೆ ಹೊರಡಿಸಿ ಎಲ್ಲಾ ರಾಜ್ಯಗಳಲ್ಲಿ ಅಪರಾಧಿ ಬುಡಕಟ್ಟು ಕಾಯ್ದೆಗಳನ್ನು ರದ್ದುಗೊಳಿಸಿರುವುದಾಗಿ ತಿಳಿಸಿತು(ನೋಡಿ:ಗೃಹ ಖಾತೆ, ಮದ್ರಾಸ್ ಸರ್ಕಾರ: ಆದೇಶ ಸಂ-೨೯೦೦:೧೯೫೨). ಕೆಲವು ರಾಜ್ಯಗಳಲ್ಲಿ ಇದಕ್ಕೆ ಸಂಬಂಧಿಸಿದ ಕಾಯ್ದೆ ಕಾನೂನುಗಳು ೧೯೫೫ರ ರಲ್ಲಿಯೂ ಇದ್ದು, ಇನ್ನು ಕೆಲವು ಪ್ರದೇಶಗಳಲ್ಲಿ ಈ ಕಾಯ್ದೆಗಳು ೧೯೬೫ರ ವರೆಗೂ ಮುಂದುವರೆದವು. ಆಂಧ್ರ ಪ್ರದೇಶದಲ್ಲಿ ರೂಢಿಗತ ಅಪರಾಧಿ ಕಾಯ್ದೆ ೧೯೬೨ರವರೆಗೆ ಇದ್ದಿತು.

ಒಟ್ಟಾರೆಯಾಗಿ ಅಪರಾಧಿ ಬುಡಕಟ್ಟು ಕಾಯ್ದೆಗಳನ್ನು ಅವಲೋಕಿಸಲಾಗಿ ೧೮೭೧ರಲ್ಲಿ ಮೊದಲಿಗೆ ಶಿಸ್ತುಬದ್ಧವಾಗಿ ಕೆಲವು ಬುಡಕಟ್ಟು ಜನರನ್ನು ಅಪರಾಧಿ ಬುಡಕಟ್ಟುಗಳೆಂದು ಗುರುತಿಸಿ ಅವರನ್ನು

ಒಂದು ಕಡೆ ಸೇರಿಸುವ ಪ್ರಯತ್ನ ಮಾಡಲಾಯಿತು. ೧೮೭೧ರ ಕಾಯ್ದೆಯ ತರುವಾಯ ೧೯೧೧ರಲ್ಲಿ ಅಪರಾಧಿ ಬುಡಕಟ್ಟುಗಳಿಗಾಗಿಯೇ ಮತ್ತೊಂದು ಕಾಯ್ದೆಯನ್ನು ಜಾರಿಗೊಳಿಸಿತು. ಈ ಕಾಯ್ದೆಯು ೧೮೭೧ರ ಕಾಯ್ದೆಗಿಂತ ಹೆಚ್ಚು ಉಪಯುಕ್ತವಾಗುವ ರೀತಿಯ ಪೂರಕ ಕಾಯ್ದೆಯಾಗಿ ರೂಪುಗೊಂಡಿತು. ೧೯೨೪ರ ಕಾಯ್ದೆಯ ಅಧಿಸೂಚನೆಯಿಂದ ೧೯೪೭ರವರೆಗಿನ ಕಾಯ್ದೆಗಳು ಅಪರಾಧಿ ಬುಡಕಟ್ಟುಗಳಿಗೆ ಸಂಬಂಧಿಸಿದಂತೆ ವಿಸ್ತರಿಸುತ್ತಲೇ ಹೋಯಿತು. ಸರ್ಕಾರವು ಈ ಕಾಯ್ದೆಯನ್ನು ರದ್ದುಗೊಳಿಸುವ ಮನೋಭಾವನೆ ತಳೆದಾಗ ಸಮಾಜಕ್ಕೆ ಅಂತಹ ಜನರಿಂದ ಯಾವ ರೀತಿಯ ಅಪಾಯಗಳು ಉಂಟಗಬಹುದೆಂದು ಅಲೋಚಿಸಿ ಅಪರಾಧಿ ಬುಡಕಟ್ಟುಗಳನ್ನು ಸನ್ಮಾರ್ಗಕ್ಕೆ ತರುವ ನಿಟ್ಟಿನಲ್ಲಿ ಆಲೋಚಿಸಿ ಕಾಯ್ದೆಗಳನ್ನು ತಿದ್ದುಪಡಿ ಮಾಡಿತು.

ಮದ್ರಾಸ್ ಪ್ರೆಸಿಡೆನ್ಸಿಯ ಹಲವಾರು ಜಿಲ್ಲಾ ಮೆಜಿಸ್ಟ್ರೇಟರು ಮತ್ತು ಪೊಲೀಸ್ ಸೂಪರಿಂಟ್‌ಡೆಂಟರವರು ಅಪರಾಧಿ ಬುಡಕಟ್ಟು ಕಾಯ್ದೆಯನ್ನು ಹಿಂದಕ್ಕೆ ತೆಗೆಯುವ ಕಡೆಗೆ ಮನಸ್ಸು ಕೊಡಲಿಲ್ಲ. ಆದರೆ ಕೆಲವರು ಕರುಣೆಯಿರುವ ಜಿಲ್ಲಾ ಮೆಜಿಸ್ಟ್ರೇಟರು ಮತ್ತು ಪೊಲೀಸ್ ಸೂಪರಿಂಟೆಡೆಂಟರವರು ಅಪರಾಧಿ ಬುಡಕಟ್ಟು ಕಾಯ್ದೆಗಳ ಅಮಾನುಷತೆಯನ್ನು ತೊಲಗಿಸಲು ಪ್ರಯತ್ನಿಸಿದರು. ಇವರೊಂದಿಗೆ ಕೆಲವು ಸಾಮಾಜಿಕ ಸಂಘ-ಸಂಸ್ಥೆಗಳು, ಸಾಮಾಜಿಕ ಕಾರ್ಯಕರ್ತರು, ಥಕ್ಕಾರ್‌ರವರ ನಾಯಕತ್ವದಲ್ಲಿ ವಿ. ರಾಘವಯ್ಯ ಹಾಗೂ ಇತರ ಸಮುದಾಯಗಳ ಸದಸ್ಯರುಗಳು ಈ ಕಾಯ್ದೆಗಳನ್ನು ವ್ಯವಸ್ಥೆಯಿಂದ ಹೊರ ಹಾಕಬೇಕೆಂದು ಹಾಗೂ ಅಪರಾಧಿ ಬುಡಕಟ್ಟುಗಳಿಗೆ ವಿಧಿಸಿದ ಎಲ್ಲಾ ಸೆಟಲ್‌ಮೆಂಟ್‌ಗಳನ್ನು ರದ್ದುಗೊಳಿಸಬೇಕೆಂದು ಸರ್ಕಾರದ ಮೇಲೆ ಒತ್ತಡಗಳನ್ನು ತಂದರು.

ಆದರೆ ಜಿಲ್ಲಾ ಮ್ಯಾಜಿಸ್ಟ್ರೇಟರು ಮತ್ತು ಸೂಪರಿಂಟೆಡೆಂಟ ಆಫ್ ಪೊಲೀಸರು ಸರಕಾರ ಹೊರಡಿಸಿದ ಈ ಕಾಯ್ದೆಗಳ ಪರವಾದ ನಿಲುವನ್ನು ತಳೆದವರಾಗಿದ್ದರು. ಅವರು ತಮ್ಮ ನಿಲುವಿಗೆ ಕೊಟ್ಟಕಾರಣಗಳೆಂದರೆ ಬುಡಕಟ್ಟುಗಳ ಜನತೆ ಅಪರಾಧ ಮಾಡುವುದನ್ನು ಅಭ್ಯಾಸ ಮಾಡಿಕೊಂಡು ಬಿಟ್ಟಿದ್ದಾರೆ ಎಂಬ ವಾದಕ್ಕೆ ಜೋತುಬಿದ್ದವರಾಗಿದ್ದರು.

೧೩೬ ವರ್ಷಗಳ ಹಿಂದೆ ೧೮೭೧ರಲ್ಲಿ ಮೊದಲ ಬಾರಿಗೆ ಅಪರಾಧಿ ಬುಡಕಟ್ಟು ಕಾಯ್ದೆಯನ್ನು ಜಾರಿಗೆ ತರಲಾಯಿತು. ನಾಗರೀಕರಿಗೆ ಇಂತಹ ಅಪರಾಧಿ ಬುಡಕಟ್ಟುಗಳಿಂದ ತೊಂದರೆಯುಂಟಾಗುತ್ತದೆ ಎಂಬ ವಾದವನ್ನು ಮುಂದಿರಿಸಿಕೊಂಡು ಈ ಕಾಯ್ದೆ ಜಾರಿಗೆ ಬಂದಿತು. ಈ ಕಾಯ್ದೆಯಿಂದಾಗಿ ಅಪರಾಧಿ ಮತ್ತು ಅಪರಾಧಿಯಲ್ಲದ ಪಂಗಡಗಳೆಂದು ವಿಭಾಗಿಸಿ ಅವುಗಳ ಸಾಮಾಜಿಕ ಸಂಬಂಧಗಳನ್ನು ಪ್ರತ್ಯೇಕಿಸುವ ಉದ್ದೇಶವನ್ನು ಒಳಗೊಂಡಿತ್ತು. ಈ ಕಾಯ್ದೆಯ ಅಡಿಯಲ್ಲಿ ಸಾಮಾಜಿಕ ಗುಂಪುಗಳನ್ನು ಮತ್ತು ಸ್ವತಂತ್ರ ಹೋರಾಟಗಾರರನ್ನು, ಸಾಮಾಜಿಕ ಕಾರ್ಯಕರ್ತರನ್ನು ಹತ್ತಿಕ್ಕುವ ಹುನ್ನಾರವನ್ನು ಈ ಕಾಯ್ದೆ ಮೂಲಕ ಮಾಡಲಾಯಿತು. ಅಪರಾಧಿ ಬುಡಕಟ್ಟು ಕಾಯ್ದೆಗಳಿಂದ ಮದ್ರಾಸ್ ಪ್ರೆಸಿಡೆನ್ಸಿಯ ಬುಡಕಟ್ಟುಗಳಿಗಾಗಲೀ ಇತರ ಜನರಿಗಾಗಲೀ ಯಾವುದೆ ಲಾಭವೂ ಉಂಟಾಗಲಿಲ್ಲ. ಎಷ್ಟೋ ಕುಟುಂಬಗಳು ಈ ಕಾಯ್ದೆಯಿಂದಾಗಿ ಏನೂ ತಪ್ಪು ಮಾಡದಿದ್ದರೂ ಅಪರಾಧಿಗಳೆಂಬ ಕಳಂಕವನ್ನು ಹೊತ್ತು

ಕೊಳ್ಳಬೇಕಾಯಿತು. ಹಾಗೆ ಇಂತಹ ಕಳಂಕದಿಂದಾಗಿ ಯುವ ಜನತೆಯ ಮನಸ್ಸಿನ ಮೇಲೆ ತುಂಬಾ ಕೆಟ್ಟ ಪರಿಣಾಮಬೀರಿತು. ಇದರಿಂದಾಗಿ ಆ ಯುವಕರು ಸಮಾಜಕ್ಕೆ ವಿಮುಖವಾಗಿ ಅದರ ವಿರುದ್ಧದ ಕಾರ್ಯವನ್ನು (ಈ ಕಾಯ್ದೆಗಳ ಪರಿಣಾಮವಾಗಿ) ಮಾಡುವಂತಾದರು ಮತ್ತು ಸಮಾಜದ ಕುರಿತು ತುಂಬಾ ಹೀನ ದೃಷ್ಟಿಕೋನವನ್ನು ಆ ಜನತೆ ಬೆಳೆಸಿಕೊಳ್ಳುವಂತಾಯಿತು. ಅಪರಾಧಿಗಳು ಎಂಬ ಕಳಂಕ ಅವರಿಗೆ ಅಂಟಿಕೊಂಡಿದ್ದರಿಂದ ಅವರು ತಪ್ಪು ಮಾಡದೇ ಅವಮಾನಗಳಿಗೆ ಒಳಗಾಗಬೇಕಾಯಿತು ಮತ್ತು ಅದರಿಂದ ಅವರು ಕೀಳರಿಮೆ ಮನೋಭಾವನೆ ಬೆಳೆಸಿಕೊಳ್ಳುವಂತಾಯಿತು. ಈ ರೀತಿಯ ಅವಮಾನ ಮತ್ತು ಕೀಳರಿಮೆಗಳಿಂದಾಗಿ ಅವರು ಸಮಾಜದ ಇತರ ಜಾತಿ-ಸಮುದಾಯಗಳೊಂದಿಗೆ ಬೆರೆತು ಬಾಳುವ ವಾತಾವರಣವೇ ಇಲ್ಲದಂತಾಯಿತು. ಈ ಸಮುದಾಯಗಳಿಗೆ ಅಪರಾಧಿ ಎಂಬ ಹಣೆಪಟ್ಟಿ ದೊರೆತ ತರುವಾಯ ಇವರ ಹಿರಿಯರು ಅನುಸರಿಸುತ್ತಿದ್ದ ಮೂಲ ವೃತ್ತಿಯಿಂದಲೂ ಈ ಸಮುದಾಯಗಳು ದೂರ ಸರಿಯಬೇಕಾಯಿತು.

ಭಾರತ ಬ್ರಿಟೀಷರ ಆಳ್ವಿಕೆಯಿಂದ ಬಿಡುಗಡೆಗೊಂಡು ಸ್ವತಂತ್ರವಾದ ತರುವಾಯ ಅಪರಾಧಿ ಬುಡಕಟ್ಟು ಕಾಯ್ದೆಗಳನ್ನು ರದ್ದುಗೊಳಿಸಲಾಯಿತು ಮತ್ತು ಅವರು ಹುಟ್ಟಿನಿಂದಲೇ ಅಪರಾಧಿಗಳು, ಪಾರಂಪರಿಕವಾಗಿ ಅಪರಾಧಗಳಲ್ಲಿ ತೊಡಗಿದವರು ಎಂದು ಕಂಪನಿ ಗುರುತಿಸಿದುದರಿಂದ ಅದೇ ಮನೋಭಾವನೆ ಮುಂದೆಯೂ ಬೆಳೆಯಿತು. ಭಾರತ ಸ್ವಾತಂತ್ರ್ಯವಾದ ತರುವಾಯ ಕಾನೂನು ಪರಿಸರ, ಪರಿಸ್ಥಿತಿಗಳೂ ಸಹ ಬದಲಾವಣೆಗೊಂಡವು. ಅಪರಾಧಿ ಬುಡಕಟ್ಟುಗಳನ್ನು ಕೂಡಿ ಹಾಕುತ್ತಿದ್ದ ವಸಾಹತುಗಳ ಸ್ಥಿತಿಯೂ ಸುಧಾರಣೆಗೆ ಒಳಗಾಯಿತು. ಆದರೆ ದುರಾದೃಷ್ಟವೆಂದರೆ ಸ್ವಾತಂತ್ರ್ಯ ಪೂರ್ವದಲ್ಲಿ ಇಡೀ ಬುಡಕಟ್ಟು ಸಮುದಾಯವನ್ನೇ ಅಪರಾಧಿ ಎಂದು ಕರೆಯಲಾಗಿತ್ತು.

೧೮೭೧ರಲ್ಲಿ ವ್ಯವಸ್ಥಿತವಾಗಿ ಅಪರಾಧಿ ಬುಡಕಟ್ಟು ಕಾಯ್ದೆ ಜಾರಿಗೆ ತರಲಾಯಿತು. ಆ ತರುವಾಯ ಈ ಕಾಯ್ದೆಯು ಕಾಲಕ್ರಮದಲ್ಲಿ ಹಲವಾರು ತಿದ್ದುಪಡಿಗಳಿಗೆ ಗುರಿಯಾಯಿತು ಮತ್ತು ಹೊಸ ಕಾಯ್ದೆಗಳು ಜಾರಿಗೆ ಬಂದವು. ಹುಟ್ಟಿನಿಂದಲೇ ಅಪರಾಧಿಗಳೆಂದು ಕಂಪನಿ ಸರ್ಕಾರ ಆ ಬುಡಕಟ್ಟುಗಳನ್ನು ಗುರುತಿಸಿದುದರಿಂದಾಗಿ ಅವುಗಳಿಗೆ ಸ್ವತಂತ್ರ ಭಾರತದಲ್ಲಿಯೂ ಅಷ್ಟು ಸುಲಭವಾಗಿ ಬಿಡುಗಡೆ ದೊರೆಯದೆ ಹೋಯಿತು. ಉದಾಹರಣೆಗೆ ನೋಡಬಹುದಾದರೆ ಸ್ವಾತಂತ್ರ್ಯ ಭಾರತದ ಪೊಲೀಸರಿಗೆ ತರಬೇತಿ ನೀಡುವಾಗ ಪೊಲೀಸರಿಗಾಗಿ ರಚಿಸಿದ ಪಠ್ಯಕ್ರಮದಲ್ಲಿ ಅಪರಾಧಿ ಬುಡಕಟ್ಟುಗಳನ್ನು ಯಾವ ಬಗೆಯಲ್ಲಿ ಗುರುತಿಸಬೇಕು ಮತ್ತು ಅವರನ್ನು ನಿಯಂತ್ರಿಸಲು ಯಾವ ಕ್ರಮಗಳನ್ನು ಅನುಸರಿಸಬೇಕು ಎಂಬ ವಿಷಯಗಳನ್ನು ಪಾಠಗಳಾಗಿ ಸೇರಿಸಲಾಯಿತು. ೧೯೫೨ರಲ್ಲಿ ನೆಹರೂ ಸರ್ಕಾರ ಅಪರಾಧಿ ಬುಡಕಟ್ಟು ಕಾಯ್ದೆಯನ್ನು ರದ್ದುಗೊಳಿಸಿತು ಮತ್ತು ಸ್ವತಃ ನೆಹರೂ ಅವರೇ ಅಪರಾಧಿ ಬುಡಕಟ್ಟುಗಳನ್ನು ಇರಿಸುವ ವಸಾಹತುವೊಂದರ ಮುಳ್ಳುತಂತಿಯನ್ನು ಸಾಂಕೇತಿಕವಾಗಿ ಕತ್ತರಿಸಿ ಅವರನ್ನು ಸ್ವಾತಂತ್ರ್ಯ ಭಾರತದಲ್ಲಿ ಬಂಧ ಮುಕ್ತರು ಎಂದು ಘೋಷಿಸಿದರೂ, ಪೊಲೀಸ್ ಇಲಾಖೆ ಇವರನ್ನು ಬ್ರಿಟೀಷರ ದೃಷ್ಟಿಕೋನದಲ್ಲಿಯೇ ನೋಡುವುದನ್ನು ಮುಂದುವರೆಸಿದರು ಸ್ವತಂತ್ರ ಭಾರತ ಸರ್ಕಾರವು ಅವರನ್ನು "ರೂಢಿಗತ ಪಾರಂಪರಿಕ

ಅಪರಾಧಿ ಕಾಯ್ದೆ" (Habitual offaida Act) ಅಡಿಯಲ್ಲಿ ಗುರುತಿಸಬೇಕೆಂದು ಪೊಲೀಸರಿಗೆ ಬೋಧಿಸಲಾಗುತ್ತಿತ್ತು. ಈ ಕಾಯ್ದೆಯು ವ್ಯಕ್ತಿ ಅಥವಾ ಸಮುದಾಯವೊಂದನ್ನು ಅಪರಾಧಿ ಎಂದು ಗುರುತಿಸಲೆಂದೇ ರೂಪುಗೊಂಡಿತೆಂಬಂತೆ ತೋರುವುದಾದರೂ, ಬ್ರಿಟೀಷ್ ನಂತರದ ಸ್ವತಂತ್ರ ಭಾರತದಲ್ಲಿ ವಿಮುಕ್ತ ಬುಡಕಟ್ಟು ಸಮುದಾಯಗಳ ವ್ಯಕ್ತಿಗಳನ್ನು ಗುರಿಯಾಗಿರಿಸಿಕೊಂಡಿತು. ಈ ಕಾಯ್ದೆಯು ಅಪರಾಧವನ್ನು ಕಾಯಿಲೆಯೆಂದು, ಅಪರಾಧಗಳನ್ನು ಮಾಡುವವರು ಮಾನಸಿಕ ರೋಗಿಗಳಾಗಿರುತ್ತಾರೆಂದೂ ಪರಿಗಣಿಸಿತು (ಅಪರ್ಣ ರಾವ್, ಮೈಕೇಲ್ ಕಸ್ಮಿರ್:೨೩೫). ಭಾರತಕ್ಕೆ ಸ್ವಾತಂತ್ರ್ಯ ಬಂದು ಆರು ದಶಕಗಳಾದ ಮೇಲೆಯೂ ಈ ಸಮುದಾಯಗಳನ್ನು ಇಂದಿಗೂ ಸಾಮಾನ್ಯ ಜನ ಮತ್ತು ಪೊಲೀಸ್ ಇಲಾಖೆ ಗುಮಾನಿಯಿಂದಲೇ ನೋಡುವುದನ್ನು ಕಾಣಬಹುದು. ಇಂದಿಗೂ ನಗರವೊಂದರಲ್ಲಿ ದರೋಡೆ, ಕಳ್ಳತನಗಳಾದರೆ ಪೊಲೀಸರು ವಿಚಾರಣೆಗೆ ಬರುವುದು ಮೊದಲಿಗೆ ಈ ಸಮುದಾಯಗಳ ಬಳಿಗೆ. ಈ ಸಮುದಾಯದವರು ಇಂತಹ ಅಪರಾಧ ಮಾಡಿದ್ದಾರೋ ಇಲ್ಲವೇ ಎಂಬ ಪೂರ್ವಪರ ವಿಚಾರವನ್ನು ಈ ಇಲಾಖೆ ಮಾಡದೆ ಅವರನ್ನು ತಪ್ಪಿತಸ್ಥರನ್ನಾಗಿಸುವುದು ತುಂಬಾ ಅಪಮಾನಕರ ವಿಚಾರವಾಗಿದೆ.

ಅಪರಾಧಿ ಬುಡಕಟ್ಟುಗಳೆಂದರೆ ಯಾವುವು ಎಂಬುದನ್ನು ನೋಡಿದೆವು. ಆದರೆ ಅವು ಯಾವ ಸಮುದಾಯಗಳು ಎಂಬುದನ್ನು ಇಲ್ಲಿ ನೋಡೋಣ.

ಅಪರಾಧಿ ಬುಡಕಟ್ಟು ಕಾಯ್ದೆಯಡಿ ಬರುವ ಸಮುದಾಯಗಳನ್ನು ಜಿ.ಎನ್. ದೇವಿಯವರು ಹೀಗೆ ಪಟ್ಟಿಮಾಡುತ್ತಾರೆ.

* ಅಲೆಮಾರಿ ಗಾಯಕ ಪರಂಪರೆಯ ಸಮುದಾಯಗಳು
* ಫಕೀರರು
* ಚಿಕ್ಕವರ್ತಕರು
* ಪ್ರದರ್ಶನ ಕಲೆಗಳನ್ನು ಅವಲಂಬಿಸಿದ ಸಮುದಾಯಗಳು
* ಸಾಮಾನು ಸರಂಜಾಮುಗಳನ್ನು ಸಾಗಿಸುವ ಕಾಯಕ ಮಾಡುವ ಸಮುದಾಯಗಳನ್ನು ಈ ಅಪರಾಧಿ ಬುಡಕಟ್ಟು ಕಾಯ್ದೆಯಡಿ ತರಲಾಯಿತು.

ಬಾಂಬೆ ಪ್ರಾಂತದ ಅಪರಾಧಿ ಬುಡಕಟ್ಟುಗಳ ಅನುಸೂಚಿಯ ಇತಿಹಾಸ

ಬಾಂಬೆ ಸರ್ಕಾರದ ಗೃಹ ಇಲಾಖೆ ಮತ್ತು ಕಾನೂನು (ನ್ಯಾಯಿಕ) ಇಲಾಖೆಗಳು ಆಯಾ ಸಂದರ್ಭದಲ್ಲಿ ಬುಡಕಟ್ಟು ಮತ್ತು ಅಪರಾಧಿ ಬುಡಕಟ್ಟುಗಳ ಕುರಿತು ಆದೇಶಗಳನ್ನು ಹೊರಡಿಸಿವೆ. ಕೆಲವು ವೇಳೆ ಈ ಆದೇಶ ನಿರ್ದಿಷ್ಟವಾಗಿ ಕೆಲವು ಜಿಲ್ಲೆಗಳಿಗೆ ಮಾತ್ರ ಅನ್ವಯಿಸಿದರೆ ಇನ್ನೂ ಕೆಲವು ವೇಳೆ ಇಡೀ ಪ್ರದೇಶಕ್ಕೆ ಅನ್ವಯಿಸುತ್ತಿತ್ತು. ಆ ಆದೇಶದ ಒಂದು ಪಕ್ಷಿ ನೋಟ ಈ ಕೆಳಗಿನಂತಿದೆ.

೧. **ಬೆರಾಡ್:** ಸರ್ಕಾರಿ ಆದೇಶ (Judicial department) ನಂ.೫೫೧೮ ದಿನಾಂಕ ೧೮ನೇ ಆಗಸ್ಟ್ ೧೯೧೬ ಮತ್ತು ಸಂ:೫೭೮೩ ದಿನಾಂಕ ೧೯ನೇ ಆಗಸ್ಟ್ ೧೯೧೬ರಲ್ಲಿ ಬೆರಾಡ್‌ರನ್ನು ಕರ್ನಾಟಕದ

ಬಿಜಾಪುರ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಅಪರಾಧಿಗಳೆಂದು ಘೋಷಿಸಲಾಯಿತು. ನಂತರ ಆದೇಶ ಸಂ:೪೫೮೩/೨ ದಿನಾಂಕ ೧೬ನೇ ಆಗಸ್ಟ್ ೧೯೨೯ರಲ್ಲಿ ಬೆರಾಡ್‌ರನ್ನು ಇಡೀ ಪ್ರದೇಶಕ್ಕೆ ಅನ್ವಯಿಸುವಂತೆ ಅಪರಾಧಿ ಬುಡಕಟ್ಟು ಎಂದು ಘೋಷಿಸಲಾಯಿತು. ಗೃಹ ಇಲಾಖೆ (Home department) ಆದೇಶ ಸಂ:೯೫೫೬-೩,೩೩ ದಿನಾಂಕ ೨೯ನೇ ಜೂನ್ ೧೯೩೧ ಯಾವುದೇ ಅನುಸೂಚನೆ ಇಲ್ಲದೆ ಇಡೀ ಪ್ರದೇಶಕ್ಕೆ ಅನ್ವಯವಾಗುವಂತೆ, ಆದರೆ ಸೆಕ್ಷನ್ ೧೯(೧) (B) ಅಡಿಯಲ್ಲಿ ಬೆರಾಡರಿಗೆ ನಿರ್ಬಂಧನೆಗಳನ್ನು ಹೇರಿತು. ಈ ಆದೇಶವು ಮೂಲತಃ ಇಡೀ ಪ್ರದೇಶಕ್ಕೆ ಅನ್ವಯಿಸಿತು.

೨. ರಜಪೂತ್ ಭಾಮ್ಟ: ನ್ಯಾಯಿಕ (Judicial) ಇಲಾಖೆಯ ಆದೇಶ ಸಂ:೩೪೧೪ ದಿನಾಂಕ ೦೩ ಮೇ ೧೯೧೨ ಮತ್ತು ಸಂ:೫೭೮೩ ದಿನಾಂಕ ೨೯ ಅಕ್ಟೋಬರ್ ೧೯೧೬ ರಜಪೂತ್ ಭಾಮ್ಟರನ್ನು ಕುರಿತು ಮೊದಲಿಗೆ ಈ ಕಾಯ್ದೆ ಆದೇಶದ ಪ್ರಕಾರ ಕೇಂದ್ರಾಡಳಿತ ಪ್ರದೇಶದ ಏಳು ಜಿಲ್ಲೆಗಳಿಗೆ ಅನ್ವಯವಾಗುವಂತೆ ಅನುಸೂಚನೆಯನ್ನು ಹೊರಡಿಸಲಾಯಿತು. ಹಾಗೆಯೇ ಗೃಹ ಇಲಾಖೆ ಆದೇಶ ಸಂ:೯೫೫೬-೩/೪ ದಿನಾಂಕ ೨೩ ಜೂನ್ ೧೯೩೧ ರ ಪ್ರಕಾರ ನಿರ್ದೇಶಿತ ಬುಡಕಟ್ಟೆಂದು ಘೋಷಿಸಿ ಅದು ಇಡೀ ಬಾಂಬೆ ಪ್ರಾಂತ್ಯಕ್ಕೆ ಆ ಆದೇಶ ಅನ್ವಯವಾಗುವಂತೆ ಮಾಡಲಾಯಿತು.

೩. ಟಕಾರಿ ಭಾಮ್ಟ: ಟಕಾರಿ, ಭಾಮ್ಟ, ಗಂಟಿಚೋರ, ಉಚಲ್ಯಾ, ಕಿಸೆಕತ್ರು, ಟಕಾರಿ (ವಡ್ಡರು), ಕಲ್ಲುವಡ್ಡರು, ಕಮಾಲೆ ಮತ್ತು ದೊಂಗ-ದಾಸರ್ ಈ ಉಪಪಂಗಡಗಳನ್ನು ಒಳಗೊಂಡಂತೆ ಟಕಾರಿ ಭಾಮ್ಟರವರನ್ನು ಆದೇಶಿತ ಬುಡಕಟ್ಟೆಂದು ನ್ಯಾಯಿಕ ಇಲಾಖೆಯ ಆದೇಶ ಸಂ:೩೪೧೩ ದಿನಾಂಕ ೩ನೇ ಮೇ ೧೯೨೮ರಲ್ಲಿ ಆದೇಶ ಹೊರಡಿಸಲಾಯಿತು. ಕೇಂದ್ರಾಡಳಿತ ಪ್ರದೇಶದ ಏಳು ಜಿಲ್ಲೆಗಳಿಗೆ ಈ ಆದೇಶ ಮೊದಲಿಗೆ ಅನ್ವಯವಾಗುತ್ತಿತ್ತು. ತರುವಾಯ ಗೃಹ ಇಲಾಖೆಯು ಆದೇಶ ಸಂ:೪೫೮೩/೨ ದಿನಾಂಕ ೧೬ನೇ ಫೆಬ್ರವರಿ ೧೯೨೯ ರಲ್ಲಿ ಬಾಂಬೆ ಪ್ರದೇಶ ಪೂರ್ತಿ ಟಕಾರಿ ಬಾಮ್ಟ ಮತ್ತು ಇತರ ಉಪಪಂಗಡಗಳನ್ನು ಆದೇಶಿತ ಬುಡಕಟ್ಟುಗಳೆಂದು ಪರಿಗಣಿಸಲಾಯಿತು. ಈ ಅನುಸೂಚನೆಯನ್ವಯ ಒಟ್ಟು ೨೪೬ ಜನ ಟಕಾರಿ ಭಾಮ್ಟರನ್ನು ೧೯೪೮ರವರೆಗೆ ಸೆಟಲ್‌ಮೆಂಟ್‌ಗಳಲ್ಲಿ ಇರಿಸಲಾಗಿತ್ತು. ತರುವಾಯ ಇವರನ್ನು ವಿಮುಕ್ತರೆಂದು ಬಿಡುಗಡೆಗೊಳಿಸಲಾಯಿತು.

೪. ಬಾವರಿ: ನ್ಯಾಯಿಕ ಇಲಾಖೆ ಆದೇಶ ಸಂ:೩೪೧೩ ದಿನಾಂಕ ೩ನೇ ಮೇ ಅನುಸೂಚಿಯಂತೆ ಬಾವರಿಗಳನ್ನು (ಉಪಪಂಗಡಗಳಾದ ಕಾಲಪುರ್, ಕೈರವಾಡ, ಕೇಸರ್, ವಡಕ್‌ಗಳನ್ನು ಒಳಗೊಂಡಂತೆ) ಕೇಂದ್ರಾಡಳಿತ ಪ್ರದೇಶದ ಏಳು ಜಿಲ್ಲೆಗಳಲ್ಲಿ ಆದೇಶಿತ ಬುಡಕಟ್ಟು ಎಂದು ಘೋಷಿಸಲಾಯಿತು. ತರುವಾಯ ಗೃಹ ಇಲಾಖೆಯ ಆದೇಶ ಸಂ:೯೩೫೬/೪೬ ದಿನಾಂಕ ೨೩ನೇ ಜೂನ್ ೧೯೩೧ ರಲ್ಲಿ ಇಡೀ ಬಾಂಬೆ ಪ್ರಾಂತಕ್ಕೆ ಅನ್ವಯವಾಗುವಂತೆ ಇಲಾಖೆಯ ಆದೇಶವನ್ನು ಸೆಕ್ಷನ್ ೩, ೪ ಮತ್ತು ೧೦ ರಂತೆ ವಿಸ್ತರಿಸಿ ಹೊಸ ಆದೇಶವನ್ನು ಹೊರಡಿಸಲಾಯಿತು. ಅದೇ ವೇಳೆಗೆ ಸಿಂಧ್, ಪಂಜಾಬ್, ಸಂಯುಕ್ತಾಡಳಿತ ಪ್ರದೇಶ, ಮುಜಾಫರ್ ನಗರದೊಳಗಿನ ಬಾವರಿಗಳು, ಭೂಪಾಲ್‌ನ ಸಹರಾನ್‌ಪುರ್

ಮತ್ತು ಖಾನಪುರ ಜಿಲ್ಲೆಗಳು ಹಾಗೂ ಮಾಳ್ವ, ರಜಪುತಾನ ಪ್ರದೇಶಗಳಿಗೆ ಅನ್ವಯವಾಗುವಂತೆ ಪ್ರಾದೇಶಿಕ ಸರ್ಕಾರಗಳು ಆದೇಶಗಳನ್ನು ಹೊರಡಿಸಿದವು.

೫. ಭಾರ್ ಮತ್ತು ಪಾಶಿ: ಮೂಲತಃ ಸಂಯುಕ್ತಾಡಳಿತ ಪ್ರದೇಶದ ಈ ಬುಡಕಟ್ಟುಗಳು ಬಾಂಬೆ ಮತ್ತು ಖಾನ್‌ದೇಶಗಳೊಂದಿಗೆ ನೆಚ್ಚಿನ ಒಡಂಬಡಿಕೆ ಇರಿಸಿಕೊಂಡಿದ್ದವು, ಆದಕಾರಣ ಗೃಹ ಇಲಾಖೆಯು ಆದೇಶ ಸಂ:೨೩೯೬/೩/೪, ದಿನಾಂಕ ೦೨ನೇ ಮಾರ್ಚ್ ೧೯೩೪ ರಂದು ಇಡೀ ಬಾಂಬೆ ಪ್ರಾಂತಕ್ಕೆ ಅನ್ವಯವಾಗುವಂತೆ ಆದೇಶ ಹೊರಡಿಸಿತು. ಇದು ೧೯೪೮ರ ವರೆಗೂ ಮುಂದುವರೆಯಿತು, ತರುವಾಯ ಒಬ್ಬ ಪಾಶಿಯೂ ಸೆಟಲ್‌ಮೆಂಟ್‌ನಲ್ಲಿ ಇರಲಿಲ್ಲ.

೬. ಭಿಲ್ಸ್: ನ್ಯಾಯಿಕ ಇಲಾಖೆ ಆದೇಶ ಸಂ:೨೨೯೬ ದಿನಾಂಕ ೨೭ನೇ ಮಾರ್ಚ್ ೧೯೧೪ ಮತ್ತು ಆದೇಶ ಸಂ:೭೫೧೦ ದಿನಾಂಕ ೨೬ನೇ ನವೆಂಬರ್ ೧೯೧೫ರ ಆದೇಶಗಳಂತೆ ಪೂರ್ವ ಮತ್ತು ಪಶ್ಚಿಮ ಖಾನ್‌ದೇಶ, ನಾಸಿಕ್, ಅಹಮ್ಮದ್‌ನಗರ, ಪುಣೆ, ಸೊಲ್ಲಾಪುರ ಜಿಲ್ಲೆಗಳಲ್ಲಿ (ಬಾಂಬೆ ಪ್ರಾಂತ) ಅಪರಾಧಿ ಬುಡಕಟ್ಟೆಂದು ಘೋಷಿಸಲಾಯಿತು.

೭. ಚಪ್ಪರಬಂದ: ಚಪ್ಪರಬಂದರನ್ನು ನ್ಯಾಯಿಕ ಇಲಾಖೆಯು ಆದೇಶ ಸಂ:೫೫೧೮, ದಿನಾಂಕ ೧೮-೮-೧೯೧೬ರಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಮೊದಲಿಗೆ ಅಪರಾಧಿ ಬುಡಕಟ್ಟೆಂದು ಘೋಷಿಸಲಾಯಿತು. ತರುವಾಯ ಗೃಹ ಇಲಾಖೆಯ ಆದೇಶ ಸಂ:೪೫೮೩/೨ ದಿನಾಂಕ ೧೬ ಫೆಬ್ರುವರಿ ೧೯೨೯ ರಂತೆ ಇಡೀ ಪ್ರಾಂತಕ್ಕೆ ಮೇಲಿನ ಕಾಯ್ದೆಯನ್ನು ವಿಸ್ತರಿಸಿ ಆದೇಶ ಹೊರಡಿಸಲಾಯಿತು.

೮. ಧಾರಲ್: ಮೊದಲಿನಿಂದಲೂ ೧೯೧೧ರವರೆಗೆ ಧಾರಲರು ಬಾರಿಯಾ ಜಿಲ್ಲೆಯಲ್ಲಿ ಢಕಾಯಿತರೆಂಬ ಅಪಖ್ಯಾತಿಗೆ ಒಳಗಾಗಿದ್ದರು. ಇವರನ್ನು ಅಪರಾಧಿ ಬುಡಕಟ್ಟೆಂದು ನ್ಯಾಯಿಕ ಇಲಾಖೆಯು ಆದೇಶ ಸಂ:೫೬೩೧, ದಿನಾಂಕ ೩ನೇ ನವೆಂಬರ್ ೧೯೧೧ರಲ್ಲಿ ಆದೇಶ ಹೊರಡಿಸಿತು. ಆದೇಶ ಸಂ:೫೭೮೭, ದಿನಾಂಕ ೭ನೇ ಆಗಸ್ಟ್ ೧೯೧೪ರ ಸೆಕ್ಷನ್ ೧೦ (೧) ರಂತೆ ಇವರ ಮೇಲೆ ರೋಲ್‌ಕಾಲ್ ಅಳವಡಿಸಲಾಯಿತು. ಇಂತಹ ನಿರ್ಬಂಧಗಳು ಕಠಿಣವಾಗಿದ್ದರೂ ಧಾರಲ್‌ರು ಯಾವುದೇ ಬದಲಾವಣೆಗೊಳಗಾಗಲಿಲ್ಲ. ಇಡೀ ಬುಡಕಟ್ಟನ್ನು ೧೮೭೧ರ ಅಪರಾಧಿ ಬುಡಕಟ್ಟು ಕಾಯ್ದೆಯಂತೆ ೧೯೩೦ ರಲ್ಲಿಯೂ ಅನ್ವಯವಾಗುವಂತೆ ಅಮೆಂಡ್‌ಮೆಂಟ್ ಮಾಡಲಾಯಿತು.

೯. ಘಟಗುಡಿ: ಘಟಗುಡಿಯರನ್ನು ೧೯೧೫ರಲ್ಲಿ ನಿರ್ದೇಶಿತ ಬುಡಕಟ್ಟೆಂದು ಆದೇಶ ಹೊರಡಿಸಲಾಯಿತು. ಆದರೆ ೧೯೪೮ರ ಹೊತ್ತಿಗೆ ಈ ಬುಡಕಟ್ಟಿನ ಒಬ್ಬನೆ ಒಬ್ಬ ವ್ಯಕ್ತಿಯೂ ಸೆಟಲ್‌ಮೆಂಟ್‌ನಲ್ಲಿ ಇದ್ದದು ಕಂಡುಬರುವುದಿಲ್ಲ.

೧೦. ಕೈಕಾಡಿ: ನ್ಯಾಯಿಕ ಇಲಾಖೆಯ ಆದೇಶ ಸಂ:೩೪೧೩ ದಿನಾಂಕ ೩ನೇ ಮೇ ೧೯೧೨ರಲ್ಲಿ ಕೈಕಾಡಿಗಳನ್ನು ಥಾಣೆ, ಬಿಜಾಪುರ, ಸೊಲ್ಲಾಪುರ ಜಿಲ್ಲೆಗಳಲ್ಲಿ ಅಪರಾಧಿ ಬುಡಕಟ್ಟೆಂದು ಘೋಷಿಸಲಾಯಿತು. ಹಾಗೆಯೇ ಬಾಂಬೆಗೂ ಈ ಆದೇಶ ಅನ್ವಯವಾಗಿತ್ತು. ೧೯೪೯ರಿಂದ ೧೦೮ ಕೈಕಾಡಿಗಳನ್ನು ನಿರ್ಬಂಧಿತ

ಸೆಟಲ್‌ಮೆಂಟ್‌ಗಳಲ್ಲಿ ಸೆರೆ ಇಡಲಾಗಿತ್ತು. ಅದೇ ರೀತಿ ೨೦೪೮ ಜನ ಕೈಕಾಡಿಗಳನ್ನು ನಿರ್ಬಂಧಿತವಲ್ಲದ ಸೆಟಲ್‌ಮೆಂಟ್‌ಗಳಲ್ಲಿ ಇರಿಸಲಾಗಿತ್ತು.

೧೧. **ಕಮ್ಮಿ:** ಕಮ್ಮಿಗಳು ತುಂಬಾ ಕಡಿಮೆ ಜನಸಂಖ್ಯೆಯುಳ್ಳ ಬುಡಕಟ್ಟು. ಬಿಜಾಪುರ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಇವರನ್ನು ೧೯೧೬ರಲ್ಲಿ ಅಪರಾಧಿ ಬುಡಕಟ್ಟೆಂದು ಘೋಷಿಸಲಾಗಿತ್ತು.

೧೨. **ಕಟಬು:** ೧೯೧೬ರಲ್ಲಿ ಕಟಬುಗಳನ್ನು ಅಪರಾಧಿ ಬುಡಕಟ್ಟೆಂದು ಬಿಜಾಪುರ ಜಿಲ್ಲೆಗೆ ಅನ್ವಯವಾಗುವಂತೆ ಆದೇಶ ಹೊರಡಿಸಲಾಯಿತು. ತರುವಾಯ ಈ ಆದೇಶವು ಇಡೀ ಬಾಂಬೆ ಪ್ರಾಂತಕ್ಕೆ ಅನ್ವಯವಾಯಿತು.

೧೩. **ಕಟೋಡಿ (ಕಟ್ಕಾರಿ):** ೧೯೧೪ರಲ್ಲಿ ಈ ಬುಡಕಟ್ಟನ್ನು ಅಪರಾಧಿ ಬುಡಕಟ್ಟೆಂದು ಮೊದಲಿಗೆ ಆದೇಶ ಹೊರಡಿಸಲಾಯಿತು. ನಂತರ ೧೯೧೬ಕ್ಕೆ ಪುಣೆ ಜಿಲ್ಲೆಗೆ ಅನ್ವಯಿಸುವಂತೆ ಆದೇಶ ಹೊರಹೊಮ್ಮಿತು. ೧೯೩೭ರಲ್ಲಿ ೩೫ ಕಟೋಡಿಗಳು ಪುಣೆ ಜಿಲ್ಲೆಯಲ್ಲಿ ನೋಂದಾಯಿಸಲ್ಪಟ್ಟಿದ್ದರೂ ಇವರಲ್ಲಿ ಹನ್ನೊಂದು ಜನ ನೋಂದಣಿಯಿಂದ ಬಿಡುಗಡೆ ಹೊಂದಿದ್ದರು. ನ್ಯಾಯಿಕ ಇಲಾಖೆ ಆದೇಶ ಸಂ:೧೨೯/೩ ದಿನಾಂಕ ೧೯-೦೧-೧೯೩೯ರಲ್ಲಿ ಎಲ್ಲಾ ಪ್ರದೇಶಕ್ಕೆ ಅನ್ವಯವಾಗುವಂತೆ ಆದೇಶಿಸಲಾಯಿತು.

೧೪. **ಮಾರವಾಡ ಬಾವಾರಿ:** ಕೇಂದ್ರಾಡಳಿತ ಪ್ರಾಂತದ ಜಿಲ್ಲೆಗಳಿಗೆ ಅನ್ವಯವಾಗುವಂತೆ ೧೯೧೨ರಲ್ಲಿ ಈ ಬುಡಕಟ್ಟು ಕುರಿತು ಆದೇಶವನ್ನು ಜಾರಿಗೊಳಿಸಲಾಯಿತು. ತರುವಾಯ ೧೯೩೧ರಲ್ಲಿ ಈ ಮೇಲಿನ ಆದೇಶವನ್ನು ರದ್ದುಗೊಳಿಸಲಾಯಿತು. ಆದರೆ ಅಹಮದಾಬಾದ್, ಬರೋಡ, ಖೈರಾ, ಖಾಧಿವಾರ್, ಜೋದ್‌ಪುರ್, ರಜಪುತಾನ ಜಿಲ್ಲೆಗಳಲ್ಲಿ ಈ ಸಮುದಾಯವನ್ನು ಅಪರಾಧಿ ಬುಡಕಟ್ಟೆಂದು ಘೋಷಿಸಲಾಗಿತ್ತು.

೧೫. **ಮೀನ:** ನ್ಯಾಯಿಕ ಇಲಾಖೆಯ ಆದೇಶ ಸಂ:೩೪೧೩ ದಿನಾಂಕ ೦೩ ಮೇ ೧೯೧೨ ರಲ್ಲಿ ಮೀನಾರನ್ನು ನಾಸಿಕ್, ಪುಣೆ, ಸತಾರ, ಕೊಲ್ಲಾಪುರ, ಅಹಮದಬಾದ್, ಪೂರ್ವ ಮತ್ತು ಪಶ್ಚಿಮ ಖಾನದೇಶಗಳಲ್ಲಿ ಅಪರಾಧಿ ಬುಡಕಟ್ಟು ಕಾಯ್ದೆಯ ಸೆಕ್ಷನ್ ೧೦ ರಂತೆ ಅಪರಾಧಿ ಬುಡಕಟ್ಟೆಂದು ಘೋಷಿಸಿ ಆದೇಶ ಹೊರಡಿಸಲಾಯಿತು.

೧೬. **ಅಂಧಿಯಾ:** ೧೯೧೨ರಲ್ಲಿ ಅಂಧಿಯಾರನ್ನು ಮೊದಲಿಗೆ ಅಪರಾಧಿ ಬುಡಕಟ್ಟೆಂದು ಘೋಷಿಸಲಾಯಿತು. ಬಾಂಬೆ ಪ್ರಾಂತಕ್ಕೆ ಅನ್ವಯವಾಗುವಂತೆ ಕಾಯ್ದೆಯ ಸೆಕ್ಷನ್ ೧೦(೧)ರ ನ್ಯಾಯಿಕ ಇಲಾಖೆಯ ನಿರ್ದೇಶನದಂತೆ ೧೯೩೧ರವರೆಗೂ ಈ ಆದೇಶ ಹಲವು ನಿರ್ಬಂಧಗಳಿಗೆ ಒಳಪಟ್ಟು ಮುಂದುವರೆಯಿತು.

೧೭. **ಪಾರ್ಧಿ:** ಪಾರ್ಧಿಯೊಂದನ್ನೇ ವಿಶೇಷವಾಗಿ ನಡೆಸಿಕೊಳ್ಳಲಾಗುತ್ತಿತ್ತು. ಬಾಂಬೆ ಪ್ರಾಂತದಲ್ಲಿ ಮೊದಲಿಗೆ ನ್ಯಾಯಿಕ ಇಲಾಖೆಯು ಆದೇಶ ಸಂ:೩೪೧೩ ದಿನಾಂಕ ೦೩ನೇ ಜೂನ್ ೧೯೧೨ ರಲ್ಲಿ ಆದೇಶ ಹೊರಡಿಸಿ ಕೇಂದ್ರೀಯ ಪ್ರಾಂತದಲ್ಲಿ ಇದನ್ನು ಅಪರಾಧಿ ಬುಡಕಟ್ಟೆಂದು ಘೋಷಿಸಿತು. ತರುವಾಯ

ಗೃಹ ಇಲಾಖೆಯ ಆದೇಶ ಸಂ:೪೫೮೩/೨ ದಿನಾಂಕ ೧೬ನೇ ಫೆಬ್ರವರಿ ೧೯೨೯ರಲ್ಲಿ ಬಾಂಬೆ ಪ್ರಾಂತಕ್ಕೂ ಈ ಆದೇಶ ಅನ್ವಯವಾಗುವಂತೆ ಹೊಸ ಆದೇಶವನ್ನು ಹೊರಡಿಸಿತು. ಅದೇ ಇಲಾಖೆಯ ೧೯೩೧ರಲ್ಲಿ ಮತ್ತೊಂದು ಆದೇಶವನ್ನು ಮಾಡಿತು. ಆ ಆದೇಶ ಸಂ:೯೩೫೬/೧೧೧ ದಿನಾಂಕ ೨೩ ಜೂನ್ ೧೯೩೧ ಅಪರಾಧಿ ಬುಡಕಟ್ಟು ಕಾಯ್ದೆ ಸೆಕ್ಷನ್ ೧೦ ಮತ್ತು ೧೧ ರಂತೆ ಇವರನ್ನು ನಡೆಸಿಕೊಳ್ಳಬೇಕೆಂದು ಘೋಷಿಸಿತು. ಅದರಂತೆ ಇವರ ಮೇಲೆ ಕೆಲವು ನಿರ್ಬಂಧಗಳಂತೆ ಭಿನ್ನವಾದ ಪ್ರಯೋಗಗಳನ್ನು ಮಾಡಲಾಯಿತು. ಎಲ್ಲಾ ಪಾರ್ಧಿಗಳು ಎರಡು ಸೆಟಲ್‌ಮೆಂಟ್‌ಗಳಲ್ಲಿ ಇರಬೇಕಾಗಿತ್ತು.

೧೮. **ರಾಮೋಶಿ:** ರಾಮೋಶಿಗಳು ಮೂಲತಃ ಪುಣೆ, ನಾಸಿಕ್, ಸತಾರ ಮೂರು ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ಇವರ ಕುರಿತು ೧೯೨೩ರಲ್ಲಿ ಹಳೆಯ ಆದೇಶವೇ ಮರಳಿ ಅನುಷ್ಠಾನಗೊಳ್ಳುವಂತಾಯಿತು. ಆದರೆ ರಾಮೋಶಿಗಳನ್ನು ಸತಾರ ಜಿಲ್ಲೆಯಲ್ಲಿ ಮಾತ್ರ ಅಪರಾಧಿ ಬುಡಕಟ್ಟೆಂದು ಘೋಷಿಸಲಾಯಿತು.

೧೯. **ಸಾಂಸಿಯಾ:** ಸಾಂಸಿಯಾ ಅಥವಾ ಕಂಜಾರಭಾಟ, ಭೇರಿಯಾ, ಗುಜರಾತಿ ಭಾಟ್, ನಟ್, ಥಾರ, ಗುಜರಾತಿ ಕೊಲಾಲೆ ಎಂಬ ಹೆಸರುಗಳಿಂದ ಗುರುತಿಸುತ್ತಿದ್ದು, ಅವೆಲ್ಲವನ್ನು ಕೇಂದ್ರಾಡಳಿತ ಪ್ರದೇಶಗಳಿಗೆ ಅನ್ವಯವಾಗುವಂತೆ ನ್ಯಾಯಿಕ ಇಲಾಖೆಯು ಆದೇಶ ಹೊರಡಿಸಿತು. ಆ ಆದೇಶ ಸಂ:೩೪೧೩ ದಿನಾಂಕ ೦೩ನೇ ಮೇ ೧೯೧೨ರಲ್ಲಿ ಸೆಕ್ಷನ್ ೧೦ ಮತ್ತು ೧೧ರಂತೆ ನಿರ್ಬಂಧಿತ ಕಾಯ್ದೆಯನ್ವಯ ಅಪರಾಧಿ ಬುಡಕಟ್ಟೆಂದು ಘೋಷಿಸಲಾಯಿತು.

೨೦. **ತಡವಿ (Tadavi):** ೧೯೧೪ರಲ್ಲಿ ತಡವಿಯರನ್ನು ಪೂರ್ವ ಖಾನ್‌ದೇಶದಲ್ಲಿ ಅಪರಾಧಿಗಳೆಂದು ಘೋಷಿಸಿ ಆದೇಶ ಹೊರಡಿಸಲಾಯಿತು. ಆಮೇಲೆ ಈ ಆದೇಶವು ಇವರನ್ನು ಅಪಾಯಕಾರಿ ಅಪರಾಧಿಗಳೆಂದು ಅಪರಾಧಿ ಪ್ರೊಸೀಜರ್ ಕೋಡ್‌ನನ್ವಯ ಪರಿಗಣಿಸಲಾಯಿತು.

೨೧. **ವಂಜಾರಿ (Vanjari):** ಪೂರ್ವ ಖಾನ್‌ದೇಶ ಜಿಲ್ಲೆಯೊಳಗೆ ವಂಜಾರಿ ಮತ್ತು ಅದರ ಉಪಪಂಗಡಗಳಾದ ರಜಪೂತ ವಂಜಾರಿ, ಚರಣ್ ವಂಜಾರಿಗಳನ್ನು ಒಳಗೊಂಡು, ನ್ಯಾಯಿಕ ಇಲಾಖೆಯು ಆದೇಶ ಸಂ:೩೪೧೩ ದಿನಾಂಕ ೦೩ನೇ ಮೇ ೧೯೧೨ ಮತ್ತು ಸಂ:೮೧೭೭ ದಿನಾಂಕ ೦೯ನೇ ಡಿಸೆಂಬರ್ ೧೯೧೫ರಲ್ಲಿ ಅಪರಾಧಿ ಬುಡಕಟ್ಟೆಂದು ಘೋಷಿಸಲಾಯಿತು. ಈ ಆದೇಶ ಸರಿಗೊಳಿಸಬೇಕೆಂದು ಆಪೇಕ್ಷಿಸಿದುದರಿಂದ ಕಟ್ಟಕಡೆಗೆ ಆದೇಶವನ್ನು ಹಿಂದಕ್ಕೆ ಪಡೆಯಲಾಯಿತು.

೨೨. **ವಡ್ಡರು:** ಮತಿ–ವಡ್ಡರು, ಜಾತಿ–ವಡ್ಡರು, ಗಾಡಿ–ವಡ್ಡರನ್ನು ಒಳಗೊಂಡಂತೆ ವಡ್ಡರನ್ನು ಅಪರಾಧಿ ಬುಡಕಟ್ಟೆಂದು ೧೯೧೨ರಲ್ಲಿ ಕೇಂದ್ರೀಯ ಆಡಳಿತ ಪ್ರದೇಶದಲ್ಲಿ ಆದೇಶ ಹೊರಡಿಸಲಾಯಿತು. ನಂತರದಲ್ಲಿ ೧೯೨೯ರಲ್ಲಿ ಬಾಂಬೆ ಪ್ರಾಂತಕ್ಕೂ ಈ ಆದೇಶ ಅನ್ವಯವಾಗುವಂತೆ ಮಾಡಲಾಯಿತು. ನ್ಯಾಯಿಕ ಇಲಾಖೆ ಆದೇಶ ಸಂ:೯೩೫೬೩/೨೯ ದಿನಾಂಕ ೨೩ನೇ ಜೂನ್ ೧೯೩೧ರಲ್ಲಿ ಸೊಲ್ಲಾಪುರ, ಬೆಳಗಾವಿ, ಬಿಜಾಪುರ, ಧಾರವಾಡ ಮತ್ತು ದಕ್ಷಿಣ ಮತ್ತು ಉತ್ತರ ಮಹಾರಾಷ್ಟ್ರದ ಎಲ್ಲಾ ಭಾಗಗಳಿಗೂ ಹಾಗೂ ಮೈಸೂರು ಪ್ರದೇಶ ಮತ್ತು ಕೇಂದ್ರಾಡಳಿತಕ್ಕೊಳಪಟ್ಟ ಮದ್ರಾಸ್ ಪ್ರಾಂತದ ಭಾಗಗಳಿಗೆ ಅನ್ವಯವಾಗುವಂತೆ ಅಪರಾಧಿ ಬುಡಕಟ್ಟು ಕಾಯ್ದೆ ಅಡಿಯಲ್ಲಿ ಈ ಸಮುದಾಯವನ್ನು ತರಲಾಯಿತು.

೨೩. ಬೇಗಾಡಿ:- ಬೇಗಾಡಿಗಳು ಬಾಂಬೆ ಪ್ರಾಂತದ ಅಲೆಮಾರಿ ಜನ, ಇವರ ಕುರಿತು ಗೃಹ ಇಲಾಖೆಯ ಆದೇಶ ಸಂ:೯೬೫೨/೨ ದಿನಾಂಕ ೧೭ನೇ ಸೆಪ್ಟೆಂಬರ್ ೧೯೩೧ರ ಕಾಯ್ದೆಯ ಸೆಕ್ಷನ್ ೧೧ರ ನಿರ್ಬಂಧಿತ ಕಾಯ್ದೆಯನ್ವಯ ಬೇಗಾಡಿಗಳನ್ನು ಅಪರಾಧಿ ಬುಡಕಟ್ಟೆಂದು ಘೋಷಿಸಲಾಯಿತು.

೨೪. ವಾಘರಿ (ವಾಗ್ರಿ) Waghari:- ವಾಗ್ರಿಗಳನ್ನು ಖಾರಿಯಾ ಜಿಲ್ಲೆಯಲ್ಲಿ ೧೯೧೪ರಲ್ಲಿ ಅಪರಾಧಿ ಬುಡಕಟ್ಟೆಂದು ಘೋಷಿಸಲಾಯಿತು. ತರುವಾಯ ೧೯೨೩ರಲ್ಲಿ ಬಾಂಬೆ ನಗರದೊಳಗೆ ೧೯೨೪ರಲ್ಲಿ ಬಾಂಬೆಯ ಇತರ ಪ್ರದೇಶಗಳಿಗೆ ಈ ಆದೇಶ ಅನ್ವಯವಾಗುವಂತೆ ಮಾಡಲಾಯಿತು. (ಬ್ಲಾಕ್‌ಸ್ಮಿತ್.ಕೆ.ಆರ್: ೧೯೭೮:೪೧-೪೫)

ಜವಹಾರ್‌ಲಾಲ್ ನೆಹರೂ

ಪಂಡಿತ ಜವಹಾರಲಾಲ್ ನೆಹರೂರವರು ೧೯೩೬ರಲ್ಲಿ ನೆಲ್ಲೂರಿನಲ್ಲಿ ಅಪರಾಧಿ ಬುಡಕಟ್ಟುಗಳ ಕುರಿತು ಮಾತನಾಡುತ್ತಾ ಹೀಗೆ ತಿಳಿಸುತ್ತಾರೆ.

"ಅಪರಾಧಿ ಬುಡಕಟ್ಟು ಕಾಯ್ದೆಯ ಶೋಷಣೆಯ ಸ್ವರೂಪವನ್ನು ಅರಿತಿದ್ದೇನೆ. ಈ ಕಾಯ್ದೆಯು ನಾಗರೀಕ ಹಕ್ಕುಗಳು ಮತ್ತು ಸಮಾಜದ ಒಂದು ಅಂಗಕ್ಕೆ ಮಾಡಿದ ಅಪಚಾರವೇ ಆಗಿದೆ. ಈ ಕಾಯ್ದೆಯನ್ನು ರದ್ದುಗೊಳಿಸಬೇಕು. ಏಕೆಂದರೆ ಈ ಕಾಯ್ದೆಯು ನ್ಯಾಯಕ್ಕೆ ಇದರ ಪೀನಲ್ ಕೋಡುಗಳು ವಿರೋಧವಾಗಿದೆ. ಕೆಲವು ಸಮುದಾಯಗಳನ್ನು ಅಪರಾಧಿಗಳೆಂದು ಪರಿಗಣಿಸುತ್ತದೆ. ಯಾವ ಸಮುದಾಯವನ್ನು ಅಪರಾಧಿಗಳೆಂದು ಗುರುತಿಸಿದೆಯೋ ಅಂತಹ ಸಮುದಾಯಗಳನ್ನು ಮುಖ್ಯವಾಹಿನಿಗೆ ತರಲು ೮೦ ವರ್ಷಗಳಿಂದ ಪ್ರಯತ್ನಿಸುತ್ತಿದೆ. ಮತ್ತು ಆ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವಲ್ಲಿ ಆಡಳಿತ ವ್ಯವಸ್ಥೆ ಸೋತಿದೆ. ಪ್ರಾಥಮಿಕವಾಗಿ ಸರ್ಕಾರದ ಭ್ರಷ್ಟತೆ, ಪೊಲೀಸ್ ವ್ಯವಸ್ಥೆ, ಬ್ಯುರಾಕ್ರಸಿಗಳು ಇದಕ್ಕೆ ಅಡ್ಡಿಯಾಗಿವೆ. ಆಡಳಿತ ಯಂತ್ರದಲ್ಲಿ ಹೊಂದಾಣಿಕೆ ಇಲ್ಲವಾಗಿದೆ.

ಮುನ್ಷಿ ಸಮಿತಿ ೧೯೩೭

ಬಾಂಬೆ ಪ್ರಾಂತದ ಗೌವರ್ನರ್‌ರವರು ೫ನೇ ಅಕ್ಟೋಬರ್ ೧೯೩೭ ರಂದು ಏಳು ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಿ ಆ ಸಮಿತಿಯ ಅಧ್ಯಕ್ಷರಾಗಿ ಭಾರತೀಯ ವಿದ್ಯಾಭವನದ ಸ್ಥಾಪಕರೂ ಆ ಪ್ರಾಂತದ ಗೃಹ ಖಾತೆ ಸಚಿವರಾದ ಕೆ.ಎಂ. ಮುನ್ಷಿ ಅವರಿಗೆ ನೇಮಿಸಲಾಯಿತು. ಈ ಸಮಿತಿಯ ಉದ್ದೇಶ ೧೯೨೪ರ ಅಪರಾಧಿ ಬುಡಕಟ್ಟು ಕಾಯ್ದೆಯನ್ನು ಸಮಗ್ರವಾಗಿ ಅಧ್ಯಯನ ಮಾಡಿ ಏನೇನು ಬದಲಾವಣೆಗೊಳಿಸಬೇಕು ಎಂಬ ಉದ್ದೇಶವನ್ನು ಇರಿಸಿಕೊಂಡು ಸಮಿತಿ ರಚಿಸಲಾಗಿತ್ತು. ಸಮಿತಿಯ ಇತರ ಸದಸ್ಯರಾಗಿ ಎನ್.ಜಿ. ಜೋಷಿ, ರಾವ್‌ಬಹದ್ದೂರ್ ಜಿ.ಕೆ. ಚೈತಯ್ (Chitae) ಖಾನ್ ಬಹದ್ದೂರ್ ಎಫ್.ಬಿ. ಧಾಭಿ (Dhabi) ಇಬ್ಬರು ವಿಧಾನಸಭೆ ಸದಸ್ಯರಾಗಿದ್ದರು. ಇವರಲ್ಲದೆ ಐ.ಪಿ.ಎಸ್ ಅಧಿಕಾರಿಗಳಾದ ಡಿ. ಸೆಮಿಂಗ್‌ಟನ್ (ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ) ಕು.ಎಸ್.ಕೆ ದಾವಿಸ್ (Davis) ಕಾರ್ಯನಿರತ ಶಾಲೆಯ ಇನ್ಸ್‌ಪೆಕ್ಟರ್ ಮತ್ತು ಅದೇ ರೀತಿ ಜಂಟಿ ಕಾರ್ಯದರ್ಶಿಗಳು ಈ ಸಮಿತಿಯಲ್ಲಿದ್ದರು.

ಈ ಸಮಿತಿಯು ಅಪರಾಧಿ ಬುಡಕಟ್ಟು ಕಾಯ್ದೆಗೆ ಸಂಬಂಧಿಸಿದ ಡೆಪ್ಯುಟಿ ಇನ್ಸ್‌ಪೆಕ್ಟರ್ ಆಫ್ ಪೊಲೀಸ್‌ನವರ ಮುಖಾಂತರ ನೇಮಕಗೊಂಡಿತ್ತು. ಈ ಸಮಿತಿಯು ಮುಖ್ಯ ಕಾರ್ಯವು ಪ್ರತಿ ಸೆಟಲ್‌ಮೆಂಟ್‌ಗೆ ತೆರಳಿ ಅಲ್ಲಿಯ ಪರಿಸ್ಥಿತಿಗಳನ್ನು ಅರಿಯುವುದರೊಂದಿಗೆ ಅಲ್ಲಿ ನೆಲೆಸಿದ ಜನರನ್ನು ಮತ್ತು ಅವರ ನಾಯಕರನ್ನು ಭೇಟಿಯಾಗಿ ಮಾತುಕತೆ ನಡೆಸಿ ಆ ಸೆಟಲ್‌ಮೆಂಟ್‌ನ ವಸ್ತುಸ್ಥಿತಿ ಏನಿದೆ ಎಂಬುದನ್ನು ಅರಿಯುವುದು. ಈ ಸಮಿತಿ ಗಮನಿಸಿದಂತೆ ೨೮ ಬುಡಕಟ್ಟುಗಳನ್ನು ಅಪರಾಧಿ ಬುಡಕಟ್ಟುಗಳೆಂದು ಪರಿಭಾವಿಸಿ ಗುಂಪುಗುಂಪಾಗಿ ಇರಿಸಲಾಗಿದೆ. ಈ ರೀತಿ ಮನಸೇಚ್ಛೆ ಎಲ್ಲಾ ಬುಡಕಟ್ಟುಗಳನ್ನು ವಸಾಹತುಗಳಲ್ಲಿ ಇರಿಸದೆ ಅತೀ ಮುಖ್ಯವಾದ ಏಳು ಸಮುದಾಯಗಳ ಕುರಿತ ಕಾಳಜಿ ತೋರಿಸಬೇಕಾಗಿದೆ. ಮತ್ತು ಆದೇಶ ಹೊರಡಿಸಬೇಕು ಎಂಬುದನ್ನು ಶಿಫಾರಸ್ಸು ಮಾಡಿತು. ಈ ಸಮಿತಿ ತಿಳಿಸಿದ ಒಟ್ಟು ಸಮುದಾಯಗಳು, ೦೧ ಬವರಿ, ೨ ಮಾರವಾಡ ಬಾವರಿ, ೩ ಮಾಂಗ್‌ಗಾರುಡಿ, ೪ ಉದಿಯಾ, ೫ ಪಾರ್ಧಿ, ೬ ಸಾಂಸಿಯಾ, ೭ ವಡ್ಡರನ್ನು ಪರಿಗಣಿಸಲು ತಿಳಿಸಿತು.

ಈ ಸಮಿತಿ ತನ್ನ ವಾದಕ್ಕೆ ತಳಹದಿಯಾಗಿ ೧೯೩೧ರ ಜನಗಣತಿ ಆಧರಿಸಿ ಅಪರಾಧಿ ಬುಡಕಟ್ಟು ಸಮುದಾಯಗಳು ಎಷ್ಟಿವೆ, ಅವುಗಳಲ್ಲಿ ಎಷ್ಟು ಜನ ವಸಾಹತುವಿನ ಹೊರಗಿದ್ದಾರೆ ಮುಂತಾಗಿ ಪ್ರತಿ ಬುಡಕಟ್ಟಿಗೂ ಪ್ರತ್ಯೇಕವಾದ ಮಾಹಿತಿಗಳನ್ನು ಪಡೆಯಿತು. ಇವರು ತಮ್ಮ ಅಧ್ಯಯನಕ್ಕಾಗಿ ಮಹಾರಾಷ್ಟ್ರದ ಸೊಲ್ಲಾಪುರದ ಸೆಟಲ್‌ಮೆಂಟ್‌ನ್ನು ಗುರಿಪಡಿಸಿಕೊಂಡರು ಇದರೊಂದಿಗೆ ಖೈರಾ ಜಿಲ್ಲೆಯ 'ಧರಲ್' ಎನ್ನುವ ಸಮುದಾಯವನ್ನು ಪ್ರಾತಿನಿಧಿಕವಾಗಿ ಪಡೆಯಿತು. ಈ ಸಮಿತಿ ಮುಖ್ಯವಾಗಿ ಸೆಟಲ್‌ಮೆಂಟ್‌ಗಳ ಮೌಲ್ಯ ಮಾಪನ ಮಾಡುವ ಪ್ರಯತ್ನಮಾಡಿತು. ಈ ಸಮಿತಿಯು ೧೮೭೧ರ ಅಪರಾಧಿ ಬುಡಕಟ್ಟು ಕಾಯ್ದೆ ಜಾರಿಗೆ ಬಂದ ಸುಮಾರು ೬೫ ವರ್ಷಗಳ ತರುವಾಯ ಆ ಕಾಯ್ದೆಗಳು ಮತ್ತು ಸೆಟಲ್‌ಮೆಂಟ್‌ಗಳ ಸ್ಥಿತಿಯನ್ನು ಅರಿಯಲು ಪ್ರಯತ್ನಿಸಿತು.

ಈ ಸಮಿತಿಯು ಸೆಟಲ್‌ಮೆಂಟ್‌ಗಳನ್ನು ನೋಡಿಕೊಳ್ಳಲು ಸ್ವಯಂ ಸೇವಾಸಂಸ್ಥೆಗಳಿಗೆ ವಹಿಸಿಕೊಡುವುದನ್ನು ತೀವ್ರವಾಗಿ ವಿರೋಧಿಸಿತು. ಸೆಟಲ್‌ಮೆಂಟ್‌ಗಳನ್ನು ನೋಡಿಕೊಳ್ಳುತ್ತಿದ್ದ ಕ್ರಿಶ್ಚಿಯನ್ ಸಂಸ್ಥೆಗಳು ಸರಿಯಾಗಿ ನಡೆಸಿಕೊಳ್ಳುತ್ತಿಲ್ಲ ಎಂಬುದನ್ನು ಸಮಿತಿ ಗಮನಿಸಿತು. ಆ ಕಾರಣಕ್ಕಾಗಿ ಸೆಟಲ್‌ಮೆಂಟ್‌ಗಳನ್ನು ಸರ್ಕಾರವು ತಕ್ಷಣ ತನ್ನ ಸುಪರ್ದಿಗೆ ತೆಗೆದುಕೊಳ್ಳಬೇಕು ಎಂದು ಶಿಫಾರಸ್ಸು ಮಾಡಿತು.(ಅದೇ: ೪೮) ಈ ಸಮಿತಿಯು ತನ್ನ ಶಿಫಾರಸ್ಸಿನ ತರುವಾಯ ಅವರ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಬಹುದು. ಈ ರೀತಿ ಮುಂಜಾಗ್ರತೆ ವಹಿಸುವುದರಿಂದ ಸೆಟಲ್‌ಮೆಂಟ್‌ಗಳಲ್ಲಿ ಆಗುವ ತಪ್ಪುಗಳು ಮತ್ತೆ ಮರುಕಳಿಸುವುದಿಲ್ಲ. ಭಾರತದ ಅಪರಾಧಿ ಬುಡಕಟ್ಟುಗಳ ಸೆಟಲ್‌ಮೆಂಟ್‌ಗಳ ನಿರ್ವಹಣೆಗೆ ಸಂಬಂಧಿಸಿದಂತೆ ಮುನ್ಸಿ ವರದಿಯಲ್ಲಿ ಬಳಸಿದ ವಿಷಯಗಳು ಸೆಟಲ್‌ಮೆಂಟ್ ಪುನರ್ವಸತಿಗೆ ಸಂಬಂಧಿಸಿದ ಒಂದು ಪಾಠವೆಂದೇ ಭಾವಿಸಲಾಗಿದೆ.

ಮೈಸೂರು ರಾಜ್ಯದ ವಿಮುಕ್ತ ಬುಡಕಟ್ಟುಗಳ ಪಟ್ಟಿ–೧೯೫೬

(ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಾತಿ/ ಸಿಂಧುತ್ವ ಪ್ರಮಾಣ ಪತ್ರ ನೀಡುವ ಕುರಿತು ಹೊರಡಿಸಲಾದ ಪ್ರಮುಖ ಆದೇಶಗಳ ಸಂಗ್ರಹ– ೧೯೫೦ರಿಂದ ೨೦೦೯: ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.)

೧. ಹಳೆಯ ಹೈದರಾಬಾದ್ ಪ್ರದೇಶದ ಗುಲಬರ್ಗಾ, ಬಿಜಾಪುರ, ರಾಯಚೂರ್, ಬೀದರ ಜಿಲ್ಲೆಗಳು.

೧. ಲಂಬಾಣಿ ಅಥವಾ ಲಂಬಾಡ

೨. ವಡ್ಡರ್

೩. ಪಾರ್ಧಿ

೪. ಯರಕುಲ

೫. ಕೈಕಾಡಿ

೬. ಕೊರವರ

೨. ಹಳೆಯ ಬಾಂಬೆ ಪ್ರಾಂತದ ಧಾರವಾಡ, ಬೆಳಗಾವಿ, ಉತ್ತರ ಕನ್ನಡ ಜಿಲ್ಲೆಗಳು.

೧. ಬೆರಾಡ್, ೨. ಬೇಡಾರ್, ೩. ತಳವಾರ್, ೪. ವಾಲ್ಮೀಕಿ, ೫. ನಾಯ್ಕಿ ಮಕ್ಕಳು
೬. ನಾಯ್ಕವಾಡಿ, ೭. ಭಾಮ್ಟ (ರಜಪೂತ್), ೮. ಪರದೇಶಿ ಭಾಮ್ಟ, ೯. ಭಾಮ್ಟ
೧೦. ಟಕಾರಿ, ೧೧. ಗಂಟಿಚೋರ, ೧೨. ಉಚಿಲ್ಯಾ , ೧೩. ತುಡುಗು ವಡ್ಡರ
೧೪. ಗಿರಣಿ ವಡ್ಡರ, ೧೫. ಬೆಸ್ತರ್, ೧೬, ದೊಂಗ ದಾಸರ್, ೧೭. ಕಮಟಿ
೧೮. ಕೈಕಾಡಿ, ೧೯. ಕೊರಚ, ೨೦. ಕೊರವರ್, ೨೧. ಪಾಮಲೆರ್, ೨೨. ಜವೆರಿ
೨೩. ಜೊಹಾಗಿ, ೨೪. ಲಮಾಣಿ, ೨೫. ಲಂಬಡಾ, ೨೬. ಟಿಕನಕರ್
೨೭. ಹರಣ ಶಿಕಾರಿ, ೨೮. ಚಿಗರಿ ಬೇಟೆಗಾರ, ೨೯. ನೀರ ಶಿಕಾರಿ, ೩೦. ಫಾಸೆಚರಿ
೩೧. ಸಾಂಸಿಯ, ೩೨. ಘರ, ೩೩. ನಟ್ ೩೪. ಕಂಜರಭಾಟ ೩೫. ಕಂಜರಿ
೩೬. ಕಂಜರ್, ೩೭.ಬೇರಿಯಾ, ೩೮. ವಡ್ಡರ್ಸ್ ೩೯.ಚಪ್ಪರಬಂದ, ೪೦. ಬಂಡಿ ವಡ್ಡರ್
೪೧. ಮಣ್ಣು ವಡ್ಡರ್, ೪೨. ಕಲ್ಲು ವಡ್ಡರ್

೩. ಮೈಸೂರ್ ಪ್ರಾಂತದ ಬಳ್ಳಾರಿ ಜಿಲ್ಲೆ

೧. ವಾಲ್ಮೀಕಿ.

ಮಹಾರಾಷ್ಟ್ರದ ವಿಮುಕ್ತ ಬುಡಕಟ್ಟು ಜಾತಿಗಳ ಪಟ್ಟಿ

(ಸರ್ಕಾರದ ಅನುಸೂಚಿ, ಶಿಕ್ಷಣ ಮತ್ತು ಸಮಾಜಕಲ್ಯಾಣ ಇಲಾಖೆ)

ಸಂ.ಸಿ.ಬಿ.ಸಿ. ೧೯೬೧, ದಿನಾಂಕ ೨೧, ನವ್ಹೆಂಬರ್ ೧೯೬೧

೧ ಬೆರಾಡ್ ಇವರನ್ನು ಬೇಡರ್, ನಾಯಿಕವಾಡಿ, ತಳವಾರ್, ವಾಲ್ಮೀಕಿ

೨ ಬೆಸ್ತರ್ ಇವರನ್ನು ಸಂಚಲ ವಡ್ಡರ್ ಎನ್ನುತ್ತಾರೆ.

೩ ಭಾಮ್ಟ, ಭಾಮ್ಟಿ, ಗಿರಣಿ ವಡ್ಡರ್, ಕಮತಿ, ಪಾತ್ರೂಟ್, ಠಕಾರಿ, ಉಚಲ್ಯಾ

೪ ಕೈಕಾಡಿ, ಧೋಂಟ್ಲ, ಕೊರವ, ಮಕಡವಾಲೆ ಅಥವಾ ಕುಂಚಿಕೊರವ

೫ ಕಂಜರಭಾಟ, ಛಾರ, ಕಂಜರ್, ನಟ್

೬ ಕಟಬು

೭ ಲಮನ್, ಬಂಜಾರ, ಕಚಕಿವಾಲೆ ಬಂಜಾರ, ಲಮಾನ್ ಬಂಜಾರು, ಲಂಬಾಡಿ

೮ ರಾಜ್ ಪಾರ್ಧಿ, ಚಿತಪಾರ್ಧಿ, ಗೋವನ್ ಪಾರ್ಧಿ, ಹರಿಣ ಶಿಕಾರಿ ಟಕನ್‌ಕರ್

೯ ಪಾಂಶಿಪಾರ್ಧಿ, ಪಾಲ್‌ಪಾರ್ಧಿ

೧೦ ರಜಪೂತ್ ಭಾಮ್ಟ, ಪರದೇಶಿ ಭಾಮ್ಟ, ಪರದೇಶಿ ಭಾಮ್ಟಿ

೧೧ ರಾಮೋಶಿ

೧೨ ವಡ್ಡರ, ಗಾಡಿ ವಡ್ಡರ, ಜಾತಿ ವಡ್ಡರ, ಮಲೆ ವಡ್ಡರ ಪಾತ್ರೂಟ್

೧೩ ವಾಘ್ರಿ

ಮಹಾರಾಷ್ಟ್ರದ ಅಲೆಮಾರಿಗಳ ಪಟ್ಟಿ

೧ ಭಾವ, ಭೈರಾಗಿ

೨ ಬೇಲ್ದಾರ್, ಒಡ್

೩ ಭರಾಡಿ, ಬಾಲ ಸಂತೋಷಿ, ಕಿಂಗ್ರಿವಾಲೆ, ನಾಥ್‌ಬಾವ, ನಾಥ್ ಜೋಗಿ, ನಾಥ್ ಪಂಥಿ, ದೇವಾರಿ ಗೋಸಾವ್ ಭೋಪೆ

೪ ಭೂತೆ

೫ ಚಲುವಾದಿ

೬ ಚಿತ್ರಕಥಿ

೭ ಗಾರುಡಿ

೮ ಘಿಸಾಡಿ

೯ ಗೊಲ್ಲ

೧೦ ಗೊಂದಲಿ

೧೧ ಗೋಪಾಲ್

೧೨ ಹೆಳವ

೧೩ ಜೋಷಿ, ಬುಡುಬುಡುಕಿ, ಡಮರವಾಲೆ, ಕುಡುಮುಡೆ, ಮೆಧಾಂಗಿ, ಸಾರೋಡೆ

೧೪ ಕಾಶಿಕಾಪಾಲಿ

೧೫ ಕೊಲ್ಹಾತಿ, ದೊಂಬಾರಿ

೧೬ ಮೈರಾಲ್, ಧನಗಾರ್, ವಿರ್

೧೭ ಮಸಣಜೋಗಿ, ಸುಡುಗಾಡಸಿದ್ಧ

೧೮ ನಂದಿವಾಲೆ, ತಿರುಮಲ

೧೯ ಪಂಗುಲ್

೨೦ ರಾಮ್

೨೧ ಸಿಕ್ಕಲಗಾರ್, ಕಟಾರಿ

೨೨ ಥಕ್ಕರ್ (ರತ್ನಗಿರಿ ಜಿಲ್ಲೆಯಲ್ಲಿ ಮಾತ್ರ)

೨೩ ವಾಯಿಡು, ಜಿಂಗ ಭೋಯಿ

೨೪ ವಾಸುದೇವ

ದಾಖಲೆ ಪ್ರಕಾರ ಗುಜರಾತ್ ರಾಜ್ಯದಲ್ಲಿರುವವರು

೧ ಬಘಾನ್, ಸಾಂಸಿಯಾ

೨ ಛಾರ, ಅಡೋಡಿಯಾ

೩ ದಫರ್

೪ ಹಿಂಗೋರ

೫ ಮಿ, ಮೇಟಾ

೬ ಮಿಯಾನ, ಕಾಕಾಡ, ಕಿಛಾ

೭ ಸಂಧಿ

೮ ಥೇಬಾ

೯ ವಾಘರ್

೧೦ ವಾಘರಿ

೧೧ ಚುನ್ವಾಲಿಯಾ ಕೋಲಿ

೧೨ ಕೋಲಿ (ಕಾಚು ಜಿಲ್ಲೆಯ ರಾಪರ್, ಬಜಾವೊ ತಾಲೂಕುಗಳಲ್ಲಿ ಮಾತ್ರ)

ಗುಜರಾತಿನ ಅಲೆಮಾರಿ ಸಮುದಾಯಗಳು

೧ ಬಾಜನಿಯಾ, ಬಾಜಿಗರ್, ನಟ್-ಬಾಜನಿಯಾ

೨ ಭಾಂಡ್

೩ ಗಾರುಡಿ

೪ ಕಥೋಡಿ, ಕತ್ಕಾರಿ

೫ ನಾಥ್, ನಾಥ್-ಬಾವಾ

೬ ಕೊಟ್ವಾಲಿಯಾ

೭ ತುರಿ

೮ ವಿಟೋಲಿಯಾ

ಬಾಂಬೆ ಪ್ರಾಂತದ ಸೆಟಲ್‌ಮೆಂಟ್‌ಗಳಲ್ಲಿದ್ದ ಅಲೆಮಾರಿ ಬುಡಕಟ್ಟುಗಳು

೧ ಸೊಲ್ಲಾಪುರ : ಸೊಲ್ಲಾಮರದ ಕಲ್ಯಾಣ ನಗರದಲ್ಲಿದ್ದ ಸೆಟಲ್‌ಮೆಂಟ್ ಆ ಪ್ರಾಂತದಲ್ಲಿದ್ದ ಸೆಟಲ್‌ಮೆಂಟ್‌ಗಳಲ್ಲಿಯೇ ದೊಡ್ಡದು. ಇದರಲ್ಲಿ ೧೯೧೬ ರಲ್ಲಿ ೮೦೦ ಕುಟುಂಬಗಳು ವಾಸವಾಗಿದ್ದವು. ಸರ್ಕಾರವು ಸ್ಥಳೀಯ ಬಟ್ಟೆ ಮಿಲ್ (Textile) ಮಾಲೀಕರೊಂದಿಗೆ ಅಗ್ರಿಮೆಂಟ್ ಮಾಡಿಕೊಂಡು ಸೆಟಲ್‌ಮೆಂಟ್ ಜನರನ್ನು ಆ ಮಿಲ್‌ಗಳಿಗೆ ಕೆಲಸಕ್ಕಾಗಿ ಕಳಿಸುತ್ತಿದ್ದರು. ತರುವಾಯ ಸರ್ಕಾರವು ಈ ಸೆಟಲ್‌ಮೆಂಟ್‌ನ್ನು ಅಮೇರಿಕನ್ ಮಿಷನ್‌ರವರಿಗೆ ಆಡಳಿತಾತ್ಮಕವಾಗಿ ಹಸ್ತಾಂತರಿಸಿತು. ಇದಕ್ಕಾಗಿ ಒಂದು ಲಕ್ಷದಷ್ಟು ಗ್ರಾಂಟ್ (ಹಣವನ್ನು) ವಾರ್ಷಿಕವಾಗಿ ಪಡೆಯುತ್ತಿತ್ತು. ಕಲ್ಯಾಣ ನಗರದ ಸೆಟಲ್‌ಮೆಂಟ್ ಅತೀ ಕ್ರೂರತ್ವದಿಂದ ಕೂಡಿತ್ತಂತೆ. ಇಲ್ಲಿಯ ಕೆಲವು ಕುಟುಂಬಗಳನ್ನು ಹತ್ತಿರದ ಉಮೇದಪುರ ಸೆಟಲ್‌ಮೆಂಟ್‌ಗೆ ವರ್ಗಾಯಿಸಲಾಯಿತು. ಸ್ವಾತಂತ್ರ್ಯ ತರುವಾಯ ಹಲವು ಕುಟುಂಬಗಳಿಗೆ, ಕೊನಾಲಿ, ಅರಿಕಲಗಿ, ಕಲ್ಯಾಣ ನಗರ, ಬೆದ್ಯಾಲಿ ಮುಂತಾದೆಡೆ ನಿವೇಶನಗಳನ್ನು ನೀಡಲಾಯಿತು.

೨ ಹೊಟಗಿ : ಹೊಟಗಿ ಸೆಟಲ್‌ಮೆಂಟ್ ಸೊಲ್ಲಾಪುರದಿಂದ ೨೯ ಕಿ.ಮೀ ದೂರದಲ್ಲಿದೆ. ಇಲ್ಲಿ (ಕೈಕಾಡಿ) ಪಾಮಲೋರ್, ಪಾರ್ಧಿ, ಚಪ್ಪರಬಂದ, ಟಕಾರಿ ಭಾಮ್ಟ, ಬುಡಕಟ್ಟುಗಳನ್ನು ಇರಿಸಲಾಗಿತ್ತು. ಪ್ರಾಯಶಃ ಕಚ್ಛಾ ಮನೆಗಳಿಂದ ಇದು ಕೂಡಿತ್ತು. ಹಲವರಿಗೆ ಕೃಷಿಗಾಗಿ ಭೂಮಿ ಮತ್ತು ಮನೆ ಕಟ್ಟಿಕೊಳ್ಳಲೆಂದು ನಿವೇಶನಗಳನ್ನು ಹಿಂಗನಗೋನ, ಹಡಗನಗೋನಗಳಲ್ಲಿ ಕೊಟ್ಟದ್ದು ಕಂಡುಬರುತ್ತದೆ. ಇವರು ನಗರವಾಸಿಗಳೊಂದಿಗೆ ಸಂಪರ್ಕವಿರಿಸಿಕೊಂಡಿದ್ದಾರೆ. ಮತ್ತು ಹೈನುಗಾರಿಕೆಯನ್ನು ಮುಖ್ಯ ವೃತ್ತಿಯಾಗಿಸಿಕೊಂಡಿದ್ದಾರೆ. ಸ್ಥಳೀಯ ದೊಡ್ಡ ಪ್ರಮಾಣದ ರೈತರು ಮತ್ತು ಸೆಟಲ್‌ಮೆಂಟ್‌ನ ಕೈಕಾಡಿ ನಾಯಕರ ಹಿಡಿತದಲ್ಲಿ ಸೆಟಲ್‌ಮೆಂಟ್ ಭೂಮಿ ಇರುವುದು ಕಂಡುಬರುತ್ತದೆ.

೩ ಬಾರಾಮತಿ : ಈ ಸೆಟ್ಲಮೆಂಟ್ ಟಕ್ಕರ್ ಕಾಲೋನಿಯಲ್ಲಿದ್ದು ಇದು ೧೯೧೯ರಲ್ಲಿ ಅಸ್ತಿತ್ವಕ್ಕೆ ಬಂದಿದೆ. ಇದು ಮೂರು ವಿಭಾಗಗಳನ್ನು ಒಳಗೊಂಡಿದ್ದು ಅದನ್ನು ಕಂಜರಭಾಲ್, ಟಕಾರಿ ಭಾಮ್ಟೆ ಮತ್ತು ಯಾಂಗ್ ಗಾರುಡಿಗಳು, ಅಂಕಲೆ ಮತ್ತು ಬೆಸ್ತರ್‌ಗಳು ನೆಲೆಸಿದ್ದಾರೆ. ಭಾರಾಮತಿಯ ಶರದ್‌ಪವಾರ್‌ರವರ ನಗರವೂ ಹೌದು, ಕನಿಷ್ಠ ೨೫ ಕುಟುಂಬಗಳು ಇಂದು ತಮ್ಮ ಶ್ರಮದಿಂದ ಕೃಷಿಕರಾಗಿದ್ದಾರೆ.

೪ ಧುಲೆ : ವಡ್ಡರು, ಮಾಂಗ್‌ಗಾರುಡಿ, ಕಂಜರಭಾಟ ನೆಲೆಸಿರುವ ದೇವಪುರ ಸೆಟಲ್‌ಮೆಂಟ್ ಸುತ್ತ ಇಂದು ನಗರ ವ್ಯಾಪಿಸಿಬಿಟ್ಟಿದೆ ವಡ್ಡರು ಮನೆಕಟ್ಟುವ ಕಲ್ಲು, ಕ್ವಾರಿ ಮತ್ತು ಕೆಲಸವನ್ನು ಮಾಡುತ್ತಿದ್ದು ಕಲ್ಲು ಕ್ವಾರಿ ಕೆಲಸಗಾರರ ಸಂಘಟನೆ ರಚಿಸಿಕೊಂಡಿದ್ದಾರೆ. ಸೆಟಲ್‌ಮೆಂಟ್‌ನ ಇತರ ಸಮುದಾಯಗಳಿಗೆ ಹೋಲಿಸಿದರೆ ಇವರ ಆರ್ಥಿಕ ಸ್ಥಿತಿಯು ಸ್ವಲ್ಪ ಸುಧಾರಿಸಿದೆ. ಮಾಂಗ್ ಗಾರುಡಿಗಳು ಎಮ್ಮೆ ಕೂದಲು ಕತ್ತರಿಸುವ ಕೆಲಸವನ್ನು ಮತ್ತು ನಗರ ಸಭೆಯ ಸ್ವಚ್ಛತೆಯ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ. ಕಂಜರಭಾಟರು ಜೀವನ ನಿರ್ವಹಣೆಗಾಗಿ ರದ್ದಿ ಆಯುವ ಕೆಲಸದಲ್ಲಿ ತೊಡಗಿದ್ದಾರೆ.

೫ ಅಂಬರನಾಥ : ಅಂಬರನಾಥವು ಠಾಣೆ ಜಿಲ್ಲೆಯಲ್ಲಿದೆ. ಇದರಲ್ಲಿ ಸುಮಾರು ೫೫೦ ಕುಟುಂಬಗಳು ನೆಲೆಸಿವೆ. ಕೈಕಾಡಿ, ಟಕಾರಿ, ರಜಪೂತ ಭಾಮ್ಟ ಕಂಜರಭಾಟ್ ಚಪ್ಪರಬಂದ, ರಾಮೋಶಿಗಳು ಕಂಡುಬರುತ್ತಾರೆ. ಇದರಲ್ಲಿ ಎಷ್ಟೋ ಕುಟುಂಬಗಳು ನಾಗಪುರ, ಸದರ ಬಜಾರ, ಶಾಸ್ತ್ರಿ ನಗರ, ಉದಯ ಸೊಸೈಟಿ ಮುಂತಾದೆಡೆ ಚದುರಿ ಹೋಗಿದ್ದಾರೆ. ಇದಲ್ಲದೆ ಸೊಲ್ಲಾಪುರ, ಗದಗ, ಬಿಜಾಪುರ, ಬೆಳಗಾವಿ, ಧಾರವಾಡ, ಧುಲೆ ಮುಂತಾದ ಸೆಟಲ್‌ಮೆಂಟ್‌ಗಳಿಗೂ ವಲಸೆ ಹೋಗಿದ್ದಾರೆ. ವಿಶೇಷವೆಂದರೆ ೪,೫ ಹರ್ ಕುಟುಂಬಗಳು ಅಂಬರನಾಥದಲ್ಲಿವೆ. ಇದರಲ್ಲಿ ಬಹಳಷ್ಟು ಜನ ಬಡಿಗೆತನ, ಕಲ್ಲು ಕೆಲಸ, ಎಮ್ಮೆ ಕೂದಲು ಬೋಳಿಸುವ ಕೆಲಸ, ಕೂಲಿಕಾರ್ಮಿಕ, ಬೂಟ್ ಪಾಲೀಷ್ ಮುಂತಾದ ಕೆಲಸಗಳಲ್ಲಿ ನಿರತರಾಗಿದ್ದಾರೆ. ಇವರೆಲ್ಲಾ ಬಹುತೇಕ ಗುಡಿಸಲಿನಲ್ಲಿದ್ದು ಬಡತನ, ಹಸಿವು ಮತ್ತು ಇತರ ಸಮುದಾಯ/ಸರ್ಕಾರಗಳ ನಿರ್ಲಕ್ಷ್ಯಕ್ಕೆ ಗುರಿಯಾಗಿ ಜೀವನ ಸಾಗಿಸುತ್ತಿದ್ದಾರೆ.

೬ ಉಂಡಿರಗೋಣ : ಉಂಡಿರಗೋಣ ಸೆಟಲ್‌ಮೆಂಟ್‌ನ ಅಹಮದಾನಗರ ಜಿಲ್ಲೆಯಲ್ಲಿ ಬರುತ್ತದೆ. ಇಲ್ಲಿಯ ಸೆಟಲ್‌ಮೆಂಟ್ ಜನತೆ ಸೊಲ್ಲಾಪುರದ ಸೆಟಲ್‌ಮೆಂಟ್‌ನಿಂದ ವರ್ಗಾವಣೆಗೊಂಡ ಜನರೇ ಆಗಿದ್ದಾರೆ. ಪ್ರಾಯಶಃ ಹರೆಗೋಣ ಸಕ್ಕರೆ ಕಾರ್ಖಾನೆ ಕಟ್ಟಡ ನಿರ್ಮಾಣಕ್ಕಾಗಿ ಇವರನ್ನು ಸೊಲ್ಲಾಪುರದಿಂದ ಈ ಸೆಟಲ್‌ಮೆಂಟ್‌ಗೆ ವರ್ಗಾವಣೆ ಮಾಡಲಾಗಿದೆ. ಸಕ್ಕರೆ ಕಾರ್ಖಾನೆಯಲ್ಲಿ ಕಸ ಹೊಡೆಯುವ ಮತ್ತು ಇತರ ಕೂಲಿಗಳಾಗಿ ಕಾರ್ಯನಿರ್ವಹಿಸುವುದನ್ನು ಕಾಣಬಹುದು. ಇಂದಿಗೂ ೬೦, ೭೦ ಕುಟುಂಬಗಳು ಇದೇ ಕೆಲಸ ನಿರ್ವಹಿಸುತ್ತಿದೆ.

೭ ಉಚಗೋನ : ಪಶ್ಚಿಮ ಮಹಾರಾಷ್ಟ್ರದಲ್ಲಿರುವ ಉಚಗೋನವನ್ನು ಚ.ಶಾಹು ಮಹಾರಾಜ (೧೮೬೪-೧೯೨೨) ಆಳ್ವಿಕೆ ನಡೆಸುತ್ತಿದ್ದರು. ರಾಜ್ಯದ ಪಶ್ಚಿಮ ಭಾಗವು ದಟ್ಟಾರಣ್ಯದಿಂದ ಕೂಡಿತ್ತು. ಇದರಲ್ಲಿ ಕ್ರೂರ ಮೃಗಗಳಿದ್ದು ಅವು ಬೆಳೆದ ಬೆಳೆಗಳೆಲ್ಲವನ್ನು ನಾಶಗೊಳಿಸುತ್ತಿದ್ದವು. ಅವುಗಳನ್ನು ನಿಯಂತ್ರಿಸಲು ಮತ್ತು ಅನಾಹುತಕಾರಿ ಕಾರ್ಯಗಳಲ್ಲಿ ತೊಡಗಬಾರದೆಂದು ಪಾಂಶಿ ಪಾರ್ಧಿಗಳಿಗೆ ಭೂಮಿಯನ್ನು ಮಂಜೂರು ಮಾಡಲಾಗಿತ್ತು. ಶಾಹು ಮಹಾರಾಜರು ಇವರನ್ನು ದರಬಾರಿನ ಬೇಟೆಗಾರರಾಗಿ ನೇಮಿಸಿಕೊಂಡಿದ್ದರು. ಇವರು ರಾಧನ್‌ಗಾರಿ ಡ್ಯಾಂನ ಕಟ್ಟಡ ಕೆಲಸದಲ್ಲಿ ಕೂಲಿಗಳಾಗಿಯೂ ಕಾರ್ಯನಿರ್ವಹಿಸುತ್ತಿದ್ದರು. ಜೊತೆಗೆ ಕಾವಲುಗಾರರಾಗಿ, ವೈಯಕ್ತಿಕ ಬೆಂಗಾವಲಿಗರಾಗಿಯೂ ಕಾರ್ಯನಿರ್ವಹಿಸುತ್ತಿದ್ದರು. ಪ್ರಸ್ತುತ ಸರ್ಕಾರವು ದೊಡ್ಡ ಪ್ರಮಾಣದಲ್ಲಿ ಪಾಂಶಿಪಾರ್ಧಿಗಳ ಭೂಮಿಯನ್ನು ಶಿವಾಜಿ ವಿಶ್ವವಿದ್ಯಾಲಯ ನಿರ್ಮಾಣಕ್ಕಾಗಿ

ಪಡೆಯಿತು. ಹೀಗಾಗಿ ಇವರ ಮಕ್ಕಳು ಟೆಕ್ಸ್‌ಟೈಲ್ಸ್ ಕೆಲಸಗಾರರಾಗಿ, ಮುನಿಸಿಪಾಲಿಟಿಯ ಕಸ ಬಳಿಯುವವರಾಗಿ (Sweepers) ಮತ್ತು ಕಟ್ಟಡ ನಿರ್ಮಾಣ ಕಾರ್ಯಗಳಲ್ಲಿ ತೊಡಗಿಕೊಂಡು ತಮ್ಮ ಹೊಸ ಜೀವನಶೈಲಿಗೆ ಹೊಂದಿಕೊಂಡಿದ್ದಾರೆ.

೮ ಗಧಿನ್‌ಗ್ಲಾಜ್ : ಕೊಲ್ಲಾಪುರ ಜಿಲ್ಲೆಯ ಗಧಿನ್‌ಗ್ಲಾಜ್ ಸೆಟ್ಲ್‌ಮೆಂಟ್ ರಾಜ್ಯಾಡಳಿತ ಪ್ರದೇಶದಲ್ಲಿ ನಿರ್ಮಿಸಲಾಗಿತ್ತು. ಇಲ್ಲಿಯ ಸೆಟ್ಲ್‌ಮೆಂಟ್‌ನ ಜನರ ಸಮಸ್ಯೆಗಳನ್ನು ಪರಿಹರಿಸಲೆಂದು ಪ್ರೊ. ವಿಠ್ಠಲ್ ಬನ್ನೆಯವರು ಚಳುವಳಿ ಹಮ್ಮಿಕೊಂಡರು. ಈ ಸೆಟ್ಲ್‌ಮೆಂಟ್ ಪ್ರದೇಶಕ್ಕೆ ಇಂದು ವಿಠ್ಠಲ್‌ಬನ್ನೆ ನಗರವೆಂದು ನಾಮಕರಣ ಮಾಡಲಾಗಿದೆ. ಇಲ್ಲಿಯ ಬಹುತೇಕ ಜನರು ಗುಡಿಸಲುಗಳಲ್ಲಿ ಜೀವನ ನಡೆಸುತ್ತಿದ್ದಾರೆ.

೯ ಕಾವಲನಾಕ (ಕೊಲ್ಲಾಪುರ ನಗರ) : ಈ ಸೆಟ್ಲ್‌ಮೆಂಟ್‌ನ್ನು ಕೊರಮ(ಕೋತಿ ಹಿಡಿಯುವವರು) ರ ಪುನರ್ವಸತಿಗಾಗಿ ನಿರ್ಮಿಸಲಾಯಿತು. ಶಾಹು ಮಹಾರಾಜರು ಕೊಲ್ಲಾಪುರದ ಹೊಸ ಪಾರಲೆನ್ಸ್ (New parlance) ಭಾಗದಲ್ಲಿ ಭೂಮಿ ಮಂಜೂರು ಮಾಡಿದ್ದರು. ಇವರು ಸೆಟ್ಲಮೆಂಟ್ ಸೇರಿದ ತರುವಾಯ ಕೂಲಿಕಾರ್ಮಿಕ ಕೆಲಸ ಮತ್ತು ವ್ಯಾಪಾರಗಳಲ್ಲಿ ತೊಡಗುವುದು ಹೇಗೆ ಎಂಬುದನ್ನು ಕಲಿಯತೊಡಗಿದರು ಮತ್ತು ಆ ಹುದ್ದೆಗಳಿಗೆ ತಮ್ಮನ್ನು ತೊಡಗಿಸಿಕೊಂಡರು. ಚ. ರಾಜಾರಾಮ್ ಸಿಲೆನೂರಿಯವರ ಕಾಲದಲ್ಲಿ ಪ್ರಸ್ತುತ ಸ್ಥಳಕ್ಕೆ ವರ್ಗಾಯಿಸಲ್ಪಟ್ಟರು. ಇಂದು ಇವರು ಕೂಲಿಕಾರ್ಮಿಕರಾಗಿ, ಮುಂಬಯಿ (Candy floss) ಮುನಿಸಿಪಲ್‌ಗಳ ತೋಟಿಗಳಾಗಿ ಮತ್ತು ಗುಮಾಸ್ತರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕೆಲವು ಜನ ಹಾದಿ ಬದಿಯ ವ್ಯಾಪಾರಿಗಳಾಗಿ ಮುಂದುವರೆದಿದ್ದಾರೆ. ಇನ್ನು ಕೆಲವರು ಕೋತಿ ಆಡಿಸುವವರಾಗಿದ್ದರೆ ಕೆಲವರು ಹಣಕಾಸಿನ ವ್ಯವಹಾರ ನಡೆಸುತ್ತಿದ್ದಾರೆ. ಆದರೆ ಬಹುತೇಕ ಜನ ನಿರ್ಲಕ್ಷತೆಗೆ ಒಳಗಾಗಿ ಬಡತನದ ಜೀವನ ಸಾಗಿಸುತ್ತಿದ್ದಾರೆ. ಇತ್ತೀಚೆಗೆ ಇವರ ಮಕ್ಕಳು ಶಾಲೆಗೆ ನಿರಂತರವಾಗಿ ಹೋಗುವುದನ್ನು ಕಾಣಬಹುದಾಗಿದೆ.

೧೦ ಈಚಲ ಕಾರಂಜಿ : ಬ್ರಿಟೀಶ್ ಆಡಳಿತ ಪ್ರಾರಂಭವಾಗುವವರೆಗೂ ಜಾಹಗಿರದಾರರ ದರಬಾರಿನ ಆಡಳಿತಕ್ಕೆ ಈ ಪ್ರದೇಶ ಒಳಗಾಗಿತ್ತು. ಬಟ್ಟೆ ತಯಾರಿಕೆ ಉದ್ದಿಮೆಯಲ್ಲಿ ಈ ನಗರ ತುಂಬಾ ಹೆಸರುವಾಸಿ, ಈ ಸೆಟಲ್‌ಮೆಂಟ್‌ನ್ನು ಕಂಜರಭಾಟರಿಗಾಗಿ (ನಾಲ ಉಪಜಾತಿ ಮತ್ತು ಬಾಗಡಿ) ನಿರ್ಮಿಸಲಾಯಿತು. ಇವರು ನಗರದ ಯಶವಂತನಗರ ಜೋಪಡ ಪಟ್ಟಿ, ಶಹಪುರ ಮಾಲ್ ಮತ್ತು ವಿಕ್ರಮ ನಗರಗಳು ಇದನ್ನು ಸುತ್ತುವರೆದಿವೆ. ಜೊತೆಗೆ ಸಹಕಾರಿ ಹೌಸಿಂಗ್ ಸೊಸೈಟಿಯು ಇದರ ಪಕ್ಕದಲ್ಲಿಯೇ ನಿರ್ಮಾಣಗೊಂಡಿದೆ. ಪುರುಷರು ನಾನಾ ಕೂಲಿ ಕೆಲಸಗಳಲ್ಲಿ ತೊಡಗಿದರೆ ಮಹಿಳೆಯರು ದಾರಿ ಬದಿಯ ವ್ಯಾಪಾರವನ್ನು ಮಾಡುತ್ತಾರೆ. ಎರಡನೆಯದಾಗಿ ಈ ಸಮುದಾಯದ ಜನ ಬಿಕ್ಷಾಟನೆಯನ್ನು ವೃತ್ತಿಯಾಗಿಸಿಕೊಂಡಿದ್ದಾರೆ. ಮತ್ತು ರದ್ದಿಯನ್ನು ಆಯುತ್ತಾರೆ. ನಂತರದ ಭತ್ತದ ಕಟಾವು ಆದ ತರುವಾಯ ಗದ್ದೆಗಳಲ್ಲಿ ಭತ್ತವನ್ನು ಆಯುವ ಕೆಲಸವನ್ನು ಮಾಡುತ್ತಾರೆ. ಕೊರವಿಗಳು ಕೊರವಿ ಗಲ್ಲಿಯಲ್ಲಿ ವಾಸಿಸುತ್ತಿದ್ದಾರೆ. ಇವರಲ್ಲಿ ಕೆಲವರು ಬಟ್ಟೆ ಉದ್ದಿಮೆಯಲ್ಲಿ ನೇಕಾರರಾಗಿ ಮತ್ತು ಅದಕ್ಕೆ ಸಂಬಂಧಿಸಿದ ಕಾರ್ಯಗಳಲ್ಲಿ ನಿರತರಾಗಿದ್ದಾರೆ. ಇನ್ನು ಕೆಲವರು ತಮ್ಮ ಸಾಂಪ್ರದಾಯಿಕ ವೃತ್ತಿಯಾದ ಬಿದಿರುಪುಟ್ಟಿ ತಯಾರಿಕೆಯಲ್ಲಿ

ತೊಡಗಿರುವುದನ್ನು ಕಾಣಬಹುದು. ಕೊರವಿಗಳಲ್ಲಿಯ ಬಹುತೇಕ ಮನೆಗಳು ಹಂಚಿನ ಮೇಲ್ಛಾವಣಿ ಹೊಂದಿವೆ. ಕೆಲವು ಆರ್.ಸಿ.ಸಿ ಮನೆಗಳನ್ನು ಕಾಣಬಹುದು. ಕೊರವಿಗಳು ಬಟ್ಟೆ ತಯಾರಿಕೆ ಮತ್ತು ನೇಯ್ಗೆ ಕೆಲಸಗಾರರ ಸಹಕಾರಿ ಸಂಘಗಳನ್ನು ನಿರ್ಮಿಸಿಕೊಂಡಿದ್ದಾರೆ. ಬಹುತೇಕವಾಗಿ ಕೊರವಿಗಳು ಅಭಿವೃದ್ಧಿ ಹೊಂದುತ್ತಿರುವುದನ್ನು ಕಾಣಬಹುದಾಗಿದೆ.

೧೧ **ದೊಂಡೈಚ (ದುಲೆ ಜಿಲ್ಲೆ) :** ದೊಂಡೈಚ ನಗರದಲ್ಲಿ ಕಂಜರಭಾಟರಿಗಾಗಿ ನಿರ್ಮಿಸಿದ ಸೆಟಲ್‌ಮೆಂಟ್ ಕಾಣಬಹುದು. ಇದು ಬಿರ್ಲಾ ಭವನ ಮತ್ತು ಶಿವಾಜಿ ಪಟ್ಟಣ ಮತ್ತು ಮಿಷನ್ ಬಂಗ್ಲಾ ಪಕ್ಕದಲ್ಲಿದೆ. ಇವರು ಬಹುತೇಕವಾಗಿ ಇಡೀ ವರ್ಷ ಕೂಲಿ ಕೆಲಸಗಳಲ್ಲಿ ತೊಡಗಿರುತ್ತಾರೆ. ಸುಗ್ಗಿ ಕಾಲದಲ್ಲಿ ಬಿಕ್ಷಾಟನೆ ಮಾಡುತ್ತಾರೆ. ಇತ್ತೀಚೆಗೆ ೩,೪ ಕುಟುಂಬಗಳಿಗೆ ಭೂಮಿ ಮಂಜೂರಾಗಿದೆ. ಬಹುತೇಕವಾಗಿ ಇವರು ಒಣ ಭೂಮಿ ಬೇಸಾಯ ಮಾಡುತ್ತಾರೆ. ಇವರಲ್ಲಿ ಬಹುಪಾಲು ಜನ ಗುಡಿಸಲು ಮತ್ತು ತಾತ್ಕಾಲಿಕ ಡೇರೆಗಳಲ್ಲಿ ಜೀವನ ಸಾಗಿಸುವುದನ್ನು ಕಾಣಬಹುದಾಗಿದೆ.

ಕಾರ್ಯ ನಿರ್ವಹಿಸುವ ಅಪರಾಧಿ ಬುಡಕಟ್ಟುಗಳ ವಸಾಹತುಗಳು

ಆಡಳಿತಕ್ಕೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಪ್ರದೇಶವಾಗಿ ವಿಂಗಡಿಸಲಾಗಿತ್ತು. ಅವುಗಳನ್ನು

೧ **ದಕ್ಷಿಣ ವಲಯ (ಪ್ರಾಂತ)ದಲ್ಲಿ :** ಹುಬ್ಬಳ್ಳಿ, ಗದಗ, ಬೆಳಗಾವಿ, ಖಾನಾಪುರ ಮತ್ತು ನಿರ್ಬಂಧಿತವಲ್ಲದ ಹುಬ್ಬಳ್ಳಿ, ಗದಗ, ಬೆಳಗಾವಿ, ಖಾನಪುರ ಸೆಟಲ್‌ಮೆಂಟ್‌ಗಳಿದ್ದವು.

೨ **ಮಧ್ಯವಲಯದಲ್ಲಿ :** ನಿರ್ಬಂಧಿತ ವಸಾಹತು ಸೊಲ್ಲಾಪುರ, ನೀರಾ ಪ್ರಾಜೆಕ್ಟ್, ಬಿಜಾಪುರ, ಬಾಗಲಕೋಟ, ಸೊಲ್ಲಾಪುರ, ಹೊಟಗಿ, ಇಂಡಿ, ಬಿಜಾಪುರ, ಅಕಲುಜ್, ಮಲಶಿರಸ್‌ನ ನಿರ್ಬಂಧಿತವಲ್ಲದ ಸೆಟಲ್‌ಮೆಂಟ್‌ಗಳು ಸೇರಿದ್ದವು.

೩ **ಉತ್ತರ ವಲಯ :** ಜಲಗಾಂವ, ಧುಲೆ, ಅಹಮದಾಬಾದ್‌ನ ನಿರ್ಬಂಧಿತವಲ್ಲದ ಸೆಟಲ್‌ಮೆಂಟ್‌ಗಳು ಇದ್ದವು.

೪ **ಗೃಹ ಇಲಾಖೆ :** ನಿರ್ಬಂಧಿತ ಸೆಟಲ್‌ಮೆಂಟಂಗಳಾದ ಮುಂಧೆವಾ, ಬಾರಾಮತಿ, ಅಂಬರನಾಥ ಮತ್ತು ನಿರ್ಬಂಧಿತವಲ್ಲದ ಸೆಟಲ್‌ಮೆಂಟ್‌ಗಳು ಬಾರಾಮತಿ, ಅಂಬರನಾಥ, ಉಂಡಿಗೋವ್‌ಗಳಾಗಿದ್ದವು.

೫ **ವಿಮುಕ್ತ ಬುಡಕಟ್ಟುಗಳು :** ಬ್ರಿಟೀಷ್ ಆಡಳಿತಕ್ಕೆ ಒಳಪಟ್ಟ ಭಾರತದಲ್ಲಿ ಕೆಲವು ಸಮುದಾಯಗಳನ್ನು ಅಪರಾಧಿ ಬುಡಕಟ್ಟುಗಳೆಂದು ಗುರುತಿಸಿ ಅವರಿಗಾಗಿಯೇ ನಿರ್ಮಿಸಿದ ವಸಾಹತುಗಳಲ್ಲಿ ಅವರನ್ನು ಇರಿಸಲಾಗಿತ್ತು. ಆದರೆ ಸ್ವಾತಂತ್ರ್ಯ ತರುವಾಯ ಭಾರತದ ಮೊದಲ ಪ್ರಧಾನಿಯಾದ ಜವಾಹರಲಾಲ್ ನೆಹರೂರವರು ೧೯೫೨ರಲ್ಲಿ ಸಾಂಕೇತಿಕವಾಗಿ ಸೆಟ್ಲ್‌ಮೆಂಟಿನ ಮುಳ್ಳುತಂತಿಯನ್ನು ಕತ್ತರಿಸಿ ಸೆಟ್ಲ್‌ಮೆಂಟ್‌ಗಳಲ್ಲಿ ನೆಲೆಸಿದ ಅಪರಾಧಿ ಬುಡಕಟ್ಟುಗಳನ್ನು ಮುಕ್ತಗೊಳಿಸಿದರು. ಈ ರೀತಿಯಾಗಿ ವ್ಯವಸ್ಥೆಯ ಕಟ್ಟುಪಾಡುಗಳಿಂದ ಮುಕ್ತವಾದ ಬುಡಕಟ್ಟುಗಳೇ ೧೯೫೨ರ ತರುವಾಯ ವಿಮುಕ್ತ ಬುಡಕಟ್ಟುಗಳೆಂದು ಗುರುತಿಸಲಾಯಿತು. (ಬ್ಲಾಕ್‌ಸ್ಮಿತ್ ಕೆ ಆರ್:೧೯೭೮:೫೦)

ರಾಷ್ಟ್ರೀಯ ವಿಮುಕ್ತ ಅಲೆಮಾರಿ ಮತ್ತು ಅರೆ ಅಲೆಮಾರಿ ಬುಡಕಟ್ಟು

ಆಯೋಗವು ೧೪-೦೩-೨೦೦೫ ರಂದು ಸಂಘಟಿತಗೊಂಡಿತು. ೨೦-೧೧-೨೦೦೬ ರಂದು ವಿಮುಕ್ತ ಬುಡಕಟ್ಟು ಅಧ್ಯಯನ ಸಮಿತಿಯು ತನ್ನ ವರದಿಯನ್ನು ಎರಡು ಸಂಪುಟಗಳಲ್ಲಿ ಆಯೋಗಕ್ಕೆ ಸಲ್ಲಿಸಿತು. ಆ ವರದಿಯ ವಿಮುಕ್ತ ಬುಡಕಟ್ಟುಗಳ ಕುರಿತು ಹಲವಾರು ಶಿಫಾರಸ್ಸುಗಳನ್ನು ಮಾಡಿದೆ.

ವಿಮುಕ್ತ ಬುಡಕಟ್ಟು ಎನ್ನುವುದಕ್ಕೆ ವರದಿಯಲ್ಲಿ ನೀಡಿರುವ ವ್ಯಾಖ್ಯೆ ಈ ಕೆಳಗಿನಂತಿದೆ:

೧. ಯಾವ ರೀತಿ ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಜಾತಿ ಸಮುದಾಯಗಳಿಗೆ ಒಂದು ಸೂಚಿ ಇದೆಯೇ ಹಾಗೆಯೇ ವಿಮುಕ್ತ ಬುಡಕಟ್ಟುಗಳಿಗಾಗಿ ಒಂದು ಸೂಚಿ ಎಂಬುದಿಲ್ಲ. ಭಾರತದಲ್ಲಿ ಬ್ರಿಟೀಷ್ ಆಡಳಿತದಲ್ಲಿ ಅಧಿಸೂಚಿತ ಅಪರಾಧಿ ಬುಡಕಟ್ಟುಗಳ ಪಟ್ಟಿಯೊಂದನ್ನು ಸಿದ್ಧಗೊಳಿಸಲಾಗಿತ್ತು. ಸ್ವತಂತ್ರ ಭಾರತದಲ್ಲಿ ಆನಂತರ ಈ ಪಟ್ಟಿಯಲ್ಲಿನ ಕೆಲವು ಸಮುದಾಯಗಳು ಪರಿಶಿಷ್ಟ ಪಂಗಡ, ಪರಿಶಿಷ್ಟ ಜಾತಿ ಹಾಗೂ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡವು. ಆದಾಗ್ಯೂ ಕೆಲವು ಸಮುದಾಯಗಳು ಈ ಎಲ್ಲಾ ಸೂಚಿಗಳಿಂದ ಹೊರಗುಳಿಯಲ್ಪಟ್ಟವು.

೨. ವಸಹಾತುಶಾಹಿ ಕಾಲಘಟ್ಟದಲ್ಲಿ ೧೮೭೧ ಹಾಗೂ ಅದರ ನಂತರ ಕ್ರಿಮಿನಲ್ ಟ್ರೈಬ್ ಆಕ್ಟ್‌ನ ಅಡಿಯಲ್ಲಿ ಪಟ್ಟಿ ಮಾಡಲಾದ ಸಮುದಾಯಗಳನ್ನು ಅಥವಾ ಗುಂಪುಗಳನ್ನು ೧೯೫೦ರ ನಂತರದಲ್ಲಿ ವಿಮುಕ್ತಗೊಳಿಸಲಾಯಿತು. ಇಂದು ಭಾರತದ ಯಾವುದೇ ಪ್ರದೇಶದಲ್ಲಿ ಕಾಣಸಿಗುವ ಇವರನ್ನು ವಿಮುಕ್ತ ಬುಡಕಟ್ಟು ಎಂದು ವ್ಯಾಖ್ಯಾನಿಸುವುದು.

೩. ವಿಮುಕ್ತ ಬುಡಕಟ್ಟುಗಳ ಪ್ರಮಾಣ ಬದ್ಧ ಸೂಚಿಯನ್ನು ಭಾರತ ಸರ್ಕಾರ ನೇಮಿಸಿದ ಅಯ್ಯಾಂಗಾರ್ ಸಮಿತಿಯು ತಯಾರಿಸಿತು. (ಆರ್.ಎನ್. ೨೨/೦೧/೪೯ ಪೋಲಿಸ್ ೦೧ ದಿನಾಂಕ ೨೮.೦೯.೧೯೪೯ ರ ಪ್ರಕಾರ ಸ್ಥಾಪನೆಗೊಂಡ ಸಮಿತಿ) ಇದನ್ನೇ ಅಧಿಕೃತ ಪಟ್ಟಿಯೆಂದು ಪರಿಗಣಿಸುವುದು (ಸಂ: ಮೇತ್ರಿ ಕೆ ಎಂ, ಚಲುವರಾಜ್:೨೦೦೭: ೧೩೨)

ಈ ರೀತಿ ಪರಿಗಣಿತವಾದ ಸಮುದಾಯಗಳು ಯಾವುವೆಂದರೆ;

ಪರಿಶಿಷ್ಟ ಜಾತಿಗಳಲ್ಲಿ ಬರುವ ವಿಮುಕ್ತ ಬುಡಕಟ್ಟುಗಳು

೧ ಆದಿ ದ್ರಾವಿಡ, ೨ ಬಂಜಾರ, ಲಂಬಾಣಿ, ಲಮಾನಿ, ಸುಗಾಲಿ, ಸುಕಾಲಿ ೩ ದೋಮ್, ದೊಂಬರ್, ಪೈದಿ, ಪಾನೊ, ೪ ಗಂಟಿ ಚೋರ್ಸ್ ೫ ಹಂಡಿ ಜೋಗೀಸ್ ೬ ಕೇಪ್‌ಮಾರಿಸ್ ೭ ಕೊರಚ, ಕೊರಚರ ೮ ಮಾಲ ೯ ಮಾಂಗ ಗಾರುಡಿ

ಪರಿಶಿಷ್ಟ ಪಂಗಡಗಳಲ್ಲಿ ಬರುವ ವಿಮುಕ್ತ ಬುಡಕಟ್ಟುಗಳು

೧ ಭಿಲ್ ೨ ಪಾರ್ಧಿ, ಅಡ್ವಿಚಿಂಚೇರ್, ಫಾನ್ಸೆ ಪಾರ್ಧಿ, ಹರಣ ಶಿಕಾರಿ

ಹಿಂದುಳಿದ ವರ್ಗಗಳಲ್ಲಿ ಬರುವ ಸಮುದಾಯಗಳು

೧ ಬೈರಾಗಿ, ಬವಾನಿ, ಬಾವಾ, ೨ ಬೇಡರು, ೩ ಬೆರಿಯ, ೪ ಭಾಮ್ಟಾ, ೫ ಚಾರಾ, ಛಾರ, ಛಾರಾ ೬ ಘಿಸಾಡಿ, ೭ ಜ್ಯೋಗಿ, ಜೋಗೇರ, ಸನಜ್ಯೋಗಿ, ೮ ಕಂಜರಭಾಟ, ೯ ಕಂಜರಿ, ಕಂಜರ್, ೧೦

ಮಸಣಜ್ಯೋಗಿ, ೧೧ ನಟ್, ೧೨ ಗುಜರ್, ೧೩ ಮರವರ್(ಮಲ್ಲಿಕಾರ್ಜುನ ಮಾನ್ಪಡೆ, ಕೊರಮ:೨೦೦೮- ಮೇತ್ರಿ ಕೆ ಎಂ ಪ್ರಸ್ತಾವನೆ).

ಕರ್ನಾಟಕದ ಸೆಟ್ಲ್‌ಮೆಂಟಗಳು ಮತ್ತು ಅದರಲ್ಲಿ ಪ್ರಸ್ತುತ ನೆಲೆನಿಂತ ವಿಮುಕ್ತ ಬುಡಕಟ್ಟುಗಳು

೧ ಹುಬ್ಬಳ್ಳಿ : ಕರ್ನಾಟಕದಲ್ಲಿರುವ ಒಟ್ಟು ಸೆಟ್ಲ್‌ಮೆಂಟ್‌ಗಳಲ್ಲಿ ಹುಬ್ಬಳ್ಳಿಯ ಸೆಟ್ಲ್‌ಮೆಂಟ್ ದೊಡ್ಡದು. ಈ ಸೆಟ್ಲ್‌ಮೆಂಟ್‌ನಲ್ಲಿ ಕೊರಮ, ಗಂಟಿಚೋರ್, ಭೋವಿ, ಪಾರ್ಧಿ, ಕಂಜರಭಾಟ, ಚಪ್ಪರಬಂದ್, ಸಮುದಾಯಗಳನ್ನು ಕಾಣಬಹುದಾಗಿದೆ.

೨ ಗದಗ : ಕರ್ನಾಟಕದ ಎರಡನೇ ಅತೀ ದೊಡ್ಡ ಸೆಟ್ಲ್‌ಮೆಂಟ್ ಇದಾಗಿದೆ. ಗದಗಿನ ಪಕ್ಕದಲ್ಲಿಯೇ ಇರುವ ಬೆಟಗೇರಿ ಪ್ರದೇಶದಲ್ಲಿರುವ ಈ ಸೆಟ್ಲ್‌ಮೆಂಟ್‌ನಲ್ಲಿ ಕೊರಮ, ಗಂಟಿಚೋರ, ಚಪ್ಪರಬಂದ್, ಕಂಜರಭಟ್, ಪಾರ್ಧಿ ಸಮುದಾಯಗಳು ಕಂಡುಬರುತ್ತವೆ.

೩ ಬಿಜಾಪುರ : ಬಿಜಾಪುರದ ಸೆಟ್ಲ್‌ಮೆಂಟ್‌ನಲ್ಲಿ ಹರಣಶಿಕಾರಿ, ಗಂಟಿಚೋರ, ಚಪ್ಪರ್‌ಬಂದ, ಸಮುದಾಯಗಳು ಕಂಡುಬರುತ್ತವೆ. ಕಂಜರಭಾಟ ಮತ್ತು ಕೊರಮ ಮತ್ತು ಮಾಂಗ್ ಗಾರುಡಿಗಳು ಮೊದಲಿಗೆ ಇಲ್ಲಿದ್ದು ಅವರ ತರುವಾಯ ಬೇರೆ ಕಡೆ ಹೋಗಿ ನೆಲೆಸಿರುವುದು ತಿಳಿದುಬರುತ್ತದೆ.

೪ ಬಾಗಲಕೋಟೆ : ಬಾಗಲಕೋಟೆ ಸೆಟ್ಲ್‌ಮೆಂಟ್‌ನಲ್ಲಿ ಕೊರಮ, ಗಂಟಿಚೋರ್, ಚಪ್ಪರಬಂದ್, ಪಾರ್ಧಿಗಳು ಕಂಡುಬರುತ್ತಾರೆ.

೫ ಗೋಕಾಕ್ ಫಾಲ್ಸ್ : ಈ ಸೆಟ್ಲ್‌ಮೆಂಟ್‌ನಲ್ಲಿ ಕೊರಮ ಮತ್ತು ಗಂಟಿಚೋರ್ ಸಮುದಾಯಗಳು ಕಂಡುಬರುತ್ತದೆ.

೬ ದಾಂಡೇಲಿ : ಈ ಸೆಟ್ಲ್‌ಮೆಂಟ್‌ನಲ್ಲಿ ಪ್ರಸ್ತುತ ಗಂಟಿಚೋರ್ ಸಮುದಾಯ ಮಾತ್ರ ಕಂಡುಬರುತ್ತದೆ. ಹಿಂದೆ ಕಂಜರಭಾಟರಿದ್ದುದು ತಿಳಿದುಬರುವುದಾದರೂ ಅವರು ಇಂದು ಸೆಟ್ಲ್‌ಮೆಂಟ್ ಹೊರಗೆ ಹಳೆ ದಾಂಡೇಲಿಯಲ್ಲಿ ನೆಲೆ ನಿಂತಿರುವುದು ಕಂಡುಬರುತ್ತದೆ.

ಗ್ರಂಥಋಣ

೧. ಪ್ರಭಾಕರ ಎ.ಎಸ್., ಕರ್ನಾಟಕದ ಡೊಂಬರು, ೨೦೦೭, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಮಹಾಶ್ವೇತಾ ದೇವಿ (ಅನು:ಸುಜ್ಞಾನಮೂರ್ತಿ ಬಿ) ಯಾರದೀ ಕಾಡು,: ಸಿ ವಿ ಜಿ ಪಬ್ಲಿಕೇಶನ್ಸ್: ಬೆಂಗಳೂರು: ೨೦೦೩.

೩. ವೆಂಕಟರಂಗೋ ಕಟ್ಟಿ : ಗೆಜೆಟಿಯರ್; ಮುಂಬೈ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು: ಮುಂಬೈ ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೊ: ೧೮೮೩)

4. Hardiman, david, The coming of the Devi – Adivasi Assertion in western India, O U P, New Delhi :1987.

5. Malli Gandhi; De notified Tribes: Demensions of change: Kanishka publishers: New Delhi: 2008.

6. CTA Enquiry committee report of 1911, Madras 1912, pp.1-2,

೭. Home judicial department ,G.O. No 101,dated 15th january 1917. Government central press, Andhra pradesh : 1917.

8 Semhadri Y C : Ex-Criminal T ribes of India : National Publishing House, New Delhi, 1990.

9. Criminal Classes in the Bombay Presidency: Government central press, Bombay : 1908.

10 . Home judicial department , special G.O. No 2900, Government of Madras :1952

11. Anantha krisna iyer k: The Mysore Tribes and Castes: Vol.III: Mittal publication, New delhi : 1998.

೧೨. ಚಂದ್ರಶೇಖರ ಕಂಬಾರ: ಜಾನಪದ ವಿಶ್ವಕೋಶ: ಕನ್ನಡ ಸಾಹಿತ್ಯ ಪರಿಷತ್ತು: ಬೆಂಗಳೂರು: ೧೯೮೫

13. Aparna rao, Michael j casimir: Movements of peoples, Nomads in India, sociology and sociological anthropology, mumbai : 2003.

14. Blacksmith K R : Nomadic Tribes and social work in India: cambridge university press, cambridge: 1978.

15 . Devy G N:Budhan:DNT Rights Group,Vadodara:April-June, 2001.

೧೬. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಾತಿ/ ಸಿಂಧುತ್ವ ಪ್ರಮಾಣ ಪತ್ರ ನೀಡುವ ಕುರಿತು ಹೊರಡಿಸಲಾದ ಪ್ರಮುಖ ಆದೇಶಗಳ ಸಂಗ್ರಹ- ೧೯೫೦ರಿಂದ ೨೦೦೯: ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.)

೧೭. ಮಹಾರಾಷ್ಟ್ರದ ವಿಮುಕ್ತ ಬುಡಕಟ್ಟು ಜಾತಿಗಳ ಪಟ್ಟಿ, (ಸರ್ಕಾರದ ಅನುಸೂಚಿ, ಶಿಕ್ಷಣ ಮತ್ತು ಸಮಾಜಕಲ್ಯಾಣ ಇಲಾಖೆ) ಸಂ.ಸಿ.ಬಿ.ಸಿ. ೧೯೬೧, ದಿನಾಂಕ ೨೧, ನವ್ಹೆಂಬರ್ ೧೯೬೧

೧೮. ಮೇತ್ರಿ ಕೆ ಎಂ, ಚಲುವರಾಜು (ಸಂ): ಬುಡಕಟ್ಟು ಅಧ್ಯಯನ, ಪ್ರಸಾರಾಂಗ, ಕ.ವಿ.ವಿ. ಹಂಪಿ: ೨೦೦೭.

೧೯. ಮೇತ್ರಿ ಕೆ ಎಂ(ಸಂ), ಮಲ್ಲಿಕಾರ್ಜುನ ಬಿ ಮಾನ್ಪಡೆ,(ಲೇ), ಕೊರಮ: ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು: ೨೦೦೮

ಅಧ್ಯಾಯ ಮೂರು

ಭೌಗೋಳಿಕ ಸ್ವರೂಪ ಮತ್ತು ಜನಸಂಖ್ಯೆ

ವಿಮುಕ್ತ ಬುಡಕಟ್ಟುಗಳು ನೆಲೆಸಿರುವ ಸೆಟ್ಲ್‌ಮೆಂಟ್‌ಗಳು

ಅಪರಾಧಿ ಬುಡಕಟ್ಟು ವಸಾಹತುಗಳು ಜನಸಂಖ್ಯಾ ವಿವರ

ಅಧ್ಯಾಯ ಮೂರು

ಭೌಗೋಳಿಕ ಸ್ವರೂಪ ಮತ್ತು ಜನಸಂಖ್ಯೆ

ಕರ್ನಾಟಕದಲ್ಲಿ ಒಟ್ಟು ಹತ್ತು ಸೆಟ್ಲ್‌ಮೆಂಟ್‌ಗಳನ್ನು ಗುರುತಿಸಲಾಗುತ್ತಿದೆ. ಇವುಗಳಲ್ಲಿ ಕೆಲವು ಸೆಟ್ಲ್‌ಮೆಂಟ್‌ಗಳು ಕೇವಲ ತಮ್ಮ ಪಳಿಯುಳಿಕೆಗಳನ್ನು ಮಾತ್ರ ಉಳಿಸಿ ನಾಮಾವಶೇಷವಾಗಿದೆ. ಇನ್ನೂ ಕೆಲವು ಸೆಟ್ಲ್‌ಮೆಂಟ್‌ಗಳು ಇಂದಿಗೂ ಜೀವಂತವಾಗಿವೆ. ಅವುಗಳನ್ನು ಎರಡು ವಿಧದಲ್ಲಿ ವಿಂಗಡಿಸಬಹುದು.

ವಿಮುಕ್ತ ಬುಡಕಟ್ಟುಗಳು ನೆಲೆಸಿರುವ ಸೆಟ್ಲ್‌ಮೆಂಟ್‌ಗಳು

೧ ಬಾಗಲಕೋಟ

೨ ಬಿಜಾಪುರ

೩ ದಾಂಡೇಲಿ

೪ ಗದಗ

೫ ಗೋಕಾಕ್ ಫಾಲ್ಸ್

೬ ಹುಬ್ಬಳ್ಳಿ

ವಿಮುಕ್ತ ಬುಡಕಟ್ಟುಗಳು ನೆಲೆಸಿರದ ಸೆಟ್ಲ್‌ಮೆಂಟ್‌ಗಳು

೧ ಬಳ್ಳಾರಿ ೨ ಬೆಳಗಾವಿ ೩ ಇಂಡಿ ೪ ಖಾನಾಪುರ

ಈ ರೀತಿಯಾಗಿ ವಿಮುಕ್ತ ಬುಡಕಟ್ಟುಗಳು ನೆಲೆ ನಿಲ್ಲಲು ಹಾಗೂ ನೆಲೆ ನಿಲ್ಲದೇ ಇರಲು ಇರುವ ಕಾರಣಗಳು ಹೀಗಿವೆ.

೧. ಸಾಮಾನ್ಯವಾಗಿ ಸೆಟ್ಲ್‌ಮೆಂಟ್‌ನಲ್ಲಿರಿಸಿದ್ದ ಸಮುದಾಯಗಳು ಅಲೆಮಾರಿತನವನ್ನು ಮೈಗೂಡಿಸಿ ಕೊಂಡಿದ್ದ ಬುಡಕಟ್ಟುಗಳಾಗಿವೆ.

೨. ಇವು ತಮ್ಮ ಮೂಲ ವೃತ್ತಿಯನ್ನು ಅರಸಿಕೊಂಡು ಬೇರೆ ಸ್ಥಳಕ್ಕೆ ವಲಸೆ ಹೋಗಿರುವ ಸಾಧ್ಯತೆಗಳಿವೆ. ಜೀವನ ನಿರ್ವಹಣೆ ಮಾಡಲು ಈ ಸಮುದಾಯಗಳು ಸ್ಥಳೀಯವಾದ ಕಾರ್ಖಾನೆಗಳು, ಕಟ್ಟಡ ಕೆಲಸ, ಬಡಿಗೆತನ ಇತ್ಯಾದಿಗಳನ್ನು ನೆಚ್ಚಿಕೊಂಡಿದ್ದವು. ಸಾಮಾನ್ಯವಾಗಿ ಯಾವುದೋ ಕಾರಣಕ್ಕೆ ಕಾರ್ಖಾನೆಗಳು ಮುಚ್ಚಿದರೆ ಕೆಲಸ ಕಳೆದುಕೊಂಡ ಸೆಟ್ಲ್‌ಮೆಂಟ್ ಜನ ಗೋವಾ, ಮಹಾರಾಷ್ಟ್ರದ ಮುಂಬೈ, ಪುಣೆ ಮುಂತಾದ ಕಡೆ ವಲಸೆ ಹೋಗುವುದು ಸಹಜ.

ಬಾಗಲಕೋಟೆ

ಬಾಗಲಕೋಟವು ಕರ್ನಾಟಕದ ಒಂದು ಜಿಲ್ಲಾ ಕೇಂದ್ರವಾಗಿದೆ. ಮೊದಲಿಗೆ ಬಿಜಾಪುರ ಜಿಲ್ಲೆಯೊಳಗಿನ ಒಂದು ತಾಲೂಕು ಕೇಂದ್ರವಾಗಿತ್ತು. ತರುವಾಯ ಆಡಳಿತ ದೃಷ್ಟಿಯಿಂದ ೧೯೯೭ ರಲ್ಲಿ ಜಿಲ್ಲಾ ಕೇಂದ್ರವಾಗಿ ಮಾರ್ಪಟ್ಟಿತು. ಬಾಗಲಕೋಟ ಜಿಲ್ಲೆಯು ಬೆಳಗಾವಿ, ಗದಗ, ಕೊಪ್ಪಳ, ರಾಯಚೂರು, ಬಿಜಾಪುರಗಳೊಂದಿಗೆ ತನ್ನ ಗಡಿಯನ್ನು ಹೊಂದಿದೆ. ಐತಿಹಾಸಿಕ ಪ್ರಸಿದ್ಧಿಯ ಬಾದಾಮಿ, ಪಟ್ಟದಕಲ್ಲು, ಐಹೊಳೆ, ಕೂಡಲಸಂಗಮಗಳು ಇದೇ ಜಿಲ್ಲೆಯೊಳಗೆ ಬರುತ್ತವೆ. ಈ ಜಿಲ್ಲೆಯೊಳಗೆ ಘಟಪ್ರಭಾ, ಮಲಪ್ರಭಾ ಮತ್ತು ಕೃಷ್ಣಾ ನದಿಗಳು ಹರಿಯುತ್ತವೆ.

ಸಮುದ್ರ ಮಟ್ಟದಿಂದ ಸುಮಾರು ೭೪೭ ಮೀಟರ್ ಎತ್ತರದಲ್ಲಿರುವ ಬಾಗಲಕೋಟ ಜನಸಂಖ್ಯೆಯು ೨೦೦೧ರ ಜನಗಣತಿ ಪ್ರಕಾರ ಒಟ್ಟು ೧೬,೫೧,೯೨೨ರಷ್ಟಿದೆ. (html://G:/giograpic/bagalkot.mht) ಬಾಗಲಕೋಟ ನಗರವು ಒಂದು ಕಡೆ ಆಲಮಟ್ಟಿ ಅಣೆಕಟ್ಟು ಹಿನ್ನೀರಿನಿಂದ ಆವೃತವಾಗಿದೆ. ಬಾಗಲಕೋಟನ ದಕ್ಷಣ ಭಾಗಕ್ಕೆ ಸಕ್ರಿ ಹೈಸ್ಕೂಲ್‌ನಿಂದ ಹಿಡಿದು ಶಕ್ತಿ ಟಾಕೀಸ್ ಮತ್ತು ವಾಸವಿ ಟಾಕಿಸ್‌ಗಳ ಮಧ್ಯ ಭಾಗದಲ್ಲಿ ಸೆಟ್ಲ್‌ಮೆಂಟ್ ಹರಡಿಕೊಂಡಿದೆ. ಸೆಟ್ಲ್‌ಮೆಂಟು ಸುಮಾರು ೧೧.೨೪ ಎಕರೆ ವಿಸ್ತಾರವಿರುವುದಾಗಿ ಸ್ಥಳೀಯ ವಕ್ತೃಗಳು ತಿಳಿಸುತ್ತಾರೆ. ಈ ಸೆಟ್ಲ್‌ಮೆಂಟ್‌ನಲ್ಲಿ ಚಪ್ಪರ್‌ಬಂದ, ಪಾರ್ಧಿ, ಗಂಟಿಚೋರ, ಕೊರಮ ಸಮುದಾಯಗಳು ಕಂಡುಬರುತ್ತವೆ. ಪ್ರಾಯಶಃ ಹಿಂದೆ ಘಿಸಾಡಿ ಸಮುದಾಯವು ಸೆಟ್ಲ್‌ಮೆಂಟ್‌ನಲ್ಲಿದ್ದು ನಂತರದಲ್ಲಿ ಅದು ಸೆಟ್ಲ್‌ಮೆಂಟ್ ತೊರೆದು ನಗರದ ಬೇರೆ ಕಡೆ ವಲಸೆ ಹೋಗಿರಬೇಕೇನೊ. ಬಾಗಲಕೋಟ ಸೆಟ್ಲ್‌ಮೆಂಟ್‌ನಲ್ಲಿ ಪಾರ್ಧಿ ಸಮುದಾಯವೇ ಅತಿ ಹೆಚ್ಚಾಗಿದೆ. ಪಾರ್ಧಿಗಳ ಕುಟುಂಬಗಳು ೨೫೫ ರಷ್ಟಿದೆ. ಗಂಟಿಚೋರ ೪೯ ಮನೆಗಳು, ಚಪ್ಪರಬಂದ್ ೩೮ ಮನೆಗಳು, ಕೊರಮ ೩ ಮನೆಗಳು ಕಂಡುಬರುತ್ತವೆ. ಹಿಂದೆ ಗಂಟಿಚೋರರ ಮನೆಗಳು ಸುಮಾರು ಮುನ್ನೂರರ ಮೇಲ್ಪಟ್ಟಿದ್ದವು. ಸ್ವಾತಂತ್ರ್ಯದ ನಂತರ ಅವರೆಲ್ಲಾ ಬೇರೆ ಬೇರೆ ಕಡೆ ಚದರಿ ಹೋಗಿರುವುದರಿಂದ ಕೇವಲ ೪೯ ಕುಟುಂಬಗಳು ಮಾತ್ರ ಪ್ರಸ್ತುತ ಸೆಟ್ಲ್‌ಮೆಂಟ್‌ನಲ್ಲಿ ನೆಲೆಸಿರುವುದನ್ನು ಕಾಣಬಹುದು.

ಪ್ರಸ್ತುತ ಖಾಸಗಿ ಆಸ್ಪತ್ರೆಗಳು ಸೆಟ್ಲ್‌ಮೆಂಟ್‌ಗೆ ಹೊಂದಿಕೊಂಡಂತೆ ಇವೆ. ಅಂಗನವಾಡಿ ಕೇಂದ್ರ ಇದ್ದು ಸ್ವಂತ ಕಟ್ಟಡ ಇಲ್ಲ. ಸೆಟ್ಲ್‌ಮೆಂಟ್‌ನಲ್ಲಿ ದಂಡಿನ ದುರ್ಗಮ್ಮನ ಪಾದಗಟ್ಟಿ, ಒಂದು ಮಸೀದಿ ಮತ್ತು ಒಂದು ಚರ್ಚ್ ಕಂಡುಬರುತ್ತವೆ.

ನೀರಿನ ವ್ಯವಸ್ಥೆಗೆ ಸಂಬಂಧಿಸಿದಂತೆ ಮೊದಲು ಎರಡು ಬಾವಿಗಳಿದ್ದುವಾದರೂ ಇತ್ತೀಚೆಗೆ ಅವುಗಳ ಬಳಕೆ ತಪ್ಪಿ ಹೋಗಿದೆ. ಪರಿಸರದ ದೃಷ್ಟಿಯಿಂದ ಈ ಜನರು ಹೆಚ್ಚು ಸ್ವಚ್ಛತೆಯ ಕಡೆ ಗಮನ ಹರಿಸುತ್ತಿಲ್ಲವಾದ್ದರಿಂದ ಕೊಳಚೆ ಪ್ರದೇಶದಂತೆ ಕಂಡುಬರುತ್ತದೆ. ಕೆಲವೇ ಕೆಲವು ಕುಟುಂಬಗಳಿಗೆ ಮಾತ್ರ ವೈಯಕ್ತಿಕ ಶೌಚಾಲಯದ ಸೌಲಭ್ಯವಿದೆ. ಇನ್ನುಳಿದಂತೆ ಮಹಿಳೆಯರಿಗೆ ಮತ್ತು ಪುರುಷರಿಗಾಗಿ ಒಂದು ಸಾರ್ವಜನಿಕ ಶೌಚಾಲಾಯ ನಿರ್ಮಿಸಲಾಗಿತ್ತು. ಹಣಕೊಟ್ಟು ಬಳಕೆ ಮಾಡಬೇಕಿತ್ತು ಅದು ಕೂಡ ಇತ್ತೀಚೆಗೆ ಮುಚ್ಚಿದ್ದು ಈಗ ಅಲ್ಲಿ-ಇಲ್ಲಿ ಬಯಲಿಗೆ ಹೋಗಬೇಕಾಗಿದೆ. ಆಲಮಟ್ಟಿ ಹಿನ್ನೀರಿನ ಕಡೆ ಸ್ವಚ್ಛತೆಗಾಗಿ ಸಾಗುತ್ತಾರೆ. ಈ ಸೆಟ್ಲ್‌ಮೆಂಟ್‌ನ ಜನ ಹೆಚ್ಚು ಕಡಿಮೆ ಬಡತನ ರೇಖೆಗಿಂತ ಕೆಳಗಿನವರೇ ಆಗಿದ್ದಾರೆ.

ಬಿಜಾಪುರ

ಕರ್ನಾಟಕ ರಾಜ್ಯದ ಒಂದು ಜಿಲ್ಲಾ ಕೇಂದ್ರವಾಗಿದೆ. ಬಿಜಾಪುರವು ಬೆಂಗಳೂರಿನಿಂದ ಉತ್ತರ ಪಶ್ಚಿಮಕ್ಕೆ ೫೩೦ ಕಿ.ಮೀನಷ್ಟು ದೂರವಿದೆ. ಈ ಜಿಲ್ಲೆಯಲ್ಲಿ ೫ ನದಿಗಳು ಹರಿಯುವುದರಿಂದ ಈ ಪ್ರದೇಶವನ್ನು ಪಂಚನದಿಗಳ ಬೀಡು ಎಂದು ಕರೆಯುತ್ತಾರೆ. ಐದು ನದಿಗಳು ಜಿಲ್ಲೆಯೊಳಗೆ ಹಾದು ಹೋದರೂ ನೀರಿನ ಅಭಾವದಿಂದ ಜಿಲ್ಲೆ ಬಳಲುತ್ತಿರುವುದನ್ನು ಕಾಣಬಹುದು.

ಬಿಜಾಪುರದ ಪುರಾತನ ಹೆಸರು ವಿಜಯಪುರವೆಂದು, ವಿಜಯಪುರವು ಕಲ್ಯಾಣಿ ಚಾಲುಕ್ಯರಿಂದ ೧೦-೧೧ನೇ ಶತಮಾನದಲ್ಲಿ ಸ್ಥಾಪಿತವಾಯಿತು. ೧೩ನೇ ಶತಮಾನದ ಕೊನೆಗೆ ದೆಹಲಿ ಖಿಲ್ಜಿ ಸುಲ್ತಾನರ ಆಡಳಿತಕ್ಕೆ ಒಳಪಟ್ಟಿತು. ಕ್ರಿ.ಶ.೧೩೪೭ರಲ್ಲಿ ಬೀದರಿನ ಬಹುಮನಿ ಸುಲ್ತಾನರು ಆಳ್ವಿಕೆ ನಡೆಸಿದರು. ೧೫೧೮ರಲ್ಲಿ ಬಹಮನಿ ಸುಲ್ತಾನರ ಆಳ್ವಿಕೆ ಪ್ರಾರಂಭಗೊಂಡಿತು.

೧೬೮೬ರಲ್ಲಿ ಮೊಘಲರ ಅರಸ ಔರಂಗಜೇಬನು ಈ ಪ್ರದೇಶವನ್ನು ಗೆದ್ದನು. ಕ್ರಿ.ಶ. ೧೭೨೪ರಲ್ಲಿ ಬಿಜಾಪುರವು ಹೈದರಾಬಾದಿನ ನಿಜಾಮನ ಆಳ್ವಿಕೆಗೆ ಒಳಪಟ್ಟಿತು. ೧೭೬೦ರಲ್ಲಿ ನಿಜಾಮರನ್ನು ಸೋಲಿಸಿದ ಮರಾಠರು ಬಿಜಾಪುರವನ್ನು ತಮ್ಮ ಕೈವಶ ಮಾಡಿಕೊಂಡರು.

೧೮೦೮ರಲ್ಲಿ ೩ನೇ ಆಂಗ್ಲ-ಮರಾಠ ಯುದ್ಧ ನಡೆಯಿತು ಇದರಲ್ಲಿ ಮರಾಠರು ಸೋತ ತರುವಾಯ ಬಿಜಾಪುರವನ್ನು ಈಸ್ಟ್ ಇಂಡಿಯಾ ಕಂಪನಿಗೆ ಹಸ್ತಾಂತರಗೊಂಡಿತು. ೧೮೪೮ರಲ್ಲಿ ಬಿಜಾಪುರವನ್ನು ಮುಂಬೈ ಪ್ರಾಂತ್ಯಕ್ಕೆ ಸೇರಿಸಲಾಯಿತು.

೧೮೫೮ರಲ್ಲಿ ಬಿಜಾಪುರವನ್ನು ಜಿಲ್ಲಾಡಳಿತ ಪ್ರದೇಶವಾಗಿ ಮಾಡಲಾಯಿತು. ಬಿಜಾಪುರ ಜಿಲ್ಲೆಯನ್ನು ಮುಂಬೈ ರಾಜ್ಯಕ್ಕೆ ಸೇರಿಸಲಾಗಿತ್ತು. ೧೯೫೬ರಲ್ಲಿ ಆಗಿನ ಮೈಸೂರು ರಾಜ್ಯಕ್ಕೆ ಮರಳಿ ಸೇರಿಸಲಾಯಿತು.

ಬಿಜಾಪುರವು ಸಮುದ್ರಮಟ್ಟದಿಂದ ೭೭೦ ಮೀಟರ್ ಎತ್ತರದಲ್ಲಿದೆ. ೨೦೦೧ರ ಜನಗಣತಿ ಪ್ರಕಾರ ೧೮,೦೮,೮೬೩ರಷ್ಟಿದೆ. ಜಿಲ್ಲೆಯ ಒಟ್ಟು ವಿಸ್ತೀರ್ಣ ೧೦,೫೪೧ ಚ.ಕಿ.ಮೀಗಳಷ್ಟಿದೆ. ಬಿಜಾಪುರ ಜಿಲ್ಲೆಯ ಪೂರ್ವಕ್ಕೆ ಗುಲ್ಬರ್ಗಾ ಜಿಲ್ಲೆ, ದಕ್ಷಿಣಕ್ಕೆ ರಾಯಚೂರು ಜಿಲ್ಲೆ, ದಕ್ಷಿಣ-ಪಶ್ಚಿಮಕ್ಕೆ ಬಾಗಲಕೋಟ, ಪಶ್ಚಿಮಕ್ಕೆ

ಬೆಳಗಾವಿ, ಉತ್ತರ–ಪಶ್ಚಿಮಕ್ಕೆ ಮಹಾರಾಷ್ಟ್ರದ ಸಾಂಗಲಿ ಜಿಲ್ಲೆಗಳ ಗಡಿಗಳಿಂದ ಆವೃತಗೊಂಡಿದೆ. (html: file//G:/giograpic/bijapur.mht)

ಬಿಜಾಪುರವು ರೈಲು ಸಂಪರ್ಕವನ್ನು ಒಳಗೊಂಡಿದೆ. ಬೆಂಗಳೂರು ಮತ್ತು ಮುಂಬೈಗೆ ಸಂಪರ್ಕ ಕಲ್ಪಿಸಲು ರಾಷ್ಟ್ರೀಯ ಹೆದ್ದಾರಿ ಇದೆ. ಬಿಜಾಪುರದಲ್ಲಿ ಬಾರಕಮಾನ್, ಜಗತ್ಪ್ರಸಿದ್ಧ ಗೋಲುಗುಂಬಜ್ ಮುಂತಾದ ಪ್ರೇಕ್ಷಣೀಯ ಸ್ಥಳಗಳಿವೆ.

ಗೋಲ್‌ಗುಂಬಜ್‌ನ ಮುಂಭಾಗಕ್ಕೆ ಅದರ ಬಲಭಾಗದಲ್ಲಿ ಸ್ವಲ್ಪ ಅಂತರದಲ್ಲಿಯೇ ಸೆಟ್ಲಮೆಂಟಿದೆ. ಬಿಜಾಪುರದಲ್ಲಿ ಒಟ್ಟು ೨ ಸೆಟ್ಲಮೆಂಟ್‌ಗಳಿದ್ದು, ಅವುಗಳಲ್ಲಿ ಒಂದು ನಿರ್ಬಂಧಿತ ಸೆಟ್ಲಮೆಂಟ್ ಮತ್ತೊಂದು ನಿರ್ಬಂಧಿತವಲ್ಲದ ಸೆಟ್ಲಮೆಂಟ್‌ಗಳಾಗಿವೆ. ಬೇರೆ ಸೆಟ್ಲಮೆಂಟ್‌ಗಳಲ್ಲಿ ಹೆಚ್ಚು-ಕಡಿಮೆ ಎರಡು ಸೆಟ್ಲಮೆಂಟ್‌ಗಳು ಒಂದೇ ಕಡೆ ಕಂಡುಬರುತ್ತವೆ. ಆದರೆ ಬಿಜಾಪುರದಲ್ಲಿ ಈ ಎರಡು ಸೆಟ್ಲಮೆಂಟ್‌ಗಳು ಸ್ವಲ್ಪ ಅಂತರದಲ್ಲಿಯೇ ಪ್ರತ್ಯೇಕವಾಗಿವೆ. ಇಂದು ನಿರ್ಬಂಧಿತ ಸೆಟ್ಲಮೆಂಟ್‌ನಲ್ಲಿ ಜೈಲು ಮತ್ತು ಬಾಲ ಮಂದಿರಗಳು ಕಂಡುಬರುತ್ತವೆ.

ಈ ಸೆಟ್ಲಮೆಂಟ್‌ನಲ್ಲಿ ಗಂಟಿಚೋರ, ಪಾರ್ಧಿ, ಚಪ್ಪರಬಂದ್ ಸಮುದಾಯಗಳು ಕಂಡುಬರುತ್ತವೆ. ಅದರಲ್ಲೂ ಪಾರ್ಧಿ ಸಮುದಾಯವೇ ಸಂಖ್ಯಾ ಬಲದಿಂದ ತುಂಬಾ ಹೆಚ್ಚು ಕುಟುಂಬಗಳನ್ನು ಒಳಗೊಂಡಿದೆ. ಇದರ ನಂತರ ಗಂಟಿಚೋರ ಸಮುದಾಯ, ಚಪ್ಪರಬಂದ್ ಸಮುದಾಯಗಳನ್ನು ಇಲ್ಲಿ ಕಾಣಬಹುದಾಗಿದೆ.

ಬಿಜಾಪುರ ಸೆಟ್ಲಮೆಂಟ್‌ಗೆ ಹೊಂದಿಕೊಂಡಂತೆ ಚರ್ಚ್ ಹಾಗೂ ನಂ. ೪ ಮತ್ತು ೫೧ನೇ ನಂಬರಿನ ಶಾಲೆಗಳು ಕಂಡುಬರುತ್ತವೆ. ಈ ಶಾಲೆಗಳನ್ನು ಬ್ರಿಟೀಷ್ ಆಡಳಿತವೇ ನಿರ್ಮಿಸಿದ್ದಿತು. ಜೊತೆಗೆ ಆಸ್ಪತ್ರೆಯೊಂದಿಗೆ ಬಲಮಂದಿರವಿದೆ. ಇಲ್ಲಿಯ ನಿವಾಸಿಗಳು ತಮ್ಮ ಆರಾಧನಾ ದೈವಗಳ ದೇವಾಲಯಗಳನ್ನು ಸೃಷ್ಟಿಸಿಕೊಂಡಿದ್ದಾರೆ. ಇವುಗಳಲ್ಲಿ ಪ್ರಮುಖವಾದವುಗಳೆಂದರೆ ಹನುಮಂತ ದೇವರ ಗುಡಿ, ಸಿಂಧೂರೇಶ್ವರ ದೇವಸ್ಥಾನ ಈ ದೇವರನ್ನು ಪೂಜಿಸಲು ಇತ್ತೀಚೆಗೆ ಬ್ರಾಹ್ಮಣ ಪೂಜಾರಿಯನ್ನು ನೇಮಿಸಲಾಗಿದೆ. ದಂಡಿನ ದುರ್ಗಮ್ಮನ ಪಾದಗಟ್ಟಿ, ಮರುಗಮ್ಮನ ಗುಡಿ ಮತ್ತು ಎರಡು ಮಸೀದಿಗಳು ಕಂಡುಬರುತ್ತವೆ.

ಸೆಟ್ಲಮೆಂಟ್ ನಿವಾಸಿಗಳಲ್ಲಿ ಯುವಕರು ಕೆಲವು ಸಂಘ ಸಂಸ್ಥೆಗಳನ್ನು ಹುಟ್ಟು ಹಾಕಿಕೊಂಡಿದ್ದಾರೆ. ಅವುಗಳು ಶ್ರೀ ಕಾಳಿಕಾದೇವಿ ತರುಣ ಸಂಘ, ಹರಿಣಶಿಕಾರಿ ಸೇವಾಸಂಘಗಳು, ಗಂಟಿಚೋರ ಸಮಾಜ ಸೇವಾಸಂಘಗಳು ಮುಖ್ಯವಾಗಿವೆ. ಈ ಸೆಟ್ಲಮೆಂಟಿಗಾಗಿ ಮೊದಲು ಆಟದ ಮೈದಾನವಿದ್ದು, ಇತ್ತೀಚೆಗೆ ನಗರಸಭೆ ಮತ್ತು ಇತರ ಜನ ಆಟದ ಮೈದಾನವನ್ನು ಆಕ್ರಮಿಸಿಕೊಂಡಿರುವುದು ಕಂಡುಬರುತ್ತದೆ.

ಪಾರ್ಧಿ ಸಮುದಾಯದ ಕೆಲವು ಕುಟುಂಬಗಳು ಮಾತ್ರ ವೈಯಕ್ತಿಕ ಶೌಚಾಲಯಗಳನ್ನು ಒಳಗೊಂಡಿವೆ. ಅವುಗಳ ಹೊರತಾಗಿ ಶೇ ೯೯ರಷ್ಟು ಪಾರ್ಧಿಗಳಿಗೆ ವೈಯಕ್ತಿಕ ಶೌಚಾಲಯಗಳಿಲ್ಲ. ಬಹುತೇಕ ಅವರೆಲ್ಲಾ ಶೌಚ ಕಾರ್ಯಗಳಿಗಾಗಿ ಹೊರಗಡೆ ಬಯಲು ಪರದೇಶಗಳನ್ನೇ ಆಶ್ರಯಿಸಿದ್ದಾರೆ. ತರುವಾಯ ಗಂಟಿಚೋರ, ಚಪ್ಪರಬಂದರಿಗೆ ಶೇಕಡ ೫೦ ರಷ್ಟು ಕುಟುಂಬಗಳಿಗೆ ವೈಯಕ್ತಿಕ ಶೌಚಾಲಯಗಳಿವೆ. ಇವರಿಗಾಗಿ ನಗರ ಸಭೆ ಸಮುದಾಯ ಶೌಚಾಲಯವನ್ನು ನಿರ್ಮಿಸಿದೆಯಾದರೂ ಅದರ ಬಳಕೆ ತುಂಬಾ ಅತ್ಯಲ್ಪವಾಗಿ ಆಗುತ್ತಿದೆ.

ಕುಡಿಯುವ ನೀರಿಗಾಗಿ ಸಾರ್ವಜನಿಕ ನಳವನ್ನೇ ಆಶ್ರಯಿಸಬೇಕಾಗಿದೆ. ಅದರಲ್ಲೂ ಸೆಟ್ಲಮೆಂಟ್ ಜನ ಕುಡಿಯುವ ನೀರಿನ ಕೊರತೆಯಿಂದ ಬಳಲುತ್ತಿದ್ದಾರೆ. ಜೊತೆಗೆ ಡ್ರೈನೇಜ್‌ಗಳ ವ್ಯವಸ್ಥೆ ಸೆಟ್ಲಮೆಂಟ್‌ನಲ್ಲಿದ್ದರೂ ಅದನ್ನು ಸಮರ್ಪಕವಾಗಿ ಸ್ವಚ್ಛಗೊಳಿಸುವ ಕಾರ್ಯ ನಡೆಯುತ್ತಿಲ್ಲ. ಜೊತೆಗೆ ತಾವಿರುವ ಪ್ರದೇಶವನ್ನು ಸ್ವಚ್ಛವಾಗಿರಿಸಿಕೊಳ್ಳಬೇಕೆಂಬ ಪ್ರಜ್ಞೆಯು ಇಲ್ಲಿಯ ನಿವಾಸಿಗಳಲ್ಲಿ ಬಹಳಷ್ಟು ಜನರಿಗೆ ಇಲ್ಲವಾಗಿದೆ. ಹೀಗಾಗಿ ಸೆಟ್ಲಮೆಂಟ್ ನಗರದ ಮತ್ತೊಂದು ಕೊಳಚೆ ಪ್ರದೇಶವೆಂಬಂತೆ ಕಂಡುಬರುತ್ತದೆ.

ದಾಂಡೇಲಿ

ಕಾರವಾರ ಜಿಲ್ಲೆಯ ತಾಲೂಕು ಕೇಂದ್ರವಾದ ದಾಂಡೇಲಿ ಸಹ್ಯಾದ್ರಿ ಪರ್ವತಶ್ರೇಣಿ ಮತ್ತು ದಟ್ಟವಾದ ಕಾಡಿನಿಂದ ಕೂಡಿದ ನಾಡಾಗಿದೆ. ಹುಬ್ಬಳ್ಳಿಯನ್ನು ಆಕ್ರಮಿಸಿ ತಮ್ಮ ಹಿಡಿತವನ್ನು ಸಾಧಿಸಿದ್ದ ಈಸ್ಟ್ ಇಂಡಿಯಾ ಕಂಪನಿಯು ದಾಂಡೇಲಿಯನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡಿತು. ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರಿಗಳು ದಾಂಡೇಲಿ ದಟ್ಟ ಅರಣ್ಯದಿಂದ ಆಕರ್ಷಿತರಾದರು. ತಮ್ಮ ಕಟ್ಟಡಗಳು ಮತ್ತು ರೈಲು ಹಳಿಗಳ ಕೆಳಗೆ ಹಾಕಲ್ಪಡುವ ಕಟ್ಟಿಗೆಯ ತೊಲೆಗಳಿಗೆ ದಾಂಡೇಲಿಯ ಕಾಡನ್ನು ಈ ಅಧಿಕಾರಿಗಳು ಆಶ್ರಯಿಸಿದ್ದರು. ಹೀಗಾಗಿ ದಾಂಡೇಲಿಯಲ್ಲಿ ಒಂದು ಕಟ್ಟಿಗೆ ಕೊಯ್ಯುವ ಮಿಲ್ಲನ್ನು ಹಾಕಿದರು. ಮತ್ತು ಆ ಕಟ್ಟಿಗೆ ಮಟ್ಟವನ್ನು ಸಾಗಣೆ ಮಾಡುವ ಉದ್ದೇಶದಿಂದ ರೈಲು ಮಾರ್ಗವನ್ನು ದಾಂಡೇಲಿಗೆ ಅಳವಡಿಸಿದರು.

ಕಾಡಿನಲ್ಲಿಯ ಮರಗಳನ್ನು ಕೊಯ್ಯಲು ಮತ್ತು ಶ್ರಮದಾಯಿಕ ಕೆಲಸಗಳನ್ನು ನಿರ್ವಹಿಸಲು ಬುಡಕಟ್ಟುಗಳನ್ನು ಈಸ್ಟ್ ಇಂಡಿಯಾ ಕಂಪನಿ ಬಳಸಿಕೊಂಡಿತು. ತಮ್ಮ ಕಾರ್ಯಚಟುವಟಿಕೆಗಳಿಗೆ ಅವಶ್ಯವಾದ ಬುಡಕಟ್ಟು ಜನರನ್ನು ಇಡುವ ಉದ್ಧೇಶದಿಂದ ದಾಂಡೇಲಿಯಲ್ಲಿ ಒಂದು ಸೆಟ್ಲಮೆಂಟ್‌ನ್ನು ಹುಟ್ಟುಹಾಕಿದರು. ಹುಬ್ಬಳ್ಳಿಯ ಸೆಟ್ಲಮೆಂಟ್ ಹುಟ್ಟಿದ ಕಾಲದಲ್ಲಿಯೇ ದಾಂಡೇಲಿಯ ಸೆಟ್ಲಮೆಂಟ್ ಹುಟ್ಟಿತು ಎಂಬುದನ್ನು ವಕ್ತೃಗಳು ತಿಳಿಸುತ್ತಾರೆ. ಕಟ್ಟಿಗೆಗಾಗಿ ಮರಗಳನ್ನು ಕೊಯ್ಯುವ ಕೆಲಸ ಮಾತ್ರವಲ್ಲದೆ ಬ್ರಿಟೀಷ್‌ರ ಪ್ಲೇವುಡ್ ಕಾರ್ಖಾನೆ, ಪೇಪರ್ ಮಿಲ್‌ಗಳಲ್ಲಿಯೂ ಈ ಸಮುದಾಯದ ಜನಗಳು ಕೂಲಿ ಕಾರ್ಮಿಕರಾಗಿ ಕಾರ್ಯನಿರ್ವಹಿಸಬೇಕಾಗಿತ್ತು.

ಹಳೆಯ ದಾಂಡೇಲಿಯ ರೈಲ್ವೆ ಸ್ಟೇಷನ್ ಪಕ್ಕಾದಲ್ಲಿಯೇ ಸೆಟ್ಲಮೆಂಟ್ ಕಂಡುಬರುತ್ತದೆ. ಅದನ್ನು ಈಗ ಗಣೇಶಗಲ್ಲಿ, ಗಣೇಶ ಚೌಕಿ ಮುಂತಾದ ಹೆಸರುಗಳಿಂದ ಗುರುತಿಸಲಾಗುತ್ತದೆ. ಇತ್ತೀಚಿನ ದಶಕಗಳಲ್ಲಿ ರೈಲ್ವೆ ಸಂಚಾರ ಸ್ಥಗಿತಗೊಂಡಿದೆ. ಹೀಗಾಗಿ ರೈಲ್ವೆ ಸ್ಟೇಷನನ್ನು ಕಟ್ಟಿಗೆ ಶೇಖರಣಾ ಕೇಂದ್ರವಾಗಿಸಲಾಗಿದೆ.

ಬ್ರಿಟೀಷರು ಹುಟ್ಟುಹಾಕಿದ ಕಟ್ಟಿಗೆ ಮಿಲ್‌ನ್ನು (ಷಾ ಮಿಲ್) ಸ್ವಾತಂತ್ರ್ಯ ನಂತರ ರಾಜ್ಯ ಸರ್ಕಾರವು ತನ್ನ ಹಿಡಿತಕ್ಕೆ ತೆಗೆದುಕೊಂಡಿದೆ. ಆ ಷಾಮಿಲ್ಲನ್ನು KSFIC ಷಾಮಿಲ್ಲೆಂದು ಕರೆಯಲಾಗುತ್ತದೆ.

೧೯೩೩ರಲ್ಲಿ ಬ್ರಿಟೀಷ್ ಸರ್ಕಾರವು ಸೆಟ್ಲಮೆಂಟ್ ಮಕ್ಕಳಿಗಾಗಿಯೇ ಪ್ರಾಥಮಿಕ ಶಾಲೆಯೊಂದನ್ನು ಪ್ರಾರಂಭಿಸಿತ್ತು. ಆದರೆ ಸೆಟ್ಲಮೆಂಟಿನ ಇತ್ತೀಚಿನ ಯುವಕರು ಸ್ಪೋರ್ಟ್ಸ್‌ಕ್ಲಬ್ ಮುಂತಾದ ಸಂಘ-ಸಂಸ್ಥೆಗಳನ್ನು ರಚಿಸಿಕೊಂಡಿದ್ದಾರೆ.

ಗಂಟಿಚೋರ, ಪಾರ್ಧಿ, ಕಂಜರಭಾಟ, ಕೊರಮ ಮುಂತಾದವು ಮೊದಲಿಗೆ ಸೆಟ್ಲಮೆಂಟಿನಲ್ಲಿ ನೆಲೆಸಿದ್ದವು. ಆದರೆ ಇಂದು ಗಂಟಿಚೋರರ ಮನೆಗಳು ಮಾತ್ರ ಇಲ್ಲಿ ಕಂಡುಬರುತ್ತವೆ. ಈ ಸೆಟ್ಲಮೆಂಟ್ ಮೂಲಭೂತ ಸೌಲಭ್ಯಗಳನ್ನು ಪಡೆಯುವಲ್ಲಿ ಬಹುತೇಕವಾಗಿ ಸೋತಿದೆ ಎಂದೇ ಹೇಳಬಹುದು.

ಗದಗ ಸೆಟ್ಲ್‌ಮೆಂಟ್

ಕರ್ನಾಟಕದ ಪ್ರಸ್ತುತ ಸೆಟ್ಲ್‌ಮೆಂಟ್‌ಗಳಲ್ಲಿ ಗದಗ ಸೆಟ್ಲ್‌ಮೆಂಟ್ ಎರಡನೆಯ ದೊಡ್ಡ ಸೆಟ್ಲ್‌ಮೆಂಟ್. ಗದಗ ಮೊದಲಿಗೆ ಧಾರವಾಡ ಜಿಲ್ಲೆಯ ಒಂದು ಮುಖ್ಯ ತಾಲೂಕು ಕೇಂದ್ರವಾಗಿತ್ತು. ಇತ್ತೀಚೆಗಷ್ಟೇ ಕರ್ನಾಟಕ ಸರ್ಕಾರ ಆಡಳಿತದ ದೃಷ್ಟಿಯಿಂದ ಹೆಚ್ಚುವರಿ ಜಿಲ್ಲೆಗಳನ್ನು ರೂಪಿಸಿದಾಗ ಗದಗ ಜಿಲ್ಲೆಯಾಗಿ ಮಾರ್ಪಾಟುಗೊಂಡಿತು. ಗದಗ ನಗರದ ಒಂದು ಭಾಗವಾಗಿ ಗದಗಿಗೆ ಹೊಂದಿಕೊಂಡಂತೆ ಬೆಟಗೇರಿ ಇದೆ. ಗದಗ ಮತ್ತು ಬೆಟಗೇರಿಗಳ ಮಧ್ಯ ರೈಲ್ವೆ ಹಳಿ ಹಾದುಹೋಗುತ್ತದೆ.

ಗದಗ ನಗರವು ರಾಜ್ಯದ ರಾಜಧಾನಿ ಬೆಂಗಳೂರಿನಿಂದ ೪೩೧ ಕಿ.ಮೀ ದೂರವಿದೆ. ಹಾಗೂ ಧಾರವಾಡದಿಂದ ೮೦ ಕಿ.ಮೀ ದೂರದಲ್ಲಿದೆ. ಹಾಗೇ ಗದಗಿನ ಹೊರವಲಯದಲ್ಲಿ ದಕ್ಷಿಣ ಭಾಗಕ್ಕೆ ಭೀಷ್ಮ ಕೆರೆ ಎಂಬ ಹೆಸರಿನ ಪ್ರಾಚೀನ ಕೆರೆ ಇದೆ. ಈ ಕೆರೆ ಇಂದು ಯಾವುದೇ ನೀರಾವರಿಗೂ ಬಳಕೆಗೊಳ್ಳುತ್ತಿಲ್ಲ. ಗದುಗಿಗೆ ತುಂಬಾ ಹಿಂದೆ 'ಕೃತಪುರ' (ವಿಕಿ ಪೀಡಿಯಾ- P- 1/2) ಎಂಬ ಹೆಸರಿದ್ದುದಾಗಿ ತಿಳಿದುಬರುತ್ತದೆ. ನಗರದ ಉತ್ತರ ಭಾಗಕ್ಕೆ ಗದುಗಿನ ರೈಲ್ವೆ ಸ್ಟೇಷನ್ನಿಗೆ ಹೊಂದಿಕೊಂಡಂತೆ ಬೆಟಗೇರಿ ಪ್ರದೇಶದಲ್ಲಿ ಸುಮಾರು ೧೦೦ ಎಕರೆಯಷ್ಟು ವಿಸ್ತಾರದಲ್ಲಿ ಸೆಟ್ಲ್‌ಮೆಂಟ್ ಇದೆ. ಸೆಟ್ಲ್‌ಮೆಂಟ್‌ಗೆ ಗಾಂಧಿ ನಗರವೆಂದು ಮರು ನಾಮಕರಣ ಮಾಡಲಾಗಿದೆ. ರೈಲ್ವೆ ಸ್ಟೇಷನ್ನಿನಿಂದ ಸ್ವಲ್ಪ ಕೆಳ ಭಾಗಕ್ಕೆ ಬೆಟಗೇರಿ ಕಡೆಗೆ ಸಾಗಿದರೆ ಮೊದಲಿಗೆ ಸಿಗುವುದೇ ಸೆಟ್ಲ್‌ಮೆಂಟ್‌ನ ಹಾಕಿ ಆಟದ ಮೈದಾನ. ತುರುವಾಯ ಅದರ ಮುಂದಕ್ಕೆ ಆಶ್ರಮ ಶಾಲೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಸತಿ ನಿಲಯ, ಸೆಟ್ಲ್‌ಮೆಂಟ್‌ನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು, ಬಂಧೀಖಾನೆ, ಬಾಲ ಮಂದಿರಗಳಿವೆ. ಸೆಟ್ಲ್‌ಮೆಂಟ್ ಜನರ ಆರೋಗ್ಯ ತಪಾಸಣೆಗಾಗಿಯೇ ಬ್ರಿಟೀಷ್ ಆಡಳಿತದಲ್ಲಿದ್ದ ಆಸ್ಪತ್ರೆಯೊಂದು ಇಂದು ಸರಕಾರಿ ಆಯುರ್ವೇದಿಕ್ ಆಸ್ಪತ್ರೆ ಆಗಿ ಉಳಿದಿದೆ. ಇಂದು ಅಂಗನವಾಡಿ ಕೇಂದ್ರಗಳು, ಜೊತೆಗೆ ಸೆಟ್ಲ್‌ಮೆಂಟ್ ಮೇಲ್ವಿಚಾರಣೆಯನ್ನು ಮಾಡುತ್ತಿದ್ದ ಮಿಷನರಿಗಳು ಹುಟ್ಟುಹಾಕಿರುವ ರೋಮನ್ ಕ್ಯಾಥೋಲಿಕ್ ಚರ್ಚ್ ಇದೆ. ಇದೇ ಚರ್ಚ್ ಹುಟ್ಟು ಹಾಕಿರುವ ಸೈಂಟ್‌ಜಾನ್ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಸೆಟ್ಲ್‌ಮೆಂಟ್‌ನ ಪ್ರದೇಶಗಳಲ್ಲಿ ಕಂಡುಬರುತ್ತವೆ. ಹಾಗೆ ಸೆಟ್ಲ್‌ಮೆಂಟ್ ಪ್ರದೇಶದಲ್ಲಿಯೇ ಖಾಸಗಿ ಶಿಕ್ಷಣ ಸಂಸ್ಥೆಯೊಂದು ಹುಟ್ಟು ಹಾಕಿರುವ ಲೋಹಿಲಾ ಕಾನ್ವೆಂಟ್ ಸ್ಕೂಲ್ ಕೂಡ ಇದೆ. ಇವುಗಳಲ್ಲದೆ ಸೆಟ್ಲ್‌ಮೆಂಟ್‌ನಲ್ಲಿ ವಾಸಿಸುವ ಜನರೇ ಹುಟ್ಟುಹಾಕಿಕೊಂಡಿರುವ ಶ್ರಮಜೀವಿ ಕಲ್ಯಾಣಕೇಂದ್ರ, ಶ್ರೀ ಹನುಮಾನ್ ಬ್ಲೆಸಿಂಗ್ ಸ್ಪೋರ್ಟ್ಸ್ ಕ್ಲಬ್, ಕೊರಮರ ಸಂಘ, ಗಂಟಿಚೋರ ಸೇವಾಸಂಘ ಮುಂತಾದ ಸಂಘ-ಸಂಸ್ಥೆಗಳನ್ನು ಸೆಟ್ಲ್‌ಮೆಂಟ್‌ಗಳಲ್ಲಿ ಕಾಣಬಹುದು.

ಗದಗ ಸೆಟ್ಲ್‌ಮೆಂಟ್‌ನಲ್ಲಿ ೧೯೪೨ರಲ್ಲಿ ಹನುಮಪ್ಪ ದೇವರ ಗುಡಿ, ದಂಡಿನ ದುರ್ಗಮ್ಮನ ಪಾದಕಟ್ಟೆ, ಪಾರ್ಧಿಗಳ ತುಳುಜಾ ಭಾವಾನಿ ಮತ್ತು ಸಾತ್ ದೈವಗಳ ಬಯಲು, ಗುಡಿಗಳು, ಚಪ್ಪರಬಂದ ಸಮುದಾಯವು ನಮಾಜ್ ಮಾಡಲೆಂದೇ ಇತ್ತೀಚೆಗಷ್ಟೇ ರೂಪಿಸಿಕೊಂಡಿರುವ ಮಸೀದಿ ಹಾಗೂ ಪಂಜಾಗಳನ್ನು ಕೂರಿಸಲೆಂದು ರೂಪಿಸಿದ ಎರಡು ಮಸೀದಿಗಳು ಕಂಡುಬರುತ್ತವೆ. ಇತ್ತೀಚಿನ ಟ್ರೆಂಡ್‌ಗೆ ಒಳಗಾಗಿರುವ ಯುವಕರು ರೂಪಿಸಿರುವ ಅಯ್ಯಪ್ಪ ಸನ್ನಿಧಿ ಮತ್ತು ಸಮುದಾಯ ಭವನಗಳಿವೆ.

ಜೊತೆಗೆ ಸೆಟ್ಲ್‌ಮೆಂಟ್ ಜನರಿಗೆ ಕರಕುಶಲ ಕೌಶಲ್ಯಗಳನ್ನು ಕಲಿಸುವ ಎರಡು ಬಡಿಗೇರ ಕಾರ್ಖಾನೆ ಕಟ್ಟಡಗಳು ಇವೆ. ಈ ಕಾರ್ಖಾನೆ ಅಥವಾ ಬಡಿಗೇರ ಶಾಲೆಗಳಲ್ಲಿ ಇಂದು ಚಪ್ಪರಬಂದ ಸಮುದಾಯದ ಮೂರು ಕುಟುಂಬಗಳು ನೆಲೆಸಿವೆ.

೧೯೮೬ ರಲ್ಲಿ ಕಂಜರಭಟ್ ಸಮುದಾಯವು ಶ್ರೀ ಯೋಗೇಶ್ವರ ಕೃಷ್ಣ ಮಂದಿರವನ್ನು ನಿರ್ಮಿಸಿದ್ದಾರೆ.

೧. ಈ ಸೆಟ್ಲ್‌ಮೆಂಟ್‌ನಲ್ಲಿ ಸುಮಾರು ೨೮೬ ಕೊರಮ ಸಮುದಾಯದವರ ಮನೆಗಳು.

೨. ಸುಮಾರು ೪೭ರಷ್ಟು ಕಂಜರಭಾಟ ಸಮುದಾಯದ ಕುಟುಂಬಗಳು

೩. ೧೬೦ರಷ್ಟು ಪಾರ್ಧಿ ಸಮುದಾಯದ ಕುಟುಂಬಗಳು, ೧೮೦ರಷ್ಟು ಚಪ್ಪರಬಂದ ಸಮುದಾಯದ ಕುಟುಂಬಗಳು ಮತ್ತು ೧೫೦ಕ್ಕೂ ಮೇಲ್ಪಟ್ಟು ಗಂಟಿಚೋರ ಸಮುದಾಯದ ಕುಟುಂಬಗಳು ನೆಲೆಸಿರುವುದನ್ನು ಕಾಣಬಹುದಾಗಿದೆ.

ಗೋಕಾಕ್ ಫಾಲ್ಸ್

ಬೆಳಗಾವಿ ಜಿಲ್ಲೆಯಲ್ಲಿ ಬರುವ ಗೋಕಾಕ್ ಫಾಲ್ಸ್ ಬಳಿ ಈಸ್ಟ್ ಇಂಡಿಯಾ ಕಂಪನಿ ಒಂದು ಬಟ್ಟೆ ಕಾರ್ಖಾನೆಯನ್ನು ಹುಟ್ಟುಹಾಕಿತು. ಆ ಕಾರ್ಖಾನೆಯಲ್ಲಿ ಕೆಲಸ ನಿರ್ವಹಿಸಲೆಂದು ಬೆಳಗಾವಿ ಸೆಟ್ಲಮೆಂಟಿನ ಕೆಲವು ಜನರನ್ನು ಗೋಕಾಕ್ ಫಾಲ್ಸ್‌ಗೆ ವರ್ಗಾವಣೆಗೊಳಿಸಲಾಗುತ್ತಿತ್ತು. ಈ ರೀತಿ ವರ್ಗಾವಣೆಗೊಂಡ ಜನರನ್ನು ಇರಿಸಲೆಂದೇ ಗೋಕಾಕ್ ಫಾಲ್ಸ್‌ನಲ್ಲಿ ಸೆಟ್ಲಮೆಂಟ್ ಒಂದನ್ನು ನಿರ್ಮಿಸಲಾಯಿತು. ಜೊತೆಗೆ ಗೋಕಾಕ್ ಫಾಲ್ಸ್‌ನ ಕಟ್ಟಡ ಕೆಲಸಕ್ಕಾಗಿ ಈ ಜನರನ್ನು ಬಳಕೆ ಮಾಡಿಕೊಳ್ಳಲಾಗುತ್ತಿತ್ತು. ಹೀಗಾಗಿ ಬಹುತೇಕವಾಗಿ ಗಂಟಿಚೋರ, ಕೊರಮ, ಪಾರ್ಧಿ ಸಮುದಾಯದ ಜನರನ್ನೇ ಈ ಸೆಟ್ಲಮೆಂಟನಲ್ಲಿ ಇರಿಸಲಾಗಿತ್ತು. ಇಂದು ಈ ಸೆಂಟ್ಲಮೆಂಟ ನಿರ್ನಾಮಗೊಂಡಿದೆ. ಆದರೆ ಕಾರ್ಖಾನೆಯಲ್ಲಿ ವೃತ್ತಿಯಲ್ಲಿ ನಿರತವಾದ ಗಂಟಿಚೋರ ಸಮುದಾಯದ ಜನ ಮಾತ್ರ ಇಂದು ಈ ಸೆಟ್ಲಮೆಂಟಿನಲ್ಲಿದ್ದಾರೆ. ಬಹುತೇಕ ಈ ಜನ ತಮ್ಮ ನಿವೃತ್ತಿಯ ತರುವಾಯ ಗೋಕಾಕ್ ನಗರ ಮತ್ತು ಬೆಳಗಾವಿ ನಗರಗಳಿಗೆ ವಲಸೆ ಹೋಗಿ ನೆಲೆಸಿರುವುದು ಕಂಡುಬರುತ್ತದೆ. ಇಂದು ಕೇವಲ ಕಾರ್ಖಾನೆಯಲ್ಲಿ ಕೆಲಸ ಮಾಡುವ ಜನ ಮಾತ್ರ ಗೋಕಾಕ್ ಫಾಲ್ಸ್‌ನಲ್ಲಿ ಉಳಿದಿದ್ದಾರೆ. ಕೇವಲ ೧೦೫ ಗಂಟಿಚೋರ ಸಮುದಾಯದ ಕುಟುಂಬಗಳು ಕಂಡುಬರುತ್ತವೆ. ಈ ಜನರಿಗಾಗಿ ಸೆಟ್ಲಮೆಂಟಿನಲ್ಲಿಯೇ ಕಾರ್ಖಾನೆಯವರು ಕ್ವಾರ್ಟಸ್‌ಗಳನ್ನು ಕಟ್ಟಿರುವುದರಿಂದ ಆ ನಿವಾಸಗಳಲ್ಲಿಯೇ ಈ ಸಮುದಾಯದ ಜನ ವಾಸಿಸುತ್ತಿದ್ದಾರೆ.

ಹುಬ್ಬಳ್ಳಿ ಸೆಟ್ಲಮೆಂಟ್

ಹುಬ್ಬಳ್ಳಿ ನಗರವು ಧಾರವಾಡ ಜಿಲ್ಲೆಯಲ್ಲಿದೆ. ಧಾರವಾಡ ನಗರಕ್ಕೆ ಹೊಂದಿಕೊಂಡಂತೆ ಇರುವ, ಧಾರವಾಡದ ಅವಳಿ ನಗರವೆಂದು ಗುರುತಿಸುವ ನಗರ ಹುಬ್ಬಳ್ಳಿ. ಈ ನಗರವು ಉತ್ತರ ಕರ್ನಾಟಕದಲ್ಲಿಯೇ ಪ್ರಮುಖ ವಾಣಿಜ್ಯ ನಗರವಾಗಿದೆ. ಬೆಂಗಳೂರಿನಿಂದ ಸುಮಾರು ೪೧೦ ಕಿ.ಮೀ ದೂರದಲ್ಲಿದೆ.

ಬೆಂಗಳೂರಿನಿಂದ ಪುಣೆಗೆ ಹೋಗುವ ರಾಷ್ಟ್ರೀಯ ಹೆದ್ದಾರಿ ೪ ಈ ನಗರದ ಮೂಲಕವೇ ಹಾದು ಹೋಗುತ್ತದೆ. ೨೦೦೧ರ ಜನಗಣತಿ ಪ್ರಕಾರ ಹುಬ್ಬಳಿಯ ಒಟ್ಟು ಜನಸಂಖ್ಯೆ ೫,೩೩,೮೨೦ ಇದೆ. ಇದರಲ್ಲಿ ಪುರುಷರು ೨,೭೩,೦೩೭, ಮಹಿಳೆಯರು ೨,೬೦,೭೮೩ ಗಳಷ್ಟಿದ್ದಾರೆ. (ಮಾನವ ಅಭಿವೃದ್ಧಿ ವರದಿ, ೧೧೨) ಸಮುದ್ರ ಮಟ್ಟದಿಂದ ೬೭೦.೭೫ ಮೀಟರ್‌ಗಳಷ್ಟು ಈ ನಗರವು ಎತ್ತರದಲ್ಲಿದೆ. ವಿಜಯನಗರ ಸಾಮ್ರಾಜ್ಯದ ಆಡಳಿತವನ್ನು ಈ ನಗರ ಒಳಪಟ್ಟಿರುವುದು ದಾಖಲೆಗಳ ಮೂಲಕ ತಿಳಿದುಬರುತ್ತದೆ. ಪೋರ್ಚುಗೀಸ್ ವ್ಯಾಪಾರಿಗಳು ಮತ್ತು ಪ್ರವಾಸಿಗರು ಕ್ರಿ.ಶ. ೧೫೪೭ರಲ್ಲಿ ಬರೆಯಲ್ಪಟ್ಟ ದಾಖಲೆಗಳಲ್ಲಿ ಹುಬ್ಬಳ್ಳಿಯನ್ನು 'ಒಬೇಲಿ' ಎಂದು ಕರೆದಿದ್ದಾರೆ. ವಿಜಯನಗರ ಪತನ ನಂತರ ಹುಬ್ಬಳ್ಳಿಯು ಬಜಾಪುರದ ಆದಿಲ್‌ಶಾಹಿಗಳ ಆಡಳಿತಕ್ಕೆ ಒಳಪಟ್ಟಿತು. ೧೭ನೇ ಶತಮಾನಕ್ಕೆ ಬರುವಷ್ಟರಲ್ಲಿ ಇಲ್ಲಿನ ವಾಣಿಜ್ಯ ವಹಿವಾಟು ಇನ್ನು ಬೆಳೆದು ಸಾಕಷ್ಟು ಪ್ರಸಿದ್ದಿ ಪಡೆಯಿತು. ಬಹಳಷ್ಟು ಶ್ರೀಮಂತ ವ್ಯಾಪಾರಿಗಳಿಂದ ಈ ನಗರ ತುಂಬಿತ್ತು. ಇದಕ್ಕೆ ಆಕರ್ಷಿತನಾದ ಶಿವಾಜಿ ಕ್ರಿ.ಶ. ೧೬೭೧ ರಲ್ಲಿ ಹುಬ್ಬಳ್ಳಿಯ ಮೇಲೆ ದಂಡೆತ್ತಿ ಬಂದು ಊರನ್ನು ಕೊಳ್ಳೆ ಹೊಡೆದನು. ಕ್ರಿ.ಶ ೧೮೩೬ರಲ್ಲಿ ಬಾಸೆಲ್ ಮಿಷನ್ ಆಗಮನವಾಯಿತು. ಬಿಟ್ರೀಷ್ ಆಡಳಿತ ಪ್ರಾರಂಭಗೊಂಡಿತು.

೧ ೧೮೪೦ರಲ್ಲಿ ಧಾರವಾಡದಲ್ಲಿ ಕ್ಯಾಥೋಲಿಕ್ ಚರ್ಚ್ ನಿರ್ಮಾಣವಾಯಿತು.

೨ ನಗರ ಸಭೆಯು ೧೮೫೬ರಲ್ಲಿ ಪ್ರಾರಂಭಗೊಂಡಿತು.

೩ ಸಾಮಾನ್ಯ ಜನಗಣತಿ ೧೮೭೨ರಲ್ಲಿ ಪ್ರಾರಂಭವಾಯಿತು.

೪ ೧೮೭೩ರಲ್ಲಿ ಪ್ರಧಾನ ಅಂಚೆ ಕಛೇರಿ ಪ್ರಾರಂಭಿಸಲಾಯಿತು.

೫ ೧೮೭೮ರಲ್ಲಿ ಹುಬ್ಬಳ್ಳಿ ಮತ್ತು ಪುಣೆಗೆ ರೈಲ್ವೆ ಸಂಚಾರ ಪ್ರಾರಂಭಗೊಂಡಿತು.

೬ ೧೮೮೩ರಲ್ಲಿ ದಕ್ಷಿಣ ನೈರುತ್ಯ ವಲಯ ರೈಲ್ವೆ ವರ್ಕ್‌ಶಾಪ್ ಪ್ರಾರಂಭಿಸಲಾಯಿತು.

ಮರಾಠ ಮತ್ತು ಬ್ರಿಟೀಷ್‌ರ ನಡುವಿನ ಮೂರನೇ ಬ್ರಿಟೀಷ್-ಮರಾಠ ಯುದ್ದದಲ್ಲಿ ಮರಾಠರು ಸೋತ ಪರಿಣಾಮವಾಗಿ ಹುಬ್ಬಳ್ಳಿಯು ಬ್ರಿಟೀಷರ ವಶಕ್ಕೆ ಹೋಯಿತು. ಮತ್ತು ಬ್ರಿಟೀಷ್ ಇಂಡಿಯಾದ ಬಾಂಬೆ ಪ್ರಸಿಡೆನ್ಸಿಯ ಭಾಗವಾಯಿತು. ಸ್ವಾತಂತ್ರ್ಯ ಭಾರತದಲ್ಲಿಯೂ ಈ ನಗರ ಬಾಂಬೆ ಪ್ರಸಿಡೆನ್ಸಿ ಆಡಳಿತಕ್ಕೆ ಒಳಗಾಗಿತ್ತು. ೧೯೫೬ರ ಕರ್ನಾಟಕ ಏಕೀಕರಣದ ಫಲವಾಗಿ ಕರ್ನಾಟಕ ರಾಜ್ಯದ ಭಾಗವಾಗಿ ಮಾರ್ಪಾಡು ಹೊಂದಿತು. (html:file//G:/giograpic/hubli.mht)

ಹುಬ್ಬಳ್ಳಿಯ ರೈಲ್ವೆ ಸ್ಟೇಷನ್ನಿಗೆ ಅತೀ ಹತ್ತಿರದಲ್ಲಿ ಹಳೇ ಹುಬ್ಬಳ್ಳಿಯ ಹೊರವಲಯದಲ್ಲಿ ಹುಬ್ಬಳ್ಳಿ ನಗರದ ಆಗ್ನೇಯ ಭಾಗದಲ್ಲಿ ಸುಮಾರು ೧೦೦ ಎಕರೆಗೂ ಮೇಲ್ಪಟ್ಟು ಇರುವ ಪ್ರದೇಶದಲ್ಲಿ ಸೆಟ್ಲ್‌ಮೆಂಟ್‌ನ್ನು

ನಿರ್ಮಿಸಲಾಗಿತ್ತು. ೧೯೧೧ರಲ್ಲಿ ಇಲ್ಲಿ ಸೆಟ್ಲಮೆಂಟ್ ನಿರ್ಮಾಣ ಮಾಡಲಾಗಿತ್ತು ಎಂಬುದರ ಕುರುಹುಗಳು ದೊರೆಯುತ್ತವೆ. ಇಲ್ಲಿಯ ಜನರಿಗೆ ೧೯೧೯ರಲ್ಲಿಯೇ ಭೂಮಿ, ನಿವೇಶನಗಳನ್ನು ಹಂಚಿರುವ ಬಗ್ಗೆ ದಾಖಲೆಗಳು ದೊರೆಯುತ್ತವೆ. ಇಲ್ಲಿನ ನಿರ್ಬಂಧಿತ ಸೆಟ್ಲಮೆಂಟ್‌ಗೆ ಸುಮಾರು ೮ ಅಡಿಗೂ ಮೇಲ್ಪಟ್ಟು ಮುಳ್ಳುತಂತಿ ಬೇಲಿಯನ್ನು ನಿರ್ಮಿಸಲಾಗಿತ್ತಂತೆ. ಅದರ ಪಕ್ಕದಲ್ಲಿ ಪೋಲಿಸ್ ಠಾಣೆ ಕಾವಲು ನಿರ್ಮಿಸಲಾಗಿತ್ತಂತೆ. ಅದರಾಚೆಗೆ ಸಾಮಾನ್ಯ ಬೇಲಿಯನ್ನೊಳಗೊಂಡ ಸೆಟ್ಲಮೆಂಟ್ ಇದ್ದದ್ದಾಗಿ ತಿಳಿದು ಬರುತ್ತದೆ. ಇಂದು ಬೇಲಿ ಹಾಗೂ ಮುಳ್ಳುತಂತಿ ನಾಶವಾಗಿದೆ. ಸೆಟ್ಲಮೆಂಟ್‌ನಲ್ಲಿ ಮಕ್ಕಳ ಪಾಲನೆಗಾಗಿ ಶಾಲೆ, ಬಾಲಮಂದಿರ, ಸ್ಪೋರ್ಟ್ಸ್‌ಕ್ಲಬ್ ಮತ್ತು ಆಟದ ಮೈದಾನಗಳನ್ನು ಸೆಟ್ಲ್‌ಮೆಂಟ್ ಜನಕ್ಕಾಗಿ ನಿರ್ಮಿಸಿರುವುದನ್ನು ಕಾಣಬಹುದಾಗಿದೆ.

ಬ್ರಿಟೀಷ್ ಆಡಳಿತ ಸಂದರ್ಭದಲ್ಲಿಯೇ ನಂ. ೧ ಹೆಣ್ಣುಮಕ್ಕಳ ಶಾಲೆ ನಿರ್ಮಿಸಿದೆ. ನಂ. ೫೮ ಹೈಸ್ಕೂಲ್ (ಗಂಡು ಮಕ್ಕಳಿಗಾಗಿ) ಮತ್ತು ನಂಬರ್ ೪ ಗಂಡು ಮಕ್ಕಳ ಕನ್ನಡ ಮಾಧ್ಯಮ ಶಾಲೆಗಳು ಸೆಟ್ಲಮೆಂಟ್‌ಗಳಲ್ಲಿ ಇದೆ. ಬ್ರಿಟೀಷ್ ಕಾಲದ ಆಸ್ಪತ್ರೆಯೊಂದಿದೆ ಅದನ್ನು ಇಂದು ಕರ್ನಾಟಕ ಸರ್ಕಾರವೇ ನೋಡಿಕೊಳ್ಳುತ್ತಿದೆ. ಆಟದ ಮೈದಾನ, ಚರ್ಚ್ ಬಾಲಮಂದಿರ ಮುಂತಾದವುಗಳಿವೆ.

೧೯೫೨ರಲ್ಲಿ ಸೆಟ್ಲ್‌ಮೆಂಟ್‌ಗಳೆಲ್ಲಾ ವಿಮುಕ್ತಗೊಂಡ ತರುವಾಯ ಇಲ್ಲಿ ಹಲವು ಸಂಘಸಂಸ್ಥೆಗಳು ಜನ್ಮ ತಾಳಿದವು. ಸೆಟ್ಲ್‌ಮೆಂಟ್ ಪ್ರದೇಶದಲ್ಲಿ ಅಂಗನವಾಡಿ ಕೇಂದ್ರಗಳು, ಹಿಂದುಳಿದ ವರ್ಗಗಳ ವಿದ್ಯಾರ್ಥಿ ವಸತಿ ನಿಲಯಗಳನ್ನು ಸರ್ಕಾರ ಪ್ರಾರಂಭಿಸಿದೆ.

೧. ನೂಲಿಯ ಚಂದಯ್ಯ ಮತ್ತು ಅಂಬೇಡ್ಕರ್ ಸ್ಮಾರಕ ಶಿಕ್ಷಣ ಸಂಸ್ಥೆ(ಎ.ಕೆ.ಕೆ)ಯ ಕಾಲೇಜೊಂದು ಪ್ರಾರಂಭಿಸಲಾಗಿದೆ. ಇದರಲ್ಲಿ ಪಿ.ಯು.ಸಿಯಿಂದ ಬಿ.ಇಡಿವರೆಗೂ ಕೋರ್ಸ್‌ಗಳಿವೆ.
೨. ಕೆ.ಡಿ.ಓ ಶಿಕ್ಷಣ ಸಂಸ್ಥೆಯ ಆಂಗ್ಲ ಮಾಧ್ಯಮ ಶಾಲೆ ಇದೆ.
೩. ನ್ಯಾಷನಲ್ ಪ್ರೌಢ ಶಾಲೆ (ಇಂಗ್ಲೀಷ್ ಮತ್ತು ಕನ್ನಡ ಮಾಧ್ಯಮ) ಶಾಲೆಯು ನಂ. ೫೮ ಶಾಲೆಯ ಪಕ್ಕದಲ್ಲಿಯೇ ಕಂಡುಬರುತ್ತದೆ.
೪. ಅಂಜುಮನ್ ಸಂಸ್ಥೆಯ ನೆಹರು ಕಲಾ ಮತ್ತು ವಿಜ್ಞಾನ ಕಾಲೇಜೊಂದು ನಿರ್ಮಾಣವಾಗಿದೆ. ಬಹುತೇಕ ಈ ಶಾಲೆಗಳು ಸೆಟ್ಲಮೆಂಟ್ ಮಕ್ಕಳಿಗೆ ವಿದ್ಯಾಭ್ಯಾಸ ನೀಡುವ ಉದ್ದೇಶವನ್ನು ಹೊಂದಿರದೆ ವ್ಯಾಪಾರಿ ಮನೋಭಾವದಲ್ಲಿ ಹುಟ್ಟಿದ ಶಾಲಾ-ಕಾಲೇಜುಗಳಾಗಿವೆ.
೫. ಇತ್ತೀಚಿನ ಕೊರಮ ಸಮುದಾಯದ ಯುವಕರು ಯಂಗ್‌ಸ್ಟಾರ್ ಸ್ಪೋರ್ಟ್ಸ್ ಕ್ಲಬ್ ಆರಂಭಿಸಿ, ಹಲವಾರು ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ.
೬. ಸೆಟ್ಲಮೆಂಟಿನ ಎಲ್ಲಾ ಸಮುದಾಯಗಳು ಸೇರಿ ಶಾಂತಿನಿಕೇತನ ಯುವಕ ಮಂಡಳಿ ಕಟ್ಟಿಕೊಂಡಿದ್ದಾರೆ.
೭. ದುರ್ಗಾದೇವಿ ಯುವಕ ಮಂಡಳಿ
೮ ಹಿಂದೂ ಭೋವಿ ಯುವಕ ಮಂಡಳಿ

೯ ಉತ್ತರ ಕರ್ನಾಟಕ ಗಂಟಿಚೋರ್ ಸುಧಾರಣಾ ಸಂಘ
೧೦ ಪಾರ್ಧಿ ಸಮಾಜ ಸೇವಾ ಸಂಘ ಮುಂತಾದ ಸಂಘ-ಸಂಸ್ಥೆಗಳು ಸೆಟ್ಲಮೆಂಟ್‌ನಲ್ಲಿ ನೆಲೆನಿಂತಿವೆ.

ಮುಖ್ಯವಾಗಿ ಈ ಸೆಟ್ಲಮೆಂಟ್‌ನಲ್ಲಿ ಕೊರಮ, ಗಂಟಿಚೋರ್, ಕಂಜರಭಾಟ, ಪಾರ್ಧಿ, ಚಪ್ಪರಬಂದ, ಭೋವಿ ಸಮುದಾಯಗಳು ನೆಲೆಸಿವೆ. ಅದರಲ್ಲಿ ಅತೀ ಹೆಚ್ಚು ಬಹುಸಂಖ್ಯೆಯನ್ನು ಹೊಂದಿರುವ ಸಮುದಾಯ ಮೊದಲಿಗೆ ಕೊರಮ ಸಮುದಾಯವಾಗಿದೆ. ಕೊರಮ ಸಮುದಾಯವು ಸುಮಾರು ೬೯೧ ಕುಟುಂಬಗಳನ್ನು ಹೊಂದಿದ್ದರೆ, ೨ನೇ ಬಹುಸಂಖ್ಯಾತ ಕುಟುಂಬಗಳನ್ನು ಹೊಂದಿರುವ ಪಾರ್ಧಿ ಸಮುದಾಯವು ೫೫೫ ಕುಟುಂಬಗಳು ಹೊಂದಿದೆ. ಗಂಟಿಚೋರರು ೧೭೧ ಕುಟುಂಬಗಳು ಇಲ್ಲಿ ಕಂಡುಬರುತ್ತವೆ. ಭೋವಿ/ವಡ್ಡರ್ ಸಮುದಾಯದ ೨೦೦ ಕುಟುಂಬಗಳು ಮತ್ತು ಕಂಜರಭಾಟರ ೮೨ ರಷ್ಟು ಮತ್ತು ಚಪ್ಪರಬಂದ್ ಸಮುದಾಯದ ೨೮ ರಷ್ಟು ಕುಟುಂಬಗಳು ಕಂಡುಬರುತ್ತವೆ.

ಈ ಸೆಟ್ಲಮೆಂಟ್‌ನಲ್ಲಿ ಗಾಳಿ ದುರುಗಮ್ಮ, ಕನಕದುರ್ಗಮ್ಮ, ಬಳ್ಳಾರಿ ದುರ್ಗಮ್ಮ, ಏಳು ಮಕ್ಕಳ ತಾಯಮ್ಮ, ಹುಲಿಗೆಮ್ಮ, ಹನುಮಂತ ದೇವರ ಗುಡಿ, ಕೃಷ್ಣ ಮಂದಿರ, ಮಸೀದಿ, ಚರ್ಚ್‌ಗಳನ್ನು ಒಳಗೊಂಡಿದೆ.

ಇಲ್ಲಿ ಒಳಚರಂಡಿ ವ್ಯವಸ್ಥೆ ಕಂಡುಬರುತ್ತದೆ. ಸಾರ್ವಜನಿಕ ನಳದ ಸೌಲಭ್ಯವಿದೆ. ಕೊರಮ, ಗಂಟಿಚೋರ, ಭೋವಿ, ಕಂಜರಭಾಟ ಸಮುದಾಯದ ಬಹುತೇಕ ಮನೆಗಳಿಗೆ ವೈಯಕ್ತಿಕ ನಳಗಳಿವೆ. ಮತ್ತು ಶೌಚಾಲಯ ಸೌಲಭ್ಯಗಳಿವೆ. ಆದರೆ ಪಾರ್ಧಿ ಸಮುದಾಯದವರು ಮಾತ್ರ ಶೌಚಾಲಯ, ವೈಯಕ್ತಿಕ ನಳ ಮುಂತಾದ ಸೌಲಭ್ಯಗಳನ್ನು ಪಡೆಯುವಲ್ಲಿ ಸೋತಿದ್ದಾರೆ.

೩. ಬಳ್ಳಾರಿಯಂತಹ ಪ್ರದೇಶದಲ್ಲಿ ತುಂಗಾಭದ್ರ ಅಣೆಕಟ್ಟಿನ ತುರುವಾಯ ನೀರಾವರಿ ಪ್ರದೇಶಗಳಿಗೆ ಉದ್ಯೋಗವನ್ನು ಅರಿಸಿಕೊಂಡು ಸೆಟ್ಲ್‌ಮೆಂಟ್‌ನ ಜನ ವಲಸೆ ಹೋಗಿದ್ದಾರೆ. ಉದಾಹರಣೆಗೆ ಕಂಪ್ಲಿ, ಗಂಗಾವತಿ, ಹೊಸಪೇಟೆ ಮುಂತಾದ ಪ್ರದೇಶಗಳಿಗೆ ಬಳ್ಳಾರಿ ಸೆಟ್ಲ್‌ಮೆಂಟ್‌ನಲ್ಲಿ ನೆಲೆಸಿದ್ದ ಪಾರ್ಧಿ, ಕೊರಮ, ವಡ್ಡ ಮುಂತಾದ ಸಮುದಾಯಗಳು ವಲಸೆ ಹೋಗಿರುವುದನ್ನು ಕಾಣಬಹುದು. ಕಂಪ್ಲಿ ಪ್ರದೇಶದ ಕೊರಮರು ಮತ್ತು ಪಾರ್ಧಿಗಳು ತಾವು ಮೂಲತಃ ಬಳ್ಳಾರಿ ಸೆಟ್ಲ್‌ಮೆಂಟ್‌ಗಳಲ್ಲಿ ಇದ್ದವರು. ಈ ಭಾಗದಲ್ಲಿ ನೀರಾವರಿ ಪ್ರಾರಂಭವಾದ ತರುವಾಯ ನೀರಾವರಿ ಪ್ರದೇಶಗಳಿಗೆ ಕೂಲಿಯನ್ನರಸಿ ವಲಸೆ ಬಂದಿರುವುದಾಗಿ ವಕ್ತೃಗಳು ತಿಳಿಸುತ್ತಾರೆ.'ಇಂದು ಬಳ್ಳಾರಿಯಲ್ಲಿ ಪಾರ್ಧಿ ಮತ್ತು ಕೊರಮ, ವಡ್ಡರು ಸಮುದಾಯಗಳಿದ್ದರೂ ಅವರಾರೂ ಇಂದು ಸೆಂಟ್ಲ್‌ಮೆಂಟ್ ಪ್ರದೇಶದಲ್ಲಿರದೆ ನಗರದ ದೇವಿನಗರ, ಬಸವನ ಕುಂಜಿ ಓವರ್ ಬ್ರಿಡ್ಜ್ ಪಕ್ಕದ ಕೊಳಚೆ ಪ್ರದೇಶಗಳಿಗೆ ಸ್ಥಳಾಂತರಗೊಂಡಿರುವುದನ್ನು ಕಾಣಬಹುದಾಗಿದೆ. ಹೀಗಾಗಿ ಇಂದು ಬಳ್ಳಾರಿ ಸೆಟ್ಲ್‌ಮೆಂಟ್‌ನಲ್ಲಿ ಯಾವೊಬ್ಬ ವಿಮುಕ್ತ ಬುಡಕಟ್ಟಿನ ಕುಟುಂಬವೂ ಕಂಡುಬರುವುದಿಲ್ಲ.

ಹೀಗೆ ನಾನಾ ಕಾರಣಗಳಿಗಾಗಿ ಸೆಟ್ಲ್‌ಮೆಂಟ್ ಜನ ಸೆಟ್ಲ್‌ಮೆಂಟ್‌ಗಳನ್ನು ತೊರೆದಿರುವ ಸಾಧ್ಯತೆಗಳೂ ಇವೆ. ಹಾಗೇ ಬಿಜಾಪುರ ಸೆಟ್ಲ್‌ಮೆಂಟ್‌ನಿಂದ ಗದಗ ಸೆಟ್ಲ್‌ಮೆಂಟ್‌ಗೆ ಹುಬ್ಬಳ್ಳಿ ಸೆಟ್ಲ್‌ಮೆಂಟ್‌ನಿಂದ

ಬೆಳಗಾವಿ ಸೆಟ್ಲ್‌ಮೆಂಟಿಗೆ ಹೀಗೆ ಇಲ್ಲಿಯ ವಿಮುಕ್ತ ಬುಡಕಟ್ಟು ಕುಟುಂಬಗಳು ಅಲ್ಲಿಯ ವಿಮುಕ್ತ ಬುಡಕಟ್ಟು ಸೆಟ್ಲ್‌ಮೆಂಟ್‌ಗಳಿಗೆ ಆಗಾಗ್ಗೆ ವರ್ಗಾವಣೆಗೊಳ್ಳುತ್ತಲೇ ಇರುತ್ತಾರೆ. ಈ ವಲಸೆ ಕೇವಲ ರಾಜ್ಯದೊಳಗೆ ಮಾತ್ರವಲ್ಲ, ರಾಜ್ಯದ ಹೊರಗೆ ಇತರ ರಾಜ್ಯಗಳಿಗೂ ಉದ್ಯೋಗವನ್ನು ಅರಸಿ ವಲಸೆ ಹೋಗುವುದನ್ನು ಕಾಣಬಹುದಾಗಿದೆ.

ಹಿಂದಿನ ಅಧ್ಯಾಯದಲ್ಲಿ ಸೆಟ್ಲ್‌ಮೆಂಟ್‌ಗಳು ಬೆಳೆದುಬಂದ ಬಗೆಯನ್ನು ನೋಡಲಾಗಿದೆ. ಆದರೆ ಸೆಟ್ಲ್‌ಮೆಂಟ್‌ಗಳನ್ನು ಬ್ರಿಟೀಷ್ ಕಂಪನಿ ಸರ್ಕಾರವು ಕೇವಲ ನಗರ ಪ್ರದೇಶಗಳಿಗೆ ಸೀಮಿತಗೊಳಿಸಲು ಕಾರಣಗಳೇನಿರಬಹುದು. ಹಳ್ಳಿ ಪ್ರದೇಶಗಳಲ್ಲಿ ಸೆಟ್ಲ್‌ಮೆಂಟ್ ನಿರ್ಮಿಸಲು ಏಕೆ ಮಹತ್ವ ಕೊಡಲಿಲ್ಲ ಎಂಬ ಪ್ರಶ್ನೆಗಳು ಕಾಡುವುದು ಸಹಜ. ನಗರ ಪ್ರದೇಶದಲ್ಲಿ ಸೆಟ್ಲ್‌ಮೆಂಟ್‌ಗಳನ್ನು ಸ್ಥಾಪಿಸುವ ಉದ್ಧೇಶಕ್ಕೆ ಪ್ರಾಯಶಃ ಎರಡು ಕಾರಣಗಳಿವೆ.

೧. ಹಳ್ಳಿಗಾಡಿನಲ್ಲಾದರೆ ಹಳ್ಳಿಯ ಪರಿಸರದ ಪರಿಪೂರ್ಣ ಪರಿಚಯವಿರುವ ಬುಡಕಟ್ಟುಗಳನ್ನು ಸುಲಭವಾಗಿ ಹಿಡಿತದಲ್ಲಿರಿಸಿಕೊಳ್ಳುವುದು ಅಷ್ಟು ಸುಲಭದ ವಿಚಾರವಲ್ಲ ಎಂಬುದು.

೨. ನಗರ ಪ್ರದೇಶಗಳಲ್ಲಿ ಸೆಟ್ಲ್‌ಮೆಂಟ್‌ಗಳನ್ನು ಸ್ಥಾಪಿಸುವ ಉದ್ಧೇಶದ ಹಿಂದೆ ಬಲವಾದ ಕಾರಣ ಹೊಂದಿದೆ. ಕಂಪನಿ ಸರ್ಕಾರವು ನಗರ ಪ್ರದೇಶದ ಪರಿಚಯ ಅಷ್ಟಾಗಿರದ ಬುಡಕಟ್ಟುಗಳನ್ನು ಆಡಳಿತಾತ್ಮಕವಾಗಿ ಸುಲಭವಾಗಿ ನಿಯಂತ್ರಿಸಬಹುದು. ಮತ್ತು ಆ ಕಾಲಕ್ಕೆ ಹೊಸ ಹೊಸ ಉದ್ದಿಮೆಗಳನ್ನು ರಸ್ತೆ, ರೈಲ್ವೆಯ ಸಾರಿಗೆ ಸಂಪರ್ಕಗಳನ್ನು ತಮ್ಮ ವಹಿವಾಟಿಗೆ ಅನುಕೂಲವಾಗುವಂತೆ ರಚಿಸಲು ಪ್ರಾರಂಭಿಸಿದರು. ಈ ರೀತಿಯ ಕಾರ್ಖಾನೆ, ರೈಲ್ವೆ, ರಸ್ತೆ ನಿರ್ಮಾಣಗಳಲ್ಲಿ ಮಾನವನ ಶ್ರಮಶಕ್ತಿಯ ಅವಶ್ಯಕತೆ ಅತೀಯಾಗಿತ್ತು. ಕಾರ್ಖಾನೆಗಳ ಕಟ್ಟಡ ಕೆಲಸ, ಬಡಿಗೆ ಕೆಲಸ, ರೈಲ್ವೆ ಮಾರ್ಗಗಳನ್ನು ನಿರ್ಮಿಸುವ ಕೆಲಸ, ರಸ್ತೆಯ ನಿರ್ಮಾಣ ಕೆಲಸ, ಕೆಲವೊಮ್ಮೆ ಅಣೆಕಟ್ಟುಗಳನ್ನು ನಿರ್ಮಿಸುವ ಕೆಲಸ, ಗಣಿಗಾರಿಕೆ ಮುಂತಾದವುಗಳಿಗೆ ಸುಲಭವಾದ ಆಳುಗಳಾಗಿ ಸೆಟ್ಲ್‌ಮೆಂಟ್ ಜನರನ್ನು ಉಪಯೋಗಿಸಿಕೊಳ್ಳುತ್ತಿದ್ದರು. ಆ ಕಾರಣಕ್ಕಾಗಿಯೇ ಸೆಟ್ಲ್‌ಮೆಂಟ್ ಜನಕ್ಕೆ ವೃತ್ತಿ ಕೌಶಲ್ಯಗಳನ್ನು ಕಲಿಸುವ ಶಾಲೆಗಳನ್ನು ಪ್ರಾರಂಭಿಸಿದರು. ಪ್ರಾಯಶಃ ಸೆಟ್ಲ್‌ಮೆಂಟ್ ಜನಕ್ಕೆ ಕೇವಲ ಊಟ ಇತ್ಯಾದಿಗಳನ್ನು ಕೊಟ್ಟು ಅವರನ್ನು ಉದ್ದಾರ ಮಾಡುವ ಸೋಗಿನಲ್ಲಿಯೇ ಅವರನ್ನು ಶೋಷಣೆ ಮಾಡಿದ್ದರು. ಇಂದಿಗೂ ಕ್ಷೇತ್ರಕಾರ್ಯಕ್ಕೆ ಹೋದಾಗ ಸೆಟ್ಲ್‌ಮೆಂಟ್ ಜನ ತಮಗೆ ಬ್ರಿಟೀಷ್ ಕಾಲದಲ್ಲಿದ್ದ ಮರ್ಯಾದೆಯೂ ಈಗಿನ ಸ್ವತಂತ್ರ ಭಾರತದಲ್ಲಿಲ್ಲ ಎಂದು ಹೇಳುವುದನ್ನು ಕೇಳಲಾಯಿತು. ಆದರೆ ಬ್ರಿಟೀಷರು ಅವರಿಗೆ ಆಸರೆ ಕೊಡುವ ನೆಪದಲ್ಲಿಯೇ ಶೋಷಣೆಯನ್ನು ಮಾಡುತ್ತಿದ್ದರು ಎಂಬುದನ್ನು ಮರೆಯಲಾಗದು.

ಈ ಜನರಿಗೆ ಕೆಲಸ ಕೊಡಿಸುವ ಉದ್ಧೇಶದಿಂದ ಸ್ಥಳೀಯ ಕಾರ್ಖಾನೆ ಮಾಲೀಕರಿಂದ ಕಂಪನಿ ಆಡಳಿತವು ಇಂತಿಷ್ಟು ವಾರ್ಷಿಕ ಹಣ ಕೊಟ್ಟರೆ ಕೆಲಸಗಾರರನ್ನು ಒದಗಿಸುವುದಾಗಿ ಒಪ್ಪಂದ ಮಾಡಿಕೊಳ್ಳುತ್ತಿತ್ತು. ಈ ರೀತಿಯಾಗಿ ಕಾರ್ಯನಿರ್ವಹಿಸುವ ಜನಗಳ ಕೂಲಿ ಹಣವನ್ನು ತಾನು ಪಡೆದು ಇವರಿಗೆ ಆಸರೆ

ಕಲ್ಪಿಸುತ್ತಿತ್ತು. ಹಾಗೇ ಈ ರೀತಿಯ ಕಾರ್ಯದ ಹಿಂದೆ ಅಪರಾಧಿ ಬುಡಕಟ್ಟುಗಳನ್ನು ಮುಖ್ಯವಾಹಿನಿಗೆ ತರುವ ಉದ್ದೇಶ ತಮ್ಮದಾಗಿದೆ ಎಂದು ಕಂಪನಿ ಆಡಳಿತವು ತೋರಿಸಿಕೊಳ್ಳುತ್ತಿತ್ತು.

ಮುನ್ಸಿ ವರದಿಯು ಈ ರೀತಿಯ ಶೋಷಣೆಯಾಗುವುದನ್ನು ವಿವರವಾಗಿ ವರದಿ ಮಾಡಿದೆ. ಆ ವರದಿಯಲ್ಲಿ ಸೆಟ್ಲ್‌ಮೆಂಟ್ ಮೇಲ್ವಿಚಾರಣೆಯನ್ನು ಕ್ರಿಶ್ಚಿಯನ್ ಸಂಘ-ಸಂಸ್ಥೆಗಳಿಗೆ ಅಥವಾ ಯಾವುದೇ ಸ್ವಯಂ ಸೇವಾ ಸಂಸ್ಥೆಗಳಿಗೆ ವಹಿಸಿಕೊಡದೆ ನೇರವಾಗಿ ಸರ್ಕಾರವೇ ಅವುಗಳ ಮೇಲ್ವಿಚಾರಣೆ ನೋಡಿಕೊಳ್ಳಬೇಕು ಎಂದು ಶಿಪಾರಸ್ಸು ಮಾಡಿತು. ಸ್ವಯಂಸೇವಾ ಸಂಸ್ಥೆಗಳ ಆಡಳಿತದಿಂದ ಅಪರಾಧಿ ಬುಡಕಟ್ಟುಗಳೆಂದು ಗುರುತಿಸಿದ ಎಷ್ಟೋ ಸಮುದಾಯಗಳಿಗೆ ಹೆಚ್ಚಿನ ನಷ್ಟವೇ ಇದೆ ಎಂದು ಅದು ತಿಳಿಸುತ್ತದೆ. ತಾವು ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡ ಸೆಟ್ಲ್‌ಮೆಂಟ್‌ನಲ್ಲಿ ೨೮ ಬುಡಕಟ್ಟುಗಳನ್ನು ಇರಿಸಿರುವುದನ್ನು ಗಮನಿಸಿದ ಸಮಿತಿಯು ಇಷ್ಟು ಬುಡಕಟ್ಟುಗಳನ್ನು ಸೆಟ್ಲ್‌ಮೆಂಟ್‌ಗಳಲ್ಲಿ ಇರಿಸುವ ಅಗತ್ಯವಿಲ್ಲ. ಅದರ ಬದಲು ಬದಲಾವಣೆಗೆ ಒಳಗಾಗಬೇಕಿರುವ ಏಳು ಸಮುದಾಯಗಳನ್ನು ಇರಿಸಿಕೊಂಡರೆ ಸಾಕು ಎಂದು ವರದಿಯು ತಿಳಿಸುತ್ತದೆ.

ಈ ಎಲ್ಲಾ ಸೆಟ್ಲ್‌ಮೆಂಟ್‌ಗಳು ಕೇವಲ ಅಪರಾಧಿ ಬುಡಕಟ್ಟುಗಳನ್ನು ಇರಿಸಲು ಮಾತ್ರ ಉಪಯೋಗಿಸುತ್ತಿರಲಿಲ್ಲ. ತಮ್ಮ ವಿರುದ್ಧ ತಿರುಗಿ ಬೀಳುವ ಸಮಾಜ ಸುಧಾರಕರು, ರಾಜಕೀಯ ನಾಯಕರು ಮತ್ತು ಅವರ ಅನುಯಾಯಿಗಳನ್ನು ಸಹ ಅಪರಾಧಿ ಬುಡಕಟ್ಟು ಕಾಯ್ದೆಯಲ್ಲಿ ಬಂಧಿಸಿಡಲಾಗುತ್ತಿತ್ತು ಎಂಬುದನ್ನು ಬಹುತೇಕ ವಿದ್ವಾಂಸರು ತಿಳಿಸುತ್ತಾರೆ. ಈ ಕುರಿತು ಹಿಂದಿನ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಒಟ್ಟಾರೆಯಾಗಿ ಈ ಎಲ್ಲಾ ಸೆಟ್ಲ್‌ಮೆಂಟ್‌ಗಳನ್ನು ಗಮನಿಸಲಾಗಿ ಸೆಟ್ಲ್‌ಮೆಂಟ್‌ಗಳಲ್ಲಿ ಎರಡು ವಿಧದ ಸೆಟ್ಲ್‌ಮೆಂಟ್‌ಗಳು ಇರುವುದು ತಿಳಿದುಬರುತ್ತದೆ. ಅದರಲ್ಲಿ ಒಂದು ನಿರ್ಬಂಧಿತ ಸೆಟ್ಲ್‌ಮೆಂಟ್ ಮತ್ತೊಂದು ನಿರ್ಬಂಧಿತವಲ್ಲದ ಮುಕ್ತ ಸೆಟ್ಲ್‌ಮೆಂಟ್. ನಿರ್ಬಂಧಿತ ಸೆಟ್ಲ್‌ಮೆಂಟಿನಲ್ಲಿ ಮುಖ್ಯವಾಗಿ ಅನಾಹುತಕಾರಿ ಮತ್ತು ಅಪಾಯಕಾರಿ ಎನಿಸುವಂತಹ ತೀವ್ರತರ ಆಕ್ರಮಣ ಮನೋಭಾವದ ಬುಡಕಟ್ಟುಗಳನ್ನು ಇರಿಸಲು ಉಪಯೋಗಿಸುತ್ತಿದ್ದರು. ನಿರ್ಬಂಧಿತವಲ್ಲದ ಮುಕ್ತ ಸೆಟ್ಲ್‌ಮೆಂಟ್‌ನಲ್ಲಿ ಈಗಾಗಲೇ ಸುಧಾರಿಸಿದ, ಸೌಮ್ಯ ಸ್ವಭಾವದ ಅಪರಾಧಿ ಬುಡಕಟ್ಟುಗಳನ್ನು ಇರಿಸಲಾಗುತ್ತಿತ್ತು ಎಂಬುದನ್ನು ದಾಖಲೆಗಳು ತಿಳಿಸುತ್ತವೆ. ಅದೇ ರೀತಿ ಕ್ಷೇತ್ರ ಕಾರ್ಯದಲ್ಲಿಯೂ ಇದೇ ಅಭಿಪ್ರಾಯವನ್ನು ವಕ್ತೃಗಳು ವ್ಯಕ್ತಪಡಿಸಿದರು.

ಬೆಳಗಾವಿ

ಉತ್ತರ ಕರ್ನಾಟಕದ ಪ್ರಮುಖ ಜಿಲ್ಲೆಗಳಲ್ಲಿ ಬೆಳಗಾವಿಯೂ ಒಂದು. ಭಾರತೀಯ ಅಲ್ಯುಮಿನಿಯಂ ಕಂಪನಿ ಬೆಳಗಾವಿಯಲ್ಲಿದೆ. ಇವುಗಳಲ್ಲದೆ ಭಾರತೀಯ ಸೇನಾ ತರಬೇತಿ ಕೇಂದ್ರ, ವಾಯು ಸೇನಾ, ವಿಮಾನ ನಿಲ್ದಾಣಗಳು ಬೆಳಗಾವಿಯಲ್ಲಿವೆ.

ಬೆಳಗಾವಿ ಸಮುದ್ರ ಮಟ್ಟದಿಂದ ೭೬೨ ಮೀಟರ್ ಎತ್ತರದಲ್ಲಿದೆ. ರಾಜಧಾನಿ ಬೆಂಗಳೂರಿನಿಂದ ೫೦೧ ಕಿ.ಮೀ ದೂರದಲ್ಲಿ ಹಾಗೂ ಗೋವಾದ ಪಣಜಿಯಿಂದ ೧೫೫ ಕಿ.ಮೀ ದೂರದಲ್ಲಿದೆ. ಒಂದು

ಕಡೆ ಗೋವಾ ರಾಜ್ಯ ಮತ್ತೊಂದು ಕಡೆ ಮಹಾರಾಷ್ಟ್ರ ರಾಜ್ಯ ಮತ್ತು ಕಾರವಾರ ಜಿಲ್ಲೆಗಳಿಂದ ಆವೃತ್ತಗೊಂಡಿರುವ ಜಿಲ್ಲೆ ಇದಾಗಿದೆ. ಈ ಜಿಲ್ಲೆಯಲ್ಲಿ ಕೃಷ್ಣ, ಘಟಪ್ರಭ, ಮಲಪ್ರಭ, ಹಿರಣ್ಯಕೇಶ, ದೂರಗಂಗೆ, ಮಾರ್ಕಂಡೇಯ ನದಿಗಳು ಹರಿಯುತ್ತವೆ. ಇಲ್ಲಿ ರಕ್ಕಸಕೊಪ್ಪ ಜಲಾಶಯ, ಹಿತಕಲ್ ಜಲಾಶಯ ಮತ್ತು ನವಿಲು ತೀರ್ಥನ ಜಲಾಶಯಗಳು ಕಂಡುಬರುತ್ತವೆ.

ಪೂರ್ವದಲ್ಲಿ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿದ್ದ ಬೆಳಗಾವಿಯ ತರುವಾಯ ರಾಷ್ಟ್ರಕೂಟರ ನಿಯಂತ್ರಣಕ್ಕೆ ಬಂದಿತು. ರಾಷ್ಟ್ರಕೂಟರ ತರುವಾಯ ದತ್ತವಂಶದವರ (ಕ್ರಿ.ಶ. ೧೨೧೦) ಆಳ್ವಿಕೆಗೆ ಒಳಗಾಯಿತು. ೧೩೨೦ರಲ್ಲಿ ದೆಹಲಿ ಸುಲ್ತಾನರಿಂದ ಇದನ್ನಾಳುತ್ತಿದ್ದ ಊರವರು ಸೋಲನ್ನನುಭವಿಸಿದರು. ತರುವಾಯ ವಿಜಯನಗರ ಸಾಮ್ರಾಜ್ಯವು ಆಳ್ವಿಕೆ ನಡೆಸಿತು. ೧೬೮೬ರಲ್ಲಿ ಔರಂಗಜೇಬನ ಬಿಜಾಪುರದ ಸುಲ್ತಾರನ್ನು ಸೋಲಿಸಿ ಈ ನಗರವನ್ನು ತನ್ನ ವಶ ಮಾಡಿಕೊಂಡ. ಹೀಗಾಗಿ ಬೆಳಗಾವಿ ಮೊಘಲರ ಆಳ್ವಿಕೆಗೆ ಒಳಗಾಯಿತು. ೧೭೭೬ರಲ್ಲಿ ಹೈದರ್ ಆಲಿ ಈ ಪ್ರದೇಶವನ್ನು ಗೆದ್ದನು. ತರುವಾಯ ಬ್ರಿಟೀಷರ ಸಹಾಯದಿಂದಾಗಿ ಮರಾಠರು ಬೆಳಗಾವಿಯನ್ನು ಗೆಲ್ಲುವಂತಾಯಿತು. ೧೮೧೮ರಲ್ಲಿ ಬೆಳಗಾವಿಯು ಬ್ರಿಟೀಷರ ಆಳ್ವಿಕೆಗೆ ಬಂದಿತು. ಮೊದಲಿಗೆ ಬೆಳಗಾವಿ ಧಾರವಾಡ ಜಿಲ್ಲೆಯ ಭಾಗವಾಗಿತ್ತು. ೧೮೩೬ರಲ್ಲಿ ಧಾರವಾಡದಿಂದ ಪ್ರತ್ಯೇಕಿಸಿ ಬೆಳಗಾವಿಯನ್ನು ಜಿಲ್ಲೆಯಾಗಿಸಲಾಯಿತು. (html:www.giograpic/belgaum.mht) ಬೆಳಗಾವಿ ಕನ್ನಡ ಮತ್ತು ಮರಾಠ ಭಾಷಿಕರನ್ನೊಳಗೊಂಡ ನಾಡಾಗಿದೆ.

ಬ್ರೀಟೀಷರು ತಮ್ಮ ಆಳ್ವಿಕೆಯ ಕಾಲದಲ್ಲಿ ಸೈನಿಕರ ತರಬೇತಿ ಶಿಬಿರ ಹೊಸ-ಹೊಸ ಉದ್ದಿಮೆಗಳನ್ನು ಇಲ್ಲಿ ಪ್ರಾರಂಭಿಸಿದರು. ತರುವಾಯ ರೈಲ್ವೆಯನ್ನು ಇಲ್ಲಿ ಹುಟ್ಟುಹಾಕಲಾಯಿತು. ತಮ್ಮ ಉದ್ದಿಮೆಗಳು ಮತ್ತು ರೈಲು ಹಳಿ ಇತ್ಯಾದಿಗಳಲ್ಲಿ ಕಾರ್ಯನಿರ್ವಹಿಸಲು ಅಪರಾಧಿ ಬುಡಕಟ್ಟುಗಳನ್ನು ಕಂಪನಿ ಸರ್ಕಾರ ಬಳಕೆ ಮಾಡಿಕೊಳ್ಳುತ್ತಿತ್ತು ಮತ್ತು ಅದೇ ಕಾರಣಕ್ಕಾಗಿ ಬೆಳಗಾವಿಯಲ್ಲಿ ಅಪರಾಧಿ ಬುಡಕಟ್ಟುಗಳ ಸೆಟ್ಲಮೆಂಟ್‌ನ್ನು ಹುಟ್ಟುಹಾಕಲಾಯಿತು. ರೈಲ್ವೆ ನಿಲ್ದಾಣಕ್ಕೆ ಹತ್ತಿರವಾದ ಗ್ಯಾಂಗ್‌ವಾಡೆ ಪ್ರದೇಶದಲ್ಲಿ ಸೆಟ್ಲಮೆಂಟ್ ನಿರ್ಮಿಸಲಾಗಿತ್ತು. ಸೆಟ್ಲಮೆಂಟ್‌ನ್ನೇ ಸ್ಥಳೀಯ ಜನ ಗ್ಯಾಂಗ್‌ವಾಡೆ ಎಂದು ಕರೆಯುತ್ತಾರೆ. ಈ ಸೆಟ್ಲಮೆಂಟ್‌ನಲ್ಲಿ ನಿರ್ಬಂಧಿತ ಸೆಟ್ಲಮೆಂಟ್ ಮತ್ತು ನಿರ್ಬಂಧಿತವಲ್ಲದ ಸೆಟ್ಲಮೆಂಟ್ ಎಂಬ ಎರಡು ಪ್ರಕಾರದ ಸೆಟ್ಲಮೆಂಟ್‌ಗಳನ್ನು ಕಾಣಬಹುದಾಗಿದೆ. ಸೆಟ್ಲಮೆಂಟ್‌ನೊಳಗೆ ಅಪರಾಧಿ ಬುಡಕಟ್ಟುಗಳಿಗಾಗಿ ಆಟದ ಮೈದಾನ ಬಾಲಮಂದಿರದ, ಶಾಲೆಗಳನ್ನು ಪ್ರಾರಂಭಿಸಲಾಗಿತ್ತು. ಸೆಟ್ಲಮೆಂಟ್ ಜನರು ಹತ್ತಿಗಿರಣಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಈ ಸೆಟ್ಲಮೆಂಟ್‌ನಲ್ಲಿ ಕೊರವ, ವಡ್ಡರ, ಮಾಂಗ್ ಗಾರುಡಿ, ಬೆಸ್ತ, ಪಾರ್ಧಿ ಮತ್ತು ಗಂಟಿಚೋರ್ ಸಮುದಾಯಗಳಿದ್ದುದಾಗಿ ತಿಳಿದುಬರುತ್ತದೆ. ಆದರೆ ೧೯೫೨ರಲ್ಲಿ ವಿಮುಕ್ತ ಬುಡಕಟ್ಟು ಕಾಯ್ದೆಯನ್ವಯ ಸೆಟ್ಲಮೆಂಟ್‌ನೊಳಗಿದ್ದ ಬುಡಕಟ್ಟುಗಳೆಲ್ಲಾ ವಿಮುಕ್ತವಾದರು. ತರುವಾಯ ೬೦ರ ದಶಕದಲ್ಲಿ ಮಾಂಗ್‌ಗಾರುಡಿ, ಸಮುದಾಯವು ಗೋವಾ ರಾಜ್ಯಕ್ಕೆ ವಲಸೆ ಹೋಯಿತು. ಅಲ್ಲದೆ ಕೊರವ, ಗಂಟಿಚೋರ ಮತ್ತು ಪಾರ್ಧಿಗಳು ಸೆಟ್ಲಮೆಂಟ್ ಪ್ರದೇಶಗಳನ್ನು ತೊರೆದು ಇತರ ಪ್ರದೇಶಗಳಿಗೆ ವಲಸೆ ಹೋದರು. ಇಂದು ಗ್ಯಾಂಗ್‌ವಾಡಿಗನ್ನು ಮುನ್ಸಿಪಾಲಿಟಿಯು ತನ್ನ ವಶಕ್ಕೆ ತೆಗೆದುಕೊಂಡಿದೆ. ಇಲ್ಲಿ ಯಾವುದೇ

ವಿಮುಕ್ತ ಬುಡಕಟ್ಟುಗಳು ಇಂದು ನೆಲೆಸಿಲ್ಲ. ಬೆಳಗಾವಿಯ ಸೆಟ್ಲಮೆಂಟ್‌ಗೆ ಗ್ಯಾಂಗ್‌ವಾಡೆ ಎನ್ನುವ ಹೆಸರಿನ ಹೊರತಾಗಿ ಬೇರಾವುದೇ ಸೆಟ್ಲಮೆಂಟ್ ಕುರುಹುಗಳನ್ನು ಉಳಿಸಿಕೊಂಡಿರುವುದಿಲ್ಲ.

ಇಂಡಿ

ಬಿಜಾಪುರ ಜಿಲ್ಲೆಯ ಒಂದು ತಾಲೂಕು ಕೇಂದ್ರ ಇಂಡಿಯಾಗಿದೆ. ಈ ತಾಲೂಕಿನಲ್ಲಿ ಭೀಮಾ ಮತ್ತು ಆಲಮಟ್ಟಿ ಅಣೆಕಟ್ಟುಗಳಿಂದ ನೀರು ದೊರೆಯುತ್ತಿರುವುದರಿಂದ ಇತ್ತೀಚೆಗೆ ಈ ತಾಲೂಕು ನೀರಾವರಿಯ ಕೃಷಿಯನ್ನು ಮಾಡುವಂತಾಗಿದೆ. ಬಿಜಾಪುರವನ್ನು ಮರಾಠದಿಂದ ಈಸ್ಟ್ ಇಂಡಿಯು ಕಂಪನಿಯು ಗೆದ್ದು ವಶಪಡಿಸಿಕೊಂಡಿದ್ದರಿಂದ ಈ ತಾಲ್ಲೂಕು ಸಹ ಅವರ ಆಡಳಿತ ವ್ಯವಸ್ಥೆಗೆ ಒಳಪಟ್ಟಿತು. ೨೦೦೧ರ ಜನಗಣತಿ ಪ್ರಕಾರ ಇಲ್ಲಿಯ ಜನಸಂಖ್ಯೆ ೩,೫೩,೯೮೧ ರಷ್ಟಿದೆ. ಅಲ್ಲದೆ, ಆಕ್ರಮಣಶೀಲ ಸಮುದಾಯಗಳನ್ನು ಇಲ್ಲಿಯ ಸೆಟ್ಲಮೆಂಟ್‌ಗಳಲ್ಲಿ ಇರಿಸಲಾಗುತ್ತಿತ್ತು. ಇಂಡಿ ನಗರದ ಹೊರವಲಯಕ್ಕೆ ದಕ್ಷಿಣ ಭಾಗದಲ್ಲಿರುವ ಸೆಟ್ಲಮೆಂಟ್‌ನಲ್ಲಿ ಇಂದು ಯಾವೊಂದು ವಿಮುಕ್ತ ಬುಡಕಟ್ಟು ನೆಲೆಸಿಲ್ಲ. ಹಿಂದೆ ಈ ಸೆಟ್ಲಮೆಂಟ್‌ನಲ್ಲಿ ಪಾರ್ಧಿ ಮತ್ತು ಚಪ್ಪರ್‌ಬಂದ್, ಮಾಂಗ್‌ಗಾರುಡಿ ಸಮುದಾಯಗಳನ್ನು ಇರಿಸಲಾಗುತ್ತಿತ್ತಂತೆ, ಇತ್ತೀಚೆಗೆ ಚಪ್ಪರ್‌ಬಂದ ಸಮುದಾಯಗಳು ಕೃಷಿ ಚಟುವಟಿಕೆಗಳಲ್ಲಿ ತೊಡಗಿರುವುದರಿಂದ ತಾಲೂಕಿನ ಬೇರೆ-ಬೇರೆ ಹಳ್ಳಿಗಳಲ್ಲಿ ಹಂಚಿಹೋಗಿದ್ದಾರೆ. ಇಲ್ಲಿಯ ಮಾಂಗ್‌ಗಾರುಡಿ ಸಮುದಾಯವು ಮಹಾರಾಷ್ಟ್ರ ಮತ್ತು ಗುಲಬರ್ಗಾ, ಹೈದರಾಬಾದ್‌ಗಳಿಗೆ ವಲಸೆ ಹೋಗಿದೆ. ಇನ್ನು ಪಾರ್ಧಿ ಸಮುದಾಯವು ಬಿಜಾಪುರ ಮತ್ತು ಮಹಾರಾಷ್ಟ್ರಗಳಿಗೆ ವಲಸೆ ಹೋಗಿರುವುದಾಗಿ ತಿಳಿದುಬರುತ್ತದೆ.

ಜನಸಂಖ್ಯೆ

ಕರ್ನಾಟಕದಲ್ಲಿ ಅಪರಾಧಿ ಬುಡಕಟ್ಟುಗಳಿಗಾಗಿ ಹುಟ್ಟುಹಾಕಿದ ಸೆಟ್ಲಮೆಂಟ್‌ಗಳು ಒಟ್ಟು ೧೦ ಇವೆ. ಅವುಗಳಲ್ಲಿ ಬಾಗಲಕೋಟೆ, ಬಿಜಾಪುರ, ಹುಬ್ಬಳ್ಳಿ, ಗದಗ, ಗೋಕಾಕ್ ಫಾಲ್ಸ್, ದಾಂಡೇಲಿಗಳ ಸೆಟ್ಲಮೆಂಟ್‌ಗಳಲ್ಲಿ ಮಾತ್ರ ಇಂದಿಗೂ ವಿಮುಕ್ತ ಬುಡಕಟ್ಟಿನ ಜನ ವಾಸಿಸುತ್ತಿದ್ದಾರೆ. ಇನ್ನುಳಿದಂತೆ ಬಳ್ಳಾರಿ, ಬೆಳಗಾವಿ, ಇಂಡಿ ಮುಂತಾದೆಡೆ ಇರುವ ಸೆಟ್ಲಮೆಂಟ್ ಜನ ಹೊಟ್ಟೆಪಾಡಿಗೆ ಬೇರೆ-ಬೇರೆ ಕಡೆ ವಲಸೆ ಹೋಗಿದ್ದಾರೆ. ಈ ಜನ ತೆರವು ಮಾಡಿ ಬಿಟ್ಟು ಹೋದ ಸೆಟ್ಲಮೆಂಟ್ ಸ್ಥಳವನ್ನು ತರುವಾಯ ನಗರ ಸಭೆ ಮತ್ತು ಇತರ ಸ್ಥಳೀಯ ಜನ ತಮ್ಮ ಹಿಡಿತಕ್ಕೆ ತೆಗೆದುಕೊಂಡು ಅಲ್ಲಿ ಮನೆ ಇತ್ಯಾದಿಗಳನ್ನು ನಿರ್ಮಿಸಿಕೊಂಡಿರುವುದು ಕಂಡುಬರುತ್ತಿದೆ. ಉದಾಹರಣೆಗೆ ದಾಂಡೇಲಿ ಸೆಟ್ಲಮೆಂಟಿನಲ್ಲಿದ್ದ ಕಂಜರಭಾಟ ಜನ ಸೆಟ್ಲಮೆಂಟನ್ನು ತೊರೆದು ಹೊಸ ದಾಂಡೇಲಿಯಲ್ಲಿ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಹಾಗೇ ಬಳ್ಳಾರಿ ಸೆಟ್ಲಮೆಂಟಿನಲ್ಲಿದ್ದ ಭೋವಿ ಜನ ಇಂದು ಬಳ್ಳಾರಿಗೆ ಹೊಂದಿಕೊಂಡಿರುವ ಅಲ್ಲಿಪುರದಲ್ಲಿ ನೆಲೆಸಿದ್ದಾರೆ. ಹಾಗೇ ಕೊರಮರು ಓವರ್ ಬ್ರಿಡ್ಜ್ ಕೆಳ ಭಾಗದ ಸ್ಲಮ್ ಮತ್ತು ಬಸವನ ಕುಂಟೆ, ಎಂ.ಡಿ. ಕ್ಯಾಂಪ್ ಇತ್ಯಾದಿ ಕಡೆ ಹಂಚಿಹೋಗಿದ್ದಾರೆ. ಇನ್ನು ಕೆಲವು ಕೊರಮರು ನೀರಾವರಿ ಪ್ರದೇಶವಾದ ಕಂಪ್ಲಿ, ಗಂಗಾವತಿ ಮುಂತಾದ ಕಡೆ ವಲಸೆ ಹೋಗಿ ಅಲ್ಲಿಯೇ ನೆಲೆ ಕಂಡುಕೊಂಡಿದ್ದಾರೆ. ಹಾಗೇ

ಪಾರ್ಧಿಗಳು ಸೆಟ್ಲಮೆಂಟನ್ನು ತೊರೆದು ನಗರದ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಇನ್ನೂ ಕೆಲವು ಪಾರ್ಧಿಗಳು ಬಳ್ಳಾರಿ ಸೆಟ್ಲಮೆಂಟ ತೊರೆದು ಕಂಪ್ಲಿ, ಹೊಸಪೇಟೆಗಳಿಗೆ ಬಂದು ನೆಲೆಸಿರುವುದು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ತಿಳಿದುಬಂತು.

ಬಾಗಲಕೋಟೆ

ಬಾಗಲಕೋಟೆ ಸೆಟಲ್‌ಮೆಂಟನಲ್ಲಿ ಕೇವಲ ಗಂಟಿಚೋರ, ಕೊರಮ, ಚಪ್ಪರಬಂದ, ಪಾರ್ಧಿ ಸಮುದಾಯಗಳು ಮಾತ್ರ ಕಂಡುಬರುತ್ತವೆ. ಮೂಲತಃ ತಾವು ಸೆಟ್ಲಮೆಂಟ್‌ಗಳಲ್ಲಿಯೇ ಇದ್ದವರಾಗಿದ್ದು ತರುವಾಯ ನಗರ ಪ್ರದೇಶಕ್ಕೆ ವಲಸೆ ಹೋಗಿರುವುದಾಗಿ ಘಿಸಾಡಿ ಸಮುದಾಯದ ಹಿರಿಯ ವಕ್ತೃಗಳು ತಿಳಿಸಿದರು.

ಬಾಗಲಕೋಟ ಸೆಟ್ಲಮೆಂಟ್‌ನಲ್ಲಿ ಗಂಟಿಚೋರರ ಒಟ್ಟು ೪೯ ಕುಟುಂಬಗಳು ಕಂಡುಬರುತ್ತವೆ. ೧೨೪ ರಷ್ಟು ಪುರುಷರು ಮತ್ತು ೧೨೦ ರಷ್ಟು ಮಹಿಳೆಯರು ಒಟ್ಟು ೨೪೪ ಜನ ನೆಲೆಸಿದ್ದಾರೆ.

ಪಾರ್ಧಿಗಳ ಒಟ್ಟು ೨೫೫ ಕುಟುಂಬಗಳು ಸಮೀಕ್ಷೆಯಲ್ಲಿ ಕಂಡುಬಂದರು ಅದರಲ್ಲಿ ಪುರುಷರು ೮೪೫ ಮತ್ತು ಮಹಿಳೆಯರು ೮೫೪ ರಷ್ಟಿದ್ದು ಪಾರ್ಧಿಗಳ ಒಟ್ಟು ಜನಸಂಖ್ಯೆಯು ೧೬೯೯ರಷ್ಟು ಕಂಡುಬರುತ್ತದೆ.

ಚಪ್ಪರಬಂದ್‌ರ ಒಟ್ಟು ೩೮ ಕುಟುಂಬಗಳು ಪ್ರಸ್ತುತ ಸೆಟ್ಲಮೆಂಟಿನಲ್ಲಿ ಕಂಡುಬಂದಿದ್ದು, ಅದರಲ್ಲಿ ಪುರುಷರು ೧೩೩ ಹಾಗೂ ಮಹಿಳೆಯರು ಒಟ್ಟು ೨೩೨ ಜನ ನೆಲೆಸಿರುವುದು ಕಂಡುಬರುತ್ತದೆ. ಈ ಮೂರು ಸಮುದಾಯಗಳ ಒಟ್ಟು ೫೩೬ ಕುಟುಂಬಗಳು ಈ ಸೆಟ್ಲಮೆಂಟಿನಲ್ಲಿ ನೆಲೆಸಿದ್ದು ಅದರಲ್ಲಿ ಒಟ್ಟು ೧೦೯೮ ಪುರುಷರು ಹಾಗೂ ೧೦೭೫ ಮಹಿಳೆಯರು ಒಟ್ಟು ೨೧೭೩ ರಷ್ಟು ಜನಸಂಖ್ಯೆ ಈ ಸೆಟ್ಲಮೆಂಟಿನಲ್ಲಿ ಕಂಡುಬರುತ್ತದೆ. ಅಂದರೆ ಸೆಟ್ಲಮೆಂಟಿನಲ್ಲಿ ನೆಲೆಸಿದ ಗಂಟಿಚೋರ ಸಮುದಾಯದ ಪುರುಷರು ಶೇಕಡ ೧೦.೯೨ ರಷ್ಟಿದ್ದು, ಮಹಿಳೆಯರು ೧೧.೩೪ ರಷ್ಟು ನೆಲೆಸಿರುವುದು ಕಂಡುಬರುತ್ತದೆ. ಸೆಟ್ಲಮೆಂಟಿನಲ್ಲಿ ನೆಲೆಸಿದ ಗಂಟಿಚೋರ ಸಮುದಾಯದ ಒಟ್ಟು ಜನಸಂಖ್ಯೆ ೧೧.೧೩ ರಷ್ಟು ಕಂಡುಬರುತ್ತದೆ.

ಸೆಟ್ಲಮೆಂಟಿನಲ್ಲಿ ನೆಲೆಸಿದ ಪಾರ್ಧಿಗಳಲ್ಲಿ ಪುರುಷರು ಶೇಕಡ ೭೬.೯೫ ರಷ್ಟಿದ್ದರೆ, ಮಹಿಳೆಯರು ಶೇಕಡ ೭೯.೪೪ ರಷ್ಟು ಕಂಡುಬರುತ್ತಾರೆ. ಒಟ್ಟು ಶೇಕಡ ೭೮.೧೮ರಷ್ಟು ಪ್ರಮಾಣದಲ್ಲಿ ಪಾರ್ಧಿಗಳು ಸೆಟ್ಲಮೆಂಟಿನಲ್ಲಿ ನೆಲೆಸಿರುವುದು ಕಂಡುಬರುತ್ತದೆ.

ಕೋಷ್ಟಕ ೩.೧: ಬಾಗಲಕೋಟ ಸೆಟ್ಲ್‌ಮೆಂಟ್ ಜನಸಂಖ್ಯೆ

	ಕುಟುಂಬಗಳು	ಪುರುಷ	ಸ್ತ್ರೀ	ಒಟ್ಟು
ಗಂಟಿಚೋರ	೪೯	೧೨೪	೧೨೦	೨೪೪
ಪಾರ್ಧಿ	೨೫೫	೮೪೫	೮೫೪	೧೬೯೯
ಚಪ್ಪರಬಂದ	೩೮	೧೩೩	೯೯	೨೩೨
ಒಟ್ಟು	೩೪೨	೧೧೦೨	೧೦೭೩	೨೧೭೫

ಚಪ್ಪರಬಂದ ಸಮುದಾಯದಲ್ಲಿ ಸೆಟ್ಲಮೆಂಟಿನಲ್ಲಿ ನೆಲೆಸಿದ ಪುರುಷರು ೧೨.೧೧ ರಷ್ಟಿದ್ದು ಮಹಿಳೆಯರು ೯.೨೦ ರಷ್ಟು ಕಂಡುಬರುತ್ತಾರೆ. ಸೆಟ್ಲಮೆಂಟಿನಲ್ಲಿ ನೆಲೆಸಿದ ಒಟ್ಟು ಚಪ್ಪರಬಂದ ಸಮುದಾಯದ ಜನಸಂಖ್ಯೆ ೧೦.೬೭ ರಷ್ಟಿದೆ.

ಬಾಗಲಕೋಟ ಸೆಟ್ಲಮೆಂಟಿನಲ್ಲಿ ನೆಲೆಸಿದ ಈ ಮೂರು ಸಮುದಾಯಗಳಲ್ಲಿ ಪಾರ್ಧಿಗಳ ಜನಸಂಖ್ಯೆ (ಶೇಕಡ ೭೯.೪೪) ಹೆಚ್ಚಾಗಿದ್ದು ಕಂಡುಬರುತ್ತದೆ. ಹಾಗೇ ಅತೀ ಕಡಿಮೆ ಜನಸಂಖ್ಯೆಯು ಚಪ್ಪರಬಂದ ಸಮುದಾಯದ್ದಾಗಿದೆ. ಅದಕ್ಕೆ ಸೆಟ್ಲಮೆಂಟಿನ ಚಪ್ಪರಬಂದ ಸಮುದಾಯದವರು ಹೀಗೆ ತಿಳಿಸುತ್ತಾರೆ. ಹಿಂದೆ ತಮ್ಮ ಸಮುದಾಯದ ಜನಸಂಖ್ಯೆಯೇ ಸೆಟ್ಲಮೆಂಟಿನಲ್ಲಿ ಹೆಚ್ಚಾಗಿತ್ತು. ಆದರೆ ಕೆಲವು ಹಳ್ಳಿಗಳಲ್ಲಿ ಬ್ರಿಟೀಷ್ ಸರ್ಕಾರವು ಕೃಷಿ ಭೂಮಿಗಳನ್ನು ನೀಡಿರುವುದರಿಂದ ಸೆಟ್ಲಮೆಂಟ ವಿಮುಕ್ತಗೊಂಡ ತರುವಾಯ ತಮ್ಮ ಭೂಮಿಗಳಿರುವ ಆಯಾ ಹಳ್ಳಿಗಳಿಗೆ ಬಹುಪಾಲು ಚಪ್ಪರಬಂದ ಜನ ವಲಸೆ ಹೋಗಿ ಅಲ್ಲಿಯೇ ನೆಲೆಸಿದ್ದಾರೆ. ಹಾಗೇ ಉದ್ಯೋಗಗಳನ್ನು ಅರಸಿಕೊಂಡು ಹತ್ತಿರದ ಪೂನಾ, ಸೊಲ್ಲಾಪುರ, ಗದಗ ಮುಂತಾದ ಕಡೆ ವಲಸೆ ಹೋಗಿರುವುದರಿಂದ ತಮ್ಮ ಸಂಖ್ಯೆ ಸೆಟ್ಲಮೆಂಟಿನಲ್ಲಿ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿದೆ ಎಂಬ ಕಾರಣವನ್ನು ನೀಡುತ್ತಾರೆ. ಹಾಗೇ ಗಂಟಿಚೋರ ಸಮುದಾಯದ ಜನವೂ ಸಹ ಪುಣೆ, ಬಾಂಬೆಗಳಿಗೆ ಹೆಚ್ಚಾಗಿ ವಲಸೆ ಹೋಗಿ ಅಲ್ಲಿಯೇ ಕೂಲಿ ಕೆಲಸಗಳನ್ನು ಮಾಡುತ್ತ ನೆಲೆನಿಂತಿರುವುದು ತಿಳಿದುಬರುತ್ತದೆ.

ಬಿಜಾಪುರ

ಬಿಜಾಪುರದಲ್ಲಿಯೂ ಪ್ರಸ್ತುತ ಗಂಟಿಚೋರ, ಪಾರ್ಧಿ ಮತ್ತು ಚಪ್ಪರಬಂದ ಸಮುದಾಯಗಳು ಮಾತ್ರ ಸೆಟ್ಲಮೆಂಟಿನಲ್ಲಿ ಕಂಡುಬರುತ್ತವೆ. ಕೊರಮ, ಭೋವಿ ಸಮುದಾಯಗಳು ಹಿಂದೆ ಸೆಟ್ಲಮೆಂಟಿನಲ್ಲಿ ನೆಲೆಸಿದ್ದರೂ ಸೆಟ್ಲಮೆಂಟ್ ವಿಮುಕ್ತಗೊಂಡ ತರುವಾಯ ಅವರು ಸೆಟ್ಲಮೆಂಟನ್ನು ತೊರೆದು ನಗರದ ಬೆರೆ ಕಡೆ ಹೋಗಿ ನೆಲೆಸಿರುವುದು ತಿಳಿದುಬರುತ್ತದೆ.

ಬಿಜಾಪುರದಲ್ಲಿ ಗಂಟಿಚೋರರ ೮೧ ಕುಟುಂಬಗಳು ಕಂಡುಬರುತ್ತಿದ್ದು, ಅದರಲ್ಲಿ ೧೮೦ ಪುರುಷರು, ೧೭೮ ಮಹಿಳೆಯರು ಒಟ್ಟು ೩೫೮ ಜನ ಕಂಡುಬರುತ್ತಾರೆ.

ಪಾರ್ಧಿಗಳ ಒಟ್ಟು ಕುಟುಂಬ ೨೬೧ ಇದ್ದು, ಅದರಲ್ಲಿ ೬೭೩ ಜನ ಪುರುಷರು ಮತ್ತು ೭೭೦ ಜನ ಮಹಿಳೆಯರು, ಒಟ್ಟು ೧೪೪೩ರಷ್ಟು ಪಾರ್ಧಿಗಳ ಜನಸಂಖ್ಯೆ ಸೆಟ್ಲಮೆಂಟಿನಲ್ಲಿ ಕಂಡುಬರುತ್ತದೆ. ಚಪ್ಪರಬಂದರ ಒಟ್ಟು ಕುಟುಂಬಗಳು ೧೭೦ ಸೆಟ್ಲಮೆಂಟಿನಲ್ಲಿದ್ದು ಅದರಲ್ಲಿ ೪೪೮ ಪುರುಷರು ಮತ್ತು ೩೮೮ ಮಹಿಳೆಯರು ಒಟ್ಟು ೮೩೬ ಜನ ಚಪ್ಪರಬಂದ್ ಜನಸಂಖ್ಯೆ ಕಂಡುಬರುತ್ತದೆ.

ಕೋಷ್ಟಕ ೩.೨: ಬಿಜಾಪುರ ಸೆಟ್ಲ್‌ಮೆಂಟ್ ಜನಸಂಖ್ಯೆ

	ಕುಟುಂಬಗಳು	ಪುರುಷ	ಸ್ತ್ರೀ	ಒಟ್ಟು
ಗಂಟಿಚೋರ್	೮೧	೧೮೦	೧೭೮	೩೫೮
ಪಾರ್ಧಿ	೨೬೧	೬೭೩	೭೭೬	೧೪೪೯
ಚಪ್ಪರಬಂದ್	೧೭೦	೪೪೮	೩೮೮	೮೩೬
ಒಟ್ಟು	**೫೧೨**	**೧೩೦೧**	**೧೩೪೨**	**೨೬೪೩**

ಮೂರೂ ಸಮುದಾಯಗಳಿಂದ ಒಟ್ಟು ೫೧೨ ಕುಟುಂಬಗಳು ಸೆಟ್ಲಮೆಂಟಿನಲ್ಲಿ ನೆಲೆಸಿವೆ. ಪುರುಷರು ಒಟ್ಟು ೧೩೦೧ ಮತ್ತು ಮಹಿಳೆಯರು ಒಟ್ಟು ೧೩೪೨, ಒಟ್ಟು ಸೆಟ್ಲಮೆಂಟ್ ಜನಸಂಖ್ಯೆ ೨೬೦೦ ರಷ್ಟಿದೆ. ಈ ಸೆಟ್ಲಮೆಂಟಿನಲ್ಲಿಯೂ ಸಹ ಅರ್ಧದಷ್ಟು (ಶೇ.೫೦.೯೭) ಕುಟುಂಬಗಳು ಪಾರ್ಧಿಗಳದ್ದೇ ಆಗಿವೆ. ನಂತರ ಚಪ್ಪರಬಂದರ ಕುಟುಂಬಗಳು ೩೩.೨೦ ರಷ್ಟಿದ್ದು ಗಂಟಿಚೋರರ ಕುಟುಂಬಗಳು ಕೇವಲ ಶೇಕಡ ೧೫.೧೯ರಷ್ಟಿವೆ.

ಇದರಲ್ಲಿ ಗಂಟಿಚೋರ ಪುರುಷರ ಪ್ರಮಾಣವು ಶೇಕಡ ೧೩.೮೪ ರಷ್ಟಿದೆ ಹಾಗೂ ಮಹಿಳೆಯರು ಶೇಕಡ ೧೩.೨೦ ರಷ್ಟು ಕಂಡುಬರುತ್ತದೆ. ಹಾಗೇ ಪಾರ್ಧಿಗಳ ಪುರುಷರ ಜನಸಂಖ್ಯೆಯು ಶೇಕಡ ೫೧.೭೩ ರಷ್ಟಿದೆ ಮತ್ತು ಮಹಿಳೆಯರು ೫೭.೮೨ ರಷ್ಟಿದ್ದಾರೆ. ಅಂದರೆ ಪಾರ್ಧಿಗಳು ಪುರುಷರಿಗಿಂತ ಮಹಿಳೆಯರ ಪ್ರಮಾಣವೇ ಈ ಸೆಟ್ಲಮೆಂಟ್‌ನಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ಹಾಗೇ ಚಪ್ಪರಬಂದ್ ಸಮುದಾಯದ ಪುರುಷರ ಪ್ರಮಾಣವು ಶೇಕಡ ೩೪೪೩ ರಷ್ಟಿದ್ದು ಮಹಿಳೆಯರ ಪ್ರಮಾಣವು ಶೇಕಡ ೨೮.೯೧ ರಷ್ಟಿದೆ. ಒಟ್ಟು ಜನಸಂಖ್ಯೆಯಲ್ಲಿ ಪಾರ್ಧಿಗಳು ಶೇಕಡ ೫೪.೦೮ ರಷ್ಟಿದ್ದರೆ ಚಪ್ಪರಬಂದರು ಶೇಕಡ ೩೨.೧೬ ರಷ್ಟು ಕಂಡುಬರುತ್ತಾರೆ. ಹಾಗೇ ಗಂಟಿಚೋರರ ಒಟ್ಟು ಜನಸಂಖ್ಯೆಯು ಕೇವಲ ಶೇಕಡ ೧೩.೭೬ ರಷ್ಟು ಮಾತ್ರ ಕಂಡುಬರುತ್ತದೆ.

ದಾಂಡೇಲಿ

ಹಳೇ ದಾಂಡೇಲಿಯ ಗಣೇಶ ಗಲ್ಲಿ ಎಂದು ಗುರುತಿಸುವ ಭಾಗವೇ ಹಿಂದೆ ಸೆಟ್ಲಮೆಂಟ್ ಆಗಿದ್ದಿತು. ಈ ಸೆಟ್ಲಮೆಂಟಿನಲ್ಲಿ ಇಂದು ಕೇವಲ ಗಂಟಿಚೋರ ಸಮುದಾಯ ಮಾತ್ರ ಕಂಡುಬರುತ್ತದೆ. ಹಿಂದೆ ಪಾರ್ಧಿ, ಭೋವಿ, ಕಂಜರಭಾಟ ಮುಂತಾದ ಸಮುದಾಯಗಳು ಈ ಸೆಟ್ಲಮೆಂಟಿನಲ್ಲಿ ಇದ್ದುದಾಗಿ ತಿಳಿದುಬರುತ್ತದೆ. ಆದರೆ ಅವುಗಳಲ್ಲಿ ಭೋವಿ ಮತ್ತು ಪಾರ್ಧಿಗಳು ಬೇರೆ-ಬೇರೆ ಕಡೆ ವಲಸೆ ಹೋಗಿದ್ದಾರೆ. ಕಂಜರಭಾಟರು ಸೆಟ್ಲಮೆಂಟ್ ತೊರೆದು ಹೊಸ ದಾಂಡೇಲಿಯ ಒಂದು ಭಾಗದಲ್ಲಿ ನೆಲೆಸಿದ್ದಾರೆ. ಹೀಗಾಗಿ ಗಂಟಿಚೋರ್ ಜನ ಮಾತ್ರ ಇಂದು ಸೆಟ್ಲಮೆಂಟಿನಲ್ಲಿ ಕಂಡುಬರುತ್ತಾರೆ.

ಕೋಷ್ಟಕ ೩.೩: ದಾಂಡೇಲಿ ಸೆಟ್ಲ್‌ಮೆಂಟ್ ಜನಸಂಖ್ಯೆ

	ಕುಟುಂಬಗಳು	ಪುರುಷ	ಸ್ತ್ರೀ	ಒಟ್ಟು
ದಾಂಡೇಲಿ	೮೯	೨೩೭	೨೩೧	೪೬೮

ಈ ಸೆಟ್ಲಮೆಂಟಿನಲ್ಲಿ ಗಂಟಿಚೋರರ ೮೯ ಕುಟುಂಬಗಳಿದ್ದು ಅದರಲ್ಲಿ ಪುರುಷರು ೨೩೭ (ಶೇ.೫೦.೬೪) ಮತ್ತು ಮಹಿಳೆಯರು ೨೩೧ (ಶೇ.೪೯.೩೬) ಒಟ್ಟು ೪೬೮ ಜನ ಮಾತ್ರ ನೆಲೆಸಿರುವುದು ಕಂಡುಬರುತ್ತದೆ.

ಗದಗ

ಹುಬ್ಬಳ್ಳಿಯ ತರುವಾಯ ಕರ್ನಾಟಕದಲ್ಲಿಯ ಎರಡನೆಯ ಅತಿ ದೊಡ್ಡ ಸೆಟ್ಲಮೆಂಟ್ ಗದಗಿನದಾಗಿದೆ. ಗದಗಿನಲ್ಲಿ ಭೋವಿಗಳ ಹೊರತಾಗಿ ಗಂಟಿಚೋರ, ಕೊರಮ, ಪಾರ್ಧಿ, ಚಪ್ಪರಬಂದ, ಕಂಜರಭಾಟ ಸಮುದಾಯಗಳು ನೆಲೆಸಿವೆ. ಭೋವಿ ಸಮುದಾಯದ ಜನ ಸೆಟ್ಲಮೆಂಟ್ ವಿಮುಕ್ತಗೊಂಡ ತರುವಾಯ ಸೆಟ್ಲಮೆಂಟನ್ನು ತೊರೆದು ನಗರದ ಕೊಳಚೆ ಪ್ರದೇಶ ಇತ್ಯಾದಿ ಕಡೆ ವಲಸೆ ಹೋಗಿದ್ದಾರೆ. ಹಾಗೂ ಹುಬ್ಬಳ್ಳಿ, ಗೋವಾ ಮುಂತಾದ ಕಡೆ ಕೂಲಿ ಕೆಲಸವನ್ನು ಹುಡುಕಿಕೊಂಡು ತೆರಳಿರುವುದಾಗಿ ಸ್ಥಳೀಯ ವಕ್ತೃಗಳು ತಿಳಿಸುತ್ತಾರೆ.

ಗಂಟಿಚೋರರ ಕುಟುಂಬಗಳು ಈ ಸೆಟ್ಲಮೆಂಟಿನಲ್ಲಿ ೧೩೦ ಕುಟುಂಬಗಳಿದ್ದು ಅದರಲ್ಲಿ ಪುರುಷರು ೩೦೦ ಹಾಗೂ ಮಹಿಳೆಯರು ೩೪೭ ಒಟ್ಟು ೭೦೭ ಜನ ನೆಲೆಸಿರುವುದು ತಿಳಿದುಬರುತ್ತದೆ. ಕೊರಮ ಸಮುದಾಯದವರಲ್ಲಿ ಪುರುಷರು ೭೬೮ ಮತ್ತು ಮಹಿಳೆಯರು ೬೯೮ ಒಟ್ಟು ೧೫೬೬ರಷ್ಟಿದ್ದು ೨೮೬ ಕುಟುಂಬಗಳಿವೆ.

ಪಾರ್ಧಿಗಳ ಕುಟುಂಬಗಳು ೩೧ ಇದ್ದು ಅದರಲ್ಲಿ ಪುರುಷರು ೭೯ ಹಾಗೂ ಮಹಿಳೆಯರು ೮೧ ಒಟ್ಟು ೧೬೦ ಜನ ಕಂಡುಬರುತ್ತಾರೆ. ಚಪ್ಪರಬಂದ ಸಮುದಾಯದ ೧೦೧ ಕುಟುಂಬಗಳು ಇಲ್ಲಿ ನೆಲೆಸಿದ್ದು, ಅದರಲ್ಲಿ ಪುರುಷರು ೩೧೮ ಹಾಗೂ ಮಹಿಳೆಯರು ೨೮೮ ಒಟ್ಟು ೬೦೬ ಜನರಿದ್ದಾರೆ. ಕಂಜರಭಾಟರ ೪೭ ಕುಟುಂಬಗಳಿದ್ದು ಅವರಲ್ಲಿ ಪುರುಷರು ೧೦೩ ಹಾಗೂ ಮಹಿಳೆಯರು ೧೦೦ ಒಟ್ಟು ೨೦೩ ಜನ ಕಂಡುಬರುತ್ತಾರೆ.

ಕೋಷ್ಟಕ ೩.೪: ಗದಗ ಸೆಟ್ಲ್‌ಮೆಂಟ್ ಜನಸಂಖ್ಯೆ

	ಕುಟುಂಬಗಳು	ಪುರುಷ	ಸ್ತ್ರೀ	ಒಟ್ಟು
ಗಂಟಿಚೋರ್	೧೩೦	೩೬೦	೩೪೭	೭೦೭
ಕೊರಮ	೨೮೬	೭೬೮	೬೯೮	೧೪೬೬
ಪಾರ್ಧಿ	೩೧	೭೯	೮೧	೧೬೦
ಚಪ್ಪರಬಂದ್	೧೦೧	೨೩೬	೨೦೮	೪೪೪
ಕಂಜರಭಾಟ	೪೭	೧೦೩	೧೦೦	೨೦೩
ಒಟ್ಟು	೫೯೫	೧೫೪೬	೧೪೩೪	೨೯೮೦

ಅಂದರೆ ಸೆಟ್ಲಮೆಂಟಿನ ಒಟ್ಟು ಕುಟುಂಬಗಳಲ್ಲಿ ಗಂಟಿಚೋರರ ಕುಟುಂಬಗಳು ಶೇಕಡ ೨೧.೮೪ ರಷ್ಟಿವೆ. ಇದರಲ್ಲಿ ಪುರುಷರು ಶೇಕಡ ೨೨.೧೧ ಮತ್ತು ಮಹಿಳೆಯರು ಶೇಕಡ ೨೧.೪೯ ರಷ್ಟಿದ್ದಾರೆ. ಕೊರಮರ ಕುಟುಂಬಗಳು ಶೇಕಡ ೪೮.೦೭ ಇದ್ದು ಅದರಲ್ಲಿ ಪುರುಷರು ಶೇಕಡ ೪೭.೧೭ ಮತ್ತು ಮಹಿಳೆಯರು ಶೇಕಡ ೪೯.೪೪ ರಷ್ಟು ಕಂಡುಬರುತ್ತಾರೆ.

ಸೆಟ್ಲಮೆಂಟಿನಲ್ಲಿರುವ ಒಟ್ಟು ಕುಟುಂಬಗಳಲ್ಲಿ ಪಾರ್ಧಿಗಳ ಕುಟುಂಬಗಳು ಕೇವಲ ಶೇಕಡ ೫.೨೭ ರಷ್ಟು ಮಾತ್ರ ಇವೆ. ಇದರಲ್ಲಿ ಪುರುಷರು ಶೇಕಡ ೪.೮೬ ಮತ್ತು ಮಹಿಳೆಯರು ಶೇಕಡ ೫.೦೧ ರಷ್ಟಿದ್ದಾರೆ. ಚಪ್ಪರಬಂದ ಸಮುದಾಯದ ಒಟ್ಟು ಕುಟುಂಬಗಳು ಶೇಕಡ ೧೬.೯೮ ರಷ್ಟಿದ್ದು ಅದರಲ್ಲಿ ಪುರುಷರು ಶೇಕಡ ೧೯.೧೬ ಮತ್ತು ಮಹಿಳೆಯರು ಶೇಕಡ ೧೭.೮೪ ರಷ್ಟಿದ್ದಾರೆ.

ಕಂಜರಭಾಟ ಸಮುದಾಯದಲ್ಲಿ ಕುಟುಂಬಗಳ ಸಂಖ್ಯೆ ಒಟ್ಟು ಶೇಕಡ ೭.೪೯ ಇದ್ದು ಪುರುಷರು ಶೇಕಡ ೬.೩೨ ಮತ್ತು ಮಹಿಳೆಯರು ಶೇಕಡ ೬.೧೯ ರಷ್ಟಿದ್ದಾರೆ. ಗದಗ ಸೆಟ್ಲಮೆಂಟಿನಲ್ಲಿ ಕೊರಮ ಸಮುದಾಯವು ಹೆಚ್ಚಿನ ಶೇಕಡ (೫೦.೮೪) ಜನಸಂಖ್ಯೆಯನ್ನು ಹೊಂದಿದ್ದಾರೆ. ಪಾರ್ಧಿಗಳು ಅತೀ ಕಡಿಮೆ (ಶೇ.೫.೧೯) ಜನಸಂಖ್ಯೆಯನ್ನು ಹೊಂದಿರುವುದನ್ನು ಕಾಣಬಹುದಾಗಿದೆ. ಈ ಸೆಟ್ಲಮೆಂಟಿನ ಒಟ್ಟು ಜನಸಂಖ್ಯೆಯಲ್ಲಿ ಪುರುಷರು ಶೇಕಡ ೫೦.೨೧, ಮಹಿಳೆಯರು ಶೇಕಡ ೪೯.೭೯ ರಷ್ಟು ಕಂಡುಬರುತ್ತಾರೆ.

ಗೋಕಾಕ್ ಫಾಲ್ಸ್

ಗೋಕಾಕ್ ಫಾಲ್ಸ್‌ನಲ್ಲಿ ಇಂದು ಕೇವಲ ಹತ್ತಿಗಿರಿಣಿಯಲ್ಲಿ ಕೆಲಸ ಮಾಡುವ ಕುಟುಂಬಗಳು ಮಾತ್ರ ಸೆಟ್ಲಮೆಂಟಿನಲ್ಲಿ ನೆಲೆಸಿವೆ. ಅದರಲ್ಲಿ ಗಂಟಿಚೋರ ಮತ್ತು ಪಾರ್ಧಿ ಎರಡು ಸಮುದಾಯಗಳನ್ನು ಮಾತ್ರ ಇಂದು ಕಾಣಲು ಸಾಧ್ಯ. ಪ್ರಾರಂಭದಲ್ಲಿದ್ದ ಕೊರಮ ಮುಂತಾದ ಬುಡಕಟ್ಟುಗಳು ಸೆಟ್ಲಮೆಂಟ್ ವಿಮುಕ್ತಗೊಂಡ ತರುವಾಯ ಈ ಸೆಟ್ಲಮೆಂಟ್ ತೊರೆದು ಹೋಗಿದ್ದಾರೆ. ಇಂದು ಸೆಟ್ಲಮೆಂಟ್ ಸ್ಥಳೀಯ ಹತ್ತಿಗಿರಣಿಯ ಮಾಲೀಕರ ಹಿಡಿತದಲ್ಲಿದ್ದು ಸೆಟ್ಲಮೆಂಟಿನಲ್ಲಿ ವಿಮುಕ್ತ ಬುಡಕಟ್ಟು ನೌಕರರಿಗಾಗಿ ವಸತಿ ನಿಲಯಗಳನ್ನು ನಿರ್ಮಿಸಲಾಗಿದೆ. ಇಲ್ಲಿಯ ಗಿರಣಿಯಲ್ಲಿ ನಿವೃತ್ತಿ ಪಡೆದ ತರುವಾಯ ಈ ಸಮುದಾಯದ ಜನ ವಸತಿನಿಲಯಗಳನ್ನು ತೊರೆದು ಹತ್ತಿರದ ಗೋಕಾಕ್ ಮುಂತಾದ ನಗರ ಪ್ರದೇಶಗಳಿಗೆ ಹೋಗಿ ನೆಲೆಸಿರುವುದು ತಿಳಿದುಬರುತ್ತದೆ.

ಕೋಷ್ಟಕ ೩.೫: ಗೋಕಾಕ್ ಸೆಟ್ಲ್‌ಮೆಂಟ್ ಜನಸಂಖ್ಯೆ

	ಕುಟುಂಬಗಳು	ಪುರುಷ	ಸ್ತ್ರೀ	ಒಟ್ಟು
ಗಂಟಿಚೋರ	೧೦೬	೨೧೭	೧೯೫	೪೧೨

ಪ್ರಸ್ತುತ ಈ ಸೆಟ್ಲಮೆಂಟಿನಲ್ಲಿ ಗಂಟಿಚೋರರು ೧೦೬ ಕುಟುಂಬಗಳು ಕಂಡುಬರುತ್ತಿದ್ದು ಅದರಲ್ಲಿ ಪುರುಷರು ೨೧೭ ಹಾಗೂ ಮಹಿಳೆಯರು ೧೯೫, ಒಟ್ಟು ೪೧೨ ಜನ ಕಂಡುಬರುತ್ತಾರೆ.

ಹುಬ್ಬಳ್ಳಿ

ಹುಬ್ಬಳ್ಳಿಯಲ್ಲಿ ಒಟ್ಟು ೬ ಸಮುದಾಯಗಳು ಸೆಟ್ಲಮೆಂಟಿನಲ್ಲಿ ನೆಲೆಸಿದ್ದು ಕಂಡುಬರುತ್ತದೆ. ಕರ್ನಾಟಕದ ಇತರ ಸೆಟ್ಲಮೆಂಟ್‌ಗಳಿಗೆ ಹೋಲಿಸಿದರೆ ಹುಬ್ಬಳ್ಳಿಯ ಸೆಟ್ಲಮೆಂಟ್ ಅತೀ ದೊಡ್ಡದೆಂದೇ ಹೇಳಬಹುದು. ಇಲ್ಲಿ ಭೋವಿ, ಗಂಟಿಚೋರ, ಕೊರಮ, ಪಾರ್ಧಿ, ಚಪ್ಪರಬಂದ್, ಕಂಜರಭಾಟ ಸಮುದಾಯಗಳು ನೆಲೆಸಿವೆ. ಹಿಂದೆ ಮಾಂಗ್‌ಗಾರುಡಿಗಳು ಇಲ್ಲಿ ನೆಲೆಸಿರುವುದು ತಿಳಿದುಬರುವುದಾದರೂ ಆ ಸಮುದಾಯದ ಒಂದು ಕುಟುಂಬವೂ ಇಂದು ಈ ಸೆಟ್ಲಮೆಂಟಿನಲ್ಲಿ ಕಂಡುಬರುವುದಿಲ್ಲ. ಮಾಂಗ್‌ಗಾರುಡಿಗಳು ಗೋವಾ ಮತ್ತು ಪೂನಾ, ಮುಂಬೈಗಳಿಗೆ ಇಲ್ಲಿಂದ ವಲಸೆ ಹೋಗಿರುವುದಾಗಿ ಹಿರಿಯ ವಕ್ತೃಗಳು ತಿಳಿಸುತ್ತಾರೆ.

ಹುಬ್ಬಳ್ಳಿ ಸೆಟ್ಲಮೆಂಟಿನಲ್ಲಿ ಭೋವಿಗಳ ೧೯೯ ಕುಟುಂಬಗಳು ಕಂಡುಬರುತ್ತಿದ್ದು ಅದರಲ್ಲಿ ಪುರುಷರು ೬೦೨ ಮತ್ತು ಮಹಿಳೆಯರು ೫೧೧ ಒಟ್ಟು ಜನಸಂಖ್ಯೆ ೧೧೧೩ರಷ್ಟಿದೆ. ಗಂಟಿಚೋರ ಸಮುದಾಯದ ೧೭೦ ಕುಟುಂಬಗಳು ಇಲ್ಲಿ ಕಂಡುಬರುತ್ತವೆ. ಅದರಲ್ಲಿ ೪೧೨ ಪುರುಷರು ಹಾಗೂ ೩೫೫ ಮಹಿಳೆಯರು ಒಟ್ಟು ೭೬೭ ಜನರು ನೆಲೆಸಿದ್ದಾರೆ.

ಕೋಷ್ಟಕ ೩.೬: ಹುಬ್ಬಳ್ಳಿ ಸೆಟ್ಲ್‌ಮೆಂಟ್ ಜನಸಂಖ್ಯೆ

	ಕುಟುಂಬಗಳು	ಪುರುಷ	ಸ್ತ್ರೀ	ಒಟ್ಟು
ಭೋವಿ/ವಡ್ಡರ್	೧೯೯	೬೦೨	೫೧೧	೧೧೧೩
ಗಂಟಿಚೋರ್	೧೭೦	೪೧೨	೩೫೫	೭೬೭
ಕೊರಮ	೬೯೧	೨೩೦೪	೨೨೦೧	೪೫೦೫
ಪಾರ್ಧಿ	೫೫೯	೧೬೦೬	೧೫೦೭	೩೧೧೩
ಚಪ್ಪರಬಂದ್	೨೮	೬೫	೬೦	೧೨೫
ಕಂಜರಭಾಟ	೮೨	೧೯೩	೧೬೧	೩೫೪
ಒಟ್ಟು	೧೭೨೯	೫೧೮೨	೪೭೯೫	೯೯೭೭

ಕೊರಮ ಸಮುದಾಯದ ೬೯೧ ಮನೆಗಳಿದ್ದು, ಪುರುಷರು ೨೩೦೪ ಮತ್ತು ಮಹಿಳೆಯರು ೨೨೦೧ ಒಟ್ಟು ೪೫೦೫ ರಷ್ಟಿರುವುದು ಕಂಡುಬರುತ್ತದೆ. ಪಾರ್ಧಿಗಳು ೫೫೯ ಕುಟುಂಬಗಳಿದ್ದು ಪುರುಷರು ೧೬೦೬ ಮತ್ತು ಮಹಿಳೆಯರು ೧೫೦೭ ಒಟ್ಟು ೩೧೧೩ ರಷ್ಟು ಕಂಡುಬರುತ್ತಾರೆ. ಚಪ್ಪರಬಂದ ಸಮುದಾಯದ ೨೮ ಕುಟುಂಬಗಳು ಇಲ್ಲಿ ಪ್ರಸ್ತುತ ನೆಲೆಸಿದ್ದು ಅದರಲ್ಲಿ ಪುರುಷರು ೬೫ ಮತ್ತು ಮಹಿಳೆಯರು ೬೦ ಒಟ್ಟು ೧೨೫ ಜನ ನೆಲೆಸಿದ್ದಾರೆ.

ಕಂಜರಭಾಟ ೮೨ ಕುಟುಂಬಗಳು ಈ ಸೆಟ್ಲಮೆಂಟಿನಲ್ಲಿದ್ದು ೧೯೩ ಜನ ಪುರುಷರು ಹಾಗೂ ೧೬೧ ಜನ ಮಹಿಳೆಯರು ಒಟ್ಟು ೩೫೪ ಜನ ಹುಬ್ಬಳ್ಳಿ ಸೆಟ್ಲಮೆಂಟಿನಲ್ಲಿ ಕಂಡುಬರುತ್ತಾರೆ. ಎಲ್ಲಾ ೬ ಸಮುದಾಯಗಳನ್ನು ಸೇರಿಸಿ ಒಟ್ಟು ೧೮೭೦ ಕುಟುಂಬಗಳು ಈ ಸೆಟ್ಲಮೆಂಟಿನಲ್ಲಿ ನೆಲೆಸಿವೆ. ಇದರಲ್ಲಿ

ಶೇಕಡ ೧೧.೫೦ ರಷ್ಟು ಭೋವಿ ಸಮುದಾಯದ ಕುಟುಂಬಗಳಿದ್ದು ಅದರಲ್ಲಿ ಶೇಕಡ ೧೧.೬೧ ಪುರುಷರು ಹಾಗೂ ೧೦.೬೫ ಮಹಿಳೆಯರು ಒಟ್ಟು ಭೋವಿ ಜನಸಂಖ್ಯೆಯು ಶೇಕಡ ೧೧.೧೫ ರಷ್ಟಿದೆ.

ಗಂಟಿಚೋರರ ಕುಟುಂಬಗಳು ಶೇಕಡ ೯.೮೪ ರಷ್ಟಿದ್ದು, ಅದರಲ್ಲಿ ಪುರುಷರು ಶೇಕಡ ೭.೪೧ ಮತ್ತು ಮಹಿಳೆಯರು ಶೇಕಡ ೭.೯೫ ಒಟ್ಟು ಶೇಕಡ ೭.೬೮ ರಷ್ಟು ಕಂಡುಬರುತ್ತಾರೆ. ಕೊರಮರ ಕುಟುಂಬಗಳು ಶೇಕಡ ೩೯.೯೭ ರಷ್ಟಿದ್ದು ಇದರಲ್ಲಿ ಪುರುಷರು ಶೇಕಡ ೪೪.೪೬ ಮತ್ತು ಮಹಿಳೆಯರು ಶೇಕಡ ೪೫.೯ ರಷ್ಟಿದ್ದು ಒಟ್ಟು ಶೇಕಡ ೪೫.೧೫ ರಷ್ಟು ಕಂಡುಬರುತ್ತಾರೆ.

ಪಾರ್ಧಿಗಳ ಕುಟುಂಬಗಳು ಶೇಕಡ ೩೨.೩೪ ರಷ್ಟಿದ್ದು ಇದರಲ್ಲಿ ಪುರುಷರು ಶೇಕಡ ೩೧.೪೪ ಮಹಿಳೆಯರು ಒಟ್ಟು ಶೇಕಡ ೩೧.೨೩ ರಷ್ಟು ಕಂಡುಬರುತ್ತಾರೆ. ಚಪ್ಪರಬಂದ ಸಮುದಾಯದ ಒಟ್ಟು ಕುಟುಂಬಗಳು ಶೇಕಡ ೧.೬೧ ರಷ್ಟಿದ್ದು ಪುರುಷರು ಶೇಕಡ ೧.೨೫ ಮತ್ತು ಮಹಿಳೆಯರು ಶೇಕಡ ೧.೨೫ ಒಟ್ಟು ಶೇಕಡ ೧.೨೫ ರಷ್ಟು ಇದ್ದಾರೆ.

ಕಂಜರಭಾಟರ ಒಟ್ಟು ಕುಟುಂಬಗಳು ಶೇಕಡ ೪.೭೪ ರಷ್ಟಿದ್ದು ಪುರುಷರು ಶೇಕಡ ೩.೭೨ ಹಾಗೂ ಮಹಿಳೆಯರು ಶೇಕಡ ೩.೩೫ ರಷ್ಟು ಒಟ್ಟು ಶೇಕಡ ೫.೪ ರಷ್ಟಿದ್ದಾರೆ. ಇದರಲ್ಲಿ ಅತೀ ಹೆಚ್ಚು ಜನಸಂಖ್ಯೆಯು ಕೊರಮರದಾಗಿದ್ದು (ಶೇ.೪೫.೧೫) ಅತೀ ಕನಿಷ್ಟ ಜನಸಂಖ್ಯೆಯು ಚಪ್ಪರಬಂದ್ (ಶೇ.೧.೨೫) ಸಮುದಾಯದ್ದಾಗಿದೆ. ಸೆಟ್ಲಮೆಂಟಿನಲ್ಲಿ ನೆಲೆಸಿದ ೬ ಸಮುದಾಯಗಳಲ್ಲಿ ಪುರುಷರು ಶೇಕಡ ೫೧.೯೩ರಷ್ಟಿದ್ದು ಮಹಿಳೆಯರು ಶೇಕಡ ೪೮.೦೭ರಷ್ಟು ನೆಲೆಸಿರುವುದು ಕಂಡುಬರುತ್ತದೆ.

ಪ್ರಸ್ತುತ ಸಮೀಕ್ಷೆಯ ಪ್ರಕಾರ ೬ ಸೆಟ್ಲಮೆಂಟಿನ ಒಟ್ಟು ಜನಸಂಖ್ಯೆ ೨೩,೬೪೦ ಇದ್ದು ಇದರಲ್ಲಿ ಭೋವಿ ಸಮುದಾಯದ ಕುಟುಂಬಗಳ ಪ್ರಮಾಣವು ಶೇ.೪.೮೯ ಇದೆ. ಹಾಗೂ ಪುರುಷರು ಶೇಕಡ ೪.೯೬ ಹಾಗೂ ಮಹಿಳೆಯರು ಶೇಕಡ ೪.೪೩, ಒಟ್ಟು ಶೇಕಡ ೪.೭೦ ರಷ್ಟು ಕಂಡುಬರುತ್ತಾರೆ.

ಗಂಟಿಚೋರ ಸಮುದಾಯದ ಕುಟುಂಬಗಳ ಪ್ರಮಾಣವು ಶೇಕಡ ೧೫.೧೭ ರಷ್ಟಿದ್ದು ಇದರಲ್ಲಿ ಪುರುಷರ ಪ್ರಮಾಣವು ಶೇಕಡ ೧೨.೫೯ ಹಾಗೂ ಮಹಿಳೆಯರ ಪ್ರಮಾಣ ಶೇಕಡ ೧೨.೩೮, ಒಟ್ಟು ಶೇಕಡ ೧೨.೪೯ ರಷ್ಟಿದೆ. ಕೊರಮ ಸಮುದಾಯದ ಕುಟುಂಬಗಳ ಪ್ರಮಾಣವು ಶೇಕಡ ೨೪.೦೩ ಇದ್ದು ಅದರಲ್ಲಿ ಪುರುಷರು ಶೇಕಡ ೨೫.೩೬ ಹಾಗೂ ಮಹಿಳೆಯರು ಶೇಕಡ ೨೫.೩೬ ಇದೆ. ಒಟ್ಟು ಸರಾಸರಿ ಕೊರಮರ ಜನಸಂಖ್ಯೆ ಪ್ರಮಾಣವು ಶೇಕಡ ೨೫.೨೫ ರಷ್ಟಿದೆ.

ಪಾರ್ಧಿಗಳ ಒಟ್ಟು ಕುಟುಂಬಗಳ ಪ್ರಮಾಣವು ಶೇಕಡ ೪೪.೪೨ ರಷ್ಟಿದೆ. ಇದರಲ್ಲಿ ಪುರುಷರು ಶೇಕಡ ೪೬.೬೬ ಹಾಗೂ ಮಹಿಳೆಯರು ಶೇಕಡ ೪೮.೫೨ ರಷ್ಟು ಕಂಡುಬರುತ್ತಾರೆ. ಒಟ್ಟು ಈ ಸಮುದಾಯದ ಸರಾಸರಿ ಪ್ರಮಾಣವು ಶೇಕಡ ೪೭.೫೭ ರಷ್ಟಿದೆ. ಚಪ್ಪರಬಂದ ಸಮುದಾಯದ ಕುಟುಂಬಗಳ ಪ್ರಮಾಣವು ಶೇಕಡ ೧೮.೨೯ ರಷ್ಟಿದ್ದು ಅದರಲ್ಲಿ ಪುರುಷರು ಶೇಕಡ ೭.೯೫ ಮತ್ತು ಮಹಿಳೆಯರು

ಶೇಕಡ ೭.೨೪ ಒಟ್ಟು ಜನಸಂಖ್ಯೆಯು ಶೇಕಡ ೭.೬೦ ರಷ್ಟಿದೆ. ಕಂಜರಭಾಟರ ಒಟ್ಟು ಕುಟುಂಬಗಳ ಪ್ರಮಾಣವು ಶೇಕಡ ೩.೧೭ ರಷ್ಟಿದ್ದು ಅದರಲ್ಲಿ ಪುರುಷರು ಶೇಕಡ ೨.೪೪ ಹಾಗೂ ಮಹಿಳೆಯರು ಶೇಕಡ ೨.೨೬ ಒಟ್ಟು ಸರಾಸರಿ ಪ್ರಮಾಣವು ಶೇಕಡ ೨.೩೫ ರಷ್ಟಿದೆ.

ಒಟ್ಟು ೬ ಸೆಟ್ಲಮೆಂಟ್‌ನ್ನೊಳಗೊಂಡ ೬ ಸಮುದಾಯಗಳಲ್ಲಿ ಅತೀ ಹೆಚ್ಚು ಜನಸಂಖ್ಯೆಯನ್ನು ಹೊಂದಿದ ಸಮುದಾಯವು ಪಾರ್ಧಿ(ಶೇ.೪೭.೫೭)ಯದ್ದಾಗಿದ್ದರೆ, ಅತೀ ಕಡಿಮೆ ಜನಸಂಖ್ಯೆಯನ್ನು ಹೊಂದಿದ ಸಮುದಾಯವು ಕಂಜರಭಾಟ(ಶೇ.೨.೩೫)ರದ್ದಾಗಿದೆ. ೬ ಸಮುದಾಯಗಳ ಪುರುಷರ ಒಟ್ಟು ಪ್ರಮಾಣವು ಶೇಕಡ ೫೧.೨೩ ರಷ್ಟಿದ್ದರೆ, ಮಹಿಳೆಯರ ಪ್ರಮಾಣವು ಶೇಕಡ ೪೮.೭೭ ರಷ್ಟಿದೆ.

ಅಪರಾಧಿ ಬುಡಕಟ್ಟು ವಸಾಹತುಗಳು ಜನಸಂಖ್ಯಾ ವಿವರ

"ಮಾರ್ಚ್ ೧೯೩೭ರಲ್ಲಿರುವಂತೆ ಬಾಂಬೆ ಪ್ರಾಂತ್ಯದಲ್ಲಿ ಅಪರಾಧಿ ಬುಡಕಟ್ಟುಗಳ ಜನ ನಿರ್ಬಂಧಿತ ವಸಾಹತುಗಳಲ್ಲಿ ಒಟ್ಟು ೮,೨೩೧ರಷ್ಟಿದ್ದರು. ಹಾಗೂ ನಿರ್ಬಂಧಿತವಲ್ಲದ ವಸಾಹತುಗಳಲ್ಲಿ ಒಟ್ಟು ೧೫,೪೪೩ ಜನ ಇದ್ದದಾಗಿ ತಿಳಿದುಬರುತ್ತದೆ." (ನೋಮ್ಯಾಡಿಕ್ ಟ್ರೈಬ್ಸ್ ಆಂಡ ಸೋಶಿಯಲ್ ವರ್ಕ್ ಇನ್ ಇಂಡಿಯಾ: ೫೦)

ಜನಸಂಖ್ಯೆ: ಸೆಟಲ್‌ಮೆಂಟ್‌ಗಳಲ್ಲಿದ್ದ ಅಪರಾಧಿ ಬುಡಕಟ್ಟುಗಳಲ್ಲಿ ಅತೀ ಹೆಚ್ಚು ಜನಸಂಖ್ಯೆ ಪಾರ್ಧಿಗಳದಾಗಿತ್ತು. ಪಾರ್ಧಿಗಳು ೧,೬೫೮ರಷ್ಟಿದ್ದರು ಎಂದು ತಿಳಿಯುತ್ತದೆ. ಕೈಕಾಡಿ, ಭಾಮ್ಟ, ಮಾಂಗ್‌ಗಾರುಡಿ, ಕಂಜರಭಾಟ (೧,೧೦೦ ರಿಂದ ೧,೫೦೦ರಷ್ಟು ಪ್ರತಿ ಬುಡಕಟ್ಟುನಲ್ಲಿದ್ದರು).

ಅದೇ ರೀತಿ ರಜಪೂತ ಭಾಮ್ಟಾ, ಭಿಲ್, ವಡ್ಡರ್, ಧರಲ್ (೧೦೦ ರಿಂದ ೩೦೦) ರಷ್ಟು ಪ್ರತಿ ಪಂಗಡದಲ್ಲಿ ಇದ್ದುದಾಗಿ ತಿಳಿದುಬರುತ್ತದೆ.

ಇನ್ನುಳಿದ ಬುಡಕಟ್ಟುಗಳು ಅತೀ ಕಡಿಮೆ ಜನಸಂಖ್ಯೆಗಳನ್ನು ಹೊಂದಿದ್ದವು. ಅಪರಾಧಿ ಬುಡಕಟ್ಟು ಕಾಯ್ದೆ ವರದಿ ೧೯೨೪ರಲ್ಲಿ ನಮೂದಿಸಿದಂತೆ ಒಟ್ಟಾರೆಯಾಗಿ ಬಾಂಬೆ ಪ್ರಸಿಡೆನ್ಸಿ ಪ್ರಾಂತದಲ್ಲಿದ್ದ ಸೆಟಲ್‌ಮೆಂಟಗಳ ಜನಸಂಖ್ಯೆ, ಜನನ ಪ್ರಮಾಣ, ಮರಣ ಪ್ರಮಾಣಗಳನ್ನು ಈ ಕೆಳಗಿನಂತಿದೆ.

ಕೋಷ್ಟಕ ೩.೭: ವಸಾಹತುಗಳ ಜನಸಂಖ್ಯೆ, ಜನನ ಪ್ರಮಾಣ, ಮರಣ ಪ್ರಮಾಣಗಳ ವಿವರ

ಸಂ.	ವಸಾಹತು	ಜನಸಂಖ್ಯೆ	ಒಟ್ಟು ಹುಟ್ಟಿದವರು	ಒಟ್ಟು ಮರಣ ಹೊಂದಿದವರು	Total Birth per 100	Total Death per 100
೧.	ಸೊಲ್ಲಾಪುರ	೪,೦೯೫	೧೮೦	೧೪೭	೪೩.೯೫	೩೫.೮೯
೨.	ಇಂಡಿ	೨೦೪	೬	೬	೨೯.೪೧	೨೯.೪೧
೩.	ಬಿಜಾಪುರ	೧,೨೨೯	೬೯	೨೫	೫೬.೧೪	೨೦.೩೪
೪.	ಬಿಜಾಪುರ ವಿಶೇಷ ವಸಾಹತು	೧೪೩	೩	೩	೨೦.೯೭	೨೦.೯೭

೫.	ಬಾಗಲಕೋಟಿ	೩೯೭	೧೬	೧	೪೦.೩೦	೨.೫೧
೬	ಗದಗ	೧,೦೨೩	೨೯	೧೨	೨೮.೩೫	೧೧.೭೩
೭.	ಹುಬ್ಬಳ್ಳಿ	೨,೩೨೨	೧೦೫	೫೯	೪೫.೨೨	೨೫.೪೦
೮.	ಧಾರವಾಡ	೪೦೫	೩	೫	೭.೪೦	೧೨.೩೪
೯.	ಖಾನಾಪುರ	೫೪೮	೧೪	೪	೨೫.೫೪	೭.೩೦
೧೦.	ಗೋಕಾಕ್ ಫಾಲ್ಸ್	೬೭೨	೨೧	೧೨	೩೧.೨೫	೧೭.೮೬
೧೧.	ದಾಂಡೇಲಿ	೨೫೧	೫	೨	೧೯.೯೨	೭.೯೭
೧೨.	ಭಾರಮತಿ	೫೨೧	೧೦	೧೦	೧೯.೨೦	೧೯.೨೦
	ಸರಾಸರಿ ಒಟ್ಟು				೩೦.೬೪	೧೭.೫೭

(ಬುದನ್:೧೯೯೯)

೧೯೪೭–೪೮ರ ಅಪರಾಧಿ ಬುಡಕಟ್ಟು ಕಾಯ್ದೆಯ ವಾರ್ಷಿಕ ವರದಿಯಲ್ಲಿ ನಮೂದಿತವಾದ ಜಾತಿವಾರು ಜನಸಂಖೆ ಈ ಕೆಳಗಿನಂತಿದೆ.

ಕೋಷ್ಟಕ ೩.೮: ಜನಸಂಖ್ಯೆ (ಜಾತೀವಾರು)

ಕ್ರಸಂ.	ಬುಡಕಟ್ಟು	ಜನಸಂಖ್ಯೆ		
		ಗಂಡು	ಹೆಣ್ಣು	ಒಟ್ಟು
೧.	ಬೇರಡ್ (ಬೇರದ್)	೨	–	೨
೨.	ಬೆಸ್ತರ	೨೪	೧	೨೫
೩.	ಭಾಮ್ಟ (ಟಕಾರಿ)	೨೧	೨	೨೩
೪.	ಭಾಮ್ಟ (ರಜಪೂತ)	೮೪	೧	೮೫
೫.	ಭಿಲ್	೫೭	೧	೫೮
೬.	ಭಾಟ್ (ಕಂಜರ್)	೮೩	೧೫	೯೮
೭.	ಗಿರಣಿ ವಡ್ಡರ್	೬	೨	೮
೮.	ಕೈಕಾಡಿ	೭೩	೧೪	೮೭
೯.	ಕೋಲಿ	೨	–	೨
೧೦.	ಲಮಾಣಿ	೨	–	೨
೧೧.	ಮಾಂಗ್ ಗಾರುಡಿ	೮೨	೬೬	೧೪೮
೧೨.	ಮಾಂಗ್	೭	–	೭
೧೩.	ಮಾದರ್	೧	–	೧
೧೪.	ಪಾರ್ಧಿ	೯೬	೨೦	೧೧೬

೧೫.	ತಡವಿ	೧	-	೧
೧೬	ವಾಕ್ಕಿಸ್ರ	೨೫	೧	೨೬
	ಒಟ್ಟು	೫೬೬	೧೨೩	೬೮೯

ಪ್ರಸ್ತುತ ಕರ್ನಾಟಕದ ಸೆಟಲ್‌ಮೆಂಟಗಳಲ್ಲಿ ನೆಲೆಸಿರುವ ಸಮುದಾಯಗಳ ಜನಸಂಖ್ಯೆ, ವಯೋಗುಂಪು, ಲಿಂಗ ಪ್ರಮಾಣ, ಕುಟುಂಬ ಗಾತ್ರಗಳನ್ನು ಈ ಕೆಳಗೆ ನೋಡಲಾಗಿದೆ.

ಭೋವಿ ಜನಸಂಖ್ಯೆ

ಕರ್ನಾಟಕದಲ್ಲಿ ಒಟ್ಟು ಹತ್ತು ಸೆಟ್ಲಮೆಂಟ್‌ಗಳಿದ್ದರೂ ಇಂದು ಬೋವಿಗಳು ಹುಬ್ಬಳ್ಳಿ ಸೆಟ್ಲ್‌ಮೆಂಟ್ ಹೊರತಾಗಿ ಬೇರಾವ ಸೆಟ್ಲಮೆಂಟ್‌ನಲ್ಲಿಯೂ ನೆಲೆಸಿಲ್ಲ. ಹಿಂದೆ ಬಳ್ಳಾರಿ ಸೆಟ್ಲ್‌ಮೆಂಟ್ ಮತ್ತು ಗದಗ ಸೆಟ್ಲ್‌ಮೆಂಟ್‌ಗಳಲ್ಲಿ ಇವರಿದ್ದುದಾಗಿ ತಿಳಿದು ಬರುವುದಾದರೂ ಅವರಿಂದ ಆ ಸೆಟ್ಲ್‌ಮೆಂಟ್‌ಗಳಲ್ಲಿ ನೆಲೆಸದೆ ನಗರದ ಇತರ ಭಾಗಗಳಿಗೆ ವಲಸೆ ಹೋಗಿದ್ದಾರೆ.

ಹುಬ್ಬಳ್ಳಿ ಸೆಟ್ಲ್‌ಮೆಂಟ್‌ನಲ್ಲಿ ಮಾತ್ರ ಕಂಡುಬರುವ ಬೋವಿಗಳ ಒಟ್ಟು ಜನಸಂಖ್ಯೆಯು ೧೧೧೩ರಷ್ಟಿದ್ದು ಅವರಲ್ಲಿ ಪುರುಷರು ಶೇ.೫೪.೦೮ರಷ್ಟು ಇದ್ದು ಮಹಿಳೆಯರು ಶೇ. ೪೫.೯೨ರಷ್ಟಿದ್ದಾರೆ.

ಕೋಷ್ಟಕ ೩.೯: ಬೋವಿ ಜನಸಂಖ್ಯೆ ವಿವರ

ಸೆಟ್ಲ್‌ಮೆಂಟ್	ಕುಟುಂಬಗಳು	ಗಂಡು	ಹೆಣ್ಣು	ಒಟ್ಟು
ಹುಬ್ಬಳ್ಳಿ	೧೯೯	೬೦೨	೫೧೧	೧೧೧೩

ಕೋಷ್ಟಕ ೩.೧೦: ಭೋವಿ ವಯೋಗುಂಪು

ವಯೋ ಗುಂಪು	ಪುರುಷ	ಸ್ತ್ರೀ	ಒಟ್ಟು
ಒಟ್ಟು ಜನಸಂಖ್ಯೆ	೬೦೨	೫೧೧	೧೧೧೩
೦-೪	೪೫	೩೨	೭೭
೫-೧೭	೨೦೬	೧೮೦	೩೮೬
೧೮-೪೦	೨೨೦	೧೮೬	೪೦೬
೪೧-೬೦	೯೮	೮೩	೧೮೧
೬೦+	೩೩	೩೦	೬೩

೧೯೯ ಕುಟುಂಬಗಳಲ್ಲಿರುವ ಒಟ್ಟು ಜನರನ್ನು ಐದು ವಯೋಗುಂಪುಗಳಲ್ಲಿ ವಿಂಗಡಿಸಲಾಗಿದೆ. ೦.೪ರ ವಯೋಮಿತಿಯವರು, ೫-೧೭ರ ವಯೋಮಿತಿಯವರು, ೬೦ರ ವಯೋಮಿತಿಯನ್ನು ದಾಟಿದವರು.

ಇವರಲ್ಲಿ ೦.೪ರ ವಯೋಮಿತಿಯವರ ಒಟ್ಟು ಪ್ರಮಾಣ ಶೇ.ಕಡ ೬.೯೧ರಷ್ಟಿದೆ. ಇದರಲ್ಲಿ ಗಂಡುಮಕ್ಕಳು ಶೇ. ೭.೪೫ ಹಾಗೂ ಹೆಣ್ಣುಮಕ್ಕಳು ಶೇ. ೬.೨೬ರಷ್ಟಿದ್ದಾರೆ.

೫-೧೭ರ ವಯೋಮಿತಿಯವರ ಒಟ್ಟು ಪ್ರಮಾಣವು ಶೇ. ೩೪.೬೯ ಇದ್ದು ಅದರಲ್ಲಿ ಪುರುಷರು ಶೇ. ೩೪.೨೨ ಹಾಗೂ ಮಹಿಳೆಯರು ಶೇ. ೩೫.೨೨ರಷ್ಟು ಕಂಡುಬರುತ್ತಾರೆ. ೧೮-೪೦ರೊಳಗಿನ ವಯೋಮಿತಿಯವರ ಒಟ್ಟು ಜನಸಂಖ್ಯೆ ಪ್ರಮಾಣವು ಶೇ. ೩೬.೪೮ ಇದ್ದು ಅವರಲ್ಲಿ ಪುರುಷರು ಶೇ. ೩೬.೫೬ ಹಾಗೂ ಮಹಿಳೆಯರು ಶೇ. ೩೬.೩೯ರಷ್ಟಿದ್ದಾರೆ.

೪೦-೬೦ರ ವಯೋಮಾನದವರ ಜನಸಂಖ್ಯೆ ಪ್ರಮಾಣವು ಒಟ್ಟು ಶೇ. ೧೬.೨೬ ಇದ್ದು ಅದರಲ್ಲಿ ಪುರುಷರು ಶೇ. ೧೬.೨೯ ಹಾಗೂ ಮಹಿಳೆಯರು ಶೇ. ೧೬.೨೬ರಷ್ಟಿದೆ.

೬೦ಕ್ಕಿಂತ ಹೆಚ್ಚಿನ ವಯೋಮಿತಿಯವರ ಒಟ್ಟು ಪ್ರಮಾಣವು ಶೇ. ೫.೬೬ರಷ್ಟಿದೆ. ಇದರಲ್ಲಿ ಪುರುಷರು ಶೇ. ೫.೪೮ ಹಾಗೂ ಮಹಿಳೆಯರು ಶೇ. ೫.೮೭ರಷ್ಟಿದೆ.

ಈ ಐದು ಗುಂಪುಗಳಲ್ಲಿ ಅತೀ ಹೆಚ್ಚು ಪ್ರಮಾಣದ ಜನಸಂಖ್ಯೆ ಹೊಂದಿದ ಗುಂಪು (ಶೇ.೩೬.೪೮) ೧೬-೪೦ರ ವಯೋಮಿತಿಯದ್ದಾಗಿದೆ. ಅತೀ ಕನಿಷ್ಠ ಜನಸಂಖ್ಯೆ ಹೊಂದಿದ ಗುಂಪು ೬೦ಕ್ಕಿಂತ ಮೇಲ್ಪಟ್ಟು ವಯಸ್ಸಿನವರಿದ್ದಾಗಿದೆ. (ಶೇ. ೫.೬೬)

ಕೋಷ್ಟಕ ೩.೧೧: ಕುಟುಂಬದ ಗಾತ್ರ ಮತ್ತು ಲಿಂಗ ಪ್ರಮಾಣ

ಕುಟುಂಬಗಳು	ಪುರುಷ	ಸ್ತ್ರೀ	ಒಟ್ಟು	ಕುಟುಂಬದ ಗಾತ್ರ	ಲಿಂಗಪ್ರಮಾಣ
೧೯೯	೬೦೨	೫೧೧	೧೧೧೩	೫.೫೯	೮೪೮

ಕುಟುಂಬ ಗಾತ್ರ ಮತ್ತು ಲಿಂಗಾನುಪಾತ

ಭೋವಿಗಳಲ್ಲಿ ಅವಿಭಕ್ತ ಕುಟುಂಬಗಳು ಹಿಂದೆ ಹೆಚ್ಚಾಗಿ ಕಂಡುಬರುತ್ತಿದ್ದರೂ ಇಂದು ಅವುಗಳ ಸ್ಥಾನವನ್ನು ವಿಭಕ್ತ ಕುಟಂಬಗಳು ಆಕ್ರಮಿಸಿಕೊಂಡಿವೆ. ಇಲ್ಲಿ ೧ ರಿಂದ ೪ ರಷ್ಟು ಸಂಖ್ಯೆಯಲ್ಲಿ ಇರುವ ಸದಸ್ಯರ ಕುಟುಂಬಗಳನ್ನು ಚಿಕ್ಕ ಗಾತ್ರದ ಕುಟುಂಬಗಳೆಂದು ೪ ರಿಂದ ೬ರ ಸಂಖ್ಯೆಯಲ್ಲಿರುವ ಸದಸ್ಯರ ಕುಟುಂಬಗಳನ್ನು ಮಧ್ಯಮ ಗಾತ್ರದ ಕುಟುಂಬಗಳೆಂದು ೬ ಕ್ಕಿಂತ ಮೇಲ್ಪಟ್ಟು ಜನಸಂಖ್ಯೆ ಇರುವ ಕುಟುಂಬಗಳನ್ನು ದೊಡ್ಡ ಗಾತ್ರದ ಕುಟುಂಬಗಳೆಂದು ಪರಿಗಣಿಸಲಾಗಿದೆ. ಇಲ್ಲಿ ಸಮೀಕ್ಷೆಗೊಳಪಟ್ಟ ಭೋವಿ ಕುಟುಂಬಗಳ ಗಾತ್ರವು ಸರಾಸರಿ ೫.೫೯ ಇದೆ ಹುಬ್ಬಳ್ಳಿಯಲ್ಲಿ ಭೋವಿಗಳ ಮಧ್ಯಮ ಗಾತ್ರದ ಕುಟುಂಬಗಳು ಕಂಡುಬರುತ್ತವೆ. ಹಾಗೂ ೧೦೦೦ ಪುರುಷರಿಗೆ ಇರುವ ಮಹಿಳೆಯರ ಪ್ರಮಾಣವು ೮೪೮ ಇದೆ.ಅಂದರೆ ಪುರುಷ ಮತ್ತು ಮಹಿಳೆಯರ ಲಿಂಗನುಪಾತ ಪ್ರಮಾಣವು ೧೫೨ರಷ್ಟಿದೆ.

ಗಂಟಿಚೋರರ ಜನಸಂಖ್ಯೆ

ಗಂಟಿಚೋರರ ಸಮುದಾಯವು ಬಾಗಲಕೋಟ, ಬಿಜಾಪುರ, ದಾಂಡೇಲಿ, ಗದಗ, ಗೋಕಾಕ ಫಾಲ್ಸ್, ಹುಬ್ಬಳ್ಳಿ ಸೆಟ್ಲಮೆಂಟಗಳಲ್ಲಿ ಕಂಡು ಬರುತ್ತಾರೆ. ಬಾಗಲಕೋಟಿಯಲ್ಲಿ ಈ ಸಮುದಾಯದವರು ಅತೀ ಕಡಿಮೆ ಪ್ರಮಾಣದಲ್ಲಿ(ಶೇ. ೮.೯೯) ನೆಲೆಸಿದ್ದರೆ, ಹುಬ್ಬಳ್ಳಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ

(ಶೇ.೨೮.೨೮)ರಷ್ಟು ನೆಲೆಸಿದ್ದಾರೆ. ಇನ್ನುಳಿದಂತೆ ಬಿಜಾಪುರದಲ್ಲಿ ಶೇ.೧೩.೨೦, ದಾಂಡೇಲಿಯಲ್ಲಿ ಶೇ೧೭.೨೫, ಗೋಕಾಕ ಫಾಲ್ಸ್ ಶೇ. ೧೫.೧೯, ಗದಗ ಶೇ.೨೬.೦೬ ರಷ್ಟು ಪ್ರಮಾಣದಲ್ಲಿರುವುದು ಸಮೀಕ್ಷೆಯ ಮೂಲಕ ಅರಿಯಲಾಯಿತು.

ಕೋಷ್ಟಕ ೩.೧೨: ಗಂಟಿಚೋರರ ಜನಸಂಖ್ಯೆ

ಬುಡಕಟ್ಟು	ಕುಟುಂಬ	ಜನಸಂಖ್ಯೆ		
		ಗಂಡು	ಹೆಣ್ಣು	ಒಟ್ಟು
ಬಾಗಲಕೋಟ	४೯	೧೨४	೧೨೦	೨४४
ಬಿಜಾಪುರ	೮೧	೧೮೦	೧೭೮	೩೫೮
ದಾಂಡೇಲಿ	೮೯	೨೩೭	೨೩೧	४೬೮
ಗದಗ	೧೩೦	೩೬೦	೩४೭	೭೦೭
ಗೋಕಾಕ್ ಫಾಲ್ಸ್	೧೦೬	೨೧೭	೧೯೫	४೧೨
ಹುಬ್ಬಳ್ಳಿ	೧೭೦	४೧೨	೩೫೫	೭೬೭
ಒಟ್ಟು	೫೭೬	೧४೦೬	೧೩೦೬	೨೭೧೨

ಒಟ್ಟು ಸೆಟ್ಲಮೆಂಟ್ ಗಂಟಿಚೋರರ ಜನಸಂಖ್ಯೆಯಲ್ಲಿ ಪುರುಷರ ಪ್ರಮಾಣ ಶೇ. ೫೧.೭೫ ಇದೆ. ಮಹಿಳೆಯರು ಶೇ. ४೮.೨೫ರಷ್ಟು ಇದ್ದಾರೆ. ಗಂಟಿಚೋರರನ್ನು ಈ ಕೆಳಗಿನಂತೆ ೦-४, ೫-೧೭, ೧೮-४೦, ४೧-೬೦, ೬೦ +- ಹಾಗೆ ೫ ಗುಂಪುಗಳನ್ನು ಮಾಡಲಾಗಿದೆ. ಅವುಗಳ ವಿವರ ಈ ಕೆಳಗಿನಂತಿವೆ

೦-४ ವಯೋಮಾನದವರು ಒಟ್ಟು ಶೇ. ೭.೨೭ರಷ್ಟಿದ್ದಾರೆ. ೫-೧೭ ವಯೋಮಾನದವರು ಒಟ್ಟು ಶೇ. ೩೧.೬४ರಷ್ಟಿದ್ದಾರೆ. ೧೮-४೦ ವಯೋಮಾನದವರು ಒಟ್ಟು ಶೇ. ४೨.೦೮ರಷ್ಟಿದ್ದಾರೆ. ४೧-೬೦ ವಯೋಮಾನದವರು ಒಟ್ಟು ಶೇ. ೧೩.೦೫ರಷ್ಟಿದ್ದಾರೆ. ೬೦+ ವಯೋಮಾನದವರು ಒಟ್ಟು ಶೇ. ೫.೨४ರಷ್ಟಿದ್ದಾರೆ.

ಕೋಷ್ಟಕ ೩.೧೩: ಗಂಟಿಚೋರರ ವಯೋಗುಂಪು

ವಯೋಗುಂಪು	ಪುರುಷ	ಸ್ತ್ರೀ	ಒಟ್ಟು
ಒಟ್ಟು ಜನಸಂಖ್ಯೆ	೧೫೩೦	೧४೨೬	೨೯೫೬
೦–४	೧೦೮	೧೦೭	೨೧೫
೫–೧೭	४೯४	४४೧	೯೩೫
೧೮–४೦	೬೩೫	೬೩೦	೧೨೬೫
४೧–೬೦	೨೧೩	೧೭೩	೩೮೬
೬೦+	೮೦	೭೫	೧೫೫

ಇದರಲ್ಲಿ ೧೮-೪೦ರ ಮಧ್ಯದ ವಯೋಮಾನದವರ ಪ್ರಮಾಣ ಅತ್ಯಧಿಕವಾಗಿದೆ. (ಶೇ. ೪೨.೦೪) ಹಾಗೇ ೬೦ ರ ಮೇಲ್ಪಟ್ಟ ವಯೋಮಾನದವರ ಪ್ರಮಾಣ ಶೇ. ೫.೨೪ರಷ್ಟಿದೆ. ೦-೪ರ ಪ್ರಮಾಣಕ್ಕೆ ಹೋಲಿಸಿದರೆ (ಶೇ. ೭.೨೭) ೬೦ಕ್ಕಿಂತ ಮೇಲ್ಪಟ್ಟ ವಯೋಮಾನದವರ ಪ್ರಮಾಣ ಕಡಿಮೆ ಇದೆ. ಅಂದರೆ ಇಲ್ಲಿ ಹುಟ್ಟುವ ಮಕ್ಕಳ ಪ್ರಮಾಣಕ್ಕಿಂತ ಸಾಯುವವರ ಪ್ರಮಾಣ ಕಡಿಮೆಯಾಗಿದೆ ಎಂಬುದನ್ನು ನೋಡಬಹುದಾಗಿದೆ. ಹಾಗೇ ಪ್ರಜನನ ಶಕ್ತಿ ಹೊಂದಿದವರ (೧೮-೪೦) ಪ್ರಮಾಣವು ಸಹ ಅತ್ಯಧಿಕವಾಗಿದೆ.

ಕೋಷ್ಟಕ ೩.೧೪: ಗಂಟಿಚೋರರ ಕುಟುಂಬದ ಗಾತ್ರ ಮತ್ತು ಲಿಂಗ ಪ್ರಮಾಣ

	ಕುಟುಂಬ	ಪುರುಷ	ಸ್ತ್ರೀ	ಒಟ್ಟು	ಕುಟುಂಬದ ಗಾತ್ರ	ಲಿಂಗಪ್ರಮಾಣ
ಬಾಗಲಕೋಟ	೪೯	೧೨೪	೧೨೦	೨೪೪	೪.೯೭	೯೬೭
ಬಿಜಾಪುರ	೮೧	೧೮೦	೧೭೮	೩೫೮	೪.೪೧	೯೮೮
ದಾಂಡೇಲಿ	೮೯	೨೩೭	೨೩೧	೪೬೮	೫.೨೫	೯೭೪
ಗದಗ	೧೩೦	೩೬೦	೩೪೭	೭೦೭	೫.೪೩	೯೬೩
ಗೋಕಾಕ್ ಪಾಲ್ಸ	೧೦೬	೨೧೭	೧೯೫	೪೧೨	೩.೮೮	೮೯೮
ಹುಬ್ಬಳ್ಳಿ	೧೭೦	೪೧೨	೩೫೫	೭೬೭	೪.೫೧	೮೬೧
ಒಟ್ಟು	೫೭೬	೧೪೦೬	೧೩೦೬	೨೭೧೨	೪.೭	೯೨೮

ಗಂಟಿಚೋರರಲ್ಲಿ ಅವಿಭಕ್ತ ಕುಟುಂಬಗಳು ಹಿಂದೆ ಹೆಚ್ಚಾಗಿ ಕಂಡುಬರುತ್ತಿದ್ದರೂ ಇಂದು ಅವುಗಳ ಸ್ಥಾನವನ್ನು ವಿಭಕ್ತ ಕುಟಂಬಗಳು ಆಕ್ರಮಿಸಿಕೊಂಡಿವೆ. ಇಲ್ಲಿ ೧ ರಿಂದ ೪ ರಷ್ಟು ಸಂಖ್ಯೆಯಲ್ಲಿ ಇರುವ ಸದಸ್ಯರ ಕುಟುಂಬಗಳನ್ನು ಚಿಕ್ಕ ಗಾತ್ರದ ಕುಟುಂಬಗಳೆಂದು ೪ ರಿಂದ ೬ರ ಸಂಖ್ಯೆಯಲ್ಲಿರುವ ಸದಸ್ಯರ ಕುಟುಂಬಗಳನ್ನು ಮಧ್ಯಮ ಗಾತ್ರದ ಕುಟುಂಬಗಳೆಂದು ೬ ಕ್ಕಿಂತ ಮೇಲ್ಪಟ್ಟು ಜನಸಂಖ್ಯೆ ಇರುವ ಕುಟುಂಬಗಳನ್ನು ದೊಡ್ಡ ಗಾತ್ರದ ಕುಟುಂಬಗಳೆಂದು ಪರಿಗಣಿಸಲಾಗಿದೆ. ಇಲ್ಲಿ ಸಮೀಕ್ಷೆಗೊಳಪಟ್ಟ ಗಂಟಿಚೋರರ ಕುಟುಂಬಗಳ ಗಾತ್ರವು ಸರಾಸರಿ ೪.೭ ಇದೆ ಹುಬ್ಬಳ್ಳಿಯಲ್ಲಿ ಗಂಟಿಚೋರರಲ್ಲಿ ಮಧ್ಯಮ ಗಾತ್ರದ ಕುಟುಂಬಗಳು ಕಂಡುಬರುತ್ತವೆ. ಹಾಗೂ ೧೦೦೦ ಪುರುಷರಿಗೆ ಇರುವ ಮಹಿಳೆಯರ ಪ್ರಮಾಣವು ೯೨೮ ಇದೆ.ಅಂದರೆ ಪುರುಷ ಮತ್ತು ಮಹಿಳೆಯರ ಲಿಂಗನುಪಾತ ಪ್ರಮಾಣವು ೭೨ ರಷ್ಟಿದೆ.

ಕೊರಮರ ಜನಸಂಖ್ಯೆ

ಜನಸಂಖ್ಯೆ: ವಿಮುಕ್ತ ಬುಡಕಟ್ಟುಗಳಲ್ಲಿ ಒಂದಾದ ಕೊರಮರ ಸೆಟ್ಲಮೆಂಟವಾರು ಜನಸಂಖ್ಯೆ ಯನ್ನು ಸಂಗ್ರಹಿಸಲಾಗಿದೆ. ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ವಿವರಗಳ ಅನುಸಾರವಾಗಿ ಅವರಲ್ಲಿರುವ ಕುಟುಂಬವಾರು, ಲಿಂಗವಾರು ಜನಸಂಖ್ಯೆ, ಲಿಂಗಾನುಪಾತ, ಕುಟುಂಬ ಗಾತ್ರ ಇತ್ಯಾದಿಗಳನ್ನು ಸಂಗ್ರಹಿಸಲಾಗಿದೆ.

ಪ್ರಸ್ತುತ ಕೊರಮರ ಜನಸಂಖ್ಯೆ ಒಟ್ಟಾರೆಯಾಗಿ ರಾಜ್ಯದಲ್ಲಿ ಎಷ್ಟಿದೆ ಎಂಬುದು ೨೦೦೧ ರ ಜನಗಣತಿಯಲ್ಲಿ ದೊರೆತರು ಕೂಡಾ ಅದರಲ್ಲಿ ಕೊರಮರ ಎಲ್ಲಾ ಪಂಗಡಗಳು ಸೇರಿರುವ ಸಾಧ್ಯತೆ ಕಡಿಮೆ ಇದೆಯೆನಿಸುತ್ತದೆ. ಕೊರಮ, ಕೊರವ ಹಾಗೂ ಕೊರಚ, ಕುರುವನ್, ಕೆಪ್‌ಮಾರಿ, ಬಜಂತ್ರಿ, ವಾಜಂತ್ರಿ, ಕುಂಚಿಕೊರವ ಕೈಕಾಡಿ, ಯರುಕುಲ ಹೀಗೆ ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಭಿನ್ನವಾದ ಹೆಸರುಗಳಿಂದ ಇವರನ್ನು ಕರೆಯಲಾಗುತ್ತದೆ. ಮೂಲತಃ ಮೇಲಿನ ಹೆಸರುಗಳ ಎಲ್ಲಾ ಸಮುದಾಯಗಳೂ ಕೊರಮ ಸಮುದಾಯಕ್ಕೆ ಸೇರಿದವರಾಗಿದ್ದು, ಸಮಾನ ಆಚಾರ ವಿಚಾರಗಳು ಹೊಂದಿವೆ. ಹಾಗೆ ಸೆಟ್ಲಮೆಂಟಗಳಲ್ಲಿ ನೆಲೆಸಿರುವ ಕೊರಮರ ಜನಸಂಖ್ಯೆಯು ಈ ಕಳಗಿನಂತಿದೆ.

ಕೋಷ್ಟಕ ೩.೧೫: ಕೊರಮರ ಲಿಂಗವಾರು ಜನಸಂಖ್ಯೆ

	ಕುಟುಂಬಗಳು	ಪುರುಷ	ಸ್ತ್ರೀ	ಒಟ್ಟು
ಗದಗ	೨೮೬	೭೬೮	೬೯೮	೧೪೬೬
ಹುಬ್ಬಳ್ಳಿ	೬೯೧	೨೩೦೪	೨೨೦೧	೪೫೦೫
ಒಟ್ಟು	**೯೭೭**	**೩೦೭೨**	**೨೮೯೯**	**೫೯೭೧**

ಗದಗ ಸೆಟಲಮೆಂಟಿನಲ್ಲಿ ಮತ್ತು ಹುಬ್ಬಳ್ಳಿ ಸೆಟಲಮೆಂಟಗಳಲ್ಲಿ ಮಾತ್ರ ಇಂದು ಕೊರಮರು ಕಂಡುಬರುತ್ತಿದ್ದಾರೆ. ಇನ್ನುಳಿದ ಕರ್ನಾಟಕದ ಬೇರೆ ಸೆಟ್ಲಮೆಂಟಗಳಲ್ಲಿ ಇವರು ಕಂಡುಬರುವುದಿಲ್ಲ. ಅದರಲ್ಲಿ ಗದಗ ಸೆಟಲಮೆಂಟಿನಲ್ಲಿ ವಾಸವಾಗಿರುವ ಕೊರಮರ ಒಟ್ಟು ಕುಟುಂಬಗಳು ೨೮೬, ಆ ಸೆಟಲಮೆಂಟಿನ ಜನಸಂಖ್ಯೆ ಒಟ್ಟು ೧,೪೬೬, ಅದರಲ್ಲಿ ಪುರುಷರು ೭೬೮, ಮಹಿಳೆಯರು ೬೯೮ ರಷ್ಟು ಇದ್ದಾರೆ. ಹುಬ್ಬಳ್ಳಿಯಲ್ಲಿ ವಾಸವಾಗಿರುವ ಕೊರಮರ ಒಟ್ಟು ಕುಟುಂಬಗಳು ೬೯೧ ಒಟ್ಟು ಆ ಸೆಟಲಮೆಂಟಿನ ಕೊರಮರ ಜನಸಂಖ್ಯೆ ಒಟ್ಟು ೪೫೦೫ ಅದರಲ್ಲಿ ಪುರುಷರು ೨೩೦೪ ಹಾಗೂ ಮಹಿಳೆಯರು ೨೨೦೧ ರಷ್ಟಿದ್ದಾರೆ. ಎರಡೂ ಸೆಟಲಮೆಂಟಿನ ಕೊರಮರ ಒಟ್ಟು ಜನಸಂಖ್ಯಾ ಪ್ರಮಾಣವು ಶೇ.೩೨.೦೨ ಮಾತ್ರ ಇರುವುದು ಕಂಡು ಬಂದಿದೆ

ಕೋಷ್ಟಕ ೩.೧೬: ಕೊರಮರ ಕುಟುಂಬಗಳ ಗಾತ್ರ

ಸಂ.	ಸೆಟ್ಲಮೆಂಟ್	ಕುಟುಂಬಗಾತ್ರ
೧	ಗದಗ	೫.೧೨
೨	ಹುಬ್ಬಳ್ಳಿ	೬.೫೧
	ಸರಾಸರಿ	೬.೧೧

ಕುಟುಂಬದ ಗಾತ್ರ

ಕೊರಮರಲ್ಲಿ ಅವಿಭಕ್ತ ಕುಟುಂಬಗಳು ಹಿಂದೆ ಹೆಚ್ಚಾಗಿ ಕಂಡುಬರುತ್ತಿದ್ದರೂ ಇಂದು ಅವುಗಳ ಸ್ಥಾನವನ್ನು ವಿಭಕ್ತ ಕುಟಂಬಗಳು ಆಕ್ರಮಿಸಿಕೊಂಡಿವೆ. ಇಲ್ಲಿ ೧ ರಿಂದ ೪ ರಷ್ಟು ಸಂಖ್ಯೆಯಲ್ಲಿ ಇರುವ

ಸದಸ್ಯರ ಕುಟುಂಬಗಳನ್ನು ಚಿಕ್ಕ ಗಾತ್ರದ ಕುಟುಂಬಗಳೆಂದು ೪ ರಿಂದ ೬ರ ಸಂಖ್ಯೆಯಲ್ಲಿರುವ ಸದಸ್ಯರ ಕುಟುಂಬಗಳನ್ನು ಮಧ್ಯಮ ಗಾತ್ರದ ಕುಟುಂಬಗಳೆಂದು ೬ ಕ್ಕಿಂತ ಮೇಲ್ಪಟ್ಟು ಜನಸಂಖ್ಯೆ ಇರುವ ಕುಟುಂಬಗಳನ್ನು ದೊಡ್ಡ ಗಾತ್ರದ ಕುಟುಂಬಗಳೆಂದು ಪರಿಗಣಿಸಲಾಗಿದೆ. ಇಲ್ಲಿ ಸಮೀಕ್ಷೆಗೊಳಪಟ್ಟ ಕೊರಮರ ಕುಟುಂಬಗಳ ಗಾತ್ರವು ಸರಾಸರಿ ೬.೧೧ ಇದೆ ಹುಬ್ಬಳ್ಳಿಯಲ್ಲಿ ದೊಡ್ಡ ಗಾತ್ರದ ಕುಟುಂಬಗಳು ಕಂಡುಬರುತ್ತವೆ. ಅವುಗಳ ಪ್ರಮಾಣವು ಒಟ್ಟು ಶೇಕಡ ೬.೫೧ ಇದೆ. ಗದಗಿನಲ್ಲಿ ಮಧ್ಯಮ ಗಾತ್ರದ ಕುಟುಂಬಗಳೇ ಹೆಚ್ಚಾಗಿದ್ದು ಅವುಗಳ ಪ್ರಮಾಣವು ಒಟ್ಟು ಶೇಕಡ ೫.೧೨ ಇದೆ. ಇವರಲ್ಲಿ ಚಿಕ್ಕ ಗಾತ್ರದ ಕುಟುಂಬಗಳೇ ಇಲ್ಲ.

ಕೋಷ್ಟಕ ೩.೧೭: ಸಮೀಕ್ಷೆಗೊಳಪಟ್ಟ ಕೊರಮರ ವಯೋಗುಂಪುವಾರು ಜನಸಂಖ್ಯೆ

ವಯೋಗುಂಪು	ಪುರುಷ	ಮಹಿಳೆ	ಒಟ್ಟು
೦-೪	೨೭೫	೨೪೩	೫೧೮
೫-೧೭	೧೦೮೬	೧೦೩೯	೨೧೨೫
೧೮-೪೦	೧೧೬೮	೧೧೧೪	೨೨೮೨
೪೧-೬೦	೩೮೯	೩೬೩	೭೫೨
೬೦+	೧೫೪	೧೪೦	೨೯೪
ಒಟ್ಟು	೩೦೭೨	೨೮೯೯	೫೯೭೧

ವಯೋಗುಂಪು

ಸಮೀಕ್ಷೆಗೊಳಪಟ್ಟ ಕರ್ನಾಟಕದ ಸೆಟ್ಲಮೆಂಟ್‌ಗಳ ಕೊರಮರನ್ನು ವಯಸ್ಸಿಗನುಗುಣವಾಗಿ ಐದು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ. ಸಮುದಾಯದ ಆರ್ಥಿಕ ಹಾಗೂ ಶೈಕ್ಷಣಿಕ ಅಂಶಗಳನ್ನು ಅರಿಯಲು ಆ ಸಮುದಾಯದ ಜನರ ವಯೋಗುಂಪುಗಳನ್ನು ನೊಡುವುದು ಅಗತ್ಯವಾಗಿದೆ.

ಈ ಅಂಶಗಳನ್ನು ಅರಿಯಲು ೦-೪ರ ವಯೋಮಾನದ ಮಕ್ಕಳ ಅಂಕಿ ಅಂಶಗಳನ್ನು ಕಲೆಹಾಕಲಾಗಿದೆ. ಈ ವಯೋಗುಂಪನ್ನು ಹೊರಗಿಟ್ಟು ಸಾಕ್ಷರತೆ ಪ್ರಮಾಣ ಅರಿಯಲು ಪ್ರಯತ್ನಿಸಲಾಗಿದೆ. ಇವರ ಒಟ್ಟು ಜನಸಂಖ್ಯೆಯಲ್ಲಿ ಈ ವಯೋಗುಂಪಿನ ಪ್ರಮಾಣ ೮.೬೭ ಇದೆ. ೫ ರಿಂದ ೧೭ರ ವಯೋಮಾನದವರನ್ನು ಸಾಕ್ಷರತೆಗೆ ಒಳಪಡುವ, ಆದರೆ ಉದ್ಯೋಗಕ್ಕೆ ಅರ್ಹವಲ್ಲದ ಗುಂಪೆಂದು ಪರಿಗಣಿಸಲಾಗಿದೆ. ಇವರ ಪ್ರಮಾಣವು ೩೫.೫೮ರಷ್ಟಿದೆ. ೧೮ ರಿಂದ ೪೦ರ ಗುಂಪನ್ನು ಸಂತಾನರ್ಹ, ಕಾಯಕಾರ್ಹ ಗುಂಪೆಂದು ಪರಿಗಣಿಸಲಾಗಿದೆ. ಇವರ ಪ್ರಮಾಣವು ೩೮.೨೧ ಅತ್ಯಧಿಕವಾಗಿದೆ. ೪೧ ರಿಂದ ೬೦ ಗುಂಪನ್ನು ಅನುಭವಿ ಗುಂಪೆನ್ನಬಹುದು. ಇವರ ಪ್ರಮಾಣವು ೧೨.೫೯ ಇದೆ. ಹಾಗೂ ೬೦ರ ಮೇಲ್ಪಟ್ಟ ವಯೋಮಾನದವರನ್ನು ಅವಲಂಬಿತ ಗುಂಪೆಂದು ಭಾವಿಸಲಾಗಿದೆ. ಇವರ ಪ್ರಮಾಣವು ಅತ್ಯಲ್ಪವಾಗಿದ್ದು ಶೇಕಡ ೪.೯೨ ಮಾತ್ರವಿದೆ.

ಲಿಂಗಾನುಪಾತ

ಪ್ರತಿ ೧೦೦೦ ಪುರುಷರಿಗೆ ಮಹಿಳೆಯರ ಸಂಖ್ಯೆ ಎಷ್ಟೆಂಬುಪುದನ್ನು ಗುರುತಿಸುವುದೇ ಲಿಂಗಾನುಪಾತವಾಗಿರುತ್ತದೆ. ಕೊರಮರಲ್ಲಿ ೧೦೦೦ ಪುರುಷರಿಗೆ ಸರಾಸರಿ ಮಹಿಳೆಯರ ಪ್ರಮಾಣವು ೯೪೩ರಷ್ಟಿದೆ. ಅಂದರೆ ಪುರುಷ ಹಾಗೂ ಮಹಿಳೆಯರ ಮಧ್ಯ ೫೭ರಷ್ಟು ಅಂತರವಿರುವುದು ಮುಂದಿನ ಕೋಷ್ಟಕದಲ್ಲಿ ಕಂಡುಬರುತ್ತದೆ.

ಕೋಷ್ಟಕ ೩.೧೮: ಸಮೀಕ್ಷೆಗೊಳಪಟ್ಟ ಕೊರಮರ ಲಿಂಗಾನುಪಾತ

ಸಂ.	ಸೆಟಲಮೆಂಟ್	ಲಿಂಗಪ್ರಮಾಣ
೧	ಗದಗ	೯೦೮
೨	ಹುಬ್ಬಳ್ಳಿ	೯೫೫
೩	ಸರಾಸರಿ	೯೪೩

ಹುಬ್ಬಳ್ಳಿ, ಗದಗಿನ ಪುರುಷರ ಪ್ರಮಾಣಕ್ಕಿಂತ ಮಹಿಳೆಯರ ಪ್ರಮಾಣ ಕಡಿಮೆ ಇರುವುದು ಕಂಡುಬರುತ್ತದೆ.

ಪಾರ್ಧಿ

ಪಾರ್ಧಿಯರು ಬಾಂಬೆ, ಅಜ್ಮೆರ್, ಬರೋಡ, ಹೈದ್ರಾಬಾದ್ ಮತ್ತು ಬೆರಾರ್ ಹಾಗೂ ಕರ್ನಾಟಕ ಮೊದಲಾದ ರಾಜ್ಯಗಳಲ್ಲಿ ವಾಸವಾಗಿದ್ದಾರೆ ಎಂದು ತಿಳಿದುಬರುತ್ತದೆ. ಕರ್ನಾಟಕದಲ್ಲಿ ಬಾಗಲಕೋಟ, ಬಿಜಾಪುರ, ಗದಗ ಹುಬ್ಬಳ್ಳಿ, ಸೆಟ್ಲ್‌ಮೆಂಟ್‌ಗಳಲ್ಲಿ ನೆಲೆಸಿರುವುದು ಕಂಡುಬರುತ್ತದೆ. ಹಿಂದೆ ಬಳ್ಳಾರಿ ಮತ್ತು ಇತರೆ ಸೆಟ್ಲ್‌ಮೆಂಟ್‌ಗಳಲ್ಲಿ ಇವರಿದ್ದುದಾಗಿ ತಿಳಿದುಬರುವುದಾದರೂ ಅವರಿಂದು ಆ ಸೆಟ್ಲ್‌ಮೆಂಟ್‌ಗಳಲ್ಲಿ ನೆಲೆಸದೆ ನಗರದ ಇತರ ಭಾಗಗಳಿಗೆ ವಲಸೆ ಹೋಗಿರುವುದು ತಿಳಿದುಬರುತ್ತದೆ.

ಕೋಷ್ಟಕ ೩.೧೯: ಸಮೀಕ್ಷೆಗೊಳಪಟ್ಟ ಪಾರ್ಧಿ ಜನಸಂಖ್ಯೆ

	ಕುಟುಂಬಗಳು	ಪುರುಷ	ಸ್ತ್ರೀ	ಒಟ್ಟು
ಬಾಗಲಕೋಟ	೨೫೫	೮೪೫	೮೫೪	೧೬೯೯
ಬಿಜಾಪುರ	೨೬೧	೬೭೩	೭೭೦	೧೪೪೩
ಗದಗ	೩೧	೭೯	೮೧	೧೬೦
ಹುಬ್ಬಳ್ಳಿ	೫೫೯	೧೬೦೬	೧೫೦೭	೩೧೧೩
ಒಟ್ಟು	೧೧೦೬	೩೨೦೩	೩೨೧೨	೬೪೧೫

ಬಾಗಲಕೋಟಯಲ್ಲಿ ಶೇ.೨೬.೪೮, ಬಿಜಾಪುರದಲ್ಲಿ ಶೇ.೨೨.೪೯ರಷ್ಟು ನೆಲೆಸಿದ್ದಾರೆ. ಅತೀ ಕಡಿಮೆ ಪ್ರಮಾಣದಲ್ಲಿ ಗದಗನಲ್ಲಿ ಶೇ.೨.೪೯ರಷ್ಟು ನೆಲೆಸಿದ್ದರೆ, ಹುಬ್ಬಳ್ಳಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಶೇ.೪೮.೫೨ ರಷ್ಟು ಪ್ರಮಾಣದಲ್ಲಿರುವುದು ಸಮೀಕ್ಷೆಯ ಮೂಲಕ ಅರಿಯಲಾಯಿತು.

ವಯೋಗುಂಪು

ಸಮೀಕ್ಷೆಗೊಳಪಟ್ಟ ಕರ್ನಾಟಕದ ಸೆಟ್ಲಮೆಂಟ್‌ಗಳ ಪಾರ್ಧಿ ಸಮುದಾಯದ ಜನಸಂಖ್ಯೆಯನ್ನು ವಯಸ್ಸಿಗನುಗುಣವಾಗಿ ಐದು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ. ಸಮುದಾಯದ ಆರ್ಥಿಕ ಹಾಗೂ ಶೈಕ್ಷಣಿಕ ಅಂಶಗಳನ್ನು ಅರಿಯಲು ಆ ಸಮುದಾಯದ ಜನರ ವಯೋಗುಂಪುಗಳನ್ನು ನೊಡುವುದು ಅಗತ್ಯವಾಗಿದೆ.

ಕೋಷ್ಟಕ ೩.೨೦: ಸಮೀಕ್ಷೆಗೊಳಪಟ್ಟ ಪಾರ್ಧಿಯವರ ವಯೋಗುಂಪು

ವಯೋಗುಂಪು	ಪುರುಷ	ಸ್ತ್ರೀ	ಒಟ್ಟು
೦-೪	೩೪೧	೩೫೬	೬೯೭
೫-೧೭	೧೦೭೫	೧೦೦೨	೨೦೭೭
೧೮-೪೦	೧೩೩೬	೧೩೮೯	೨೭೨೫
೪೧-೬೦	೩೫೬	೩೫೬	೭೧೨
೬೦+	೯೫	೧೦೯	೨೦೪

ಈ ಅಂಶಗಳನ್ನು ಅರಿಯಲು ೦-೪ರ ವಯೋಮಾನದ ಮಕ್ಕಳ ಅಂಕಿ ಅಂಶಗಳನ್ನು ಕಲೆಹಾಕಲಾಗಿದೆ. ಈ ವಯೋಗುಂಪನ್ನು ಹೊರಗಿಟ್ಟು ಸಾಕ್ಷರತೆ ಪ್ರಮಾಣ ಅರಿಯಲು ಪ್ರಯತ್ನಿಸಲಾಗಿದೆ. ಇವರ ಒಟ್ಟು ಜನಸಂಖ್ಯೆಯಲ್ಲಿ ಈ ವಯೋಗುಂಪಿನ ಪ್ರಮಾಣ ೧೦.೮೭ ಇದೆ. ೫ ರಿಂದ ೧೭ರ ವಯೋಮಾನದವರನ್ನು ಸಾಕ್ಷರತೆಗೆ ಒಳಪಡುವ, ಆದರೆ ಉದ್ಯೋಗಕ್ಕೆ ಅರ್ಹವಲ್ಲದ ಗುಂಪೆಂದು ಪರಿಗಣಿಸಲಾಗಿದೆ. ಇವರ ಪ್ರಮಾಣವು ೩೨.೩೭ರಷ್ಟಿದೆ. ೧೮ ರಿಂದ ೪೦ರ ಗುಂಪನ್ನು ಸಂತಾನರ್ಹ, ಕಾಯಕಾರ್ಹ ಗುಂಪೆಂದು ಪರಿಗಣಿಸಲಾಗಿದೆ. ಇವರ ಪ್ರಮಾಣವು ೪೨.೪೯ ಅತ್ಯಧಿಕವಾಗಿದೆ. ೪೧ ರಿಂದ ೬೦ ಗುಂಪನ್ನು ಅನುಭವಿ ಗುಂಪೆನ್ನಬಹುದು. ಇವರ ಪ್ರಮಾಣವು ೧೧.೦೯ಇದೆ. ಹಾಗೂ ೬೦ರ ಮೇಲ್ಪಟ್ಟ ವಯೋಮಾನದವರನ್ನು ಅವಲಂಬಿತ ಗುಂಪೆಂದು ಭಾವಿಸಲಾಗಿದೆ. ಇವರ ಪ್ರಮಾಣವು ಅತ್ಯಲ್ಪವಾಗಿದ್ದು ಶೇಕಡ ೩.೧೮ ಮಾತ್ರವಿದೆ.

ಲಿಂಗಾನುಪಾತ ಮತ್ತು ಕುಟುಂಬ ಗಾತ್ರ

ಸೆಟಲ್‌ಮೆಂಟ್ ನಿವಾಸಿ ಪಾರ್ಧಿಗಳಲ್ಲಿ ಸಾವಿರ ಪುರುಷರಿಗೆ ೧೦೦೨ ಸ್ತ್ರೀಯರು ಇರುವುದನ್ನು ಕಾಣಬಹುದು. ಅಂದರೆ ಸೆಟಲಮೆಂಟಿನ ಇತರ ಸಮುದಾಯಗಳಿಗೆ ಹೋಲಿಸಿದರೆ ಪಾರ್ಧಿಗಳಲ್ಲಿ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ಕಂಡಬರುತ್ತಾರೆ. ಹಾಗೇ ಇವರ ಒಟ್ಟು ಕುಟುಂಬದ ಗಾತ್ರವು ಶೇ.೫.೮ರಷ್ಟಿದೆ.

ಕೋಷ್ಟಕ ೩.೨೧: ಸಮೀಕ್ಷೆಗೊಳಪಟ್ಟ ಪಾರ್ಧಿಯರ ಲಿಂಗಾನುಪಾತ ಮತ್ತು ಕುಟುಂಬ ಗಾತ್ರ

ಸ್ಥಳ	ಕುಟುಂಬಗಳು	ಕುಟುಂಬದಗಾತ್ರ	ಲಿಂಗಪ್ರಮಾಣ
ಬಾಗಲಕೋಟ	೨೫೫	೬.೬೬	೧೦೧೦
ಬಿಜಾಪುರ	೨೬೧	೫.೫೨	೧೧೪೪
ಗದಗ	೩೧	೫.೧೬	೧೦೨೫
ಹುಬ್ಬಳ್ಳಿ	೫೫೯	೫.೫೬	೯೩೮
ಒಟ್ಟು	೧೧೦೬	೫.೮	೧೦೦೨

ಚಪ್ಪರಬಂದ

ಕರ್ನಾಟಕ ಚಪ್ಪರ ಬಂಧರ ಒಟ್ಟು ಜನಸಂಖ್ಯೆ ೧೯೯೦ರಲ್ಲಿ ಕೇವಲ ೧೦೩ರಷ್ಟು ಇದ್ದಿತು (ಸಿಂಗ್ ಕೆ.ಎಸ್). ಇಂದು ಕರ್ನಾಟಕದಲ್ಲಿ ಚಪ್ಪರಬಂದರು ಬಿಜಾಪುರ ಜಿಲ್ಲೆಯೊಳಗೆ ಹೆಚ್ಚಾಗಿ ಕಂಡುಬರುತ್ತಾರೆ. ಇಂದು ಎಲ್ಲಾ ಸೆಟ್ಲಮೆಂಟಗಳ ಚಪ್ಪರಬಂದರ ಒಟ್ಟು ಜನಸಂಖ್ಯೆ ೧೬೩೭ರಷ್ಟಿದೆ. ಒಟ್ಟು ೩೩೭ ಕುಟುಂಬಗಳು ಕಂಡುಬರುತ್ತವೆ. ಇವರಲ್ಲಿ ಪುರುಷರು ಶೇ ೫೩.೮೭ ಹಾಗೂ ಮಹಿಳೆಯರು ಶೇ. ೪೬.೧೩ರಷ್ಟಿದ್ದಾರೆ.

ಕೋಷ್ಟಕ ೩.೨೨: ಸಮೀಕ್ಷೆಗೊಳಪಟ್ಟ ಚಪ್ಪರಬಂದರ ಜನಸಂಖ್ಯೆ

	ಕುಟುಂಬಗಳು	ಪುರುಷ	ಸ್ತ್ರೀ
ಬಾಗಲಕೋಟ	೩೮	೧೩೩	೯೯
ಬಿಜಾಪುರ	೧೭೦	೪೪೮	೩೮೮
ಗದಗ	೧೦೧	೨೩೬	೨೦೮
ಹುಬ್ಬಳ್ಳಿ	೨೮	೬೫	೬೦
ಒಟ್ಟು	೩೩೭	೮೮೨	೭೫೫

ವಯೋಗುಂಪು

ಸಮೀಕ್ಷೆಗೊಳಪಟ್ಟ ಕರ್ನಾಟಕದ ಸೆಟ್ಲಮೆಂಟ್‌ಗಳ ಚಪ್ಪರಬಂದ ಸಮುದಾಯದ ಜನಸಂಖ್ಯೆಯನ್ನು ವಯಸ್ಸಿಗನುಗುಣವಾಗಿ ಐದು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ. ಸಮುದಾಯದ ಆರ್ಥಿಕ ಹಾಗೂ ಶೈಕ್ಷಣಿಕ ಅಂಶಗಳನ್ನು ಅರಿಯಲು ಆ ಸಮುದಾಯದ ಜನರ ವಯೋಗುಂಪುಗಳನ್ನು ನೊಡುವುದು ಅಗತ್ಯವಾಗಿದೆ.

ಇವರಲ್ಲಿ ೦.೪ ವಯೋಮಾನದವರ ಒಟ್ಟು ಜನಸಂಖ್ಯೆ ಶೇ. ೯.೨೮. ೫-೧೭ರ ವಯೋಮಾನದರ ಜನಸಂಖ್ಯೆ ಒಟ್ಟು ಶೇ. ೩೩.೮೭. ೧೮-೪೦ ವಯೋಮಾನದವರ ಜನಸಂಖ್ಯೆ ಒಟ್ಟು ಶೇ. ೩೮.೩೯. ೪೧-೬೦ರ ವಯೋಮಾನದವರು ಒಟ್ಟು ಶೇ. ೧೩.೫, ೬೧ ವರ್ಷ ಹಾಗೂ ಅದಕ್ಕೂ ಮೇಲ್ಪಟ್ಟ ವಯೋಮಾನದವರು ಶೇ. ೪.೯೬ರಷ್ಟಿದ್ದಾರೆ.

ಕೋಷ್ಟಕ ೩.೨೩: ಸಮೀಕ್ಷೆಗೊಳಪಟ್ಟ ವಯೋಗುಂಪುವಾರು ಜನಸಂಖ್ಯೆ ಕೋಷ್ಟಕ

ವಯೋ ಗುಂಪು	ಪುರುಷ	ಸ್ತ್ರೀ	ಒಟ್ಟು
ಒಟ್ಟು	೮೮೨	೭೫೫	೧೬೩೭
೦-೪	೭೫	೭೭	೧೫೨
೫-೧೭	೩೨೨	೨೩೨	೫೫೪
೧೮-೪೦	೩೧೫	೩೧೩	೬೨೮
೪೧-೬೦	೧೧೯	೧೦೨	೨೨೧
೬೦+	೫೧	೩೧	೮೧

ಲಿಂಗಾನುಪಾತ ಮತ್ತು ಕುಟುಂಬ ಗಾತ್ರ

ಪ್ರತಿ ೧೦೦೦ ಪುರುಷರಿಗೆ ಮಹಿಳೆಯರ ಸಂಖ್ಯೆ ಎಷ್ಟೆಂಬುವುದನ್ನು ಗುರುತಿಸುವುದೇ ಲಿಂಗಾನುಪಾತವಾಗಿರುತ್ತದೆ. ಸೆಟಲಮೆಂಟ ನಿವಾಸಿ ಚಪ್ಪರಬಂದರಲ್ಲಿ ಸಾವಿರ ಪುರುಷರಿಗೆ ೮೫೬ ಸ್ತ್ರೀಯರು ಇರುವುದನ್ನು ಕಾಣಬಹುದು. ಚಪ್ಪರಬಂದ ಸಮುದಾಯದ ಪುರುಷ ಮತ್ತು ಮಹಿಳೆಯರ ಮಧ್ಯದ ಅಂತರವು ೧೪೪ ರಷ್ಟಿದೆ. ಹಾಗೇ ಇವರ ಒಟ್ಟು ಕುಟುಂಬದ ಗಾತ್ರವು ಶೇ. ೪.೮೫ ರಷ್ಟಿದೆ.

ಕೋಷ್ಟಕ ೩.೨೪: ಸಮೀಕ್ಷೆಗೊಳಪಟ್ಟ ಕುಟುಂಬದ ಗಾತ್ರ ಮತ್ತು ಲಿಂಗ ಪ್ರಮಾಣ

ಸ್ಥಳ	ಕುಟುಂಬ	ಪುರುಷ	ಸ್ತ್ರೀ	ಒಟ್ಟು	ಕುಟುಂಬದ ಗಾತ್ರ	ಲಿಂಗಪ್ರಮಾಣ
ಬಾಗಲಕೋಟ	೩೮	೧೩೩	೯೯	೨೩೨	೬.೧	೭೪೪
ಬಿಜಾಪುರ	೧೭೦	೪೪೮	೩೮೮	೮೩೬	೪.೯೧	೮೬೬
ಗದಗ	೧೦೧	೨೩೬	೨೦೮	೪೪೪	೪.೩೯	೮೮೧
ಹುಬ್ಬಳ್ಳಿ	೨೮	೬೫	೬೦	೧೨೫	೪.೪೬	೯೨೩
ಒಟ್ಟು	೩೩೭	೮೮೨	೭೫೫	೧೬೩೭	೪.೮೫	೮೫೬

ಕಂಜರಭಾಟ

ಕಂಜರಭಾಟರು ಉತ್ತರ ಪ್ರದೇಶ, ಹರಿಯಾಣ, ಪಂಜಾಬ, ಕಾಶ್ಮಿರ, ಬಿಹಾರ, ಮಧ್ಯಪ್ರದೇಶ, ರಾಜಸ್ತಾನ, ಗುಜರಾತ, ಆಸ್ಸಾಮ, ಪಶ್ಚಿಮ ಬಂಗಾಲ, ಒರಿಸ್ಸಾ, ಹಿಮಾಚಲ ಪ್ರದೇಶ, ಅಂಡಮಾನ ಮತ್ತು ನಿಕೋಬಾರಗಳಲ್ಲಿ ಹಾಗೂ ಕರ್ನಾಟಕ, ಆಂಧ್ರಪ್ರದೇಶಗಳಲ್ಲಿ ವಾಸವಾಗಿದ್ದಾರೆ ಎಂದು ತಿಳಿದುಬರುತ್ತದೆ. ಮತ್ತು ಕರ್ನಾಟಕದ ಗದಗ, ಹುಬ್ಬಳ್ಳಿ ಸೆಟ್ಲಮೆಂಟಗಳಲ್ಲಿ ವಾಸವಾಗಿರುವ ಕಂಜರಭಾಟರ ಜನಸಂಖ್ಯೆಯನ್ನು ಕುರಿತು ಈ ಕೇಳಗಿನ ಕೋಷ್ಟಕದಲ್ಲಿ ಕಾಣಬಹುದಾಗಿದೆ.

ಕೋಷ್ಟಕ ೩.೨೫: ಸಮೀಕ್ಷೆಗೊಳಪಟ್ಟ ಕಂಜರಭಾಟರ ಜನಸಂಖ್ಯೆ

ಸ್ಥಳ	ಕುಟುಂಬಗಳು	ಪುರುಷ	ಸ್ತ್ರೀ	ಒಟ್ಟು
ಗದಗ	೪೭	೧೦೩	೧೦೦	೨೦೩
ಹುಬ್ಬಳ್ಳಿ	೮೨	೧೯೩	೧೬೧	೩೫೪
ಒಟ್ಟು	೧೨೯	೨೯೬	೨೬೧	೫೫೭

ಕರ್ನಾಟಕದ ಒಟ್ಟು ಸೆಟಲಮೆಂಟಗಳಲ್ಲಿ ಕಂಜರಭಾಟರು ಕೇವಲ ಹುಬ್ಬಳ್ಳಿ ಮತ್ತು ಗದಗಗಳಲ್ಲಿ ಮಾತ್ರ ಕಂಡುಬರುತ್ತಾರೆ. ದಾಂಡೇಲಿಯಲ್ಲಿ ಈ ಹಿಂದೆ ಇದ್ದುದಾಗಿ ತಿಳಿದುಬಂದರೂ ಪ್ರಸ್ತುತ ಅವರು ದಾಂಡೇಲಿ ಸೆಟಲಮೆಂಟಿನಲ್ಲಿರದೆ ಹೊಸ ದಾಂಡೇಲಿಯಲ್ಲಿ ನೆಲೆಸಿರುವುದು ತಿಳಿದುಬರುತ್ತದೆ. ಗದಗಿನಲ್ಲಿ ಶೇ. ೩೬.೪೪ ಹಾಗೂ ಹುಬ್ಬಳ್ಳಿಯಲ್ಲಿ ಶೇ. ೬೩.೫೬ರಷ್ಟು ನೆಲೆಸಿದ್ದಾರೆ.

ಕಂಜರಭಾಟರ ವಯೋಗುಂಪುವಾರು ಜನಸಂಖ್ಯೆ

ಯಾವುದೇ ಸಮುದಾಯದ ಶೈಕ್ಷಣಿಕ ಮತ್ತು ಆರ್ಥಿಕ ಅಂಶಗಳನ್ನು ಅರಿಯಲು ಆ ಸಮುದಾಯದ ಜನರ ವಯೋ ಗುಂಪುಗಳನ್ನು ತಿಳಿಯುವುದು ಅಗತ್ಯವಾಗಿರುತ್ತದೆ. ಕಂಜರಭಾಟರ ಈ ಅಂಶಗಳನ್ನು ಅರಿಯಲು ೪ ವರ್ಷ ಒಳಗಿನವರ ಅಂಕಿಅಂಶಗಳನ್ನು ಕಲೆಹಾಕಲಾಗಿದೆ. ಈ ವಯೋ ಗುಂಪಿನವರನ್ನು ಹೊರಗಿಟ್ಟು ಸಾಕ್ಷರತೆಯ ಪ್ರಮಾಣವನ್ನು ಪಡೆಯಲಾಗಿದೆ. ಇವರ ಒಟ್ಟು ಜನಸಂಖ್ಯೆಯಲ್ಲಿ ಈ ವಯೋ ಗುಂಪಿನವರ ಪ್ರಮಾಣ ೧೦.೨೩ ರಷ್ಟಿದೆ. ೫ ರಿಂದ ೧೭ ವಯೋಗುಂಪನ್ನು ಸಾಕ್ಷರತೆಗೆ ಒಳಪಡುವ ಅಧ್ಯಯನಶೀಲ ಆದರೆ ಉದ್ಯೋಗಕ್ಕೆ ಅರ್ಹವಲ್ಲದ ಗುಂಪು ಎಂದು ಪರಿಗಣಿಸಲಾಗಿದೆ.

ಕೋಷ್ಟಕ ೩.೨೬: ಸಮೀಕ್ಷೆಗೊಳಪಟ್ಟ ಕಂಜರಬಾಟರ ವಯೋಗುಂಪುವಾರು ಜನಸಂಖ್ಯೆ

ವಯೋಗುಂಪು	ಪುರುಷ	ಸ್ತ್ರೀ	ಒಟ್ಟು
ಒಟ್ಟು	೨೯೬	೨೬೧	೫೫೭
೦-೪	೨೯	೨೮	೫೭
೫-೧೭	೧೧೫	೮೯	೨೦೪
೧೮-೪೦	೧೧೪	೧೦೯	೨೨೩
೪೧-೬೦	೨೫	೨೮	೫೩
೬೦+	೧೩	೭	೨೦

ಈ ಗುಂಪಿನಲ್ಲಿಯ ಇವರ ಪ್ರಮಾಣ ೩೬.೬೩ ರಷ್ಟಿರುವುದು. ೧೮ ರಿಂದ ೪೦ ವಯೋ ಗುಂಪನ್ನು ಕಾಯಕರ್ಹ, ಸಂತಾನರ್ಹ ಹಾಗೂ ಚಲನಶೀಲ ಗುಂಪೆಂದು ಗ್ರಹಿಸಲಾಗುವುದು. ಈ ಗುಂಪಿನಲ್ಲಿಯ ಇವರ ಪ್ರಮಾಣ ೪೦.೦೩ ರಷ್ಟಿರುವುದು. ೪೧ ರಿಂದ ೬೦ ವಯೋ ಗುಂಪನ್ನು

ಮಾರ್ಗದರ್ಶಿ ಮತ್ತು ಅನುಭವಿ ಗುಂಪೆಂದು ಭಾವಿಸಲಾಗುವುದು. ಈ ಗುಂಪಿನಲ್ಲಿಯ ಇವರ ಪ್ರಮಾಣ ೯.೫೨ ರಷ್ಟಿರುವುದು. ೬೧ರ ಮೇಲ್ಪಟ್ಟ ವಯೋ ಗುಂಪು ಅವಲಂಬಿತ, ಅನುಭವಿ, ಅಸಹಾಯಕ, ಕಾಯಕರ್ಹವಲ್ಲದ ಗುಂಪೆಂದು ಪರಿಗಣಿಸಲಾಗುವುದು. ಈ ಗುಂಪಿನಲ್ಲಿಯ ಇವರ ಪ್ರಮಾಣ ೫.೫೯ ರಷ್ಟಿರುವುದು. ಕಂಜರಭಾಟರಲ್ಲಿ ಕಾಯಕರ್ಹ ವಯೋ ಗುಂಪಿನವರು ಗಣನೀಯ ಪ್ರಮಾಣದಲ್ಲಿದ್ದರೂ ಆಧುನಿಕ ಸಾಕ್ಷರತೆಯ ಕೊರತೆಯಿಂದಾಗಿ ಇವರ ಆರ್ಥಿಕ ಸ್ಥಿತಿ ಅದೇ ಪ್ರಮಾಣದಲ್ಲಿ ಸುಧಾರಿಸುವುದು ಕಷ್ಟಸಾಧ್ಯ

ಕೋಷ್ಟಕ ೩.೨೭: ಸಮೀಕ್ಷೆಗೊಳಪಟ್ಟ ಕಂಜರಭಾಟರ ಕುಟುಂಬದ ಗಾತ್ರ ಮತ್ತು ಲಿಂಗ ಪ್ರಮಾಣ

ಸ್ಥಳ	ಕುಟುಂಬ	ಕುಟುಂಬದ ಗಾತ್ರ	ಲಿಂಗಪ್ರಮಾಣ
ಗದಗ	೪೭	೪.೩೧	೯೭೦
ಹುಬ್ಬಳ್ಳಿ	೮೨	೪.೩೧	೮೩೪
ಒಟ್ಟು	೧೨೯	೪.೩೧	೮೮೧

ಪ್ರತಿ ೧೦೦೦ ಪುರುಷರಿಗೆ ಮಹಿಳೆಯರ ಸಂಖ್ಯೆ ಎಷ್ಟೆಂಬುವುದನ್ನು ಗುರುತಿಸುವುದೇ ಲಿಂಗಾನುಪಾತವಾಗಿರುತ್ತದೆ. ೨೦೦೧ ರ ಜನಗಣತಿಯ ಪ್ರಕಾರ ಕ್ರಮವಾಗಿ ಲಿಂಗ ಅನುಪಾತವು ಭಾರತದಲ್ಲಿ ೯೩೩, ಕರ್ನಾಟಕದಲ್ಲಿ ೯೫೬ ಇದ್ದರೆ ಕರ್ನಾಟಕದ ಸೆಟಲಮೆಂಟ್ ಕಂಜರಭಾಟ ಸಮುದಾಯದಲ್ಲಿ ೮೮೧ ಇರುವುದು ಕಂಡುಬರುತ್ತದೆ, ಇವರಲ್ಲಿ ಪುರುಷರ ಪ್ರಮಾಣಕ್ಕಿಂತ ಮಹಿಳೆಯರ ಪ್ರಮಾಣದ ಅಂತರವು ೧೧೯ರಷ್ಟಿದೆ. ಹಾಗೇ ಇವರ ಕುಟುಂಬ ಗಾತ್ರವು ಶೇ.೪.೩೧ ರಷ್ಟಿದೆ.

ಕೋಷ್ಟಕ ೩.೨೮: ಮಾರ್ಚ್ ೩೧, ೧೯೪೮ ರಲ್ಲಿ ಸೆಟ್ಲಮೆಂಟ್‌ಗಳಲ್ಲಿರುವ ಜನಸಂಖ್ಯೆ

	ದಕ್ಷಿಣ ವಿಭಾಗ	ಬೇರಾಡ್ಸ	ಬೇಸ್ತರ್	ಭಾಮ್ಟಾ (ಟಕಾರಿ)	ಭಾಮ್ಟಾ(ರಜಪುತ)	ಬಿಲ್	ಭಾಟ್(ಕಂಜರ್)	ಕೈಕಾಡಿ	ಲಮಾಣಿ	ಮಾಂಗಗಾರೂಡಿ	ಮಿಕ್ಸಡ್‌ಗ್ಯಾಂಗ್	ಪಾರ್ಧಿ	ವಾಗ್ರಿ	ಒಟ್ಟು
೧	ಹುಬ್ಬಳ್ಳಿ			೧೦೨			೪೦	೯೦	೨	೫೦		೧೧೮		೪೦೨
೨	ಗದಗ			೧೦	೨೦		೫೮	೨೮	೪			೮೬		೨೦೬
೩	ಬಿಜಾಪುರ	೩	೧	೧೭	೩೮	೧೦	೧೦	೯		೨೦	೪	೧೪	೯	೧೩೫
	ಒಟ್ಟು	೩	೧	೧೨೯	೫೮	೧೦	೧೦೮	೧೨೭	೬	೭೦	೪	೨೧೮	೯	೭೪೩

ಕೋಷ್ಟಕ ೩.೨೯: ಮಾರ್ಚ್ ೩೧, ೧೯೪೮ ರಲ್ಲಿ ಫ್ರೀಕಾಲೋನಿಯ ಜನಸಂಖ್ಯೆ

	ದಕ್ಷಿಣ ವಿಭಾಗ	ಬೇರಾಡ್ಸ	ಬೇಸ್ತರ್	ಭಾಮ್ಟಾ (ಟಕಾರಿ)	ಭಾಮ್ಟಾ(ರಜಪುತ)	ಬಿಲ್	ಭಾಟ್(ಕಂಜರ್)	ಕೈಕಾಡಿ	ಲಮಾಣಿ	ಮಾಂಗಗಾರೂಡಿ	ಮಿಕ್ಸಡ್‌ಗ್ಯಾಂಗ್	ಪಾರ್ಧಿ	ವಾಗ್ರಿ	ಒಟ್ಟು
೧	ಹುಬ್ಬಳ್ಳಿ		೧೧೪				೯೪	೫೧		೧೦		೧೭೧		೪೪೦
೨	ಗದಗ		೨	೧೧				೧೬				೭೬		೧೦೫
೩	ಬಿಜಾಪುರ		೬					೧		೩೭		೭೦		೧೧೪
	ಒಟ್ಟು		೧೨೨	೧೧			೯೪	೬೮		೪೭		೩೧೭		೬೫೯

ಗ್ರಂಥಋಣ

1. html://kn.wikipedia.org

ಅಧ್ಯಾಯ ನಾಲ್ಕು

ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿ-ಗತಿ

ಸೆಟಲಮೆಂಟ್‌ನಲ್ಲಿ ನೆಲೆಸಿರುವ ವಿಮುಕ್ತ ಬುಡಕಟ್ಟುಗಳ
ಕೌಟಂಬಿಕ ಮತ್ತು ಸಾಂಸ್ಕೃತಿಕ ಜೀವನ

ಸೆಟಲಮೆಂಟ್‌ನಲ್ಲಿ ನೆಲೆಸಿರುವ ವಿಮುಕ್ತ ಬುಡಕಟ್ಟುಗಳ
ಧಾರ್ಮಿಕ ವಿಧಿ ಆಚರಣೆಗಳು

ಸೆಟಲಮೆಂಟ್‌ನಲ್ಲಿ ನೆಲೆಸಿರುವ ವಿಮುಕ್ತ ಬುಡಕಟ್ಟುಗಳ
ನ್ಯಾಯ ಪಂಚಾಯತಿ ರಚನೆ, ಸಾಹಿತ್ಯ ಮತ್ತು ಭಾಷೆ

ಅಧ್ಯಾಯ ನಾಲ್ಕು

ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿ–ಗತಿ

ಭಾರತದ ಸಮಾಜ ತುಂಬಾ ಸಂಕೀರ್ಣವಾದುದು, ಎಂಬುದನ್ನು ಚರಿತ್ರೆ ಮೂಲಕ ಅರಿತಿದ್ದೇವೆ. ಭಾರತದ ಜಾತಿ ವ್ಯವಸ್ಥೆ ವೃತ್ತಿಯನ್ನು ಆಧರಿಸಿಯೇ ರೂಪುಗೊಂಡಿದ್ದು ಕಣ್ಣಿಗೆ ನಿಚ್ಚಳವಾಗಿ ಕಾಣುತ್ತದೆ. ಅಂಬೇಡ್ಕರ್‌ರವರು ಹಿಂದು ಅಥವಾ ಭಾರತೀಯ ಸಮಾಜವನ್ನು ಮೂರು ಹಂತದಲ್ಲಿ ವಿವರಿಸುತ್ತಾರೆ. ೧. ಸವರ್ಣೀಯ ಹಿಂದು, ೨. ಅವರ್ಣೀಯ ಆದಿಮಾ ಸಮುದಾಯಗಳು ೩. ಅಹಿಂದ, ಅಸ್ಪೃಶ್ಯರು., (ಪ್ರಭಾಕರ.ಎ.ಎಸ್.:೨೦೦೭.ಪು,೧೯೨) ಮುಂದುವರಿದು ಇಲ್ಲಿನ ಮನುಕುಲದ ಕುರಿತು ಮಾತಾನಾಡುತ್ತಾ ಅವುಗಳನ್ನು ಹೀಗೆ ಪಟ್ಟಿಮಾಡುತ್ತಾರೆ.

"ಇಲ್ಲಿನ ಮಾನವಕುಲ ಮೂರು ಪಂಗಡಗಳಲ್ಲಿ ಹಂಚಿಹೋಗಿದೆ, ಮೊದಲನೆಯದು ಆದಿಮ ಜನಾಂಗವೆಂದು ಹೆಸರಾದ ಜನವರ್ಗ, ಎರಡನೆಯದು ಅಪರಾಧಿ ಜನಾಂಗವೆಂದು ಪಟ್ಟಿ ಮಾಡಿರುವ ಜಾತಿಗಳದ್ದು, ಮೂರನೆಯದು ಅಸ್ಪೃಶ್ಯವೆಂದು ಪರಿಗಣಿತವಾದವರ ವಿಶಿಷ್ಟ ಪಂಗಡ. (ಅದೇ:ಪು,೧೯೨)

ಬಸವಣ್ಣನವರು ಒಂದು ಕಡೆ ತಮ್ಮ ವಚನದಲ್ಲಿ "ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ" ಎಂದು ತಿಳಿಸುತ್ತಾರೆ. ಅಂದರೆ ನಮ್ಮಲ್ಲಿ ಬೆಳೆದು ಬಂದ ಜಾತಿ ವ್ಯವಸ್ಥೆಗೂ ಮತ್ತು ಅವರು ನಿರ್ವಹಿಸುತಿದ್ದ ವೃತಿಗೂ ಅವಿನಾಭಾವ ಸಂಬಂಧಗಳಿವೆ ಎಂಬುದರಲ್ಲಿ ಎರಡು ಮಾತಿಲ್ಲ.

ಭಾರತದ ಮೂಲ ನಿವಾಸಿಗಳು ಯಾವುದೋ ಹಂತದಲ್ಲಿ ಅನಿವಾರ್ಯವಾಗಿ ಅಲೆಮಾರಿತನವನ್ನು ಮೈಗೂಡಿಸಿಕೊಂಡಿರಬೇಕು. ತಮ್ಮ ಬದುಕಿಗೆ ಪೂರಕವಾಗಿ ವೃತ್ತಿಯನ್ನು ಅನುಸರಿಸಿ ಅದರಿಂದ ಆ ಸಮುದಾಯಗಳು ಜೀವನ ನಿರ್ವಹಿಸುತ್ತಿದ್ದವು. ಒಂದು ಜಾತಿ ಅಥವಾ ಪಂಗಡ ನಿರ್ವಹಿಸುವ ಕೆಲಸಕ್ಕೆ ಇನ್ನೊಂದು ಜಾತಿ ಅಥವಾ ಪಂಗಡ ಕೈ ಹಾಕುತ್ತಿರಲಿಲ್ಲ. ಉಪ್ಪನ್ನು ಮಾರಿ ಜೀವನ ನಿರ್ವಹಣೆ

ಮಾಡುತ್ತಿದ್ದ ಕೊರಮ ಅಥವ ಕೈಕಾಡಿಗಳ ವೃತ್ತಿಯನ್ನು ಬೇರೆ ಜಾತಿಯವರು ಮಾಡುತ್ತಿರಲಿಲ್ಲ. ಪಾರಂಪಾರಿಕವಾಗಿ ಅವರು ಉಪ್ಪಿನ ವ್ಯಾಪಾರಿಗಳಾಗಿಯೇ ಉಳಿದುಬಿಟ್ಟರು. ಇದರಂತೆ ಇತರ ಸಮುದಾಯಗಳು ತಮ್ಮ ಜಾತಿ ಆಧಾರಿತ ವೃತ್ತಿ ನಿಷ್ಠೆಯಿಂದಲೇ ಬದುಕನ್ನು ಕಟ್ಟಿಕೊಂಡಿದ್ದರು.

ಆದರೆ ಭಾರತದಲ್ಲಿ ಒಂದು ಹೊಸ ಬಿರುಗಾಳಿಯೇ ಎದ್ದಿತು. ಬ್ರಿಟೀಷರ ಪ್ರವೇಶದ ನಂತರ ಇವರು ಕಟ್ಟಿಕೊಂಡ ಸುಸ್ಥಿರ ಜೀವನ ಚಿತ್ರಣವೇ ಅಲ್ಲೋಲ ಕಲ್ಲೋಲಗೊಂಡಿತು.

ಕಾಡಿನಲ್ಲಿಯೋ ನಾಡಿನಲ್ಲಿಯೋ ಒಟ್ಟಾರೆ ಸ್ವಾಭಿಮಾನದಿಂದ ಬದುಕುತ್ತಿದ್ದ ಸಮುದಾಯಗಳನ್ನು ಬ್ರಿಟೀಷರು ತೀರಾ ಗುಮಾನಿಯಿಂದ ಕಾಣತೊಡಗಿದರು. ಪ್ರಾಯಶಃ ಇದಕ್ಕೆ ಕಾರಣ ಏಷಿಯಾ ಮೂಲದ ಭಾರತೀಯರ ಸಮಾಜ ವ್ಯವಸ್ಥೆಯಾಗಲಿ, ಜೀವನ ಶೈಲಿಯಾಗಲಿ ಯುರೋಪ್ ಮೂಲದ ಬ್ರಿಟೀಷ್ ಮನೋಭಾವನೆಗೆ ತುಂಬಾ ಭಿನ್ನವಾದುದು. ಅದರಲ್ಲೂ ಭಾರತದ ಜಾತಿ ವ್ಯವಸ್ಥೆ ಅವರನ್ನು ವಿಸ್ಮಯಕ್ಕೆ ಗುರಿ ಮಾಡಿತು. ಭಾರತಕ್ಕೆ ವ್ಯಾಪಾರದ ನೆವದಲ್ಲಿ ಬಂದ ಬ್ರಿಟೀಷರಿಗೆ ಇಲ್ಲಿಯ ಪರಿಸರವನ್ನು, ಜನರನ್ನು ಅರ್ಥ ಮಾಡಿಕೊಳ್ಳುವುದು ಸುಲಭದ ವಿಚಾರವಾಗಿರಲಿಲ್ಲ. ಹಾಗೇ ಇವರ ಭಾಷೆಗಳೂ ಕೂಡ ಅವರನ್ನು ವಿಸ್ಮಯಕ್ಕೆ ಗುರಿ ಮಾಡಿದವು. ಭಾರತದಲ್ಲಿ ಜಾತಿಗೊಂದು ಭಾಷೆಯನ್ನು ಕಂಡ ಅವರಿಗೆ ಇವರೆಲ್ಲಾ ಹೇಗೆ ಸಂವಹನ ಮಾಡುತ್ತಾರೆ ಮತ್ತು ಒಟ್ಟೊಟ್ಟಾಗಿ ಹೇಗೆ ಬದುಕುತ್ತಾರೆ ಎಂಬುದನ್ನು ತಿಳಿಯದೆ ಗೊಂದಲಕ್ಕೆ ಒಳಗಾದರು. ಹೀಗಾಗಿಯೇ ಅವರು ಭಾರತದಲ್ಲಿ ಮಿಷನರಿಗಳ ಅಥವಾ ಅನ್ಯ ಶಿಸ್ತುಗಳ ಜನರನ್ನು ಬಿಟ್ಟು ಈ ಜನರ ಜೀವನ ಶೈಲಿಯನ್ನು ಅಧ್ಯಯನ ಮಾಡಲು ಹಚ್ಚಿದರು.

ಆದರೆ ಅಧ್ಯಯನಕಾರರೆಲ್ಲ ಬ್ರಿಟಿಷ್ ಮೂಲದವರೇ ಆಗಿದ್ದರು ಅವರ ಅಧ್ಯಯನ ಕ್ರಮ ಬಹುತೇಕರು ಇಲ್ಲಿಯ ಜನರನ್ನು ಸಮರ್ಪಕವಾಗಿ ಅರ್ಥಮಾಡಿಕೊಳ್ಳಲು ಸಹಕಾರಿಯಾಗಲಿಲ್ಲ. ಆ ಕಾರಣಕ್ಕಾಗಿಯೇ ಎಡ್ಗರ್ ಥರ್ಸ್ಟನ್‌ನಂಥವರು ಸ್ಥಳೀಯರ ಸಹಾಯ ಪಡೆದು ಜಾತಿ –ಬುಡುಕಟ್ಟುಗಳನ್ನು, ಅವರ ರೀತಿ ನೀತಿಗಳನ್ನು ತಿಳಿಯಲು ಪ್ರಯತ್ತಿಸಿದರು. ಮತ್ತು ಅದನ್ನು ಅರ್ಥಮಾಡಿಸಲೆಂದೇ ಗ್ರಂಥ ರೂಪಗಳಲ್ಲಿ ನೀಡಿದರು. "ಬ್ರಿಟಿಷರ ಈ ಅಧ್ಯಯನಗಳು ಭಾರತವನ್ನು ವಶಪಡಿಸಕೊಂಡು ರಾಜಕೀಯವಾಗಿ ಆಳಲು ಹಾಗೂ ಆರ್ಥಿಕವಾಗಿ ಲೂಟಿ ಮಾಡಲು ಅಗತ್ಯವಾದ ತಿಳುವಳಿಕೆಗಾಗಿ ಮಾಡಿದಂಥವು" (ಪ್ರಭಾಕರ.ಎ.ಎಸ್:೨೦೦೬, ಪು.೭೮) ತಮ್ಮ ಸ್ವಾರ್ಥಕ್ಕಾಗಿ ಮಾಡಿದ ಅಧ್ಯಯನಗಳ ಮೂಲಕ ಬ್ರಿಟಿಷರು ಭಾರತೀಯರನ್ನು 'ಅನಾಗರೀಕರು' ಎಂದೇ ಭಾವಿಸಿದರು ಮತ್ತು ಇಂತಹ ಅನಾಗರೀಕರಿಗೆ ನಾಗರೀಕತೆಯ ಪಾಠಗಳನ್ನು ತಾವು ಹೇಳಿಕೊಡಬೇಕಾಗಿದೆ ಎಂಬ ಅಹಂಕಾರವನ್ನು ಅವರು ಮೆರೆದರು. ಭಾರತದ ಬಹುತೇಕ ಸೆಟ್ಲಮೆಂಟ್‌ಗಳು ಬ್ರಿಟಿಷರ ಅಂತಹ ಅಹಂಕಾರದ ಪ್ರತೀಕಗಳಾಗಿವೇ ಹೊರತು ಬೇರೇನಲ್ಲ.

ನಾವಿಲ್ಲಿ ಅತೀ ಮುಖ್ಯವಾಗಿ ಗಮನಿಸಬೇಕಾದ ಅಂಶವೊಂದಿದೆ ವೃತ್ತಿ ಮತ್ತು ಜಾತಿಗಳ ಮಧ್ಯ ಅವಿನಾಭಾವ ಸಂಬಂಧವಿದೆ ಎಂಬುದನ್ನು ಬ್ರಿಟೀಷರು ಕೊನೆಯವರೆಗೂ ಅರಿಯಲಿಲ್ಲ. ಮತ್ತು ಭಾರತೀಯರೆಲ್ಲಾ ಅನಾಗರೀಕರು ಎಂಬ ಏಕೈಕ ಧೋರಣೆಗೆ ಒಳಗಾದರು. ಭಾರತವನ್ನು ಆಳುವ

ಮತ್ತು ಇದನ್ನು ಲೂಟಿ ಮಾಡಲೆಂದೇ ಬಂದ ಆ ಜನ ಭಾರತದ ಜನರಿಗೆ ನಾಗರೀಕತೆಯ ಪಾಠಗಳನ್ನು ಹೇಳಿಕೊಡುವ ಸೋಗನ್ನು ಮಾಡಿದರು. ತಮ್ಮ ಅಭಿವೃದ್ಧಿ ಮತ್ತು ಕೆಲಸ ಕಾರ್ಯಗಳನ್ನು ನಿರ್ವಹಿಸಲು ಸ್ಥಳೀಯರ ಅವಶ್ಯಕತೆ ಅವರಿಗೆ ಬಹುವಾಗಿತ್ತು. ಬ್ರಿಟೀಷರ ಕುರಿತು ಒಂದು ರೀತಿಯ ಅಸಮಧಾನವಿದ್ದ ಭಾರತೀಯರಾರೂ ಅವರಿಗೆ ಸುಲಭವಾಗಿ ಸಹಯಕರಾಗಿ ನಿಲ್ಲುವುದು ಕಷ್ಟವಿತ್ತು. ತಮ್ಮ ಇಷ್ಟಾರ್ಥ ಸಿದ್ಧಿಗಳನ್ನು ಪೊರೈಸಿಕೊಳ್ಳಲು ಅವರು ಕಂಡುಕೊಂಡ ಸುಲಭ ಮಾರ್ಗ ಕೆಲವು ಆದಿವಾಸಿ ಬುಡುಕಟ್ಟುಗಳನ್ನು ತಮ್ಮ ಹಿಡಿತದಲ್ಲಿ ತೆಗೆದುಕೊಂಡು ತಮ್ಮ ಕೆಲಸ ಕಾರ್ಯಗಳಿಗೆ ಬಳಕೆ ಮಾಡಿಕೊಳ್ಳುವುದು. ಈ ಹಿನ್ನಲೆ ಮತ್ತು ಉದ್ದೇಶಗಳನ್ನು ಇರಿಸಿಕೊಂಡೇ ಹಲವಾರು ಕಾಯ್ದೆ-ಕಾನೂನುಗಳನ್ನು ಜಾರಿಗೊಳಿಸಿದರು. ತಮ್ಮ ಕಯ್ದೆ-ಕಾನೂನುಗಳ ಅನುಷ್ಟಾನಕ್ಕೆ ಸ್ಥಳೀಯ ಆಡಳಿತ ಮುಖಂಡರಾದ ಗೌಡ, ಶಾನುಭೋಗ, ತಳವಾರ ಮುಂತಾದವರ ಸಹಾಯ ಪಡೆದರು. ಬಹುತೇಕ ಈ ನಿಟ್ಟಿನಲ್ಲಿ ರೂಪುಗೊಂಡಿರುವುದೇ ಅಪರಾಧಿ ಬುಡುಕಟ್ಟು ಕಾಯ್ದೆ, ಅಪರಾಧಿ ಬುಡುಕಟ್ಟು ಕಾಯ್ದೆ, ವ್ಯಾಪಾರಿ ವಹಿವಾಟುಗಳಿಗೆ ಸಂಬಂಧಿಸಿದ ಕಾಯ್ದೆ ಮತ್ತು ಅರಣ್ಯ ಕಾಯ್ದೆಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬ್ರಿಟಿಷರು ಬಳಕೆ ಮಾಡಿಕೊಂಡರು.

ಅರಣ್ಯಕಾಯ್ದೆ ಮತ್ತು ವ್ಯಾಪಾರಿ ಕಾಯ್ದೆಗಳಿಂದ ಬಹುತೇಕ ಕುಶಲಕರ್ಮಿ ಮತ್ತು ಆದಿವಾಸಿ, ಅಲೆಮಾರಿ ಸಮುದಾಯಗಳು, ಬಿಕ್ಕಟ್ಟುಗಳನ್ನು ಎದುರಿಸಬೇಕಾಯಿತ್ತು. ಈ ರೀತಿ ಬಿಕ್ಕಟ್ಟಿಗೆ ಒಳಗಾಗಿ ಅತಂತ್ರಗೊಂಡ ಸಮುದಾಯಗಳನ್ನು ಅಪರಾಧಿ ಬುಡಕಟ್ಟು ಕಾಯ್ದೆಯಡಿ ಹಿಡಿದು ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳುವುದು ಮತ್ತು ಅವರನ್ನು ಸೆಟ್ಲಮೆಂಟ್‌ಗಳಲ್ಲಿ ಕೂಡಿಹಕುವುದನ್ನು ಮಾಡಿದರು.

ಈ ರೀತಿ ಕೂಡಿಹಾಕಿದ ಸಮುದಾಯಗಳಿಂದ ಅವುಗಳ ವೃತ್ತಿ ನಿಷ್ಟೆಗೆ ಭಿನ್ನವಾದ ವೃತ್ತಿಗಳನ್ನು ಬ್ರಿಟಷರು ಒತ್ತಾಯ ಪೂರ್ವಕವಾಗಿ ಹಿಡಿದಿಟ್ಟ ಅಪರಾಧಿ ಬುಡಕಟ್ಟುಗಳ ಮೇಲೆ ಹೇರಿದರು. ಉದಾ: ಚಪ್ಪರ್‌ಬಂದ ಮತ್ತು ಕೊರಮರ ವೃತ್ತಿಗಳು ಮೂಲತಃ ಕಟ್ಟಡ ಕೆಲಸ ಮಾಡುವುದಾಗಿರಲಿಲ್ಲ, ಆದರೆ ಸೆಟ್ಲಮೆಂಟಿನ ಬಹುತೇಕ ಎಲ್ಲಾ ಸಮುದಾಯದ ಜನರಿಗೆ ಕಟ್ಟಡ ಕೆಲಸಕ್ಕೆ ಹಚ್ಚಿದರು. ಮತ್ತು ಬುಡಕಟ್ಟುಗಳಿಗೆ ಕಾರ್ಯ ಕೌಶಲ್ಯತೆಯನ್ನು ಕಲಿಸುವ ಉದ್ದೇಶದಿಂದ ಕ್ರಾಫ್ಟ್ ಶಾಲೆಗಳನ್ನು ಪ್ರಾರಂಬಿಸಿದರು. ಬಡಿಗಿತನವನ್ನು ಮೂಲತಃ ಮಾಡದ ಕಂಜರಭಾಟರಿಗೆ ಬಡಿಗಿತನ ಕಲಿಸಿ ಅವರಿಂದ ಅಥವಾ ಅವರಂತೆ ಹಿಡಿದಿಡಿಲ್ಪಟ್ಟ ಜನರಿಂದ ಕಟ್ಟಿಗೆ ಕೆಲಸ ಮಾಡಿಸಿದರು. ಅಂದರೆ ವೃತ್ತಿ ನಿಷ್ಟೆಯನ್ನು ಹೊಂದಿದ ಜಾತಿ ವ್ಯವಸ್ಥೆಯ ಪರಿಕಲ್ಪನೆಯನ್ನು ಮುರಿದು ಹಾಕಿದರು. ಅದು ಪ್ರಾಯಶಃ ಬುಡಕಟ್ಟುಗಳಿಗೂ ಇಷ್ಟವಿಲ್ಲದ ವಿಚಾರವಾಗಿತ್ತು. ಆದರೆ ಅನಿವಾರ್ಯತೆಯಿಂದಾಗಿ ಬ್ರಿಟಿಷರು ಹೇಳಿದ ಕೆಲಸವನ್ನು ಮಾಡಲೇಬೇಕಾಗಿತ್ತು. ಬ್ರಿಟೀಷರು ತಮ್ಮ ಕೆಲಸ ಕಾರ್ಯಗಳನ್ನು ಸುಲಭವಾಗಿ ಮಾಡಿಸಿಕೊಳ್ಳಲೆಂದೇ ಈ ಜನಕ್ಕೆ 'ಅಪರಾಧಿ' ಗಳೆಂಬ ಪಟ್ಟ ಕಟ್ಟಿದರು. ಈ ಅಪರಾಧಿಗಳೆಂಬ ಹಣೆಪಟ್ಟಿಯಿಂದಾಗಿ ಸಮಾಜಿಕವಾಗಿ ಆ ಎಲ್ಲಾ ಸಮುದಾಯಗಳು ಕಳಂಕಿತವಾದವು. ಬ್ರಿಟೀಷರು ಕಟ್ಟಿದ ಕಳಂಕಿತ ಪಟ್ಟಿಯಿಂದ ಈ ಸಮುದಯಗಳು ಇಲ್ಲಿಯವರಿಗೂ ಹೊರ ಬರಲು ಸಾಧ್ಯವಾಗುತ್ತಿಲ್ಲ. ನಗರ ಅಥವಾ ನಗರದ ಸುತ್ತ-ಮುತ್ತ ಎಲ್ಲಿಯೇ ಕಳ್ಳತನವಾಗಲಿ, ಪೋಲಿಸರು ವಿಚಾರಣೆಗೆ ಮೊದಲಿಗೆ ಬರುವದು ಸೆಟ್ಲಮೆಂಟ್ ಪ್ರದೇಶಕ್ಕೆ ಎಂಬುದು ಸತ್ಯವಾಗಿದೆ.

ಬ್ರಿಟೀಷರು ಅಪರಾಧಿ ಬುಡುಕಟ್ಟುಗಳನ್ನು ಮತಾಂತರಗೊಳಿಸಲಿಲ್ಲ, ಆದರೆ ಅವರ ವೃತ್ತಿನಿಷ್ಠೆಯನ್ನು ಅಲುಗಾಡಿಸಿದರು. ಈ ರೀತಿ ಮಾಡಿರುವುದರಿಂದ ಬಹುತೇಕ ಸಮುದಾಯಗಳು ಕೀಳರಿಮೆ ಅನುಭವಿಸುವಂತಾಯಿತು. ಜೊತೆಗೆ ಅಪರಾಧಿಗಳು ಎಂಬ ಕಳಂಕ ಬೇರೆ ಹತ್ತಿತು, ಇದರಿಂದಲೂ ಅವರು ಕೀಳರಿಮೆ ಅನುಭವಿಸುವಂತಾಯಿತು.

ಒಟ್ಟಾರೆಯಾಗಿ ಹೇಳಬಹುದೆಂದರೆ, ಬ್ರಿಟಿಷರು ಬುಡಕಟ್ಟುಗಳನ್ನು ಅಪರಾಧಿಗಳೆಂದು ಗುರುತಿಸಿ ಅವರನ್ನು ಸಮಾಜಿಕವಾಗಿ ಬಹಿಷ್ಕತರನ್ನಾಗಿ ಮಾಡಿದರು. ೧೯೫೨ ರ ತರುವಾಯ ೨೪ ಸಮುದಾಯಗಳಲ್ಲಿ ಬಹುತೇಕ ಸಮುದಯಗಳು ತಮ್ಮ ಹೊಟ್ಟೆಪಾಡಿಗಾಗಿ ಸೆಟ್ಲಮೆಂಟ್ ತೊರೆದು ಬೇರೆ ಬೇರೆ ಕಡೆ ವಲಸೆ ಹೋದರು. ಆದರೆ ಬ್ರಿಟಷರಿಂದ ಅಲ್ಪಸ್ವಲ್ಪ ಭೂಮಿ, ಮನೆಗಳ ನಿವೇಶನಗಳನ್ನು ಪಡೆದ ಜನ ಮತ್ತು ಸ್ಥಳೀಯವಾಗಿ ಹತ್ತಿಮಿಲ್ ಮತ್ತು ಇತರೆ ಕಡೆ ಕೆಲಸ ನಿರ್ವಹಿಸುತ್ತಿದ್ದ ವಿಮುಕ್ತ ಬುಡಕಟ್ಟುಗಳು ತಮ್ಮ ಸೆಟ್ಲಮೆಂಟ್‌ಗಳಲ್ಲಿಯೇ ನೆಲೆಸಿದರು. ಈ ರೀತಿ ಸೆಟ್ಲಮೆಂಟ್‌ಗಳಲ್ಲಿ ನೆಲೆಸಿದ ಸಮುದಾಯಗಳು ಇಂದು ಬೆರಳೆಣಿಕೆಯಷ್ಟಿವೆ. ಅವುಗಳಲ್ಲಿ ಮುಖ್ಯವಾಗಿ ಕೊರಮ, ಪಾರ್ಧಿ, ಕಂಜರಭಾಟ, ಭೋವಿ (ವಡ್ಡರ), ಚಪ್ಪರಬಂದ, ಗಂಟಿಚೋರ ಸಮುದಾಯಗಳನ್ನು ಕಾಣಬಹುದಾಗಿದೆ. ಬಹುತೇಕ ಈ ಎಲ್ಲಾ ಸಮುದಾಯಗಳು ಒಂದೇ ಕಡೆ ನೆಲೆಸಿರುವುದು ಹುಬ್ಬಳಿ ಮತ್ತು ಗದಗ ಸೆಟ್ಲಮೆಂಟ್‌ನಲ್ಲಿ ಮಾತ್ರ ಇನ್ನುಳಿದ ಬಹುತೇಕ ಸೆಟ್ಲಮೆಂಟ್‌ಗಳಲ್ಲಿ ಗಂಟಿಚೊರ, ಪಾರ್ಧಿ, ಚಪ್ಪರಬಂದ ಎಂಬ ಸಮುದಾಯಗಳೇ ಹೆಚ್ಚಾಗಿ ಕಂಡು ಬರುತ್ತವೆ. ಈ ಎಲ್ಲಾ ಸಮುದಾಯಗಳು ಒಂದೇ ಕಡೆ ಸೆಟ್ಲಮೆಂಟ್‌ಗಳಲ್ಲಿ ನೆಲೆಸಿದರೂ ಸಹ ಅವುಗಳು ಒಂದೊಂದು ಪಂಗಡವಾಗಿ ಪ್ರತ್ಯೇಕವಾಗಿಯೇ ನೆಲೆಸಿವೆ. ಗಂಟಿಚೋರ ಸಮುದಾಯದ ಮನೆಗಳು ಒಂದು ಕಡೆ ಗುಂಪಾಗಿದ್ದರೆ, ಮತ್ತೊಂದು ಕಡೆ ಪಾರ್ಧಿಗಳ ಗುಂಪು, ಇನ್ನೊಂದೆಡೆ ಕಂಜರಭಾಟರ ಗುಂಪು, ಮತ್ತೊಂದು ಕಡೆ ಕೊರಮರ ಗುಂಪುಗಳು ನೆಲೆಸಿವೆ.

ಸಾಮಾಜಿಕವಾಗಿ ಸೆಟ್ಲಮೆಂಟಿನ ಹೊರ ಜಗತ್ತಿಗೆ ಈ ಎಲ್ಲಾ ಸಮುದಾಯಗಳು ಅಪರಾಧಿಗಳು ಮತ್ತು ಸೆಟ್ಲಮೆಂಟಿನ ಜನರಾಗಿಯೇ ಕಾಣುತ್ತಾರೆ, ಆದರೆ ಸೆಟ್ಲಮೆಂಟಿನ ಒಳಗೇ ಇನ್ನೊಂದು, ರೀತಿಯ ವ್ಯವಸ್ಥೆ ಇದೆ. ಈ ಎಲ್ಲಾ ಸಮುದಾಯಗಳ ಭಾಷೆ, ಆಚಾರಣೆ ವಿಧಿ, ನೀಷೇಧ, ಪ್ರತಿಯೊಂದರಲ್ಲಿಯೂ ಒಂದಕ್ಕೊಂದು ಸಾಮ್ಯತೆಗಳಿಲ್ಲ. ಆದರೂ ಎಲ್ಲಾ ಸಮುದಾಯಗಳು ಸಾಮರಸ್ಯದಿಂದ ಜೀವಿಸುತ್ತವೆ, ಈ ದೃಷ್ಟಿಯಿಂದ ಇಡೀ ಸೆಟ್ಲಮೆಂಟ್ ಒಂದು ಹಳ್ಳಿಯ ರೂಪವನ್ನು ಪಡೆದಿದೆ ಎನ್ನಬಹುದು. ಶುಭ ಕಾರ್ಯ, ಜಾತಿ ಪಂಚಾಯ್ತಿ ಇತ್ಯಾದಿಗಳನ್ನು ಬಗೆ ಹರಿಸಿಕೊಳ್ಳುವಾಗ ಜಾತಿಯೊಳಗಿನ ಜನರೇ ನಿರ್ಮಿಸಿಕೊಂಡ ಕಟ್ಟಳೆಯಂತೆ ಬಗೆ ಹರಿಸಿಕೊಳ್ಳುತ್ತಾರೆ. ಆದರೆ ಸೆಟ್ಲಮೆಂಟಿನ ವಿಚಾರಕ್ಕೆ ಸಂಬಂಧಿಸಿದಂತೆ ಸೆಟ್ಲಮೆಂಟಿನ ಪ್ರತಿಯೊಂದು ಸಮುದಾಯವು ಮತ್ತು ಸಮುದಾಯದ ಮುಖ್ಯಸ್ಥರು ಸೇರಿ ವಿವಾದಗಳು, ಪಂಚಾಯ್ತಿಗಳನ್ನು ಬಗೆಹರಿಸುತ್ತಾರೆ. ಸೆಟ್ಲಮೆಂಟಿನ ಆಯಾ ಸಮುದಾಯದವರು ವೈಯಕ್ತಿಕವಾದ ದೈವಗಳನ್ನು ಪೂಜಿಸಿದಂತೆಯೇ, ಕೆಲವೊಂದು ಉತ್ಸಾಹ, ಮುಂತಾದವುಗಳನ್ನು ಎಲ್ಲಾ ಸಮುದಾಯಗಳು ಸೇರಿ ಪೂರೈಸುತ್ತವೆ.

ಕ್ಷೇತ್ರ ಕಾರ್ಯದಲ್ಲಿ ಸೆಟ್ಲಮೆಂಟಗಳನ್ನು ಗಮನಿಸಿದಾಗ ಆರ್ಥಿಕವಾಗಿ ಸಬಲವಾಗಿರುವ ಜಾತಿ ಸ್ವಲ್ಪ ಹೆಚ್ಚಿನ ಸ್ಥಾನಮಾನ ಗಳಿಸಿದರೆ, ಆರ್ಥಿಕವಾಗಿ ತುಂಬಾ ದುರ್ಬಲವಾದ ಸಮುದಾಯ ತೀರಾ ಕೆಳಹಂತದ ಸ್ಥಾನಮಾನವನ್ನು ಪಡೆದಿರುವುದುನ್ನು ಕಾಣಬಹುದಾಗಿದೆ. ಆ ರೀತಿಯ ಕೆಳಗಿನ ಸ್ಥಾನದಲ್ಲಿ ನಿಲ್ಲುವ ಸಮುದಾಯ ಪಾರ್ಧಿಗಳಾದರೆ, ಮೇಲೆ ನಿಲ್ಲುವ ಸಮುದಾಯ ಕೊರಮರದ್ದಾಗಿದೆ.

ಚಪ್ಪರಬಂದ ಸಮುದಾಯ ತನ್ನ ಮೂಲ ರೀತಿನೀತಿಗಳಿಂದ ದೂರ ಸರಿದು ಮುಸ್ಲಿಂರಂತಿರಲು ಹೆಚ್ಚು ಆಪೇಕ್ಷೆ ಪಡುತ್ತಿದ್ದಾರೆ. ಈ ರೀತಿ ಅವರು ಬದಲಾವಣೆಗೆ ನಿಧಾನವಾಗಿ ಜಾರುತ್ತಿರುವುದನ್ನು ನೋಡಿದರೆ, ಅವರು ಸಂಸ್ಕೃತೀಕರಣದ ಪ್ರಭಾವಕ್ಕೆ ಒಳಗಾಗಿತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ.

ಚಪ್ಪರಬಂದ ಸಮುದಾಯದಲ್ಲಾದ ಬದಲಾವಣೆಗಳೇ ಇತರ ಸಮುದಾಯಗಳಲ್ಲಿಯೂ ಆಗುತ್ತಿದೆ. ಸಾಮಜಿಕವಾಗಿ ತುಂಬಾ ಕೆಳಹಂತದಲ್ಲಿರುವ ಸೆಟ್ಲಮೆಂಟಿನ ಬೋವಿ ಮತ್ತು ಪಾರ್ಧಿಯ ಕೆಲವರು ಕ್ರಿಶ್ಚಿಯನ್ ಧರ್ಮಕ್ಕೆ ಪಲಾಯನಗೊಂಡಿರುವುದು ಕಂಡು ಬರುತ್ತದೆ. ಆದರೆ ಆ ರೀತಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡ ಭೋವಿ, ಪಾರ್ಧಿಗಳ ಸಂಖ್ಯೆ ಅತ್ಯಲ್ಪವಾಗಿದೆ. ಒಟ್ಟಾರೆಯಾಗಿ ಸೆಟ್ಲಮೆಂಟನ್ನು ನೋಡಿದರೆ ಸ್ವಾತಂತ್ರ್ಯೋತ್ತರ ಭಾರತದ ಗ್ರಾಮ ಸಮಾಜವನ್ನು ನೋಡಿದ ಅನುಭವಾಗುತ್ತದೆ.

ಒಂದೊಂದೇ ಜಾತಿ ನೆಲೆಸಿರುವ ಸೆಟ್ಲಮೆಂಟಗಳಲ್ಲಿ ಅಂತಹ ಸಮಸ್ಯೆಗಳಿಲ್ಲ. ಆದರೆ ಬಹು ಸಮುದಾಯಗಳನ್ನು ಹೊಂದಿದ ಸೆಟ್ಲಮೆಂಟಗಳಲ್ಲಿ ಬುಡುಕಟ್ಟುಗಳ ಆರ್ಥಿಕ ಬಲದ ಮೇಲೆ ಸ್ಥರವಿನ್ಯಾಸವು ಕಾಣುತ್ತದೆ.

ಸೆಟ್ಲಮೆಂಟನಲ್ಲಿ ನೆಲೆಸಿರುವ ವಿಮುಕ್ತ ಬುಡಕಟ್ಟುಗಳ ಕೌಟಂಬಿಕ ಮತ್ತು ಸಾಂಸ್ಕೃತಿಕ ಜೀವನ

ಯಾವುದೇ ಸಮುದಾಯವಾಗಲಿ, ತಮ್ಮದೇ ಆದ ರೀತಿಯಲ್ಲಿ ಜೀವನಾವರ್ತನ ಕ್ರಿಯೆಗಳನ್ನು ನಡೆಸಿಕೊಳ್ಳುತ್ತಾ ಬರುತ್ತಿರುತ್ತದೆ. ಅದು ಆ ಸಮುದಾಯದ ಸಂಸ್ಕೃತಿಯೂ ಆಗಿರುತ್ತದೆ. ಭಾರತ ತುಂಬಾ ಸಂಕೀರ್ಣವಾದ ದೇಶ ಇಲ್ಲಿ ಎಷ್ಟು ಜಾತಿ-ಪಂಗಡಗಳಿವೆಯೋ ಅಷ್ಟೇ ರೀತಿಯ ವೈವಿಧ್ಯಮಯ ಆಚರಣೆಗಳು ನಡೆಯುತ್ತಲೇ ಇರುತ್ತವೆ. ಬಹುತೇಕ ಎಷ್ಟೋ ಸಮುದಯಗಳು ವ್ಯವಹಾರಿಕವಾಗಿ ಅಕ್ಕ-ಪಕ್ಕದಲ್ಲಿಯೇ ವಾಸಿಸುತ್ತಿರುತ್ತವೆ. ಆದರೆ ಅವುಗಳ ಆಚರಣೆ, ವಿಧಿ-ನಿಷೇಧ, ಜಾತಿಪಂಚಾಯ್ತಿ, ದೈವಾರಾಧನೆ ಪ್ರತಿಯೊಂದು ಭಿನ್ನವಾಗಿಯೇ ಇರುತ್ತವೆ. ಬ್ರಿಟಿಷರು ಹುಟ್ಟು ಹಾಕಿದ ಸೆಟ್ಲಮೆಂಟಗಳನ್ನು ಇದರಿಂದ ಭಿನ್ನವೇನಲ್ಲ. ಅಪರಾಧಿ ಬುಡಕಟ್ಟು ಕಾಯ್ದೆ ತೊಲಗಿದರೂ, ವಸಾಹತುಗಳಲ್ಲಿ ಕೂಡಿ ಹಾಕಿದ ಎಷ್ಟೋ ಬುಡಕಟ್ಟುಗಳು ಇಂದಿಗೂ ಅಲ್ಲಿಯೇ ನೆಲೆಸಿವೆ. ಕರ್ನಾಟಕದ ಬಹುತೇಕ ವಸಾಹತುಗಳು ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡಿದ್ದರೂ, ಅವುಗಳಲ್ಲಿ ವಾಸಿಸುವ ಜನರು ತಮ್ಮ ವಿಧಿ ಆಚಾರಣೆಗಳನ್ನು ಮರೆತಿಲ್ಲ. ಕರ್ನಾಟಕದ ವಸಾಹತು ನೆಲೆಗಳಲ್ಲಿ ಸಾಮಾನ್ಯವಾಗಿ ಪ್ರಸ್ತುತ ನೆಲೆಸಿರುವ ಸಮುದಾಯಗಳೆಂದರೆ, ಕೊರಮ, ಕಂಜರಭಾಟ, ಪಾರ್ಧಿ, ಚಪ್ಪರಬಂದ, ಬೋವಿ/ವಡ್ಡರು, ಗಂಟಿಚೋರ ಸಮುದಾಯಗಳಾಗಿವೆ. (ಈ ಸಮುದಾಯಗಳೊಂದಿಗೆ ಯವುದೇ ಬುಡಕಟ್ಟಿಗೆ ಸೇರದ ಬಾಡಿಗೆದಾರ ಜನಮೂ ಕೆಲವು ಕಡೆ

ಬಂದು ನೆಲೆಸಿದ್ದಾರೆ) ಗಂಟಿಚೋರ ಮತ್ತು ಭೋವಿ ಸಮುದಾಯಗಳು ಒಂದೆ ಮೂಲದಿಂದ ಬಂದಿವೆ ಎಂಬುದು ಕ್ಷೇತ್ರ ಕಾರ್ಯದ ಮೂಲಕ ತಿಳಿದು ಬರುತ್ತದೆ. ಆದರೂ ಅವೆರಡರ ಮಧ್ಯಯೂ ಕೆಲವೊಂದು ಆಚರಣೆಗಳಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಉಳಿದ ಸಮುದಾಯಗಳು ಭಿನ್ನ-ಭಿನ್ನ ಮೂಲದ ಬುಡಕಟ್ಟುಗಳಾಗಿವೆ. ಮತ್ತು ಒಂದೇ ಸೆಟ್ಲಮೆಂಟಿನಲ್ಲಿ ವಾಸಿಸುತ್ತವೆ. ಆದರೆ ಇವರಲ್ಲಿ ಒಂದು ಸಮುದಾಯದ ಆಚರಣೆಯು ಮತ್ತೊಂದು ಸಮುದಾಯಕ್ಕೆ ಹೊಲಿಕೆಯೇ ಆಗುವುದಿಲ್ಲ. ಆದರೆ ಇಡೀ ಸೆಟ್ಲ್‌ಮೆಂಟಿಗೆ ಸಂಬಂದಿಸಿದ ವಿಚಾರಗಳೇನಿದ್ದರೂ ಅವರೆಲ್ಲ ಒಗ್ಗಟಾಗಿಯೇ ಪೂರೈಸುತ್ತಾರೆ.

ಕರ್ನಾಟಕದ ಸೆಟ್ಲಮೆಂಟಗಳಲ್ಲಿ ನೆಲೆಸಿದ್ದ ಒಟ್ಟು ೨೪ ವಿಮುಕ್ತ ಬುಡಕಟ್ಟುಗಳಲ್ಲಿ ಬಹುತೇಕ ಸಮುದಾಯಗಳು ಇಂದು ಸೆಟ್ಲಮೆಂಟನ್ನು ತೊರೆದಿವೆ. ಆದರೆ ಕೆಲವು ಸಮುದಾಯಗಳು ಇಂದಿಗೂ ಸೆಟ್ಲಮೆಂಟಿನಲ್ಲಿಯೇ ನೆಲೆಸಿವೆ. ಆ ಸಮುದಾಯಗಳ ಮೂಲ, ಪದ ನಿಷ್ಪತ್ತಿಗಳೊಂದಿಗೆ ಆ ಸಮುದಾಯಗಳ ಸಾಮಾಜಿಕ ಬದುಕಿಗೆ ಸಂಬಂಧಿಸಿದ ಬೆಡಗುಗಳು, ವಿವಾಹ, ಮಗುವಿನ ಜನನಕ್ರಿಯೆ ಮತ್ತು ಅದಕ್ಕೆ ಸಂಬಂಧಿಸಿದ ಆಚರಣೆಗಳು, ಜವಳ ಶಾಸ್ತ್ರ, ಹೆಣ್ಣು ಋತುಮತಿಯಾದ ಸಂದರ್ಭದಲ್ಲಿ ನಡೆಸುವ ಕ್ರಿಯೆಗಳು, ಆ ಸಮುದಾಯಗಳ ಆಹಾರ ಪದ್ದತಿ, ಉಡುಗೆ ತೊಡುಗೆ, ನ್ಯಾಯ ಪದ್ದತಿ, ಮರಣದಂತಹ ಸಂದರ್ಭದಲ್ಲಿ ನಡೆಸುವ ಆಚರಣೆ ಪದ್ದತಿಗಳನ್ನು ಈ ಅಧ್ಯಾಯದಲ್ಲಿ ನೋಡಲಾಗಿದೆ

೧. ಭೋವಿ

ಭೋವಿಗಳ ಮೂಲ: ಭೋವಿಗಳು ಮೂಲತಃ ಕರ್ನಾಟಕದವರೆ ಅಥವಾ ಅನ್ಯ ಪ್ರದೇಶಗಳಿಂದ ವಲಸೆ ಬಂದ ಬುಡಕಟ್ಟೆ ಎನ್ನುವ ಸಂಶಯ ಕಾಡುವುದು ಸಹಜ. ಭೋವಿಗಳ ಭಾಷೆಯು ದ್ರಾವಿಡ ಭಾಷಾ ಪ್ರಕಾರಗಳಲ್ಲಿ ಒಂದಾಗಿದ್ದು ಇದಕ್ಕೆ ಲಿಪಿ ಇರುವುದಿಲ್ಲ. ತಮಿಳು, ಕನ್ನಡ ಮತ್ತು ತೆಲುಗು ಮೂರು ಭಾಷೆಗಳನ್ನು ಬೆರೆಸಿ ಮಾತನಾಡಿದಂತೆ ಕಾಣುವ ಭೋವಿಗಳ ಭಾಷೆಯು ಇವರು ದ್ರಾವಿಡ ಮೂಲದವರೆಂದು ತೋರಿಸಿಕೊಡುತ್ತದೆ.

ಭೋವಿಗಳನ್ನು ಭೋವಿ, ವಡ್ಡ, (ಹುಬ್ಬಳ್ಳಿಯಲ್ಲಿ ಬೆಸ್ತರ್) ಮುಂತಾಗಿ ಕರೆಯಲಾಗುತ್ತದೆ. ಕರ್ನಾಟಕದಲ್ಲಿ ಬೆಸ್ತ, ಬೆಸ್ತರ್ ಎನ್ನುವ ಜಾತಿಯೊಂದ್ದಿದ್ದು ಆ ಜಾತಿಗೂ ಭೋವಿಗಳಿಗೂ ಯಾವುದೇ ರೀತಿಯ ಸಂಬಂಧಗಳಿರುವುದಿಲ್ಲ. ಬೆಸ್ತರ ಬೆಡಗು, ರೀತಿ ನೀತಿ, ಆಚರಣೆಗಳ ಸ್ವರೂಪವೇ ಬೇರೆ, ಬೋವಿಗಳ ಬೆಡಗು, ಆಚಾರ, ವಿಚಾರ ಇತ್ಯಾದಿಗಳೇ ಭಿನ್ನವಾಗಿವೆ.

ಬೋವಿ ವಡ್ಡರನ್ನು ಕುರಿತು ಥರ್ಸ್ಟನ್‌ರವರು ಹೀಗೆ ತಿಳಿಸುತ್ತಾರೆ. "ವಡ್ಡರ ಸಮುದಾಯವನ್ನು ಒಡ್ಡ, ಒಡ್ಡರ ಎಂದು ಕರೆಯಲಾಗುತ್ತಾದೆ. ಒಡ್ಡ ಎನ್ನುವ ಪದವು ಕನ್ನಡ ಪದವಾಗಿದೆ. ಒಡ್ಡು ಎನ್ನುವುದಕ್ಕೆ ಕನ್ನಡದಲ್ಲಿ, ಜೋಡಿಸು, ನಿಲ್ಲಿಸು ಎಂಬ ಅರ್ಥಗಳಿವೆ ಕಲ್ಲುಗಳನ್ನು ಜೋಡಿಸಿ ನಿಲ್ಲಿಸುವರೇ ಒಡ್ಡರಾಗಿದ್ದಾರೆ" (ಥರ್ಸ್ಟನ್.ಎಡ್ಗರ್:೧೯೦೯,ಪು,೧೨೩)

ಕರ್ನಾಟಕದ ಗೆಝಟಿಯರ್ (೧೯೮೩) ನಲ್ಲಿ ಒಡ್ಡರು ತೆಲುಗು ದೇಶದಿಂದ ಬಂದವರಿರಬೇಕು. ನಿಶ್ಚಿತವಾಗಿ ಹೇಳಬೇಕೆಂದರೆ ದ್ರಾವಿಡ ಪ್ರದೇಶಗಳಿಂದ ವಲಸೆ ಬಂದವರೆಂದು ಉಲ್ಲೇಖಿಸಲಾಗಿದೆ.

ನೆಲ್ಲೂರು ಕೈಫಿಯತ್ತಿನಲ್ಲಿ "ಈ ಜನರು ಕೆರೆಗಳನ್ನು ತೋಡುವವರು, ಇವರು ಕೆಲವು ಸಲ ವ್ಯಾಪಾರದಲ್ಲಿ ತೊಡಗಿರುತ್ತಾರೆ. ಆದರೂ ಇವರು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವಲಸೆ ಹೋಗುತ್ತಿರುತ್ತಾರೆ. ಒಡ್ಡೆ ಅಥವಾ ವಡ್ಡಿ ಈ ಪದಗಳು ಸಂಸ್ಕೃತದ "ಒದ್ರ" ಪದದಿಂದ ಬಂದಿರಬೇಕು. ಒದ್ರ ಎಂಬುವುದನ್ನು ಓರಿಸ್ಸಾ ಎಂದು ಕರೆಯುತ್ತಾರೆ. ಒರಿಯಾ ದೇಶದಿಂದ ಇವರು ವಲಸೆ ಬಂದವರೆಂದು ಹೇಳಲಾಗುತ್ತದೆ. ತೆಲುಗು ಭಾಷೆಯನ್ನಾಡುವ ಇವರು ತಮ್ಮ ತಮ್ಮೊಳಗೆ ಮಾತನಾಡಿಕೊಳ್ಳುವಾಗ ಒಂದು ವಿಚಿತ್ರ ಭಾಷೆಯನ್ನು ಮಾತನಾಡುತ್ತಾರೆ. ಈ ಭಾಷೆಯು ಒರಿಯಾ ಭಾಷೆಗೆ ಹತ್ತಿರವಾಗಿದೆ ಎಂದು ಹೇಳಲಾಗುತ್ತದೆ.

ಬೋವಿಗಳ ಬೆಡಗುಗಳು

ಬೋವಿಗಳಲ್ಲಿ ಮುಖ್ಯವಾಗಿ ಗಂಗಾತಾನಕ ಮತ್ತು ಶಿವತಾನಕ ಎಂಬ ಎರಡು ಮುಖ್ಯ ವಿಭಾಗಗಳಿದ್ದು ಅದರೊಳಗೆ ೪೩–೪೪ ಉಪ ಬೆಡಗುಗಳು ಕಂಡು ಬರುತ್ತವೆ. ಗಂಗಾತಾನಕದಲ್ಲಿ ಬರುವ ಉಪಬೆಡಗುಗಳು ಸಹೋದರ ಬೆಡಗುಗಳೆಂದು ಪರಿಗಣಿಸುವುದರಿಂದ ಆ ಬೆಡಗುಗಳ ಮಧ್ಯ ವೈವಾಹಿಕ ಸಂಬಂಧಗಳು ಏರ್ಪಡುವುದಿಲ್ಲ. ಅದೇ ರೀತಿಯಾಗಿ ಶಿವತಾನಕದಲ್ಲಿ ಬರುವ ಉಪಬೆಡಗುಗಳು ಸಹ ಸಹೋದರ ಬೆಡಗುಗಳೆಂದೇ ಪರಿಗಣಿತವಾಗುವುದರಿಂದ ಆ ಬೆಡಗುಗಳಲ್ಲಿ ವೈವಾಹಿಕ ಸಂಬಂಧಗಳು ಏರ್ಪಡುವುದಿಲ್ಲ, ಗಂಗಾತಾನಕ ಬೆಡಗಿನ ಉಪಬೆಡಗುಗಳು ಶಿವತಾನಕ ಬೆಡಗಿನ ಉಪಬೆಡಗುಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಳ್ಳುತ್ತವೆ.

ಗಂಗಾತಾನಕದಲ್ಲಿ ಒಟ್ಟು ೪೪ ಉಪಬೆಡಗುಗಳನ್ನು ಗುರುತಿಸಿದ್ದು ಅವುಗಳು ಈ ಕೆಳಗಿನಂತಿವೆ:

೧. ಅಕ್ಷಂತಲೋರು, ೨. ಅರಿಷಣಲೋರು, ೩. ಆಲಾಕುಂಟಾವೋರು, ೪. ಆರಾ ಸಳ<ಬಾರ್, ೫. ಉಪ್ಪು ತೋಲೆಪೋರ್, ೬. ಉಲ್ಲೋರು, ೭. ಕುಂಚಾಪೋರ್, ೮. ಕೋಮರ್‍ಯಾಪೋರ್, ೯. ಕೋರದಾಲೋರ್, ೧೦. ಕ್ಯಾಡಿನೋರ್, ೧೧. ಕೋವರ್ಯಾಪೋರ್, ೧೨. ಕೋಮಾಲಿಯೋರ್, ೧೩. ಚರಕುಲೋರ್, ೧೪. ಜಂಬುಲೋರ್, ೧೫. ಜಡ ಪೀಠಲೋರ್, ೧೬. ಥಾಟಿಚಟ್ಟುಲೋರ್, ೧೭. ಥಪ್ಪಟಲೋರ್. ೧೮. ದಾಯ ಪೋಯಿನೋರ್ ೧೯. ದ್ಯಾರಂಗಲೋರ್, ೨೦. ದಂಡಗಲೋರ್, ೨೧. ದೇವಲೋರ್, ೨೨. ಡೊಂಗಾಲೋರ್, ೨೩. ಪಂದಿಕೋಡಿಪೋರ್, ೨೪. ಪಲ್ಯಾಪೋರ್, ೨೫. ಪಂಗಲೋರ್, ೨೬. ಪಲ್ಲಂಗಲೋರ್, ೨೭. ಪೂವೊಬಂಡಲೋರ್, ೨೮. ಪೀಠಾಲೋರ್, ೨೯. ಪೀಟಕಲೋರ್, ೩೦. ಪಂಜುಪಟ್ಟೋರ್, ೩೧.ಮಂಜಾಲೋರ್, ೩೨. ವಳಕ್ಲಾಲೋರ್, ೩೩. ಮಾರಲೋರ್, ೩೪. ಪಟಸುಕಲೋರ್ ೩೫. ಮುದ್ದ್ಗಲೋರ್, ೩೬. ಮಲ್ಲ್ಯಾಪೂರು, ೩೭. ಮಂಚಲೋರ್, ೩೮. ತಲ್ಯಾಮರ್, ೩೯. ದಾಲಣಪೋರ್, ೪೦. ವಾರ್ಲಪೋರು, ೪೧. ಶಲ್ಯಾಲೋರ್, ೪೨. ಶಿವರಾತ್ರಿಯೋರ್, ೪೩. ಹೂವ್ವಿನಲೋರ್, ೪೪. ಹೊನ್ನಲೋರ್ ಎಂದಿವೆ.

ಶಿವತಾನಕದಲ್ಲಿ

೧. ಇದಗಾದಿಂಡಲೋರ್, ೨. ಇಡಾಹೊಬೋರ್ ೩. ಇಸಗ ತಕ್ಕೊಳ್ಳೂರ್, ೪. ಇಡಾಗೋಟ್ಪೋರು, ೫. ಎತ್ತಲೋರ್, ೬. ಏರ್‌ಲೋರ್ ೭. ಏರ್ಲಾವೋರ್, ೮. ಓರಸಾಲೋರ್, ೯. ಗೋಡ್ಯಾಲೋರ್,

೧೦. ಗೋಗಲೋರ್, ೧೧. ಗುಂಜಾವೋರ್, ೧೨. ಗಜ್ಜಲೋರ್, ೧೩. ಗಂಡಲೋರ್, ೧೪. ಡಕ್ಕಲೋರ್, ೧೮. ತೋರಕ್ಕಲೋರ್, ೧೯. ತಮ್ಮಸಗೋರ್, ೨೦. ತಮ್ಮ ಶೆಟ್ಟಿ, ೨೧. ಟಿರುಪಟಿ, ೨೨. ನಾಮಲೋರ್, ೨೩. ನಲ್ಲಕ್ಕುಕಲೋರ್, ೨೪. ಬಾಯಿಮುತ್ತುಗಲೋರ್, ೨೫. ಬತ್ತಲೋರ್, ೨೬. ಬಂಕಲೋರ್, ೨೭. ಬಂಡಲೋರ್, ೨೮. ಬಂದೂಕಲೋರ್, ೨೯. ಬೂಸಲೋರ್, ೩೦. ಬಾಣಲೋರ್, ೩೧. ಬಂಡಂಗಲೋರ್, ೩೨. ಯಂಪೂಲೋರ್, ೩೩. ರ್‍ಯಾಪಲೋರ್, ೩೪. ರೂಪಬಂಡಲೋರ್, ೩೫. ರಾಜಿ ಬಂಡಲೋರು, ೩೬. ಸಂಪಂಗಲೋರ್, ೩೭. ಸಂಕಪಾಕುಪ್ಪಲೋರ್, ೩೮. ಸಾತಲೋರ್, ೩೯. ಸಲ್ಲಿಂಗಲೋರ್, ೪೦. ಸಾಡಗಲೋರ್ ಎಂಬ ನಲ್ವತ್ತು ಉಪ ಬೆಡಗುಗಳು ಕಂಡುಬರುತ್ತಾವೆ.

ಇಲ್ಲಿ ಶಿವ ತಾನಕ ಮತ್ತು ಗಂಗಾ ತಾನಕಗಳಲ್ಲಿ ಶಿವ ತಾನಕದವರು ತಾವು ಗಂಡು ಬೆಡಗಿನವರೆಂದು, ಗಂಗಾತಾನಕದವರು ತಮಗೆ ಬೀಗರಾಗಬೇಕೆಂದು ತಿಳಿಸುತ್ತಾರೆ.

ತಾನಕ ಎಂಬ ಪರ ಸ್ಥಾನ ಎಂಬ ಪದದ ತದ್ಭವವಾಗಿದೆ. ಅಂದರೆ ಗಂಗೆ ಸ್ಥಾನದವರು ಮತ್ತು ಶಿವ ಸ್ಥಾನದವರು ಎಂಬುದೇ ಗಂಗಾತಾನಕ, ಶಿವತಾನಕಗಳಾಗಿ ಮಾರ್ಪಾಡು ಹೊಂದಿವೆ.

(ಮೆಕೆಂಝಿರವರ ಸಂಗ್ರಹಿಸಿದ ಕೈಫಿಯತ್ತಿನಲ್ಲಿ ಬೆಡಗುಗಳ ವಿವರವನ್ನು ಈ ರೀತಿ ಕೊಡಲಾಗಿದೆ.)

ಇವರ ಜಾತಿ, ಬೆಡಗಿನ ವಿವರ

ಯಂಪುಲೋರು, ಬುರಸಲೋರು, ಕೊರದಲೋರು, ಬಂತಂಗಲೋರು, ಸಂಲಂಗದೋರು, ಆಲಕುಂಬಾರು ಎನ್ನುವ ಬೆಡಗುಗಳಿವೆ.

ಬಹುತೇಕ ಒಡ್ಡರ ಬೆಡಗುಗಳ ಹೆಸರು ತೆಲುಗು ಭಾಷೆಯಲ್ಲಿವೆ. ಇವರ ಕೆಲವು ಬೆಡಗುಗಳನ್ನು ಬೇಡ ಮತ್ತು ಇತರ ಬುಡಕಟ್ಟುಗಳಲ್ಲಿ ಕಾಣಬಹುದು. ಉದಾಹರಣೆಗೆ ಎನುಮಲೋರು, ಪತ್ಲೆವರು, ಯರಗೊತ್ತಲವರು ಇವು ಭೋವಿ ಮತ್ತು ಬೇಡ ಎರಡು ಸಮುದಾಯಗಳಲ್ಲಿಯೂ ಕಂಡುಬರುತ್ತವೆ. ಅದೇ ರೀತಿ ಭೋವಿಗಳ ಇನ್ನು ಕೆಲವು ಬೆಡಗುಗಳು ಮುದ್ದೆ ಕಂಬಾರರ ಬೆಡಗುಗಳಿಗೆ ಹೋಲಿಕೆಯಾಗುತ್ತವೆ. ಉದಾಹರಣೆಗೆ ಹೂವಿನೋರ್ ಇತ್ಯಾದಿ ಬೆಡಗುಗಳು.(ಕುಮಾರ್ ಆರ್ ಬಿ:೨೦೦೪:ಪು.೧೨೬)

ಬೆಡಗುಗಳ ಹೆಸರುಗಳ ಹಿಂದಿನ ಉದ್ದೇಶ ಮತ್ತು ಅದು ಯಾವ ಕಾರಣಕ್ಕಾಗಿ ಆ ಸಮುದಾಯದಲ್ಲಿ ಬಂದಿತು ಎಂಬುದನ್ನು ಬೆಟಗೇರಿಯವರು ಈ ಕೆಳಗಿನಂತೆ ಗುರುತಿಸುತ್ತಾರೆ.

ಉದಾಹರಣೆಗೆ,

೧. ಪೀಠಲೋರು = ಪೀಠಲ್+ವಾರು, (ಅವರು) = ಮುಖ್ಯಸ್ಥರು, ಹಿರಿಯರು.

೨. ಜಟಾ ಪೀಠಲೊರು= ಜಟೆ + ಪೀಠಲ್ + ವಾರು = ಕೂದಬಿಲನ್ನು (ಜಡೆ)ಉದ್ದವಾಗಿ ಬಿಟ್ಟ ಮುಖ್ಯಸ್ಥರು.

೩. ಆಲಾಕುಂಟಲೋರು>ಆಲಾಕುಂಚಾಲೋರು, ಆಲಕ್ + ಕುಂಚಾ + ಲೋರು = ಆಲಕ್ ಹೂವಿನ ಗುಚ್ಛದವರು=ಕೆಂಪು ಕಮಲದವರು.

೪. ಪಲ್ಲಾಲೋರು= ಪಲ್ಲಾ + ವಾರು = ಭತ್ತದವರು. ಪಾಲಿ=ದೊಡ್ಡ ಕಿವಿ.ಪಾಲಿ =ಪಲ್ಲಾ.ದೊಡ್ಡ ಕಿವಿಯುಳ್ಳವರು.ಇತ್ಯಾದಿ ಬೆಡಗುಗಳನ್ನು ಗುರುತಿಸಿದ್ದಾರೆ. (ಬೆಟಗೇರಿ. ವೈ ವೈ.:೧೯೯೯,ಪು.೫೬) ಹೀಗೆ ಯವುದೋ ಒಂದು ಕಾರಣಕ್ಕೆ ತಮ್ಮ ವಂಶದ ಹಿರಿಯನ ವೇಷಭೂಷಣ ಅಥವಾ ತಮ್ಮ ವೃತ್ತಿಯನ್ನು ನಡೆಸುವ ಅಥವಾ ತಮ್ಮ ಆರಾಧ್ಯ ದೈವದ ನೆನಪಿಗಾಗಿ ತಮ್ಮ ಬೆಡಗುಗಳನ್ನು ಆ ಹೆಸರುಗಳಿಂದ ಇವರು ಗುರುತಿಸುತ್ತಾರೆ. ಬಹುತೇಕ ಎಲ್ಲಾ ಬುಡಕಟ್ಟು ಜಾತಿ–ವರ್ಗಗಳು ಈ ರೀತಿಯಲ್ಲಿ ಪ್ರಾಣಿ, ಪಕ್ಷಿ, ವೃಕ್ಷ, ದೇವತೆ ಮುಂತಾದವುಗಳ ಹೆಸರುಗಳನ್ನು ತಮ್ಮ ಬೆಡಗಿಗೆ ಇರಿಸಿಕೊಳ್ಳುವುದು ಕಂಡುಬರುತ್ತದೆ.

ವಿಶ್ವಕರ್ಮ ಪಂಚಾಳರಲ್ಲಿ ಒಂದಾದ ಶಿಲ್ಪಿಗಳು ಒಡ್ಡರೆಂಬ ಮಾತಿನಲ್ಲಿ ಎರಡಿಲ್ಲ. ಇವರು ದೈವ ಸಂಪ್ರದಾಯಸ್ಥರು ಆಗಿದ್ದರೆಂಬ ಮಾತಂತು ಸುಳ್ಳಲ್ಲ. ಈ ದೈವ ಸಂಪ್ರದಾಯದ ಕಲ್ಲುಕುಟಿಗ (ಒಡ್ಡ)ರು ತಮ್ಮ ಆಲಸ್ಯ ಹಾಗೂ ಜಡತ್ವದಿಂದಾಗಿ ವಿಶ್ವಕರ್ಮದ ಇತರ ಪಂಡಗಳು ಮುಂದುವರೆದಂತೆ ಮುಂದುವರೆಯಲು ಸಾಧ್ಯವಾಗುವುದಿಲ್ಲ (ಬೆಟಗೇರಿ.ವೈ.ವೈ:೧೯೯೪:ಪು.೨೧೩) ವಡ್ಡ ಅಥವಾ ಭೋವಿಗಳನ್ನು ಕಲ್ಲುಕುಟಿಗರೆಂದು ಕರೆಯುತ್ತಾರೆ. ಮತ್ತು ಕಲ್ಲುಕುಟಿಗ ಎನ್ನುವ ಬೆಡಗೊಂದು ಭೋವಿಗಳಲ್ಲಿದೆ. ಇದೇ ಹೆಸರಿನ ಬೆಡಗು ಮುದ್ದೆ ಕಂಬಾರರಲ್ಲಿಯೂ ಕಂಡುಬರುತ್ತದೆ.

ಮೈಸೂರು, ಕೆನಾರ ಹಾಗು ಮಲಬಾರಗಳ ಮುಖಾಂತರ ಪ್ರವಾಸ ಕೈಗೊಂಡು ಆ ಪ್ರದೇಶದ ಜಾತಿ–ಬುಡಕಟ್ಟುಗಳು ಮತ್ತು ಅವುಗಳ ವೃತ್ತಿ ಇತ್ಯಾದಿಗಳನ್ನು ಗುರುತಿಸಿದ ಬುಕನಾನರು ವಡ್ಡರ ಕುರಿತು ಹೀಗೆ ತಿಳಿಸುತ್ತಾರೆ. "ಒಡ್ಡರಲ್ಲಿ ಕೆಲವರು ವೈಷ್ಣವರಾಗಿದ್ದಾರೆ, ಇನ್ನೂ ಕೆಲವು ಕಡೆ ಶೈವರಾಗಿದ್ದಾರೆ. ಆದರೆ ಅವರು ಮಾತೃ ಪ್ರಾಧಾನ ದೈವಗಳನ್ನೇ (ಎಲ್ಲಮ್ಮ, ಪೊತೆಮ್ಮ, ಕೊಲ್ಲೂರಮ್ಮ) ಹೆಚ್ಚಾಗಿ ಪೂಜಿಸುತ್ತಾರೆ"(ಬುಕನಾನ್ ಎಫ್ ಎ :೧೮೦೭,ಪು.೧೩೪) ಈ ದೇವತೆಗಳ ಮೂರ್ತಿಗಳನ್ನು ತಮ್ಮೊಂದಿಗೆ ಬೇರೆ ಬೇರೆ ಕಡೆ ಒಯುತ್ತಾರೆ.

ಎಡ್ಗರ್ ಥರ್ಸ್ಟನ್ (೧೯೦೯) ರವರ ಕಾಸ್ಟ ಅಂಡ್ ಟ್ರೈಬ್ಸ್ ಆಫ್ ಸದರ್ನ್ ಇಂಡಿಯಾದ, ಸಂಪುಟ ೧ರಲ್ಲಿ ಬೇಡರ್ ಮತ್ತು ಭೋವಿಗಳು ಒಂದೇ ಜಾತಿ ಮೂಲದವರು ಎಂದು ತಿಳಿಸುತ್ತಾರೆ.

ಥರ್ಸ್ಟನ್‌ರವರು ಭೋವಿಗಳ ಭಾಷೆಗೆ ಸಂಬದಿಸಿದಂತೆ ಹೀಗೆ ತಿಳಿಸುತ್ತಾರೆ "Both Telugu speaking Boyers and the canarese speaking Bedars are spilt in To the Two main divisions of 'uru' or villege men and mysa or grass land men" (ಥರ್ಸ್ಟನ್, ಎಡ್ಗರ್: ೧೯೦೯: ೧೮೪: ಸಂಪುಟ–೩) ಕಪಟರಾಳ ಕೃಷ್ಣರಾಯರು ಸಹ ಆಂಧ್ರದಲ್ಲಿ ಬೇಡರನ್ನು ಭೋವಿ ಎಂದು ಗುರುತಿಸಲಾಗುತ್ತದೆ ಎಂದು ತಿಳಿಸುತ್ತಾರೆ. ಬೇಡ ನಾಯಕರ ಬೆಡಗುಗಳನ್ನು ಹೇಳುವಾಗ ತಮ್ಮಲ್ಲಿ ಬೋವಿಗಳದೂ ಒಂದು ಬೆಡಗುಂಟು ಎಂದು ಹೇಳುತ್ತಾರೆ.

ವಿವಾಹ

ಸಂಸ್ಕೃತಿಯೊಂದರ ಕನಿಷ್ಠತಮ ಘಟಕಗಳೆಂದರೆ ಗಂಡು ಮತ್ತು ಹೆಣ್ಣು, ಈ ಮೂಲಭೂತ

ಸಾಂಸ್ಕೃತಿಕ ಘಟಕಗಳು ಪರಸ್ಪರ ವಿರುದ್ಧವಾದ ಮತ್ತು ಪೂರಕವಾದ ದೇಹರಚನೆ ಮತ್ತು ಸ್ವಭಾವಗಳನ್ನು ಹೊಂದಿದ್ದು, ಒಂದು ಬಗೆಯ ಸಮನ್ವತೆಯನ್ನು ಜೀವನದುದ್ದಕ್ಕೂ ಕಾಪಾಡಿಕೊಂಡು ಬರುತ್ತವೆ. ಮದುವೆ ಮತ್ತು ಸಂತನದ ಮೂಲಕ ಈ ಘಟಕಗಳು ವಿಸ್ತರಣೆ ಹೊಂದಿರುತ್ತವೆ. ಮದುವೆ ಎನ್ನುವುದು ಬರೇ ಲೈಂಗಿಕ ಕ್ರಿಯೆಗೆ ಮಾತ್ರ ಸೀಮಿತವಾದುದಲ್ಲ. ಅದು ತನ್ನ ಇಡೀ ಸಮುದಾಯದ ವಂಶವನ್ನು ಭವಿಷ್ಯದ ಗಮ್ಯಕ್ಕೆ ಒಯ್ಯುವ ಮಹತ್ವದ ಬಂಧವೂ ಆಗಿರುತ್ತದೆ

ಸಾಮಾನ್ಯವಾಗಿ ಬುಡಕಟ್ಟು ಸಮುದಾಯಗಳು ತಮ್ಮ ವಂಶದ ಮುಂದುವರಿಕೆಗೆ ಮತ್ತು ಶುದ್ಧತ್ವಕ್ಕೆ ಹೆಚ್ಚಿನ ಮಹತ್ವ ಕೊಡುತ್ತವೆ. ಹೀಗಾಗಿ ಬಹುತೇಕ ಬುಡಕಟ್ಟುಗಳು ತನ್ನ ಪಂಗಡದ ಎಲ್ಲೆಯನ್ನು ಮೀರಿ ಹೋಗಲಾರವು. ಇದಕ್ಕೆ ಭೋವಿ ಸಮುದಾಯವೂ ಹೊರತಲ್ಲ. ತಮ್ಮವರೇ ಎಂದು ಹೇಳಿಕೊಳ್ಳುವ ಇತರ ಉಪಜಾತಿಗಳೊಂದಿಗೆ ಇವರು ಸಂಬಂಧಗಳನ್ನು ಬೆಸೆದುಕೊಳ್ಳುವುದಿಲ್ಲ. ಇತ್ತೀಚಿಗಷ್ಟೆ ಗಂಟಿಚೋರರೊಂದಿಗೆ ಸೆಟ್ಲಮೆಂಟಲಿನಲ್ಲಿರುವ ಭೋವಿಗಳು ಸಂಬಂಧ ಬೆಸೆದುಕೊಳ್ಳುತ್ತಿರುವುದನ್ನು ಕಾಣಬಹುದಾಗಿದೆ.

ಕೋಷ್ಟಕ ೪.೧: ಸಮೀಕ್ಷೆಗೊಳಪಟ್ಟ ಭೋವಿಗಳ ವೈವಾಹಿಕ ಸ್ಥಾನಮಾನ

	ಪುರುಷ	**ಸ್ತ್ರೀ**	**ಒಟ್ಟು**
ಒಟ್ಟು ಜನಸಂಖ್ಯೆ	೬೦೨	೫೧೧	೧೧೧೩
ಅವಿವಾಹಿತರು	೩೩೪	೨೨೦	೫೫೪
ವಿವಾಹಿತರು	೨೬೫	೨೬೮	೫೩೩
ವಿದುರ/ವಿದುವೆಯರು	೩	೨೩	೨೬

ವಿವಾಹಿತ ಭೋವಿಗಳ ಪ್ರಮಾಣದಲ್ಲಿ ಪುರುಷರು ಶೇ. ೫೫.೪೯ ಹಾಗೂ ಮಹಿಳೆಯರು ಶೇ. ೪೩.೦೫ರಷ್ಟು ಕಂಡುಬರುತ್ತಾರೆ. ಒಟ್ಟಾರೆ ಅವಿವಾಹಿತ ಭೋವಿಗಳ ಪ್ರಮಾಣವು ಒಟ್ಟು ಶೇ. ೪೯.೭೮ರಷ್ಟಿದೆ.

ಇವರಲ್ಲಿ ವಿವಾಹಿತರ ಪ್ರಮಾಣವು ಪುರುಷರಲ್ಲಿ ಶೇ. ೪೪.೦೨ ಹಾಗೂ ಮಹಿಳೆಯರ ಪ್ರಮಾಣವು ಶೇ.೫೨.೪೫ರಷ್ಟಿದೆ. ಒಟ್ಟು ವಿವಾಹಿತರ ಪ್ರಮಾಣವು ಶೇ. ೪೭.೮೯ ರಷ್ಟು ಕಂಡುಬರುತ್ತದೆ.

ವಿವಾಹವಾದವರಲ್ಲಿ ಪುರುಷರಿಗಿಂತ ಮಹಿಳೆಯರ ಪ್ರಮಾಣವು ಅಧಿಕವಾಗಿದೆ. ಪ್ರಾಯಶಃ ಇದಕ್ಕೆ ಕಾರಣ ಭೋವಿಗಳು ಸಾಮಾನ್ಯವಾಗಿ ಮೈನೆರೆದ ಸ್ವಲ್ಪ ದಿನಗಳಲ್ಲಿಯೇ ಹುಡುಗಿಗೆ ಮದುವೆ ಮಾಡಿಕೊಟ್ಟು ಬಿಡುತ್ತಾರೆ. ಪ್ರಸ್ತುತ ೧೪ ವರ್ಷದ ಹುಡುಗಿಗೆ ಗಂಡನ್ನು ಹುಡುಕಿ ಮದುವೆ ಮಾಡಲು ಮುಂದಾಗುತ್ತಾರೆ. ಪ್ರಾಪ್ತ ವಯಸ್ಸಿಗೆ (೧೮ವರ್ಷ ತುಂಬಿದ ತರುವಾಯ) ಮದುವೆಯಾಗುವ ಹುಡುಗಿಯರು ಭೋವಿಗಳಲ್ಲಿ ಅಪರೂಪವೆಂದೇ ಹೇಳಬಹುದು.

ಇವರಲ್ಲಿ ವಿಧುರರು ಶೇ. ೦.೪೯ ಹಾಗೂ ವಿಧವೆಯರು ಶೇ. ೪.೫ರಷ್ಟು ಕಂಡುಬರುತ್ತಾರೆ. ಸಾಮಾನ್ಯವಾಗಿ ಇಂದಿಗೂ ಸಹ ವಿಧುರರು ಹೆಂಡತಿ ತೀರಿದ ತರುವಾಯ ಇನ್ನೊಂದು ಹೆಣ್ಣನ್ನು

ಮದುವೆಯಾಗುತ್ತಾರೆ. ಆದರೆ ವಿಧವಾ ಮರುವಿವಾಹಗೊಳ್ಳುವ ಸ್ತ್ರೀಯರ ಪ್ರಮಾಣ ಕಡಿಮೆ, ಹೀಗಾಗಿ ವಿಧುರರಿಗಿಂತ ವಿಧವೆಯರ ಪ್ರಮಾಣ ಇಲ್ಲಿ ಹೆಚ್ಚು ಕಂಡುಬರಲು ಕಾರಣವಾಗಿದೆ.

ಕನ್ಯ ನೋಡುವ ಶಾಸ್ತ್ರ

ಹುಡುಗ ಪ್ರಾಪ್ತ ವಯಸ್ಸಿಗೆ, (ಸುಮಾರು ೧೬-೧೭ ರ ವಯೋಮಿತಿ) ಬರುವ ತಕ್ಷಣ ಕನ್ಯೆಯನ್ನು ನೋಡುವ ಪ್ರಯತ್ನ ನಡೆಯುತ್ತದೆ. ಹಿಂದೆ ಮಕ್ಕಳು ತುಂಬಾ ಚಿಕ್ಕವರಿದ್ದಾಗ ಅಂದರೆ ತೊಟ್ಟಿಲಲ್ಲಿದ್ದಾಗಲೇ ಮಕ್ಕಳಿಗೆ ಮದುವೆ ಮಾಡುತ್ತಿದ್ದರು. ಈಗೀಗ ಗಂಡು ಅಪ್ರಾಪ್ತ ವಯಸ್ಕನಾಗಿದ್ದರೂ ೧೬ ರಿಂದ ೨೦ ವರ್ಷದೊಳಗೆ ಹೆಚ್ಚಾಗಿ ಮದುವೆ ಮಾಡಿ ಬಿಡುತ್ತಾರೆ. ಹುಡುಗಿ ಮೈನೆರೆದ ತಕ್ಷಣ ಅವಳ ತಂದೆ ತಾಯಿಗಳು ವರನ್ವೇಷಣೆಗೆ ತೊಡಗಿ ಬಿಡುತ್ತಾರೆ.

ಅನುರೂಪ ಹೆಣ್ಣು ಯಾವ ಮನೆಯಲ್ಲಿದೆ ಎಂಬುದನ್ನು ಗಮನಿಸಿ ವರನ ತಂದೆ ಹಾಗೂ ಇತರ ಕೆಲವು ಹಿರಿಯರು ಹೋಗಿ ಹೆಣ್ಣನ್ನು ನೋಡುವ ಶಾಸ್ತ್ರ ಮಾಡುತ್ತಾರೆ. ಹೆಣ್ಣನ್ನು ನೋಡಿದ ತರುವಾಯ ಸಾಮಾನ್ಯವಾಗಿ ಹೆಣ್ಣಿನ ತಂದೆ ಮತ್ತು ಹತ್ತಿರದ ಬಂಧುಗಳನ್ನು ಮಧ್ಯದ ಅಂಗಡಿಗೆ ಕರೆದುಕೊಂಡು ಹೋಗಿ ಅಲ್ಲಿಯೇ ಮಾತುಕತೆ ಮಾಡುತ್ತಾರೆ. ಹುಡುಗಿಯ ತಂದೆಗೆ ಇಷ್ಟವಾದಲ್ಲಿ ಇಂತಹ ದಿನದಂದು ಮನೆತನ ನೋಡುವುದಕ್ಕೆ ಬರುತ್ತೇವೆ ಎಂದು ತಿಳಿಸುತ್ತಾನೆ.

ಮನೆತನ ನೋಡುವುದು

ಹೆಣ್ಣಿನ ಕಡೆಯ ಕೆಲವು ಹಿರಿಯರೆಲ್ಲ ಸೇರಿ ಗಂಡಿನ ಮನೆಯನ್ನು ನೋಡಿಕೊಂಡು ಬರಲು ಹೋಗುತ್ತಾರೆ. ಗಂಡಿನ ಮನೆಯವರು ಅಂದೇ ಹುಡುಗಿಗೆ ತೆರ ಏಷ್ಟಕೊಡಬೇಕು, ಏನೇನು ಆಭರಣಗಳನ್ನು ತರಬೇಕು, ಮತ್ತು ಎಷ್ಟು ಸೀರೆಗಳನ್ನು ತರಬೇಕೆಂದು ನಿರ್ಣಯಿಸಿಕೊಳ್ಳತ್ತಾರೆ. ಹಾಗೇ ಮದುವೆ ಎಲ್ಲಿ ಮಾಡಬೇಕು ಎಂಬುದುರ ನಿರ್ಣಾಯಮೂ ಅಂದೇ ಆಗುತ್ತದೆ.

ವೀಳ್ಯ ಶಾಸ್ತ್ರ

ಗಂಡಿನ ಕಡೆಯವರು ಒಂದು ಪ್ರಶಾಸ್ತವಾದ ದಿನ ಹೆಣ್ಣಿನ ಮನೆಗೆ ಬರುತ್ತಾರೆ. ಹೆಣ್ಣಿನ ಮನೆಯ ಅಂಗಳದಲ್ಲಿ ವೀಳ್ಯ ಶಾಸ್ತ್ರ ನಡೆಯತ್ತದೆ. ಸಾಮಾನ್ಯವಾಗಿ ವೀಳ್ಯ ಶಾಸ್ತ್ರವನ್ನು ರಾತ್ರಿಯ ವೇಳೆ ಮಾಡುತ್ತರೆ. ವೀಳ್ಯ ಶಾಸ್ತ್ರಕ್ಕೆ ಊರಿನ ದೈವದವರು ಮತ್ತು ಗಂಡಿನ ಹಿರಿಯರು ಹಾಗೂ ಬಂದು ಬಳಗದವರು ಸೇರುತ್ತಾರೆ. ವೀಳ್ಯ ಶಾಸ್ತ್ರದ ದಿನ ಹುಡುಗಿಗೆ ವೀಳ್ಯದ ಸೀರೆಯನ್ನು ತರುತ್ತಾರೆ. ವೀಳ್ಯವನ್ನು ಹಂಚುವ ಪೂರ್ವದಲ್ಲಿ ಜಾತಿ ಪಂಚಾಯ್ತಿಗಳೇನೆ ಇದ್ದರೂ ಅವುಗಳನ್ನು ಬಗೆಹರಿಸಿ ತರುವಾಯ ವಿಳ್ಯಾವನ್ನು ಹಂಚಲಾಗುತ್ತಿತ್ತು,

ಪ್ರಾರಂಭದಲ್ಲಿ ವೀಳ್ಯಸೀರೆ ತೊಟ್ಟುಕೊಂಡು ಬಂದ ಹುಡುಗಿಯನ್ನು ದೈವದ ಮಧ್ಯ ಭಾಗದಲ್ಲಿ ಕೂಡಿಸಿ ಉಡಿ ತುಂಬಲಾಗುತ್ತದೆ. ಉಡಿ ತುಂಬಿ ಐದು ಜನ ಮುತ್ತೈದೆಯರು ಆರತಿ ಮಾಡಿದ ತರುವಾಯ ಹುಡುಗಿಯ ತಂದೆ ಮತ್ತು ಹುಡುಗನ ತಂದೆ ಪರಸ್ಪರ ಸಕ್ಕರೆಯನ್ನು ಹಂಚಿಕೊಳ್ಳುತ್ತಾರೆ.

ತರುವಾಯ ವೀಳ್ಯಕ್ಕಾಗಿ ಒಯ್ದ ಮೂರು ಕೆ.ಜಿ. ಅಡಕೆ ಮತ್ತು ಹನ್ನೆಂದು ಚಟ್ಟು ಎಲೆ ಮತ್ತು ಒಂದು ಇಡೇವು ಸಕ್ಕರೆಯನ್ನು ದೈವದ ಮುಂದೆ ಇರಿಸಲಾಗಿರುತ್ತದೆ. ದೈವದ ಹಿರಿಯನು ಇನ್ನು ಈ ಹೆಣ್ಣು ಇವರದಲ್ಲ ಇದು ನಿಮ್ಮ ವಸ್ತು ಎಂದು ತಿಳಿಸುತ್ತಾನೆ. ಸಭೆಯಲ್ಲಿ ದೈವದವರು ಸಮ್ಮತಿಕೊಟ್ಟ ತರುವಾಯ ಮೊದಲಿಗೆ ಗಂಡುವರನಿಗೆ, ತರುವಾಯ ದೇವರಿಗೆ ವೀಳ್ಯ ಕೊಡುತ್ತಾರೆ. ಆ ನಂತರ ಎಲ್ಲಾ ದೈವದವರಿಗೆ ವೀಳ್ಯವನ್ನು ಹಂಚುತ್ತಾರೆ. ವೀಳ್ಯ ಹಂಚುವಾಗ ಅಕಸ್ಮಾತ್ ಯರಿಗಾದರೂ ಕೊಡುವುದು ಮರೆತುಹೋಗಿದ್ದರೆ. ಅಂಥವರು ಮದುವೆ ಮತ್ತು ಇತರ ಕಾರ್ಯಗಳಲ್ಲಿ ಅಡ್ಡಿಪಡಿಸುವ ಸಾಧ್ಯತೆಗಳೂ ಇರುತ್ತವೆ. ಹಾಗಾಗಿ ಎಲ್ಲರಿಗೂ ಎಚ್ಚರಿಕೆಯಿಂದ ವೀಳ್ಯ ನೀಡಲಾಗುತ್ತದೆ.

ವರದಕ್ಷಿಣೆ ಮತ್ತು ವಧುದಕ್ಷಿಣೆ (ತೆರವು)

ಬೋವಿಗಳಲ್ಲಿ ಇತ್ತೀಚಿನವರೆಗೂ ವರದಕ್ಷಿಣೆ ಪದ್ಧತಿ ಇರಲಿಲ್ಲ. ಇತ್ತೀಚೆಗೆ ಕೆಲವು ವಿದ್ಯಾವಂತರು ವರದಕ್ಷಿಣೆ ತೆಗೆದುಕೊಳ್ಳುವುದು ಕಂಡು ಬರುತ್ತದೆ. ಆದರೆ ಭೋವಿಗಳ ಅನಕ್ಷರಸ್ಥ ಜಗತ್ತು ತುಂಬಾ ಸಂಸ್ಕಾರತನದಿಂದ ಕೂಡಿದ್ದು. ಅವರು ಎಂದೂ ವರದಕ್ಷಿಣೆ ಆಪೇಕ್ಷ ಮಾಡದೆ ಹೆಣ್ಣಿಗೆ ವಧುದಕ್ಷಿಣೆ ನೀಡುತ್ತಾರೆ. ಹಿಂದೆ ಹೆಣ್ಣಿನ ತಂದೆಗೆ ೧೦೦ ರೂಪಾಯಿಂದ ೨೫೦ ರೂಪಾಯಿಗಳವರೆಗೆ ವಧುದಕ್ಷಿಣೆ ನೀಡಲಾಗುತ್ತಿತ್ತು. ಮತ್ತು ಅಣ್ಣ-ತಮ್ಮಂದಿರಿಗೆ, ಅಣ್ಣ-ತಮ್ಮಂದಿರ ಬಾಬ್ತು ಎಂದು ೧೦೦ ರೂಪಾಯಿಗಳನ್ನು ನೀಡಲಾಗುತ್ತಿತ್ತು. ಹಾಗೇ ಹೆಣ್ಣಿನ ಮನೆಯವರಿಗೆ ೫ ಹಬ್ಬಗಳ ವೆಚ್ಚಗಳನ್ನು ಸಹ ನೀಡಬೇಕಾಗಿತ್ತು. ಇಂದು ಅಣ್ಣ-ತಮ್ಮಂದಿರಿಗೆರ ಬಾಬ್ತು ಮತ್ತು ಹಬ್ಬದ ವೆಚ್ಚಗಳನ್ನು ಕೊಡುವುದಿಲ್ಲ ಬದಲಿಗೆ ಹೆಣ್ಣಿನ ವಧುದಕ್ಷಿಣೆಯೆಂದು ೧೦೦ ರೂಪಾಯಿಂದ ೫೦೦ ರೂಪಾಯಿವರೆಗೆ ನೀಡಲಾಗುತ್ತದೆ.

ಮುಂದಾಳು

ತಾಳಿ ಮೂಹೂರ್ತಕ್ಕೆ ಪೂರ್ವದಲ್ಲಿ ಮೂರು ದಿನಗಳು ಮೊದಲೇ ಗಂಡಿನ ಕಡೆಯ ವ್ಯಕ್ತಿಯೊಬ್ಬ ಹೆಣ್ಣಿನ ಮನೆಗೆ ಉಡಿ ಅಕ್ಕಿಯನ್ನು ತಂದುಕೊಡುತ್ತಾನೆ. ಈ ರೀತಿ ಮುಂದಾಗಿಬರುವ ವ್ಯಕ್ತಿಗೆ ಮುಂದಾಳು ಎಂದು ಕರೆಯುತ್ತಾರೆ.

ತಾಳಿಯ ಹಿಂದಿನ ದಿನದ ರಾತ್ರಿ ಗಂಡಿನಕಡೆಯ ಬೀಗರು ಬರುತ್ತಾರೆ. ಅವರನ್ನು ಹನುಮಪ್ಪ ಅಥವಾ ಇತರ ದೇವರ ಗುಡಿಯಲ್ಲಿ ಇಳಿಸುತ್ತಾರೆ. ರಾತ್ರಿಯ ವೇಳೆ ಬೀಗರನ್ನು ಎದುರುಗೊಳ್ಳುವ ಶಾಸ್ತ್ರಮಾಡಲಾಗುತ್ತದೆ. ತರುವಾಯ ಮದುವೆಯ ಕಾರ್ಯ ನಡೆಯುತ್ತದೆ.

ದೊಡ್ಡವೀಳ್ಯ

ಅಂದೇ ರಾತ್ರಿ ದೊಡ್ಡ ವೀಳ್ಯವೆಂಬ ಶಾಸ್ತ್ರ ಮಾಡಲಾಗುತ್ತದೆ. ಎಲೆ-ಅಡಿಕೆಯೊಂದಿಗೆ ದೈವದ ಸಮ್ಮುಖದಲ್ಲಿ ಹುಡುಗಿಗೆ ಕೊಡಬೇಕಾದ ಸೀರೆ, ಬಳೆ, ಆಭರಣ, ವಧುದಕ್ಷಿಣೆ ಇತ್ಯಾದಿಗಳನ್ನು ಗಂಡಿನ ಕಡೆಯವರು ಎಲೆ- ಅಡಿಕೆಯೊಂದಿಗೆ ಕೊಡುತ್ತಾರೆ.

ಐರಾಣ

ಐದು ಮಣ್ಣಿನ ಪಾತ್ರೆಗಳಿಗೆ ಐರಾಣಿ ಎಂದು ಕರೆಯುತ್ತಾರೆ. ಇವುಗಳನ್ನು ಹೋರುವವರಿಗೆ ಐದುಗಿತ್ತಿಯರು ಎನ್ನಲಾಗುತ್ತದೆ. ಈ ಐದುಗಿತ್ತಿಯರು ಮದುವೆಯ ಸಮಸ್ತಾ ಕಾರ್ಯದಲ್ಲಿಯೂ ಪಾಲ್ಗೊಳ್ಳಬೇಕು. ಈ ಐರಾಣದೊಳಗೆ ಜೋಳ, ಭತ್ತ, ಗೋಧಿ, ರಾಗಿ, ನವಣೆ ಹೀಗೆ ಐದು ರೀತಿಯ ದಾನ್ಯಗಳನ್ನು ಐದು ಐರಾಣಗಳಲ್ಲಿ ಸಸಿ ಹಾಕಿ ಹಂದರದ ಒಳ ಮೂಲೆಯಲ್ಲಿ ಪ್ರತಿಸ್ಥಾಪಿಸಲಾಗಿರುತ್ತದೆ. ಈ ಐರಾಣ ಪಾತ್ರೆಗಳು ಹಾಗೂ ಸುರಗಿ ಕೊಡಗಳನ್ನು ಕುಂಬಾರನಿಗೆ ನಿರ್ದಿಷ್ಟ ಹಣ ನೀಡಿ ತರುತ್ತಾರೆ.

ಸುರಗಿ

ಕುಂಬಾರನಿಂದ ತಂದ ಐದು ಮಣ್ಣಿನ ಕೊಡಗಳನ್ನು ಸಮೀಪದ ಬಾವಿ ಅಥಾವ ಕೆರೆಗೆ ಹೋಗಿ ಗಂಗೆ ಪೂಜೆ ಮಾಡಿ ನೀರು ತಂದ ೪ ಕೊಡಗಳನ್ನು ಚೌಕೌಕಾರವಾಗಿ ಇರಿಸಿ ಅವುಗಳಿಗೆ ಹೊಂದುವಂತೆ ಹನ್ನೊಂದು ಸುತ್ತು ದಾರ ಸುತ್ತುತ್ತಾರೆ ಅದರ ಮುಂದೆ ಒಂದು ತುಂಬಿದ ಕೊಡ ಇಡುತ್ತಾರೆ. ಆ ಕೊಡದ ನೀರನ್ನು ತರುವವರಿಗೆ ಮತ್ತು ಗಂಡಿನ ತಂದೆ-ತಾಯಿ, ಹೆಣ್ಣಿನ ತಂದೆ-ತಾಯಿಗಳಿಗೆ ಸುರುಗಿಯಲ್ಲಿ ಕೂರಿಸಿ ನೀರೆರೆಯುತ್ತಾರೆ. ಸುರಗಿ ದಾರ ಜರಗದಂತೆ ನಾಲ್ಕು ಮಗ್ಗಲಿಗೂ ದಾರವನ್ನು ಜಾರದಂತೆ ನಾಲ್ಕು ಜನ ಹಿಡಿದುಕೊಂಡಿರುತ್ತಾರೆ. ಸಾಮಾನ್ಯವಾಗಿ ಸುರಗಿ ನೀರನ್ನು ಹುಡುಗನ ಅಕ್ಕ-ಮಾವ ಹುಡುಗಿಯ ಅತ್ತಿಗೆ-ಅಣ್ಣಂದಿರು ಹಾಕುತ್ತಾರೆ.

ಹಾಲುಗಂಭ

ಒಣಕೆಗೆ ಸುಣ್ಣ ಕೆಮಣ್ಣಿನ ಪಟ್ಟಿ ಹಚ್ಚಿ ಹಂದರದ ಮಧ್ಯಭಾಗಕ್ಕೆ ನೆಟ್ಟಿರುತ್ತಾರೆ. ಮಧು ಮಕ್ಕಳು ಮತ್ತು ನಿಬ್ಬಣ ಬುಟ್ಟಿ ಹೊತ್ತವರು ಈ ಒಣಕೆಗೆ ಸುತ್ತುತ್ತಾರೆ. ಹೀಗೆ ಸುತ್ತಾವಾಗಲೇ ಹುಡುಗನ ಕಡೆಯವರು ಒಣಕೆಯನ್ನು ಸಡಿಲಿಸುತ್ತಾರೆ. ಅದನ್ನು ಸಡಿಲಗೊಳಿಸದಂತೆ ವ್ಯಕ್ತಿಯೊಬ್ಬ ಕಾಯುತ್ತಿರುತ್ತಾನೆ. ನಂತರ ಈ ಹಾಲಗಂಭದ ಸಾಕ್ಷಿಯಲ್ಲಿ ಮದುವೆ ನಡೆಯುತ್ತದೆ.

ಸಾಮಾನ್ಯವಾಗಿ ಮದುವೆಯನ್ನು ಮಾಡಿಸಲು ಬ್ರಹ್ಮಣ ಅಥವಾ ಜಂಗಮ ಪುರೋಹಿತರನ್ನು ಕರಿಸದೆ ಸಮುದಾಯದ ಹಿರಿಯ ವ್ಯಕ್ತಿಯೇ ಪೌರೋಹಿತ್ಯ ವಹಿಸಿ ಮದುವೆ ಮಾಡಿಸುತ್ತಾನೆ. ಇತ್ತೀಚೆಗೆ ಬ್ರಾಹ್ಮಣ ಪುರೋಹಿತರನ್ನು ಕರೆಸಿ ಮದುವೆ ಮಾಡುವ ಸಂಪ್ರದಾಯ ಅಲ್ಲಲ್ಲಿ ಕಂಡುಬರುತ್ತದೆ.

ಮದುವೆಯಾಗಿ ಐದು ದಿನಗಳ ನಂತರ ಕಂಕಣ ಬಿಚ್ಚುವ ಶಾಸ್ತ್ರ ಮಾಡುತ್ತಾರೆ. ತರುವಾಯ ಏಳು ದಿನ ಅಥಾವ ೯ ದಿನಕ್ಕೆ ಹಂದರ ತಿರುವಿ ಹಾಕುವ ಶಾಸ್ತ್ರ ಮಾಡುತ್ತಾರೆ. ೧೬ ದಿನ ಅಥಾವ ೩ ತಿಂಗಳ ಒಳಗೆ ನಿಷೇಕ ಶಾಸ್ತ್ರವನ್ನು ಮಾಡಲಾಗುತ್ತದೆ.

ಉಡುಕಿ ಮದುವೆ / ವಿಧವಾ ವಿವಾಹ

ಬಾಲ್ಯ ವಿವಾಹದಂತಹ ಅನಿಷ್ಟ ಪದ್ಧತಿಯಿಂದಾಗಿ ಎಷ್ಟೋ ಹೆಣ್ಣುಗಳು ಬಾಲ್ಯದಲ್ಲಿಯೇ ವಿಧಿವೆಯಾಗಬೇಕಾದ ದುರಾದೃಷ್ಟ ಘಟನೆಗಳು ನಡೆಯುವದುಂಟು. ಇಂತಹ ಹೆಣ್ಣುಗಳಿಗೆ

ಅನ್ಯಾಯವಾಗಬಾರದೆಂಬ ಕಾರಣಕ್ಕಾಗಿಯೇ ಏನೋ, ಹಿಂದೆ ವಿಧವಾ ವಿವಾಹದಂತಹ ಆಚರಣೆಗಳನ್ನು ಹುಟ್ಟು ಹಾಕಿದ್ದಾರೆ.

ಈ ಮದುವೆಯಲ್ಲಿ ಆಡಂಬರವಿರುವುದಿಲ್ಲ, ದೇವರ ಎದುರಿಗೆ ಅಥವಾ ಮನೆಯ ಕದದ ಹಿಂದೆ ನಿಂತು ಹೆಣ್ಣಿಗೆ ತಾಳಿ ಕಟ್ಟಿದರೆ ವಿಧವಾ ವಿವಾಹ ಮುಗಿಯಿತು. ಆದರೆ ವಿಧವಾ ವಿವಾಹವಾಗುವ ಗಂಡು ಮದುವೆಯ ಪೂರ್ವದಲ್ಲಿ ದೈವದವರ ಅನುಮತಿ ಪಡೆಯಬೇಕು. ಅದೇ ರೀತಿ ವಿಧುರ ಗಂಡುಗಳು ಸಹ ಮದುವೆಯಾಗುತ್ತಾರೆ.

ಬಹು ಪತ್ನಿತ್ವ/ಬಹು ಪತಿತ್ವ

ಭೋವಿಗಳಲ್ಲಿ ಬಹುಪತಿತ್ವ ಜಾರಿಯಲಿಲ್ಲ, ಆದರೆ ಬಹುಪತ್ನಿತ್ವ ಜಾರಿಯಲ್ಲಿದೆ. ಹಿಂದೆ ಸಾಮಾನ್ಯವಾಗಿ ಪುರುಷರು ಇಬ್ಬರು–ಮೂವರನ್ನು ಏಕ ಕಾಲಕ್ಕೆ ಮದುವೆಯಾಗುತ್ತಿದ್ದರು. ಆದರೆ ಈ ಸಂಪ್ರದಾಯ ಇತ್ತೀಚಿಗೆ ಇವರಲ್ಲಿ ಕಂಡು ಬರುತ್ತಿಲ್ಲ.

ಸಮೀಕ್ಷೆಗೊಳಪಟ್ಟ ಸಟಲಮೆಂಟ್ ಭೋವಿಗಳ ಒಟ್ಟು ಜನಸಂಖ್ಯೆ ೧೧೧೩ ಇದರಲ್ಲಿ ವಿವಾಹಿತರ ಪ್ರಮಾಣವು ೪೭.೮೯ ರಷ್ಟಿದೆ. ಇದರಲ್ಲಿ ವಿಧುರ,ವಿಧವೆಯರ ಪ್ರಮಾಣ ಶೇಕಡ ೨.೩೩ ಇದೆ. ಇನ್ನು ಗಂಡ, ಹೆಂಡತಿಯರಿಂದ ಬೇರ್ಪಡೆಯಾದವರು ಇವರಲ್ಲಿಲ್ಲ. ಅವಿವಾಹಿತರ ಪ್ರಮಾಣವು ಶೇಕಡ ೪೯.೭೮ ಕಂಡುಬರುವುದು.

ಸೀಮಂತ ಕಾರ್ಯ

ಪ್ರತಿಯೊಂದು ಜೀವಿಯು ತನ್ನ ವಂಶದ ಮುಂದುವರಿಕೆಗಾಗಿ ಹಾತೋರೆಯುತ್ತದೆ. ಇದಕ್ಕೆ ಮನುಷ್ಯನೇನೂ ಹೊರತಲ್ಲ ತನ್ನ ವಂಶದ ಮುಂದುವರಿಕೆಗಾಗಿ ಹಾತೊರೆಯುವ ಮನುಷ್ಯ ತನ್ನ ಜೀವನದಲ್ಲಿ ನಿರ್ಭಂದಗಳನ್ನು ಮತ್ತು ಆಚರಣೆಗಳನ್ನು ಅಳವಡಿಸಿಕೊಂಡಿದ್ದಾನೆ. ಈ ರೀತಿ ಅಳವಡಿಸಿಕೊಂಡ ವಿಧಿ ವಿಧಾನಗಳಲ್ಲಿ ಒಡಲಕ್ಕಿ ಶಾಸ್ತ್ರವೂ ಒಂದು.

ವಿವಾಹಿತ ಹೆಣ್ಣೊಂದು ತನ್ನ ಗಂಡನ ಮನೆಗೆ ಹೊದ ಒಂದು ವರ್ಷದೊಳಗೆ ಗರ್ಭಿಣಿಯಾಗುವುದನ್ನು ಶುಭಸಮಾಚಾರವೆಂದು ಭಾವಿಸುತ್ತಾರೆ. ಗರ್ಭಿಣಿ ಹೆಣ್ಣನ್ನು ಗಂಡನ ಮನೆಯವರು ಮತ್ತು ತವರು ಮನೆಯವರು ತುಂಬಾ ಕಾಳಜಿಯಿಂದ ಕಾಣುತ್ತಾರೆ. ಶೀಮಂತ ಕಾರ್ಯ/ ಒಡಲಕ್ಕಿ ಶಾಸ್ತ್ರಗಳನ್ನು ಮಾಡಿ ಬಸರಿ ಹೆಂಗಸರನ್ನು ಸಂತೃಪ್ತಪಡಿಸುವುದರೊಂದಿಗೆ ತಾವೂ ಸಂಭ್ರಮ ಪಡುತ್ತಾರೆ.

ಮೂಲತಃ ಭೋವಿಗಳು ಅಲೆಮಾರಿಗಳು ಪೂರ್ವದಲ್ಲಿ ಇವರಲ್ಲಿ ಒಡಲಕ್ಕಿ ಶಾಸ್ತ್ರ ಸಂಪ್ರದಾಯಗಳು ಇರಲಿಲ್ಲ. ಆದರೆ ಇತ್ತೀಚಿಗೆ ಆರ್ಥಿಕವಾಗಿ ಸ್ವಲ್ಪ ಸುಧಾರಿಸಿದ ಭೋವಿಗಳಲ್ಲಿ /ಕೆಲವರು, ಒಡಲಕ್ಕಿ ಶಾಸ್ತ್ರಗಳನ್ನು ಮಾಡುವುದನ್ನು ರೂಢಿಸಿಕೊಂಡಿದ್ದಾರೆ. ಮಹಿಳೆ ಗರ್ಭವತಿಯಾದ ಏಳನೇ ತಿಂಗಳು ತವರು ಮನೆಯವರು ಬಸರಿ ಹೆಂಗಸಿಗೆ ಹಸಿರುಬಳೆ, ಹಸಿರುಸೀರೆ, ೧೧ಗಿಟುಗ, ೧೧ಅಡಿಕೆ, ೧೧ಎಲೆ,

ಹಾಗೂ ಬೆಲ್ಲದೆಚ್ಚ, ಅಕ್ಕಿ, ಬೇಳೆ ಇತ್ಯಾದಿಗಳನ್ನು ಬಳಗಕ್ಕೆ ಊಟವನ್ನು ಕೊಟ್ಟು ಹೆಣ್ಣನ್ನು ತವರು ಮನೆಗೆ ಕರೆದುಕೊಂಡು ಹೋಗುತ್ತಾರೆ.

ಜನನ

ಸಮಾನ್ಯವಾಗಿ ಹೆರಿಗೆಯು ಮನೆಯಲ್ಲಿಯೇ ಮಾಡಿಸಿಕೊಳ್ಳುತ್ತಾರೆ. ಹೆರಿಗೆ ನೋವು ಪ್ರಾರಂಭವಾದ ತರುವಾಯ ಸಮುದಾಯದ ಹಿರಿಯ ಹೆಂಗಸು ಬಸಿರೆ ಹೆಂಗಸನ್ನು ಮಲಗಿಸಿ ಹೊಕ್ಕಳ ಬಳಿ ಹರಳೆಣ್ಣೆ ಹಾಕಿ ಹೆರಿಗೆ ಯಾವ ಸಮಯಕ್ಕೆ ಆಗಬಹುದೆಂದು ತಿಳಿಸುತ್ತಾಳೆ. ಹೆರಿಗೆಯಾಗುವವರೆಗೂ ಬಸಿರೆ ಹೆಂಗಸನ್ನು ಆ ಹೆಂಗಸೇ ನೋಡಿಕೊಳ್ಳುತ್ತಾಳೆ. ಅವಳಿಗೆ ಸಹಾಯಕರಾಗಿ ಮನೆಯ ಇತರ ಹೆಂಗಸರು ಮತ್ತು ಅಕ್ಕಪಕ್ಕದ ಮನೆಯ ಹೆಂಗಸರು ಸಹಾಯ ಮಾಡುತ್ತಾರೆ.

ಹೆರಿಗೆಯಾದ ತಕ್ಷಣ ಮಗು ಗಂಡು ಅಥವಾ ಹೆಣ್ಣು ಎಂಬುವುದನ್ನು ಸೂಚಿಸಲು ಕಂಚಿನ ಗಂಗಾಳವನ್ನು ಬಾರಿಸಲಾಗುತ್ತದೆ. ಸಾಮಾನ್ಯವಾಗಿ ಗಂಡು ಮಗು ಹುಟ್ಟಿದರೆ ಕಂಚಿನ ಗಂಗಾಳವನ್ನು ಬಾರಿಸುತ್ತಾರೆ. ತರುವಾಯ ಮಗುವಿನ ಹೊಕ್ಕಳ ಹುರಿಯನ್ನು ಹೊಸದಾರದಿಂದ ಬಿಗಿಯಾಗಿ ಕಟ್ಟಲಾಗುತ್ತದೆ.

ಹುಟ್ಟಿದ ಮಗುವನ್ನು ಮಾಸದಿಂದ ಬೇರ್ಪಡಿಸಲು ಶುದ್ಧವಾದ ಕೊರಚುಗಲ್ಲು ಅಥವಾ ಹೊಸಬ್ಲೇಡನ್ನು ಬಳಸುತ್ತಾರೆ. ಈ ರೀತಿ ಬೇರ್ಪಡಿಸಿದ ಮಾಸವನ್ನು ಒಂದು ಚಿಕ್ಕ ಗಡಿಗೆಯಲ್ಲಿ ಹಾಕಿ ಅದನ್ನು ಮನೆಯ ಬಾಗಿಲಿನ ಮುಂದೆ ಹೂಳುತ್ತಾರೆ.

ಹೆರಿಗೆಯಾದ ಹೆಂಗಸಿಗೆ ಸ್ನಾನ ಮಾಡಿಸಿದ ನೀರನ್ನು ಬೇರೆಯವರು ತುಳಿಯಬಾರದು ಎನ್ನುವ ಕಾರಣಕ್ಕಾಗಿ ಮನೆಯ ಮುಂಭಾಗದಲ್ಲಿಯೇ ಬಯಲಿನಲ್ಲಿ ಒಂದು ಕುಣಿಯನ್ನು ತೆಗೆದಿರುತ್ತಾರೆ. ಹಾಗೂ ಆ ಕುಣಿಗೆ ಮರೆ ಮಾಡಿರುತ್ತಾರೆ. ಬಾಣಂತಿ ಮತ್ತು ಮಗುವಿಗೆ ಆ ಜಾಗದಲ್ಲಿ ಐದು ದಿನದವರೆಗೆ ಸ್ನಾನ ಮಾಡಿಸಲಾಗುತ್ತದೆ. ಬಾಣಂತಿ ಹಾಗೂ ಮಗುವನ್ನು ಮನೆಯ ಒಂದು ಮೂಲೆಯಲ್ಲಿ ಹೊರಸಿನ ಮೇಲೆ ಮಲಗಿಸುತ್ತಾರೆ. ಅವಳಿಗೆ ಶೀತ ಇತ್ಯಾದಿಗಳು ಆಗದಂತೆ ಹೊರಸಿನ ಕೆಳಗೆ ಬೆಂಕಿಯಿರಿಸಲಾಗುತ್ತದೆ. ಮೊದಲ ಮೂರು ದಿನ ಗೋದಿ ರವೆಯ ಗಂಜಿಯನ್ನು ಬಾಣಂತಿಗೆ ನೀಡಲಾಗುತ್ತದೆ, ನಂತರದಲ್ಲಿ ಕುರಿಯ ತಲೆ–ಕಾಲು ತಂದು ಬೇಯಿಸಿ ಊಟದೊಂದಿಗೆ ಕೊಡುತ್ತಾರೆ.

ಶೆಟಿಗೆವ್ವನ ಪೂಜೆ ಮತ್ತು ನಾಮಕರಣ

ಮಗುವಿಗೆ ಭವಿಷ್ಯದಲ್ಲಿ ಯಾವುದೇ ತೊಂದರೆಗಳು ಆಗಬಾರದು ಹುಟ್ಟಿದಮಗು ಗುಂಡುಕಲ್ಲಿನಂತೆ ಗಟ್ಟಿಯಾಗಿ ಇರಬೇಕು ಎನ್ನುವ ದೃಷ್ಟಿಯಿಂದ ಶೆಟಿಗೆವ್ವನ ಪೂಜೆ ಮಾಡಲಾಗುತ್ತದೆ, ಈ ಪೂಜೆಯನ್ನು ಮಗು ಹುಟ್ಟಿದ ಐದು ದಿನಗಳ ತರುವಾಯ ಮಾಡಲಾಗುತ್ತದೆ.

ಮನೆಯೊಳಗಿರುವ ರುಬ್ಬುಗುಂಡಿಗೆ ಕುಲಾಯಿ ಇತ್ಯಾದಿಗಳನ್ನು ಕಟ್ಟಿ ಅಲಂಕರಿಸಲಾಗುತ್ತದೆ. ಆ ರುಬ್ಬುಗುಂಡಿಗೆ ಕೋಳಿಯೊಂದನ್ನು ಬಲಿ ಕೊಟ್ಟು ಪೂಜಿಸಲಾಗುತ್ತದೆ. ನಂತರ ರುಬ್ಬುಗುಂಡನ್ನು ತೊಟ್ಟಿಲಿಗೆ

ಹಾಕಿ ತೂಗಿದ ತರುವಾಯ ಮಗುವನ್ನು ತೊಟ್ಟಿಲಿಗೆ ಹಾಕಿ ಹೆಸರಿಡಲಾಗುತ್ತದೆ. ಅಂದು ಬಾಣಂತಿಗೆ ತಲೆ ಮೇಲೆ ಸೂಸುಗ ಹಾಕುತ್ತಾರೆ. ಮತ್ತು ಉಡಿ ತುಂಬುತ್ತಾರೆ, ಮಗುವಿಗೆ ಸೋದರ ಮಾವ ಅಥವಾ ಸೋದರತ್ತೆ ಹೆಸರಿಡುತ್ತಾಳೆ. ಮೊದಲಿಗೆ ಮನೆ ದೇವರು, ಹಿರಿಯರ ಹೆಸರನ್ನು ಇಡುತ್ತಾರೆ. ಅಂದು ಮಾಂಸದ ಅಡುಗೆಯೊಂದಿಗೆ ವಿಶೇಷವಾಗಿ ಅವರೆ ಅಥವಾ ಹಲಸಂದೆ ಗುಗ್ಗರಿಯನ್ನು ಮಾಡಿರುತ್ತಾರೆ. ಆ ಗುಗ್ಗರಿಯನ್ನು ಮೊದಲಿಗೆ ಸೋದರ ಮಾವ ಸೋದರತ್ತಿಗೆ ನೀಡಿ ತರುವಾಯ ಸೇರಿದ ಎಲ್ಲರೂ ಹಂಚಿಕೊಂಡು ತಿನ್ನುತ್ತಾರೆ.

ಸಾಮಾನ್ಯವಾಗಿ ಮಗುವಿಗೆ ಅಂಜಿನಪ್ಪ, ಪತ್ರೋಟೆಪ್ಪ, ಯಲ್ಲಪ್ಪ ಯಲ್ಲಮ್ಮ, ಹುಲಿಗೆಮ್ಮ, ಹುಲುಗಪ್ಪ, ವೆಂಕಟೇಶ, ತಿಮ್ಮಪ್ಪ ಮುಂತಾದ ಹೆಸರುಗಳನ್ನು ಇಡುತ್ತಾರೆ. ಸಾಮಾನ್ಯವಾಗಿ ಮನೆತನದ ಹಿರಿಯರ ಹೆಸರನ್ನು ಮಕ್ಕಳಿಗೆ ಇಡುವುದರಿಂದ. ಇತ್ತೀಚಿಗೆ ಕೆಲವು ವಿದ್ಯಾವಂತರು ಆಧುನಿಕ ಹೆಸರುಗಳನ್ನು ತಮ್ಮ ಮಕ್ಕಳಿಗೆ ಇರಿಸುತ್ತಾರೆ.

ಜವಳ

ಭೋವಿಗಳು ಸಾಮಾನ್ಯವಾಗಿ ಮಗು ಹುಟ್ಟಿದ ವರ್ಷದಲ್ಲಿ ಹತ್ತಿರದ ಆಂಜನೇಯನ ಗುಡಿಯಲ್ಲಾಗಲಿ, ತಿಮ್ಮಪ್ಪನ ಗುಡಿಯಲ್ಲಾಗಲಿ ಜವಳ ತೆಗೆಸುತ್ತಾರೆ. ಸ್ವಲ್ಪ ಸ್ಥಿತಿವಂತರಾದರೆ ಮನೆ ಮುಂದೆ ಈ ಕಾರ್ಯವನ್ನು ಮಾಡುತ್ತಾರೆ. ಜವಳ ತೆಗೆಯುವ ದಿನ ಮಗುವಿಗೆ ಸ್ನಾನ ಮಾಡಿಸುತ್ತಾರೆ. ತರುವಾಯ ಸೋದರ ಮಾವ, ಮಗುವಿನ ತಾಯಿ, ತಂದೆ, ಮಗು ಹಾಗೂ ಕಳಸ ಹಿಡಿಯುವ ಮಹಿಳೆಗೆ ಕಂಕಣ ಕಟ್ಟುತ್ತಾರೆ. ದೇವರ ಪೂಜೆಯ ನಂತರ ಪೂಜಾರಿಯ ಒಪ್ಪಿಗೆ ಪಡೆದು ಸೋದರ ಮಾವನು ಎಲೆಗತ್ತರಿಯನ್ನು ಮಗುವಿನ ತಲೆಯ ಐದು ಭಾಗಗಳಿಗೆ ಮುಟ್ಟಿಸುತ್ತಾನೆ. ಎಲೆಗತ್ತರಿ ಮುಟ್ಟಿಸುವವನಿಗೆ ಹೊಸ ಬಟ್ಟೆ ರೂ ೧೦೧, ಎಲೆ ಅಡಿಕೆ ಮುಂತಾದವುಗಳನ್ನು ಕೊಡುತ್ತಾರೆ. ಚೊಚ್ಚಲು ಮಗುವಾಗಿದ್ದರೆ ಮಗುವಿನ ತಾಯಿ ತವರಿನವರು ಮಗು ಮತ್ತು ಅದರ ಪಾಲಕರಿಗೆ ಹೊಸ ಬಟ್ಟೆ ತರುತ್ತಾರೆ. ಎಲೆಗತ್ತರಿ ಮುಟ್ಟಿಸಿದ ತರುವಾಯ ದೇವರಿಗೆ ನಮಸ್ಕರಿಸಿ ಮನೆಗೆ ಬರುತ್ತಾರೆ. ಕಾರ್ಯಕ್ಕೆ ಸೇರಿದ ಬಂಧುಗಳಿಗೆ ಹುಗ್ಗಿ ಮುಂತಾದ ಸಿಹಿ ಅಡುಗೆ ಮಾಡಿಸಿ ಊಟ ಮಾಡಿಸುತ್ತಾರೆ. ತರುವಾಯ ಅನುಕೂಲವಾದಾಗ ಕ್ಷೌರಿಕನಿಂದ ಹುಟ್ಟು ಕೂದಲನ್ನು ತೆಗೆಸಿ ಹರಿಯುವ ನೀರಿಗೆ ಕೂದಲನ್ನು ಬಿಡುತ್ತಾರೆ ಇಲ್ಲವೇ ತಿರುಪತಿ ಮುಂತಾದ ಪುಣ್ಯ ಕ್ಷೇತ್ರಗಳಲ್ಲಿ ಕೂದಲನ್ನು ತೆಗೆಸಿ ಅಲ್ಲಿಯೇ ಕೂದಲನ್ನು ಬಿಟ್ಟು ಬರುತ್ತಾರೆ.

ಋತುಮತಿ

ಹುಡುಗಿ ಋತುಮತಿಯಾದರೆ ಅವಳನ್ನು ಮನೆಯ ಹೊರಗೆ ಬತ್ತದ ಹುಲ್ಲು ಅಥವಾ ಹಲಗಲಿ ತೊಪ್ಪಲಿನ ಚಿಕ್ಕ ಗುಡಿಸಿಲನ್ನು ಕಟ್ಟಿ ಅದರಲ್ಲಿ ಇರುಸುತ್ತಾರೆ. ಈ ಗುಡಿಸಿಲನ್ನು ಸೋದರ ಮಾವನು ಮಾತ್ರ ಕಟ್ಟಬೇಕೆಂಬ ನಿಯಮವಿದೆ. ಈ ರೀತಿ ಕಟ್ಟಿದ ಗುಡಿಸಿಲಿನಲ್ಲಿ ಮೈನೆರೆದ ಹೆಣ್ಣನ್ನು ೧೬ ದಿನಗಳವರಗೆ ಇರಿಸಲಾಗುತ್ತದೆ. ಕೊನೆಗೆ ೧೬ನೇ ದಿನದಲ್ಲಿ ಹುಡುಗಿಗೆ ಮೈ ತೊಳೆದು ಗಂಗೆಗೆ ಹೋಗಿ ಪೂಜೆ

ಮಾಡಿಸಿ ತರುವಾಯ ಹನುಮಪ್ಪನ ಗುಡಿಗೆ ಹೋಗಿ ಕಾಯಿ ಕರ್ಪೂರ ಮಾಡಿಸಿದ ತರವಾಯ ಮನೆಯೊಳಗೆ ಕರೆದುಕೊಳ್ಳಲಾಗುತ್ತಿತ್ತು. ಅಲ್ಲಿಯವರೆಗೂ ಮನೆಯ ಹಿರಿಯ ಹೆಂಗಸು ಅಥವಾ ಸೋದರತ್ತೆಯಾದವಳು ಹುಡುಗಿಯ ಆಹಾರ ಮತ್ತು ಇತರ ಅವಶ್ಯಕತೆಗಳನ್ನು ಪೂರೈಸಬೇಕಾಗಿತ್ತು. ಆದರೆ ಇತ್ತೀಚಿಗೆ ಗುಡಿಸಿಲನ್ನು ಹಾಕುವ ಕ್ರಿಯೆ ನಿಂತು ಹೋಗಿದೆ. ಮೈನೆರೆದ ಹುಡುಗಿಯನ್ನು ಮನೆಯ ಒಳಗೆ ಒಂದು ಮೂಲೆಯಲ್ಲಿ ಕೂರಿಸಿ ಮರೆ ಮಾಡಲಾಗತ್ತದೆ. ೧೬ನೇ ದಿನದವರೆಗೂ ಆ ಮನೆಯನ್ನು ಮೈಲಿಗೆ ಮನೆಯಂದು ಪರಿಗಣಿಸಿ ಹೊರಗಿನ ಜನ ಆ ಮನೆಯೊಳಗೆ ಬರುವುದಿಲ್ಲ ಮತ್ತು ಆ ಮನೆಯವರು ಬೇರೆಯವರ ಮನೆಗೆ ಹೋಗುವಂತಿಲ್ಲ ಎಂಬ ನಿಯಮವಿದೆ. ಹುಡುಗಿಗೆ ಹರಿಸಿಣ ಹಚ್ಚುವ ಶಾಸ್ತ್ರವೂ ಇವರಲ್ಲಿದೆ. ಮೈನೆರೆದ ಹುಡುಗಿಗೆ ಕೊಬ್ಬರಿ, ಬೆಲ್ಲ, ತುಪ್ಪ, ಅಂಟು ಇತ್ಯಾದಿಗಳಿಂದ ತಯಾರಿಸಿದ ಆಹಾರವನ್ನು ಕೊಡುತ್ತಾರೆ.

ಮರಣ

ಸತ್ತ ವ್ಯಕ್ತಿಯನ್ನು ಉತ್ತರಾಭಿಮುಖವಾಗಿ ಮಲಗಿಸಲಾಗುತ್ತದೆ. ಹೆಣಕ್ಕೆ ವಿಭೂತಿ ಕುಂಕುಮ ಹಚ್ಚುತ್ತಾರೆ. ಹೆಣವನ್ನು ಹೂಳುವ ಪದ್ಧತಿ ಇವರಲ್ಲಿದೆ. ಬಾಣಂತಿ ಸತಾಗ, ತೊನ್ನು ಮೈಯವರು ಅಥವಾ ಕುಷ್ಟರೋಗಿಗಳು ಸತ್ತರೆ, ಮತ್ತು ದುರ್ಮರಣಕ್ಕೆ ಈಡಾದರೆ ಅಂತಹ ವ್ಯಕ್ತಿಗಳನ್ನು ಸುಡುತ್ತಾರೆ.

ಸತ್ತ ವ್ಯಕ್ತಿಯ ಮನೆಯ ಮುಂದೆ ಬೆಂಕಿ ಹಾಕಲಾಗುತ್ತದೆ. ಸತ್ತ ವ್ಯಕ್ತಿಯ ಕಣ್ಣಲ್ಲಿ ಅಕ್ಕಿ ಹಾಕತ್ತಾರೆ. ಬೆಂಕಿ ಮತ್ತು ತುಂಬಿದ ಮಣ್ಣಿನ ಕೊಡವನ್ನು ಸತ್ತವನ ಹಿರಿಯ ಮಗ ಅಥವಾ ಇತರ ವಾರಸುದಾರರು ಹಿಡಿಯುತ್ತಾರೆ. ಹೆಣವನ್ನು ನಾಲ್ಕು ಜನ ಹೋರುತ್ತಾರೆ. ಹೆಣವನ್ನು ಒಯ್ಯಲೆಂದೆ ಬಿದಿರು ಅಥವಾ ಕಳ್ಳಿ ಕಟ್ಟಿಗೆಯಲ್ಲಿ ಸಿದಿಗೆಯನ್ನು ತಯಾರಿಸಲಾಗುತ್ತದೆ. ಸಾಮಾನ್ಯವಾಗಿ ಸಮುದಾಯದೊಳಗಿನ ವ್ಯಕ್ತಿಗಳು ಮಾತ್ರ ಹೆಣವನ್ನು ಹೋರಲು ಅರ್ಹರೆಂಬ ನಂಬುಗೆಯನ್ನು ಈ ಸಮುದಾಯದವರು ಹೊಂದಿದ್ದಾರೆ.

ಸಿದಿಗೆ ಮೇಲೆ ಒಯ್ದು ಹೆಣವನ್ನು ಸ್ಮಶಾನದಲ್ಲಿ ಇಳಸಿ ಕೊನೆಯ ಪೂಜೆ ಸಲ್ಲಿಸಲಾಗುತ್ತದೆ. ಸಮುದಾಯಕ್ಕೆ ಸೇರಿದವರೇ ಹೆಣದ ಕುಣಿಯನ್ನು ಸಿದ್ಧಪಡಿಸಿರುತ್ತಾರೆ. ಹೆಣವನ್ನು ಮಣ್ಣು ಮಾಡಿದ ತರುವಾಯ ಮಣ್ಣಿನ ಕೊಡ ಹೊತ್ತವನು ಹೆಣದ ತಲೆ ಭಾಗಕ್ಕೆ ಹೋಗಿ ಕೊಡವನ್ನು ಹಿಮ್ಮುಖವಾಗಿ ನೆಲಕ್ಕೆ ಬಿಡುತ್ತಾನೆ. ಈ ರೀತಿ ಕೊಡವನ್ನು ಬಿಟ್ಟ ವ್ಯಕ್ತಿ ಸ್ಮಶಾವನ್ನು ತಿರುಗಿ ನೋಡದೆ ಮನೆ ಕಡೆ ತೆರಳುತ್ತಾನೆ. ಮಣ್ಣು ಮಾಡಲು ಬಂದ ಸಂಬಂಧಿಕರೆಲ್ಲಾ ಹತ್ತಿರದ ಕೆರೆ ಮುಂತಾದ ನೀರು ಇರುವಲ್ಲಿ ಸ್ನಾನ ಮಾಡಿ ಸತ್ತ ವ್ಯಕ್ತಿಯ ಮನೆಗೆ ತೆರಳಿ ಹೆಣವಿದ್ದ ಜಾಗದಲ್ಲಿರಿಸಿದ ದೀಪವನ್ನು ನೋಡಿ ತಂತಮ್ಮ ಮನೆಗಳಿಗೆ ತೆರಳುತ್ತಾರೆ.

ಇಸಬಾಯಿ ತೊಳಿಸುವುದು

ಸತ್ತ ವ್ಯಕ್ತಿಯ ಮನೆಯವರಿಗೆ ಬಿಗರಾಗುವರು ಮಂಡಕ್ಕಿ ತಿನ್ನಿಸಿ ಸರಾಯಿ ಅಥವಾ ಮಧ್ಯದಿಂದ ಬಾಯಿ ತೊಳೆಸುತ್ತಾರೆ. ಮಂಡಕ್ಕಿಯನ್ನು ಬಾಯಿಗೆ ಹಾಕಿಕೊಂಡು ಅದನ್ನು ಅರೆ –ಬರೆ ತಿಂದು ಮೂರು

ಬಾರಿ ಹೊರಗೆ ಉಗಿಯುತ್ತಾರೆ. ನಂತರ ಮೂರು ಬಾರಿ ಸೆರೆಯನ್ನು ಕೊಡಲಾಗುತ್ತದೆ. ಸೆರೆಯನ್ನು ಸಹ ಕುಡಿಯದೆ ಬಾಯಿಗೆ ಹಾಕಿಕೊಂಡು ಹೊರಗೆ ಉಗಿಯುತ್ತಾರೆ. ನಂತರ ಬೆಲ್ಲ, ಕಡಲೆ, ತಿನ್ನಿಸಿ ಸೆರೆ ಕುಡಿಸಲಾಗುತ್ತದೆ. ಈ ಕ್ರೀಯಗೆ ಇಸಬಾಯಿ ತೊಳಿಸುವುದು ಎನ್ನುತ್ತಾರೆ.

ಮೂರು ದಿನದ ಕಾರ್ಯ

ವ್ಯಕ್ತಿ ಸತ್ತ ಮೂರನೇ ದಿನಕ್ಕೆ ಸ್ಮಶಾನಕ್ಕೆ ಹೋಗಿ ಪಿಂಡ ಹಾಕಿಬರಲಾಗುತ್ತದೆ. ಸತ್ತ ವ್ಯಕ್ತಿಯ ಹತ್ತಿರದ ಸಂಬಂಧಿಗಳು ಆತನಿಗೆ ಇಷ್ಟವಾದ ಆಹಾರ ಪದಾರ್ಥಗಳನ್ನು ಒಯ್ದು ಗುಟ್ಟ ಪೂಜೆ ಮಾಡಿ ಒಯ್ದ ಪದಾರ್ಥಗಳನ್ನು ಎಡೆ ಇಡುತ್ತಾರೆ. ಆ ಎಡೆಯನ್ನು ಕಾಗೆ ಬಂದು ಮುಟ್ಟಿದರೆ ಸತ್ತವ್ಯಕ್ತಿ ಸನ್ಮಾರ್ಗವನ್ನು ತಲುಪಿದ ಎಂದು ತಿಳಿಯುತ್ತಾರೆ. ಯಾವುದೇ ಕಾಗೆ ಮುಟ್ಟದೆ ಹೋದರೆ ಸತ್ತ ವ್ಯಕ್ತಿ ಆಶೆಯನ್ನು ಇರಿಸಿಕೊಂಡು ಆಯುಷ್ಯ ಪೂರ್ಣಗೊಳ್ಳುವ ಮೊದಲೇ ಸತ್ತಿರುವನೆಂದು ತಿಳಿಯುತ್ತಾರೆ. ಕೊನೆಗೆ ಎಡೆಯನ್ನು ಯಾವುದಾದರು ಆಕಳಿಗೆ ತಿನ್ನಿಸಿ ಹಿಂದಕ್ಕೆ ಬರುತ್ತಾರೆ. ಗಂಡ ಸತ್ತರೆ ಆತನ ಹೆಂಡತಿ ಮೂರನೆ ದಿನಕ್ಕೆ ಗುಟ್ಟಿಯ ಮುಂಭಾಗಕ್ಕೆ ಬಳೆ ಒಡೆದು, ತಾಳಿಯನ್ನು ಕಿತ್ತಿ, ಹಣೆಯ ಕುಂಕುಮ ಅಳಿಸುತ್ತಾರೆ.

ದಿವಸ ಕಾರ್ಯ

ವ್ಯಕ್ತಿ ಸತ್ತ ಒಂಬತ್ತು ದಿನಕ್ಕೆ ಕೋಳಿ ಅಥವಾ ಕುರಿಯನ್ನು ವ್ಯಕ್ತಿ ಜೀವ ಬಿಟ್ಟ ಸ್ಥಳದಲ್ಲಿ ಕೊಯ್ದು ಅದನ್ನು ಅಡುಗೆ ಮಾಡುತ್ತಾರೆ. ಇದರೊಂದಿಗೆ ಸಿಹಿ ಅಡುಗೆಯನ್ನು ಮಾಡಿಸುತ್ತಾರೆ. ವ್ಯಕ್ತಿ ಜೀವ ಬಿಟ್ಟ ಸ್ಥಳದಲ್ಲಿ ಒಂದು ಹೊಸ ತಂಬಿಗೆಯಲ್ಲಿ ನೀರುನ್ನು ತುಂಬಿ ಕೆಳಗೆ ಅಕ್ಕಿಗಳನ್ನು ಹಾಕಿ ಅದರ ಮೇಲೆ ಈ ತಂಬಿಗೆ ಇರಿಸುತ್ತಾರೆ. ಅದನ್ನು ಕಳಸ ಎಂದು ಕರೆಯುತ್ತಾರೆ. ಆ ತಂಬಿಗೆಯ ಮುಂದೆ ದೀಪ, ಕಳಸಗಳನ್ನು ಹಚ್ಚಿರುತ್ತಾರೆ. ಅಡುಗೆಯಲ್ಲಾ ಆದ ತರುವಾಯ ಮಾಂಸದ ನೈವೇದ್ಯ, ಸೆರೆ, ಸಿಹಿಅಡುಗೆ ಎಲ್ಲವನ್ನು ಈ ತಂಬಿಗೆಯ ಮುಂದೆ ಇರಿಸಿ ಪೂಜೆ ಮಾಡಿ ಬಂಧು ಬಾಂಧವರೆಲ್ಲಾ ಲೋಬಾನ ಹಾಕುತ್ತಾರೆ. ತರುವಾಯ ಬಂಧು ಬಾಂದವರೆಲ್ಲಾ ಊಟ ಮಾಡಿ ನಂತರ ಮನೆ ಬಾಗಿಲು ಹಾಕಿಕೊಂಡು ರಾತ್ರಿ ಮನೆಯಲ್ಲಿ ಒಬ್ಬರೂ ಇರದೆ ಹೊರ ಹೋಗುತ್ತಾರೆ. ಇದಕ್ಕೆ ಕಾರಣ ಸತ್ತ ವ್ಯಕ್ತಿ ಮರಳಿ ಬಂದು ಹೋಗುತ್ತಾನೆ. ಎಂಬ ನಂಬುಗೆ ಇವರದು. ಮಾರನೆ ದಿನ ತಂಬಿಗೆಯನ್ನು ನೋಡುತ್ತಾರೆ. ತಂಬಿಗೆಯಲ್ಲಿ ನೀರು ಕಡಿಮೆಯಾಗಿದ್ದರೆ ಅಥವಾ ನೈವೇದ್ಯ ಇತ್ಯಾದಿ ಪದಾರ್ಥಗಳು ಆಚೆ–ಈಚೆ ಸರಿದಾಡಿದ್ದರೆ ಸತ್ತ ವ್ಯಕ್ತಿ ಮರುಳಿ ಮನೆಗೆ ಬಂದು ಸಂತೃಪ್ತಿಯಿಂದ ಹೋಗಿದ್ದಾನೆ ಎಂದು ನಂಬುತ್ತಾರೆ. ದಿವಸ ಕಾರ್ಯ ಮಾಡುವವರೆಗೂ ವ್ಯಕ್ತಿ ಸತ್ತ ಮನೆಯನ್ನು ಸೂತಕದ ಮನೆಯೆಂದು ಭಾವಿಸಲಾಗುತ್ತದೆ. ಹೀಗಾಗಿ ಈ ಮನೆಗೆ ಹೋರಗಿನವರಾರೂ ಬರುವುದಿಲ್ಲ. ೧೬ ದಿನದ ಕಾರ್ಯದ ಮೇಲೆ ಒಂದು ವರ್ಷ ತುಂಬುವದರೊಳಗೆ ದೇವರನ್ನು ತೊಳೆದುಕೊಂಡು ಸತ್ತ ವ್ಯಕ್ತಿಯನ್ನು ಹಿರಿಯರಲ್ಲಿ ಸೇರಿಸಿಕೊಳ್ಳುತ್ತಾರೆ.

ಭೋವಿಗಳ ಆಹಾರ ಪದ್ಧತಿ

ಬೋವಿಗಳು ಶ್ರಮದಾಯಕ ಕೆಲಸಗಳನ್ನು ಮಾಡುವವರು ಹೀಗಾಗಿ ಇವರ ಆಹಾರ ಕ್ರಮಮೂ

ಸಹ ಅವರ ಶ್ರಮಕ್ಕೆ ತಕ್ಕಂತೆಯೇ ಇರುತ್ತದೆ. ರಾಗಿ, ಜೋಳದ ರೊಟ್ಟಿ, ಮುದ್ದೆ, ತರಕಾರಿ, ದ್ವಿದಳ ಧಾನ್ಯಗಳನ್ನು ನಿತ್ಯ ಆಹಾರದಲ್ಲಿ ಬಳಸುತ್ತಾರೆ.

ದನದ ಮಾಂಸ ಹಾಗೂ ಸಾಕು ಬೆಕ್ಕು, ಊರ ಹಂದಿಯ ಮಾಂಸವನ್ನು ತಿನ್ನುವುದಿಲ್ಲ. ಆದರೆ ಕಾಡು ಹಂದಿಯ ಮಾಂಸವನ್ನು ತಿನ್ನುತ್ತಾರೆ. ಕೆಲಸದಿಂದ ಬಿಡುವು ದೊರೆತಾಗ ಮಾಂಸಹಾರಕ್ಕಾಗಿ ಗುಂಪು ಗುಂಪಾಗಿ ಬೇಟೆಗೆ ಹೋಗುವರು.

ಒಡ್ಡರು ಆಮೆಯನ್ನು ತಿನ್ನುವುದಿಲ್ಲ. ಆಮೆಯು ತಮ್ಮ ತಾಯಿಗೆ ಸಮಾನವೆಂದೇ ಇವರು ಭಾವಿಸುತ್ತಾರೆ. ಜೋಳದ ರೊಟ್ಟಿಯಂತೆ ಚಪಾತಿಯನ್ನು ಹಾಗೂ ನವಣಕ್ಕಿ, ನೆಲ್ಲಕ್ಕಿಯ ಅನ್ನವನ್ನು ಮಾಡುತ್ತಾರೆ.

ಹಬ್ಬ ಹರಿದಿನಗಳಲ್ಲಿ ಹುಗ್ಗಿ, ಹೋಳಿಗೆ ಇತ್ಯಾದಿಗಳನ್ನು ಮಾಡುತ್ತಾರೆ. ಸಾಮಾನ್ಯವಾಗಿ ಭೋವಿಗಳು ತಮ್ಮ ಮನೆಗೆ ಬಂದ ಅತಿಥಿ ಬಂಧುಗಳಿಗೆ ಮಧ್ಯ ಹಾಗೂ ಮಾಂಸದ ತುಂಡನ್ನು ಕಡ್ಡಾಯವಾಗಿ ಕೊಡುತ್ತಾರೆ. ಹುಟ್ಟು ಸಾವುಗಳಿಗೆ ಸಂಬಂಧಿಸಿದ ಆಚರಣೆಗಳಲ್ಲಿ ಬ್ಯಾಟಿ ಮಾಡುತ್ತಾರೆ.

ನ್ಯಾಯ ಪಂಚಾಯ್ತಿ

ದೈವದ ಯಜಮಾನ ತನ್ನ ದೈವದಲ್ಲಿ ನ್ಯಾಯ ಪಂಚಾಯ್ತಿ ಬಗೆ ಹರಿಯದಿದ್ದಾಗ ಸಮಯಗಾಡು ಅಥವಾ ಪೆದ್ದಬೋಯಾಡುವಿನ ಕಡೆಗೆ ಕರೆದೊಯ್ಯುತ್ತಾನೆ. ಆತನ ನಿರ್ಣಯವೇ ಕೊನೆಯ ನಿರ್ಣಾಯ ಕೆಲವು ಬಾರಿ ಆತನ ಸಹಾಯಕ್ಕೆ ಚಿನ್ನ ಬೋಯಾಡು, ಸಂಕುಥಿ ಮತ್ತು ಬಂಥಾರಿಯನ್ನು ನಿಯಮಿಸಲಾಗುವುದು. ದೈವದವರು ಕುಳಿತಲ್ಲಿ ಯಾರಾದರೂ ಚಪ್ಪಲಿ, ಬೂಟುಗಳನ್ನು ಹಾಕಿಕೊಂಡು ಬಂದರೆ ಅಂಥವರು ಶಿಕ್ಷೆಗೆ ಒಳಗಾಗುತ್ತಾರೆ. ಆಕಸ್ಮಾತ್ ತಮ್ಮ ತಮ್ಮೊಳಗೆ ಚಪ್ಪಲಿ ಬೂಟುಗಳನ್ನು ಬಳಸಿ ಹೊಡೆದಾಡಿದರೆ, ಆ ರೀತಿ ಹೊಡೆದಾಡಿದ ಇಬ್ಬರೂ ಶುದ್ಧೀಕರಣಕ್ಕೆ ಒಳಗಾಗಬೇಕು ಮತ್ತು ತಮ್ಮ ತಪ್ಪಿಗೆ ದೈವಕ್ಕೆ ದಂಡವನ್ನು ತರಬೇಕು.

ಸ್ವತಃ ಕೆ.ಜೆ. ಕೇನನು ತನಗಾದ ಅನುಭವವೊಂದನ್ನು ಹೀಗೆ ತಿಳಿಸುತ್ತಾನೆ. ನಾನು ಕೊಯಮತ್ತೂರು ಜಿಲ್ಲೆಯ ದಿಂಭುಮ ಕ್ಯಾಂಪಿನಲ್ಲಿದ್ದಾಗ ನನ್ನ ಗೆಳೆಯ ಡಾ. ರಿವರ್ಸ್‌ನಿಗೆ ಮಡಿಕೆಯ ಸುವಾಸನೆ ತೋರಿಸಲು ಅಲ್ಲಿದ್ದ ಸೌಟನ್ನು ಮುಟ್ಟಿದೆ. ಸಂಜೆ ತಿರುಗಾಟದ ನಂತರ ನಾನು ಮರಳಿ ಬಂದಾಗ ದೊಡ್ಡ ಗದ್ದಲು ಕೇಳಿಸಿತು. ಕೆಲಸದಿಂದ ಮರಳಿದ ಒಡ್ಡರ ಪುರುಷರ ಕಡೆಗೆ ನಡೆದೆ. ಅಲ್ಲಿ ಒಡ್ಡರ ಮಹಿಳೆಯೊಬ್ಬಳು ಮನೆಯ ಹೊರಭಾಗಕ್ಕೆ ಕಲ್ಲಿನ ಬದಿಯಲ್ಲಿ ಕುರಿತು ದುಃಖಿಸುತ್ತಿದ್ದಳು. ಇದಕ್ಕೆ ಕಾರಣವಿಷ್ಟೆ, ನಾನು ಮುಟ್ಟಿದ ಸೌಟನ್ನು ಮುಟ್ಟಿ ಮತ್ತು ಬಳಸಿ ಆ ಹೆಂಗಸು ಅಡುಗೆಯನ್ನು ಮಾಡಿದ್ದಳು. ಮತ್ತು ಇತರ ಪಾತ್ರೆಗಳನ್ನು ಮುಟ್ಟಿದ್ದಳು. ಅವಳು ಮಾಡಿದ ತಪ್ಪು ಅಷ್ಟೆ. ನಾನು ಅರಿಯದೆ ಮಧ್ಯಾಹ್ನ ಮಾಡಿದ ತಪ್ಪಿಗೆ ದಂಡವನ್ನು ಕೊಟ್ಟೆ ತರುವಾಯ ಆ ಮಹಿಳೆಯನ್ನು ಶುದ್ಧಿಕರಿಸಿ ಜಾತಿಗೆ ಸೇರಿಸಿಕೊಂಡರು.(ಬೇಟಗೇರಿ ವೈ ವೈ:೯೯,ಪು.೨೦೦) ಭೋವಿಗಳ ಹೆಣ್ಣುಗಳು ಅನೈತಿಕ ಸಂಬಂಧವಿರಿಸಿಕೊಂಡರೆ ಅಂತಹ ಹೆಣ್ಣನ್ನು ಶಿಕ್ಷೆಗೆ ಗುರಿಪಡಿಸಲಾಗುತ್ತಿತ್ತು. ಅದೇ ರೀತಿ ಪುರುಷನು ಸಹ ಇತರ ಜಾತಿಯ ಹೆಣ್ಣುಗಳೊಂದಿಗೆ

ಸಂಪರ್ಕವಿರಿಸಿಕೊಂಡರೆ ಅಥವಾ ತಮ್ಮ ಸಮುದಾಯದ ಅನ್ಯ ಮಹಿಳೆಯರೊಂದಿಗೆ ಸಂಪರ್ಕವಿರಿಸಿಕೊಂಡರೆ ಅವರನ್ನು ಸಹ ದೈವದವರು ಶಿಕ್ಷಿಸುತ್ತಿದ್ದರು.

ಪ್ರತಿಯೊಂದು ಸೆಟ್ಲ್‌ಮೆಂಟಿನಲ್ಲಿ ಹಿರಿಯ ವ್ಯಕ್ತಿಯನ್ನು ದೈವದ ಹಿರಿಯನನ್ನಾಗಿ ಮಾಡುತ್ತಿದ್ದರು. ಅವನನ್ನು ಗೌಡ ಎಂದು ಕರೆಯಲಾಗುತ್ತಿತ್ತು. ಅವನ ಸಹಾಯಕ್ಕೆ ಇನ್ನಿತರ ನಾಲ್ಕು ಜನ ಪಂಚರಿರುತ್ತಿದ್ದರು. ಅವರಿಗೂ ಸಹ ಗೌಡನ ಸಮಾನ ಸ್ಥಾನಮಾನಗಳು ಇರುತ್ತಿದ್ದರು. ಪ್ರತಿಯೊಂದು ನ್ಯಾಯ ಪಂಚಾಯ್ತಿಗಳನ್ನು ದೈವದ ಸಮ್ಮುಖದಲ್ಲಿ ಇವರು ಬಗೆ ಹರಿಸುತ್ತಿದ್ದರು.

ಸಾಮಾನ್ಯವಾಗಿ ಹುಡುಗಿಗೆ ನಿಶ್ಚಯ ಮಾಡಿಕೊಂಡು ಮದುವೆಯಾಗದೇ ಹೋದರೆ,

ಕೊಡಲು ಒಪ್ಪಿದ ನಿರ್ದಿಷ್ಟ ತೆರ (ವಧುದಕ್ಷಿಣೆ) ಕೊಡದೇ ಹೋದರೆ

ಅಣ್ಣ-ತಮ್ಮಂದಿರ ಪಾಲು ಪಟ್ಟಿ ವಿಚಾರ.

ಸಮುದಾಯದೊಳಗೆ ಒಬ್ಬರಿಗೊಬ್ಬರು ಜಗಳವಾಡಿದರೆ

ಇತರ ಸಮುದಾಯಗಳೊಂದಿಗೆ ಜಗಳವಾಡಿದರೆ

ಜಾತಿಗೆ ಅವಮಾನವಾಗುವ ರೀತಿಯ ಕಾರ್ಯಗಳನ್ನು ಮಾಡಿದರೆ

ಅಂತಹ ಸಂದರ್ಭಗಳಲ್ಲೆಲ್ಲಾ ಕುಲಪಂಚಾಯ್ತಿ ಸೇರಿ ಪರಿಹಾರಗಳನ್ನು ಕಂಡುಕೊಳ್ಳಲಾಗುತ್ತಿತ್ತು. ದೈವದ ಎದುರಿಗೆ ಸೇರಿದ ಪಂಚರು ಯಾವುದೇ ಪಕ್ಷಪಾತ ಮಾಡದೆ ನ್ಯಾಯಕ್ಕೆ ಚ್ಯುತಿ ಬಾರದಂತೆ ನಿರ್ಣಯಗಳನ್ನು ಕೈಗೊಳ್ಳುತ್ತಿದ್ದರು. ಸಾಮಾನ್ಯವಾಗಿ ಇವರು ತಮ್ಮ ವೈಯಕ್ತಿಕ ವಿಚಾರಗಳಿಗಾಗಿ ಕೋರ್ಟ್ ಕಛೇರಿಗಳಿಗೆ ಹೋಗುವುದಿಲ್ಲ. ಕೋರ್ಟ್‌ನಲ್ಲಿ ನೀಡುವ ನ್ಯಾಯಕ್ಕಿಂತ ತಮ್ಮಲ್ಲಿಯೇ ನಿರ್ಣಯವಾಗುವ ನ್ಯಾಯ, ಸರಿಯಾಗಿರುತ್ತದೆ ಮತ್ತು ಗೌರವದಿಂದ ಕೂಡಿರುತ್ತದೆ ಎಂದು ಭಾವಿಸುತ್ತಾರೆ.

ಗಂಟಿಚೋರ್

ಗಂಟಿಚೋರ್ ಎಂಬುದು ಮೂಲತಃ ಆ ಸಮುದಾಯದ ಹೆಸರಲ್ಲ. ಅವರು ಮಾಡುತ್ತಾರೆಂದು ತಿಳಿದ ಅಪರಾಧದ ಮೇಲೆ ಆ ಹೆಸರು ಬಂದಿದೆ. ಮೂಲತಃ ಒರಿಸ್ಸಾ ಮೂಲದವರಾದ ಈ ಸಮುದಾಯ ಆಂಧ್ರಪ್ರದೇಶದ ಮೂಲಕ ಕರ್ನಾಟಕ ಹಾಗೂ ಮಹಾರಾಷ್ಟ್ರಗಳಿಗೆ ವಲಸೆ ಬಂದಿರುವ ಸಾಧ್ಯತೆಗಳಿವೆ. ಇದೇ ಅಭಿಪ್ರಾಯವನ್ನು ಹಲವಾರು ವಿದ್ವಾಂಸರೂ ಒಪ್ಪಿದ್ದಾರೆ.

ಒಡ್ಡರಲ್ಲಿ ಅನೇಕ ಪ್ರಭೇಧಗಳಿರುವುದನ್ನು ನಾವು ಕಾಣುತ್ತೇವೆ. ಒಂದು ವೃತ್ತಿಯಿಂದ ಹೊಟ್ಟೆ ತುಂಬದಾದಗ ಮನುಷ್ಯ ಬೇರೆ ಬೇರೆ ಉದ್ಯೋಗಗಳನ್ನು ಮಾಡಿಕೊಂಡು ಜೀವಿಸಿರುವುದನ್ನು ನಾವು ಕಾಣಬಹುದಾಗಿದೆ. ಕೇವಲ ಕಲ್ಲು ಒಡೆಯುವುದರಿಂದ, ಮಣ್ಣು ಅಗಿಯುವುದರಿಂದ ಹೊಟ್ಟೆ ತುಂಬದಾದಗ ಕಳುವು ಮಾಡಿ ಉಪಜೀವನ ನಡೆಸಿರುವ ಸಂಗತಿ ವಿದಿತವಾಗುತ್ತದೆ. ಒಂದು ಗುಂಪಿನ ಜನ ಕಳವು ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡು ಸರಳ ಹಾಗೂ ಸುಲಭವಾಗಿ ದೊರೆಯುವ ದೇವಾಲಯಗಳ

ಗಂಟಿಗಳನ್ನು ಕಳವು ಮಾಡಿ, ಮಾರಿ ಜೀವಿಸಿರುವ ಸಂಗತಗಳು ತಿಳಿದುಬರತ್ತವೆ. ಇಂಥ ಒಂದು ಗುಂಪು ಪೋಲಿಸರ ಕೈಗೆ ಸಿಕ್ಕಾಗ ಪೋಲಿಸರೆ ಕೊಟ್ಟ ವಿಶಿಷ್ಟ ಹೆಸರು "ಗಂಟಿ ಚೋರ"ರಾಗಿದ್ದಾರೆ.(ಬೆಟಗೇರಿ ವೈ ವೈ:೧೯೯೯,ಪು.೪೦೩) ಈ ಸಮುದಾಯವನ್ನು 'ಭಾಮ್ಟಾ' ಸಮುದಾಯವೆಂದೂ ಸಹ ಕರೆಯುತ್ತಾರೆ.

ಇವರಿಗೆ ೧. ಘಂಟೀ ಚೋರ್ (ಗಂಟು ತುಡುಗು ಮಾಡುವುದು), ೨. ಉಚಲಿಯಾ, ೩. ಕಿಸಾಕತ್ರು, ೪. ಟಕಾರಿ, ೫. ವಡಾರಿ, ೬. ಕಳ್ಳವಡ್ರು, ೭. ತುಡುಗು ವಡ್ರು, ೮. ಕಾಮಾಟಿ, ೯. ಪಾತ್ರುಟ. ಇತ್ಯಾದಿ ಹೆಸರುಗಳನ್ನು ಸಹ ಈ ಸಮುದಾಯದವರಿಗೆ ಕರೆಯುತ್ತಾರೆ (ಎಸ್.ವಿ. ಹಲ್ದಿಪುರ್ : ೨).

ಒರಿಸ್ಸಾ ಅಥವಾ ಒಡಿಯಾ ಮೂಲದವರಾದ ಇವರ ಕುಲದ ಹೆಸರು ಒಡಿಯಾ ಎಂಬ ನಾಡಿನ ಮೂಲವನ್ನು ತಿಳಿಸುವ ಹೆಸರೇ ಆಗಿದೆ. ಒಡಿಯಾದವರು>ಒಡಿರು>ಒಡ್ಡರು ಆಗಿರಬೇಕು. ರಾಜಾಶ್ರಯದಲ್ಲಿ ವಾಸ್ತುಶಿಲ್ಪಿಗಳಾಗಿ ಕೆಲಸ ಮಾಡುತ್ತಿದ್ದ ಈ ಸಮುದಾಯ ರಾಜಾಶ್ರಯ ತಪ್ಪಿದ ತರುವಾಯ ತಮ್ಮ ಮೂಲ ನೆಲೆಯನ್ನು ತ್ಯಜಿಸಿ ಆಂಧ್ರಕ್ಕೆ ವಲಸೆ ಬಂದಿರಬೇಕು. ಪೂರ್ವದಲ್ಲಿ ಆಂಧ್ರ (ತೆಲುಗು ಮಾತು ಆಡುವ) ದೇಶದಲ್ಲಿ ಇವರ ವಾಸ್ತವ್ಯ ಇದ್ದಂತೆ ತೋರುತ್ತದೆ (ಅದೇ:೨). ತಮ್ಮ ಭಾಷೆ ತೆಲುಗು ಎಂದು ಹೇಳುತ್ತದೆ. ಆದರೆ ಇವರ ಭಾಷೆ ಒಡಿಯಾ ಮಿಶ್ರಿತ ತೆಲುಗು ಭಾಷೆಯಾಗಿದೆ.

ಮೂಲ ವೃತ್ತಿಯಿಂದ ವಂಚಿತದಾರ ಈ ಒಡ್ಡರು ತಮ್ಮ ಹೊಟ್ಟೆಪಾಡಿಗಾಗಿ ಕರ್ನಾಟಕ, ಮಹಾರಾಷ್ಟ್ರಗಳಿಗೆ ವಲಸೆ ಹೋಗಿ ಅಲ್ಲಿ ಚಿಕ್ಕಪುಟ್ಟ ಅಪರಾಧಗಳನ್ನು ಮಾಡಿರಬೇಕು. ಹೀಗಾಗಿ ಈ ಸಮುದಾಯದವರನ್ನು ಅಪರಾಧ ಸೂಚಕ ಪದಗಳಿಂದಲೇ ಇತರ ಸಮಾಜದವರು ಗುರುತಿಸುವಂತಾಯಿತು. ಭಾಮ್ಟಾ (ಮರಾಠಿ-ಕಳ್ಳ) ಗಂಟಿ ಚೋರ, (ಗಂಟುಗಳ್ಳ) ಕಳ್ಳವಡ್ರು, (ಕಳ್ಳತನ ಮಾಡುವ ಒಡ್ಡರು), ಟಕಾರಿ (ಠಕ್ಕ-ಕಳ್ಳ) ಇತ್ಯಾದಿ ಹೆಸರುಗಳಿಂದ ಗುರುತಿಸುವರು.

ಪಾತ್ರುಟರೆಂದೂ ಸಹ ಇವರನ್ನು ಕರೆಯಲಾಗುತ್ತದೆ. ಹುಬ್ಬಳ್ಳಿ, ಗದಗಿನ ವಕ್ತೃಗಳು ತಮ್ಮ ಹಿರಿಯರು ಕಳ್ಳತನ ಮಾಡಲು ವೇಷ ಮರೆಸಿಕೊಂಡು ಹೋಗುತ್ತಿದ್ದರಿಂದ ತಮ್ಮನ್ನು ಪಾತ್ರೋಟರು, ಪಾತ್ರುಟರೆಂದು ಕರೆಯುತ್ತಾರೆ ಎಂದು ತಿಳಿಸಿದರು.

ಆದರೆ ಬೆಟಗೇರಿಯವರ ವಡ್ಡರ ಪರಂಪರೆ ಎನ್ನುವ ಕೃತಿಯಲ್ಲಿ ಪಾತ್ರೋಟ ಎಂಬುದು ಮರಾಠಿ ಮೂಲದಿಂದ ಬಂದ ಪದವಾಗಿದೆ. "ಫತ್ತರ ಉಠಾನೆವಾಲಾ= ಪತ್ತರ ಊಟ+ಪಾತ್ರೋಟ" ಎನ್ನಲಾಗುತ್ತಿದೆ. ಅಂದರೆ ಕಲ್ಲು ಎಬ್ಬಿಸುವ ಕಲ್ಲುಕುಟಿಗರು. ಸಾಮಾನ್ಯವಾಗಿ ಕಲ್ಲು ಒಡ್ಡರು ಈ ಪಾತ್ರೋಟರು.(ಪು.೪೦೨) ಎಂದು ತಿಳಿಸುತ್ತಾರೆ. ಗಂಟಿ ಚೋರ, ಉಚಲ್ಯಾ, ಕಿಸಾಕತ್ರು, ಟಕಾರಿ, ಮುಂತಾದ ಹೆಸರುಗಳೆಲ್ಲಾ ಜನರು ಕೊಟ್ಟ ಹೆಸರುಗಳಾಗಿವೆ.

ಕೆ.ಎಸ್. ಸಿಂಗ್‌ರವರು ಗಂಟಿ ಚೋರರ ಕುರಿತು ಹೀಗೆ ತಿಳಿಸುತ್ತಾರೆ. "In Kannada, ganti or gantu means 'Bundle', Gantichor, Takku Odden and Donga dasarin are synonymans, The Cassties also reffered to by othar names like 'Bhamta' Kamati, Paturut, Takari and uchilian.(ಕೆ.ಎಸ್.ಸಿಂಗ್:೧೯೦೯:ಪು.೪೦೨)

ಮೈಸೂರಿನ ಠಕ್ಕ ವಡ್ಡರ ಕುರಿತು ಎಂಥೋವನ್‌ರವರು ಹೀಗೆ ತಿಳಿಸುತ್ತಾರೆ. Their cunning, balse or difficult nature and habits (Enthoven:1920:pp.೯೨೨) ಹಾಗೇ ಮುಂದುವರೆದು ಇವರು ಧಾರ್ಮಿಕವಾಗಿ ವೈಷ್ಣವ ಭಕ್ತರೇನಲ್ಲ. ಆದರೆ ಹಣೆಯ ಮೇಲೆ ವೈಷ್ಣವರಂತೆ ನಾಮದ ಲಾಂಛನಗಳನ್ನು ಹಚ್ಚಿಕೊಂಡು ಕೈಯೊಳಗೆ ಗರುಡಗಂಭ, ಜಾಗಟೆ, ನವಿಲು ಗರಿಕಟ್ಟು ಇತ್ಯಾದಿಗಳನ್ನು ಹಿಡಿದುಕೊಂಡು ಹಳ್ಳಿಗಳಲ್ಲಿ ಭಿಕ್ಷೆ ಬೇಡುತ್ತಾರೆ. ಇವರು ವೆಂಕಟೇಶ್ವರನ ಭಕ್ತರಾಗಿದ್ದಾರೆ.(ಅದೇ:ಪು,೯೨೪)

ನಟೇಶ ಶಾಸ್ತ್ರೀಯವರು ಈ ಜಾತಿಯವರು ಆಂಧ್ರದಿಂದ ಕರ್ನಾಟಕಕ್ಕೆ ವಲಸೆ ಬಂದವರಾಗಿರಬೇಕೆಂದು ಅಭಿಪ್ರಾಯ ಪಡುತ್ತಾರೆ (singh k.s. 238).

ನಂಜುಂಡಾರಾಧ್ಯ ಮತ್ತು ಎ.ಕೆ. ಅಯ್ಯರ್‌ರವರು (ದೊಂಗದಾಸರಿ) ಈ ರೀತಿಯ ಅಭಿಪ್ರಾಯ ಪಡುತ್ತಾರೆ. ದೊಂಗ ದಾಸರಿಗಳು ಬಳ್ಳಾರಿ ಜಿಲ್ಲೆಯಲ್ಲಿ ಅಪರಾಧಿಗಳೆಂದು ಪರಿಗಣಿತರಾಗಿದ್ದಾರೆ. ಇವರು ಹಿಂದೆ ಬಳ್ಳಾರಿ ಸೆಟ್ಲಮೆಂಟಿನಲ್ಲಿ ನೆಲೆಸಿದ್ದರು. ಇವರು ಇತರ ಜಾತಿಯ ಗಂಡು ಹಾಗೂ ಹೆಣ್ಣು ಮಕ್ಕಳನ್ನು ಅಪಹರಿಸುತ್ತಿದ್ದರು (೧೯೩೫:೪೯೮) ಎಂಬುದಾಗಿ ತಿಳಿದುಬರುತ್ತದೆ ಎಂದು ತಿಳಿಸುತ್ತಾರೆ.

ಗಂಟಿಚೋರ ಎಂದರೆ ಗಂಟನ್ನು ಕದಿಯುವವರು ಎಂದು ಮುಂಬೈ ಕರ್ನಾಟಕದ ಪ್ರದೇಶದಲ್ಲಿ ಗುರುತಿಸುತ್ತಾರೆ. ಗಂಟಿ ಚೋರ ಎಂಬ ಹೆಸರು ಅವರು ಮಾಡುವ ವೃತ್ತಿಯಿಂದ ಬಂದುದಾಗಿದೆ. ಕಳ್ಳತನ ಮತ್ತು ಕಿಸೆ ಕತ್ತರಿಸುವ ಕೆಲಸ ಮಾಡುತ್ತಾರೆ. ರೈಲ್ವೆ ನಿಲ್ದಾಣ, ಮಾರುಕಟ್ಟೆ ಇಂಥ ಜನನಿಬಿಡ ಪ್ರದೇಶಗಳಲ್ಲಿ ಗಂಟುಗಳನ್ನು ಕದಿಯುತ್ತಿದ್ದರಂತೆ, ಬಾಂಬೆ ಪ್ರೆಸಿಡೆನ್ಸಿ ಪ್ರಾಂತದಲ್ಲಿ ಇವರನ್ನು ಅಪರಾಧಿ ಬುಡಕಟ್ಟೆಂದು ಗುರುತಿಸುತ್ತಾರೆ. ಈ ಸಮುದಾಯಕ್ಕೆ ಇರುವ ಇತರ ಹೆಸರುಗಳು ಉಚಲ್ಯಾ, ಪಾತ್ರೂಟ್ ಕಾಮಟಿ, ಭಾಮ್ಟಾ ಮತ್ತು ಠಕಾರಿ, ಪುಣೆ ಜಿಲ್ಲೆಯಲ್ಲಿ ಭಾಮ್ಟಾವೆಂದೂ ಸೊಲ್ಲಾಪುರ ಜಿಲ್ಲೆಯಲ್ಲಿ ಉಚಿಲ್ಯವೆಂದೂ, ಉಸ್ಮಾನಬಾದ್‌ನಲ್ಲಿ ಪಾತ್ರೂಟರೆಂದೂ ಕರೆಯುತ್ತಾರೆ. ಇವರು ತೆಲುಗು ಮಾತನಾಡುವ ಪ್ರದೇಶದಿಂದ ಅಥವಾ ಮದ್ರಾಸ್ ಭಾಗದಿಂದ ಬಂದಿರಬೇಕು. ಇಂದು ಇವರಲ್ಲಿ ತೆಲುಗು ಭಾಷೆ ಮತ್ತು ತೆಲುಗು ಮೂಲದ ಹೆಸರುಗಳು ಕಳೆದು ಹೋಗಿವೆ. ತಮ್ಮ ಮೂಲ ನೆಲೆಯಿಂದ ಯಾವಾಗ ಈ ಕಡೆ ವಲಸೆ ಬಂದಿದ್ದಾರೆ ಎಂಬುದು ಆ ಜನಕ್ಕೆ ಮರೆತು ಹೋಗಿದೆ. ಹಾಗೇ ಯಾವುದೇ ಹಿಂದೂ ಜಾತಿ ಮೂಲದಿಂದ ಬಂದಿರುವುದು ಮರೆತು ಹೋಗಿದೆ (ಎಂಥೋವನ್ ೧೯೨೨).

"ಗಂಟಿ ಚೋರರು ಸೊಲ್ಲಾಪುರ, ಪುಣೆ, ಸತಾರ, ಕೊಲ್ಲಾಪುರ ಮತ್ತು ಕರ್ನಾಟಕದಲ್ಲಿ ಹಂಚಿಹೋಗಿದ್ದಾರೆ. ಮುಖ್ಯವಾಗಿ ಹುಬ್ಬಳ್ಳಿ, ಗದಗ, ಬೆಟಗೇರಿ ರಾಯಭಾಗ ತಾಲೂಕಿನ ಗೋಕಾಕ್, ರಾಯದುರ್ಗ (ಬೆಳಗಾವಿ ಜಿಲ್ಲೆ) ಇವರು ಬಿಜಾಪುರ ಮತ್ತು ಬಾಗಲಕೋಟೆ ಸೆಟ್ಲಮೆಂಟ್‌ಗಳಲ್ಲಿ ನೆಲೆಸಿದ್ದಾರೆ" (ಸಿಂಗ್.ಕೆ.ಎಸ್:೧೯೦೯:ಪು,೪೯೨).

ಗಂಟಿ ಚೋರರನ್ನು ಗಿರಣಿ ಒಡ್ಡರು ಎಂದೂ ಸಹ ಕರೆಯುತ್ತಾರೆ. ಪ್ರಾಯಶಃ ಬ್ರಿಟೀಷ್ ಆಗಮನವಾಗಿ ಅಪರಾಧಿ ಬುಡಕಟ್ಟು ಕಾಯ್ದೆ ಜಾರಿಗೆ ಬಂದ ತರುವಾಯ ಅಪರಾಧಿ ಬುಡಕಟ್ಟು ಕಾಯ್ದೆಯ ಅಡಿಯಲ್ಲಿ

ಇಂತಹ ಎಷ್ಟೋ ಸಮುದಾಯಗಳನ್ನು ಸೆಟ್ಲಮೆಂಟ್‌ಗಳಲ್ಲಿ ಇರಿಸಿಕೊಂಡು ಅವರಿಂದ ತಮಗೆ ಅವಶ್ಯಕವಾದ ಕೆಲಸಗಳನ್ನು ಮಾಡಿಸುತ್ತಿದ್ದರು. ತಾವು ನಿರ್ಮಿಸಿದ ಕಾರ್ಖಾನೆಗಳಲ್ಲಿ ಈ ಸಮುದಾಯದ ಜನರನ್ನು ಬಿಟ್ಟಿಯಾಗಿಯೇ ಅಥವಾ ಕನಿಷ್ಟ ಕೂಲಿಗೆ ದುಡಿಸಿಕೊಳ್ಳುತ್ತಿದ್ದರು. ಹೀಗಾಗಿ ಇವರನ್ನು ಗಿರಣಿ ಒಡ್ಡರು ಎಂದು ಕರೆಯುವುದೂ ಸಹ ವಾಡಿಕೆಗೆ ಬಂದಿದೆ.

ಕರ್ನಾಟಕದ ಸೆಟ್ಲಮೆಂಟ್‌ಗಳಲ್ಲಿ ನೆಲೆಸಿರುವ ಗಂಟಿಚೋರ ಸಮುದಾಯವು ತಮ್ಮ ಮೂಲ ಆಚರಣೆಗಳನ್ನು ಇಂದಿಗೂ ಕಾಪಾಡಿಕೊಂಡು ಬಂದಿರುವುದು ಕಂಡು ಬರುತ್ತದೆ. ಆದರೆ ಕೆಲವೊಮ್ಮೆ ಪ್ರಾದೇಶಿಕ ಪ್ರಭಾವದಿಂದಾಗಿ ಅನ್ಯ ದೈವಗಳು ಹಾಗೂ ದೇವರುಗಳ ಆರಾಧನೆ, ಆಚರಣೆಗಳು ಇವರ ಮೇಲೆ ಸ್ವಲ್ಪ ಪ್ರಭಾವ ಬೀರಿದಂತೆ ಕಂಡು ಬರುತ್ತದೆ. ಮೂಲತಃ ಒಡ್ಡರಾಗಿರುವ ಇವರು ಇಂದು ವಡ್ಡ (ಒಡ್ಡ) ಸಮುದಾಯದಿಂದ ದೂರವುಳಿದಿದ್ದಾರೆ. ಪ್ರಾಯಶಃ ಬೋವಿಗಳು ಸ್ವಲ್ಪ ಮೊದಲೇ ಈ ಕಡೆ ವಲಸೆ ಬಂದವರಾಗಿರಬೇಕು. ನಂತರ ಗಂಟಿ ಚೋರರು ವಲಸೆ ಬಂದಿರಬೇಕು. ಹೀಗಾಗಿ ಇಂದು ಈ ಎರಡೂ ಸಮುದಾಯಗಳ ಮಧ್ಯ ರಕ್ತಸಂಬಂಧಗಳು ಅಪರೂಪಕ್ಕೆ ಕೆಲವು ಕಡೆ ಮಾತ್ರ ಒಡ್ಡ/ ಬೋವಿಗಳೊಂದಿಗೆ ಸಂಬಂಧ ಬೆಳೆಸಿರುವುದು ಕಂಡು ಬರುತ್ತದೆ.

ಬೆಡಗುಗಳು

ಗಂಟಿಚೋರರಲ್ಲಿ ಎರಡು ಬೆಡಗುಗಳು ಮಾತ್ರ ಕಂಡು ಬರುತ್ತವೆ ಎಂದು ಕೆ.ಎಸ್. ಸಿಂಗ್‌ರವರು ತಿಳಿಸುತ್ತಾರೆ. ಅವುಗಳನ್ನು ಸಣ್ಣ ಅಕ್ಕಿ (Thin Rice) ಮತ್ತು ಘಂಟಿ ಚೋರ್ (Men of the Bell) ಮುಂದುವರೆದು "The latter in the family name of the 'Kabberas' Which proves that they have joined the Donga dasaris. one of the two exogamous groups has two clans namely Kashnor and popnor (ನಂದು ರಾಮ್:೨೦೦೭,ಪು.೨೩೯). ಇತರ ಮೂರು ಬೆಡಗುಗಳಾಗಿ, ಭೂಮಿನೋರು, ತ್ರಿನಗಲೋರ್ (Trinaglor), ಕಲಪುಟ್ನೋರ್ (Kalputnor) ಎಂದು ಸಹ ಗುರುತಿಸಿದ್ದಾರೆ. ಗಂಟಿಚೋರರಲ್ಲಿರುವ ಸಣ್ಣಕ್ಕಿ ಎಂಬ ಬೆಡಗು ಕೊರಮ ಸಮುದಾಯದಲ್ಲಿನ ಉಪಬೆಡಗುಗಳ ಪಟ್ಟಿಯಲ್ಲಿ ಕಂಡುಬರುತ್ತದೆ.(ಮಾನ್ವಡೆ ಬಿ ಮಲ್ಲಿಕಾರ್ಜುನ:೨೦೦೮,ಪು.೩೭)

ಆದರೆ ಸಿಂಗ್ ಕೆ.ಎಸ್.ರವರು ಸಹ ಐದು ಬೆಡಗುಗಳು ಇವರಲ್ಲಿ ಇವೆ ಎಂದು ಗುರುತಿಸುತ್ತಾರೆ. ಕಾಶನೋರ್, ಪಾಪನೋರ್, ಭೂಮಿನೋರ್, ತ್ರಿನಗಲೋರ್, ಕಲಪುಟನೋರ್. ಇವರು ಮಹಾರ್, ಮಾಂಗ್, ಚಮ್ಮಾರ್ ಧೋರ್ ಮುಂತಾದ ಸಮುದಾಯಗಳನ್ನು ತಮ್ಮ ಕೆಳಗಿನ ಸಮುದಾಯಗಳು ಎಂಬ ನಂಬಿಕೆಯನ್ನು ಹೊಂದಿದ್ದಾರೆ. ಆದರೆ ಇವರು ತಮ್ಮ ವೃತ್ತಿಯಿಂದಾಗಿ ತುಂಬಾ ಕೀಳಾಗಿದ್ದಾರೆ. ವರ್ಣ ವ್ಯವಸ್ಥೆಯಲ್ಲಿ ಇವರೂ ಸಹ ಸೂದ್ರರೆ (ಸಿಂಗ್ ಕೆ.ಎಸ್:೧೯೯೪:ಪು,೪೯೩).

ಕರ್ನಾಟಕದ ಸೆಟ್ಲಮೆಂಟ್‌ನಲ್ಲಿ ನೆಲೆಸಿದ ಬಹುತೇಕ ಗಂಟಿಚೋರರು ಇಂದಿಗೂ ಈ ಬೆಡಗುಗಳನ್ನೇ ಅನುಸರಿಸುತ್ತಾರೆ. ಹಾಗೇ ಮಹಾರಾಷ್ಟ್ರದ ಮರಾಠಿ ಪ್ರಭಾವದಿಂದಾಗಿ ಈ ಬೆಡಗುಗಳನ್ನು ಗಾಯಕ್ವಾಡ್, ಜಾಧವ್, ಪವಾರ್, ಮುಂತಾಗಿ ಗುರುತಿಸುವ ವಾಡಿಕೆಯೂ ಇವರಲ್ಲಿದೆ.

ಆದರೆ ಇತ್ತೀಚಿನ ಯುವಕರು ತಮ್ಮ ಮೂಲ ಬೆಡಗುಗಳನ್ನು ಮರೆಯುತ್ತಿದ್ದಾರೆ. ಬೆಡಗುಗಳನ್ನು ಮರೆತರೆ ಮದುವೆಗೆ ಸಂಬಂಧ ಬೆಳೆಸುವುದು ಕಷ್ಟವಾಗುವುದಿಲ್ಲವೇ ಎಂದು ಪ್ರಶ್ನಿಸಿದರೆ ಇಲ್ಲ, ಸಾಮಾನ್ಯವಾಗಿ ಹತ್ತಿರದ ಸಂಬಂಧಿಗಳಲ್ಲಿಯೇ ನಾವು ಮದುವೆ ಮಾಡಿಕೊಳ್ಳುವುದು. ಹೀಗಾಗಿ ನಾವು ಯಾವ ಬೆಡಗಿನವರು ಮತ್ತು ಅವರು ಯಾವ ಬೆಡಗಿನವರು ಎಂಬುದೇ ನಾವು ಅರಿಯುವ ಪ್ರಯತ್ನಕ್ಕೆ ಹೋಗುವುದಿಲ್ಲ. ಹಾಗೇ ಮದುವೆ ಮಾಡಿಕೊಳ್ಳುತ್ತೇವೆ ಎಂದು ಕ್ಷೇತ್ರಕಾರ್ಯದಲ್ಲಿ ಕೆಲವು ಯುವಕರು ತಿಳಿಸಿದರು.

ವಿವಾಹ

ಅಕ್ಕನ ಮಗ ತಂಗಿಯ ಮಗಳನ್ನು, ತಂಗಿಯ ಮಗ ಅಕ್ಕನ ಮಗಳನ್ನು ಹಾಗೇ ಅಣ್ಣನ ಮಗ ತಮ್ಮನ ಮಗಳನ್ನು, ತಮ್ಮನ ಮಗ ಅಣ್ಣನ ಮಗಳನ್ನು ಹೀಗೆ ತಮ್ಮ ಸಹೋದರಿಕೆಯಲ್ಲಿಯೇ ಹೆಣ್ಣುಗಳನ್ನು ಆಯ್ಕೆ ಮಾಡಿಕೊಂಡು ವಿವಾಹವಾಗುವ ಪದ್ಧತಿ ಇತ್ತು (ಸಿಂಗ್.ಕೆಎಸ್:೨೦೦೩,ಪು.೪೯೩).ಆದರೆ ಇಂದು ಸಹೋದರ ಸಂಬಂಧದಲ್ಲಿ ವಿವಾಹವಾಗು ಪದ್ದತಿ ಕಂಡುಬರುವುದಿಲ್ಲ.

ಇಂದಿಗೂ ಇವರಲ್ಲಿ ಬಾಲ್ಯ ವಿವಾಹ ಪದ್ಧತಿ ಇದೆ. ಹುಡುಗಿಯರು ೧೦-೧೬ ವರ್ಷದೊಳಗೆ ಹುಡುಗರು ೧೮ ರಿಂದ ೨೦ ವರ್ಷದೊಳಗೆ ಮದುವೆಯಾಗುತ್ತಾರೆ.

ಅವನು ಕಳ್ಳತನ ಮಾಡುವುದರಲ್ಲಿ ಎಷ್ಟು ಚಾಣಾಕ್ಷ ಇದ್ದಾನೆ ಎಂಬುದನ್ನು ನೋಡಿ ಹೆಣ್ಣು ಕೊಡುತ್ತಿದ್ದರಂತೆ. ಸಾಮಾನ್ಯವಾಗಿ ಹೆಣ್ಣನ್ನು ಕೇಳಲು ಗಂಡಿನ ತಂದೆ ಹೆಣ್ಣಿನ ಮನೆಗೆ ಬರುತ್ತಾನೆ. ವಧುದಕ್ಷಿಣೆ ಪದ್ಧತಿ ಇವರಲ್ಲಿದೆ. ಇತ್ತೀಚೆಗೆ ವರದಕ್ಷಿಣೆ ಪದ್ಧತಿಯೂ ಇದರಲ್ಲಿ ನಿಧಾನವಾಗಿ ಪ್ರವೇಶ ಮಾಡಿದೆ. ಕರಿಮಣಿಯ ಮಂಗಳ ಸೂತ್ರ (ತಾಳಿ) ಕಿವಿಯೋಲೆ, ಕಾಲುಂಗುರ, ಹಸಿರು ಬಳೆಗಳನ್ನು ಮದುವೆ ಸಂದರ್ಭದಲ್ಲಿ ಬಳಸುತ್ತಾರೆ.

ಬಹುತೇಕ ಕೆಳವರ್ಗಗಳಲ್ಲಿ ಚಾಲ್ತಿ ಇರುವ ವಿವಾಹ ಪದ್ಧತಿಯೇ ಇವರಲ್ಲಿಯೂ ಕಂಡು ಬರುತ್ತದೆ. ಬೋವಿ, ವಡ್ಡ ಸಮುದಾಯದಿಂದ ಇವರು ದೂರವುಳಿದಿದ್ದರೂ ಭೋವಿಯ ಕೆಲವು ಆಚರಣೆಗಳು ಇವರಲ್ಲಿ ಉಳಿದುಕೊಂಡಿವೆ. ಆದರೆ ಭೋವಿಗಳು ತಮಗಿಂತ ಶ್ರೇಣೀಕರಣದಲ್ಲಿ ಕೆಳಗಿನವರು ಎಂದು ಇವರು ಭಾವಿಸುತ್ತಾರೆ. ಭೋವಿಗಳು ಗಂಟಿ ಚೋರರನ್ನು ಶ್ರೇಣೀಕರಣದಲ್ಲಿ ತಮಗಿಂತ ಕೆಳಗಿನವರು ಎಂದು ಭಾವಿಸುತ್ತಾರೆ.

ಇವರು ಭೋವಿಗಳು ಹಾಕಿದಂತೆ ಹಂದರ ಹಾಕಿ ಹಂದರದೊಳಗೆ ಹಾಲಗಂಭ, ಅಸ್ತಿಕಂಭಗಳನ್ನು ನೆಡುತ್ತಾರೆ. ಐರಾಣಿ, ಸುರಗಿ ಪದ್ಧತಿಗಳನ್ನು ಇವರಲ್ಲಿದೆ. ಆದರೆ ಪ್ರತಿಯೊಂದಕ್ಕೂ ಮಾಂಸಾಹಾರವನ್ನು ಮಾಡುವದು ಹೆಚ್ಚು.

ವಿವಾಹ ಪೂರ್ವದಲ್ಲಿ ಹಿರಿಯರನ್ನು ಪೂಜಿಸುವುದು, ಮನೆದೇವರನ್ನು ಪೂಜಿಸುವುದು ಮಾಡುತ್ತಾರೆ. ಇಂತಹ ಸಂದರ್ಭದಲ್ಲಿ ಸಿಹಿ ಅಡುಗೆಯೊಂದಿಗೆ ಮಾಂಸಾಹಾರವನ್ನು ಸಹ ಮಾಡುತ್ತಾರೆ.

ಹಿರಿಯರ ಪೂಜೆ ಮತ್ತು ಮನೆದೇವರ ಪೂಜೆ ಮಾಡಿದ ಮೇಲೆಯೇ ಮದುವೆ ಕಾರ್ಯಗಳು ಪ್ರಾರಂಭವಾಗುವುದು. ಸಾಮಾನ್ಯವಾಗಿ ಹೆಣ್ಣಿನ ಮನೆ ಮುಂದೆ ಮದುವೆ ನಡೆಯುತ್ತದೆ. ದೈವದವರೆಲ್ಲಾ ಸೇರಿ ಹಂದರ ಹಾಕುತ್ತಾರೆ. ಹುಡುಗಿಯ ಸೋದರ ಮಾವ, ಸೋದರತ್ತೆಯಾದವರು ಹಂದರ ಪೂಜೆ ಮಾಡುತ್ತಾರೆ. ಹಾಲುಗಂಭ ಅತ್ತಿ ಕಂಭ ತರಲಾಗುತ್ತದೆ.

ಸುರಗಿಗೆ ಬೇಕಾದ ಮಣ್ಣಿನ ಬಿಂದಿಗೆಗಳು ಮತ್ತು ಐರಾಣಿ ಬಿಂದಿಗೆಗಳನ್ನು ಕುಂಬಾರನ ಬಳಿ ಹೋಗಿ ಅವನಿಗೆ ರೂ. ೧೧ ಅಥವಾ ೫೧ ಮತ್ತು ಬೆಲ್ಲ, ಬೇಳೆ, ಹಿಟ್ಟು (ಗೋಧಿ, ಜೋಳ), ಎಲೆ, ಅಡಿಕೆ, ಅರಿಸಿಣ ಕೊಂಬು, ಎರಡು ಉತ್ತತ್ತಿ ಕೊಟ್ಟು ಮೇಲೆ ತಿಳಿಸಿದ ಪರಿಕರಗಳನ್ನು ತರುತ್ತಾರೆ.

ಮುತ್ತೈದೆಯರು ಮಾತ್ರ ಮದುವೆ ಮಂಟಪದಲ್ಲಿ ಕಾರ್ಯ ಮಾಡುತ್ತಾರೆ. ಗಂಡ ಸತ್ತ ಹೆಂಗಸು ಮತ್ತು ಹೆಂಡತಿ ಸತ್ತ ಗಂಡ (ವಿಧವೆ, ವಿಧುರ) ಯಾವ ಕಾರ್ಯಗಳಲ್ಲಿಯೂ ಪಾಲ್ಗೊಳ್ಳುವಂತಿಲ್ಲ.

ಇವರಲ್ಲಿ ಹರಿಷಿಣ ಹಚ್ಚುವ ಶಾಸ್ತ್ರ, ಬೀಗರನ್ನು ಎದುರುಗೊಳ್ಳುವುದು ಮಾಡುತ್ತಾರೆ. ಮೊದಲಿಗೆ ಮದುವೆ ಸಂದರ್ಭದಲ್ಲಿ ಮಾಂಸಾಹಾರಗಳನ್ನು ಮಾಡುತ್ತಿದ್ದರು. ಇತ್ತೀಚೆಗೆ ಬಿಟ್ಟಿದ್ದಾರೆ. ಮಾಂಸಹಾರದ ಬದಲು ಸಿಹಿ ಅಡುಗೆ ಮಾಡುತ್ತಾರೆ.

ಆದರೆ ಯಾವುದೇ ಕಾರ್ಯ ಮಾಡಲಿ ಅದಕ್ಕೆ ಹೆಂಡ ಬೇಕೆ ಬೇಕು. ಇಂದು ಹೆಂಡ ಸಿಗದಿರುವುದರಿಂದ ಆ ಸ್ಥಾನವನ್ನು ವಿಸ್ಕಿ, ರಮ್ ಮುಂತಾದ ಮಧ್ಯಗಳು ಪ್ರವೇಶಗೊಂಡಿವೆ.

ಭೋವಿಗಳಂತೆ ಇವರು ಸುರಗಿಯನ್ನು ಸುತ್ತುತ್ತಾರೆ. ಆದರೆ ಸುರಗಿ ದಾರ ಸುತ್ತುವುದರಲ್ಲಿ ವ್ಯತ್ಯಾಸವಿದೆ. ಹುಡುಗನ ಕಡೆಯದೆಂದು ಹನ್ನೊಂದು ಸುತ್ತು ಮತ್ತು ಹುಡುಗಿಯ ಕಡೆಯದೆಂದು ೯ ಸುತ್ತು ಒಟ್ಟು ೨೦ ಸುತ್ತು ದಾರವನ್ನು ಸುರಗಿ ಕೊಡಗಳಿಗೆ ಸುತ್ತುತ್ತಾರೆ. ತರುವಾಯ ಪ್ರತಿಯೊಂದು ಕಾರ್ಯಮೂ ಈ ಸುರಗಿಯ ಮಧ್ಯೆದಲ್ಲಿಯೇ ನಡೆಯುತ್ತವೆ. ಮೊದಲಿಗೆ ಹುಡುಗಿಯ ತಂದೆ – ತಾಯಿ ಮತ್ತು ಹುಡುಗನ ತಂದೆ ತಾಯಿಗಳಿಗೆ ಸುರಗಿ ನೀರನ್ನು ಹಾಕುತ್ತಾರೆ. ಸಾಮಾನ್ಯವಾಗಿ ಸುರಗಿ ನೀರನ್ನು ಹುಡುಗನ ಸೋದರ ಮಾವ, ಸೋದರತ್ತೆ ಹಾಗೂ ಹುಡುಗಿಯ ಸೋದರ ಮಾವ ಮತ್ತು ಸೋದರತ್ತೆ ಹಾಕುತ್ತಾರೆ. ಐರಾಣಿ ಹೋರುವವರಿಗೆ ಸುರುಗಿ ನೀರು ಹಾಕಲಾಗುತ್ತದೆ. ನಂತರವೇ ಮದುವೆ ಗಂಡು, ಹೆಣ್ಣುಗಳಿಗೆ ಸುರಗಿ ನೀರು ಹಾಕಲಾಗುತ್ತದೆ. ಸುರಗಿ ನೀರು ಹಾಕಿದ ಮೇಲೆ ಹೊಸ ಬಟ್ಟೆಗಳನ್ನು ತೊಡಿಸುತ್ತಾರೆ. ನಂತರ ಅಕ್ಕಿಕಾಳಿನ ಶಾಸ್ತ್ರ ನಡೆಯುತ್ತದೆ. ಹುಡುಗನನ್ನು ಬೀಸಕಲ್ಲಿನ ಮೇಲೆ ಮತ್ತು ಹುಡುಗಿಯನ್ನು ಜೋಳ ತುಂಬಿದ ಪುಟ್ಟಿಯಲ್ಲಿ ನಿಲ್ಲಿಸಿ ತಾಳಿ ಕಟ್ಟಿಸುತ್ತಾರೆ. ತಾಳಿ ಕಟ್ಟುವ ಪೂರ್ವದಲ್ಲಿ ಇಬ್ಬರ ಮಧ್ಯೆ ವಸ್ತ್ರವೊಂದನ್ನು ಅಡ್ಡ ಹಿಡಿಯಲಾಗಿರುತ್ತದೆ. (ಪೂರ್ವದಲ್ಲಿ ಹಂದರ ಪೂಜೆ ಸಂದರ್ಭದಲ್ಲಿ ಹಂದಿಯನ್ನು ಕೊಯ್ದು ಹಂದರ ಪೂಜೆ ಮಾಡುವ ಸಂಪ್ರದಾಯವಿತ್ತು ಇತ್ತೀಚೆಗೆ ಆ ರೀತಿ ಮಾಡುವುದಿಲ್ಲ)

ಮದುವೆ ಮಾಡಿಸಲು ಬ್ರಾಹ್ಮಣ ಅಥವಾ ಜಂಗಮ ಪುರೋಹಿತರನ್ನು ಕರೆಸುವ ವಾಡಿಕೆ ಇವರಲಿಲ್ಲ. ಕುಲದ ಹಿರಿಯನೇ ಮದುವೆ ಕಾರ್ಯದ ಪುರೋಹಿತಿಕೆ ವಹಿಸಿ ಮದುವೆ ಮಾಡುತ್ತಾನೆ. ಇನ್ನುಳಿದಂತೆ

ನಿಶ್ಚಯ ಕಾರ್ಯ ಐರಾಣಿ, ಭೂಮ, ವರನ ಮನೆಗೆ ಬರುವುದು, ವಧುವಿನ ಮನೆಗೆ ತೆರಳುವುದು, ಸೋಬಾನೆ ಕಾರ್ಯ ಮುಂತಾದವುಗಳು ಎಲ್ಲಾ ಒಡ್ಡರ ಸಂಪ್ರದಾಯಗಳಂತೇ ಇವರಲ್ಲಿರುವುದು ಕಂಡು ಬರುತ್ತದೆ. ಪ್ರಸ್ತುತ ಗಂಟಿಚೋರರ ವೈವಾಹಿಕ ಸ್ಥಾನಮಾನಗಳು ಈ ಕೆಳಗಿನಂತಿವೆ.

ಕೋಷ್ಟಕ ೪.೨: ಸಮೀಕ್ಷೆಗೊಳಪಟ್ಟ ಗಂಟಿಚೋರರ ವೈವಾಹಿಕ ಸ್ಥಾನಮಾನ

	ಪುರುಷ	ಸ್ತ್ರೀ	ಒಟ್ಟು
ಒಟ್ಟು ಜನಸಂಖ್ಯೆ	೧೫೩೦	೧೪೨೬	೨೯೫೬
ಅವಿವಾಹಿತರು	೭೭೨	೬೪೯	೧೪೨೧
ವಿವಾಹಿತರು	೭೪೦	೭೪೨	೧೪೮
ವಿದುರ/ವಿದುವೆಯರು	೧೭	೩೪	೫೧
ಬೇರ್ಪಡೆಯಾದವರು	೧	೧	೨

ಕರ್ನಾಟಕದಲ್ಲಿ ಸೆಟ್ಲಮೆಂಟಿನ ಗಂಟಿ ಚೋರ ಸಮುದಾಯದ ಒಟ್ಟು ಜನಸಂಖ್ಯೆಯಲ್ಲಿ ಅವಿವಾಹಿತರ ಪ್ರಮಾಣ ಶೇ. ೪೮.೦೭ ಇದ್ದರೆ, ವಿವಾಹಿತರ ಪ್ರಮಾಣ ಶೇ. ೫೦.೧೪ ಇದೆ. ಅವಿವಾಹಿತರಲ್ಲಿ ಪುರುಷರ ಪ್ರಮಾಣ ಹೆಚ್ಚಿದೆ (ಶೇ. ೫೦.೪೫) ವಿವಾಹಿತರಲ್ಲಿ ಮಹಿಳೆಯ ಪ್ರಮಾಣ ಹೆಚ್ಚಿದೆ. (ಶೇ. ೫೦.೦೩) ಇನ್ನು ವಿಧುರ, ವಿಧವೆಯರ ಪ್ರಮಾಣ ಶೆ. ೧.೭೨ರಷ್ಟಿದೆ. ಹಾಗೇ ದಂಪತಿಗಳು ನಾನಾ ಕಾರಣಗಳಿಗಾಗಿ ಬೇರ್ಪಡೆಗೊಂಡಿರುವುದು ಕಂಡು ಬರುತ್ತದೆ. ಅಂಥವರ ಪ್ರಮಾಣ ಶೇ. ೦.೦೭ರಷ್ಟು ಮಾತ್ರವಿದೆ.

ಸೀಮಂತ ಕಾರ್ಯ

ಇವರು ತಮ್ಮ ಕುಟುಂಬ ಕಟ್ಟಿಕೊಂಡು ಹೊಟ್ಟೆಪಾಡಿಗಾಗಿ ಊರೂರಿಗೆ ತೆರಳುವವರಾಗಿದ್ದರು. ಹೀಗಾಗಿ ಇವರಲ್ಲಿ ಸೀಮಂತ ಕಾರ್ಯ ಇರಲೇ ಇಲ್ಲ. ಇತ್ತೀಚೆಗೆ ಒಂದೇ ಕಡೆ ನೆಲೆಸಿದ ಗಂಟಿಚೋರರಲ್ಲಿ ಸೀಮಂತ ಕಾರ್ಯ ಪ್ರವೇಶ ಪಡೆದಿದೆ. ಸಾಮಾನ್ಯವಾಗಿ ಹುಡುಗಿ ಬಸಿರೆಯಾಗಿ ೫ ತಿಂಗಳು ಅಥವಾ ೭ ತಿಂಗಳಿಗೆ ಸೀರೆ ಮಾಡುವ ಶಾಸ್ತ್ರವನ್ನು ಮಾಡುತ್ತಾರೆ. ಈ ಶಾಸ್ತ್ರದಲ್ಲಿ ಆಗುವ ಖರ್ಚನ್ನೆಲ್ಲಾ ತವರಿನವರೇ ಪೂರೈಸುತ್ತಾರೆ. ಈ ಕಾರ್ಯ ಮಾಡಿದ ತರುವಾಯ ಹೆಣ್ಣನ್ನು ಹೆರಿಗೆಗಾಗಿ ತವರಿಗೆ ಕರೆದುಕೊಂಡು ಹೋಗಲಾಗುತ್ತದೆ.

ಜನನ : ಸಾಮಾನ್ಯವಾಗಿ ಮನೆಯಲ್ಲಿಯೇ ಹೆರಿಗೆ ಮಾಡಿಸಿಕೊಳ್ಳುತ್ತಾರೆ. ಇತ್ತೀಚೆಗೆ ನಗರದ ಸರ್ಕಾರಿ / ಸರ್ಕಾರೇತರ ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸಿಕೊಳ್ಳುತ್ತಿರುವರು. ಇವರಿಗೆ ತೀರ ಹತ್ತಿರದ ಸಮುದಾಯವಾದ ಬೋವಿ, ವಡ್ಡರು ೧೬ ದಿನದವರೆಗೂ ಹೆರಿಗೆಯಾದ ಮನೆಯನ್ನು ಮತ್ತು ಮನೆಯಲ್ಲಿದ್ದವರನ್ನು ಸೂತಕಕ್ಕೆ ಒಳಗಾಗಿದ್ದಾರೆಂದು ಇತರ ಬಂಧುಗಳಿಂದ ದೂರವಿರುತ್ತಾರೆ. ಆದರೆ ಗಂಟಿ ಚೋರರಲ್ಲಿ ಈ ರೀತಿಯ ಮೈಲಿಗೆಯು ೧೨ ದಿನಗಳವರೆಗೆ ಇರುತ್ತದೆ. "ತಾಯಿ ಮಗುವನ್ನು

ಮೈಲಿಗೆಯೆನ್ನುವ ಕಾರಣಕ್ಕೆ ೧೨ ದಿನಗಳವರೆಗೆ ಒಂದು ಪ್ರತ್ಯೇಕ ಕೋಣೆಯಲ್ಲಿ ಇರಿಸುತ್ತಾರೆ" (ನಂದೂರಾಮ್:೨೦೦೭,ಪು.೨೩೯) ಎಂದು ನಂದೂರಾಮ್‌ರವರು ತಿಳಿಸುತ್ತಾರೆ.

ಹೆರಿಗೆಯಾದ ಮನೆಗೆ ಆ ಮನೆಯವರ ಹೊರತು ಬೇರೆ ಯಾರಿಗೂ ಪ್ರವೇಶವಿಲ್ಲ. ಹೆರಿಗೆಯಾದ ಮನೆಯೊಳಗೆ ಪ್ರವೇಶಿಸುವಾಗ ಕೆಲವು ಕಡ್ಡಾಯ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಅಂದರೆ ನಂದೂರಾಮ್‌ರವರು ತಿಳಿಸಿದಂತೆ ಕೇವಲ ಬಾಣಂತಿ ಮತ್ತು ಹುಟ್ಟಿದ ಮಗು ಮಾತ್ರ ಮೈಲಿಗೆಗೆ ಒಳಗಾಗಿರುವುದಿಲ್ಲ. ಬಾಣಂತಿ ವಾಸಿಸುವ ಇಡೀ ಮನೆ ಮತ್ತು ಜನರೂ ಮೈಲಿಗೆಗೆ ಒಳಗಾಗಿರುತ್ತಾರೆ. ಹಾಗಾಗಿ ಸೂಲಗಿತ್ತಿ ಹೊರತಾಗಿ ಹೊರ ಸಂಬಂಧಿಗಳಾರೂ ಅವರ ಮನೆಗೆ ಪ್ರವೇಶಿಸುವುದಿಲ್ಲ ಮತ್ತು ಅವರೂ ಸಹ ಇತರರ ಮನೆಗೆ ಹೋಗುವುದಿಲ್ಲ ಹಾಗೂ ಯಾವ ವಸ್ತುವನ್ನು ಹೊರಗೆ ಕೊಡುವುದಿಲ್ಲ. ೧೨ ದಿನಕ್ಕೆ ಮನೆಯನ್ನು ತೊಳೆದುಕೊಂಡ ನಂತರ ಇಡೀ ಮನೆಯ ಸೂತಕ ಪರಿಹಾರವಾಗುತ್ತದೆ.

ಸೂತಕ ಕಳೆದುಕೊಳ್ಳುವ ವಿಧಾನ : ಹೆರಿಗೆಯಾದ ೧೨ ದಿನಕ್ಕೆ ಇಡೀ ಮನೆಯನ್ನು ಸೆಗಣಿಯಿಂದ ಸಾರಿಸಿಕೊಳ್ಳುತ್ತಾರೆ. ಅವರು ಬಾಣಂತಿಯ ಹಾಸಿಗೆಯನ್ನು ಬದಲಿಸುತ್ತಾರೆ ಮತ್ತು ತಾಯಿ ಮತ್ತು ಮಗುವಿಗೆ ಸ್ನಾನ ಮಾಡಿಸುತ್ತಾರೆ. ನಂತರ ಆಕಳ ಮೂತ್ರವನ್ನು ಮನೆಗೆ ಚಿಮುಕಿಸಿದ ತರುವಾಯ ತಮ್ಮ ಮನೆಯ ಸೂತಕ ಕಳೆಯಿತೆಂದು ತಿಳಿಸುತ್ತಾರೆ.

ನಾಮಕರಣ : ನಾಮಕರಣಕ್ಕೆ ಇಂಥದ್ದೇ ದಿನವೆಂದು ನಿಶ್ಚಯಿಸಿರುವುದಿಲ್ಲ. ೧೨ನೇ ದಿನಕ್ಕೆ ಸಾಮಾನ್ಯವಾಗಿ ನಾಮಕರಣ ಮಾಡುತ್ತಾರೆ. ನಾಮಕರಣವನ್ನು ಸೋದರ ಮಾವ ಅಥವಾ ಸೋದರತ್ತೆ ಮಾಡುತ್ತಾರೆ. ಇವರ ನಾಮಕರಣ ರೀತಿ ಮ್ಯಾಸ ನಾಯಕ, ಕಮ್ಮಾರರ ರೀತಿಯಲ್ಲಿ ನಡೆಯುತ್ತದೆ. "ಮ್ಯಾಸನಾಯಕರಲ್ಲಿ ಗುಗ್ಗರಿ ಶಾಸ್ತ್ರವು ನಾಮಕರಣದಲ್ಲಿ ಪ್ರಮುಖ ಸ್ಥಾನ ಪಡೆಯುತ್ತದೆ" (ರುದ್ರಕರಿಶೆಟ್ಟಿ:೧೯೯೨,ಪು.೧೫).

ಗಂಟಿಚೋರರಲ್ಲಿಯೂ ಗುಗ್ಗರ ಶಾಸ್ತ್ರವಿದೆ. ಅವರು ಹುರಳಿ ಗುಗ್ಗರಿ ಮಾಡಿ ಮಗುವಿನ ಪಕ್ಕದಲ್ಲಿ ಇರಿಸಿರುತ್ತಾರೆ, ಹೆಸರಿಡುವವರು ನೆಂಟರಿಂದ ತಪ್ಪಿಸಿಕೊಂಡು ಗುಗ್ಗರಿಯನ್ನು ಹೊರಗೆ ಒಯ್ಯಬೇಕು. ಅವರು ಹುರುಳಿ ಗುಗ್ಗರಿಯ ಹೂರಣವನ್ನು ಮಾಡಿ ಎಲ್ಲರಿಗೂ ತಿನ್ನಲು ಕೊಡುತ್ತಾರೆ.

ಜವಳ : ಗಂಟಿಚೋರರಲ್ಲಿ ಶೈವ ಬಣ ಮತ್ತು ವೈಷ್ಣವ ಬಣಗಳೆಂದು ಇವೆ. ಶೈವ ಬಣದವರು ಆಂಜನೇಯನ ಭಕ್ತರಾದರೆ ವೈಷ್ಣವರು ತಿರುಪತಿ ತಿಮ್ಮಪ್ಪನ ಭಕ್ತರು. ಸಾಮಾನ್ಯವಾಗಿ ತಮ್ಮ ಮಕ್ಕಳಿಗೆ ವರ್ಷ ತುಂಬುವುದರೊಳಗೆ ಮನೆ ಮುಂದೆ ತಿಮ್ಮಪ್ಪನ ಹೆಸರೇಳಿ ಅಥವಾ ಆಂಜನೇಯನ ಹೆಸರೇಳಿ ಹುಟ್ಟು ಕೂದಲನ್ನು ತೆಗೆಸಲಾಗುತ್ತದೆ. ಕೂದಲನ್ನು ತೆಗೆಯುವವರು ಮಾತ್ರ ಸೋದರ ಮಾವನವರಾಗಿರುತ್ತಾರೆ. ಸೋದರಮಾವ ಇರದಿದ್ದ ಪಕ್ಷದಲ್ಲಿ ವಾಂಥೆಯಲ್ಲಿ ಮಗುವಿಗೆ ಮಾವಂದಿರಾಗುವವರು ಜವಳದ ಕಾರ್ಯ ಮಾಡುತ್ತವೆ. ಜವಳ ತೆಗೆಯುವ ವ್ಯಕ್ತಿಗೆ ಹೊಸ ಬಟ್ಟೆ ಮತ್ತು ಎಲೆ, ಅಡಿಕೆ, ಒಂದು ಬಟ್ಟಲು ಕೊಬ್ಬರಿ ಗಿಟುಗ, ಒಂದು ಉತ್ಪತ್ತಿ ಮತ್ತು ಐದು ರೂಪಾಯಿಯನ್ನು ಕೊಡುತ್ತಾರೆ. ಆರ್ಥಿಕವಾಗಿ ಸುಧಾರಿಸಿದವರು

ಇನ್ನು ಹೆಚ್ಚಿನ ಹಣವನ್ನು ಕೊಡುವುದುಂಟು. ಅಂದು ಸಿಹಿ ಅಡುಗೆಯೊಂದಿಗೆ, ಮಧ್ಯ, ಮಾಂಸಗಳ ಉಪಯೋಗವೂ ಇರುತ್ತದೆ.

ಋತುಮತಿ : ಈ ಕಾರ್ಯವೂ ಸಹ ಹೆಚ್ಚು ಕಡಿಮೆ ಭೋವಿಗಳ ಆಚರಣೆಯನ್ನೇ ಹೋಲುತ್ತದೆ. "ಕಾಡುಗೊಲ್ಲರಲ್ಲಿ ಮೈನೆರೆದ ಹೆಣ್ಣನ್ನು ತಮ್ಮ ಹಳ್ಳಿಯಿಂದ ದೂರಕ್ಕೆ ಒಂದು ಪ್ರತ್ಯೇಕ ಗುಡಿಸಲನ್ನು ಹಾಕಿ ಸೂತಕ ಕಳೆಯುವವರೆಗೂ ಆ ಹೆಣ್ಣನ್ನು ಗುಡಿಸಿಲಿನಲ್ಲಿ ಇಡುತ್ತಾರೆ (ಶಂಕರನಾರಾಯಣ:೧೯೮೬,ಪು.೧೨೫). ಗಂಟಿ ಚೋರರಲ್ಲಿ ಪೂರ್ವದಲ್ಲೀ ಈ ರೀತಿ ಪ್ರತ್ಯೇಕವಾಗಿ ಗುಡಿಸಲು ಹಾಕುವ ಪದ್ಧತಿ ಇದ್ದಿತಾದರೂ ಇಂದು ಅದನ್ನು ಕೈಬಿಡಲಾಗಿದೆ. ಮೈನೆರೆದ ಹೆಣ್ಣನ್ನು ಮನೆಯ ಒಂದು ಮೂಲೆಗೆ ಕೂರಿಸುತ್ತಾರೆ. ಹುಡುಗಿ ಮೈನೆರದ ಐದು ದಿನದವರೆಗೂ ಹುಡುಗಿಗೆ ಮೈತೊಳೆಯುವುದಿಲ್ಲ. ಆದರೆ ಬಟ್ಟೆಯನ್ನು ಬದಲಿಸುತ್ತಿರುತ್ತಾರೆ. ಐದನೇ ದಿನ ತಾಯಿ ಅಥವಾ ಮನೆಯ ಹಿರಿಯ ಹೆಂಗಸು ಮುಟ್ಟು ನೀರನ್ನು ಎರೆಯುತ್ತಾಳೆ. ಅಂದು ಹುಡುಗಿಗೆ ಅರಿಷಿಣ ಹಚ್ಚಿ ಮೈತೊಳೆಯಲಾಗುತ್ತದೆ. ಹುಡುಗಿ ಮೈನೆರೆದ ಐದನೇ ದಿನಕ್ಕೆ ತಮ್ಮ ಮನೆ ದೇವರ ಹೆಸರಿನಲ್ಲಿ ಕೋಳಿ ಕೊಯ್ದು ಅಡುಗೆ ಮಾಡುತ್ತಾರೆ. ಅವರು ಬಂಧುಬಾಂದವರನ್ನು ಕೂಡಿಕೊಂಡು ಊಟ ಮಾಡುತ್ತಾರೆ.

ಮರಣ : ಪ್ರತಿಯೊಂದು ಕುಟುಂಬದಲ್ಲಿಯೂ "ಹುಟ್ಟು ಹೇಗೆ ಅನಿವಾರ್ಯವೋ ಸಾವು ಕೂಡ ಅಷ್ಟೇ ಅನಿವಾರ್ಯ. ಹುಟ್ಟು ಸಾವಿನ ಮಧ್ಯದ ಜೀವನವನ್ನು ನಿಯಂತ್ರಿಸುವ ಶಕ್ತಿ ಮನುಷ್ಯನಿಗಿದ್ದರೂ, ಹುಟ್ಟು ಸಾವುಗಳನ್ನು ಆತ ನಿಯಂತ್ರಿಸಲಾರ. ಆಧುನಿಕ ಜಗತ್ತಿನಲ್ಲಿ ಹುಟ್ಟನ್ನು ನಿಯಂತ್ರಿಸುವ ಅಲ್ಪ ಸಾಮರ್ಥ್ಯವನ್ನು ಮನುಷ್ಯ ಒಳಗಾಗಿದ್ದರೂ ಸಾವನ್ನು ಆತ ನಿಯಂತ್ರಿಸುವ ಹಂತಕ್ಕಿನ್ನೂ ತಲುಪಿಲ್ಲ (ಕುಮಾರ.ಆರ್.ಬಿ.,:೨೦೦೪,ಪು.೧೦೪).ಸಾವು ಮನುಷ್ಯ ಸಂಬಂಧಗಳ ಗಾಢತೆಯನ್ನು ನೆನಪಿಸುವ ಆ ಸಂಬಂಧಗಳನ್ನು ಸೇರಿಸುವ ಕ್ರಿಯೆಯಾದಂತೆಯೇ, ಸಂಬಂಧಗಳನ್ನು ಬೇರ್ಪಡಿಸುವ ಕ್ರಿಯಾ ವಿಧಿಯಾಗಿ ರೂಪುಗೊಂಡಿರುವುದನ್ನು ನಾವು ಕಾಣಬಹುದಾಗಿದೆ.

ಗಂಟಿಚೋರ ಸಮುದಾಯದ ವ್ಯಕ್ತಿ ಪ್ರಾಣ ಬಿಟ್ಟ ತಕ್ಷಣ ಮನೆ ಹೊರಭಾಗದಲ್ಲಿ ಕುಳ್ಳಿನಲ್ಲಿ ಬೆಂಕಿ ಮಾಡುತ್ತಾರೆ. ಬೋವಿಗಳಲ್ಲಿ ಹೆಣವನ್ನು ಹೂಳುವ ಸಂಪ್ರಾದಯವಿದ್ದರೆ ಗಂಟಿ ಚೋರರಲ್ಲಿ ಹೆಣವನ್ನು ಸುಡುತ್ತಾರೆ. ಪ್ರಾಯಶಃ ಇವರಲ್ಲಿಯೂ ಮೊದಲಿಗೆ ಹೆಣವನ್ನು ಹೂಳುವ ಪದ್ಧತಿಯಿದ್ದು ತರುವಾಯ ಸುಡುವ ಪದ್ಧತಿ ಬಳಕೆಗೆ ಬಂದಿರಬೇಕು.

ಚಿದಿಗೆ : ಎರಡು ಉದ್ದನೆಯ ಬಿದಿರು ಗಳಗಳನ್ನು ತೆಗೆದುಕೊಂಡು ಆ ಎರಡನ್ನು ಹೊಂದಿಸುವಂತೆ ನಾಲ್ಕು ಭಾಗಗಳಲ್ಲಿ ಅಡ್ಡ ಬಿದಿರಿನ್ನಿರಿಸಿ ಅವುಗಳನ್ನು ಕಟ್ಟಲಾಗುತ್ತದೆ. ಬಿದಿರನ್ನು ಕತ್ತರಿಯಾಕಾರದಲ್ಲಿರಿಸಿ ಕಟ್ಟುತ್ತಾರೆ. ಮೇಲೆ ಜೋಳದ ಸೊಪ್ಪೆಯನ್ನು ಹರಡುತ್ತಾರೆ. ಇತ್ತೀಚೆಗೆ ಜೋಳದ ಸೊಪ್ಪೆ ನಗರ ಪ್ರದೇಶದಲ್ಲಿ ಸಿಗದೇ ಇರುವುದರಿಂದ ಬಿದಿರನ್ನೇ ಸೀಳಿ ಎರಡು ಬಿದಿರುಗಳಿಗೆ ಮೊಳೆ ಹೊಡೆದು ಬಂಧಿಸುತ್ತಾರೆ.

ಸ್ಮಶಾನದವರೆಗೂ ಹೆಣವನ್ನು ಮೊದಲು ಯಾರು ಹೊತ್ತಿರುತ್ತಾರೆ, ಕೊನೆಯವರೆಗೂ ಅವರೇ ಹೋರಬೇಕೆಂಬ ನಿಯಮವಿದೆ. ಇಂದು ಸ್ಮಶಾನ ದೂರವಿರುವುದರಿಂದ ಹೆಣ ಸಾಗಿಸಲೆಂದೇ ಇರುವ ಮುಕ್ತಿಧಾಮದ ವಾಹನಗಳನ್ನು ಬಳಸಿಕೊಳ್ಳುತ್ತಾರೆ. ಚಟ್ಟದ ಮೇಲೆ ಬಿಳಿ ಬಟ್ಟೆಯನ್ನು ಹಾಸಿ ಅದರ ಮೇಲೆ ಹೆಣ ಮಲಗಿಸಿ ಮೇಲೆ ಹೊಸ ಬಿಳಿ ಬಟ್ಟೆಯನ್ನು ಹೊದಿಸಿ ಸೆಣಬಿನ ನಾರಿನಿಂದ ಹೆಣವನ್ನು ಚಟ್ಟಕ್ಕೆ ಬಿಗಿಯಾಗಿ ಕಟ್ಟಲಾಗುತ್ತದೆ. ಹೆಣದ ಮುಂಭಾಗದಲ್ಲಿ ಬೆಂಕಿ ಹಿಡಿದವನಿರುತ್ತಾನೆ.

ಇಸಬಾಯಿ ತೋಳೆಸುವುದು : ಸತ್ತ ವ್ಯಕ್ತಿಯ ನೆಂಟರು ಹೆಂಡ ಅಥವಾ ಇತರ ಮದ್ಯವನ್ನು ಸತ್ತ ವ್ಯಕ್ತಿಯ ಮನೆಯವರ ಬೊಗಸೆಗೆ ಸುರಿಯುತ್ತಾರೆ. ಬೊಗಸೆಯಲ್ಲಿರುವ ಹೆಂಡವನ್ನು ಬಾಯೊಳಗೆ ಹಾಕಿಕೊಂಡು ತರುವಾಯ ಬಾಯಿ ಮುಕ್ಕಳಿಸಿ ಹೊರ ಉಗುಳುತ್ತಾರೆ. ಈ ರೀತಿ ಮೂರು ಬಾರಿ ಮಾಡಿದ ತರುವಾಯ ನೆಂಟರು ಅವರಿಗೆ ಹೆಂಡ ಕುಡಿಸಿ ತಮ್ಮ ಮನೆಗಳಿಗೆ ತೆರಳುತ್ತಾರೆ.

ಮೂರು ದಿನ ಕಾರ್ಯ : ಹೆಚ್ಚು ಕಡಿಮೆ ಬೋವಿಗಳಂತೆ ಇವರೂ ಸಹ ಮೂರು ದಿವದ ಕಾರ್ಯ ಮಾಡುತ್ತಾರೆ. ಸತ್ತ ವ್ಯಕ್ತಿಗೆ ಏನೇನು ಇಷ್ಟವೆಂಬುದನ್ನು ಪಟ್ಟಿ ಮಾಡಿಕೊಂಡು ಆ ಎಲ್ಲಾ ಪದಾರ್ಥಗಳನ್ನು ಸ್ಮಶಾನಕ್ಕೆ ಒಯ್ಯುತ್ತಾರೆ. ಸ್ಮಶಾನದಲ್ಲಿ ಎಕ್ಕೆ ಎಲೆಯಲ್ಲಿ ಒಯ್ದು ಎಲ್ಲಾ ಪದಾರ್ಥಗಳನ್ನಿರಿಸಿ ಗುಟ್ಟೆಗೆ ನಮಸ್ಕರಿಸುತ್ತಾರೆ. ತರುವಾಯ ಸ್ಮಶಾನಕ್ಕೆ ಹೋದವರೆಲ್ಲಾ ದೂರ ಕುಳಿತುಕೊಳ್ಳುತ್ತಾರೆ. ಯಾವುದಾದರೂ ಪ್ರಾಣಿ ಅಥವಾ ಕಾಗೆ ಬಂದು ಮುಟ್ಟಿದರೆ ಸತ್ತವರು ಕಾಗೆಯಾಗಿ ಬಂದು ಆಹಾರವನ್ನು ಮುಟ್ಟಿದ, ನಾಯಿಯಾಗಿ ಬಂದು ಮುಟ್ಟಿದ, ದನವಾಗಿ ಬಂದು ಮಟ್ಟಿದ ಎಂದು ಭಾವಿಸುತ್ತಾರೆ. ತರುವಾಯ ತಮ್ಮ ಮನೆಗಳಿಗೆ ತೆರಳಿ ಊಟ ಮಾಡುತ್ತಾರೆ. ಬೆಳಿಗ್ಗೆ ಈ ಕಾರ್ಯ ಮಾಡಿದರೆ ಸಾಯಂಕಾಲ ಒಂದು ಕುರಿ ಕೊಯ್ದು ಅದನ್ನು ಅಡುಗೆ ಮಾಡಿ ಹೆಂಡ ಮತ್ತು ಮಾಂಸವನ್ನು ಸತ್ಯ ವ್ಯಕ್ತಿಗೆ ನೈವೇದ್ಯ ಮಾಡುತ್ತಾರೆ. ವ್ಯಕ್ತಿ ಮನೆಯಲ್ಲಿ ಸತ್ತಿದ್ದರೆ ಆ ಜಾಗದಲ್ಲಿ ತಂಬಿಗೆಯಲ್ಲಿ ನೀರು ತುಂಬಿ ಇರಿಸಿ ಹೊಸ ಬಟ್ಟೆಗಳನ್ನು ಅದರ ಹಿಂಭಾಗಕ್ಕೆ ಇಡುತ್ತಾರೆ. ಅದರ ಮುಂದೆ ಎರಡು ದೀಪಗಳನ್ನು ಹಚ್ಚಿಟ್ಟಿರುತ್ತಾರೆ ಹಾಗೂ ಮಣೆಯೊಂದನ್ನು ಹಾಕಿ ಅದರ ಮೇಲೆ ಮಾಂಸ, ಅನ್ನ, ಮುದ್ದೆ, ಹೆಂಡ ಮುಂತಾದವುಗಳನ್ನು ನೈವೇದ್ಯವಾಗಿರಿಸುತ್ತಾರೆ. ಮೊದಲಿಗೆ ಮನೆಯ ಹಿರಿಯ ಮಗ ಲೋಬಾನ ಹಾಕಿದ ಮೇಲೆ ಇತರರೆಲ್ಲಾ ಲೋಬಾನ ಹಾಕುತ್ತಾರೆ. ತರುವಾಯ ಮದ್ಯ ಮತ್ತು ಮಾಂಸವನ್ನು ಸೇರಿದ ಬಂಧುಬಾಂಧವರೆಲ್ಲಾ ಸೇವಿಸುತ್ತಾರೆ.

೧೧ ದಿನದ ಕಾರ್ಯ : ಮೊದಲಿಗೆ ೧೦ ದಿನದ ಕಾರ್ಯ ಮಾಡುತ್ತಿದ್ದದ್ದು ತಿಳಿದು ಬರುತ್ತದೆ. ಆದರೆ ಇತ್ತೀಚೆಗೆ ೧೦ ದಿನದ ಕಾರ್ಯವನ್ನು ಮೂರನೇ ದಿನಕ್ಕೆ ಮುಗಿಸುತ್ತಾರೆ. "The Ganti chores cremate their dead and dispose off the mortal remains in flowing water. Mortuary rituals are performed an the 10th day" (Nanduram:2007 ,pp.239)

ಅವಿವಾಹಿತ ಗಂಡು ಅಥವಾ ಹೆಣ್ಣು ಸತ್ತರೆ ಸ್ಮಶಾನದಲ್ಲಿ ಆ ಸತ್ತ ವ್ಯಕ್ತಿಯ ತಲೆ ಪಶ್ಚಿಮದಲ್ಲಿರುವಂತೆ ಹೂಳಲಾಗುತ್ತದೆ. ಅವಿವಾಹಿತ ಹುಡುಗಿ ಸತ್ತರೆ ಅವಳಿಗೆ ಹಸಿರು ಸೀರೆಯನ್ನು ಹೊದಿಸುತ್ತಾರೆ ಮತ್ತು

ಸುಗಂಧ ದ್ರವ್ಯಗಳ ಲೇಪನ ಮಾಡಲಾಗುತ್ತದೆ. ಮೂರನೇ ದಿನಕ್ಕೆ ಸುಟ್ಟ ಬೂದಿ ಮತ್ತು ಎಲುಬುಗಳನ್ನು ಒಂದು ಹೊಸ ಮಡಿಕೆಯಲ್ಲಿ ಹಾಕಿಕೊಂಡು ಹರಿಯುವ (ನೀರಿಗೆ) ನದಿಗೆ ಆ ಮಡಿಕೆಯನ್ನು ತೇಲಿ ಬಿಡುತ್ತಾರೆ. ೧೦ನೇ ದಿನಕ್ಕೆ ದಿವಸ ಕಾರ್ಯಗಳನ್ನು ಮಾಡಿಕೊಳ್ಳುತ್ತಾರೆ ಮತ್ತು ಮರಣ ಹೊಂದಿದವರನ್ನು ಆಹ್ವಾನಿಸುತ್ತಾರೆ. ಅವನಿಗೆ ಹಿರಿಯನಾದವರು ತನ್ನ ಕೂದಲನ್ನು ಬೋಳಿಸಿಕೊಂಡು ತಟ್ಟೆಯೊಂದರಲ್ಲಿ ಇರಿಸುತ್ತಾನೆ. ದಿವಸ ಕಾರ್ಯವೆಲ್ಲಾ ತೀರಿದ ತರುವಾಯ ಆ ಕೂದಲನ್ನು ನೀರಿಗೆ ಹರಿ ಬಿಡಲಾಗುತ್ತದೆ. ಮೂರನೇ ದಿನ ಅದರೊಂದಿಗೆ ಅನ್ನ ಮತ್ತು ಬೇಯಿಸಿದ ಕೋಳಿಯನ್ನು ಎಕ್ಕೆ ಎಲೆಯೊಳಗೆ ಇರಿಸಿ ಸತ್ತವನ ಗುಟ್ಟೆಯ ಮುಂಭಾಗದಲ್ಲಿ ಇರಿಸಲಾಗುತ್ತದೆ. ಅದನ್ನು ಕಾಗೆ ತಿನ್ನುತ್ತದೆ. ಈ ಎಲ್ಲಾ ಕೆಲಸವನ್ನು ಕುಲದ ಹಿರಿಯ ನಡೆಸಿಕೊಡುತ್ತಾನೆ. ಕಾಗೆ ಕೂಳನ್ನು ಮುಟ್ಟುವವರೆಗೂ ಯಾರೂ ಊಟ ಮಾಡುವುದಿಲ್ಲ. ತರುವಾಯ ಏರ್ಷಾಚರಣೆ ಮಾಡಲಾಗುತ್ತದೆ (Sing KS:2003,pp. 495).

ಆದರೆ ಇಂದು ಹತ್ತನೇ ದಿನದ ಮತ್ತು ಹನ್ನೊಂದನೇ ದಿನ ಕಾರ್ಯಗಳನ್ನೆಲ್ಲಾ ಮೂರನೇ ದಿನಕ್ಕೆ ಪೂರೈಸಲಾಗುತ್ತದೆ. ಬಿಜಾಪುರ ಮುಂತಾದ ಸೆಟ್ಲಮೆಂಟ್‌ಗಳಲ್ಲಿ ಈ ಹಳೆಯ ಆಚರಣೆ ಇಂದಿಗೂ ಜೀವಂತವಾಗಿ ಉಳಿದುಕೊಂಡು ಬಂದಿವೆ.

ನ್ಯಾಯಪದ್ಧತಿ

ಗಂಟಿಚೋರ ಸಮುದಾಯದಲ್ಲಿ ಯಾರೇ ಆಗಲಿ ತಪ್ಪು ಮಾಡಿದಲ್ಲಿ ಅವನಿಗೆ ಕುಲಪಂಚಾಯ್ತಿಯಲ್ಲಿ ಶಿಕ್ಷೆ ವಿಧಿಸಲಾಗುತ್ತದೆ.

* ಹೆಣ್ಣು ಪರ ಪುರುಷನೊಂದಿಗೆ ಅನೈತಿಕ ಸಂಬಂಧವಿರಿಸಿಕೊಂಡರೆ,
* ಅನ್ಯ ಜಾತಿಯ ಹೆಣ್ಣನ್ನು ವಿವಾಹವಾಗಿ ಅವಳನ್ನು ಜಾತಿಗೆ ಸೇರಿಸಿಕೊಳ್ಳದಿದ್ದರೆ,
* ಚಪ್ಪಲಿಯಲ್ಲಿ ಹೊಡೆದಾಡಿಕೊಂಡರೆ, ಹಿರಿಯರಿಗೆ ಅವಾಚ್ಯ ಶಬ್ದದಿಂದ ಬೈದರೆ,
* ಜಾತಿಗೆ ಅವಮಾನವಾಗುವ ರೀತಿಯ ಯಾವುದೇ ಕೆಟ್ಟ ಕೆಲಸದಲ್ಲಿ ತೊಡಗಿದ್ದರೆ, ಅಂಥವರಿಗೆ 'ಕಟ್ಟಿಮನಿ'ಯಲ್ಲಿ ಕುಲಪಂಚಾಯ್ತಿ ಸೇರಿಸಿ ತಪ್ಪು ದಂಡ ಹಾಕಲಾಗುತ್ತದೆ. ಮತ್ತು ಕೆಲವೊಂದು ಶಿಕ್ಷೆ ವಿಧಿಸಲಾಗುತ್ತದೆ.
* ಅನ್ಯ ಮೇಲ್ಜಾತಿಯ ಜನರು ಆ ಜಾತಿಗೆ ಸುಲಭವಾಗಿ ಸೇರಬಹುದು. ಆದರೆ ಜಾತಿಗೆ ಸೇರುವ ಪೂರ್ವದಲ್ಲಿ ಜಾತಿಯ ಎಲ್ಲಾ ನಿಯಮಗಳಿಗೆ ಬದ್ಧವಾಗಿರುವುದಾಗಿ ಆ ವ್ಯಕ್ತಿ ತಿಳಿಸಬೇಕು.
* ಕದ್ದು ಬಸಿರೆಯರಾದ ಜನ ಹುಟ್ಟಿದ ಕೂಸನ್ನು ಇವರಿಗೆ ದಾನವಾಗಿ ಕೊಡುವುದುಂಟು ಮತ್ತು ಹೆರಿಗೆಯಾಗುವವರೆಗೂ ಇವರ ಮನೆಯಲ್ಲಿ ನೆಲೆಸುವುದುಂಟು. ಈ ರೀತಿ ಅನ್ಯ ಜಾತಿಯ ಹೆಂಗಸನ್ನು ತನ್ನ ಮನೆಯಲ್ಲಿ ನೆಲೆ ಕಲ್ಪಿಸಿದರೆ ಅದಕ್ಕೆ ಜಾತಿಯ ಹಿರಿಯನ ಪರವಾನಿಗೆ ಪಡೆಯಬೇಕು. ಅಕಸ್ಮಾತ್ ಪರಮಾನಿಗೆ ಪಡೆಯದಿದ್ದಲ್ಲಿ ಅಂಥವರಿಗೆ ದಂಡವನ್ನು ಹಾಕಲಾಗುತ್ತದೆ.

* ಅನ್ಯಜಾತಿಯವರು ಗಂಟಿಚೋರ ಜಾತಿಗೆ ಸೇರಬೇಕಾದಾಗ ಅವರಿಗೆ ಸ್ನಾನ ಮಾಡಿಸಿ ಬೇವಿನಕಡ್ಡಿಯಿಂದ ನಾಲಿಗೆ ಸುಟ್ಟು ಶುದ್ಧಗೊಳಿಸಿಕೊಂಡ ನಂತರ ಅವರನ್ನು ಜಾತಿಯೊಳಗೆ ಸೇರಿಸಿಕೊಳ್ಳಲಾಗುತ್ತದೆ. ಆದರೆ ಇಲ್ಲಿ ಗಮನಿಸಬೇಕಾದ ಅಂಶವೊಂದಿದೆ. ತಮಗಿಂತ ಮೇಲ್ಜಾತಿಯವರು ಮಾತ್ರ ಈ ಜಾತಿಗೆ ಸೇರ್ಪಡೆಗೊಳ್ಳಬಹುದು. ತಮಗಿಂತ ಕೆಳಜಾತಿಗಳಾದ ಮಾದಿಗ, ಮಾಲ, ಡಕ್ಕಲ ಮುಂತಾದ ಜಾತಿಗಳನ್ನು ಇವರು ತಮ್ಮೊಂದಿಗೆ ಸೇರಿಸಿಕೊಳ್ಳುವುದಿಲ್ಲ. ಆಕಸ್ಮಾತ್ ತಮಗಿಂತ ಶ್ರೇಣೀಕರಣದಲ್ಲಿ ಕೆಳಜಾತಿಯವನು ದೈವಕ್ಕೆ ತಿಳಿಯದಂತೆ ಜಾತಿಯೊಳಗೆ ಸೇರಿಕೊಂಡರೆ, ಸೇರಿಸಿಕೊಂಡಾತನಿಗೆ ಕುಲ ಪಂಚಾಯ್ತಿ ಸೇರಿ ಜಾತಿ ಭ್ರಷ್ಟರನ್ನಾಗಿಸುತ್ತಾರೆ. ಹಾಗೇ ಕೆಳಜಾತಿಯವನಾಗಿದ್ದು ತಿಳಿಯದೆ ಈ ಜಾತಿಗೆ ಸೇರಿಕೊಂಡವನಿಗೆ ಚಾಟಿ ಏಟುಗಳನ್ನು ನೀಡಲಾಗುತ್ತದೆ ಮತ್ತು ಅವನನ್ನು ತಮ್ಮ ನೆಲೆಯಿಂದ ದೂರಕ್ಕೆ ಓಡಿಸಲಾಗುತ್ತದೆ. ಗಂಡ ಹೆಂಡಿರನ್ನು ಒಗ್ಗೂಡಿಸುವುದು ಮತ್ತು ಅವರನ್ನು ಅವರ ಇಷ್ಟದ ಪ್ರಕಾರ ಬೇರೆ ಬೇರೆಯಾಗಿಸುವುದು ಇವರ ಕರ್ತವ್ಯವಾಗಿದೆ.

ಗಂಟಿಚೋರರು ಪ್ರತಿ ಸೆಟ್ಲಮೆಂಟನ್ನು ಒಂದು ಕಟ್ಟಿಮನಿ ಎಂದು ಗುರುತಿಸಿಕೊಳ್ಳುತ್ತಾರೆ. ಈ ಕಟ್ಟಿಮನೆಗೆ ಅದೇ ಜಾತಿಯ ಒಬ್ಬ ಯಜಮಾನನಿದ್ದು ಅವನನ್ನು ಗೌಡ, ಪಾಟೀಲ ಎಂದು ಕರೆಯುತ್ತಾರೆ. ನಂದೂರಾಮ್‌ರವರು ಗುರುತಿಸುವಂತೆ Their headmen are known as Jalwar, patel and kattimani,. These headmen preside over in all community meetings and deal with offences like adultury. Property disputes. etc. (ನಂದೂರಾಮ್:೨೦೦೭, ಪು.೨೪೧). ಇವನ ನಂತರದ ಸ್ಥಾನ ತಲಮಾಡ, ನಂತರ ಪಂಚರು, ಕೊನೆಗೆ ಇವರಲ್ಲಿಯೇ ಒಬ್ಬ ತಳವಾರನಿರುತ್ತಾನೆ. ಸಾಮಾನ್ಯವಾಗಿ ಪ್ರತಿಯೊಂದು ವಿಷಯಗಳು ಈ ಕಟ್ಟಿಮನೆಯಲ್ಲಿಯೇ ಇತ್ಯರ್ಥವಾಗುವವು. ಆಕಸ್ಮಾತ್ ಕಟ್ಟಿಮನೆಯ ಪಂಚಾಯ್ತಿಯನ್ನು ಮೀರಿದರೆ ಅಥವಾ ಮೀರುವಷ್ಟು ಘನಘೋರವಾದ ತಪ್ಪು ನಡೆದಿದ್ದರೆ, ಸೆಟ್ಲಮೆಂಟಿನ ಎಲ್ಲಾ ಜಾತಿಯವರು ಸೇರಿಕೊಂಡು ರಚಿಸಿಕೊಂಡಿರುವ ಸರ್ವೋದಯ ಪಂಚಾಯ್ತಿ ಸಭಾದೊಳಗೆ ತೀರ್ಮಾನಗಳನ್ನು ಕೈಗೊಳ್ಳಲಾಗುತ್ತದೆ. ಈ ಸರ್ವೋದಯ ಪಂಚಾಯ್ತಿ ಸಭಾವು ಸೆಟ್ಲಮೆಂಟಿನಲ್ಲಿ ಎಲ್ಲಾ ಜಾತಿಯ ಹಿರಿಯ ವ್ಯಕ್ತಿಗಳು ಪಂಚರಾಗಿ ಕಾರ್ಯ ನಿರ್ವಹಿಸುತ್ತಾರೆ. ತಮ್ಮದೇ ಕುಲ ಪಂಚಾಯ್ತಿಯಲ್ಲಿ ಶಿಕ್ಷೆಯಾದರೆ ದೊರೆತ ತಪ್ಪು ದಂಡವನ್ನು ಕುಲದ ದೈವಕ್ಕೆ ಸೇರಿಸಲಾಗುತ್ತದೆ.

ಸರ್ವೋದಯ ಸಭಾ ತಪ್ಪು ದಂಡ ಹಾಕಿದರೆ ಆ ಹಣವನ್ನು ಸೆಟ್ಲಮೆಂಟಿನ ಒಳ್ಳೆಯ ಕಾರ್ಯಗಳಿಗಾಗಿ ಬಳಸಿಕೊಳ್ಳಲಾಗುತ್ತದೆ.

ಧಾರ್ಮಿಕ ವಿಧಿ ಆಚರಣೆಗಳು

ಗಂಟಿಚೋರರು ಎಲ್ಲಾ ಹಿಂದೂ ಹಬ್ಬಗಳನ್ನು ಆಚರಿಸುತ್ತಾರೆ ಮತ್ತು ಎಲ್ಲಾ ಹಿಂದೂ ದೈವಗಳನ್ನು ಹಾಗೂ ಕ್ಷುದ್ರ ದೈವಗಳನ್ನು ಆರಾಧಿಸುತ್ತಾರೆ. ಮಾತೃದೈವಾರಾಧಕರಾದ ಗಂಟಿ ಚೋರರು ಎಲ್ಲಮ್ಮ, ಡೊಣೆಯಮ್ಮ, ಅಂಬಾಬಾಯಿ, ರೇಣುಕ, ಹುಲಿಗೆಮ್ಮ, ಮುಂತಾದ ದೈವಗಳನ್ನು ಆರಾಧಿಸುತ್ತಾರೆ. ಇವರಲ್ಲಿ ಕೆಲವರು ದೇವರು ಕಟ್ಟಿಕೊಳ್ಳುತ್ತಾರೆ. ಆದರೆ ದೇವದಾಸಿಯರಾಗಿ ಕಾರ್ಯನಿರ್ವಹಿಸುವುದಿಲ್ಲ.

ಇವರು ನಿರಂತರವಾಗಿ ವರ್ಷಕ್ಕೊಮ್ಮೆಯಾದರೂ ಸೌದತ್ತಿ ಎಲ್ಲಮ್ಮ ಮತ್ತು ತುಳುಜಾ ಭವಾನಿಗೆ ಹೋಗಿ ಬರುತ್ತಾರೆ. ಯುಗಾದಿ, ದೀಪಾವಳಿ, ದಸರಾ, ಗಣೇಶ ಚತುರ್ಥಿ, ಮುಂತಾದ ಹಬ್ಬಗಳನ್ನು ಆಚರಿಸುತ್ತಾರೆ. ಇವರಿಗೆ ಅತೀ ದೊಡ್ಡ ಹಬ್ಬವೆಂದರೆ ಯುಗಾದಿ ಎಂದು ತಿಳಿಸುತ್ತಾರೆ. ಯುಗಾದಿ ಪಾಡ್ಯದ ದಿನ ಗಂಟಿ ಚೋರ ಸಮಾಜದ ಪ್ರತಿಯೊಂದು ಮನೆಯವರು ಒಂದು ಮರಿಯನ್ನು (ಕುರಿ ಮರಿ) ಕೊಯ್ದು ದೇವರಿಗೆ ನೈವೇದ್ಯ ಮಾಡುತ್ತಾರೆ. ಅಂದು ಹಿರಿಯರ ಹಬ್ಬವನ್ನು ಮಾಡುತ್ತಾರೆ. ಸಾಮಾನ್ಯವಾಗಿ ವ್ಯಕ್ತಿ ಸತ್ತರೆ ವರ್ಷದೊಳಗೆ ವ್ಯಕ್ತಿಯ ಮುಖವನ್ನು ಮಾಡಿಸಿ ಪೆಟಾರಿಯಲ್ಲಿ ಇರಿಸಿರುತ್ತಾರೆ. ವರ್ಷಕ್ಕೊಮ್ಮೆ ಪೆಟಾರಿ ತೆಗೆದು ಎಲ್ಲಾ ಹಿರಿಯರ ಮುಖಗಳನ್ನು ತೊಳೆದು ಅಂದು ಪೂಜಿಸಲಾಗುತ್ತದೆ. ಇದನ್ನು ನಿರಂತರವಾಗಿ ವರ್ಷಕ್ಕೊಮ್ಮೆ ಆಚರಿಸುತ್ತಾರೆ.

ಕೆಲವು ಕಡೆ ಹೋಳಿ ಹಬ್ಬವನ್ನು ಈ ಸಮುದಾಯದವರು ತುಂಬಾ ವಿಜೃಂಭಣೆಯಿಂದ ಮಾಡುತ್ತಾರೆ. ನಿಜಾಂ ಆಡಳಿತ ಸಂದರ್ಭದಲ್ಲಿ ಇಸ್ಲಾಂ ಧರ್ಮಕ್ಕೆ ಹೋಗಿರುವುದು ಕಂಡು ಬರುತ್ತದೆ. ಹಾಗೇ ಕೆಲವರು (ಬೆಳಗಾವಿ ಜಿಲ್ಲೆ) ಕ್ರಿಸ್ತ ಧರ್ಮಕ್ಕೂ ಮತಾಂತರಗೊಂಡಿದ್ದಾರೆ. ಇದನ್ನು ಸಿಂಗ್‌ರವರೂ ಸಹ ತಮ್ಮ ಕೃತಿಯಲ್ಲಿ ತಿಳಿಸಿದ್ದಾರೆ. ಆದರೆ ಇಸ್ಲಾಮ ಮತ್ತು ಕ್ರಿಶ್ಚಿಯನ್ ಧರ್ಮಕ್ಕೆ ಹೋದ ಗಂಟಿಚೋರರು ತಮ್ಮ ಮೂಲ ಬುಡಕಟ್ಟು ದೈವಗಳನ್ನು ದೂರ ಮಾಡಿಲ್ಲ. ಅವರು ಇಂದಿಗೂ ಆಯಾ ಧರ್ಮಗಳನ್ನು ಪರಿಪಾಲನೆ ಮಾಡುವುದರೊಂದಿಗೆ ತಮ್ಮ ಮೂಲ ಬುಡಕಟ್ಟು ಧರ್ಮವನ್ನು ಪರಿಪಾಲನೆ ಮಾಡುತ್ತಾರೆ. ಹಾಗೇ ತಾವು ಅನ್ಯಮತಕ್ಕೆ ಮತಾಂತರಗೊಂಡರೂ ಇಂದಿಗೂ ಗಂಟಿ ಚೋರ ಮನೆಗಳಿಗೆ ತಮ್ಮ ಹೆಣ್ಣನ್ನು ಕೊಡುತ್ತಾರೆ ಮತ್ತು ಗಂಟಿ ಚೋರ ಮನೆಯ ಹೆಣ್ಣುಗಳನ್ನು ಮದುವೆ ಮಾಡಿಕೊಳ್ಳುತ್ತಾರೆ.

೩. ಕೊರಮ

ಕೊರಮ ಪದದ ಔಚಿತ್ಯ : ಕೊರಮ ಎನ್ನುವುದು ಜಾತಿ ಸೂಚಕವಾದ ಪದವಾಗಿದೆ. ಕರ್ನಾಟಕದಲ್ಲಿ ಕೊರಮರನ್ನು ಕೊರಮ, ಕೊರಮಶೆಟ್ಟಿ, ಕೋತಿ ಕೊರಮರು, ಭಜಂತ್ರಿ ಕೊರಚ, ಕೊರವ, ಕುಂಚಿ ಕೊರಮರು, ಕುರುವನ್, ಕೇಪ್‌ಮಾರಿಸ್, ವಾಜಂತ್ರಿ ಎಂದೆಲ್ಲ ಗುರುತಿಸಿದರೆ, ಹೆಣ್ಣು ಮಕ್ಕಳನ್ನು ಕೊರವಿ, ಕೊರಮಿ, ಕೊರವಂಜಿ ಮುಂತಾದ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಹಾಗೆ ಇವರನ್ನು ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಗುರುತಿಸುತ್ತಾರೆ. ಆದರೂ ಅವರು ಅಳವಡಿಸಕೊಂಡಿರುವ ವೃತ್ತಿಗಳಿಗನುಗುಣವಾಗಿ ಹಗ್ಗ ಮಾಡುವವರನ್ನು ಹಗ್ಗದ ಕೊರಚರು, ಎತ್ತುಗಳ ವ್ಯಾಪಾರ ಮಾಡುವವರನ್ನು ಎತ್ತಿನಕೊರಚರು, ಕೋತಿ ಆಡಿಸುವವರನ್ನು ಕೋತಿ ಕೊರಮರು, ಶಹನಾಯಿ ನುಡಿಸುವವರನ್ನು ಭಜಂತ್ರಿ, ವಾಜಂತ್ರಿ ಕುಕ್ಕೆ ಹೆಣೆಯು ವವರನ್ನು ಕುಕ್ಕೆ ಕೊರಮರು, ವಾಲಗ ಊದುವರನ್ನು ವಾಲಗದ ಕೊರಮರು, ಉಪ್ಪು ಮಾರುವವರನ್ನು ಉಪ್ಪು ಕೊರಮರು, ಕಳ್ಳತನ, ರಸ್ತೆ ದರೋಡೆ ಮಾಡುತ್ತಿದ್ದವರನ್ನು ಕಳ್ಳ ಕರೊಚರು, ಬ್ಯಾರಗಾಯಿ ಕೊರಮರು, ಹಾವು ಆಡಿಸುವವರನ್ನು ಹಾವಿನ ಕೊರಮರು(ಮಾನ್ವಡೆ ಬಿ ಮಲ್ಲಿಕಾರ್ಜುನ:೨೦೦೮,ಪು.೫-೬) ಮುಂತಾಗಿ ಗುರುತಿಸಲಾಗುತ್ತದೆ.

ಕರ್ನಾಟಕದಲ್ಲಷ್ಟೇ ಅಲ್ಲದೆ ಬೇರೆ ಬೇರೆ ರಾಜ್ಯಗಳಲ್ಲಿ ಕೊರಮರಿಗೆ ಇರುವ ಇತರೆ ಹೆಸರುಗಳನ್ನು ವಿವಿಧ ವಿದ್ವಾಂಸರು ದಾಖಲಿಸಿರುವುದು ಈ ಕೆಳಗಿನಂತೆ ಕಾಣಬಹುದಾಗಿದೆ.

ಎಂ ಪಾಮೂರಾವ್ ಬೆಲ್ ಪೋರ್, ವಿಸ್ಸನ್, ಒಪರ್ಟ್, ಪ್ರಾನ್ಸಿಸ್ ಮತ್ತು ತಿರುಚುನಾಪಳ್ಳಿಯ ಗೆಝೆಟಿಯರ್‌ಗಳಲ್ಲಿ ಉಲ್ಲೇಖಿಸಿರುವಂತೆ ಅಗಂಬಡಿಯರ್–ವೆಲ್ಲಾಲಸ್, ಪಿಲ್ಲಿ, ಪಲ್ಲಿ, ಕರವಾಯ್, ಇಂಡಿಯನ್ ರೆಡ್ಡಿ, ಕೆಪ್‌ಮಾರಿ ಕೊರವರ್, ಸೆರುಯಿಕರ್ಸ್, ಕೊರವ ಪೂಜಾರಿಸ್, ಎರುಕುಲವಂದಾಲು, ಕುಲವಂದಾಲು, ಕುಲವಾರು, ಎರಕವಾರು, ಎರಕಲವಾರು, ಕುಂಚಿಕೊರವ, ಎರಕಲವಾಡಲು,ಕುರ್ರಿವನ್ಲೊ ಕುರುವನ್, ಪಾಮುಲಚರಮರ್ರ್ಸ, ಪುಸಲವಾಡು, ಉತಲವಾಡು, ವನ್ನಿಯನ್ಸ್, ವಾಲ್ಲಸ್ ಕೊರವರ್, ಉಯ್ಯಾಲೂಕುವಾಸ್, ಭಜಂತ್ರಿ ಅಥವಾ ಸೊನಾಯಿ ಕೊರವರು, ಕೊಲ್ಲ, ಸೋಲಿ ಕೊರವಾಸ್, ಎರ್ಕಬೋಗವಾರು, ಥೆವಿಡಿಯ ಮುಂತಾದ ಹೆಸರುಗಳನ್ನು ಥರ್ಸ್‌ಟನ್ ಅವರು ಉದಾಹರಿಸಿದ್ದಾರೆ.

ಕೊರವರಿಗೆ ಕೊರಚ ಅಥವಾ ಕೊರ್ಚ ಎಂದು ಕರೆಯುತ್ತಾರೆ. ಇನ್ನೂ ಕೆಲವೆಡೆ ಕುಶ್ರಿ ಎಂದು ಕರೆಯುತ್ತಾರೆ. ಇದು ಕೊರ್ಚ ಎಂಬ ಪದದಿಂದ ಬಂದಿರಬಹುದು. ಹಿಂದುಸ್ತಾನಿಯ ಕೊರಿ>ಕೊರಿನಿಗ>ಕೋರ್ಚ>ಕೊರಚ ಎಂದಾಗಿರಬೇಕು. ಉತ್ತರ ಕನ್ನಡ ಜಿಲ್ಲೆಯಲ್ಲಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕೊರವ ಎಂಬ ಶಬ್ದ ಬದಲಾವಣೆ ಹೊಂದಿ ಕೊರ್ಚ ಎಂದು ಕರೆಯುತ್ತಾರೆ. ಕೊರವ ಎಂಬುದನ್ನು ಕೊರ್ಚ ಎಂಬ ಶಬ್ದದಿಂದ ಕರೆಯುವುದು ರೂಢಿಗೆ ಬಂದಿದೆ. ಈ ಕೊರ್ಚ ಪದವೇ ಮುಂದೆ ಕಾಲಾಂತರದಲ್ಲಿ ಬದಲಾವಣೆ ಹೊಂದಿ ಕೊರವ ಎಂದಾಗಿರಬೇಕು. ಥರ್ಸ್‌ಟನ್‌ರವರು ಕೊರಚ ಎಂಬುದು ಕೊರವ ಎಂಬುದರ ನಂತರ ಬಂದ ಜಾತಿ ವಾಚಕ ಪದವಾಗಿದೆ ಎನ್ನುತ್ತಾರೆ. ಕೊರಚ ಎಂಬುದರ ಮುಂದುವರೆದ ರೂಪ ಕೊರವ ಪದವಾಗಿದೆ.

ಕೊರಮ ಎಂಬುದು ಜಾತಿ ಸೂಚಕವಾದ ಪದ. ಕೊರವಂಜಿ ಶಬ್ದ ಪ್ರಮುಖ ದ್ರಾವಿಡ ಭಾಷೆಗಳಲ್ಲಿ ಕಂಡುಬರುತ್ತದೆ. ತಮಿಳಿನ ಪುಲ್ಲಿಂಗ ರೂಪ ಕುರವನ್ ಎಂದಾದರೆ ಕುರುತ್ತಿ, ಕುರವಿ, ಕುರವಂಚಿ(ಜಿ) ಎಂಬ ಹಲವಾರು ಸ್ತ್ರೀರೂಪಗಳಿವೆ. ಇದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಕೊರವಂಜಿ, ಕೊರವತಿ, ಕೊರವಿತಿ, ತೆಲುಗಿನಲ್ಲಿ ಕೊರವತ, ಕೊರವಂಜಿ ಮುಂತಾದ ರೂಪಗಳು ಪ್ರಯೋಗದಲ್ಲಿವೆ. ಪುಲ್ಲಿಂಗ ಮತ್ತು ಸ್ತ್ರೀಲಿಂಗ ರೂಪ ಕು ದಿಂದ ಕುರುವ, ಕೊರಮ ರೂಪುಗೊಂಡಿರಬಹುದು. ಹೀಗೆ ಇದನ್ನು ಅರ್ಥೈಸಬಹುದು. ಪುಲ್ಲಿಂಗ ರೂಪ ಕು>ಕುರ>ಕುರು>ಕುರುಣಿಗ> ಕುರುವ>ಕೊರವ> ಕೊರವನ್> ಕೊರವು>ಕೊರಚ ಎಂದಾದರೆ ಸ್ತ್ರೀಲಿಂಗರೂಪ ಕು>ಕುರ>ಕುರು> ಕುರವಿ> – ಕೊರವಿ>ಕೊರವತ>ಕೊರವಿತಿ>ಕುರಂಜಿ>ಕೊರಮಿ>

ಕೊರವಂಚಿ> ಕೊರವಂಜಿ ಎಂದು ಕಾಲದಿಂದ ಕಾಲಕ್ಕೆ ರೂಪಾಂತರಗೊಂಡಿದೆ ಎಂಬುದು ತಿಳಿಯುತ್ತದೆ.

ರೆವರೆಂಡ ಕಿಟಲ್ಲರ ಶಬ್ದಕೋಶದಲ್ಲಿ ಕೊರಚ ಪದಕ್ಕೆ A thievish wondering hill tribe that sell worden combs....etc, Aj":j"‰ an upbrading man, a blomer, a scorner a babbler

ಎಂತಲೂ, ಕೊರಚು ಪದಕ್ಕೆ to divine to babble ಎಂದೂ ಹಾಗೂ ಕೊರಚಾಡು ಪದಕ್ಕೆ to use words that reveals Secretsvulnorable points or touchy quarters" ಎಂಬ ವಿವರಣೆ ದೊರೆಯುತ್ತದೆ. (Kitller's Kannada-English dictionary Vol.II, p.521)

ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಲ್ಲಿ ಬಾಚಣಿಕೆ ಮೊದಲಾದ ಸಾಮಾನು ಗಳನ್ನು ಮಾರುತ್ತಾ, ಊರೂರು ಅಲೆಯುವ ಗುಡ್ಡಗಾಡು ಜನ ಕೊರಚರು, ಇವರಲ್ಲಿ ಬೀಡ ಕೊರಚರು, ಡಬಳೇ ಕೊರಚರು ಎಂಬ ಗುಂಪುಗಳು ಇವೆ ಎಂಬ ವಿವರಣೆ ಕಂಡುಬರುತ್ತದೆ. ಜೊತೆಗೆ ಕುರುವ ಪದಕ್ಕೆ ದಿಬ್ಬ, ಗುಡ್ಡ, ದಿಣ್ಣೆ ಎಂತಲೂ ಕುರುವ ಪದಕ್ಕೆ ನಡುಗಡ್ಡೆ, ಕುಕ್ಕೆ, ಬುಟ್ಟಿ ಎಂತಲೂ ಕುರುಚ್ಚು ಪದಕ್ಕೆ ಕುರುಚುಕಾಡು ಕುರು ಚಲು ಕಾಡು, ಚಿಕ್ಕಕಾಡು ಎಂದೂ ಅರ್ಥವಿದೆ.

ದ್ರಾವಿಡಿಯನ್ ಎಟಮಲಾಜಿಕಲ್ ಡಿಕ್ಸನರಿ (ಡಿ.ಇ.ಡಿ) ನಂಬರ್ ೧೫೩೦ – Kuram Kurava tribe, palmistry as practised by Kurava women; Kuravanm man of a caste of flowers, snake - catchers, basket - makers, and fortune - tellers; fem. Kuratti, Kuravi, Kuravanei, Kuravanar, the Kurava tribe of the mountai, Kurunci, hilly trac, Kuricci village, in the hilly tract; .....Ma: Kuruvan wandering tribe of basket - makers, snake - catch - ers, and Gipsies, Kurucci hill country, ...Ka. Korava, Korama man of a now settled tribe who make baskets, mats, etc; are mujicians etc., fem. Koravanji, Koravati, Koraviti (Commonly fortune - tellers) ಮೇಲಿನ ವಿವಿಧ ಪ್ರಯೋಗಗಳು ಕೊರವ ಸಮುದಾಯದ ಹೆಸರಿನ ಮೂಲ ಮತ್ತು ಅವರ ವೃತ್ತಿಯನ್ನು ಖಚಿತಗೊಳಿಸುತ್ತವೆ.

ವಿಲ್ಸನ್ ಮತ್ತು ಇತರರ ಪ್ರಕಾರ ಎರು ಎಂಬುದು ಎರ್ರ ಎನ್ನುವ ಪದದೊಂದಿಗೆ ಸಂಪರ್ಕ ಹೊಂದಿದೆ. ಎರ್ರ ಅಂದರೆ ಕೆಂಪು ಎಂದರ್ಥ. ತೆಲುಗಿನಲ್ಲಿ ಎರುಕಲ ವಂದಾಲು ಎಂದರೆ ಭವಿಷ್ಯ ಹೇಳುವವರು ಎಂದರ್ಥ. ಎರ್ರ ಎಂದರೆ ಕೊರಮ ಭಾಷೆಯಲ್ಲಿಯೂ ಕೆಂಪು ಎಂಬ ಅರ್ಥವೇ ಇದೆ. ಓಪರ್ಟ್ ಅವರ ಪ್ರಕಾರ ಅವರ ಮೂಲ ವೃತ್ತಿಯು ಕಣಿ(ಭವಿಷ್ಯ) ಹೇಳುವುದಾಗಿದೆ. ಕುರುವಂದಾಲು ಅಥವಾ ಕುಲುವಂದಾಲುಗಳಿಗೆ ತೆಲುಗಿನ ಜನರು ಎರುಕುಲವಂದಾಲು ಎಂದು ಕರೆಯುತ್ತಾರೆ. ಪ್ರಾಯಶಃ ಕಣಿ ಹೇಳುವ ವೃತ್ತಿಯಿಂದಲೇ ಅವರ ಜಾತಿಯ ಹೆಸರು ಬಂದಿದೆ ಎಂಬುದು ವಿಧಿತವಾಗುತ್ತದೆ. ಕರ್ನಾಟಕದ ಕೊರಮರಿಗೂ ಕೂಡ, ಕೊರಮ ಎಂಬ ಹೆಸರು ಈ ಮೇಲೆ ಹೇಳುವಂತೆ ಅವರ ಕಣಿ ಹೇಳುವ ವೃತ್ತಿಯಿಂದಲೆ ಬಂದಿರುವುದಾಗಿ ತೋರುತ್ತದೆ.

ತಮಿಳುನಾಡು ಹಾಗೂ ಆಂಧ್ರಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುವ ಕೊರವರು ಎಲ್ಲಿಂದ ಬಂದರೆಂದು ಹೇಳುವುದು ಸ್ವಲ್ಪ ಕಷ್ಟದ ಕೆಲಸವೇ ಆಗಿದೆ. ಆದರೆ ಭಾಷೆ ಹಾಗೂ ಜೀವನಶೈಲಿಯನ್ನು ನೋಡಿದರೆ ಇವರು ದಕ್ಷಿಣ ಭಾರತದವರು ಅದರಲ್ಲಿಯೂ ತಮಿಳುನಾಡಿನಿಂದ ವಲಸೆ ಬಂದವರೆಂದು ಹೇಳಬಹುದಾಗಿದೆ.

ಥರ್ಸ್ಟನ್ ಅವರು ತಿಳಿಸುವಂತೆ ಉತ್ತರ ಹಾಗೂ ದಕ್ಷಿಣ ಅರ್ಕಾಟ್‌ಗಳಲ್ಲಿ ಕೊರಚ, ಕೊರ್ಚ ಎಂದು ಕರೆಯುತ್ತಾರೆ. ಆದರೆ, ಅಕ್ಕಪಕ್ಕದ ಜಿಲ್ಲೆಗಳಲ್ಲಿ ಅವರನ್ನೆ ಯರುಕಲ ಅಥವಾ ಯರಕಲ ಎಂದು ಕರೆಯಿಸಿಕೊಳ್ಳುತ್ತಾರೆ. (ಥರ್ಸ್‌ಟನ್:೨೩೪) ಇಲ್ಲಿ ಒಂದೇ ಪಂಗಡದ ಜನರನ್ನು ಬೇರೆ ಬೇರೆ ಹೆಸರಿನಿಂದ ಕರೆಯುತ್ತಿದ್ದ ಬಗೆಗೆ, ಅಲ್ಲದೆ ತಮಿಳುನಾಡಿನ ಕೆಲ ಭಾಗಗಳಲ್ಲಿ ಇವರು ವಾಸವಾಗಿದ್ದ ಅಂಶಗಳನ್ನು ಈ ದಾಖಲೆ ಸ್ಪಷ್ಟಪಡಿಸುತ್ತದೆ. ಹೀಗೆ ಮುಂದುವರೆಯುತ್ತಾ ಕೊರವರು ಹಾಗೂ ಕೇಪ್ ಮಾರಿಗಳು ಒಂದೇ ಮೂಲದವರು. ಅವರು ಸಹ ತಮಿಳುನಾಡಿನ ತಂಜಾಮೂರು ಜಿಲ್ಲೆಯ ಒಂದು ಹಳ್ಳಿಯಿಂದ ಹೊರಟು ಭಾರತದಾದ್ಯಂತ ಚದುರಿರಬೇಕು(ಬಿ ವಿ ಮಲ್ಲಾಪೂರ) ಎನ್ನುವಲ್ಲಿಯೂ ಕೂಡ ಕೊರಮರು ಮತ್ತು ಕೇಪಮಾರಿಗಳು ಒಂದೇ ಮೂಲದವರು ಎಂಬ ಸತ್ಯಾಂಶವನ್ನು ಕಾಣಬಹುದಾಗಿದೆ.

ಹೀರೇಂದ್ರ ಕೆ ರಕ್ಷಿತ್ ಅವರು ಈಡಿಗರು, ಬೆಸ್ತರು ಮತ್ತು ಯರುಕುಲರು ತಮಿಳುನಾಡಿನಿಂದ ವಲಸೆ ಬಂದವರು ಎಂದು ತಿಳಿಸುತ್ತಾರೆ.

ಮಲ್ಲಾಪುರ ಬಿ ವಿ ಅವರು ಜಾನಪದ ಸಾಹಿತ್ಯ ದರ್ಶನ (ಭಾಗ ೬) ತಮ್ಮ ಲೇಖನದಲ್ಲಿ ಕೊರವ ಅಥವಾ ಕೊರಚರಲ್ಲಿ ಪಟ್ಟಾಡಿ, ಕಾವಡಿ, ಮೇನಪಾಡಿ, ಮೆಂಡ್ರಗುಟ್ಟಿ ಎಂಬ ನಾಲ್ಕು ಬೆಡಗುಗಳಿವೆ ಎಂದು ಹೇಳುತ್ತಾರೆ.

ಹಂಪ ನಾಗರಾಜಯ್ಯ ಅವರು ತಮಿಳಿನಲ್ಲಿ ಕೈಕಾಡಿ, ಕೊರ್ವಿ ಮತ್ತು ಯರಕುಲ ಮುಂತಾದ ಭಾಷೆಗಳಿವೆ ಎಂದಿದ್ದಾರೆ. ಕೈಕಾಡಿ, ಕೋರ್ವೀ ಮತ್ತು ಯರಕುಲ ಇವೆಲ್ಲ ಒಂದೇ ಬುಡಕಟ್ಟನ್ನು ಗುರುತಿಸುವ ಹೆಸರುಗಳು. ಕೊರಮರು ಮಹಾರಾಷ್ಟ್ರದಲ್ಲಿ ಕೈಕಾಡಿಗಳೆಂದು ಕರೆಸಿಕೊಂಡರೆ, ತೆಲುಗನಾಡಿನಲ್ಲಿ ಯರುಕುಲರು ಎಂದು ಕರೆಸಿ ಕೊಳ್ಳುತ್ತಾರೆ. ಅಲ್ಲದೆ ದ್ರಾವಿಡ ಭಾಷೆಗಳ ಉಪಭಾಷೆಗಳ ಬಗೆಗೆ ಹೇಳುತ್ತಾ ತಮಿಳಿನಲ್ಲಿ ಕೊಯಮತ್ತೂರಿನ ತಮಿಳು, ಚೋಳ ದೇಶದ ತಮಿಳು, ಮೈಸೂರು ತಮಿಳು, ಕೈಕಾಡಿ ತಮಿಳು, ಯರಕುಲ ತಮಿಳು, ಜಾಪ್ನಾ ತಮಿಳು, ಸಿಲೋನಿನ ತಮಿಳು ಇತ್ಯಾದಿ ಎಂದು ಉದಾಹರಿಸಿದ್ದಾರೆ.

ಒಟ್ಟಾರೆಯಾಗಿ ಕೊರಮರೆಂಬ ಬುಡಕಟ್ಟಿನ ಜನರ ಮೂಲ ನೆಲೆಯು ತಮಿಳು ನಾಡಿನ ಒಂದು ಪರ್ವತ ಪ್ರಾಂತವಾಗಿದೆ. ಅದು ಬಹುಶಃ ತಂಜಾಮೂರು, ಕೊಯಂಬತ್ತೂರು, ದಕ್ಷಿಣ ಅರ್ಕಾಟ್ ಜಿಲ್ಲೆಗಳಲ್ಲಿಯ ಗುಡ್ಡಗಾಡುಗಳ ಒಂದು ಭಾಗ ಎಂದು ಹೇಳಬಹುದು. ಕೊರಮರ ಮೂಲಭಾಷೆ ತಮಿಳಿನ ಉಪಭಾಷೆಯಾದ ಕುರ್‍ರೊ ಕುಳವ ಆಗಿರುವಂತೆ ತೋರುತ್ತದೆ.

ಬೆಡಗುಗಳು

ಮಾನವನ ಬದುಕಿನಲ್ಲಿ ವಿವಾಹವೆನ್ನುವುದು ಪ್ರಮುಖ ಘಟ್ಟವಾಗಿದೆ. ಪ್ರತಿಯೊಂದು ಸಮುದಾಯವೂ ಬಂಧುತ್ವವನ್ನು ರೂಪಿಸಿಕೊಳ್ಳುವುದಕ್ಕೆ ಹಲವು ನೀತಿ ನಿಯಮಗಳನ್ನು ರಚಿಸಿಕೊಂಡಿರುತ್ತವೆ. ಅದಕ್ಕೆ ಕೊರಮ ಸಮುದಾಯವೂ ಹೊರತಲ್ಲ. ಕೊರಮ ಸಮುದಾಯದಲ್ಲಿ ವಿವಾಹ ಹಾಗೂ ಬಂಧುತ್ವದ ಸಂದರ್ಭದಲ್ಲಿ ಬೆಡಗು ಅತೀ ಪ್ರಮುಖ ಸ್ಥಾನವನ್ನು ಪಡೆದಿರುತ್ತವೆ. ಇಲ್ಲಿ ಕೊರಮರ ಬೆಡಗುಗಳು, ಅವರಲ್ಲಿ ಪ್ರಚಲಿತವಿರುವ ವಿವಾಹ ಕ್ರಮ, ಅವುಗಳ ವೈವಿಧ್ಯತೆಯನ್ನು ತಿಳಿಸಲಾಗಿದೆ.

ಕುಲ, ಬೆಡಗು

ಮುಖ್ಯವಾಗಿ ಸಾತಪಾಡಿ, ಕಾವಾಡಿ, ಎಂಬ ಎರಡು ಬೆಡಗುಗಳು ಇವರಲ್ಲಿವೆ. ಇವುಗಳಿಗೆ ಇವರು ಕುಲ ಎಂದು ಕರೆಯುವರು. ಆದರೆ ಮೈಸೂರು ಪ್ರದೇಶದಲ್ಲಿ ನಾಲ್ಕು ಬೆಡಗುಗಳು ಕಂಡುಬರುತ್ತವೆ. ಅವುಗಳೆಂದರೆ, ೧ ಸಾತಪಾಡಿ, ೨ ಕಾವಾಡಿ, ೩ ಮಾನಪಾಡಿ ಮತ್ತು ೪ ಮೇನ್ರಗುತ್ತಿ. ಈ ಬೆಡಗುಗಳ ಅರ್ಥ ಕಾಲಗರ್ಭದಲ್ಲಿ ನಶಿಸಿಹೋಗಿವೆ. ಆದರೂ ಸಹ ಈ ಬೆಡಗುಗಳನ್ನು ದೇವರ ಆರಾಧನೆಯ ಹಿನ್ನೆಲೆಯಲ್ಲಿ ವಿಂಗಡಿಸಬಹುದು. ಕೊರಮ ಸಮುದಾಯದವರು ತಿರುಪತಿ ಶ್ರೀ ವೆಂಕಟೇಶ್ವರ ಸ್ವಾಮಿಯ ಸೇವೆ ಮತ್ತು ಆರಾಧನೆಯನ್ನು ಮಾಡುತ್ತಿದ್ದರು ಎಂಬ ಪ್ರತೀತಿ ಇದೆ. ಈ ಸಮುದಾಯದಲ್ಲಿ ಸ್ವ ಬೆಡಗಿನವರನ್ನು ಬಿಟ್ಟು ಉಳಿದ ಎಲ್ಲಾ ಬೆಡಗಿನವರೊಂದಿಗೆ ವಿವಾಹ ಸಂಬಂಧ ಬೆಳೆಸುವ ಸಂಪ್ರದಾಯವನ್ನು ಇಟ್ಟುಕೊಂಡಿರುತ್ತಾರೆ.

೧. ಸಾತಪಾಡಿ : ಸಾತಪಾಡಿ ಬೆಡಗಿನವರು ದೇವರ ಮೂರ್ತಿಯನ್ನು ಸ್ವಚ್ಛಗೊಳಿಸಿ ಪ್ರತಿಮೆಯನ್ನು ಅಲಂಕರಿಸಿ ಸ್ವಾಮಿಯ ಸೇವೆ ಮಾಡುತ್ತಿದ್ದರು. ಈ ದೇವರನ್ನು ಅಲಂಕರಿಸುವುದಕ್ಕೆ ತಮಿಳಿನಲ್ಲಿ ಸಾತಪಾಡಿ ಎಂದು ಅರ್ಥವಿದೆ. ಸಾತಪಾಡಿ ಬೆಡಗಿನವರಿಗೆ ಎಕ್ಕೆಗಿಡ ಅಥವಾ ಕಕ್ಕೆಗಿಡ ಪವಿತ್ರವಾದದ್ದು, ಆ ಗಿಡವನ್ನು ಅವರು ಪೂಜಿಸುವುದು ವಾಡಿಕೆ.

೨. ಕಾವಾಡಿ : ಈ ಬೆಡಗಿನವರು ದೇವರಿಗೆ ಹರಕೆ ಮತ್ತು ಕಪ್ಪಕಾಣಿಕೆಗಳನ್ನು ಕಾವಾಡಿ ಎಂಬ ಹಡ್ಡೆಗಳಲ್ಲಿ ಹೆಗಲ ಮೇಲೆ ಇಟ್ಟುಕೊಂಡು ಹೋಗಿ ದೇವರಿಗೆ ಸಮರ್ಪಿಸುತ್ತಿದ್ದರು. ಒಂದು ಬಿದಿರಿನ ಕೋಲಿಗೆ ಎರಡು ಕಡೆಗಳಲ್ಲಿ ಹರಕೆಗಳ ಬುಟ್ಟಿಗಳನ್ನು ತೂಗು ಹಾಕಿಕೊಂಡು ಹೆಗಲ ಮೇಲೆ ಹೊತ್ತುಕೊಂಡು ಹೋಗಿ ಸ್ವಾಮಿಗೆ ಅರ್ಪಿಸುತ್ತಿದ್ದರು. ಇವರಿಗೆ ಬೇವಿನ ಮರ ಪವಿತ್ರವಾದದ್ದು.

೩. ಮಾನಪಾಡಿ ಬೆಡಗು : ಈ ಬೆಡಗಿನವರು ದೇವರನ್ನು ಕುರಿತು ಭಕ್ತಿಯಿಂದ ಭಜನೆ ಮಾಡುವುದು, ಹಾಡುವುದು ಇವರ ಪ್ರಮುಖ ಕರ್ತವ್ಯವಾಗಿತ್ತು. ಸಂಗೀತ, ನಾಟ್ಯ ಕಲೆಗಳ ಪರಂಪರೆ ಈ ಬೆಡಗಿನವರಿಂದ ಕೊರಮರಲ್ಲಿ ಅಸ್ತಿತ್ವಕ್ಕೆ ಬಂದಿದೆ ಎಂದರೆ ತಪ್ಪಾಗಲಾರದು.

೪. ಮೇನ್ರಗುತ್ತಿ ಬೆಡಗು: ಕೊರಮ ಸಮುದಾಯದ ನಾಲ್ಕನೆಯ ಬೆಡಗಿದು. ಇವರು ದೇವರಿಗೆ ಪುಷ್ಪಗಳಿಂದಲೂ ಮತ್ತು ಬಟ್ಟೆಗಳಿಂದಲೂ ತಯಾರಿಸಿದ ಪಾದುಕೆಗಳನ್ನು ಅರ್ಪಿಸಿ ಸ್ವಾಮಿಯ ಪೂಜೆ ಮಾಡಿ ಹೊಗಳಿ ಆರಾದಿಸುವ ಕಾಯಕ ಇವರದು.(ಮಾನ್ಪಡೆ ಬಿ ಮಲ್ಲಿಕಾರ್ಜುನ:೨೦೦೮,ಪು.೩೪-೩೪)

ಈ ನಾಲ್ಕು ಬೆಡಗುಗಳಲ್ಲಿ ಕಾವಾಡಿ ಮತ್ತು ಸಾತಪಾಡಿಗಳು ಬಹು ಪುರಾತನ ಮತ್ತು ಪ್ರಮುಖ ಬೆಡಗುಗಳು. ಮಾನಪಾಡಿ ಮತ್ತು ಮೇನ್ರಗುತ್ತಿಗಳು ತದನಂತರ ಉದ್ಭವವಾದವುಗಳಾಗಿವೆ. ಆಂಧ್ರ ಪ್ರದೇಶದ ಬಂದರ ನಾಡಿನಿಂದ ಕೃಷ್ಣ ಜಿಲ್ಲೆಗೆ ವಲಸೆ ಬಂದ ಸಮುದಾಯದ ಗುಂಪುಗಳು ಮಾನಪಾಡಿ ಮತ್ತು ಮೇನ್ರಗುತ್ತಿ ಎಂಬ ಹೆಸರುಗಳನ್ನು ಪಡೆದವು. ಸಾತಪಾಡಿ, ಕಾವಾಡಿ, ಬೆಡಗಿನವರು ಹಳೆ

೦೫. ಕೂಡಿ ಕಟ್ಟಿ ಕೊರಮ	:	ಹಗ್ಗ ಮತ್ತು ಬಲೆಗಳನ್ನು ತಯಾರಿಸುವವರು
೦೬. ನರಿ ಕೊರಮ	:	ನರಿ ಬೇಟೆಗಾರರು
೦೭. ಪಚ್ಚಕುಟ್ಟಿ ಕೊರಮ	:	ಹಚ್ಚೆ ಹಾಕುವವರು
೦೮. ಉಪ್ಪು ಕೊರಮ	:	ಉಪ್ಪಿನ ವ್ಯಾಪಾರ ಮಾಡುವವರು
೦೯. ಕೊಟ್ಟು ಕೈಕಾರಿಸ್	:	ನೃತ್ಯ ಮಾಡುವವರು
೧೦. ಪಾವು ಕೊರಮ	:	ಹಾವಾಡಿಸುವವರು
೧೧. ರಾನೆ ಕೊರಮ	:	ಕಲ್ಲು ಹೊಡೆಯುವವರು
೧೨. ಸದೇಪಟ್ಟಿ ಕೊರಮ	:	ಕಾಡಿನಲ್ಲಿ ವಾಸಿಸುವವರು
೧೩. ಕರುವೆ ಪೆಳ್ಳೈ	:	ಎಲೆ, ವ್ಯಾಪಾರ ಮಾಡುವವರು

ಈ ಕೊರವರಲ್ಲಿ ಕಾವಾಡಿ ಮತ್ತು ಸಾತ್ಪಡಿಗಳೆಂಬ ಎರಡು ಮುಖ್ಯ ಬೆಡಗುಗಳು ಇವೆ. ಇವರಲ್ಲಿ ಸಾತ್ಪಡಿ ಹಾಗೂ ಕಾವಾಡಿಯರ ನಡುವೆ ವೈವಾಹಿಕ ಸಂಬಂಧಗಳಾಗುತ್ತವೆ. ಈ ಕಾವಾಡಿ ಪದಕ್ಕೆ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುವುದು. ಮಾನೆ, ಮಲ್ಲಾಗ, ಗಾಯಕವಾಡ ಎಂಬ ಪದಗಳು ಕಾವಾಡಿ ಪದದ ಪರ್ಯಾಯ ಪದಗಳೇ ಆಗಿವೆ. ಅದರಂತೆ ಸಾತ್ಪಡಿ ಪದಕ್ಕೆ ಅನುಕ್ರಮವಾಗಿ ಜಾಧವ, ಗುಜನಾಗ, ಪವಾರ ಎಂಬ ಪರ್ಯಾಯ ಪದಗಳು ಕಂಡುಬರುತ್ತವೆ. ಇಲ್ಲಿಯವರೆಗೆ ಕಾವಾಡಿಗಳಲ್ಲಿ ೮೮ ಮತ್ತು ಸಾತ್ಪಡಿಗಳಲ್ಲಿ ೯೭ ಒಳಕುಲಗಳನ್ನು ಪತ್ತೆಹಚ್ಚಲಾಗಿದ್ದು ಈ ಕೆಳಗಿನಂತೆ ಅವುಗಳನ್ನು ಕಾಣಬಹುದು.

೧. ಕಾವಾಡಿಯಲ್ಲಿ ೧)ಇಂಗಳೆ ೨) ಓಕಮಾಂಡ ೩) ಓಲಗರಾಯ ೪) ಕರಾಯ ೫) ಕರ್ತನಾಗ ೬) ಕಾಡೆ ೭) ಕಾಂತ್ರಾಯ ೮) ಕಾಡರಾಯ ೯) ಕ್ವಾಟಕೂನಾಗ ೧೦)ಕುಡರಾಯ ೧೧) ಕುಂಭರಾಯ ೧೨) ಕೋಟಿಗೌಡ ೧೩) ಕೊಂಕಣಿ ೧೪) ಗ್ಯಾಜರಾಯ ೧೫) ಗೌಡಸರ ೧೬) ಗಜರೆ ೧೭) ಚಿಟಾಣಿ ೧೮) ಜಿತರಾಯ ೧೯) ಜಾಲಗೇರಿ ೨೦) ಜಾಮಗಲ ೨೧) ಗೂಡಾಮಾನಕೆ ೨೨) ತಾಂಬರಾಯ ೨೩) ತೆಲಗರಾಯ ೨೪) ದನಾಕರೆ ೨೫) ದಾನೆ ೨೬) ದಿಷ್ಯಾಂಗನಾಗ ೨೭) ದೇವಗಿರಿ ೨೮) ದೋಡರೆ ೨೯) ಧಿತರಾಯ ೩೦) ನಾಗೋರ ೩೧) ನರಗುಂದರೇಣ ೩೨) ನಲಗುಮ ೩೩) ನಳಗುಂದರೆ ೩೪) ನಾಗವಾರ ೩೫) ನಾಗರೇಶಿ ೩೬) ನೇರಿಯಾಯ ೩೭) ನೇರಿರಾಯ ೩೮) ಪತ್ತೆ ೩೯) ಪಂಚರೇಶಿ ೪೦) ಪಾಕೆ ೪೧) ಪಾಚರನಾಗ ೪೨) ಪಾಂಡ್ರಾಯ ೪೩) ಪಾತ್ರಾಯ ೪೪) ಪುರ್ತುರ್ ೪೫) ಪುರ್ತೊರ್ ೪೬) ಪೇನಗುಡ್ಡ ೪೭) ಪಾಂಢರೆ ೪೮) ಮೋತರಾಯ ೪೯) ಬಳವಂತ ೫೦) ಬಳಗೆ ೫೧) ಬುನಾಗರೆ ೫೨) ಬಾರಬರಾಯ ೫೩) ಬುಲಾದರೆ ೫೪) ಬುಲಗರಾಯ ೫೫) ಭೂನಾದರಾಯ ೫೬) ಬುನಂದರ ೫೭) ಬೆರಗುಡ್ಡ ೫೮) ಮುಳೆ ೫೯) ಮಿಯೆಡಿರಿ ೬೦) ಮಲಾಜುರ ೬೧) ಮಂತ್ರಾಳೆ ೬೨) ಮಾನೆ ೬೩) ಮಾನಕೆ ೬೪) ಮ್ಯಾಂಡ್ರಗುತ್ತಿ ೬೫) ಮುಮ್ಮಡಿ ೬೬) ಮೂತ್ರಣ

೬೭) ಯಾರ್ಸನಾಗ ೬೮) ಯಾರ್ಸೂರ ೬೯) ರಾಮಗಿರಿ ೭೦) ಎಲಾಯತಿ ೭೧) ಶ್ಯಾಮಗಿರಿ ೭೨) ಸ್ಯಾಮವಿರೆ ೭೩) ಸತವಾರ ೭೪) ಸರಾಯ ೭೫) ಸಾಡರಾಯ ೭೬) ಸಾಲರಾಯ ೭೭) ಸ್ವೊನಾಜಾಕ ೭೮) ಸ್ವಾಲಕರಾಯ ೭೯) ಸಂಗೊಳ್ಳಿ ೮೦) ಸಂಕದೊ(ಸುಂಕನಾಗ) ೮೧) ಹಜಾರೆ ೮೨) ಹಿರಗನಾಗ ೮೩) ಗುತ್ತಬಸವ ೮೪) ಇರಕಾ ೮೫) ಸನ್ನಕ್ಕಿ ೮೭) ಹಂಗಸರಾಯ ೮೮) ಇಲಾತಿ.

೨. ಸಾತ್ಪಡಿಯಲ್ಲಿ ೧) ಅಬುಲಸಾರ ೨) ಆಗಾನೆ ೩) ಇಟಸಾರ ೪) ಇದಗಾಲ ೫) ಉಚಗಾಯ ೬) ಉತಲಾಸರ ೭) ಉಲಗರಾಯ ೮) ಕಟಾರೆ ೯) ಕಾಯಸರ ೧೦) ಕಾಳಸರ ೧೧) ಕಾಲಗಾಗ್ರಿ ೧೨) ಕಿರಕಾವೆ ೧೩) ಕ್ವಾಂಕನಾಳ ೧೪) ಕಿಸಲಸರ ೧೫) ಕಿರಣಸರ ೧೬) ಮಧು ೧೭) ಕುಕಸಾರ ೧೮) ಕುಪ್ಪಸೆಟ್ಟಿ ೧೯) ಕೋಣಸರ ೨೦) ಮೆಂಡಕೆ ೨೧) ಗ್ಯಾನಸರ ೨೨) ಗೌಸರ ೨೩) ಚಪಾಡಸರ ೨೪) ಚಪಾಟಸರ ೨೫) ಚಪಾಟಸರ ೨೬) ಚಾಣಕನಾಗ ೨೭) ಚಪಟಸ ೨೮) ಚಿಟಪೋತ ೨೯) ಜಗತೇರಿ ೩೦) ಜಗಡಸರ ೩೧) ಜಂಗಳಸರ ೩೨) ಜಾಗಳಸಾರ ೩೩) ಜಾಲಿಮಸಾರ ೩೪) ತಿರಕಾಯಿ ೩೫) ತುಬಕಿತುಂಡ್ರ ೩೬) ದರೀಬಾಗ ೩೭) ದಾಸಫಾ ೩೮) ಯಾಳಂಗಿ ೩೯) ಗುಣಮಾಳ ೪೦) ದೀಪಸರ ೪೧) ದುಮಾಲಸರ ೪೨) ಧುತರಾಯ ೪೩) ಡೋಂಗರೆ ೪೪) ನಿಜಾಮಸರ ೪೫) ಪಟ್ಯಾಲ ೪೬) ಪ್ರಸಾದೆ ೪೭) ಪಾಲಿಕಸರ ೪೮) ಪ್ಯಾದನಾಗ ೪೯) ಬಾಕ್ಸರ ೫೦) ಬಾಡಸರ ೫೧) ಬಾಣಸೋರೆ ೫೨) ಬಿಜಲಿಸರ ೫೩) ಬೇರಹೊತ್ನಾಗ ೫೪) ಬಡಗನಾಗ ೫೫) ಬೆರತನಾಗ ೫೬) ಬೆಲಸರ ೫೭) ಬ್ಯಾಲಸರ ೫೮) ಬಂಗಾರೆ ೫೯) ಭೂಪನಾಗ ೬೦) ಭೂಮಸಾರ ೬೧) ಮಾಚಕಾನ ೬೨) ಮಾಚಗಾಳ ೬೩) ಮಾನನಾಳು ೬೪) ಮಾನಪಡೆ ೬೫) ಮಿನ್ನೊ ೬೬) ಮಿದಾಮಸಾರ ೬೭) ಮಾನಾಡ ೬೮) ಮಲಿಕಸರ ೬೯) ಮುಖತ್ಯಾರ ೭೦) ಖಡಾಖಡೆ ೭೧) ಯ್ಯಾಂಗಟ್ಯಾನಾಗ ೭೨) ಏಳಮೂಳ ೭೩) ಏರಕೇರ ೭೪) ರಾಯಸರ ೭೫) ರೋಡನೆಲ್ಲಿ ೭೬) ಲಲ್ಲಸಂದ್ರ ೭೭) ಲಕ್ಷಂದರ ೭೮) ಮಾಟೆ ೭೬) ಲಾಲಸರ ೮೦) ಕುಂಬಸಾರ ೮೧) ಲೋಖಂಡೆ ೮೨) ಲೋಡೆ ೮೩) ವಜ್ರ ೮೪) ಒಂಟೆಲಿ ೮೫) ಸಮಾಟಸರ ೮೬) ಸಂಗನಾಳ ೮೭) ಸಾರಂಗಿ ೮೮) ಸುಖಸಾರ ೮೯) ಸೋಲಾಪುರೆ ೯೦) ಹವಾಲೆ ೯೧) ಹವಳ್ಯಾನಾಗ ೯೨) ಹಾಸಿಲಸರ ೯೩) ಲಕ್ಷ್ಯಾವರ ೯೪) ಎಣಗನಾವರ ೯೫) ಮುದ್ದಲಸಾರ ೯೬) ತವಟೆಣ್ಣವರ ೯೭) ಶ್ಯಾಪೋಚಿ.

ಅನ್ಯ ಸಮುದಾಯಗಳಲ್ಲಿ ಬಳಿಗಳಿರುವ ಹಾಗೆ ಕೊರಮ ಬುಡಕಟ್ಟಿನಲ್ಲಿಯೂ ಬಳಿಗಳಿವೆ. ಇಂದಿಗೂ ಅವುಗಳ ಪಾಲನೆ ಅತಿ ಕಟ್ಟುನಿಟ್ಟಾಗಿ ನಡೆಯುತ್ತದೆ. ತನ್ನ ಮೂಲದ ಶುದ್ಧತೆಯನ್ನು ಕಾಯ್ದುಕೊಳ್ಳುವಲ್ಲಿ ಈ ಬೆಡಗುಗಳು ಪ್ರಮುಖ ಪಾತ್ರವನ್ನು ವಹಿಸಿವೆ ಹಾಗೂ ಆ ಕಾರಣಕ್ಕಾಗಿಯೇ ಹಿಂದೆ ಈ ಬೆಡಗುಗಳು ರೂಪಗೊಂಡಿವೆ. ಈ ಬುಡಕಟ್ಟಿನವರು ಯಾವುದೇ ಹೆಸರಿನಿಂದ ಗುರುತಿಸಿಕೊಳ್ಳುತ್ತಿದ್ದರೂ ಇವರು ಯಾವುದೇ ಪ್ರದೇಶದಲ್ಲೂ ಇದ್ದರೂ ಸಂಬಂಧಗಳನ್ನು ಬೆಡಗುಗಳ ಮೂಲಕವೇ ಮಾಡುತ್ತಾರೆ. ಕೊರಚರಿಗೂ, ಕೊರಮರಿಗೂ ಒಂದು ಕಾಲದವರೆಗೆ ಹೆಣ್ಣು ಗಂಡು ನಡೆಯುತ್ತಿರಲಿಲ್ಲ. ಕಾರಣ "ಒಬ್ಬರಿಗೊಬ್ಬರು ಅವರಿಗಿಂತ ನಾವೇ ಮೇಲು"(The Mysore Tribes and Castes: Vol.III:588) ಎಂದು

ಹೇಳಿಕೊಳ್ಳುವುದನ್ನು ಎಚ್ ವಿ ನಂಜುಂಡಯ್ಯ ಮತ್ತು ಅನಂತಕೃಷ್ಣ ಐಯ್ಯರ್ ಅವರು ದಾಖಲಿಸಿದ್ದಾರೆ. ಅವರು ಈ ಎರಡು ಪಂಗಡಗಳನ್ನು ಬೇರೆಯಾಗಿ ಗುರುತಿಸಿದ್ದಲ್ಲದೆ, ಬೆಡಗುಗಳು ಕೂಡಾ ಪ್ರತ್ಯೇಕವಾಗಿ ಗುರುತಿಸಲು ಪ್ರಯತ್ನಿಸಿದ್ದಾರೆ. ಆದರೆ ವಾಸ್ತವಿಕವಾಗಿ ಈ ಎರಡು ಪಂಗಡಗಳ ಬೆಡಗುಗಳಲ್ಲಿ ಯಾವುದೇ ವ್ಯತ್ಯಾಸ ಕಂಡು ಬರುವುದಿಲ್ಲ ಇವೆರಡು ಬೇರೆ ಬೇರೆ ಅಲ್ಲ. ಇವರನ್ನೆ ಒಂದು ಪ್ರದೇಶದಲ್ಲಿ ಕೊರಚರು ಎಂದು ಕರೆದರೆ ಮತ್ತೊಂದು ಪ್ರದೇಶದಲ್ಲಿ ಕೊರಮರೆಂದು ಕರೆಯುವುದನ್ನು ಕಾಣಬಹುದು.

ಜಾನಪದ ವಿಶ್ವಕೋಶದಲ್ಲಿ ಮೈನ್ ವಾರಿಂಗ್ ಅವರು ಬೆಡಗುಗಳ ಬಗೆಗೆ ಹೇಳಿದ್ದಾರೆ. ಅವುಗಳಲ್ಲಿ ಸಂಕೈ, ಸಂಪತಿ, ಸಾತುಪಡಿ, ಕಾವಡಿ ಅಥವಾ ಗಜ್ಜಲ, ದೇವರಕೊಂಡ, ಮಿಂಡ್ರಕುಟ್ಟಿ ಅಥವಾ ಮಿನಪಡಿ. ಮೊದಲ ಎರಡು ವರ್ಗದವರು ಶುದ್ಧ ಕೊರಮರು. ಅಂದರೆ ಕೊರವರ ಜಾತಿಯಲ್ಲಿ ನ್ಯಾಯಬದ್ಧವಾಗಿ ವಿವಾಹವಾದವರಲ್ಲಿ ಹುಟ್ಟಿದವರು. ಮೂರನೆಯ ವರ್ಗದವರು ಮಿಶ್ರ ಮದುವೆಯಿಂದ ಜನಿಸಿದವರು(ಕನ್ನಡ ಜಾನಪದ ವಿಶ್ವಕೋಶ ೫:೨೬) ಎನ್ನುವಲ್ಲಿ ಸಂಕೈ, ಸಂಪತಿ, ಗಜ್ಜಲ ಎನ್ನುವ ಹೊಸ ರೂಪಗಳು ಕಂಡಬಂದರೂ ಸಾತುಪಡಿ, ಕಾವಾಡಿ, ಮಿಂಡ್ರಕುಟ್ಟಿ, ಮಿನಪಡಿ ಸ್ವಲ್ಪ ವ್ಯತ್ಯಾಸದೊಂದಿಗೆ ದಕ್ಷಿಣ ಕರ್ನಾಟಕದಲ್ಲಿ ಕೊರಮ ಬುಡಕಟ್ಟಿನಲ್ಲಿ ಪ್ರಚಲಿತವಿವೆ. ಮತ್ತು ಮೊದಲೆರಡು ವರ್ಗದವರು ನ್ಯಾಯಬದ್ದವಾಗಿ ಜನಿಸಿದವರು. ಮೂರನೆಯ ವರ್ಗದವರು ಮಿಶ್ರ ಮದುವೆಯಿಂದ ಜನಿಸಿದವರೆನ್ನುವ ಕಲ್ಪನೆ ದಕ್ಷಿಣ ಕರ್ನಾಟಕದಲ್ಲಿ ಮಾತ್ರ ಕಂಡು ಬಂದಿದ್ದು ಉಳಿದ ಕಡೆ ಇಂತಹ ಕಲ್ಪನೆ ಕಂಡುಬರುವು ದಿಲ್ಲ.

ಬೆಡಗಿನ ಹೆಸರುಗಳು ಅಚ್ಚ ತಮಿಳು ರೂಪವಾದ ಕುಳವ ಭಾಷೆಯವು. ಆ ಹೆಸರಿನ ಪದಗಳಿಗೆ ಎಚ್ ವಿ ನಂಜುಂಡಯ್ಯ ಅವರು ಅರ್ಥವನ್ನು ಸಂಗ್ರಹಿಸಿ ಕೊಡುವುದರ ಜೊತೆಗೆ ಉಪ್ಪು ಕೊರವರ ಉಪ ಬೆಡಗುಗಳನ್ನು ಈ ಕೆಳಗಿನಂತೆ ಹೇಳಿದ್ದಾರೆ.

Ambojala	- lotus	Mogili	- (Pandanus fascicularis)
Avula	- Cows	Pulu	- Flowers
Bandi	- Cart	Ragala	- Ragi, Grain
Dasari	- Vishnava Mendicant	Samudrala	- Sea
		Suka	- Star
Gaggala	- Small bell	Thoka	- (tail)
Kampa	- bush of thorms	Uyyal	- Swing
Venkatagiri	- A town		
Kanaga	- (Pongamia glamera)		
Katari	- dagger		

ಎಂದು ಥರ್ಸ್ಟನ್ ಅವರು ದಾಖಲಿಸಿರುವ ಈ ಯಾವ ಬೆಡಗುಗಳು ಇಂದು ಕೊರಮರಲ್ಲಿ ಕಾಣಿಸುವುದಿಲ್ಲ. ಆದರೆ ಕಾವಾಡಿ, ಸಾತ್ಪಾಡಿ ಎಂಬ ಬೆಡಗುಗಳು ಬಳಕೆಯಲ್ಲಿವೆ.

ಮೈಸೂರು ಪ್ರದೇಶದಲ್ಲೇ ಬಹಳಷ್ಟು ಸಂಖ್ಯೆಯಲ್ಲಿದ್ದಾರೆ. ಆದರೆ ಮಾನಪಾಡಿ ಮತ್ತು ಮೆನ್ರಗುತ್ತಿ ಬೆಡಗಿನವರು ಆಂಧ್ರ ಕರ್ನಾಟಕ, ತಮಿಳುನಾಡು ಕರ್ನಾಟಕ ಸರಹದ್ದುಗಳಲ್ಲಿ ಬಹುಸಂಖ್ಯೆಯಲ್ಲಿ ಕಂಡುಬಂದರೂ ಕೂಡ ಇಲ್ಲಿ ಮ್ಯಾನಪಾಡಿ ಮತ್ತು ಮ್ಯಾನ್ರಗುತ್ತಿ ಉಪಬೆಡಗುಗಳಾಗಿವೆ. ಆದರೆ ಮೈಸೂರು ಪ್ರದೇಶದಲ್ಲಿ ಈ ಎರಡು ಉಪ ಬೆಡಗುಗಳೂ ಪ್ರಮುಖ ಬೆಡಗುಗಳಾಗಿ ಕಂಡುಬರುತ್ತವೆ.

ಇನ್ನೊಂದು ಅಭಿಪ್ರಾಯದಂತೆ ಮೂಲದಲ್ಲಿ ಎರಡೇ ಬೆಡಗುಗಳು ಇದ್ದು ನಂತರದಲ್ಲಿ ಇನ್ನೆರಡು ಬೆಡಗುಗಳು ಹುಟ್ಟಿ ಬಂದಿರುವುದನ್ನು ಗಮನಿಸಿದರೆ ಆ ಹೊಸ ಎರಡು ಬೆಡಗುಗಳು ತಮಿಳುನಾಡಿನಿಂದ ಕುಳುವರು ಆಂಧ್ರಪ್ರದೇಶಕ್ಕೆ ವಲಸೆ ಬಂದ ನಂತರ ಹುಟ್ಟಿ ಬಂದವುಗಳೆಂದು ಸ್ಪಷ್ಟವಾಗಿ ನಿರ್ಣಯಿಸಬಹುದಾಗಿದೆ. ಮಾನಪಡೆ ಎಂಬುದು ಮೆಹಬೂಬನಗರ ಜಿಲ್ಲೆಯ ಅಲಂಕೂರು ತಾಲ್ಲೂಕಿನ (ಕರ್ನೂಲು ಹತ್ತಿರ) ಒಂದು ಊರಾಗಿದ್ದು, ಮೈನ್ ವಾರಿಂಗರು ತಿಳಿಸಿರುವ ದೇವರು ಕೊಂಡ ಬೆಡಗು ಮೇನ್ಪಡಿಯ ಇನ್ನೊಂದು ಹೆಸರಾಗಿದೆ. ದೇವರ ಕೊಂಡವು ಕೂಡಾ ಮೆಹಬೂಬುನಗರ ಜಿಲ್ಲೆಯ (ನಾಗಾರ್ಜುನ ಸಾಗರದ ಹತ್ತಿರ) ಊರಾಗಿದೆ. ಮೊದಲು ಆ ಪ್ರದೇಶದಲ್ಲಿ ನೆಲೆನಿಂತು ನಂತರ ಅಲ್ಲಿಂದ ಕರ್ನಾಟಕಕ್ಕೆ ವಲಸೆ ಬಂದು ಸೇರಿರುವ ಕೊರಮರಲ್ಲಿ ಈ ಮಾನ್ಪಡಿ ಬೆಡಗನ್ನು ಕಾಣಬಹುದಾಗಿದೆ. ಇದು ಊರಿನ ಹೆಸರಿನಿಂದಲೇ ಬಂದ ಬೆಡಗಾಗಿರಬಹುದು.

ಮೆಂಡ್ರಗುಟ್ಟಿ ಬೆಡಗು ಕೂಡ ಆಂಧ್ರಪ್ರದೇಶದ ಯಾವುದೋ ಊರಿನ (ಮಹೇಂದ್ರ ಗುತ್ತಿ) ಹೆಸರಾಗಿದೆ.

ಈ ಪಂಗಡಗಳನ್ನು ಕಸುಬಿನ ಆಧಾರದ ಮೇಲೆ ಮುಖ್ಯವಾಗಿ ನಾಲ್ಕು ಉಪಗುಂಪುಗಳಾಗಿ ವಿಭಾಗಿಸಬಹುದು. ಅವುಗಳೆಂದರೆ,

೧. ಉರು ಅಥವಾ ದಬ್ಬೆ ಕೊರಮ, ಕೊರಚ

೨. ಉಪ್ಪು ಅಥವಾ ಘಟ್ಟದ ಕೊರಮ

೩. ಕುಂಚಿಗೆ ಮತ್ತು ಸೊನಾಯ್ ಕೊರಚ

೪. ಪತ್ರದ ಕೊರಚ,

ಮೇಲೆ ಹೇಳಿದ ಪಂಗಡಗಳಲ್ಲದೆ, ಇನ್ನೂ ಕೆಲವು ಕಸಬಾಧಾರಿತ ಪಂಗಡಗಳನ್ನು ಇವರಲ್ಲಿ ಗುರುತಿಸಲಾಗಿದೆ.

ಕೋಷ್ಟಕ ೪.೩: ಸಮೀಕ್ಷೆಗೊಳಪಟ್ಟ ಕೊರಮರ ಒಳಪಂಗಡಗಳು

೦೧. ಭಜಂತ್ರಿ ಕೊರಮ	:	ಸಂಗೀತಗಾರರು
೦೨. ತಪ್ಲೈ ಕೊರಮ	:	ಬಿದಿರು ಸಿಗಿಯುವವರು
೦೩. ಕಾವಲ್ ಕೊರಮ	:	ಕಾವಲು ಕಾಯುವವರು
೦೪. ಕುಂಚಿ ಕೊರಮ	:	ಪೊರಕೆ/ಕುಂಚು ತಯಾರಿಸುವವರು

ಮಿಕಾಯಿಲ್ ಕೆನಡಿ ಅವರು ಕೊರವರ ನಾಲ್ಕು ಬಗೆಯ ವಿವಿಧ ಗುಂಪುಗಳನ್ನು ಹೇಳುತ್ತಾ "Each sub division is again divided four clans or goths, namely 1) Satpadi 2) Melpadi 3) Kavadi 4) Mendra Gutti" (Criminal Classes in the Bombay Presidency:63) ಎಂಬ ಬೆಡಗುಗಳನ್ನು ದಾಖಲಿಸಿದ್ದಾರೆ. ಕೊರಮ ಬುಡಕಟ್ಟಿನವರು ಬೊಂಬಾಯಿ ಪ್ರಾಂತದವರಾಗಿರಲಿ, ತಮಿಳುನಾಡಿನವರಾಗಲಿ, ಕರ್ನಾಟಕದಲ್ಲಿರುವವರಾಗಲಿ ಇವರೆಲ್ಲರಲ್ಲಿರುವ ಬೆಡಗುಗಳು ಮಾತ್ರ ಒಂದೇ ಆಗಿವೆ. ಅವರೆಲ್ಲರೂ ಮೂಲದಲ್ಲಿ ಒಂದೇ ಎಂಬುದನ್ನು ಇವು ಸೂಚಿಸುತ್ತವೆ.

ವಿವಾಹ

ಮದುವೆಗೆ ಬಂದ ವಯಸ್ಕ ಮಗನಿಗೆ ತಂದೆ ಅಥವಾ ಮನೆಯ ಹಿರಿಯರು ಹೆಣ್ಣನ್ನು ಹುಡುಕುವುದು ವಾಡಿಕೆಯಲ್ಲಿದೆ. ಸಜಾತಿ ಬೆಡಗಿನ ಕನ್ಯೆಯನ್ನು ಬಿಟ್ಟು ವಿಜಾತಿ ಬೆಡಗಿನ ಕನ್ಯೆಯನ್ನು ಹುಡುಕಿ ನಿಶ್ಚಯ ಮಾಡಿ, ಮದುವೆಯ ಶುಭ ಮುಹೂರ್ತವನ್ನು ಗೊತ್ತುಪಡಿಸಿಕೊಳ್ಳುತ್ತಾರೆ. ಮದುವೆಯ ಯಾವುದೇ ಕಾರ್ಯದಲ್ಲಿ 'ಓಕಾಳಿ(ಕುಲದ ಮುಖ್ಯಸ್ಥ) ಹಾಗೂ ಓಕಾಳ್ತಿ(ಕುಲದ ಮುಖ್ಯಸ್ಥಳು) ಮತ್ತು ಮದುಮಗನ ಸೋದರಮಾವ ಇರಲೇಬೇಕು. ಹೆಣ್ಣನ್ನು ತಾವು ಒಪ್ಪಿಕೊಂಡ ಮೇಲೆ, ವಧು ವರರ ಕಂಕಣಕೂಡಿಕೆ ಅಂದರೆ ಇಬ್ಬರ ಹೆಸರು, ಬಲದ ಬಗ್ಗೆ ಪುರೋಹಿತರಿಂದ ಶಾಸ್ತ್ರ ಕೇಳುತ್ತಾರೆ. ಇದು ಸರಿಯಾಗಿ ಬಂದಲ್ಲಿ ಹೆಣ್ಣು ಗಂಡುಗಳ ತಂದೆ ತಾಯಿಯರು ಒಟ್ಟಿಗೆ ಕಲಿತು ಮಾತನಾಡಿಕೊಂಡು, ಓಕಾಳಿಯವರು ನಿಗದಿಪಡಿಸಿದಷ್ಟು ಕನ್ಯಾ ಶುಲ್ಕವನ್ನು ವರನ ತಂದೆ ತಾಯಿಗಳು ಕೊಡಲೇಬೇಕು. ನಂತರ ಒಂದು ಶುಭ ದಿವಸ ವಿಳ್ಯೆಶಾಸ್ತ್ರವನ್ನು ಗೊತ್ತು ಮಾಡುತ್ತಾರೆ. ಕಾವಡಿ, ಮೆಂಡ್ರಗುತ್ತಿ, ಸಾತ್ಪಾಡಿ, ಮೇನ್ಪಾಡಿ ಈ ನಾಲ್ಕು ಕುಲಗಳಲ್ಲಿ ಮೊದಲು ಎರಡು ಕುಲಗಳಾದ ಕಾವಾಡಿ ಮತ್ತು ಮೆಂಡ್ರಗುತ್ತಿಗಳ ನಡುವೆ ಹೆಣ್ಣು ಕೊಡುವ ಮತ್ತು ತರುವುದಿಲ್ಲ. ಏಕೆಂದರೆ ಅವರಿಬ್ಬರು ಅಣ್ಣ ತಮ್ಮಂದಿರು ಎಂದು ಭಾವಿಸುತ್ತಾರೆ. ಅದೇ ರೀತಿ ಎರಡನೆಯ ಗುಂಪಾದ ಸಾತ್ಪಾಡಿ ಮತ್ತು ಮೇನ್ಪಾಡಿಗಳೂ ಸಹ ತಾವು ಒಂದೇ ದೇವರ ಮಕ್ಕಳೆಂದು ನಂಬಿರುತ್ತಾರೆ. ಕಾವಾಡಿ ಮತ್ತು ಮೆಂಡ್ರಗುತ್ತ ಕುಲದವರು ಸಾತ್ಪಾಡಿ ಮತ್ತು ಮೇನ್ಪಾಡಿ ಅಥವಾ ಮಾನ್ಪಡಿ ಕುಲಗಳಲ್ಲಿ ಹೆಣ್ಣು ತರಬಹುದು ಹಾಗೂ ಕೊಡಬಹುದು.

ವಧುದಕ್ಷಿಣೆ (ತೆರ) : ಗಂಡಿನವರು ಹೆಣ್ಣನ್ನು ನಿಶ್ಚಯಿಸಿದ ನಂತರ ಹೆಣ್ಣಿನವರಿಗೆ ಕೊಡುತ್ತಿದ್ದ ದಕ್ಷಿಣೆಯೇ ತೆರ. ತೆರದಲ್ಲಿ ಸಣ್ಣ ತೆರ ಮತ್ತು ದೊಡ್ಡ ತೆರ ಎಂದು ಎರಡು ಬಗೆಗಳಿವೆ. ಸಣ್ಣ ತೆರದ ಮೊತ್ತ ಎಪ್ಪತ್ತೆರಡು ರೂಪಾಯಿ ಇದ್ದರೆ ದೊಡ್ಡ ತೆರದ ಮೊತ್ತ ತೊಂಬತ್ತಾರು ರೂಪಾಯಿಗಳು. ಅನುಕೂಲವಿದ್ದವರು ದೊಡ್ಡ ತೆರ ಕೊಟ್ಟರೆ ಬಡವರು ಸಣ್ಣತೆರ ಕೊಡುವ ವಾಡಿಕೆ ಇದೆ. ಕೊರಮ ಸಮುದಾಯದಲ್ಲಿ ಯಾವುದೇ ವರದಕ್ಷಿಣೆ ಕೊಡುವುದು ಇರುವುದಿಲ್ಲ. ಆದರೆ ಮದುವೆಯ ಸಮಯದಲ್ಲಿ ಹೆಣ್ಣಿನ ಸೋದರ ಮಾವನಿಗೆ ೬೪ ರೂಪಾಯಿಗಳು ನೀಡುತ್ತಾರೆ. ಏಕೆಂದರೆ ಮುಂದೆ ಮಗಳಿಗೆ ಹೆಣ್ಣು ಮಗು ಹುಟ್ಟಿದರೆ ಅದು ಸೊದರ ಮಾವನಿಗೆ ಕೊಡಬೇಕು ಎಂದು ೬೪ ರೂ. ಕೊಡುವರು. ಗಂಡಿನವರು ಹೆಣ್ಣಿನ ತವರು ಮನೆಗೆ ತರುವಾಯ ಅದರಲ್ಲಿ ಅರ್ಧ ಭಾಗ ಎಂದರೆ ೩೨ ರೂಪಾಯಿ ನೀಡುತ್ತಾರೆ.

ಆದರೆ ಇತ್ತಿಚಿನ ದಿನಗಳಲ್ಲಿ ಮೇಲಿನ ಸಂಪ್ರದಾಯದೊಂದಿಗೆ ವರದಕ್ಷಿಣೆ ಕೊಡುವ ಪದ್ದತಿ ರೂಢಿಗೆ ಬಂದಿದೆ. ಬಹುಶಃ ಆಧುನಿಕರಣದ ಪ್ರಭಾವವೇ ಇದಕ್ಕೆ ಕಾರಣವಾಗಿರಬಹುದು.

ಎಚ್ ವಿ ನಂಜುಂಡಯ್ಯ ಅವರು ಈ ತೆರದ ಬಗೆಗೆ "The amount of bride price or seventy two rupees and in some places twenty pagodas or sixty rupees. It is said that some times, as much as sum of Rs. 100/- has to be paid" (The Mysore Tribes and Castes: Vol.III: 596) ಎಂದು ವಿವರವನ್ನು ಸಂಗ್ರಹಿಸಿ ದಾಖಲಿಸಿದ್ದಾರೆ. ಹಣದ ಮೊತ್ತದಲ್ಲಿ ಹೆಚ್ಚು ಕಡಿಮೆಯಾದರೂ, ಕರ್ನಾಟಕದಲ್ಲಿ ತೆರವು ಪದ್ಧತಿ ರೂಢಿಯಲ್ಲಿದೆ.

ನಿಶ್ಚಿತಾರ್ಥ: ಕೊರಮ ಸಮುದಾಯದಲ್ಲಿ ನಿಶ್ಚಿಯವಾಗದೆ ಮದುವೆಗೆ ಅನುಮತಿ ದೊರೆಯುವುದಿಲ್ಲ. ಗಂಡಾಗಲಿ, ಹೆಣ್ಣಾಗಲಿ ತನ್ನ ಸಂಗಾತಿಯನ್ನು ಆಯ್ಕೆ ಮಾಡುವಲ್ಲಿ ಹಿರಿಯರು ಪ್ರಮುಖ ಪಾತ್ರವಹಿಸುವರು. ದಿನ ನಿತ್ಯದಂತೆ ಹೆಂಡದ ಅಂಗಡಿಯಲ್ಲಿ ಕುಡಿಯುತ್ತಿರುವಾಗ ಸಮುದಾಯದ ಹಿರಿಯರು ಮಾತುಗಳ ಮುಖಾಂತರ ಬೆಡಗಿಗೆ ಅನುಗುಣವಾಗಿ ಹೆಣ್ಣನ್ನು ಕೊಡತೆಗೆದುಕೊಳ್ಳುವ ಕುರಿತು ಮಾತುಕತೆ ಪ್ರಾರಂಭವಾಗುತ್ತದೆ. ಮಕ್ಕಳಿಗೆ ಇಷ್ಟವಾದರೆ ಸರಿ ಇಷ್ಟವಾಗದಿದ್ದರೂ ಸರಿಯೆ ಮದುವೆಯಾಗಬೇಕು ಎಂದು ನಿರ್ಣಯಿಸಲಾಗುತ್ತದೆ. ಹಿರಿಯರ ನಿರ್ಣಯದಂತೆ ಮದುವೆ ನಡೆಯಲೇಬೇಕು.

ಗಂಡಿನ ಕಡೆಯವರು ಒಂದು ಸೀರೆ, ಎಲೆ ಅಡಿಕೆ, ತೆರವನ್ನು ಕೊಟ್ಟು ಒಕಳಿಗಳ ಎದುರಿಗೆ ಈ ಹೆಣ್ಣನ್ನು ತಮ್ಮ ವರನಿಗೆ ತೆಗೆದುಕೊಂಡಿರುವುದಾಗಿ ಗಂಡಿನ ಕಡೆಯ ಒಕಾಳಿ ಹೇಳುತ್ತಾನೆ. ನಂತರ ಎಲೆ ಅಡಿಕೆ ಹಂಚುವ ಕಾರ್ಯ ನಡೆಯುತ್ತದೆ. ನಂತರ ಕೇರಿಯವರಿಗೂ ಹಾಗೂ ಬಂದಂಥ ಬಂಧುಬಳಗದವರೆಲ್ಲ ಊಟಕ್ಕೆ ನಡೆಯುತ್ತಾರೆ. ಊಟದ ತರುವಾಯ ಗಂಡಿನವರು ನೂರು ರೂಪಾಯಿ ದೈವದವರಿಗೆ ಕೊಟ್ಟರೆ, ಹೆಣ್ಣಿನವರು ಐವತ್ತು ರೂಪಾಯಿ ನೀಡಬೇಕು. ಇದು ದೈವದ ರೊಕ್ಕ, ಇದು ದೈವದ ಮುಖಂಡರು ಹೆಂಡ ಕುಡಿಯುವುದಕ್ಕೆ ಉಪಯೋಗಿಸಲಾಗುತ್ತದೆ. ಈ ದುಡ್ಡು ಕೊಡುವ ಮುಖ್ಯ ಉದ್ದೇಶ ಎಂದರೆ ಮುಂದೆ ಹೆಣ್ಣಿನ ಮತ್ತು ಗಂಡಿನ ಕಡೆಯವರಿಗೆ ಒಳ ಜಗಳ, ಸಮಸ್ಯೆಗಳು ಬಂದರೆ ದೈವದವರು ಈಗ ಕುಡಿದಿದ್ದು ನೆನಪಿನಲ್ಲಿಟ್ಟುಕೊಂಡು ನ್ಯಾಯ ಬಗೆಹರಸಲಿ ಎಂಬುದಾಗಿದೆ. ನಿಶ್ಚಯ ಕಾರ್ಯಕ್ಕೆ ಊಟದ ಖರ್ಚು ಗಂಡಿನ ಕಡೆಯವರೇ ನೋಡಿಕೊಳ್ಳುತ್ತಿದ್ದರು. ಆದರೆ ಇತ್ತಿಚೆಗೆ ಇದರಲ್ಲಿ ಸ್ವಲ್ಪ ಬದಲಾವಣೆ ಕಂಡುಬರುತ್ತದೆ. ಹೆಣ್ಣಿನ ಕಡೆಯವರು ಗಂಡಿಗೆ ತಮ್ಮ ಹೆಣ್ಣು ಇಷ್ಟವಾಯಿತೋ ಇಲ್ಲವೊ ಎಂದು ದೈವದೊಳಗೆ ಕೇಳುತ್ತಾರೆ. ಆಗ ಗಂಡು ಇಷ್ಟವಾಯಿತು ಎಂದ ಮೇಲೆ ಗಂಡಿನವರು ಹೆಣ್ಣಿಗೆ ಸೀರೆ, ಬಳೆ, ಡಾಭ, ಬೆಂಡೊಲಿ, ಹೂವು, ಕಾಲುಂಗುರ, ತೊಡಿಸುವರು. ಮತ್ತು ಗಂಡಿನ ಕಡೆಯವರು ಹೆಣ್ಣಿನವರಿಗೆ ಕುಂಕುಮ ನೀಡುವರು.

ಹಂದರ: ಮದುವೆಯಲ್ಲಿ ಹಂದ್ರ ಹಾಕುವುದು ಒಂದು ಪ್ರಮುಖ ಸಂಪ್ರದಾಯ. ಮದುವೆಗೆ ಒಂದು ದಿನಾ ಮೊದಲು ಗಂಡಿನ ಮನೆಯಲ್ಲಿ ಹಂದ್ರ ಹಾಕಲಾಗುತ್ತದೆ. ಐದು ಘಂಟೆಯ ಸುಮಾರು ಐದು ಎತ್ತಿನ ನಗಗಳನ್ನು ನಡುತ್ತಾರೆ. ಅವು ನಾಲ್ಕು ಮೂಲೆಗಳಿಗೆ ಅಂದರೆ ಚೌಕಕಾರದಲ್ಲಿ ನೆಡಲಾಗುತ್ತದೆ.

ಇನ್ನೊಂದು ನಗ ಎರಡರ ನಡುವೆ ಇರುತ್ತದೆ. ನಗಗಳಿಗೆ ತೆಂಗಿನ ಗರಿಗಳು ಮತ್ತು ಮಾವಿನ ಎಲೆಗಳನ್ನು ಕಟ್ಟುತ್ತಾರೆ. ಅದರಲ್ಲಿ ಬಲಗಡೆ ಇರುವ ನಗಕ್ಕೆ ದೀಪ ಹಚ್ಚುತ್ತಾರೆ. ಸಂಜೆ ಹೆಣ್ಣಿನ ಕಡೆಯ ಬೀಗರು ಗಂಡಿನ ಮನೆಗೆ ಬರುತ್ತಾರೆ. ಹೆಣ್ಣಿನ ಕಡೆಯವರನ್ನು ಊರಿನ ಹನುಮಂತದೇವರ ಗುಡಿಯೊಳಗೆ ಕೂಡಿಸಿ ಗಂಡಿನವರು ಹೆಣ್ಣಿನವರಿಗೆ ಮಸಿ ಊಟವಾಗಿ ರೊಟ್ಟಿ, ಗಟ್ಟಿಬೇಳೆ ನೀಡುತ್ತಾರೆ. ನಂತರ ಪದಗಳನ್ನು ಹಾಡುವುದರ ಮೂಲಕ ಬಿಡದಿ ಮನೆಗೆ ಕರೆದುಕೊಂಡು ಹೋಗುತ್ತಾರೆ.

ಐರಣಿ ತರುವುದು : ಕುಂಬಾರ ಮನೆಯಿಂದ ಐದು ಮಣ್ಣಿನ ಕೊಡ ತೆಗೆದುಕೊಂಡು ಬರುತ್ತಾರೆ. ಗಂಡಿನ ಮನೆಯವರು ಕೊಡ ತೆಗೆದುಕೊಂಡು ಬಂದವರಿಗೆ ಬಟ್ಟೆ ತೊಡಿಸುತ್ತಾರೆ. ನಂತರ ವಾದ್ಯದೊಂದಿಗೆ ಬಾವಿಗೆ ಹೋಗಿ ನೀರು ತುಂಬಿಸಿಕೊಂಡು ತರುತ್ತಾರೆ. ಆ ಕೊಡ ನೀರನ್ನು ಹಂದ್ರದೊಳಗೆ ಇಟ್ಟು ಆ ಐದು ಕೊಡಗಳಿಗೆ ನೂಲನ್ನು ಸುತ್ತುತ್ತಾರೆ. ಇದರಲ್ಲಿ ಮದುಮಗ ಮತ್ತು ಮದುಮಗಳು ಮತ್ತು ತಂದೆ-ತಾಯಿಯಂದಿರಿಗೂ ಜೊತೆಗೂಡಿಸಿ ನೀರನ್ನು ಹಾಕಲಾಗುತ್ತದೆ. ನಂತರ ಮದುಮಕ್ಕಳಿಗೆ ಹಾಗೂ ತಂದೆ ತಾಯಂದರಿಗೂ ಹೊಸ ಬಟ್ಟೆಗಳನ್ನು ನೀಡಲಾಗುತ್ತದೆ. ಮದುಮಕ್ಕಳನ್ನು ಹಂದ್ರದೊಳಗೆ ಕರೆದುಕೊಂಡು ಹೋಗಿ ಕೂಡಿಸಿ ತಾಳಿ ಕಟ್ಟುವ ಕಾರ್ಯಕ್ರಮ ಮಾಡುತ್ತಾರೆ. ತರುವಾಯ ಎಲ್ಲಾ ಸಂಬಂಧಿಕರಿಗೂ ಮದುವೆಯ ಊಟವನ್ನು ಮಾಡಿಸಲಾಗುತ್ತದೆ.

ಮರುದಿನ ಚಾಪಿಕಟ್ಟಿ ಹಾಸಿ ಗಂಡಿನವರು ೫೦೦ ರೂ.ಗಳು ಇಟ್ಟರೆ ಹೆಣ್ಣಿನವರು ೨೫೦ ರೂ. ಇಡುತ್ತಾರೆ. ಇದರಿಂದ ಒಂದು ಬ್ಯಾಟಿಯನ್ನು ತೆಗೆದುಕೊಂಡು ಬಂದು ಮಾಂಸದಡುಗೆಯನ್ನು ಮಾಡಿಸಿ ಬಂದಿರುವ ಬೀಗರಿಗೂ ದೈವಕ್ಕೂ ಮಾಂಸದೂಟವನ್ನು ಹಾಕಿಸಿ ಬೀಳ್ಕೊಡುತ್ತಾರೆ. ಮಾಂಸದ ಊಟಕ್ಕೆ ಕೊರಮರು ಕುಕಡಿ ಬ್ಯಾಟಿ ಎಂದು ಕರೆಯುತ್ತಾರೆ.

ಚಾಜ ಪದ್ಧತಿ : ಮದುವೆಯ ಸಂದರ್ಭದಲ್ಲಿ ವರ ಅಥವಾ ವಧುವಿಗೆ ಯಾವುದೇ ಭಾಗವು ಊನವಾದರೆ ಅಂಥವರಿಗೆ ಚಾಜ ಇರುವುದಿಲ್ಲ. ಉದಾಹರಣೆಗೆ ಹೆಣ್ಣಿಗೆ ಕಣ್ಣೋ, ಕಾಲೋ, ಕೈಯೊ ಇರದಿದ್ದರೆ ಅಂಥವರನ್ನು ಮದುಮಗನ ಜೊತೆ ಕೂಡಿಸದೆ ಬೇರೆ ಕಡೆ ಕೂಡಿಸಿ ನೀರು ಹಾಕಲಾಗುತ್ತದೆ. ಮತ್ತು ಅಂಥವರಿಗೆ ಯಾವುದೇ ಚಾಜ ಮಾಡಬೇಕಾದರೆ, ಚಾಜ ಕಳೆದುಕೊಂಡವರೆ ಮಾಡಬೇಕು ಎಂದಿದೆ. ಹೆಣ್ಣಾಗಲಿ ಗಂಡಾಗಲಿ ಯಾವುದೇ ತರಹದ ಮಾನ್ಯತೆ ಕೊಡುವುದಿಲ್ಲ.

ಮದುವೆಯ ಕ್ರಮ

ಮದುವೆಯ ಮುಂದಿನ ದಿನವಾಗಿ ಪೂರ್ವಾಭಿಮುಖವಾಗಿ ಎರಡು ಗುಡಿಸಲುಗಳನ್ನು ಹಾಕುತ್ತಾರೆ. ಬಲಭಾಗದ್ದು ಗಂಡಿನ ಗುಡಿಸಲಾದರೆ, ಎಡಭಾಗದ್ದು ಹೆಣ್ಣಿನ ಕಡೆಯವರದ್ದು. ಎರಡೂ ಕಡೆಯವರು ತಮ್ಮ ತಮ್ಮ ಚಪ್ಪರಗಳಲ್ಲಿಯೇ ಮದುವೆಯ ಕಾರ್ಯದ ಕೆಲಸಗಳನ್ನು ಆರಂಭಿಸುತ್ತಾರೆ. ಕೊರಮ ಬುಡಕಟ್ಟಿನವರು ಹಿಂದೆ ಐದು ದಿನಗಳವೆರೆಗೆ ಆದ್ದೂರಿಯಿಂದ ಮದುವೆ ಮಾಡುತ್ತಿದ್ದರಂತೆ. ಧಾರೆಗೆ ನಿರ್ದಿಷ್ಟವಾದ ವಾರವೇ ಆಗಬೇಕೆಂಬ ನಿಯಮವೇನೂ ಇವರಲ್ಲಿ ಕಂಡುಬರುವುದಿಲ್ಲ. ಮೊದಲನೆಯ

ದಿನ ಮದುವಣಿಗ ಶಾಸ್ತ್ರ ಪ್ರಾರಂಭವಾದರೆ ಮಾರನೆಯ ದಿನವೂ ಅರಿಷಿಣ, ಎಣ್ಣೆ ಹಚ್ಚುವ ಶಾಸ್ತ್ರ ಮಾಡುತ್ತಿದ್ದರಂತೆ. ಮೂರನೆಯ ದಿನ ಧಾರೆ, ನಾಲ್ಕನೆಯ ದಿನ ನಾಗೋಲಿ, ಐದನೆಯ ದಿನ ಹೆಣ್ಣು ಕಳಿಸುವ ಶಾಸ್ತ್ರದಿಂದ ಮದುವೆ ಕೊನೆಗಾಣುತ್ತಿತ್ತು.

ಮದುವೆಯಲ್ಲಿ ಮೊದಲು ಚಪ್ಪರ ಹಾಕುತ್ತಾರೆ. ಚಪ್ಪರಗಳನ್ನು ಗಂಡು ಹೆಣ್ಣಿನ ಮನೆಗಳ ಮುಂದೆ ಹಾಕುತ್ತಾರೆ. ಐದು ಇಲ್ಲವೆ ಒಂಭತ್ತು ಅಥವಾ ಬೆಸ ಸಂಖ್ಯೆಗಳ ಕಂಬಗಳನ್ನು ನೆಡುತ್ತಾರೆ. ಐದು ಕಂಬಗಳ ಚಪ್ಪರದಲ್ಲಿ ನಾಲ್ಕು ಕಂಬಗಳನ್ನು ಚೌಕವಾಗಿ ನೆಟ್ಟು ಐದುನೆಯದನ್ನು ಅವುಗಳ ಮಧ್ಯೆ ನೆಡುತ್ತಾರೆ. ಇದನ್ನು ಹಾಲುಗಂಬವೆಂದು ಕರೆಯುತ್ತಾರೆ. ಹಾಲುಗಂಬದ ಮುಂದೆಯೇ ಧಾರೆ ಶಾಸ್ತ್ರಗಳು ನಡೆಯುತ್ತವೆ.

ಮೊದಲ ದಿನ ಮುಂಜಾನೆ ತಾಟು, ತೆರವು ಕೊಡುವುದು ನಡೆದರೆ, ಸಂಜೆ ತಮ್ಮ ತಮ್ಮ ಮನೆಗಳಲ್ಲಿಯೇ ಗಂಡು ಹೆಣ್ಣಿಗೆ ಬೇರೆ ಬೇರೆಯಾಗಿಯೆ ಅರಿಷಿಣ ಹಚ್ಚಿ ಎರೆಯುವ ಕಾರ್ಯ ನಡೆಯುತ್ತದೆ. ಎರಡನೆಯ ದಿನ ಮುಂಜಾನೆ ಗಂಡಿನ ಮನೆಯೊಳಗೆ ಇಬ್ಬರಿಗೂ ಕೂಡಿಸಿ ಅರಿಷಿಣ ಹಚ್ಚಿ ನೀರೆರೆಯುವ ಶಾಸ್ತ್ರ ಮಾಡುತ್ತಾರೆ. ಮೂರನೆಯ ದಿನ ಮದುವೆ ಚಪ್ಪರಕ್ಕೆ ತಾಯೊಳಕು (ತಾಯಿದೀಪ) ಇಟ್ಟ ಮೇಲೆ ಧಾರೆ ಪ್ರಾರಂಭವಾಗುತ್ತದೆ. ಗಂಡಿನ ಕೈಗೆ ವೀಳ್ಯೆದೆಲೆಯಲ್ಲಿ ಬಾಳೆ ಹಣ್ಣೊಂದನ್ನಿಟ್ಟು ಕೈಮೇಲೆ ನೀರು ಹಾಕುತ್ತಾರೆ. ಆತ ನಿಂತಲ್ಲಿಯೇ ಪ್ರದಕ್ಷಿಣೆ ಹಾಕುತ್ತಾ ದೇವರನ್ನು ಸ್ಮರಿಸುತ್ತಾ ಧಾರೆಯ ಹಸೆಯ ಮೇಲಿನ ಮಣೆಗೆ ಬರುತ್ತಾನೆ. ಒಂದು ಬಿಳಿ ಬಟ್ಟೆಯ ಪರದೆಯನ್ನು ಅಡ್ಡ ಹಿಡಿದು ಗಂಡು ಹೆಣ್ಣನ್ನು ಎದಿರುಬದಿರಾಗಿ ನಿಲ್ಲಿಸುತ್ತಾರೆ. ನೇರವಾಗಿ ಗಂಡು ಹೆಣ್ಣು ಒಬ್ಬರ ಮುಖವನ್ನೊಬ್ಬರು ನೋಡುವಂತಿಲ್ಲ. ಕುಲದ ಹಿರಿಯರೊಬ್ಬರು ಧಾರೆ ಸಮಯದಲ್ಲಿ ಪುರೋಹಿತರ ಕೆಲಸ ಮಾಡುತ್ತಾರೆ. ದೈವದ ಎದುರು ಇಬ್ಬರನ್ನೂ ಶ್ಯಾಸಿಕಟ್ಟೆಯ ಮೇಲೆ ಕೂಡಿಸುತ್ತಾರೆ. ಹಿರಿಯರ ಸಮ್ಮುಖದಲ್ಲಿ ಗಂಡು ಹೆಣ್ಣಿಗೆ ತಾಳಿ ಕಟ್ಟುತ್ತಾನೆ. ಎಲ್ಲರೂ ಅಕ್ಕಿಕಾಳು ಹಾಕುವರು. ಇಲ್ಲಿಗೆ ಮದುವೆ ಮುಗಿದಂತೆ. ಐದು ದಿವಸ ಇಡೀ ಸಮಾಜದವರಿಗೆ ಊಟೋಪಚಾರ ಹಾಗೂ ಹೆಂಡ, ಖಂಡದ ಸಮಾರಾಧನೆ ನಡೆಯುತ್ತದೆ.

ಮದುವೆಯ ಮಾರನೆ ದಿನ ನಾಗೋಳಿ ಶಾಸ್ತ್ರ ಮತ್ತು ಇತರೆ ಆಚರಣೆಗಳು ನಡೆಯುತ್ತವೆ. ಮದುವೆಯ ಚಪ್ಪರದಲ್ಲಿ ಹಸೆ ಬರೆಯುತ್ತಾರೆ. ಹಸೆಯ ಮೇಲೆ ಗಂಡು ಹೆಣ್ಣನ್ನು ಅಕ್ಕಿ ಎರಚುವ ಶಾಸ್ತ್ರ ಮತ್ತೆ ನಡೆಯುತ್ತದೆ. ಆದರೆ ಈ ಸಂದರ್ಭದಲ್ಲಿ ಅಕ್ಕಿ ಎರಚುವ ಮೊದಲೇ ಗಂಡು ಹೆಣ್ಣು ಪರಸ್ಪರ ಅಕ್ಕಿ ಎರಚಿಕೊಳ್ಳುತ್ತಾರೆ. ಇದೇ ಹಸೆಯ ಮೇಲೆಯೇ ಮಗು ತೂಗುವ ಶಾಸ್ತ್ರವೂ ನಡೆಯುತ್ತದೆ. ಇದರ ಉದ್ದೇಶ ಹೆಣ್ಣು ಮೊದಲಿಗೆ ಗಂಡು ಮಗುವನ್ನು ಹೆತ್ತು ಸುಖವಾಗಿರಲಿ ಎಂಬುದಾಗಿದೆ. ಐದು ಜನ ಮುತ್ತೈದೆಯರು ಮಂಗಳಾರತಿ ಮಾಡುತ್ತಾರೆ.

ನಾಗೋಳಿಶಾಸ್ತ್ರದ ಮಾರನೆಯ ದಿನ ಮದುವೆ ಚಪ್ಪರದಲ್ಲಿ ಹಸೆಹಚ್ಚಿ ಗಂಡು ಹೆಣ್ಣನ್ನು ಕೂರಿಸಿ ಬಂಧುಬಳಗದವರೆಲ್ಲರೂ ಮುಯ್ಯಿ ಮಾಡುತ್ತಾರೆ. ಅಂದೇ ಹೆಣ್ಣನ್ನು ಗಂಡನ ಮನೆಗೆ ಕಳಿಸಿಕೊಡುವ

ಶಾಸ್ತ್ರ ಮಾಡುತ್ತಾರೆ. ಮದುವೆ ಮುಗಿಯುವುದರೊಳಗೆ ಒಂಭತ್ತು ಹಸೆ ಹಚ್ಚುತ್ತಾರೆ. ಪ್ರಸ್ತುತ ಸಂದರ್ಭದಲ್ಲಿ ಐದು ದಿನದ ಮದುವೆಗಳು ನಡೆಯುತ್ತಿಲ್ಲ. ಮೂರು ದಿನಕ್ಕೆ ಮದುವೆಗಳು ಸೀಮಿತಗೊಂಡಿವೆ.ಇವರಲ್ಲಿ ವಿಧವೆಯರು, ಮರು ವಿವಾಹವಾದವರು ವಿವಾಹ ಮಂಟಪವನ್ನು ಪ್ರವೇಶಿಸುವಂತಿಲ್ಲ. ಇದರಿಂದಾಗಿ ಹೆಣ್ಣಿಗೆ ಅಶುಭವಾಗುತ್ತದೆಂಬ ನಂಬಿಕೆ ಇವರಲ್ಲಿದೆ.

ಪ್ರಸ್ಥ : ಮದುವೆಯಾದ ಐದನೆಯ ದಿನದಂದು ತಮ್ಮ ಮನೆಯ ದೇವರಿಗೆ ಕಾಯಿ ಒಡೆದು ಆ ದಿನಾ ರಾತ್ರಿ ಇಬ್ಬರು ಸಂಗಾತಿಗಳು ಒಂದೇ ಕಡೆ ಮಲಗಿಸುತ್ತಾರೆ. ಹಾಸಿಗೆ ಹಾಸುವ ಶಾಸ್ತ್ರವನ್ನು ಗಂಡಿನ ತಂಗಿಯರು ಅಥವಾ ಚಿಕ್ಕಮ್ಮಂದಿರು ಮಾಡುತ್ತಾರೆ. ನಂತರ ಬೆಳಗ್ಗೆ ಎದ್ದು ಬರುವಾಗ ಮದುಮಗ ಹಾಸಿಗೆಯ ಮೇಲೆ ಹತ್ತು ರೂಪಾಯಿ ಇಟ್ಟು ಬರುತ್ತಾನೆ. ರಾತ್ರಿ ಹಾಸಿಗೆ ಹಾಸಿದವರು ಆ ಹತ್ತು ರೂ. ತೆಗೆದುಕೊಳ್ಳುತ್ತಾರೆ.

ವಿವಾಹದ ವಿಧಗಳು : ಕೊರಮರಲ್ಲಿ ಹಲವು ಬಗೆಯ ವಿವಾಹ ಕ್ರಮಗಳನ್ನು ಕಾಣಬಹುದು. ಕೂಡಿಕೆ ಮದುವೆ, ವಿಧವಾ ವಿವಾಹಗಳು ಇವರಲ್ಲಿ ಕಾಣಬಹುದಾಗಿದೆ. ಕೊರಮ ಸಮುದಾಯದಲ್ಲಿ ಏಕಪತ್ನಿತ್ವ ಜಾರಿಯಲ್ಲಿದೆ. ಒಂದು ವೇಳೆ ಬಹುಪತ್ನಿತ್ವವಾಗಬೇಕಾದರೆ ಹೆಂಡತಿಯ ಅಪ್ಪಣೆ ಪಡೆಯಲೇಬೇಕು. ಮೊದಲ ಹೆಂಡತಿಗೆ ಮಕ್ಕಳಾಗದಿದ್ದರೆ, ವಾರಸುದಾರರ ಸಲುವಾಗಿ ಮತ್ತೊಂದು ಮದುವೆಯಾಗುವರು.ಆದರೆ ಮೊದಲ ಹೆಂಡತಿಯ ಅನುಮತಿಯಿಲ್ಲದೆ ಎರಡನೆಯ ಮದುವೆಗೆ ಅವಕಾಶವಿರುವುದಿಲ್ಲ ಹಾಗೆ ಇವರಲ್ಲಿ ಬಹುಪತಿತ್ವಕ್ಕೆ ಅವಕಾಶವಿಲ್ಲ. ಹಾಗೆ ಕೊರಮ ಸಮುದಾಯದಲ್ಲಿ ಅಂತರ್ಜಾತಿಯ ವಿವಾಹಕ್ಕೆ ಅವಕಾಶವಿಲ್ಲ. ಒಂದುವೇಳೆ ಈ ಸಮುದಾಯದ ಹುಡುಗನು ಬೇರೊಂದು ಸಮುದಾಯದ ಹುಡುಗಿಯನ್ನು ಮದುವೆಯಾದರೆ ಅಂಥವರಿಗೆ ಕುಲದಿಂದ ಹೊರಗೆ ಇಡಲಾಗುತ್ತದೆ. ಯಾವುದೇ ಕಾರ್ಯ ಕ್ರಮಗಳಲ್ಲಿ ಅವರು ಭಾಗವಹಿಸುವಂತಿಲ್ಲ. ಒಟ್ಟಾರೆಯಾಗಿ ಅವರನ್ನು ಕುಲ ಸಮುದಾಯದಿಂದ ಬಹಿಷ್ಕರಿಸಲಾಗುತ್ತದೆ.

ಕೂಡಿಕೆ : ಕೊರಮ ಬುಡಕಟ್ಟಿನಲ್ಲಿ ಕೂಡಿಕೆಗಳಿಗೆ ಅವಕಾಶವುಂಟು. ಗಂಡಿನ ಮರು ಮದುವೆಗೆ ಇವರಲ್ಲಿ ಯಾವುದೇ ರೀತಿಯ ನಿಷೇಧವಿಲ್ಲ. ಆದರೆ ಹೆಣ್ಣಿನ ಮರು ಮದುವೆಗೆ ಮದುವೆ ಎಂದು ಕರೆಯುವುದಿಲ್ಲ. ಹಾಗೆಯೇ ಈ ಮದುವೆಯಲ್ಲಿ ಮದುವೆಯ ಯಾವ ಶಾಸ್ತ್ರಗಳೂ ನಡೆಯುವುದಿಲ್ಲ. ಈ ರೀತಿಯ ಮದುವೆಗೆ ಉಡಿಕೆ ಅಥವಾ ಸೀರುಡಿಕೆ ಎಂದು ಕರೆಯುತ್ತಾರೆ. ಇದು ಅತ್ಯಂತ ಸರಳವಾಗಿ ನಡೆಯುತ್ತದೆ. ಇದರಲ್ಲಿ ಹೆಂಡತಿ ಸತ್ತವನು ಗಂಡ ಸತ್ತವಳನ್ನು ಅಥವಾ ಗಂಡ ಬಿಟ್ಟವಳನ್ನು ಹೀಗೆ ಉಡಿಕೆ ಮದುವೆ ಮಾಡಿಕೊಳ್ಳುತ್ತಾರೆ. ಸೀರುಡಿಕೆಯು ಸಾಂಸಾರಿಕ ಜೀವನದಿಂದ ವಂಚಿತರಾದವರು, ಸಾಂಸಾರಿಕ ಜೀವನ ಸಾಗಿಸಲು ಕುಲದಿಂದ ಒಪ್ಪಿಗೆ ಪಡೆಯಲು ಮಾಡಿಕೊಂಡ ಒಂದು ಪದ್ಧತಿಯ ವಿವಾಹವಾಗಿದೆ.

ಕೋಷ್ಟಕ ೪.೩.೧: ಸಮೀಕ್ಷೆಗೊಳಪಟ್ಟ ಕೊರಮರ ವೈವಾಹಿಕ ಸ್ಥಾನಮಾನ

	ಪುರುಷ	ಸ್ತ್ರೀ	ಒಟ್ಟು
ವೈವಾಹಿಕ ಸ್ಥಾನಮಾನ			
ಒಟ್ಟು ಜನಸಂಖ್ಯೆ	೩೦೭೨	೨೮೪೯	೫೯೭೧
ಅವಿವಾಹಿತರು	೧೭೩೫	೧೪೬೫	೩೨೦೦
ವಿವಾಹಿತರು	೧೩೦೪	೧೩೦೫	೨೬೦೯
ವಿದುರ/ವಿದುವೆಯರು	೩೧	೧೨೦	೧೫೧
ಬೇರ್ಪಡೆಯಾದವರು	೦೨	೦೯	೧೧

ಸಮೀಕ್ಷೆಗೊಳಪಟ್ಟ ಸಟಲಮೆಂಟ್ ಕೊರಮರ ಒಟ್ಟು ಜನಸಂಖ್ಯೆ ೫೯೭೧ ಇದರಲ್ಲಿ ವಿವಾಹಿತರ ಪ್ರಮಾಣವು ೪೩.೫೭ ರಷ್ಟಿದೆ. ಇದರಲ್ಲಿ ವಿಧುರ, ವಿಧವೆಯರು ಶೇಕಡ ೨.೫೨ ಇದೆ. ಇನ್ನು ಗಂಡ, ಹೆಂಡತಿಯರಿಂದ ಬೇರ್ಪಡೆಯಾದವರ ಪ್ರಮಾಣವು ೦.೮೧ಇದೆ. ಅವಿವಾಹಿತರ ಪ್ರಮಾಣವು ೫೩.೨೯ ಕಂಡುಬರುವುದು.

ಜನನ, ನಾಮಕರಣ, ಋತುಮತಿ, ಸೀಮಂತ, ಮರಣ

ಹುಟ್ಟಿನಿಂದ ಸಾಯುವತನಕ ಬದುಕಿನ ಪ್ರತಿ ಹಂತದಲ್ಲೂ ಸಂಪ್ರದಾಯ ಮತ್ತು ನಂಬಿಕೆಗಳಿಗೆ ಮನುಷ್ಯನು ಹೆಚ್ಚು ಮಹತ್ವವನ್ನು ಕೊಡುತ್ತಾನೆ. ಒಬ್ಬ ವ್ಯಕ್ತಿಯ ನಡತೆ, ಅಭ್ಯಾಸವನ್ನು ಸಂಪ್ರದಾಯವೆಂದು ಕರೆಯುವುದಿಲ್ಲ. ಅದರ ಬದಲು ಇಡೀ ಸಮುದಾಯವು ಪರಂಪಾರನುಗತವಾಗಿ ಅನುಸರಿಸುತ್ತಾ ಬಂದಿರುವ ನೀತಿ ನಡವಳಿಕೆಗಳು ಸಂಪ್ರದಾಯವೆನಿಸಿ ಕೊಳ್ಳುತ್ತವೆ.

ಸೀಮಂತ : ಕೊರಮ ಬುಡಕಟ್ಟಿನಲ್ಲಿ ಸೀಮಂತ ಕಾರ್ಯ ಇರಲಿಲ್ಲ. ಇತ್ತೀಚಿಗೆ ಅನ್ಯ ಸಮುದಾಯಗಳ ಪ್ರಭಾವದಿಂದಾಗಿ ಆರ್ಥಿಕವಾಗಿ ಬಲಾಢ್ಯರಾದವರು ಸೀಮಂತ ಕಾರ್ಯ ಮಡುವುದುಂಟು

ಹೆರಿಗೆ : ಎಲ್ಲಾ ಸಮುದಾಯಗಳಲ್ಲಿರುವಂತೆ ಇವರಲ್ಲೂ ಸಹ ಸಾಮಾನ್ಯವಾಗಿ ಚೊಚ್ಚಿಲ ಹೆರಿಗೆ ತವರಿನಲ್ಲೇ ನಡೆಯುತ್ತದೆ. ಹೆಂಡತಿಯು ಗರ್ಭಧರಿಸಿದ ಮೂರನೇ ತಿಂಗಳಲ್ಲಿ ಗಂಡಿನ ಮನೆಯವರು ತಮ್ಮ ಸೊಸೆ ಗರ್ಭ ಧರಿಸಿದ ವಿಷಯವನ್ನು ಹೆಣ್ಣಿನ ತೌರಿಗೆ ತಿಳಿಸುತ್ತಾರೆ. ಹೆಣ್ಣಿನ ಮನೆಯವರು ನಾಲ್ಕನೇ ತಿಂಗಳಲ್ಲಿ ಬಯಕೆ ಬುತ್ತಿ ತೆಗೆದುಕೊಂಡು ಹೋಗಿ ಮಗಳು ಬಯಕೆಯಂತೆ ತಿಂಡಿ ಪದಾರ್ಥಗಳನ್ನು ಕೊಟ್ಟು ಬರುತ್ತಾರೆ. ಏಳು ತಿಂಗಳು ತುಂಬಿದ ಬಳಿಕ ಬಸಿರೆ ಹೆಂಗಸನ್ನು ತವರಿಗೆ ಕರೆದುಕೊಂಡು ಹೋಗುತ್ತಾರೆ.

ಹೆರಿಗೆ ಬೇನೆ ಕಾಣಿಸಿಕೊಳ್ಳುತ್ತಿದ್ದಂತೆ ಆಕೆಗೆ ಹರಕು ಈಚಲು ಚಾಪೆ, ಹಳೆಯ ಸೀರೆ, ಕೌದಿಯಿಂದ ಮರೆ ಮಾಡುತ್ತಾರೆ. ಬಿಡಾರದ ಮುದುಕಿಯರು ಹಾಗೂ ಕುಟುಂಬದ ಇನ್ನುಳಿದ ಹೆಣ್ಣುಮಕ್ಕಳು ಹೆರಿಗೆ ಮಾಡಿಸಲು ಮುಂದಾಗುತ್ತಾರೆ. ಈ ಸಂದರ್ಭದಲ್ಲಿ ಹಿರಿಯ ಮಹಿಳೆಯೇ ಸೂಲಗಿತ್ತಿಯಾಗಿ ಕಾರ್ಯ

ನಿರ್ವಹಿಸುತ್ತಾಳೆ. ಮಗು ಜನಿಸಿದ ತಕ್ಷಣ ಗುಡಿಸಿಲಿನ ಮುಂದೆ ಸಾಂಬ್ರಾಣಿ ಹೊಗೆಯನ್ನು ಹಾಕಿ ಸ್ವರ್ಗಸ್ಥರಾದ ಹಿರಿಯರ ಆತ್ಮಕ್ಕೆ ಬೆಲ್ಲವನ್ನು ಅರ್ಪಿಸುವರು. ಮಗುವನ್ನು ಆಕಳ ಗಂಜಲದಿಂದ ಒರೆಸಿ ಶುದ್ಧಗೊಳಿಸುವರು. ಮಗು ಹುಟ್ಟುವಾಗ ಅದರ ಹೊಕ್ಕಳ ಬಳ್ಳಿ ಕೊರಳಿಗೆ ಸುತ್ತಿಕೊಂಡಿದ್ದರೆ ಅದರ ತಂದೆ, ಸೊದರಮಾವನಿಗೆ ಅಶುಭವೆಂದು ನಂಬುತ್ತಾರೆ. ಇದನ್ನು ನಿವಾರಿಸಲು ಒಂದು ಹುಂಜವನ್ನು ಬಲಿ ಕೊಟ್ಟು ಅದರ ಕರುಳನ್ನು ಮಗುವಿನ ಕುತ್ತಿಗೆಗೆ ಹಾಕುವರು. ಅನಂತರ ಮಾಸದೊಂದಿಗೆ ಅದನ್ನು ಹೂಳಿಬಿಡುವರು. ಹಡೆದ ಮೂರು ದಿನಗಳವರೆಗೆ ಬಾಣಂತಿಗೆ ಸಪ್ಪೆಯ ಅನ್ನ, ಬಳ್ಳೊಳ್ಳಿ, ಅಜಿವಾನ ಕೊಬ್ಬರಿಯನ್ನು ತಿನ್ನಲು ಕೊಡುತ್ತಾರೆ. ನಾಲ್ಕನೆಯ ದಿನದಿಂದ ಕೆಲವರು ಹಂದಿಯ ಮಾಂಸವನ್ನು ನೀಡುವರು. ಮೂರು ದಿವಸದವರೆಗೆ ಪ್ರತಿದಿನವೂ ಬಾಣಂತಿಗೆ ಬಿಸಿ ನೀರಿನಿಂದ ಸ್ನಾನವನ್ನು ಮಾಡಿಸುತ್ತಾರೆ. ನಂತರ ಸೊಂಟಕ್ಕೆ ಚೆನ್ನಾಗಿ ಬಟ್ಟೆ ಬಿಗಿದು ಕಟ್ಟುತ್ತಾರೆ. ಒಲೆಯ ಮುಂದೆ ಕೂಡಿಸಿ ಬೆಂಕಿ ಕಾಯಿಸುತ್ತಾರೆ. ಬಜೆ, ಹೂವಿನಕಾಳು, ಕಾಡುಜೀರಿಗೆ ಮುಂತಾದವುಗಳನ್ನು ಬಾಣಂತಿಗೆ ನೀಡುವರು

ಹೆರಿಗೆಯಾಗುತಿದ್ದಂತೆ ಚಾಕು, ಕುಡುಗೊಲು ಇಲ್ಲವೆ ಕತ್ತಿ, ಮಚ್ಚಿನಿಂದ ಹೊಕ್ಕಳು ಬಳ್ಳಿಯನ್ನು ಕತ್ತರಿಸುತ್ತಾರೆ. ಹುರಿ ಕೊಯ್ದ ಜಾಗಕ್ಕೆ ಅರಿಷಿಣ, ಎಣ್ಣೆ ಹಚ್ಚಿ ತಾಯಿ ಹತ್ತಿರ ಮಲಗಿಸುತ್ತಾರೆ. ಮಗು ಹುಟ್ಟಿದ ತಕ್ಷಣವೆ ತಾಯಿಯ ಹೊಟ್ಟೆಗೆ ನೀರು ಬಡೆಯುತ್ತಾರೆ. ಬಾಣಂತಿಯ ಮಾಸನ್ನು ತೆಗೆದುಕೊಂಡು. ಒಂದು ಹೊಸ ಗಡಿಗೆಯಲ್ಲಿ ಹಾಕಿ ಅದನ್ನು ಬಿಡಾರದ ಮುಂದೆ ಸಣ್ಣದೊಂದು ಕುಣಿ ತೋಡಿ ಹೂಳುತ್ತಾರೆ. ಹೂಳುವ ಮೊದಲು ಅರಿಸಿಣ ಕುಂಕುಮ ಇಟ್ಟು ಕಾಯಿ ಒಡೆದು, ಉಳ್ಳಾಗಡ್ಡಿ ಇಲ್ಲವೆ ನಿಂಬೆಹಣ್ಣು ಕೊಯಿದು ಬೇವಿನ ತೊಪ್ಪಲು ಹಾಕಿ ಪೂಜೆ ಸಲ್ಲಿಸಿ ಹೂಳುತ್ತಾರೆ. ಮಗು ಹುಟ್ಟಿದ ಮೂರನೆಯ ದಿನ ಇರ್ಲ್ ಪೂಜೆಮಾಡುತ್ತಾರೆ. ಈ ಪೂಜೆಗೆ ಕೋಳಿಯನ್ನು ಬಲಿಕೊಟ್ಟು ಮಾಸಿಗೆ ಕೋಳಿಯ ಖಂಡವನ್ನು ನೈವೇದ್ಯಯಾಗಿ ಇಡುತ್ತಿದ್ದರು. ಮಗು ಹುಟ್ಟಿದ ಐದನೇ ದಿವಸಕ್ಕೆ ಜೋಳದ ಹಿಟ್ಟಿನ ಹರಗಿಣ ಹಚ್ಚಿ ಜಳಕಮಾಡಿಸಿ ರಾತ್ರಿ ಸೆಟಿಗೆ(ಚುಟಿಗೆ)ಯನ್ನು ಇಡುತ್ತಾರೆ. ಚುಟಿಗೆಯನ್ನು ಸೂಲಗಿತ್ತಿ ಇಡುತ್ತಾಳೆ. ಸೂಲಗಿತ್ತಿಗೆ ಹುಡಿಯಲ್ಲಿ ಜೋಳವನ್ನು ಹಾಕಿ ಆಕೆ ಕೈಯಿಗೆ ಐದೊ ಹತ್ತೊ ರೂಪಾಯಿಯನ್ನು ಕೊಟ್ಟು ಕಳಿಸುತ್ತಿದ್ದರು.

ನಾಮಕರಣ : ಮಗು ಹುಟ್ಟಿದ ಐದು, ಒಂಭತ್ತು ಅಥವಾ ಹನ್ನೆರಡನೆಯ ದಿನಕ್ಕೆ ನಾಮಕರಣದ ಶಾಸ್ತ್ರ ಇಟ್ಟುಕೊಳ್ಳುತ್ತಾರೆ. ಗೊತ್ತುಪಡಿಸಿದ ದಿನದಂದು ತಾಯಿ ಮತ್ತು ಮಗುವಿಗೆ ಸ್ನಾನ ಮಾಡಿಸಿ ಮನೆಯನ್ನು ಶುಚಿಗೊಳಿಸಿ ಸೂತಕ ಕಳೆದ ನಂತರ ಹೆಸರಿಡುವ ಶಾಸ್ತ್ರ ನಡೆಯುತ್ತದೆ. ಹೆಸರಿಡುವಾಗ ಮಗುವಿನ ಕೈಗೆ ಕಂಕಣವನ್ನು ಕಟ್ಟಲಾಗುತ್ತದೆ. ಇದು ಮಗು ಸಮುದಾಯಕ್ಕೆ ಪ್ರವೇಶ ಪಡೆದಿದ್ದರ ಸಂಕೇತ ಎನ್ನುತ್ತಾರೆ. ಮಗುವಿಗೆ ಹೆಸರಿಡುವ ಕೆಲಸ ಆ ಮಗುವಿನ ಸೋದರ ಮಾವನದಾಗಿರುತ್ತದೆ. ಮಗುವನ್ನು ಬಿದಿರಿನ ತೊಟ್ಟಿಲಿಗೆ ಹಾಕಬೇಕಾದರೆ ಆ ತೊಟ್ಟಿಲಿಗೆ ಮೂರು ಬಾರಿ ಸಗಣಿಯನ್ನು ತುಂಬಿ ತಿಪ್ಪೆಗೆ ಹಾಕಿ ನಂತರ ಆ ತೊಟ್ಟಿಲಿಗೆ ಮಗುವನ್ನು ಹಾಕಿದ ಮೇಲೆ ಅದರ ಸೋದರ ಮಾವನಿಂದ ನಾಮಕರಣ ಮಾಡಿಸಲಾಗುತ್ತದೆ.

ಋತುಮತಿ : ಕೊರವರ ಹುಡುಗಿ ಮೈನೆರೆದರೆ ತಮ್ಮ ಚಪ್ಪರದ ಮೂಲೆಯೊಂದರಲ್ಲಿ ಕೂಡಿಸುತ್ತಾರೆ. ಮೈನೆರೆದ ಹೆಣ್ಣು ಮನೆಯೊಳಗೆ ಓಡಾಡುವಂತಿಲ್ಲ. ಮನೆಯ ಯಾವುದೇ ಕೆಲಸಗಳನ್ನು ಮಾಡುವಂತಿಲ್ಲ ಹಾಗೂ ಯಾರನ್ನು ಮುಟ್ಟುವಂತಿಲ್ಲ, ಇದು ಒಂದು ರೀತಿಯಲ್ಲಿ ಸೂತಕವೇ ಆಗಿರುತ್ತದೆ. ಹೆಣ್ಣಿನ ತಾಯಿ, ಸೊದರತ್ತೆ ಮೈನೆರದ ಹುಡುಗಿಗೆ ನೀರು ಹಾಕುತ್ತಾರೆ. ಋತುಮತಿಯಾದ ಸ್ನಾನ ಮಾಡಿದ ನೀರು ಬೇರೆ ಕಡೆ ಹರಿದು ಹೋಗದಂತೆ ತಗ್ಗು ತೆಗೆದಿರುತ್ತಾರೆ. ಮೈನೆರೆದ ಹುಡಿಗಿಯನ್ನು ೫, ೭, ೯, ೧೧ ದಿನಗಳವರೆಗೆ ಕೂಡಿಸುತ್ತಾರೆ. ಎಬ್ಬಿಸುವ ಕೊನೆಯ ದಿನ ಉಡಿ ತುಂಬಿ ದಂಡಿಯನ್ನು ಕಟ್ಟುತ್ತಾರೆ. ಗಂಗೆ ಪೂಜೆಯನ್ನು ಮಾಡಿಕೊಂಡು ಬರುತ್ತಾರೆ. ಗಂಗೆ ಪೂಜೆಗಾಗಿ ಅನ್ನ, ಬೆಲ್ಲ, ಎಳ್ಳು, ಕಡ್ಲೆ, ಅಕ್ಕಿ, ತೆಂಗಿನಕಾಯಿ, ಕುಬಸದ ಕಣ, ಬಿಂದಿಗೆ ಇವೆಲ್ಲ ತೆಗೆದುಕೊಂಡು ಹೋಗಿ ಪೂಜಾ ಸ್ಥಳದಲ್ಲಿ ಐದು ಮಣ್ಣಿನ ಕುಪ್ಪೆಗಳನ್ನು ಇರಿಸಿ ಅದಕ್ಕೆ ಕುಂಕುಮ, ಅರಿಶಿಣ, ಹಾಕಿ ಪೂಜೆ ಮಾಡುತ್ತಾರೆ. ನಂತರ ಎಲೆ ಅಡಿಕೆಯೊಂದಿಗೆ ಪೂಜೆಗೆ ಇಟ್ಟಿರುವ ಐದು ಕುಪ್ಪೆಯ ಮಣ್ಣನ್ನು ಅದರಲ್ಲಿರಿಸಿ ಮೈನೆರೆದ ಹುಡುಗಿಯಿಂದ ಗಂಗೆಗೆ ಬಿಡುತ್ತಾರೆ. ತರುವಾಯ ನೀರು ತುಂಬಿರುವ ಬಿಂದಿಗೆಯನ್ನು ಋತುಮತಿಯಾದವಳು ತಲೆಯ ಮೇಲೆ ಹೊತ್ತು ತರುತ್ತಾಳೆ. ತಂದ ನೀರನ್ನು ಮನೆಯ ಬಾಗಿಲ ಬಳಿ ಸೋದರ ಮಾವ ಎರಡು ಊದಿನಕಡ್ಡಿಯನ್ನು ಬೆಳಗಿ ತೆಂಗಿನಕಾಯಿ ಒಡೆದು ತುಂಬಿದ ಬಿಂದಿಗೆಯನ್ನು ಇಳಿಸಿಕೊಳ್ಳುತ್ತಾನೆ.

ಮರಣ : ಕೊರವರ ಯಾವ ಮನೆಯಲ್ಲಿ ಸಾವು ಸಂಭವಿಸುತ್ತದೆಯೋ ಆ ಮನೆಯ ಮುಂದೆ ಬೆಂಕಿ ಹಾಕುತ್ತಾರೆ. ಸತ್ತ ವ್ಯಕ್ತಿಯ ಸುದ್ದಿಯನ್ನು ಬಂಧು ಬಳಗಕ್ಕೆ ಹೇಳಿ ಕಳಿಸುತ್ತಾರೆ. ಹೆಣವನ್ನು ಸ್ಮಾಶಾನಕ್ಕೆ ಸಾಗಿಸುವವರೆಗೆ ಮನೆಯಲ್ಲಿ ಒಲೆ ಹಚುವುದಿಲ್ಲ.

ಇವರಲ್ಲಿ ಯಾರೇ ಸಾಯಲಿ, ಯಾವ ವಯಸ್ಸಿನಲ್ಲಿಯೇ ಸಾಯಲಿ ಅವರನ್ನು ಮಲಗಿಸುತ್ತಾರೆ ಮತ್ತು ಶವಸಂಸ್ಕಾರಕ್ಕೂ ಹಾಗೇ ಒಯ್ಯುವರು. ಬಿಸಿ ನೀರಿನಿಂದ ಶವಕ್ಕೆ ಸ್ನಾನ ಮಾಡಿಸಿ ಗಂಡಸಾದರೆ ಹಣೆಗೆ ನಾಮ, ಹೆಂಗಸಾದರೆ ಕುಂಕುಮ ಇಡುತ್ತಾರೆ. ಗಂಡ ಸತ್ತಾಗ ಆತನ ಹೆಂಡತಿಯನ್ನು ಶವದ ಪಕ್ಕದಲ್ಲಿ ಕೂರಿಸಿ ಮಡಿಲಕ್ಕಿ ಹಾಕುತ್ತಾರೆ. ತವರಿನವರು ಹೊಸ ಬಟ್ಟೆಗಳನ್ನು ಕೊಡುತ್ತಾರೆ. ಹೆಂಡತಿ ಸತ್ತಾಗ ಆಕೆಯ ಗಂಡ ಶವದ ಪಕ್ಕದಲ್ಲಿರುತ್ತಾನೆ. ಆ ಸಮಯದಲ್ಲಿ ಶವಕ್ಕೆ ಪೂಜೆಯನ್ನು ಮಾಡುತ್ತಾರೆ. ಅದಕ್ಕೆ ಹೊಸ ಬಟ್ಟೆ ತೊಡಿಸುತ್ತಾರೆ. ಅನಂತರ ಶವದ ಜವಾಬ್ದಾರಿಯನ್ನು ಸತ್ತವನ ತಾಯಿಯ ತಮ್ಮ ಅಥವಾ ಸತ್ತವನ ಹೆಂಡತಿಯ ಅಣ್ಣ ತಮ್ಮಂದಿರು ಹೊರುತ್ತಾರೆ. ಇವರಿಗೆ ಹೊರೆ ಹೊರುವವರು ಎಂದು ಕರೆಯುತ್ತಾರೆ. ಈತ ಶವ ಮುಟ್ಟಿದ ನಂತರವೇ ಉಳಿದವರು ಶವ ಮುಟ್ಟುತ್ತಾರೆ. ಹೆಣವನ್ನು ಚಟ್ಟದ ಮೇಲಿಟ್ಟು ಸ್ಮಶಾನದ ಕಡೆ ಹೊತ್ತು ನಡೆಯುತ್ತಾರೆ. ಆ ದಿನ ಸಾವಿನ ಮನೆಯಲ್ಲಿ ಮತ್ತು ಆ ಮನೆಯ ಸೋದರ ಸಂಬಂಧಿಗಳ ಮನೆಗಳಲ್ಲಿ ಅಡುಗೆ ಮಾಡುವುದಿಲ್ಲ. ನೆಂಟರಿಷ್ಟರು ಊಟ ತಂದು ಕೊಡುತ್ತಾರೆ. ಕೊರಮರಲ್ಲಿ ಹೆಣವನ್ನು ಹೂಳುವ ಮತ್ತು ಸುಡುವ ಪದ್ಧತಿ ಇದೆ.

ಹೆಣವನ್ನು ಸ್ಮಶಾನಕ್ಕೆ ಸಾಗಿಸುವಷ್ಟರಲ್ಲಿ ಮೊದಲೆ ನಾಲ್ಕು ಜನ ಹೋಗಿ ಗುಂಡಿ ತೆಗೆದಿರುತ್ತಾರೆ. ಹೆಣವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗುವ ಮೊದಲೆ ಮನೆಯ ಮುಂದೆ ಹಾಕಿದ ಬೆಂಕಿಯ

ಪಕ್ಕದಲ್ಲಿ ಒಲೆಹೂಡಿ, ಹೊಸ ಮಡಕೆಯಲ್ಲಿ ಅನ್ನ ಮಾಡುತ್ತಾರೆ. ಇದನ್ನು ಕೂಳು ಎನ್ನುತ್ತಾರೆ. ಈ ಕೂಳಿನ ಮಡಕೆಯನ್ನು ತಂದೆ ಸತ್ತಾಗ ಹಿರಿಯ ಮಗನೂ, ತಾಯಿ ಸತ್ತಾಗ ಕಿರಿಯ ಮಗನೂ ಹಿಡಿದು ಹೆಣದ ಮುಂದೆ ನಡೆಯುತ್ತಾರೆ. ಉಳಿದವರು ಹೆಣವನ್ನು ಮುಟ್ಟುವುದಿಲ್ಲ. ಹೆಣವನ್ನು ಹೊತ್ತು ಬಂದವರು ಗುಂಡಿ ಸ್ವಲ್ಪ ದೂರ ಇರುವಾಗಲೆ ಹೆಣದ ಚಟ್ಟವನ್ನು ನೆಲಕ್ಕೆ ಇಳಿಸುತ್ತಾರೆ. ಈ ಚಟ್ಟ ಬಿದಿರಿನಿಂದ ಮಾಡಿದ್ದು, ಏಣಿಯಾಕಾರದಲ್ಲಿರುತ್ತದೆ. ಹೆಣದ ತಲೆಯ ಭಾಗದಲ್ಲಿ ಮೂರು ಕಲ್ಲುಗಳನ್ನಿಟ್ಟು ಅದರ ಮೇಲೆ ಕೂಳಿನ ಮಡಕೆಯನ್ನಿಟ್ಟು, ಕೂಳಿನ ಮಡಕೆ ಹಿಡಿದು ಬಂದವನು ತನ್ನ ಕೈಯಲ್ಲಿರುವ ಕೊಳ್ಳಿಯಿಂದ ಒಡೆಯುತ್ತಾನೆ. ನಂತರ ಕೂಳನ್ನು ನಾಲ್ಕು ದಿಕ್ಕಿಗೂ ಚೆಲ್ಲುತ್ತಾನೆ. ಆ ಮಡಕೆ ಒಡೆಯುವ ಕೊಳ್ಳಿಯನ್ನು ಆತ ಕೂಳು ಬೇಯಿಸಿದ ಒಲೆಯಿಂದಲೇ ತಂದಿರುತ್ತಾನೆ. ಆನಂತರ ಮೊದಲು ಹೆಣವನ್ನು ಹೊತ್ತವರೆ ಗುಂಡಿಯ ಹತ್ತಿರ ಹೊತ್ತು ತರುತ್ತಾರೆ.

ಸತ್ತವನ ಹಿರಿಯ ಮಗನು ಒಂದು ಗಡಿಗೆಯ ತುಂಬ ನೀರು ತರುತ್ತಾನೆ. ಅದನ್ನು ಹೆಗಲ ಮೇಲೆ ಹೊತ್ತು ಶವದ ತಲೆಯ ಕಡೆಗೆ ನಿಲ್ಲುತ್ತಾನೆ. ಆಗ ಹೊರಿಹೊತ್ತ ಸೋದರಮಾವ ಕುಡುಗೋಲಿನಿಂದ ಗಡಿಗೆಯನ್ನು ತೂತು ಕಟೆಯುತ್ತಾನೆ. ನಂತರ ಗಡಿಗೆ ಹೊತ್ತವನು ಶವಕ್ಕೆ ಮೂರು ಸುತ್ತು ಹಾಕಬೇಕು. ಸೋದರಮಾವನಾದವನು ಪ್ರತಿ ಸುತ್ತಿಗೂ ತೂತು ಕಟೆಯಬೇಕು. ಕೊನೆಯ ಸುತ್ತಿಗೆ ಶವದ ಕಾಲ ಹತ್ತಿರ ಬಂದು ಪೂರ್ತಿಯಾಗಿ ಗಡಿಗೆ ಒಡೆಯಬೇಕು. ಈಗ ಗಡಿಗೆ ಹೊತ್ತವನು ಹಿಂದೆ ನೋಡದೆ ಮನೆಗೆ ಹೋಗಬೇಕು.

ಹೊರಿಹೊತ್ತವನು ಮತ್ತು ಗಡಿಗೆ ಹೊತ್ತವನು ಶವ ಸಂಸ್ಕಾರವಾದ ಮೂರು ದಿನಗಳವರೆಗೆ ಕೆಲವು ಕಟ್ಟಳೆಗಳನ್ನು ಪಾಲಿಸಬೇಕು. ಇವರಿಬ್ಬರು ಮನೆಯ ಒಳಗೆ ಹೋಗಬಾರದು ಮತ್ತು ಇವರನ್ನು ಯಾರು ಮುಟ್ಟಬಾರದು. ಒಂದು ವೇಳೆ ಮುಟ್ಟಿದರೆ ಅವರೂ ಸ್ನಾನಮಾಡಿಯೇ ಮನೆಯ ಒಳಗೆ ಪ್ರವೇಶಿಸಬೇಕು. ಇವರ ಊಟದ ಸಾಮಗ್ರಿ ಮತ್ತು ಹಾಸಿಗೆ ಹೊದಿಕೆಗಳೂ ಸಹ ಮನೆಯ ಹೊರಗಡೆಯೇ ಇರಬೇಕು. ಸವಸಂಸ್ಕಾರ ಮುಗಿದ ಮೂರು ದಿನದ ನಂತರ ಅವರನ್ನು ಒಳಗೆ ಕರೆದುಕೊಳ್ಳುವರು.

ಶವಸಂಸ್ಕಾರ ಮುಗಿಸಿ ಮರಳಿ, ಮನೆಗೆ ಬಂದ ನಂತರದಲ್ಲಿ ಬೀಗರಾಗುವವರು ಸತ್ತವನ ಮಕ್ಕಳನ್ನು ಕರೆದು ಅವರ ಇಸಬಾಯಿ ತೊಳೆಸುತ್ತಾರೆ. ಇದನ್ನು ಪ್ರತಿಯೊಬ್ಬ ಬೀಗನು ಮಾಡಲೇಬೇಕು. ಸ್ವಲ್ಪ ಬೆಲ್ಲ ಅಥವಾ ಚಾ ಬಾಯಲ್ಲಿ ಹಾಕಿಕೊಂಡು ಉಗುಳಬೇಕು. ನಂತರ ನೀರು ಮುಕ್ಕಳಿಸಬೇಕು. ಈ ರೀತಿ ಎರಡು ಸಲ ಮಾಡಬೇಕು ಅಂದಾಗ ಬಾಯಿ ತೊಳೆದಂತೆ. ದೂರದ ಊರಿನವರು ಇದ್ದರೆ ಅವರೂ ಸಹ ಶವಸಂಸ್ಕಾರ ಮುಗಿದ ಮೇಲೆ ಎಷ್ಟೇ ದಿನಬಿಟ್ಟು ಬಂದರೂ ಬಾಯಿ ತೊಳೆಯಲೇಬೇಕು. ಈ ಬಾಯಿ ತೊಳೆಯದೆ ಇದ್ದರೆ ಅವರು ವಿಷದ ಕೂಳನ್ನೇ ತಿನ್ನುತ್ತಿರುತ್ತಾರೆ ಎಂಬ ನಂಬಿಕೆ ಅವರಲ್ಲಿ ಇರುತ್ತದೆ.

ಎರಡನೇ ದಿನದ ಕಾರ್ಯ : ಕೊರವರಲ್ಲಿ ಶವಸಂಸ್ಕಾರದ ನಂತರವೇ ಹಲವಾರು ಪದ್ಧತಿ ಅನುಸರಿಸುವುದನ್ನು ಕಾಣುತ್ತೇವೆ. ಅವುಗಳಲ್ಲಿ ಕೂಳ ಹಾಕುವ ಕಾರ್ಯ ಅತಿ ಮುಖ್ಯವಾಗಿರುತ್ತದೆ.

ಶವಸಂಸ್ಕಾರದ ಮರುದಿನ ಮುಂಜಾನೆ ಏಳು ಗಂಟೆಯ ಸುಮಾರಿಗೆ ಹತ್ತು ಚಪಾತಿ, ಅನ್ನ, ಹುರಿದ ತತ್ತಿ, ಒಂದು ತಂಬಿಗೆ ನೀರು ಮತ್ತು ಕುಳ್ಳಿನ ಬೆಂಕಿ ಇವುಗಳ ಸಮೇತ ರುದ್ರಭೂಮಿಗೆ ಹೊರಡುತ್ತಾರೆ. ಮೊದಲು ಶವ ಇಳಿಸಿದ ಸ್ಥಳದಲ್ಲಿ ಸ್ವಲ್ಪ ನೀರು ಸಿಂಪಡಿಸಿ ಒಂದು ಔಡಲ ಎಲೆ ಇಡುತ್ತಾರೆ. ಅದರಲ್ಲಿ ಎರಡು ಚಪಾತಿ, ಸ್ವಲ್ಪ ಅನ್ನ ತತ್ತಿ ಇಡುತ್ತಾರೆ. ಸ್ವಲ್ಪ ದೂರದಲ್ಲಿ ಬೆಂಕಿ ಹಾಕಿ ಎಲ್ಲರೂ ಲೋಬಾನವನ್ನು ಹಾಕುತ್ತಾರೆ. ಇಲ್ಲಿಂದ ರುದ್ರಭೂಮಿಗೆ ಹೋಗಿ ಅಲ್ಲಿಯೂ ಸಹ ನಾಲ್ಕೂ ದಿಕ್ಕಿಗೆ ನಾಲ್ಕು ಎಡೆ ಮಾಡಿ ಇಡುತ್ತಾರೆ. ಲೋಬಾನ ಹಾಕಿದ ನಂತರ ಎಲ್ಲರೂ ರುದ್ರಭೂಮಿಗೆ ಸ್ವಲ್ಪ ದೂರದಲ್ಲಿ ಹೋಗಿ ಕುಳಿತುಕೊಳ್ಳುವರು. ಆಗ ಅಲ್ಲಿ ಇಟ್ಟಂಥ ಅನ್ನವನ್ನು ಕಾಗೆ ಬಂದು ತಿಂದು ಹೋಗಬೇಕು. ಅಂದರೆ ಮಾತ್ರ ಸತ್ತವನು ಯಾವುದೇ ಆಸೆಗಳನ್ನು ಇಟ್ಟುಕೊಳ್ಳದೆ ಬಳಗಕ್ಕೆ ಕೂಡಿದನು ಎಂದು ನಂಬುತ್ತಾರೆ. ಕಾಗೆ ಮುಟ್ಟುವುದು ಸ್ವಲ್ಪ ತಡವಾದರೆ ಇದ್ದವರು ತಮಗೆ ತಿಳಿಸದಂತೆ ಬೇಡಿಕೊಂಡು ಮತ್ತೆ ಊದು ಹಾಕುವರು. ಇಷ್ಟಾದರೂ ಕಾಗೆ ಮುಟ್ಟದೆ ಇದ್ದರೆ ಏನೋ ಆಸೆ ಇಟ್ಟುಕೊಂಡಿದ್ದಾನೆಂದು ತಿಳಿಯಲಾಗುತ್ತದೆ ಹಾಗೂ ಹರಿಯುವ ನೀರಿನಲ್ಲಿ ಎಡೆಯನ್ನು ಬಿಡುವರು. ನೀರಿನಲ್ಲಿ ಮೀನಿನ ಮುಂಖಾಂತರವಾದರೂ ಬಳಗದಲ್ಲಿ ಕೂಡಿಕೊಳ್ಳಬೇಕೆಂಬುದು ಅವರ ನಂಬಿಕೆ. ಇಷ್ಟಾದ ನಂತರ ಎಲ್ಲರೂ ಮನೆಗೆ ಹಿಂತಿರುಗುತ್ತಾರೆ. ಮನೆಗೆ ಬಂದನಂತರ ಎಣ್ಣೆ ಮುಟ್ಟುವ ಪದ್ಧತಿ ಮಾಡುವರು. ಸ್ವಲ್ಪ ಸಗಣಿ ತೆಗೆದುಕೊಂಡು ಬಟ್ಟಲ ಆಕಾರ ಮಾಡುವರು. ಅದರಲ್ಲಿ ಗಾಣದ ಎಣ್ಣೆ ಹಾಕಿ ಮನೆಯ ಹೊರಗಡೆ ಇಡುತ್ತಾರೆ. ಆಗ ರುದ್ರಭೂಮಿಗೆ ಹೋಗಿ ಬಂದವರು ಒಬ್ಬೊಬ್ಬರಾಗಿ ತಮ್ಮ ಬಲಗೈ ಕಿರುಬೆರಳನ್ನು ಆ ಎಣ್ಣೆಯಲ್ಲಿ ಅದ್ದಿ ಹೊರಗೆ ಸಿಂಪಡಿಸಬೇಕು. ಈ ರೀತಿ ಮೂರು ಸಲ ಮಾಡಬೇಕು. ಈ ರೀತಿಯಾಗಿ ಎಲ್ಲರೂ ಮಾಡಿದ ನಂತರ ಕೊನೆಯಲ್ಲಿ ಸೋದರ ಮಾವನು ಮೊದಲು ತರುವಾಯ ಸತ್ತವನ ಹಿರಿಮಗನು ಮಾಡಿ ಅದನ್ನು ಎತ್ತಿಕಂಡು ಹಿಂದಕ್ಕೆ ಸರಿಯುತ್ತ, ಹಿಂದಕ್ಕೆ ಎಸೆಯಬೇಕು. ಇಲ್ಲಿಗೆ ಕೂಳು ಹಾಕುವ ಪದ್ಧತಿ ಮುಗಿಯುತ್ತದೆ.

ಮೂರು ದಿನದ ಕಾರ್ಯ : ಇದು ಮೂರನೇ ದಿನ ಮಾಡುವ ಒಂದು ಕಾರ್ಯ. ಇದು ಎರಡನೆ ದಿನದ ಪದ್ಧತಿಗಿಂತ ಸ್ವಲ್ಪ ಭಿನ್ನವಾಗಿದೆ. ಸತ್ತವನು ತನ್ನ ಜೀವನದಲ್ಲಿ ಉಪಯೋಗಿಸುತ್ತಿದ್ದ ಹಣ್ಣುಹಂಪಲು, ತಿಂಡಿತಿನಿಸುಗಳು, ಬೀಡಿ, ಸಿಗರೇಟು, ಸಾರಾಯಿ, ಮಾಂಸ, ಎಲೆಅಡಿಕೆ, ತಂಬಾಕು, ಅನ್ನ, ಚಪಾತಿ, ಮುಂತಾದ ವಸ್ತುಗಳನ್ನು ತೆಗೆದು ಕೊಂಡು ಸ್ಮಶಾನಕ್ಕೆ ಹೋಗುತ್ತಾರೆ. ಈ ಕಾರ್ಯವನ್ನು ಮಾಡದಿದ್ದರೆ ಸತ್ತವನ ಆತ್ಮ ಹಠ ಹಿಡಿಯುತ್ತೆದೆ ಎಂಬುದು ಅವರ ನಂಬಿಕೆ.

ಎರಡನೆಯ ದಿನದಂತೆ ಅಂದು ಸಹ ಎಡೆಗಳನ್ನು ಹಾಕಿ ತೆಗೆದುಕೊಂಡು ಹೋದ ಪದಾರ್ಥಗಳನ್ನು ಹಂಚಬೇಕು. ನಂತರ ಬೆಂಕಿ ಮಾಡಿ ಲೋಬಾನ ಹಾಕಿ ಕಾಗೆ ಬಂದು ಮುಟ್ಟುವವರೆಗೂ ಕಾಯುತ್ತಾರೆ. ಯಾರಾದರೂ ಲೋಬಾನ ಹಾಕುವ ಸಮಯದಲ್ಲಿ ಕಾಗೆ ಮುಟ್ಟಿದರೆ ಅವರ ಮೇಲೆಯೇ ಸತ್ತವನ ಆಸೆ ಇತ್ತು ಎಂದು ಸಂತೋಷಪಡುತ್ತಾರೆ. ಒಂದು ವೇಳೆ ಕಾಗೆ ಬಾರದೆ ಇದ್ದರೆ ಮತ್ತೊಮ್ಮೆ ಎಲ್ಲರೂ ಲೋಬಾನ ಹಾಕಿ ತರುವಾಯ ಎರಡನೆ ದಿನದಂತೆ ಎಡೆಗಳನ್ನು ಒಯ್ದು ನೀರಿನಲ್ಲಿ ಬಿಡುತ್ತಾರೆ.

ಹೊರಿಹೊತ್ತ ಸೋದರಮಾವನನ್ನು ಮತ್ತು ಹಿರಿಯ ಮಗನನ್ನು ಕರೆದುಕೊಂಡು ಹೊಳೆಗೆ ಹೋಗಿ ಅಲ್ಲಿಗೆ ಬಂದಿರುವ ಕ್ಷೌರಿಕನಿಂದ ಹೊರಿಹೊತ್ತವನು ದಾಡಿ ಮಾತ್ರ ಮಾಡಿಸಿಕೊಳ್ಳುವನು. ಸತ್ತವನ ಹಿರಿಯ ಮಗನು ಮೀಸೆ ದಾಡಿ, ತಲೆ ಎಲ್ಲವನ್ನು ಬೋಳಿಸಬೇಕು. ತರುವಾಯ ಕ್ಷೌರಿಕನಿಗೆ ದಕ್ಷಿಣೆಯ ರೂಪದಲ್ಲಿ ಹಣ ನೀಡುವರು. ನಂತರ ಎಲ್ಲರೂ ಅಲ್ಲಿಯೇ ಸ್ನಾನ ಮಾಡಿ ತಮ್ಮ ಬಟ್ಟೆಗಳನ್ನು ತಾವೇ ತೊಳೆದುಕೊಂಡು ಬರುವರು.

ಇವರು ಬರುವವರೆಗೆ ರೂದ್ರಭೂಮಿಗೆ ಹೋದವರೆಲ್ಲರೂ ಮನೆಯ ಹೊರಗಡೆ ಕುಳಿತಿರುತ್ತಾರೆ. ಎರಡನೆಯ ದಿನ ಎಣ್ಣೆ ಮುಟ್ಟಿದ್ದರೆ ಇವತ್ತು ಹಿಟ್ಟಿನ ನೀರು ಮುಟ್ಟಬೇಕು. ಗೋಧಿ ಹಿಟ್ಟನ್ನು ಕಲಸಿ ಅದರ ಕಣಕದಿಂದ ಬಟ್ಟಲ ಆಕಾರ ಮಾಡಿ ಅದರಲ್ಲಿ ಹಿಟ್ಟಿನ ನೀರು ಹಾಕಿ ಹುಲ್ಲಿನಿಂದ ತಯಾರಿಸಿದ ಸಣ್ಣ ಕುಂಚವನ್ನು ಹಿಟ್ಟಿನ ನೀರಿನಲ್ಲಿ ಅದ್ದಿ ಹೊರಗೆ ಸಿಂಪಡಿಸಬೇಕು. ಈ ರೀತಿ ಮೂರು ಸಲ ಮಾಡಿ ನಂತರ ಸೋದರ ಮಾವನು ಮುಟ್ಟಬೇಕು. ಆಮೇಲೆ ಸತ್ತವನ ಹಿರಿಮಗನು ಮುಟ್ಟಬೇಕು. ತರುವಾಯ ಅದನ್ನು ಎತ್ತಿಕೊಂಡು ಹಿಂದಕ್ಕೆ ಸರಿಯುತ್ತ ಹಿಂದೆ ನೋಡದೆ ಬೆನ್ನ ಹಿಂದಕ್ಕೆ ಎಸೆಯಬೇಕು.

ಇದಾದ ಮೇಲೆ ಸೋದರಮಾವನ ಮೇಲೆ ಹೊರಿಸಿದ ಹೊರಿ ಇಳಿಸಿಕೊಳ್ಳುವನು. ಅಂದರೆ ಸೋದರ ಮಾವನು ಮುಂದೆ ನಿಂತು ಅವನ ಹಿಂದೆ ಸತ್ತಾತನ ಮಗ ಕುಡಗೋಲ ಹಿಡಿದು ತಲೆಯಿಂದ ನೆಲಕ್ಕೆ ಮೂರು ಸಲ ಮುಟ್ಟಿಸಬೇಕು. ಹೀಗೆ ಮೂರು ಸಲ ಮಾಡಿದ ನಂತರ ಕೊನೆಯ ಸಾರಿ ಹೊರೆ ಇಳಿಸಿಕೊಂಡಿದ್ದೇನೆ ಎಂದು ಹೇಳಬೇಕು. ಅಂದು ಮಾಂಸ ಮತ್ತು ಜೋಳದ ನುಚ್ಚಿನ ಅಡುಗೆಯನ್ನು ಬಿಟ್ಟು ಬೇರೆ ಅಡಿಗೆ ಮಾಡುವಂತಿಲ್ಲ.

ಅಂದು ಮಾಡಿದ ಅಡಿಗೆ ಕಡಿಮೆ ಆಗಬೇಕೆ ವಿನಃ ಉಳಿಯಬಾರದೆಂಬ ನಂಬಿಕೆ ಇವರಲ್ಲಿದ್ದು ಸೋದರಮಾವ ಮತ್ತು ಸತ್ತವನ ಹಿರಿಯ ಮಗ ಇಬ್ಬರೂ ಸೇರಿ ಒಂದೇ ತಟ್ಟೆಯಲ್ಲಿ ಊಟ ಮಾಡಬೇಕು ಇದು ಆತ್ಮೀಯತೆಯ ಸಂಕೇತಮೂ ಹೌದು.

ದಿನಕರ್ಮ ಪದ್ಧತಿ : ಕೊರವರಲ್ಲಿ ಶವಸಂಸ್ಕಾರದ ನಂತರ ಆಚರಿಸುವ ದಿನಕರ್ಮ ಎಂಬ ಮತ್ತೊಂದು ಪದ್ಧತಿಯನ್ನು ಕಾಣಬಹುದು. ಅಂದರೆ ಕರ್ಮ ಕಳೆದು ಸತ್ತವನನ್ನು ಹಿರಿಯರಲ್ಲಿ ಕೂಡಿಸಿ ಕೊಳ್ಳುವುದು ಎಂದರ್ಥ. ಈ ಕಾರ್ಯವನ್ನು ವ್ಯಕ್ತಿ ಸತ್ತ ೫, ೮, ಅಥವಾ ೧೧ ದಿನಗಳಲ್ಲಿ ಹೀಗೆ ಅವರವರ ಅನುಕೂಲಕ್ಕೆ ತಕ್ಕಂತೆ ಒಂದು ದಿನ ನಿರ್ಧರಿಸಿ ದಿನಕಾರ್ಯ ಮಾಡುತ್ತಾರೆ. ಆ ದಿನಕ್ಕೆ ಮನೆಯನ್ನು ಸ್ವಚ್ಛ ಗೊಳಿಸಲಾಗುತ್ತದೆ. ಹಾಸಿಗೆ ಬಟ್ಟೆಗಳನ್ನು ಶುಭ್ರಗೊಳಿಸಲಾಗುತ್ತದೆ. ಅಂದು ಮಧ್ಯಾಹ್ನವೇ ದಿನಕರ್ಮದ ಕಾರ್ಯ ಆರಂಭಿಸುತ್ತಾರೆ. ಪೂರ್ವಭಿಮುಖವಾಗಿ ಕುಂಭ ತಯಾರಿ ಮಾಡುವರು. ಮೊದಲು ಆ ಸ್ಥಳವನ್ನು ಮಡಿ ಮಾಡಿ ಸತ್ತವನ ಬಟ್ಟೆ ಹಾಸಿಗೆ ಹೊದಿಕೆಗಳನ್ನು ಅಂದವಾಗಿ ಮಡಿಚಿ ಇಡುವರು. ಸತ್ತವರು ಸ್ತ್ರೀ ಇದ್ದರೆ ಸೀರೆಯನ್ನು, ಪುರುಷನಿದ್ದರೆ ಒಂದು ಮೀಟರ ಬಿಳಿ ಬಟ್ಟೆಯನ್ನು ತಂದು ಅದರ ಮೇಲೆ ಇಟ್ಟು ಅಡಿಕೆ ಬೆಟ್ಟದಿಂದ ಮನುಷ್ಯನ ಆಕೃತಿ ಮಾಡುತ್ತಾರೆ. ಇದರ ಮುಂಭಾಗದಲ್ಲಿ

ಔಡಲ ಎಲೆ ಹಾಕಿ ಕುಂಭ ಮಾಡುತ್ತಾರೆ. ಹೋಳಿಗೆಗಳನ್ನು ಈ ಕುಂಭದ ಸುತ್ತಲೂ ಇಡುವರು. ನಂತರ ಸತ್ತ ವ್ಯಕ್ತಿ ಉಪಯೋಗಿಸುತ್ತಿದ್ದ ಎಲ್ಲ ಪದಾರ್ಥಗಳನ್ನು ಅಂದರೆ ತಿಂಡಿತಿನಿಸುಗಳು, ಎಲೆ ಅಡಿಕೆ, ಹಣ್ಣುಹಂಪಲು, ಬೀಡಿ, ಸಿಗರೇಟು, ಸಾರಾಯಿ ಮುಂತಾದವನ್ನು ಸಂಬಂಧಿಕರು ತಂದಂಥ ಹಣ್ಣುಗಳನ್ನು ಇಡುತ್ತಾರೆ. ಕುಂಭದ ಎಡಬಲ ಬದಿಗೆ ಗೋದಿ ಕಣಕದಿಂದ ತಯಾರಿಸಿ ಎಣ್ಣೆಯಲ್ಲಿ ಕರಿದ ಪಣತಿಗಳನ್ನು ಇಟ್ಟು ದೀಪ ಹಚ್ಚುವರು. ಮತ್ತು ತಳದಲ್ಲಿ ಸ್ವಲ್ಪ ಅಕ್ಕಿ ಹಾಕಿ ಮೇಲೆ ನೀರು ತುಂಬಿದ ತಂಬಿಗೆ ಇಡುವರು. ಇನ್ನೂ ಸ್ವಲ್ಪ ದೂರದಲ್ಲಿ ಬೆಂಕಿ ಹಾಕಿ ಎಲ್ಲರೂ ಲೋಬಾನ ಹಾಕುವರು.

ನಂತರ ಕುರಿ ಬಲಿಯ ಕಾರ್ಯ ಮಾಡುತ್ತಾರೆ. ಹಿಂದಿನ ದಿನಗಳಲ್ಲಿ ಇಡೀ ಪ್ರಾಣಿಯನ್ನೇ ಕಾಲು ಮೇಲಕ್ಕೆ ಮಾಡಿ ಕುಂಭಕ್ಕೆ ಎದುರಾಗಿ ಹುಗಿಯುತ್ತಿದ್ದರಂತೆ. ಅದು ಪ್ರಾಣ ಬಿಟ್ಟಿತೆಂದು ಗೊತಾದ್ತ ಮೇಲೆ ಹೊರಗೆ ತೆಗೆಯುತ್ತಿದ್ದರು. ಈ ಪದ್ಧತಿ ಈಗ ಎಲ್ಲಿಯೂ ಕಾಣುವುದಿಲ್ಲ. ಕುರಿಯನ್ನು ಕುಂಭದ ಎದುರುಗಡೆ ಚೂರಿ ಹಾಕಿಸುವರು. ತರುವಾಯ ಆ ಪ್ರಾಣಿಯ ತಲೆಯನ್ನು ದೇಹದಿಂದ ಬೇರ್ಪಡಿಸಿ ಅದರ ಬಾಯಿಯಲ್ಲಿ ಅದರ ಬಲಗಾಲನ್ನು ಇರಿಸಿ ಕುಂಭದ ಎದುರಿಗೆ ಇಡುತ್ತಾರೆ. ಆ ಪ್ರಾಣಿಯ ರಕ್ತವನ್ನು ಚೂರಿ ಹಾಕಿದ ಜಾಗದಲ್ಲಿನ ಕುಣಿಯಲ್ಲಿ ಹಾಕಿ ಮುಚ್ಚಿದಾಗ ಪ್ರಾಣಿ ಬಲಿ ಕಾರ್ಯವು ಸಾರ್ಥಕವಾಗುತ್ತದೆ ಎಂದು ನಂಬುತ್ತಾರೆ.

ನಂತರ ಮಾಂಸದ ಅಡುಗೆಯನ್ನು ಮಾಡುತ್ತಾರೆ. ಈ ಪ್ರಾಣಿಯ ಹೊಟ್ಟೆಯೊಳಗಿನ ಕೆಲವು ಭಾಗಗಳನ್ನು ತೆಗೆದುಕೊಂಡು ಸುಡುತ್ತಾರೆ. ಆ ಸುಟ್ಟ ಮಾಂಸವನ್ನು ಕುಂಭಕ್ಕೆ ಹಾಕುವರು. ಮಾಂಸದ ಸಾರು ಮಾಡುತ್ತಾರೆ ವಿನಃ ಈ ಸಾರಿನಲ್ಲಿ ಇದ್ದ ಮಾಂಸವನ್ನು ಮಾತ್ರ ಪೂಜೆಗೆ ಇಡುವುದಿಲ್ಲ. ಅದು ಎಂಜಲಾಗಿರುತ್ತದೆ ಎಂಬ ನಂಬಿಕೆ ಇವರಲ್ಲಿದೆ. ಮಾಂಸವನ್ನು ಕುಂಭಕ್ಕೆ ಹಾಕಿ ಮತ್ತೆ ಎಲ್ಲರೂ ಲೋಬಾನ ಹಾಕಿದ ನಂತರ ಎಲ್ಲರೂ ಬೇರೆ ಎಡೆ ಮಾಡಿಕೊಂಡು ಒಂದು ತಂಬಿಗೆ ನೀರು, ಗಂಗಾಳ (ಕಂಚಿನ ದೊಡ್ಡ ತಟ್ಟೆ) ತೆಗೆದುಕೊಂಡು ಮನೆಯ ಹಿಂಬದಿಗೆ ಬರುತ್ತಾರೆ. ಈಗ ಕುಂಭದ ಹತ್ತಿರ ಒಬ್ಬನನ್ನು ಮಾತ್ರ ಕುಳ್ಳಿರಿಸಿರುತ್ತಾರೆ. ಉಳಿದವರು ಒಂದು ಮಗುವನ್ನೂ ಸಹ ಬಿಡದಂತೆ ಎಲ್ಲರೂ ಒಟ್ಟುಗೂಡಿ ಮನೆ ಹಿಂದೆ ಹೋಗುವರು. ಆಗ ತಂಬಿಗೆಯಲ್ಲಿಯ ನೀರನ್ನು ಸಿಂಪಡಿಸಿ ತಾವು ತಂದ ಎಡೆಯನ್ನು ಇಡುವರು. ಇದಾದ ಮೇಲೆ ಒಬ್ಬನು ಹಿಂದಿನಿಂದ ಬಳಗದಲ್ಲಿ ಕೂಡಿಕೊಂಡಿ ಏನಪ್ಪ ಎಂದು ಕೇಳುವನು. ಒಳಗಿನವನು ಕೂಡಿಕೊಂಡಿದ್ದೇನೆ ಎಂದು ಉತ್ತರಿಸಿ ಗಂಗಾಳ ಬಾರಿಸುವನು. ಉಳಿದವರು ಚಪ್ಪಾಳೆ ತಟ್ಟುವರು. ನಂತರ ಆ ದಿನ ಮಾಡಿದ ಮಾಂಸದೂಟವನ್ನು ಎಲ್ಲರೂ ಉಣ್ಣುತ್ತಾರೆ.

ಧಾರ್ಮಿಕ ವಿಧಿವಿಧಾನಗಳು, ದೇವರು

ಕೊರವರು ಮೊದಲಿನಿಂದಲೂ ಹಿಂದೂ ಸಂಪ್ರದಾಯಕ್ಕೆ ಅಂಟಿಕೊಂಡಿದ್ದರೂ ತಾವು ಆಚರಿಸುವ ವಾರ್ಷಿಕ ಆಚರಣೆಗಳು, ಹಬ್ಬ ಹರಿದಿನಗಳಲ್ಲಿ ತಮ್ಮದೇ ಆದ ವೈಶಿಷ್ಟ್ಯತೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಈ ಸಮುದಾಯವು ಧಾರ್ಮಿಕ ಆಚರಣೆಗಳ ಬಗ್ಗೆ ಪೂಜೆ, ಬಲಿ, ನಂಬಿಕೆ ಮುಂತಾದವುಗಳನ್ನು ಬಹಳ ಶ್ರದ್ಧೆಯಿಂದ ಆಚರಿಸುತ್ತಾರೆ. ತಮ್ಮ ಮೂಲ ಸಂಪ್ರದಾಯವನ್ನು ತಪ್ಪದೆ ಆಚರಿಸುವವರಾಗಿದ್ದಾರೆ.

ಇವರಲ್ಲಿ ಮುಂಬೈ ಪ್ರಾಂತ್ಯದ ಕೊಲ್ಲಾಪುರದ ದೇವತೆಯೇ ಕೊಲ್ಲಾಪುರಿಯಮ್ಮ ಆಗಿದ್ದಾಳೆ. ಹಾಗೆಯೇ ತಿರುಪತಿಯ ವೆಂಕಟೇಶ್ವರ ಸ್ವಾಮಿಯೇ ಪೇರುಮಾಳಸ್ವಾಮಿಯಾಗಿದ್ದಾರೆ. ಕೆಲವು ಸಮಯ ಹೂವಿನಿಂದ ಅಲಂಕೃತವಾದ ವೈಷ್ಣವ ನಾಮವಿರುವ ಹಿತ್ತಾಳೆ ಕಳಸದ ರೂಪದಲ್ಲಿ ವೆಂಕಟೇಶ್ವರನನ್ನು ಪೂಜಿಸುತ್ತಾರೆ. ಮಾತೃ ದೇವತಾರಾಧನೆಯು ಇವರಲ್ಲಿದೆ. ಎಲ್ಲಮ್ಮ, ಹುಲಿಗೆಮ್ಮ, ಗಾಳೆಮ್ಮ, ದುರುಗಮ್ಮ ಮುಂತಾದ ದೇವತೆಗಳನ್ನು ಪೂಜಿಸುತ್ತಾರೆ.

ಸಾಂಸ್ಕೃತಿಕ ವೀರ ನುಲಿಯ ಚಂದಯ್ಯ

ನುಲಿಯ ಚಂದಯ್ಯನವರೇ ಕುಳುವ ಸಮುದಾಯದ ಗುರುಗಳು ಎಂಬ ಮಾತು ಇತ್ತೀಚಿನ ದಿನಗಳಲ್ಲಿ ಕೇಳಿ ಬರುತ್ತಿದ್ದು, ನುಲಿಯ ಚಂದಯ್ಯನವರು ಬಸವೇಶ್ವರ ಸಮಕಾಲೀನ ವಚನಕಾರರು. ಕರ್ನಾಟಕದದ್ಯಾಂತ ಕೊರಮರು ಶರಣ ನೂಲಿ ಚಂದಯ್ಯನ ಆರಾದಕರಾಗಿದ್ದಾರೆ.

ಹಬ್ಬಗಳು

ಕೊರಮರು ಎಲ್ಲಾ ಹಿಂದು ಹಬ್ಬಗಳನ್ನು ಆಚರಿಸುತ್ತಾರೆ.

ಯುಗಾದಿ : ಈ ಹಬ್ಬದಲ್ಲಿ ಕೊರಮರು ಹೆಚ್ಚಾಗಿ ಸಿಹಿ ಅಡುಗೆ ಮಾಡುವ ಪದ್ಧತಿ ಇದೆ. ಹಬ್ಬಕ್ಕಾಗಿ ಮನೆಯನ್ನು ಸ್ವಚ್ಚ ಮಾಡಿ ಸಾರಿಸಿ, ಅಲಂಕರಿಸಿ ಹಬ್ಬವನ್ನು ಆಚರಿಸುತ್ತಾರೆ. ಯುಗಾದಿಯ ಹಬ್ಬದ ದಿವಸ ಮನೆಯ ಹಿರಿಯರಿಗೆ ಹೊಸಬಟ್ಟೆಯನ್ನು ಎರಿಸುತ್ತಾರೆ.

ದೀಪಾವಳಿ : ಈ ಹಬ್ಬವು ಕೊರಮ ಸಮುದಾಯಕ್ಕೆ ಬಹಳ ಶ್ರೇಷ್ಟವಾದ ಹಬ್ಬವಾಗಿದೆ. ಈ ಹಬ್ಬದಲ್ಲಿ ಅವರ ಪಿತೃಗಳಿಗೆ ಎಡೆಯನ್ನು ಅರ್ಪಿಸುವರು. ಈ ಹಬ್ಬಕ್ಕೆ ಎಲ್ಲರೂ ಹೊಸ ಬಟ್ಟೆಯನ್ನು ಹೊಲಿಸಿಕೊಳ್ಳುತ್ತಾರೆ. ಹಿರಿಯರ ಪೂಜೆಗಾಗಿ ಹೊಸ ಬಟ್ಟೆಗಳನ್ನು ತಂದಿರುತ್ತಾರೆ. ಈ ಹಬ್ಬದಲ್ಲಿ ಇವರು ಹಂದಿಯನ್ನು ಕಡಿದು ಹಿರಿಯರಿಗೆ ಎಡೆಯನ್ನು ಹಾಕುತ್ತಾರೆ. ಇವುಗಳಲ್ಲದೆ ದಸರ ಮುಂತಾದ ಹಬ್ಬಗಳನ್ನು ಸಹ ಮಾಡುವರು.

ಹಿರಿಯರ ಪೂಜೆ

ಕೊರಮರಲ್ಲಿ ಪೂರ್ವಜರ ಆರಾಧನೆ ಪ್ರಮುಖವಾಗಿದೆ. ದೀಪಾವಳಿ ಅಥವಾ ಮಹಾನವಮಿ ಯಲ್ಲಿ ಇದನ್ನು ನೆರವೇರಿಸುತ್ತಾರೆ. ಇದಕ್ಕೆ ಎಡೆ ಇಡುವುದು ಎನ್ನುತ್ತಾರೆ. ಮನೆಮಾರುಗಳನ್ನು ಸಾರಿಸಿ ಶುಚಿಗೊಳಿಸುತ್ತಾರೆ, ಬಾಗಿಲಿಗೆ ತೋರಣ ಕಟ್ಟಿ ಅಲಂಕರಿಸಿ ಕುಟುಂಬದ ಎಲ್ಲ ಸದಸ್ಯರು ಅಂದು ಸ್ನಾನಮಾಡಿ ಶುಭ್ರವಾದ ಬಟ್ಟೆಗಳನ್ನು ತೊಟ್ಟು ನೆಂಟರಿಷ್ಟರನ್ನೂ ಕೂಡಿಕೊಂಡು ವರ್ಷಕ್ಕೊಮ್ಮೆ ಹಿರಿಯರ ಪೂಜೆ ಮಾಡುವರು ಈ ಹಬ್ಬ ಮಾಡುವುದರಿಂದ ತಮ್ಮ ಸಂಸಾರದಲ್ಲಿ ಕಷ್ಟನಷ್ಟಗಳು ಉದ್ಭವಿಸುವುದಿಲ್ಲ. ವಂಶಾಭಿವೃದ್ಧಿ, ದನಕರುಗಳು ಅಭಿವೃದ್ದಿಯಾಗುತ್ತದೆ ಎಂದು ನಂಬುತ್ತಾರೆ. ಈ ಹಬ್ಬದಲ್ಲಿ ಕೆಲವರು ಕುರಿ, ಕೋಳಿಗಳನ್ನು ಕಡಿಯುತ್ತಾರೆ ಅಂದು ಮನೆಯ ಮುಖಂಡ ಉಪವಾಸಿದ್ದು ರಾತ್ರಿ ಪೂಜೆಗೆ ಎಡೆ ಹಾಕಿದನಂತರ ಊಟಮಾಡುತ್ತಾನೆ.

ನಡುಮನೆ ಅಡುಗೆಮನೆಯಲ್ಲಿ ಎಡೆ ಹಾಕಲು ಬೇಕಾಗುವಷ್ಟು ಸ್ಥಳದಲ್ಲಿ ಸಾರಿಸಿ ಮಧ್ಯೆ ತುಂಬಿದ ಕಳಸವನ್ನಿಟ್ಟು ಅದಕ್ಕೆ ಕುಂಕುಮ, ಅರಿಶಿಣ ಹಚ್ಚಿ, ಹೂವುಗಳಿಂದ ಅಲಂಕರಿಸಿ ಮಾಡಿಸಿಟ್ಟುಕೊಂಡಿರುವ ಹಿರಿಯರ ಬೆಳ್ಳಿಯ ಮುಖ ಹಾಗೂ ಬೆಳ್ಳಿಯ ತಾಳಿಗಳನ್ನು ಕಳಸಕ್ಕೆ ಹಾಕಿ ಕಟ್ಟುತ್ತಾರೆ. ಕಳಸದ ಅಕ್ಕಪಕ್ಕ ದೀಪಗಳನ್ನುಇರಿಸಿ ಕಳಸದ ಮುಂದೆ ಔಡಲ ಎಲೆಗಳನ್ನು ಹಾಸಿ ಬೆಸ ಸಂಖ್ಯೆಯ ಎಡೆಗಳನ್ನು ಹಾಕುತ್ತಾರೆ. ಮನೆಯಲ್ಲಿ ತಯಾರಿಸಿದ ಅನ್ನ, ಹುರಿದ ಮಾಂಸ, ಸಾರು, ಈರುಳ್ಳಿಯ ತುಂಡು, ಎಲೆಅಡಿಕೆ, ತಂಬಾಕು, ಬೀಡಿ, ಸಿಗರೇಟು, ಸಾರಾಯಿ ಹೀಗೇ ಹಿರಿಯರು ಉಪಯೋಗಿಸುತ್ತಿದ್ದ ಎಲ್ಲ ವಸ್ತುಗಳನ್ನು ಎಡೆಯಾಗಿ ಇರಿಸುತ್ತಾರೆ.

ಈ ಎಡೆಗಳಲ್ಲಿ ಒಂದು ಮಾತ್ರ ಮನೆತನದ ಹಿರಿಯರಿಗಾಗಿ ಮೀಸಲಾಗಿದ್ದು ಅದನ್ನು ದೊಡ್ಡೆಡೆ ಅಥವಾ ಪೆದ್ದೆಡೆ ಎಂಬುದಾಗಿ ಕರೆಯುತ್ತಾರೆ. ಉಳಿದ ಎಡೆಗಳು ಚಿಕ್ಕದಾಗಿರುತ್ತವೆ. ಇವರಲ್ಲಿ ಅನ್ಯ ಸಮುದಾಯದ ಮೇಲವರ್ಗದ ಜಾತಿಯ ಹೆಂಗಸನ್ನು ಮದುವೆಯಾಗಿ ಅವರು ಸತ್ತಿದ್ದರೆ ಅಂಥವರಿಗೆ ಪ್ರತ್ಯೇಕ ಎಡೆಯನ್ನು ಹಾಕುವ ಪದ್ಧತಿ ಇವರಲ್ಲಿದೆ. ಪೆದ್ದೆಡೆಯನ್ನು ಉಪವಾಸವಿದ್ದ ಹಿರಿಯರು ಊಟ ಮಾಡಿದರೆ ಉಳಿದ ಎಡೆಗಳನ್ನು ಪ್ರಸಾದವೆಂದು ಇನ್ನುಳಿದವರು ಹಂಚಿ ತಿನ್ನುತ್ತಾರೆ.

ನ್ಯಾಯ ಪದ್ಧತಿ

ಸಮುದಾಯದ ಸುವ್ಯವಸ್ಥೆಯನ್ನು ಕಾಯ್ದುಕೊಂಡು ಹೋಗಲು ತಮ್ಮದೇ ಆದ ಪ್ರತ್ಯೇಕ ನ್ಯಾಯ ಪಂಚಾಯತಿಗಳ ವ್ಯವಸ್ಥೆಯನ್ನು ಕೊರಮರು ಮಾಡಿಕೊಂಡಿರುತ್ತಾರೆ. ಸಮುದಾಯದ ಮುಖಂಡನೇ ನ್ಯಾಯ ಪಂಚಾಯತಿಗೂ ಮುಖಂಡನಾಗಿರುತ್ತಾನೆ.

ಕೊರಮರು ತಮ್ಮ ಈ ಜಾತಿ ಪಂಚಾಯಿತಿಗೆ ಕುಲಂ, ಕುಲಸಭೆ ಅಥವಾ ಕುಲ ಪಂಚಾಯಿತಿ ಎಂದು ಕರೆಯುತ್ತಾರೆ. ಪ್ರಾದೇಶಿಕವಾರು ಕುಲಪಂಚಾಯಿತಿಯ ಮುಖ್ಯಸ್ಥನನ್ನು ಪೆರುಮನುಷನ್, ಬೆರು ಮನುಷ್ಯ, ಕಟ್ಟೆಯಜಮಾನ ಎಂದು ಕರೆಯುತ್ತಾರೆ. ಇವರಲ್ಲಿ ನ್ಯಾಯದೀಶನನ್ನು ಓಕಾಳಿಗಳು ಎಂದು ಕರೆಯುತ್ತಾರೆ. ಇವರೇ ಸಾಮಾಜಿಕ ಹಾಗೂ ಸಾಮೂಹಿಕ ನ್ಯಾಯ ನಿರ್ಣಯ ಪದ್ಧತಿ ಜಾರಿಗೊಳಿಸುತ್ತಾರೆ. ಇವರಲ್ಲಿ ಒಬ್ಬ ಕೋಲಕಾರನಿದ್ದು ಅವನು ಯಜಮಾನ ಹೇಳಿದ ಸುದ್ದಿಯನ್ನು ಕೇರಿಯಲ್ಲಿ ಸಾರುವುದು ಮತ್ತು ಬೇಕಾದವರನ್ನು ಕರೆದುಕೊಂಡು ಬರುವ ಕೆಲಸ ಮಾಡುತ್ತಾನೆ.

ಪಂಚಾಯತಿ ಕಾರ್ಯಗಳು

ಉತ್ತರ ಕರ್ನಾಟಕದ ಪ್ರದೇಶಗಳಲ್ಲಿ ಕಟ್ಟಿಮನಿಯವರು ಮತ್ತು ದೀಪಸಣ್ಣವರು ನಡೆಸುವ ಸಭೆಗಳಿಗೂ, ಹೈದ್ರಾಬಾದ್ ಕರ್ನಾಟಕದ ಓಕಾಳಿಗಳು ನಡೆಸುವ ಸಭೆಗಳಿಗೂ, ದಕ್ಷಿಣ ಕರ್ನಾಟಕದ ಪೆರುಮನುಷ್ಯರು ನಡೆಸುವ ಸಭೆಗಳಿಗೂ ವ್ಯತ್ಯಾಸವಿದೆ. ಉತ್ತರ ಕರ್ನಾಟಕದ ಕಟ್ಟಿಮನಿಯವರು ಹಾಗೂ ದೀಪಸಣ್ಣವರ ಪಂಚಾಯತಿ ಕಾರ್ಯ ಚಟುವಟಿಕೆಗಳು ಜನರಹಿತ ಪ್ರದೇಶಗಳಲ್ಲಿ ನಡೆಯುತ್ತವೆ. ಕಟ್ಟಿಮನಿಯವರು ನಡೆಸುವ ಸಭೆಗಳಿಗೆ ದೀಪಸಣ್ಣವರು ಭಾಗವಹಿಸುವುದಿಲ್ಲ. ದೀಪಸಣ್ಣವರ ಸಭೆಗೆ ಇವರು ಭಾಗವಹಿಸುವಂತಿಲ್ಲ.

ಮೊದಲೆ ನಿಗದಿಪಡಿಸಿದ ಹಾಗೂ ನಿರ್ಧರಿಸಿದ ಸ್ಥಳದಲ್ಲಿ ಎಲ್ಲ ಹಿರಿಯರು ಸೇರುವರು. ಸಾಮಾನ್ಯವಾಗಿ ಹುಡುಗರನ್ನು ಸೇರಿಸುವುದಿಲ್ಲ. ಮೊಟ್ಟಮೊದಲು ಕಂಬಳಿ ಹಾಸಿ ಅದರ ಮೇಲೆ ದೀಪದ ಕಡ್ಡಿ ಎಸೆಯುವರು. ಎಸೆದ ಕಡ್ಡಿಗಳ ಆಧಾರದ ಮೇಲೆ ಎಷ್ಟು ದಿನಗಳಲ್ಲಿ ನ್ಯಾಯ ನಿರ್ಣಯ ನಡೆಯಬಹುದೆಂದು ನಿರ್ಧರಿಸುವರು. ಎರಡು ಪಕ್ಷದವರಿಂದ ಹಣವನ್ನು ಸಂಗ್ರಹಿಸಿ ಖರ್ಚು ಮಾಡುವರು. ನ್ಯಾಯ ಅನ್ಯಾಯಗಳನ್ನು ಪರಿಶೀಲಿಸಿ ತಪ್ಪುದಂಡ ವಿಧಿಸುತ್ತಾರೆ. ಪಂಚಾಯತಿಯ ಖರ್ಚು ಕಳೆದು ನಂತರ ಉಳಿದ ಹಣ ವಾಪಸ್ಸು ನೀಡುವರು. ಕಟ್ಟಿಮನಿಯವರ ನ್ಯಾಯ ನಿರ್ಣಯಗಳು ಗದಗ ಸೆಟ್ಲಮೆಂಟಿನ ಸುತ್ತಮುತ್ತಲಿರುತ್ತವೆ.

ಗದಗ ಸೆಟ್ಲಮೆಂಟಿನ ವ್ಯವಹಾರಗಳಲ್ಲಿ ಪಾತ್ರಧಾರಿಗಳು ಕೊರವರಾದರೆ ಸೂತ್ರಧಾರಿಗಳು ಸಮಾಜದ ಪ್ರತಿಷ್ಠಿತ ವ್ಯಕ್ತಿಗಳಾಗಿರುತ್ತಾರೆ.

ಹೈದ್ರಾಬಾದ್ ಕರ್ನಾಟಕದ ಓಕಾಳಂಗ ಸಭೆಯ ಕಾರ್ಯ ಚಟುವಟಿಕೆಗಳು ಊರ ಹೊರಗಿನ ಜನ ಸಂಪರ್ಕವಿಲ್ಲದ ಒಂದು ನಿಗದಿತ ಸ್ಥಳದಲ್ಲಿ ನಡೆಯುತ್ತದೆ. ಇಲ್ಲಿ ಕಂಬಳಿ ಹಾಸಿ ಕಡ್ಡಿ ಹಾಕುವ ಪದ್ಧತಿ ಇರುವುದಿಲ್ಲ. ಸಭೆಯು ಒಂದು ಗಿಡದ ಕೆಳಗೆ ಓಕಾಳಿಯ ಸಮಕ್ಷಮದಲ್ಲಿ ನಡೆಯುವುದು. ನ್ಯಾಯನಿರ್ಣಯದ ಸಭೆಯು ಒಂದು ದಿನದಿಂದ ಏಳು ದಿನಗಳವರೆಗೆ ನಡೆಯುತ್ತದೆ. ಹೀಗೆ ದಕ್ಷಿಣ ಕರ್ನಾಟಕದಲ್ಲಿ ನಡೆಯುವ ಕುಲ ಪಂಚಾಯಿತಿಯೂ ಸಹ ಜನರಹಿತ ಪ್ರದೇಶಗಳಲ್ಲಿ ನಡೆಯುತ್ತವೆ.

ನ್ಯಾಯ ನಿರ್ಣಯಗಳು

ಕುಲಂ ಅಥವಾ ಕುಲಸಭೆ ಪದ್ಧತಿಯು ಸಮುದಾಯದಲ್ಲಿ ಸಂಭವಿಸುವ ಯಾವುದೇ ಜಗಳ, ಹಿಂಸೆ, ಅತ್ಯಾಚಾರ, ಅಂತರಜಾತಿಯ ವಿವಾಹ, ಅನೈತಿಕ ಸಂಬಂಧಗಳು, ಕಳ್ಳತನ, ಸಣ್ಣಪುಟ್ಟ ವ್ಯಾಜ್ಯಗಳು ಹಾಗೂ ಒಳಜಗಳ ಇಲ್ಲವೇ ಜಟಿಲ ಸಮಸ್ಯೆ, ಜಾತಿ ಬಹಿಷ್ಕಾರ ಮೊದಲಾದವುಗಳನ್ನು ಬಗೆಹರಿಸುವ ಕಾರ್ಯ ಮಾಡುತ್ತವೆ. ಅಪರಾಧಿಗಳನ್ನು ಗುರುತಿಸಿ ಶಿಕ್ಷಿಸುವ ಮತ್ತು ನಿರಾಪರಾಧಿಗಳಿಗೆ ನ್ಯಾಯ ಒದಗಿಸಿ ಸಮುದಾಯದ ಹಿತದೃಷ್ಟಿಯನ್ನು ಕಾಯ್ದು ಕೊಳ್ಳುವುದೇ ನ್ಯಾಯ ಪಂಚಾಯತಿಯ ಉದ್ದೇಶವಾಗಿರುತ್ತದೆ.

ಕುಲ ಪಂಚಾಯತಿಗಳು ಅಪರಾಧಿ ಮತ್ತು ಫಿರ್ಯಾದಿದಾರರ ಮನವಿಯ ಮೇರೆಗೆ ನಡೆಯುತ್ತದೆ. ವಾದಿ ಪ್ರತಿವಾದಿಗಳ ಮಾತುಗಳನ್ನು ಕೇಳಿ ನ್ಯಾಯ ನಿರ್ಣಯವನ್ನು ಮುಖಂಡರು ಮತ್ತು ಸದಸ್ಯರು ಅವಲೋಕಿಸಿ ತೀರ್ಪನು ನೀಡುತ್ತಾರೆ.

ಎಂಥಹ ಪ್ರಸಂಗ ಬಂದರೂ ಅನ್ಯ ಸಮುದಾಯಗಳಿಗೆ ತಮ್ಮ ಸಮುದಾಯದಲ್ಲಿ ನಡೆಯುವ ಕುಲಪಂಚಾಯಿತಿಯಲ್ಲಿ ನಡೆಯುವ ವಿಷಯಗಳು ಬಹಿರಂಗಪಡಿಸದೆ ಗೌಪ್ಯತೆಯನ್ನು ಕಾಪಾಡಿಕೊಂಡುಬರುತ್ತಾರೆ. ಬೇರೆ ಸಮುದಾಯದ ಹೆಣ್ಣನ್ನು ಮದುವೆಯಾದರೆ ಕುಲಪಂಚಾಯಿತಿ ದಂಡ ವಿಧಿಸುತ್ತದೆ. ಜೈಲಿಗೆ ಹೋಗಿ ಬಂದರೆ ಕುಲದಿಂದ ಬಹಿಷ್ಕರಿಸುತ್ತದೆ. ಯಾವುದೇ ಕಾರಣಕ್ಕೂ ತಪಿತಸ್ಥನು ಕುಲಸಭೆಯನ್ನು ತಿರಸ್ಕರಿಸುವಂತಿಲ್ಲ. ಒಂದು ವೇಳೆ ತಿರಸ್ಕರಿಸಿದರೆ ಜಾತಿಯಿಂದ ಹೊರ ಹಾಕಲಾಗುತ್ತದೆ. ದಂಡದ ರೂಪದಲ್ಲಿ ಹಣವನ್ನು ಅಪರಾಧಿಯಿಂದ ಪಡೆಯಲಾಗುತ್ತದೆ ಹಾಗೂ ಶಿಕ್ಷೆ

ನೀಡಲಾಗುತ್ತದೆ. ದಂಡದ ರೂಪದಲ್ಲಿ ಬಂದ ಹಣವನ್ನು ನಿರಾಪರಾಧಿಗೆ ನೀಡಲಾಗುತ್ತದೆ ಅಥವಾ ಸಭೆಯು ಹೆಂಡ, ಸರಾಯಿ ಕುಡಿಯುವ ಮೂಲಕ ಆ ಹಣವನ್ನು ಖರ್ಚು ಮಾಡುತ್ತದೆ.

ಶಿಕ್ಷೆಗಳ ವಿವರ

ಹಿಂದಿನ ಕಾಲದಲ್ಲಿ ಅಪರಾಧಿಗಳ ವಿಚಾರಣೆ ನಡೆಸುವಾಗ ಅವರ ಕೈ ಮತ್ತು ಕಾಲುಗಳನ್ನು ಕಟ್ಟುತ್ತಿದ್ದರಂತೆ. ಅನೈತಿಕ ಸಂಬಂಧ ಮಾಡಿದರೆ ತಲೆಗೂದಲು ಮತ್ತು ಮೀಸೆಯನ್ನು ಬೋಳಿಸಿ ಕುತ್ತಿಗೆಗೆ ಎಲುಬಿನ ಹಾರ ಹಾಕಿ ಕತ್ತೆ ಮೇಲೆ ಕುಳ್ಳಿರಿಸಿ ಮೆರವಣಿಗೆ ಮಾಡುತ್ತಿದ್ದರಂತೆ. ಮತ್ತೆ ಕೆಲವು ಸಂದರ್ಭಗಳಲ್ಲಿ ತಾತ್ಕಾಲಿಕವಾಗಿ ಸರ್ಜಾ ಹುಲ್ಲಿನಿಂದ ಗುಡಿಸಲನ್ನು ಹಾಕಿ ಅದನ್ನು ಅಪರಾಧಿ ಹಾದು ಹೋದ ಮೇಲೆ ಸುಟ್ಟು ಹಾಕುತ್ತಿದ್ದರು. ಆನಂತರ ಕೊರವರ ಐದು ಗುಂಪಿನವರಿಗೂ ಹಬ್ಬದೂಟವನ್ನು ಹಾಕುವುದರ ಮೂಲಕ ಅವನು ಪುನಃ ಜಾತಿಗೆ ಸೇರ್ಪಡೆ ಯಾಗುತ್ತಿದ್ದನು(ಮಾನಸ:೧೯೯೩:ಪು:೭೬).

ದೇವರ ಮುಂದೆ ಪ್ರತಿವಾದಿಯಿಂದ ಹಣದ ಮೊತ್ತವನ್ನು ಇರಿಸಿ ಅದನ್ನು ವಾರಸುದಾರನಿಗೆ ತೆಗೆದುಕೊಳ್ಳುವಂತೆ ಹೇಳುವರು. ತೆಗೆದುಕೊಂಡಾಗ ಅವನಿಗೆ ಅಥವಾ ಅವನ ಕುಟುಂಬಕ್ಕೆ ಯಾವುದೇ ಕೇಡುಂಟಾಗದಿದ್ದರೆ ಅವನು ನಿರಾಪರಾಧಿ ಎಂದು ತೀರ್ಮಾನಿಸಿ ಅವನಿಗೆ ಸೇರಬೇಕಾದ ಹಣ ನೀಡುವರು.

ಜಾತಿ ಭ್ರಷ್ಟರನ್ನು ಬಹಿಷ್ಕರಿಸಲಾಗುತ್ತದೆ. ಚಿನ್ನದ ತಗಡನ್ನು ಚೆನ್ನಾಗಿ ಕಾಯಿಸಿ ಜಾತಿ ಭ್ರಷ್ಟರಾಗಿದ್ದವರ ನಾಲಿಗೆಗೆ ಬರೆ ಹಾಕಲಾಗುತ್ತದೆ. ತರುವಾಯ ಅವನ ಮೇಲಿದ್ದ ಕಳಂಕ ಕಳೆದುಹೋಗಿದ್ದರೆ ಕುಲದ ಒಳಕ್ಕೆ ಸೇರಿಸಿಕೊಳ್ಳಲಾಗುತ್ತದೆ.

ಆಕ್ರಮ ಸಬಂಧ ಹೊಂದಿದ್ದ ಪುರುಷ ಅಥವಾ ಸ್ತ್ರೀಯರನ್ನು, ಇಲ್ಲವೇ ಚಪ್ಪಲಿಯಿಂದ ಹೊಡೆಸಿಕೊಂಡವರನ್ನು ಮತ್ತೆ ಜಾತಿಯೊಳಕ್ಕೆ ಸೇರಿಸಿಕೊಳ್ಳಬೇಕಾದರೆ ಅವರ ಮೇಲಿರುವ ಅಪವಿತ್ರತೆಯನ್ನು ಕಳೆಯಲು ಜೆಟ್ಟಿಯವರನ್ನು ಪೂಜಾರಿಯಾಗಿ ಆಹ್ವಾನಿಸುತ್ತಾರೆ. ಹಿರಿಯರ ಅಧ್ಯಕ್ಷತೆಯಲ್ಲಿ ಒಂದು ಪಂಚಾಯಿತಿಯನ್ನು ಸೇರಿಸಿ ಅಪರಾಧಿಯ ಶೀಲದ ಬಗ್ಗೆ ವಿಚಾರಣೆ ನಡೆಯಿಸಿ ಸೂಕ್ತವಾದ ದಂಡವನ್ನು ವಿಧಿಸುತ್ತಾರೆ. ಜೆಟ್ಟಿಯು ತನ್ನ ಶುಲ್ಕವನ್ನು ಪಡೆದುಕೊಂಡ ಮೇಲೆ ಅಪರಾಧಿಯ ಹಣೆಗೆ ವಿಭೂತಿಯನ್ನು ಹಚ್ಚುತ್ತಾನೆ. ಆಗ ಆ ಅಶುದ್ಧ ವ್ಯಕ್ತಿಯು ಕೆರೆ ಅಥವಾ ಬಾವಿಗೆ ಹೋಗಿ ಸ್ನಾನ ಮಾಡಿಕೊಂಡು ಬಂದು ಪುನಃ ಸಭೆಯ ಮುಂದೆ ನಿಲ್ಲುವನು. ಜೆಟ್ಟಿಯು ಪುನಃ ಅವನಿಗೆ ವಿಭೂತಿಯನ್ನು ಹಣೆಗೆ ಹಚ್ಚಿ ಅವನನ್ನು ಶುದ್ಧ ಮಾಡುವನು.

೧. ಕುಂಬಾರರ ಮನೆಯಿಂದ ತರಿಸಿದ ಸುಡದ ಹಸೀ ಗಡಿಗೆಯಲ್ಲಿ ನೀರು ತುಂಬಿ ನ್ಯಾಯಕ್ಕಾಗಿ ಪಂಚಾಯ್ತಿಯ ಮುಂದೆ ಇರುವ ಇಬ್ಬರ ತಲೆಯ ಮೇಲೂ ಆ ಗಡಿಗೆಗಳನ್ನು ಹೊರಸಿ ಅವರನ್ನು ಗುಡಿಗೆ ಕರೆದುಕೊಂಡು ಹೋಗುತ್ತಾರೆ. ಯಾರ ತಲೆಯ ಮೇಲಿನ ಹಸೀ ಗಡಿಗೆ ಮೊದಲು ಕರಗಿ ಬೀಳುತ್ತದೆಯೋ ಅವರೇ ತಪ್ಪಿತಸ್ಥರೆಂದು ನಿರ್ಣಯಿಸುತ್ತಾರೆ.

೨. ಒಂದು ಕಬ್ಬಿಣದ ಕಡಾಯಿಯಲ್ಲಿ ಎಣ್ಣೆ ಹಾಕಿ ಕಾಯಿಸಿ ಅದರಲ್ಲಿ ನಾಣ್ಯವನ್ನು ಹಾಕಿ ಅದನ್ನು

ಬರೀಕೈಯಿಂದಲೇ ಇಬ್ಬರಿಗೂ ತೆಗೆಯಲು ಹೇಳುತ್ತಾರೆ. ಬಿಸಿ ಎಣ್ಣೆಯಿಂದ ಯಾರ ಕೈ ಸುಡುತ್ತದೆಯೋ ಅವರೇ ತಪ್ಪಿತಸ್ಥರು ಎಂದು ತಿಳಿಯುತ್ತಾರೆ.

೩. ಸುಡುಗಾಡಿನಲ್ಲಿನ ಬೋಕಿ ತುಂಡು (ಮಡಿಕೆಯ ಚೂರು) ಕುಟ್ಟಿ ಪುಡಿ ಮಾಡಿ, ಆ ಪುಡಿಯನ್ನು ತಪ್ಪಿತಸ್ಥನ ಕೈಯ್ಯಲ್ಲಿ ಹಾಕಿ ಆತ ತನ್ನ ಬಾಯಲ್ಲಿನ ಎಂಜಲು ಉಗುಳುಕೊಂಡು ಆ ಬೋಕಿ ಪುಡಿಯನ್ನು ಕಲೆಸಿ ಉಂಡೆ ಮಾಡಲು ತಿಳಿಸುತ್ತಾರೆ. ತಪ್ಪು ಮಾಡಿದವನ ಗಂಟಲು ಒಣಗಿ ಹೋಗಿ ಮಣ್ಣಿನ ಉಂಡೆ ಮಾಡಲು ಸಾದ್ಯ ವಾಗುವುದಿಲ್ಲ, ಆಗ ಅವನನ್ನು ತಪ್ಪಿತಸ್ಥನೆಂದು ನಿರ್ಣಯಿಸುತ್ತಾರೆ.

೪. ದೇವರ ಗುಡಿಯಲ್ಲಿ ದೇವರ ಮುಂದೆ ಇಟ್ಟ ದುಡ್ಡನ್ನು ಪಂಚಾಯತಿಯ ಎದುರು ಎತ್ತಿಕೊಳ್ಳಲು ತಿಳಿಸುತ್ತಾರೆ. ದೇವರ ದುಡ್ಡನ್ನು ಎತ್ತಿಕೊಳ್ಳುವ ಧೈರ್ಯವಿಲ್ಲದೇ ತಪ್ಪಿತಸ್ಥ ದೇವರ ಮೇಲಿನ ಹೆದರಿಕೆಯಿಂದ ತನ್ನ ತಪ್ಪನ್ನು ಒಪ್ಪಿಕೊಳ್ಳುತ್ತಾನೆ ಎಂದು ನಂಬುತ್ತಾರೆ.

೫. ಎರಡು ಗಡಿಗೆಯಲ್ಲಿ ಅಕ್ಕಿ ಮತ್ತು ನೀರನ್ನು ಸಮನಾಗಿ ಹಾಕಿ ಸಮನಾಗಿ ಸೌದೆ ಉರಿಸಿ ಅನ್ನ ಮಾಡಿಸುತ್ತಾರೆ. ಇಬ್ಬರಲ್ಲಿ ಯಾರ ಅನ್ನ ಮೊದಲು ಕುದಿಯ ತೊಡಗುವುದೋ ಅವರು ಅಪರಾಧಿಯಲ್ಲವೆಂದು ತೀರ್ಮಾನಿಸುತ್ತಾರೆ.

೪. ಪಾರ್ಧಿ

ಪಾರ್ಧಿ ಪೂರ್ವಿಕರು ಭಾರತ ದೇಶದ ಗುಜರಾತ್ ಮತ್ತು ರಾಜಾಸ್ಥಾನ ರಾಜ್ಯದವರು. ಕಾಲಾಂತರ ದಲ್ಲಿ ಗುಜರಾತ್ ರಾಜಸ್ಥಾನ ಮಹಾರಾಷ್ಟ್ರ, ಕರ್ನಾಟಕ, ಆಂಧ್ರ ಪ್ರದೇಶಗಳಿಗೆ ಹರಡಿಕೊಂಡರು. ಮಹಾರಾಷ್ಟ್ರದ ಶಿವಾಜಿ ಮಹಾರಾಜರ ರಾಜ್ಯಾಡಳಿತದಲ್ಲಿ ರಾಜ್ಯ ರಕ್ಷಣೆಗಾಗಿ ಸಿಪಾಯಿಗಳನ್ನಾಗಿ ನೇಮಿಸಿಕೊಂಡಿದ್ದರು ಅಲ್ಲಿದ ಪೂರ್ವಿಕರು ಮಹಾರಾಣ ಪ್ರತಾಪ್ ಸಿಂಗ್‌ನ ಅಂಗ ರಕ್ಷಕರು ಆಗಿದ್ದರು. ಆದ್ದರಿಂದ ತಮ್ಮ ಜನಾಂಗವನ್ನು ಪಾರ್ಧಿ ಎಂದು ಕರೆಯುತ್ತಿದ್ದರು. ಪಾರ್ಧಿ ಎಂದರೆ ಅಂಗ ರಕ್ಷಕ ಎಂದರ್ಥ.(ಲಕ್ಕಿ ಪೃಥ್ವಿರಾಜ.,ಹೆಚ್ ಪಿ ಸಿಕಾರಿ ರಾಮು:೨೦೦೮,ಪು.೧೫) ಶಿವಾಜಿ ಮಹಾರಾಜರ ರಾಜ್ಯಾಡಳಿತ ಕಳೆದುಕೊಂಡ ನಂತರ ಇವರು ಮಹಾರಾಷ್ಟ್ರವನ್ನು ಬಿಟ್ಟು ಹೊಟ್ಟೆಪಾಡಿಗಾಗಿ ಬೇರೆ ಬೇರೆ ಪ್ರದೇಶಗಳಿಗೆ ಅಲೆಮಾರಿಗಳಾಗಿ ಅಲೆದಾಡಬೇಕಾದ ಅನಿವಾರ್ಯತೆ ಉಂಟಾಯಿತು. ಹಾಗೆ ಇವರು ಕರ್ನಾಟಕಕ್ಕೂ ವಲಸೆ ಬಂದಿದ್ದಾರೆ. ಇವರಿಗೆ ಪ್ರಾದೇಶಿಕವಾಗಿ ಜನ ಬೇರೆ ಬೇರೆ ಹೆಸರುಗಳಿಂದ ಗುರುತಿಸುತ್ತಾರೆ. ಬೇರೆಯವರು ಸಮುದಾಯಕ್ಕೆ ಕರೆಯುವ ಇತರ ಹೆಸರುಗಳು ಈ ರೀತಿಯಾಗಿವೆ.

೧. ಹಕ್ಕಿಪಿಕ್ಕಿ	೨. ಚೆಂಚರು	೩. ಶಿಕಾರಿ
೪. ಹರಣಿ ಶಿಕಾರಿ	೫. ಚಿಗರಿಕಾರರು	೬. ಪಿಚ್ಛೇಳ್ಳಿಯವರು
೭. ಅಡವಿ ಛೇಂಚರು	೮. ವ್ಹಾಗ್ರಿ	೯. ಪಾರ್ಧಿ
೧೦. ಫಾಶಿಪಾರ್ಧಿ	೧೧. ಬೇಟೆಗಾರರು	೧೨. ನೀಲ್‌ಶಿಕಾರಿ
೧೩. ನರಿಶಿಕಾರಿ	೧೪. ನರಿಕೊರವ	೧೫. ಕುರುವಿಕಾರನ್

೧೬. ಮೇಲ್‌ಶಿಕಾರಿ ೧೭. ಪಿಂಡಂಡೆ ೧೯. ಪಿಟ್ಟಲೋಲು

ಸಮುದಾಯದವರು ಸಮುದಾಯಕ್ಕೆ ಕರೆಯುವ ಪದಗಳು

೧. ಬಾವುರ್ರಿ ೨. ವ್ಹಾಗ್ರೀ ೩. ಪಾರ್ಧಿ

ಪಾರ್ಧಿಯ ಬೆಡಗುಗಳು

೧. ಸಾವಂಡಿಯಾ ೨. ಪಿಂಪ್‌ಳಾಜ್ ೩. ಖ್ಹೋಢಿಯಾರ್

೪. ಕೂರ್‌ಭೀಯಾ ೫. ಈಖ್ಹೋತೀಯಾ ೬. ಆರ್‌ಖ್ಹತೀಯಾ

ಪಾರ್ಧಿ ಸಮುದಾಯದಲ್ಲಿ ಮೇಲಿನ ಬೆಡಗುಗಳೇ ಉಪನಾಮಗಳಾಗಿ ಹೊಂದಿರುವುದು ಕಂಡುಬರುತ್ತದೆ. ಉದಾಹರಣೆಗೆ ಸಾವಂಡಿಯಾ ಬೆಡಗಿನವರಿಗೆ (ಚವ್ಹಾಣ), ಖ್ಹೋಡಿಯಾರ್ (ಕಾಳೆ), ಇಖ್ಹೋತೀಯಾ (ಪವಾರ), ಪಿಂಪ್‌ಳಾಜಾ (ಕಾಳೆ), ಕೂರ್‌ಬೀಯಾ (ಪವಾರ), ಹರಖ್ಹ್‌ತೀಯಾ (ಕಾಳೆ) ಎಂಬುದಾಗಿ ಕರೆಯುವುದು ಗಮನಿಸಬಹುದು.

ಪಾರ್ಧಿ ಎಂಬ ಬುಡಕಟ್ಟನ್ನು ಒಟ್ಟು ೧೨ ಪಂಗಡಗಳಿಂದ ಈ ಕೆಳಗಿನಂತೆ ವಿಂಗಡಿಸಿ ದ್ದಾರೆ.

೧. ಫಾಸಿಪಾರ್ಧಿ ೨. ಗಾಯಿ ಪಾರ್ಧಿ ೩. ರಾಜ್‌ಪಾರ್ಧಿ

೪. ಭಿಲ್ ಪಾರ್ಧಿ ೫. ಲಂಗೋಟಿ ಪಾರ್ಧಿ ೬. ಚೋರಾಸ್ ಪಾರ್ಧಿ

೭. ನೌಕಡ್ ವಾಲೆ ೮. ಸಕತ್‌ವಾಲೆ (ಮಹಾಶಕ್ತಿ) ೯. ಕಾಳಿವಾಲೆ (ಭವಾನಿ)

೧೦. ಪಾಡೆವಾಲೆ ೧೧. ವಾಗದೇವಿವಾಲೆ ೧೨. ನವಾಡೆ

ಬೆಡಗುಗಳು ಉಪಬೆಡಗುಗಳ ಆಚರಣೆ: ಪಾರ್ಧಿ ಸಮುದಾಯದಲ್ಲಿ ಒಟ್ಟು ಆರು ಬೆಡಗುಗಳಿವೆ. ಬೆಡಗುಗಳ ಸ್ಥಾನಮಾನ ಈ ಕೆಳಗಿನಂತಿವೆ. ಮೊದಲಿಗೆ ಸಾವಂಡಿಯಾ ನಂತರ ಪಿಂಪ್‌ಳಾಜಾ, ಕೋರ್‌ಬೀಯಾ, ಕೋಢಿಯಾರ, ಹರಕತಿಯಾ, ಇಕೋತಿಯಾ

ದೇವರ ಕಾರುಣ್ಯ ಮಾಡುವ ಸಮಯದಲ್ಲಿ ಒಂದು ಬೆಡಗಿನ ಪೂಜಾರಿಯು ಇನ್ನೊಂದು ಬೆಡಗಿಗೆ ಪೂಜೆ ಮಾಡುವಂತಿಲ್ಲ. ಮತ್ತು ಪೂಜೆ ಮಾಡಿದ ಪ್ರಸಾದವನ್ನು ಸ್ವೀಕರಿಸುವಂತಿಲ್ಲ. ತಮ್ಮ ಬೆಡಗಿನ ದೇವರ ಮಾಡಿದರೆ ಮಾತ್ರ ಪೂಜಿಸಲು ಮತ್ತು ಪ್ರಸಾದ ಸ್ವೀಕರಿಸಲು ಆಗುತ್ತದೆ.

ಮದುವೆ ಕಾರ್ಯಗಳಲ್ಲಿಯು ಒಂದೇ ಸಾರಿ ಎರಡು ಮೂರು ಬೆಡಗಿನ ಗಂಡುಮಕ್ಕಳ ಮದುವೆ ಯಾದರೆ ಅದೇ ರೀತಿಯಲ್ಲಿ ಸ್ಥಾನಮಾನಗಳನ್ನು ಅನುಸರಿಸುತ್ತಾರೆ.

ಬೆಡಗುಗಳು

ಪಾರ್ಧಿಯರಲ್ಲಿರುವ ಬೆಡಗುಗಳೆಂದರೆ ಸಾವಂಡಿಯಾ, ಈಖ್ಹೋತೀಯಾ, ಪಿಂಪ್‌ಳಾಜಾ, ಖ್ಹೋಡಿಯಾರ್, ಕೊರಬೀಯಾ, ಅರ್‌ಖ್ಹತೀಯಾ ಎಂಬ ಆರು ಪ್ರಮುಖವಾದ ಬೆಡಗುಗಳು ಕಂಡುಬರುತ್ತವೆ. ಸಾಮಾನ್ಯವಾಗಿ ಎಲ್ಲ ಸಮಾಜಗಳಲ್ಲಿಯೂ ಜನರು ಅನೇಕ ಬಗೆಯ ಬಂಧನಗಳಿಂದ ಬೆಸೆದುಕೊಂಡಿರುತ್ತಾರೆ. ಪಾರ್ಧಿಯರಲ್ಲಿ ಹೆಣ್ಣಿನ ಕಡೆಯ ಬಂಧುತ್ವಗಳೇ ಹೆಚ್ಚು.

ವಿವಾಹ

ಪಾರ್ಧಿ ಸಮುದಾಯದಲ್ಲಿ ಗಂಡಿನ ಮನೆಯವರು ಮೊದಲು ಹೆಣ್ಣನ್ನು ಕೇಳಿದಾಗ, ಆ ಹೆಣ್ಣಿನ ಮನೆಯವರು ಹುಡುಗನ ನಡವಳಿಕೆ ಮನೆತನದ ವಿಚಾರವನ್ನು ತಿಳಿದುಕೊಂಡು ಮನೆಯಲ್ಲಿಯೂ ಯಾವದಾದರು ಕನ್ಯೆ ಇದ್ದರೆ ಎದರು ಬದುರಾಗಿ ಸಂಬಂದ ಬೆಳೆಸಲು ಇಚ್ಚಿಸುತ್ತಾರೆ. ಅವರ ಮನೆಯಲ್ಲಿ ಹೆಣ್ಣು ಇಲ್ಲದಿದ್ದರೆ ತಾವು ಕೊಟ್ಟ ಹೆಣ್ಣಿನ ಹೊಟ್ಟೆಯಲ್ಲಿ ಹುಟ್ಟುವ ಹೆಣ್ಣುಮಗುವನ್ನು ಕೊಡತಕ್ಕದ್ದು ಇಲ್ಲದಿದ್ದರೆ ಹೆಣ್ಣಿನ ತೆರ ೬೦ ರೂಗಳು ಹೆಣ್ಣು ಹೆತ್ತವರಿಗೆ ಕೊಡತಕ್ಕದ್ದು ಈ ತೆರ ಪ್ರದೇಶದಿಂದ ಪ್ರದೇಶಕ್ಕೆ ಕೆಲವು ವ್ಯತ್ಯಾಸಗಳು ಕಂಡುಬರುತ್ತವೆ. ಈ ಪದ್ಧತಿಗೆ ಪಾರ್ಧಿಯರಲ್ಲಿ ಆಟ್ಟು ಖ್ಹಾಟ್ಟು ಎನ್ನುತ್ತಾರೆ. ಈ ತೆರವನ್ನು ತೆಗೆದುಕೊಂಡು ಗಂಡಿನ ಮನೆಯ ಮುಂದೆ ದೇವರ ಕಾರ್ಯಗಳ ಎಲ್ಲಾ ಜವಾಬ್ದಾರಿಯನ್ನು ಗಂಡಿನವರೇ ವಹಿಸಿಕೊಂಡು ಮದುವೆ ನಡೆಸಿಕೊಡುವರು.

ಮದುವೆಯ ಕ್ರಮ

ಮದುವೆಯ ಮೊದಲಿಗೆ ಸಮುದಾಯದ ಕಟ್ಟಿಮನಿ ಗೌಡರಿಗೆ ಮದುವೆ ಇದೆ ಎಂದು ತಿಳಿಸಿ ಅವರ ಬಾಬತ್ತುನ್ನು ಕೊಡಬೇಕು. ತರುವಾಯ ವಧು ವರರ ಮನೆಯ ಮುಂದೆ ದೇವರ ಹೆಸರಿನಲ್ಲಿ ತಮ್ಮ ಮನೆಯಲ್ಲಿ ಉಗ್ಗಿ ಮತ್ತು ಅನ್ನದ ಎಡೆಯನ್ನು ಮಣ್ಣಿನ ಪರಾಣಿಯಲ್ಲಿ ಎಡೆಮಾಡುತ್ತಾರೆ ನಂತರ ಹೆಣ್ಣನ್ನು ಗಂಡಿನ ಮನೆಗೆ ಕರೆತಂದು ಬಳಗದ ಬಳೆಯನ್ನು ತೋಡಿಸುತ್ತಾರೆ. ತೋಡಿಸಿದ ನಂತರ ಗುರುಪಾದಿಯಾ ಸೂತ್ರಧಾರಿಗಳು ಇಬ್ಬರು ಆ ಹೆಣ್ಣನ್ನು ಆ ಹಟ್ಟಿಯಲ್ಲಿರುವ ಹಿರಿಯರಿಗೂ ಮತ್ತು ಎಲ್ಲಾ ಗೋತ್ರದ ದೇವರುಗಳಿಗೂ ಮತ್ತು ಮನೆಗಳಿಗೆ ಹೋಗಿ ಕೈ ಮುಗಿಸಿಕೊಂಡು ಹೆಣ್ಣಿನ ಮನೆಗೆ ಅಥವಾ ಗುಡಾರಕ್ಕೆ ಕರೆ ತರುತ್ತಾರೆ. ನಂತರ ಸೂತ್ರಧಾರಿಗಳು ರಾತ್ರಿ ಹತ್ತಿ ಮರಕ್ಕೆ ಪೂಜೆ ಮಾಡಿ ಎರಡು ಎಲೆಯ ಕೊಂಬೆಗಳನ್ನು ಮುರಿದುಕೊಂಡು ತಂದು ಕಟ್ಟಿಮನಿ ಗೌಡರ ಆಜ್ಞೆಯಂತೆ ಹೆಣ್ಣಿನ ಮನೆಯಲ್ಲೊಂದು ಗಂಡಿನ ಮನೆಯಲ್ಲೊಂದು ಹತ್ತಿ ಎಲೆಗಳಿಂದ ಬಾಸಿಂಗಗಳನ್ನು ಬಿಳಿಯ ದಾರದಿಂದ ಪೋಣಿಸಿ ರಾತ್ರಿ ತಯಾರು ಮಾಡಿಟ್ಟು ಒಂದು ಗಂಡಿನ ಮನೆಯಲ್ಲಿ ಗಿಟಕ ಕೊಬ್ಬರಿ ಕಾಯಿಯು ಕಾಣದಂತೆ ದಾರವನ್ನು ಸುತ್ತಿ ಆ ದಾರಕ್ಕೆ ಅರಿಶಿನ ಲೇಪಿಸಿ ಒಂದು ಮಣ್ಣಿನ ಪರಾಣಿಯಲ್ಲಿ ಬಾಸಿಂಗ ಮತ್ತು ದಾರ ಸುತ್ತಿದ ಕಾಯಿಯನ್ನು ಇಡುತ್ತಾರೆ. ನಂತರ ಕರೆಮಣಿಯನ್ನು ಪೋಣಿಸಿ ಆ ಪರಾಣಿಯಲ್ಲಿ ಇಟ್ಟು ಬೆಳಿಗ್ಗೆ ಬೆಳಗಿನ ಜಾವ ೪ ಗಂಟೆಗೆ ಗಂಡಿನ ಮನೆಯವರು ಎಲ್ಲಾ ಹಿರಿಯರು ಸೇರಿ ಗಂಡನ್ನು ಒನಕೆಯ ಮೇಲೆ ಕೂರಿಸಿ ಮಣ್ಣಿನ ಗಡಗಿಯ ನೀರನ್ನು ಗಂಡಿನ ಮೇಲೆ ಹಾಕುತ್ತಾರೆ. ಅದೇ ರೀತಿ ಹೆಣ್ಣಿನ ಮನೆಯವರು ಹೆಣ್ಣಿಗೆ ನೀರನ್ನು ಹಾಕುತ್ತಾರೆ. ಆನಂತರ ಬೆಳಿಗ್ಗೆ ೬ ಗಂಟೆ ಸುಮಾರಿಗೆ ಗಂಡಿನವರು ವರನಿಗೆ ಅರಿಶಿನ ಹಚ್ಚಿದ ನಂತರ ವರನ ಮೈಮೇಲೆ ಒಂದು ಹೊಸ ಟವಲನ್ನು ಹಾಕಿ ಆ ಟವಲನ್ನು ಮತ್ತು ಅರಿಶಿನ ತೆಗೆದುಕೊಂಡು ವಧುವಿನ ಮನೆಗೆ ಸೂತ್ರಧಾರಿಗಳು ಹೋಗಿ ವಧುವಿಗೆ ಅರಿಶಿನ ಹಚ್ಚಿ ತೆಗೆದುಕೊಂಡು ಹೋದ ಟವಲನ್ನು ವಧುವಿಗೆ ಹೊದಿಸಿಕೊಂಡು ಗಂಡನ ಮನೆಗೆ ಕರೆದುಕೊಂಡು ಬರುತ್ತಾರೆ. ಆ ತರುವಾಯ ವಧುವರರನ್ನು ಒನಕೆಯ ಮೇಲೆ ಕೂರಿಸಿ ನೀರನ್ನು ಹಾಕುತ್ತಾರೆ. ಗಂಡಿನಿಂದ

ಹೆಣ್ಣಿನ ಮನೆಯ ಮುಂದೆ ತಾಳಿಯನ್ನು ಕಟ್ಟಿಸುತ್ತಾರೆ. ನಂತರ ಅಲ್ಲಿಂದ ಗಂಡಿನ ಮನೆಗೆ ಕರೆತಂದು ಗಂಡಿನ ಮನೆಯ ದೇವರ ಮುಂದೆ ಇಬ್ಬರಿಗೆ ಕಟ್ಟಿದ ಬಾಸಿಂಗ್‌ಗಳನ್ನು ಬಿಚ್ಚಿ ಗೌಡರ ಬಾಬತ್ತನ್ನು ನೀಡಿ, ಏಳು ಜೋಡಿ ಗಂಟನ್ನು ಗೌಡರು ಬಿಚ್ಚುತ್ತಾರೆ. ನಂತರ ಸಾಯಂಕಾಲ ೪ ಗಂಟೆ ಸುಮಾರಿಗೆ ಹಣೆಗೆ ಅರಿಶಿನ ಮತ್ತು ಕುಂಕುಮ ಕಲಿಸಿದ ಅಕ್ಕಿಯನ್ನು ಹಚ್ಚಿ ಅದೇ ರೀತಿ ಎರಡು ಕಾಲುಗಳಿಗೆ ಅಕ್ಕಿಯನ್ನು ಹಚ್ಚಿ ಹೆಣ್ಣಿನ ಮನೆಗೆ ಹೋಗಿ ಹೆಣ್ಣಿನ ಕಾಲುಗಳಿಗೆ ಸಹ ಅದೇ ರೀತಿ ಅಕ್ಕಿ ಹಚ್ಚಿ ಗಂಡನು ಆ ಹೆಣ್ಣಿನ ಮನೆಯಿಂದ ಗಂಡಿನ ಮನೆಯವರೆಗೆ ಹೆಣ್ಣನ್ನು ಹೆಗಲ ಮೇಲೆ ಹೊತ್ತುಕೊಂಡು ಮನೆ ತುಂಬಿಸಿಕೊಳ್ಳುತ್ತಾನೆ. ಅದಾದನಂತರ ಎಲ್ಲ ಬಂಧುಗಳು ಗೌಡರು, ಊಟವನ್ನು ಮಾಡಿ ಸಂತೋಷದಿಂದ ತಮ್ಮ ತಮ್ಮ ಊರುಗಳಿಗೆ ಹೋಗುತ್ತಾರೆ. ೭ ಅಥವಾ ೯ ದಿನಗಳಲ್ಲಿ ಮದುವೆಗೆ ಹಾಕಿದ ಚಪ್ಪರ ತೆಗೆಯುತ್ತಾರೆ. ತೆಗೆದ ಚಪ್ಪರದ ಮೇಲೆ ಹಾಕಿದ ತೊಪ್ಪಲನ್ನು ಹರಿಯುವ ನೀರಿನಲ್ಲಿ ಅಥವಾ ಯಾರು ತಿರುಗಾಡಲಾರದ ಸ್ಥಳದಲ್ಲಿ ಹಾಕಲಾಗುತ್ತದೆ. ಅಲ್ಲಿಂದ ತಮ್ಮ ತಮ್ಮ ಕೆಲಸ ಕಾರ್ಯಗಳಿಗೆ ತೊಡಗುತ್ತಾರೆ. ಇಲ್ಲಿಗೆ ಮದುವೆ ಕಾರ್ಯಗಳು ಮುಗಿದ ಹಾಗೆ.

ಮದುವೆಯಲ್ಲಿ ಬಳಸುವ ವಸ್ತುಗಳು ಅಥವಾ ಶಬ್ದಗಳು ಈ ಕೆಳಗಿನಂತಿವೆ:

ಇತರೇ ವಿಧದ ಮದುವೆಗಳು : ಒಬ್ಬ ಪಾರ್ಧಿ ಗಂಡಸು ತನ್ನ ಹೆಂಡತಿಯು ತೀರಿದಾಗ ಅಥವಾ ಅವಳು ಜೀವಂತ ಇದ್ದಾಗಲೇ ಆಕೆಯ ತಂಗಿಯನ್ನು ಮದುವೆಯಾಗಬಹುದಾಗಿದೆ. ಈ ಮದುವೆಗೆ ಸ್ವಲ್ಪ ಮಟ್ಟಿನ ವಿರೋಧವಿದ್ದರೂ, ಇದು ನಿಶಿದ್ಧವಲ್ಲ. ಈಗಲೂ ಗಂಡು ತನ್ನ ಹೆಂಡತಿಗೆ ಈ ತರಹದ ಮದುವೆಯಿಂದ ತನ್ನ ಅಕ್ಕನ ಮಕ್ಕಳನ್ನು ತಂಗಿ ಚೆನ್ನಾಗಿ ನೋಡಿಕೊಳ್ಳುತ್ತಾಳೆ ಎಂದು ನಂಬುತ್ತಾರೆ.

ಪಾರ್ಧಿಯರಲ್ಲಿ ಸೊದರತ್ತೆ ಮತ್ತು ಸೋದರ ಮಾವನ ಸಂಬಂಧಗಳು ಹೆಚ್ಚಾಗಿ ಕಂಡು ಬರುತ್ತವೆ. ಇವರು ಅಪರಿಚಿತರೂ ಅಥವಾ ದೂರದ ಊರಿನವರಿಗಿಂತಲೂ ಹೆಚ್ಚಾಗಿ ಪರಿಚಿತರನ್ನು ಹಾಗೂ ಹತ್ತಿರದ ಬಂಧುಗಳನ್ನೇ ಹೆಚ್ಚಾಗಿ ಮದುವೆಯಾಗಲು ಇಷ್ಟ ಪಡುತ್ತಾರೆ.

ವಿಚ್ಛೇಧನೆ : ವಿವಾಹ ವಿಚ್ಛೇಧನೆ ಎಂಬುದು ಇಂದಿನ ಬಹುತೇಕ ಎಲ್ಲ ಸಮುದಾಯಗಳಲ್ಲಿ ಸಾಮಾನ್ಯವಾಗಿದೆ. ಹಾಗೆಯೆ ಪಾರ್ಧಿಯರಲ್ಲಿಯೂ ವಿವಾಹ ವಿಚ್ಛೇಧನೆ ಸರಳವಾಗಿದೆ. ಹೆಣ್ಣು ಗರ್ಭಧರಿಸದೇ ಬಂಜೆಯಾಗಿರುವದರಿಂದ, ಗಂಡನಾದವನು ಷಂಡನಾದರೆ, ಗಂಡ ಹೆಂಡಿರಿಬ್ಬರಲ್ಲಿ ಯಾರಾದರೂ ಒಬ್ಬರ ಚಾರಿತ್ರ್ಯ ಒಳ್ಳೆಯದಿಲ್ಲದಿದ್ದರೆ ಅಥವಾ ಇಬ್ಬರಲ್ಲಿ ಯಾರಿಗಾದರೂ ಒಬ್ಬರಿಗೆ ಭೀಕರ ಕಾಯಿಲೆಯಿದ್ದರೆ, ಗಂಡ ಪರಸ್ತ್ರೀಯರಲ್ಲಿ ಅನುರಕ್ತನಾಗಿದ್ದರೆ, ಅಥವಾ ಹೆಂಡತಿ ಸುಂದರಳಾಗಿರದಿದ್ದರೆ ವಿವಾಹ ವಿಚ್ಛೇಧನೆಗಳು ಆಗುತ್ತವೆ. ಗಂಡಸು ಹೆಂಗಸು ಎರಡೂ ಕಡೆಯವರು ಸೇರಿ ಪಂಚರ ಸಮ್ಮುಖದಲ್ಲಿ ವಾದ ಪ್ರತಿವಾದಗಳು ನಡೆದು ಪಂಚಾಯ್ತಿ ನಡೆದು ವಿಚ್ಛೇಧನೆಯನ್ನು ನಿರ್ಧರಿಸುತ್ತಾರೆ. ಅಷ್ಟೇ ಅಲ್ಲದೇ ವಿಚ್ಛೇಧನೆ ಪಡೆದ ಹೆಣ್ಣಾಗಲಿ ಅಥವಾ ಗಂಡಾಗಲಿ ಪುನಃ ಮದುವೆ ಯಾಗುವಂತೆ ಅವಕಾಶ ಮಾಡಿಕೊಡುತ್ತಾರೆ.

ಸಾಮಾನ್ಯವಾಗಿ ಗಂಡಸು ವಿಚ್ಛೇಧನೆ ಮಾಡಿದಾಗ ತಾನು ಮದುವೆಯಾದ ಖರ್ಚು ಹಿಂತಿರುಗಿ ಕೇಳುವಂತಿಲ್ಲ. ಹುಟ್ಟಿದ ಮಕ್ಕಳು ತಂದೆಯ ಕಡೆಗೆ ಸೇರುತ್ತವೆ.

ವೈವಾಹಿಕ ಸ್ಥಾನಮಾನ

ಪಾರ್ಧಿ ಬುಡಕಟ್ಟಿನಲ್ಲಿ ಶೇಕಡ ೫೦.೭೪ ರಷ್ಟು ಜನರು ಅವಿವಾಹಿತರಿರುವರು. ವಿವಾಹಿತ ಶೇ. ೪೪.೪೧ ರಷ್ಟು ಕಂಡುಬಂದರೆ, ವಿಧುರ ವಿಧವೆಯರು ಶೇ. ೪.೪೬ ರಷ್ಟಿದ್ದಾರೆ ಹಾಗೂ ಬೇರ್ಪಟ್ಟ ಕುಟುಂಬಗಳು ಶೇ. ೦.೩೭ರಷ್ಟು ಇರುವುದು ಕಾಣಸಿಗುತ್ತದೆ.

ಕೋಷ್ಟಕ ೪.೪: ಸಮೀಕ್ಷೆಗೊಳಪಟ್ಟ ಪಾರ್ಧಿ ಸಮುದಾಯದ ವೈವಾಹಿಕ ಸ್ಥಾನಮಾನ

ವೈವಾಹಿಕ ಸ್ಥಾನಮಾನ	ಪುರುಷ	ಸ್ತ್ರೀ	ಒಟ್ಟು
ಅವಿವಾಹಿತರು	೨೪೯೮	೨೦೯೫	೪೫೯೩
ವಿವಾಹಿತರು	೧೯೫೯	೨೦೬೧	೪೦೨೦
ವಿಧುರ/ವಿಧವೆಯರು	೬೨	೩೪೨	೪೦೪
ಬೇರ್ಪಡೆಯಾದವರು	೧೪	೨೦	೩೪

ಜನನ ಮತ್ತು ನಾಮಕರಣ : ಗರ್ಭಿಣಿಯ ಹೆರಿಗೆಯ ದಿನಗಳು ಸಮೀಪ ಇರುವಾಗ ಮನೆಯೊಳಗೆ ಇದ್ದ ಹಳೇ ಬಟ್ಟೆಗಳನ್ನು ಶೇಖರಣೆ ಮಾಡಿಕೊಂಡಿರುತ್ತಾರೆ. ಹೆರಿಗೆಯ ದಿನ ಮತ್ತು ನೋವುಂಟಾದಾಗ ಹಳೇ ಬಟ್ಟೆಗಳನ್ನು ಧರಿಸುತ್ತಾರೆ. ಸೂಲಗಿತ್ತಿಯರು ಇದ್ದರೆ ಹೆರಿಗೆ ಮಾಡಿಸಲು ಕರೆದುಕೊಂಡು ಬರುವರು. ಹೊಕ್ಕಳ ಬಳ್ಳಿಯನ್ನು ಚಾಕುವಿನಿಂದ ಕತ್ತರಿಸಿ ದಾರದಿಂದ ಹೊಕ್ಕುಳ ಬಳ್ಳಿ ಕಟ್ಟಿ ಮಾಸ ಮಣ್ಣಿನಲ್ಲಿ ಹೂಳುತ್ತಾರೆ. ಮನೆಯ ಪಕ್ಕದಲ್ಲಿ ಚಿಕ್ಕ ಗುಡಾರ ಅಥವಾ ಸೊಪ್ಪೆಯ ಚಿಕ್ಕ ಗುಡಿಸಲು ನಿರ್ಮಿಸಿ ಆ ಗುಡಿಸಲಿಗೆ ಕರೆದುಕೊಂಡು ಬಂದು ಒಂದು ಮಣ್ಣಿನ ಪರಾಣಿ ಒಂದು ಮಗಿ ಒಂದು ಕೊಡ ಒಂದು ಗಡಿಗೆ ಹಳೆಯ ಸೀರೆಗಳು ಲಂಗಗಳು ಪ್ರತ್ಯೇಕವಾಗಿ ಇಡುತ್ತಾರೆ. ಬಾಣಂತಿಯ ಸಹಾಯಕ್ಕೆ ಒಬ್ಬ ಹುಡುಗಿಯನ್ನು ನೇಮಿಸುವರು. ಮಗುವಿನ ಜನನ ನಂತರ ತಾಯಿ ಮತ್ತು ಮಗುವನ್ನು ಮುಟ್ಟುವುದು ಮೈಲಿಗೆಯಂತೆ ಭಾವಿಸುವರು. ಮಗು ಹುಟ್ಟಿದ ೫ ದಿನಗಳವರೆಗೆ ಕುಟುಂಬದ ಯಾರೋ ಸದಸ್ಯರು ಮಗುವನ್ನು ಮುಟ್ಟುವುದಿಲ್ಲ ಮಗುವಿಗೆ ಒಂದು ಒಳ್ಳೆಯ ಬಟ್ಟೆಯನ್ನು ಧರಿಸುವುದಿಲ್ಲ. ಮಗು ಹುಟ್ಟಿದ ಐದನೇ ದಿನಕ್ಕೆ ಒಂದು ಕಾರ್ಯವನ್ನು ಮಾಡುವರು. ಇಲ್ಲಿ ಮಗುವಿನ ಕೇಶ ಮುಂಡನೆ ಮಾಡಲಾಗುವುದು. ಅದು ಸ್ವತಃ ಮಹಿಳೆಯೇ ಈ ಕಾರ್ಯವನ್ನು ಮಾಡಬೇಕು. ಈ ಐದಟ್ಟಿ ಕಾರ್ಯಕ್ರಮಕ್ಕಿಂತ ಮುಂಚೆ ಮಗುವನ್ನು ಮನೆಯೊಳಗೆ ತಂದರೆ ಅದು ಮನೆಗೆ ಶ್ರೇಯಸ್ಸಲ್ಲ ಎಂದು ಭಾವಿಸುತ್ತಾರೆ. ಐದನೇ ದಿನಕ್ಕೆ ಮಹಿಳೆ ಆ ಮಗುವಿನ ಕೊಳೆ ಬಟ್ಟೆಯನ್ನು ಹೊರಗೆ ಎಸೆದು ಮಗು ಮತ್ತು ತಾಯಿಗೆ ಎಣ್ಣೆಯ ಸ್ನಾನವನ್ನು ಮಾಡಿಸುವರು. ಐದನೇ ದಿನಕ್ಕೆ ಮಗುವಿನ ನಾಮಕರಣ ಮಾಡುವರು. ಇದರಲ್ಲಿ ಮಹಿಳೆಯರು ಮಾತ್ರ ಪಾಲ್ಗೊಳ್ಳುವರು. ಮಗುವಿನ ನಾಮಕರಣದ ಕಾರ್ಯ ನೆರವೇರುವವರೆಗೂ ತಾಯಿಯಾದವಳು

ಮಗುವಿಗೆ ಹಾಲು ಕುಡಿಸುವಂತಿಲ್ಲ. ಮತ್ತು ಕಾರ್ಯದ ಮುಕ್ತಾಯದವರೆಗೂ ಹಸಿ ಬಟ್ಟೆಯಲ್ಲಿ ಕೂಡಬೇಕು. ಈ ಸಂದರ್ಭದಲ್ಲಿ ಮಗುವಿನ ಕೈಕಾಲಿಗೆ ಕರಿಮಣಿ ಕಟ್ಟಿ ತುಪ್ಪದ ದೀಪ ಹಚ್ಚುವರು. ಈ ಕಾರ್ಯಕ್ರಮವನ್ನು "ಜಣೇಲಾನು ಪೂಜವಾನು" ಎಂದು ಕರೆಯುತ್ತಾರೆ. ಈ ಕಾರ್ಯಕ್ರಮಕ್ಕೆ ಮಾಡಿದ ಅಡುಗೆಯನ್ನು ಪುರುಷರು ತಿನ್ನುವುದಿಲ್ಲ. ಅದು ಮೈಲಿಗೆ ಆಹಾರ ಎನ್ನುವಂತಹ ನಂಬಿಕೆಯೇ ಇದಕ್ಕೆ ಕಾರಣವಾಗಿರುವುದು. ಮಗುವಿನ ಜನನದ ಐದನೇ ದಿನಕ್ಕೆ ನಾಮಕರಣ ಮಾಡಿದ ನಂತರ ೧೫ನೇ ದಿನಕ್ಕೆ ಖಂಡೋೞ ಸಮಾರಂಭ ಮಾಡುವರು. ಈ ಸಮಾರಂಭದಲ್ಲಿ ಮಾಂಸದ ಅಡುಗೆಯನ್ನು ಮಾಡುವರು. ಮತ್ತು ಹಿರಿಯರು ತಮ್ಮ ಬೆಡಗಿನ ಕುಲದೇವರನ್ನು ಪೂಜಿಸಿ ಗಂಡು ಮಗುವಾಗಿದ್ದರೆ ಉಡದಾರವನ್ನು ಕಟ್ಟುವರು. ದೆವ್ವ, ಮಾಟ, ಮಂತ್ರದ ಬಗ್ಗೆ ಅಪಾರವಾದ ನಂಬಿಕೆಯನ್ನು ಹೊಂದಿದ್ದಾರೆ.

ನಾಮಕರಣವನ್ನು ಕೆಲವರು ಐದು ದಿನಕ್ಕೆ ಕೆಲವರು ಒಂಭತ್ತು ದಿನಕ್ಕೆ ಕೆಲವು ಕಡೆ ಮೂರು ತಿಂಗಳಿಗೆ ನಾಮಕರಣ ಮಾಡುವುದು ರೂಢಿ.

ಋತುಮತಿ : ಹೆಣ್ಣು ಋತುಮತಿ ಆದಾಗ ಮನೆಯ ಹೊರಗಿನ ಕೋಣೆಯಲ್ಲಿ ಪ್ರತ್ಯೇಕವಾಗಿ ಹಾಸಿಗೆ, ಪಾತ್ರೆಗಳನ್ನು ಇಡುವರು. ಹೆಣ್ಣು ಮೈಲಿಗೆಯಲ್ಲಿರುವುದರಿಂದ ಎಲ್ಲಿಯೂ ತಿರುಗಾಡುವಂತಿಲ್ಲ. ಮನೆಯಲ್ಲಿ ಮಾಡಿದ ಊಟ ಮತ್ತು ತಿಂಡಿಯನ್ನು ಮನೆಯವರೇ ಅವಳಿಗೆ ತಂದು ಕೊಡುತ್ತಾರೆ. ಮನೆಯಲ್ಲಿ ಮತ್ತು ಇತರ ಕಡೆ ಯಾವುದೇ ಕಾರ್ಯಕ್ರಮ ನಡೆದರು ಋತುಮತಿಯಾದ ಏಳು ದಿನದ ನಂತರ ತಾನು ಉಟ್ಟ ಬಟ್ಟೆಗಳನ್ನು ಬಿಟ್ಟು ಹೊಸ ಬಟ್ಟೆಗಳನ್ನು ಧರಿಸಿಕೊಂಡು ಭಾಗವಹಿಸಲು ಅವಕಾಶ ಮಾಡಿಕೊಡುತ್ತಾರೆ. ಇತ್ತೀಚಿನ ದಿನಗಳಲ್ಲಿ ಋತುಮತಿಯಾದ ಒಂಭತ್ತು ದಿನಕ್ಕೆ ಸ್ನಾನ ಮಾಡಿಸಿ ಮುಖಕ್ಕೆ ಕೈಕಾಲುಗಳಿಗೆ ಕೆಂಪು ಬಣ್ಣ ಅಥವಾ ಅರಿಶಿಣದ ಬೊಟ್ಟನ್ನು ಹಣೆಗೆ ಹಚ್ಚುತ್ತಾರೆ. ಹಸಿರು ಕುಪ್ಪಸ ಮತ್ತು ಸೀರೆ ಉಡಿಸಿ ಹೂವು ಮುಡಿಸುತ್ತಾರೆ.

ಸೀಮಂತ : ಇವರಲ್ಲಿ ಸೀಮಂತ ಕಾರ್ಯ ಮಾಡುವುದು ಚಾಲ್ತಿಯಲ್ಲಿಲ್ಲ. ಇತ್ತೀಚಿನ ದಿನಗಳಲ್ಲಿ ಹೊರಗಿನ ಜನರ ಆಚರಣೆಯನ್ನು ನೋಡಿ ಐದು ತಿಂಗಳ ನಂತರ ಗಂಡನ ಮನೆಯಲ್ಲಿ ಅಥವಾ ಹೆಣ್ಣಿನ ತಂದೆ ತಾಯಿ ಮನೆಯಲ್ಲಿ ಹೂವು ಮುಡಿಸುವ ಕಾರ್ಯಗಳನ್ನು ನಡೆಸುತ್ತಾರೆ.

ಮರಣ : ಪಾರ್ಧಿಯರು ಸತ್ತ ವ್ಯಕ್ತಿಯನ್ನು ಎರಡು ವಿಧಾನಗಳಿಂದ ಅಂತ್ಯಕ್ರಿಯೆಗಳನ್ನು ಮಾಡುವರು. ಒಂದು ಸುಡುವುದು, ಇನ್ನೊಂದು ಮಣ್ಣಿನಲ್ಲಿ ಹೂಳುವುದು. ಸತ್ತ ವ್ಯಕ್ತಿ ಮದುವೆಯಾಗದಿದ್ದರೆ ಅಥವಾ ಪೂಜಾರಿಯಾಗಿದ್ದರೆ ಮಣ್ಣಿನಲ್ಲಿ ಹೂಳುವ ಪದ್ಧತಿ ಇರುವುದು. ಇನ್ನುಳಿದವರು ಹನ್ನೊಂದು ವರ್ಷಕ್ಕಿಂತ ಮೇಲ್ಪಟ್ಟಿರುವವರನ್ನು ಸುಡುವ ಪದ್ಧತಿ ಇರುವುದು ವ್ಯಕ್ತಿ ಮರಣ ಹೊಂದಿದ ದಿನ ಅಥವಾ ಮರುದಿನ ಬೇವಿನ ಕಟ್ಟಿಗೆಯಿಂದ ಚಟ್ಟವನ್ನು ಕಟ್ಟಿ ಶವವನ್ನು ಸ್ಮಶಾನಕ್ಕೆ ಒಯ್ದು ಅಲ್ಲಿ ತುಪ್ಪದಿಂದ ಶವದ ಮೈಗೆ ಉಜ್ಜುತ್ತಾರೆ. ನಂತರ ನೀರಿನಿಂದ ಸ್ನಾನ ಮಾಡಿಸಿ ಅಂತ್ಯಕ್ರಿಯೆ ಕಾರ್ಯ ಮುಗಿಸುವರು. ನಂತರ ಪೂಜಾರಿ ಆ ವ್ಯಕ್ತಿಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿಕೆ ರೂಪದಲ್ಲಿ ಹೇಳುವನು ಅಲ್ಲಿಂದ ಎಲ್ಲ

ಜನರು ಸತ್ತ ವ್ಯಕ್ತಿಯ ಮನೆಗೆ ಹೋಗಿ ಸರಾಯಿಯನ್ನು ತೀರ್ಥದ ರೂಪದಲ್ಲಿ ಕುಡಿಯುವರು. ಮರುದಿನ ಸತ್ತ ವ್ಯಕ್ತಿಯ ಅಂತ್ಯಕ್ರಿಯೆಯ ಸ್ಥಳದಲ್ಲಿ ಸತ್ತ ವ್ಯಕ್ತಿಗೆ ಇಷ್ಟವಾದ ಖಾದ್ಯವನ್ನು ಮಾಡಿ ಕುಳಿತುಕೊಂಡಿರುತ್ತಾರೆ. ಅದನ್ನು ಯಾವುದೇ ಪ್ರಾಣಿ ಪಕ್ಷಿಗಳು ಮುಟ್ಟುವವರೆಗೂ ಕಾಯುತ್ತಾರೆ. ಇದರರ್ಥ ಆ ಆಹಾರವನ್ನು ಪ್ರಾಣಿ ತಿಂದರೆ ಸತ್ತ ವ್ಯಕ್ತಿಯ ಆತ್ಮಕ್ಕೆ ಶಾಂತಿ ದೊರೆತ ಹಾಗೆ. ಮರುದಿನ ಸತ್ತ ವ್ಯಕ್ತಿಯ ಹೆಗಲು ಇಳಿಸುವ ಕಾರ್ಯವನ್ನು ಮಾಡುವರು.

ಆರು ದಿನದವರೆಗೆ ಯಾವುದೇ ಮಾಂಸದ ಅಡುಗೆ ಸತ್ತವರ ಮನೆತನದವರು ತಿನ್ನುವಂತಿಲ್ಲ. ಮತ್ತು ಹತ್ತನೆ ದಿವಸ ಯಾವುದೇ ಮಾಂಸ ಮುಟ್ಟುವ ಹಾಗಿಲ್ಲ ೧೨ನೆಯ ದಿವಸಕ್ಕೆ ಸತ್ತವನ ಮನೆಯವರು ದಿವಸವನ್ನು ಮಾಡುತ್ತಾರೆ. ದಿವಸ ಮಾಡುವವರೆಗೆ ಸತ್ತವರ ಮನೆಯವರು ದೇವರಾಗಲಿ ಮದುವೆಯಾಗಲಿ ಮಾಡುವಂತಿಲ್ಲ. ಬೇರೆಯವರು ಮಾಡಿದ್ದಲ್ಲಿ ಭಾಗವಹಿಸಬಹುದು.

ಧಾರ್ಮಿಕ ವಿಧಿವಿಧಾನಗಳು

ಸಾಂಸ್ಕೃತಿಕ ವೀರ ನಾಯಕರು

೧. ರುಪ್ಪು

೨. ಟಿಲ್ಲು

೩. ಫಗಲೋ

೪. ಹಾವಲೋ

೫. ಛತ್ರಪತಿ

೬. ಕಾಣ್‌ಮೋಲ್ಯಾ

೭. ಬಾಲ್ಲಣ

ಇವರು ಪಾರ್ಧಿಯರ ಚಾರಿತ್ರಿಕ ವೀರ ಪುರುಷರು ಅಥವಾ ಸಾಂಸ್ಕೃತಿಕ ನಾಯಕರು (ಲಕ್ಕಿ ಪೃಥ್ವಿರಾಜ್, ಹೆಚ್ ಪಿ ಶಿಕಾರಿ ರಾಮು:೨೦೦೮,ಪು.೪೫–೪೬).

ಪವಾಡಗಳು : ಸಾವಂಡಿಯಾ ಬೆಡಗಿನವರು ದೇವರು ಮಾಡುವ ಸಮಯದಲ್ಲಿ ಕುದಿಯುವ ಹುಗ್ಗಿಯನ್ನು ಕೈಯಿಂದ ಏಳುಸಾರಿ ಗಡಿಗೆ ಒಳಗಿನಿಂದ ಹೊರಗೆ ತೆಗೆದು ಮಣ್ಣಿನ ಪರಾಣಿಯಲ್ಲಿ ಇಟ್ಟು ದೇವಿಗೆ ತಾಥ್ (ಎಡೆ) ಇಡುವರು. ಕುದಿಯುವ ಹುಗ್ಗಿ ಕೈಯಿಂದ ತೆಗೆದರೂ ಕೈಗಳಿಗೆ ಯಾವುದೇ ಸುಟ್ಟ ಗಾಯಗಳು ಆಗಿವುದಿಲ್ಲ. ಇದನ್ನು ದೇವಿಯ ಪವಾಡವೆಂದು ತಿಳಿಯುವರು.

ಮನೆಯ ದೇವರು ಮಾಡುವ ಸಮಯದಲ್ಲಿ ಕುದಿಯುವ ತುಪ್ಪದಲ್ಲಿ ದೇವರು ಮೈಮೇಲೆ ಆವರಿಸಿಕೊಂಡ ಪೂಜಾರಿಯು ಎರಡು ಕೈಯನ್ನು ಅದ್ದಿ ತೆಗೆಯುವರು. ನಂತರ ಗೋಧಿಯ ಚಿಕ್ಕ ಉಂಡೆಗಳು ಮತ್ತು ಚಪಾತಿಯನ್ನು ಕೈಯಿಂದ ಮಾಡಿ ಆ ತುಪ್ಪದಲ್ಲಿ ಕರೆಯುತ್ತಾರೆ. ಕುದಿಯುವ ತುಪ್ಪದಲ್ಲಿ ಇಷ್ಟೆಲ್ಲಾ ಕಾರ್ಯಗಳು ಮಾಡಿದರು ಕೈಗಳಿಗೆ ಸುಟ್ಟ ಗಾಯಗಳು ಆಗುವುದಿಲ್ಲ. ಮತ್ತು ಯಾವುದೇ ತೊಂದರೆಗಳು ಆಗುವುದಿಲ್ಲ. ಆದ್ದರಿಂದ ಇದನ್ನು ದೇವರ ಪವಾಡವೆಂದು ತಿಳಿಯುವರು.

ದೇವರನ್ನು ಕರೆಯುವುದು

ಪಾರ್ಧಿಯರಲ್ಲಿ ದೇವರು ಮಾಡುವ ಸಮಯದಲ್ಲಿ ರಾತ್ರಿ ೮ ಗಂಟೆಯಿಂದ ಮಧ್ಯರಾತ್ರಿ ೧೨ ಹಾಗೂ ೧ ಗಂಟೆಯವರೆಗೆ ದೇವರ ಮೂರ್ತಿ ಇಟ್ಟ ಸ್ಥಳದ ಮುಂಭಾಗದಲ್ಲಿ ದೇವರು ಮೈಮೇಲೆ ಬಾರದ ಗಂಡುಮಕ್ಕಳಿಗೆ ಅರೆಬೆತ್ತಲೆ ಜಳಕಮಾಡಿಸಿ ದೇವರ ಮುಂದೆ ಕೂಡಿಸುತ್ತಾರೆ. ಅವರ ಬೆಡಗಿನ ಹಿರಿಯ ಪೂಜಾರಿ ದೇವರಿಗೆ ಲೋಬಾನ ಹಾಕಿ ಕುಳಿತ ಗಂಡುಮಕ್ಕಳಿಗೆ ಎಲ್ಲರಿಗೆ ಲೋಬಾನದ ಹೊಗೆಯನ್ನು ಹಾಯಿಸುತ್ತಾರೆ. ನಂತರ ದೇವರ ಬಟ್ಟೆ ಗಂಡುಮಕ್ಕಳ ಮೈಮೇಲೆ ಹಾಕಿ ದೇವರ ಹಾಡುಗಳನ್ನು ಹಾಡುತ್ತಾರೆ. ಅಷ್ಟಕ್ಕೂ ಆ ಗಂಡುಮಕ್ಕಳ ಮೈಮೇಲೆ ದೇವರು ಬಾರದಿದ್ದರೆ ಹಿರಿಯರು ಅಥವಾ ಪೂಜಾರಿಯು ದೇವರ ಶಾಸ್ತ್ರ ನೋಡುತ್ತಾರೆ. ಅದು ಹೇಗೆ ಅಂದರೆ, ದೇವರ ಮುಂದೆ ಇಟ್ಟ ಗುಲಗುಂಜಿ ಕಾಳುಗಳು ಅಥವಾ ಗೋಧಿಕಾಳುಗಳು ಒಂದು ಚಿಟಿಕೆಯಲ್ಲಿ ಹಿಡಿದು ದೇವರನ್ನು ನೆನೆದು ನಾಲ್ಕು ನಾಲ್ಕು ಗುಂಪುಮಾಡಿ ಕೊನೆಗೆ ಉಳಿಯುವ ೪ ಅಥವಾ ೨ ಬಂದರೆ ಬಾಂಹಾ ಎಂದು ತಿಳಿಯುತ್ತಾರೆ. ೩ ಅಥವಾ ೧ ಕೊನೆಗೆ ಉಳಿದರೆ ವದಾಹೋ ಎಂದು ಕರೆಯುತ್ತಾರೆ. ವದಾಹೋ ಬಂದರೆ ಚಿಟಿಕೆ ಹಿಡಿದ ವ್ಯಕ್ತಿಯ ಮನಸ್ಸಿನಲ್ಲಿ ಅಂದುಕೊಂಡ ಕಾರ್ಯವು ಶುದ್ಧವಾಗುತ್ತದೆಯೆಂದು ತಿಳಿಯುತ್ತಾನೆ. ಅದೇ ರೀತಿಯಲ್ಲಿ ದೇವರನ್ನು ಮತ್ತೊಮ್ಮೆ ನೆನೆದು ದೇವರನ್ನು ಬರಿಸಿಕೊಳ್ಳುತ್ತಾರೆ. ಕೊನೆಗೆ ಅವರ ಮೈಮೇಲೆ ದೇವರು ಬಂದೇ ಬರುತ್ತದೆ. ಇದು ಒಂದು ವಿಶೇಷ ಧಾರ್ಮಿಕ ಆಚರಣೆಯಾಗಿದೆ. ದೇವರ ಕಟ್ಟೆಯ ಎದುರು ಮೂರು ಕಲ್ಲುಗಳನ್ನು ಹೂಡಿ ಖವಾಳಿಯನ್ನು ಮಾಡುತ್ತಾರೆ. ದೇವರು ಮೈಮೇಲೆ ಬಂದವನು ಸುಡುವ ಕಡಾಯಿಯಿಂದ ೯ ಖವಾಳಿಗಳನ್ನು ಬಲಗೈಯಿಂದಲೇ ಮತ್ತು ಬರಿಗೈಯಿಂದಲೇ ತೆಗೆಯುವರು. ಇದು ರಾತ್ರಿ ನಡೆಯುವ ಆಚರಣೆ.

ದೇವರ ಕಾರ್ಯಗಳು

ಖೋಡಿಯಾರ ಬೆಡಗಿನವರು ಕುಟುಂಬದಲ್ಲಿ ಹೆಣ್ಣುಮಕ್ಕಳಿಗೆ ಆಗುವ ಮೊದಲನೇ ಮಗುವನ್ನು ದೇವಿಗೆ ಬಲಿ ನೀಡುವಂತಹ ಪದ್ಧತಿ ಇತ್ತು. ಹೀಗೆ ಕಾಲಕ್ರಮೇಣ ಈ ಪದ್ಧತಿ ಮುಂದುವರೆದುಕೊಂಡು ಬರುವಾಗ ಒಂದು ಕುಟುಂಬದಲ್ಲಿ ಒಬ್ಬ ಮಹಿಳೆಗೆ ಒಂದು ಗಂಡು ಮಗುವಾಗಿತ್ತು. ಆದರೆ ಆಕೆಯ ಗಂಡ ತೀರಿಕೊಂಡ ಸಂದರ್ಭದಲ್ಲಿ ಆ ಮಹಿಳೆಗೆ ಇದ್ದದ್ದು ಒಂದೇ ಮಗು ಆಗ ಬಲಿಕೊಟ್ಟರೇ, ಅವಳಿಗೆ ಯಾರು ಗತಿ ಇರಲಿಲ್ಲ. ಇಂತಹ ದ್ವಂದ್ವ ಪರಿಸ್ಥಿತಿಯಲ್ಲಿ ಸಿಲುಕಿದ ಮಹಿಳೆ ತನ್ನ ಮಗುವನ್ನು ಬಲಿ ಕೊಡಲು ಒಪ್ಪಲಿಲ್ಲ. ಆಗ ದೇವಿ ಕೋಪಿತಳಾಗಿ ಆ ಮಗು ಅನಾಹುತಕ್ಕೆ ಒಳಗಾಗುವುದು. ಇಂಥಹ ಪರಿಸ್ಥಿತಿಯಿಂದ ಪಾರಾಗಲು ಯಾವುದಾದರು ಉಪಾಯವನ್ನು ಹುಡುಕಬೇಕೆಂದು ಬದಾವಾ(ಕವಲು) ಹಾಕಿ ನೋಡಿದರು ಆಗ ಅವರಿಗೆ ದೊರೆತ ಉಪಾಯ ಎಂದರೆ ಮಗುವಿನ ರಟ್ಟೆಯ ಮಾಂಸವನ್ನು ತೆಗೆದು ದೇವಿಗೆ ಅರ್ಪಣೆ ಮಾಡುವುದು. ಹೀಗೆ ಮಾಡಿದ ಮಹಿಳೆಯ ಮಗು ಆರೋಗ್ಯದಿಂದ ಚೇತರಿಸಿಕೊಂಡಿತು. ಮತ್ತು ಆಕೆಯ ಮಗು ಉಳಿಯಿತು. ಅಂದರೆ ಖೋಡಿಯಾರ ಬೆಡಗಿನವರು ಈ ಪದ್ಧತಿಯನ್ನು ಇಂದಿಗೂ ಕೂಡಾ ಮುಂದುವರೆಸಿಕೊಂಡು ಬಂದಿದ್ದಾರೆ. ಸಾಂದರ್ಭಿಕವಾಗಿ ದೇವಿಗೆ

ಅರ್ಪಣೆ ಮಾಡುವಂತಹ ಸಂದರ್ಭದಲ್ಲಿ ಮಗುವಿನ ರಟ್ಟೆಯ ಮಾಂಸವನ್ನು ತೆಗೆದು ಅರ್ಪಣೆ ಮಾಡುವ ಪದ್ಧತಿ ಇರುವುದು. ಎಂದು ಮಾಹಿತಿ ನೀಡಿದರು.

ಖೋಡಿಯಾರ್ ದೇವಿಯ ಹಾಡು

"ಹಮಾರಂತೂ ದೇವಾಣು ಖೋಡಿಯಾರ್ ದೇವಿ
ಹಮಾರಂತೂ ದೇವಾಣು ಬೂಕಡಾ ಖರಾನೂಂ ದೇವಿ
ಹಮಾರಂತೂ ದೇವಾಣು ಓತರಾಮ ಡೀಲೆಮ ಆವಣ್
ಹಮಾರಂತೂ ದೇವಾಣು ಖೋಡಿಯಾರ ದೇವಿ
ಹಮಾರಂತೂ ದೇವಾಣು ಪಾಡ್ಡಾ ಖರಾನೂಂ
ಹಮಾರಂತೂ ದೇವಾಣು ಖಳೆಂಪರ್ ಆವಿನ್
ಹಮಾರಂತೂ ದೇವಾಣು ಖೋಡಿಯಾರ ದೇವಿ"

ಇದನ್ನು ಹಾಡಿದವರು ಸುರೇಶ ಈಶ್ವರ ಚೌವ್ಹಾಣ, ವಿಜಾಪುರ

ಖೋಡಿಯಾರ ಬೆಡಗಿನವರ ಈ ಹಾಡಿನ ಸಾರಾಂಶವೇನೆಂದರೆ ತಮ್ಮ ಆಹಾರ ಪದ್ಧತಿಯ ಬಗ್ಗೆ, ದೇವಿಗೆ ಬೇಟೆ ನೀಡುವುದರ ಬಗ್ಗೆ, ದೇವಿಯ ಪೂಜಾರಿಯ ಮೈಮೇಲೆ ಆವರಿಸಿಕೊಂಡಿರುವುದನ್ನು ಹಾಡಿನ ರೂಪದಲ್ಲಿ ವ್ಯಕ್ತಪಡಿಸಿದ್ದಾರೆ.

ಖೋಡಿಯಾರ ದೇವಿಯ ಪೂಜೆಯನ್ನು ಈ ಬೆಡಗಿನವರು ವಿಶೇಷವಾಗಿ ಆಚರಣೆ ಮಾಡುತ್ತಾರೆ. ದೇವರ ಹೆಸರ ಮೇಲೆ ಹೋತ ಬಲಿ ಕೊಡುವುದು, ಕೊಬ್ಬರಿ, ತುಪ್ಪ ಮತ್ತು ಕರ್ಪೂರ ಈ ವಸ್ತುಗಳ ಬಳಕೆಯನ್ನು ಯತೇಚ್ಛವಾಗಿ ಮಾಡುವರು. ಖೋಡಿಯಾರ ದೇವಿಯ ಪೂಜೆಯನ್ನು ಮಾಡಬೇಕಾದರೆ ಶಿವನ ಬೇಟೆಯನ್ನು ನೀಡುತ್ತಾರೆ. ಆಮೇಲೆ ಸಿಹಿ ತಿಂಡಿಯ ನೈವೇದ್ಯವನ್ನು ಬೆಳಗಿನ ಜಾವ ದೇವಿಗೆ ಅರ್ಪಿಸುತ್ತಾರೆ. ನಂತರ ದೇವಿಯ ಹೆಸರಿನಲ್ಲಿ ಒಂದು ಹೋತವನ್ನು ಬಲಿಕೊಡುತ್ತಾರೆ ಈ ಎಲ್ಲಾ ಕ್ರಿಯೆಯನ್ನು ಆ ಬೆಡಗಿನ ಉಪಾಧ್ಯಯನೇ ಮಾಡುತ್ತಾನೆ.

ಇಂಥಹ ಆಚರಣೆಯಲ್ಲಿ ಮಹಿಳೆಯರು ಪಾಲ್ಗೊಳ್ಳುವಂತಿಲ್ಲ. ಇದನ್ನು ಕೇವಲ ಪುರುಷರೇ ಮಾಡಬೇಕು. ಮಹಿಳೆಯರು ಮುಟ್ಟಿದರೆ ಮೈಲಿಗೆ ಎನ್ನುವಂತಹ ಸಂದರ್ಭಗಳು ಬರುತ್ತವೆ. ಆದ್ದರಿಂದ ಮಹಿಳೆಯರನ್ನು ದೇವರ ಕಾರ್ಯದಿಂದ ದೂರ ಮಾಡಲಾಗಿದೆ.

೨. ಹರಕತಿಯಾ : ಹರಕತಿಯಾ ಬೆಡಗಿನವರು ಭಾನು ದೇವಿಯನ್ನು ಆರಾಧಿಸುತ್ತಾರೆ. ಇವರನ್ನು ಬಾನು ಎಂತಲೇ ಕರೆಯುತ್ತಾರೆ. ಹರಕತಿಯಾ ದೇವಿಯ ಬಗ್ಗೆ ಕ್ಷೇತ್ರಧ್ಯಯನ ಸಂದರ್ಭದಲ್ಲಿ ಹಿರಿಯ ವ್ಯಕ್ತಿಯೊಬ್ಬರು ಹೇಳುವ ಪ್ರಕಾರ : "ಹರಕತಿಯ ದೇವಿಯ ಆಚರಣೆಯಲ್ಲಿ ಪ್ರಮುಖವಾದುದು ಎಂದರೆ ಬಾರುಕೋಲನ್ನು ಮೈಗೆ ಬಾರಿಸುವುದು. ದೇವಿ ಮೈಯಲ್ಲಿ ಬಂದಾಗ ಆ ಹಗ್ಗದ ಬಾರುಕೋಲನ್ನು ಮೈಗೆ ಹೊಡೆದುಕೊಳ್ಳುತ್ತಾರೆ. ಹರಕತಿಯಾ ಬೆಡಗಿನ ಒಂದು ಕುಟುಂಬದ ಒಂದು ಸಂಸಾರದಲ್ಲಿ

ಮಹಿಳೆಗೆ ಬಿಟ್ಟು ಆಕೆಯ ಗಂಡ ಮತ್ತು ಆಕೆಯ ಮಗು ಅನಾರೋಗ್ಯಕ್ಕೆ ಒಳಗಾಗಿರುತ್ತಾರೆ. ಎಷ್ಟೇ ಪ್ರಯತ್ನ ಮಾಡಿದರೂ ಕೂಡ ಅವರು ಗುಣಮುಖರಾಗುವಂತೆ ಕಾಣಲಿಲ್ಲ. ಆಗ ಅವಳು ದೇವರ ಹೇಳುವ ಕಡೆಗೆ ಬಂದು ಇದಕ್ಕೆ ಕಾರಣ ಏನು ಮತ್ತು ಅದಕ್ಕೆ ಪರಿಹಾರವೇನು ಎಂದು ಕೇಳಿದಾಗ ನಿನ್ನ ಗಂಡ ಒಂದು ತಪ್ಪನ್ನು ಮಾಡಿದ್ದಾನೆ. ಆದ್ದರಿಂದ ಆ ತಪ್ಪಿಗೆ ಬಾರುಕೋಲಿನ ಏಟು ಹೊಡೆದುಕೊಳ್ಳಬೇಕು ಎಂದಾಗ ಅನಾರೋಗ್ಯದಿಂದ ಬಳಲುತ್ತಿದ್ದ ಗಂಡನಿಗೆ ಆ ಸಾಮರ್ಥ್ಯವಿರುವುದಿಲ್ಲ. ಇನ್ನೂ ಗಂಡು ಮಗು ಚಿಕ್ಕದಿರುವುದು. ಇಂತಹ ಸಂದರ್ಭದಲ್ಲಿ ಮನೆಯ ಗಂಡು ಸಂತಾನವನ್ನು ತನ್ನ ಮಡಿಲಲ್ಲಿಟ್ಟುಕೊಂಡು ಬಾರುಕೋಲು ಏಟನ್ನು ಹೊಡಿಸಿಕೊಳ್ಳುತ್ತಾನೆ. ಆಗ ದೇವಿಯ ಕೋಪ ತಣ್ಣಗಾಗಿ ಗಂಡನ ಆರೋಗ್ಯ ಚೇತರಿಸಿಕೊಳ್ಳುವುದು." (ಶಂಕರ ಪವಾರ್)

ಈ ಬೆಡಗಿನವರಲ್ಲಿ ವಿಶೇಷವಾದ ಸಂಪ್ರದಾಯ, ಆಚರಣೆಗಳು ಕಂಡುಬರುವುದು. ಇನ್ನುಳಿದ ಐದು ಬೆಡಗಿನವರ ಧಾರ್ಮಿಕ ಆಚರಣೆ ಪದ್ಧತಿಗಿಂತ ಭಿನ್ನವಾಗಿರುವುದು. ಇದರಲ್ಲಿ ಹಗ್ಗದ ಬಾರಕೋಲ ಅಥವಾ ಚರ್ಮದ ಬಾರಕೋಲನ್ನು ಪೂಜಿಸುತ್ತಾರೆ. ಹಬ್ಬ ಹರಿದಿನಗಳಲ್ಲಿ ಪೂಜಾರಿಯ ಮೈಮೇಲೆ ದೇವರು ಆವರಿಸಿದಾಗ ಈ ಬಾರಿಕೋಲಿನಿಂದ ದೇಹವನ್ನು ದಂಡಿಸಿಕೊಳ್ಳುವ ಆಚರಣೆ ಕಂಡುಬರುವುದು. ಇವರು ದೇವಿಗೆ ವಿಶೇಷವಾಗಿ ಕೋಳಿಯನ್ನು ಬಲಿ ಕೊಡುತ್ತಾರೆ. ಈ ಬೆಡಗಿನವರು ಕೋಳಿಯ ಮಾಂಸ ಮತ್ತು ಮೊಟ್ಟೆಯನ್ನು ತಿನ್ನುವುದಿಲ್ಲ.

ಪಿಂಪಳಜಾ : ಪಿಂಪಳಾ ದೇವಿಯನ್ನು ಪಿಂಪಳಜಾ ಬೆಡಗಿನವರು ಪೂಜಿಸುತ್ತಾರೆ. ಇವರನ್ನು ಕಾಳೆ ಎಂದು ಕರೆಯಲಾಗುವುದು. ಹರಿಣಶಿಕಾರಿ ಸಮುದಾಯದಲ್ಲಿ ಈ ಬೆಡಗಿನವರೇ ಮುಖ್ಯವಾದ ಸ್ಥಾನವನ್ನು ಹೊಂದಿರುತ್ತಾರೆ. ಯಾವುದೇ ದೇವರ ಕಾರ್ಯದಲ್ಲಿ ಇವರ ಹಸ್ತಕ್ಷೇಪ ಮುಂಚೆ ಇರುವುದು. ಮತ್ತು ಯಾವುದೇ ಬಗ್ಗೆ ವಿಷಯದ ಬಗ್ಗೆ ನಿರ್ಧಾರ ತೆಗೆದುಕೊಳ್ಳುವಾಗಲೂ ಇವರ ಅಭಿಪ್ರಾಯ ಮುಖ್ಯವಾಗಿರುವುದು. ಇವರಲ್ಲಿ ದೇವರನ್ನು ಇಟ್ಟು ಗಂಗಾಸ್ನಾನಕ್ಕೆ ತೆಗೆದುಕೊಂಡು ಹೋಗುವ ಪದ್ಧತಿ ಇರುವುದು. ಅಂದರೆ ಪ್ರತಿ ವರ್ಷ ಮಳೆಯಾದ ನಂತರ ನದಿಯಲ್ಲಿ ಹೊಸ ನೀರು ಬಂದಾಗ ದೇವರ ಮೂರ್ತಿಯನ್ನು ಗಂಗಾಸ್ನಾನಕ್ಕೆ ಒಳಪಡಿಸುತ್ತಾರೆ. ಪಿಂಪಳಾ ದೇವಿ ಶ್ರೇಷ್ಟವಾದ ದೇವತೆಯಾಗಿರುವಳು.

ಪಿಂಪಳಾ ದೇವಿ ಪಿಂಪಳಾ ಮರ (ಅರಳಿ ಮರ)ದಲ್ಲಿ ನೆಲೆಸಿರುವಳು ಎಂಬ ಐತಿಹ್ಯವನ್ನು ಶ್ರೀ ಶಿವಲಾಲ್ ಗಂಗೂಮಟ್ಟಿಮನಿ ಸಾ. ಹೊಂಬಳ ಧಾರವಾಡ ಜಿಲ್ಲೆ ಹೇಳಿದ ರೀತಿಯಲ್ಲಿ 'ಅಡವಿ ಚೆಂಚರ ಉಪ ಸಂಸ್ಕೃತಿ ಮಾಲೆ' ಪುಸ್ತಕದಲ್ಲಿ ದಾಖಲಿಸಲಾಗಿದೆ. ಆದ್ದರಿಂದ ಅರಳೀ ಮರದ ಎಲೆಗಳನ್ನು ಪವಿತ್ರವೆಂದು ನಂಬಲಾಗುವುದು ಮತ್ತು ಮದುವೆಗೆ ಮುಂಚೆ ಮದುಮಕ್ಕಳಿಗೆ ಬಾಸಿಂಗ ಕಟ್ಟುವ ಸಂದರ್ಭದಲ್ಲಿ ಅರಳಿ ಮರದ ಬಾಸಿಂಗವನ್ನು ಮೊದಲು ಕಟ್ಟುವರು.

ಪಿಂಪಳಾ ದೇವಿಯ ಪೂಜಾ ವಿಧಾನ: ಬೇರೆ ಬೆಡಗಿನವರ ಪೂಜಾ ವಿಧಾನಕ್ಕಿಂತ ಭಿನ್ನವಾದ ಪೂಜಾ ವಿಧಾನ ಕಂಡುಬರುವುದು. ಈ ದೇವಿಯ ಪೂಜೆಯ ಸಂದರ್ಭದಲ್ಲಿ ಓತವನ್ನು ಬಲಿಕೊಡುತ್ತಾರೆ.

ಈ ಹೋತದ ಕೊಂಬುಗಳಿಗೆ ಹತ್ತಿಯ ಬತ್ತಿಯನ್ನು ತುಪ್ಪದಲ್ಲಿ ನೆನೆಸಿ ಕಟ್ಟುತ್ತಾರೆ. ಹೋತವನ್ನು ಬಲಿಕೊಡುವ ಸಂದರ್ಭದಲ್ಲಿ ಕೊಂಬುಗಳಿಗೆ ಕಟ್ಟಿದ ಬತ್ತಿಗೆ ದೀಪ ಹಚ್ಚುತ್ತಾರೆ. ವೀರಾವೇಶಕ್ಕೆ ಒಳಗಾದ ಪೂಜಾರಿ ಅದನ್ನು ತನ್ನ ಕೈಗಳಿಂದ ಆರಿಸುತ್ತಾನೆ. ಇಂತಹ ಆಚರಣೆಯಲ್ಲಿ ಪುರುಷರು ಮಾತ್ರ ಪಾಲ್ಗೊಳ್ಳುತ್ತಾರೆ. ಮಹಿಳೆಯರು ಕೇವಲ ದೂರ ನಿಂತು ನೋಡಬಹುದು. ಈ ಸನ್ನಿವೇಶದಲ್ಲಿ ಪುರುಷರ ಮೈಯನ್ನು ಮಹಿಳೆಯರು ಮುಟ್ಟಿದರೆ ಅದನ್ನು ಅಪಶಕುನ ಎಂಥಲೇ ಭಾವಿಸುತ್ತಾರೆ. ಮೈಲಿಗೆಯಾಯಿತು ಎಂದು ನಂಬುತ್ತಾರೆ.

ಸಾವಂಡಿಯಾ: ಈ ಬೆಡಗಿನವರು ಸರಕ್ ಸಾವಂಡಿಯಾ ದೇವಿಯನ್ನು ಪೂಜಿಸುತ್ತಾರೆ. ಇವರನ್ನು ಚೌವ್ಹಾಣ ಎಂತಲೇ ಗುರುತಿಸುತ್ತಾರೆ. ಈ ಬೆಡಗಿನವರು ಅನ್ನ ಅಥವಾ ಅಕ್ಕಿಯಿಂದ ಮಾಡಿದ ಯಾವುದೇ ಖಾದ್ಯವನ್ನು ಸೇವನೆ ಮಾಡುವುದಿಲ್ಲ. ಇವರಲ್ಲಿ ಕೂಡ ದೇವರಿಗೆ ಬೇಟೆ ನೀಡುವ ಪದ್ಧತಿಯಿದ್ದು, ಆದರೆ ಅದರ ನಿಯಮಗಳು ಭಿನ್ನವಾಗಿವೆ. ದೇವಿಗೆ ಹೋತದ ಮರಿಯನ್ನು ಬಲಿಕೊಡುವ ಸಂದರ್ಭದಲ್ಲಿ ಪೂಜಾರಿ ಮೈಮೇಲೆ ಆವರಿಸಿದ ದೇವಿಯು ಹೋತದ ಕುತ್ತಿಗೆಗೆ ಒಂದು ಚೂಪಾದ ಕತ್ತಿಯನ್ನು ಚುಚ್ಚಿ ಅದರಿಂದ ಬರುವ ನೆತ್ತರವನ್ನು ಪೂಜಾರಿ ಕುಡಿಯುತ್ತಾನೆ ಎನ್ನುವ ನಂಬಿಕೆ ಇವರಲ್ಲಿ ಇರುವುದು. ಹೀಗೆ ಪ್ರತೀ ಬೆಡಗಿನ ಆಚರಣಾ ಪದ್ಧತಿಯಲ್ಲಿ ವಿಭಿನ್ನತೆ ಕಂಡುಬರುವುದು

ಪಿಂಪಳಾಜ ದೇವಿಯ ಇತರೇ ಹೆಸರುಗಳು ಈ ಕೆಳಗಿನಂತಿವೆ:

ಖುದ್ಧ ಶಿವ

ಪಿಂಪಳಾ ದೇವಿ ಕಾಳಿ

ಮುಂಡ್‌ಯೋ

ಪಾರ್ಧನ್ ದೇವಿ ಗಂಗಮ್ಮ

ಸೀಳ್‌ದೇವಿ

ಖೋಡಿಯಾರ್ ದೇವಿಯ ಇತರೇ ಹೆಸರುಗಳು ಈ ಕೆಳಗಿನಂತಿವೆ:

೧. ಖುದ್ಧ (ಶಿವ) ೨. ಹರಕತಿಯಾ ದೇವಿ

೩. ಖೋಡಿಯಾರ್ ದೇವಿ ೪. ಗಹಾಲ್‌ದೇವಿ

ಕೋರ್‌ಬಿಯಾ ದೇವರಿಗೆ ಇರುವ ಇತರೇ ಹೆಸರುಗಳು ಈ ಕೆಳಗಿನಂತಿವೆ :

೧. ಖುದ್ಧ (ಶಿವ)

೨. ಪಾರ್ದನ್ ದೇವಿ (ಗಂಗಾದೇವಿ)

೩. ಇಕೋತಿಯಾ ದೇವಿ (ತುಳಜಾ ಭವಾನಿ)

೪. ಅ. ಮಲಪ್ರದೇವಿ ಆ. ದೇವಜರ್‌ದೇವಿ ಇ. ಸರಸ್ವತಿ ದೇವಿ ಈ. ಪಾರ್ವತಿ ದೇವಿ

೫. ಸೀಳ್‌ದೇವಿ (ಸುಂಕಲಮ್ಮ ದೇವಿ)

ದೇವರು ಮಾಡುವ ಸಂದರ್ಭದಲ್ಲಿ ಧರಿಸುವ ಉಡುಗೆಗಳು

ಪಾರ್ಧಿ ಜನಾಂಗದಲ್ಲಿ ದೇವರು ಮಾಡುವ ಸಂದರ್ಭ ದೇವರ ಬಟ್ಟೆ ಎಂದರೆ (ಸರಣು – ಗಾಘರೋ)ಲಂಗ ಮತ್ತು ದಾವಣಿ ಎಂದರೆ (ಲಹಾಂಗು) ಇವುಗಳನ್ನು ಕೆಂಪು ಬಟ್ಟೆಯಿಂದ ದಾರದ ಸಹಾಯದಿಂದ ಲಂಗವನ್ನು ಒಲಿದು ಅದರ ನಡುವಿನ ಪಟ್ಟೆಯಲ್ಲಿ ಗೆಜ್ಜೆ (ಗುಘ್ಘರ) ಗಳನ್ನು ಒಲಿದಿರುತ್ತಾರೆ. ಇವುಗಳನ್ನು ಧರಿಸಿಕೊಂಡು ಪೂಜಾರಿಯು ದೇವರ ಕಾರ್ಯಗಳನ್ನು ಮಾಡುತ್ತಾನೆ. ಈ ತೊಡಗೆಯನ್ನು ದೇವರ ಮಾಡುವ ಸಂದರ್ಭದಲ್ಲಿ ಇವುಗಳನ್ನು ಬಳಸುತ್ತಾರೆ.

ಜಾತ್ರೆ

ಪಾರ್ಧಿ ಸಮುದಾಯದವರು ಒಂದೆಡೆ ಸೇರಿಕೊಂಡು ಜಾತ್ರೆಯ ಆಚರಣೆಯಲ್ಲಿ ತೊಡಗುವರು. ಒಂದು ವರ್ಷಕ್ಕೊಮ್ಮೆ ಯುಗಾದಿ ಹಬ್ಬದ ಸಂದರ್ಭದಲ್ಲಿ ಕಳಕಮ್ಮ ಜಾತ್ರೆ ಮಾಡುವರು. ಹೋಳಿ ಹುಣ್ಣಿಮೆ ದಿನ ಯಮನೂರ ಜಾತ್ರೆ, ದಸರಾ ಹಬ್ಬದ ಸಂದರ್ಭದಲ್ಲಿ ಲಕ್ಷ್ಮೀ ಜಾತ್ರೆಯನ್ನು ಮಾಡುವರು. ಈ ಎಲ್ಲಾ ಜಾತ್ರೆಗಳಿಗಿಂತ ಮುಖ್ಯವಾದುದು ಮತ್ತು ವಿಶೇಷತೆಯನ್ನು ಹೊಂದಿದ ಜಾತ್ರೆಯೆಂದರೆ ದಂಡಿನ ದುರುಗಮ್ಮನ ಜಾತ್ರೆ. ಈ ಜಾತ್ರೆಗೆ ಕರ್ನಾಟಕದಾದ್ಯಂತ ಎಲ್ಲಾ ಕಡೆ ಇರುವ ಹರಿಣಶಿಕಾರಿ ಸಮುದಾಯದವರು ಒಂದೆಡೆ ಸೇರುವರು. ಈ ಜಾತ್ರೆ ತುಂಬಾ ವಿಶೇಷತೆಯಿಂದ ಕೂಡಿರುವುದು. ಈ ಜಾತ್ರೆ ದವನದ ಹುಣ್ಣಿಮೆಯಾದ ನಂತರ ಮಾಡುವರು. ಹರಿಣಶಿಕಾರಿ ಸಮುದಾಯದವರಿಗೆ ಇದೊಂದು ಪವಿತ್ರ ಯಾತ್ರಾ ಸ್ಥಳವಾಗಿದೆ.

ನ್ಯಾಯ ಪಂಚಾಯತಿ

ಪಾರ್ಧಿಯರ ನ್ಯಾಯ ಪಂಚಾಯತಿ ವ್ಯವಸ್ಥೆ ಎಂತಹದ್ದು ಎಂಬುದನ್ನು ಗಮನಿಸಬಹುದು. ಸಮುದಾಯದಲ್ಲಿ ಉದ್ಭವಿಸುವ ಸಮಸ್ಯೆಗಳು ಸಮುದಾಯದ ಪಂಚಾಯತಿಯಲ್ಲಿ ಬಗೆ ಹರಿಸಿಕೊಳ್ಳುತ್ತಾರೆ. ಇವರ ನ್ಯಾಯಗಳು ಪೋಲಿಸ್ ಠಾಣೆಗಳಿಗೆ ಹೋಗುವುದಿಲ್ಲ. ಕೊಲೆ, ಜಗಳ, ಕಳ್ಳತನ, ಮೋಸತನ, ಗಂಡಹೆಂಡತಿ ಜಗಳ, ಹೊಲ, ಮನೆತನದ ವ್ಯವಹಾರ, ಅನೈತಿಕ ಸಂಬಂಧ ವಿವಾಹ ವಿಚ್ಛೇದನ ಮುಂತಾದ ವಿಷಯಗಳ ಬಗ್ಗೆ ನ್ಯಾಯಗಳು ಬಂದರೆ ಅವು ಸಮುದಾಯದ ಪಂಚಾಯತಿಯಲ್ಲಿ ನಿರ್ಣಯಿಸುತ್ತಾರೆ. ಸಮುದಾಯದ ಪಂಚರು ಕೊಟ್ಟ ನ್ಯಾಯಕ್ಕೆ ಸಮಾಜದವರು ತಲೆ ಬಾಗುತ್ತಾರೆ.

ಪಾರ್ಧಿಯರಲ್ಲಿ ಪಾರಂಪರಿಕ ಜಾತಿ ಪಂಚಾಯತಿ ಪದ್ಧತಿ ಇರುವುದು. ಜಾತಿ ಪಂಚಾಯತಿಯ ಸದಸ್ಯರೆಲ್ಲರೂ ಗಿಡದ ಬುಡಕ್ಕೆ ವೃತ್ತಕಾರದಲ್ಲಿ ಕುಳಿತು ಪಂಚಾಯತ್ ನಾಯಕನ ಕೈಯಲ್ಲಿ ಬಾರಕೋಲು ಅಥವಾ ಹಸೆ ಗಿಡದ ಬರ್‍ಲುಗಳು ತೆಗೆದುಕೊಂಡು ನೆಲಕ್ಕೆ ಬಡಿದು, ಬಡಿದು ಪಂಚಾಯತಿ ಮಾಡುತ್ತಾರೆ.

ಪಂಚಾಯತಿ ನಡೆಸಲು ಸಮುದಾಯದಲ್ಲಿ ಒಬ್ಬ ಮುಖ್ಯಸ್ಥ ಇರುತ್ತಾನೆ. ಅವನಿಗೆ ನಾಯಕ ಎಂದು ಕರೆಯುತ್ತಾರೆ. ನಾಯಕ ಪಂಚಾಯತಿಯ ಪ್ರತಿಯೊಂದು ಕಾರ್ಯಗಳನ್ನು ನಡೆಸುತ್ತಾನೆ. ಇವನು ಪಂಚಾಯತಿಯ ಮುಖ್ಯಸ್ಥನಾಗಿದ್ದು ಸಮುದಾಯದಲ್ಲಿ ಪ್ರತಿಷ್ಠಿತ ವ್ಯಕ್ತಿ ಆಗಿರುತ್ತಾನೆ. ಸಮುದಾಯದ

ಅಂತರಿಕ ಹಾಗೂ ವ್ಯವಹಾರಿಕ ನ್ಯಾಯಗಳನ್ನು ಇತರ ಪಂಚರೊಂದಿಗೆ ಚರ್ಚಿಸಿ ಬುದ್ಧಿವಂತಿಕೆಯಿಂದ ಯಾರಿಗೂ ಅನ್ಯಾಯವಾಗದಂತೆ ಪ್ರತಿಯೊಬ್ಬರಿಗೂ ಯೋಗ್ಯ ನ್ಯಾಯ ದೊರೆಯುವಂತೆ ಮಾಡುತ್ತಾನೆ. ನಾಯಕ ನ್ಯಾಯಬದ್ಧವಾಗಿ ನಿರ್ಣಯಗಳನ್ನು ಕೊಟ್ಟರೆ ಸಮುದಾಯದಲ್ಲಿ ಅಂಥವರಿಗೆ ಗೌರವ ದೊರೆಯುವುದು. ಸಮುದಾಯದಲ್ಲಿ ನಾಯಕರಿಗೆ ಪೂರ್ವಕಾಲದಿಂದಲೂ ಗೌರವದಿಂದ ಕಾಣುತ್ತಾ ಬಂದಿದ್ದಾರೆ. ಸಮುದಾಯದ ಆಗುಹೋಗುಗಳಿಗೆಲ್ಲ ಸರಿಯಾಗಿ ನ್ಯಾಯ ಕೊಡಲು ಸಮುದಾಯದ ಅನುಭವಿಕ ಹಿರಿಯರನ್ನು ಕೂಡಿಸಿ ಪಂಚಾಯತಿ ಮಾಡುತ್ತಾರೆ. ಈ ಸಮುದಾಯದ ಆಡಳಿತ ಸ್ವರೂಪ ಇತರ ಸಮುದಾಯಗಳಿಗಿಂತ ಭಿನ್ನವಾಗಿದೆ. ಎಲ್ಲ ಹಂತಗಳಲ್ಲೂ ಸಮುದಾಯದ ಒಗ್ಗಟ್ಟನ್ನು ಕಾಯ್ದುಕೊಳ್ಳುವ ಸಾಮರ್ಥ್ಯ ಈ ಜನರಲ್ಲಿ ಮುಖ್ಯವಾಗಿ ಕಂಡುಬರುತ್ತದೆ. ಬ್ರಿಟಿಷರು ಪಾರ್ಧಿಯರ ನ್ಯಾಯಗಳನ್ನು ಕುಳಿತು ವಿಕ್ಷಿಸುತ್ತಿದ್ದರು. ಇವರು ಸರಿಯಾದ ನ್ಯಾಯ ನಿರ್ಣಯ ಕೊಡುತ್ತಾರೆ ಎಂದು ತಮ್ಮ ವಾರ್ಷಿಕ ವರದಿಯಲ್ಲಿ ಪ್ರಕಟಿಸಿರುವುದು ತಿಳಿದುಬರುತ್ತದೆ.(ಲಕ್ಕಿ ಪೃಥ್ವಿರಾಜ್, ಶಿಕಾರಿ ರಾಮು:೨೦೦೮.,ಪು.೧೨೦) ಈ ಪಂಚಾಯತಿ ಪದ್ಧತಿ ಸಮುದಾಯದಲ್ಲಿ ಇಲ್ಲಿಯವರೆಗೆ ಉಳಿಯಲು ಪಂಚರ ಮೇಲಿನ ವಿಶ್ವಾಸವೇ ಮುಖ್ಯವಾಗಿದೆ. ಪಂಚರೆಂದರೆ ದೇವರ ಸಮಾನ ಎಂದು ಹೇಳುತ್ತಾರೆ.

ಶಿಕ್ಷೆಗಳ ವಿವರ

ಪಾರ್ಧಿ ಸಮುದಾಯದಲ್ಲಿ ಪಂಚರು ಪೂರ್ವಿಕರು ಹಾಕಿ ಕೊಟ್ಟ ಮಾರ್ಗದಲ್ಲಿ ನಡೆಯುತ್ತಿದ್ದಾರೆ. ಅವರು ಹಾಕಿ ಕೊಟ್ಟ ನ್ಯಾಯ ಪದ್ಧತಿ, ಶಿಕ್ಷೆ, ದಂಡನೆಗಳನ್ನು ಪಾಲಿಸುತ್ತಿದ್ದಾರೆ. ಸಮುದಾಯದಲ್ಲಿರುವ ದುಷ್ಟ ಕೃತ್ಯಗಳನ್ನು ಕಡಿಮೆ ಮಾಡುವಗೋಸ್ಕರ ಕಠಿಣವಾದ ಶಿಕ್ಷೆ ಹಾಗೂ ದಂಡಗಳನ್ನು ವಿಧಿಸುತ್ತಾರೆ. ಪಂಚರು ಕೊಟ್ಟ ನ್ಯಾಯಕ್ಕೆ ಸಿರಿವಂತನಿರಲಿ, ಬಡವನಿರಲಿ ತಲೆಬಾಗಬೇಕು. ಎಲ್ಲರಿಗೂ ಒಂದೇ ಕಾನೂನು ಹಳೇ ಘಟನಾವಳಿಯ ಆಧಾರದ ಮೇಲೆ ನ್ಯಾಯಗಳ ಸ್ವರೂಪವನ್ನು ನೋಡಿ ದಂಡ, ಶಿಕ್ಷೆಗಳನ್ನು ಕೊಡಲಾಗುವುದು.

ಪಾರ್ಧಿಯರಲ್ಲಿ ಯಾರಾದರೂ ಏನಾದರೂ ತಪ್ಪು ಮಾಡಿದರೆ ತಮ್ಮದೇ ಆದ ಕಟ್ಟುನಿಟ್ಟಿನ ನಿರ್ಭಂದ ಮತ್ತು ಶಿಕ್ಷೆಗಳನ್ನು ನೀಡುತ್ತಾರೆ.

೧. ಹಿಂದಿನ ಕಾಲದಲ್ಲಿ ಮಾದಿಗರು ಮತ್ತು ಮುಸ್ಲಿಂರ ಮನೆಗಳಲ್ಲಿ ನೀರು ಕುಡಿಯುತ್ತಿದ್ದಿಲ್ಲ. ಹಾಗೇನಾದರೂ ಯಾರಾದರೂ ಕುಡಿದರೆ ಅಂಥವರಿಗೆ ೨೦ ರೂಪಾಯಿಗಳಿಂದ ೧೦೧ ರೂ.ಗಳವರೆಗೆ ದಂಡ ವಿಧಿಸುತ್ತಿದ್ದರು. ಅದರೆ ಬದಲಾಗುತ್ತಿರುವ ಇಂದಿನ ದಿನಗಳಲ್ಲಿ ಈ ನಿರ್ಬಂಧನೆಗಳಲ್ಲಿ ಸಡಿಲತೆ ಕಂಡುಬರುತ್ತಿದ್ದು. ಇಂದು ಎಲ್ಲರೂ ಎಲ್ಲರ ಮನೆಗಳಲ್ಲಿ ನೀರನ್ನು ಕುಡಿಯುತ್ತಿದ್ದಾರೆ.

೨. ತಮ್ಮ ಸಮಾಜದಲ್ಲಿ ಯಾರಾದರೂ ತಪ್ಪು ಮಾಡಿದರೆ, ಅಂಥವರನ್ನು ಪತ್ತೆ ಹಚ್ಚಲು ಅಥವಾ ಶಿಕ್ಷಿಸುವ ನಿಟ್ಟಿನಲ್ಲಿ ಕೊಡಲಿಯನ್ನು ಕೆಂಪಗೆ ಕಾಯಿಸಿ ಅಪರಾಧಿ ಎನ್ನುವವರ ಅಂಗೈಯ ಮೇಲೆ ಒಂದು ಎಳೆದಲೆ ಇಟ್ಟು ಅದರ ಮೇಲೆ ಕೊಡಲಿ ಇಡುತ್ತಾರೆ. ಆ ವ್ಯಕ್ತಿ ತಪ್ಪು ಮಾಡಿದಿದ್ದರೆ ಕೈ

ಸುಡುವುದಿಲ್ಲ. ಒಂದು ವೇಳೆ ಅವನು ತಪ್ಪು ಮಾಡಿದರೆ ಕೂಡಲೇ ಕೈ ಸುಟ್ಟು ಬಿಡುತ್ತದೆ. ಇದು ಅಲ್ಲದೆ. ಒಲೆಯ ಮೇಲೆ ಕಡಾಯಿ ಒಂದನ್ನು ಇಟ್ಟು ಅದರಲ್ಲಿ ಎಣ್ಣೆಯನ್ನು ಹಾಕಿ ಚೆನ್ನಾಗಿ ಕಾಯಿಸುತ್ತಾರೆ. ಇಲ್ಲಿಯು ಸಹ ಅವರ ತಪ್ಪನ್ನು ಪರೀಕ್ಷಿಸುವ ನಿಟ್ಟಿನಲ್ಲಿ ಆ ಎಣ್ಣೆಯಲ್ಲಿ ತಪ್ಪಿತಸ್ಥನನ್ನು ಕೈ ಹಾಕಲು ಹೇಳುತ್ತಾರೆ. ಆತ/ಆಕೆ ತಪ್ಪು ಮಾಡದಿದ್ದಲಿ ಅವರ ಕೈ ಸುಡುವುದಿಲ್ಲ. ಒಂದು ವೇಳೆ ತಪ್ಪು ಮಾಡಿದರೆ. ಅವರ ಕೈ ಕೂಡಲೇ ಸುಟ್ಟು ಹೋಗಿ ಬಿಡುತ್ತದೆ ಎಂದು ಇವರು ಬಲವಾಗಿ ನಂಬಿರುತ್ತಾರೆ.

೩. ಅಷ್ಟೇ ಏಕೆ ಯಾರಾದರೂ ಬೇರೆಯವರು ಆರೋಪಿಸಿದರೆ, ನ್ಯಾಯ ಮಾಡುವಾಗ ನೋಡಿದವರು ಕೂಡಾ ಅದನ್ನು ಸಾಬೀತುಪಡಿಸಬೇಕು. ಅಪರಾಧ ಮಾಡಿದವರೂ ಪರೀಕ್ಷೆಗೆ ಒಳಗಾಗಬೇಕು.

೪. ಇವರಲ್ಲಿ ಮಾಡಿದ ತಪ್ಪುಗಳನ್ನು ಕಂಡು ಹಿಡಿಯಲು ಇನ್ನೂ ಅನೇಕ ತಂತ್ರಗಳನ್ನು ಬಳಸುತ್ತಾರೆ. ಉದಾಹರಣೆಗೆ ಕುಲಪಂಚಾಯಿತಿ ಎದುರು ಪಾತ್ರೆಯೊಂದರಲ್ಲಿ ಒಳ್ಳೆಣ್ಣೆ ಚೆನ್ನಾಗಿ ಕಾಯಿಸಿ ಅದರಲ್ಲಿ ಉಂಗುರ ಹಾಕಿ ಕುಲಚಾರರು ಅದನ್ನು ತೆಗೆಯುವಂತೆ ಅಪರಾಧಿ ಅಥವಾ ತಪ್ಪಿತಸ್ಥ ಎನಿಸಿಕೊಂಡವನ್ನು ಹೇಳುತ್ತಾರೆ. ಆಗ ಅದನ್ನು ತೆಗೆಯುವಾಗ ಅವರು ತಪ್ಪಿತಸ್ಥರಲ್ಲದಿದ್ದರೆ ಚರ್ಮ ಸುಡುವುದಿಲ್ಲ. ಒಂದು ವೇಳೆ ತಪ್ಪು ಮಾಡಿದ್ದರೆ ಅವರ ಚರ್ಮಸುಡುತ್ತದೆಂದು ನಂಬುತ್ತಾರೆ.

೫. ಉಟ್ಟು ಬಿಟ್ಟ ಲಂಗವನ್ನು ಗಂಡಸರಿಗೆ ತಾಗುವಂತೆ ಇಟ್ಟರೆ ಅಂಥಹ ಹೆಂಗಸರಿಗೆ ೧೦೧ ರೂ.ವರಗೆ ದಂಡ ಹಾಕುತ್ತಾರೆ. ಇನ್ನೂ ಋತುಮತಿಯಾಗದ ಹುಡುಗಿಯಾಗಿದ್ದರೆ ಅವಳಿಗೆ ರಿಯಾಯ್ತಿ ಇದೆ. ಈ ರೀತಿ ಅವರು ಯಾಕೆ ಮಾಡುತ್ತಾರೆಂದರೆ ಮಡಿ ಮೈಲಿಗೆಗಳ ಬಗ್ಗೆ ಅವರು ತುಂಬಾ ಕಟ್ಟು ನಿಟ್ಟಿನವರಾಗಿದ್ದಾರೆ.

೬. ಪ್ರತಿ ತಿಂಗಳು ಋತುಸ್ರಾವವಾದಾಗ ಅಂಥ ಹೆಂಗಸು ಈಗಲೂ ಹೊರಗಡೆಯೇ ಕೂಡಬೇಕಾಗುತ್ತದೆ. ಅವಳು ಯಾವುದೇ ಕಾರಣಕ್ಕೂ ಅಡಿಗೆ ಮಾಡುವ ಹಾಗಿಲ್ಲ. ಹಾಗೆಯೇ ಇತರೇ ಕೆಲಸಕಾರ್ಯಗಳು ಮಾಡುವಂತಿಲ್ಲ. ಈ ಮೂರು ದಿನಗಳಲ್ಲಿ ಪುರುಷರೇ ಎಲ್ಲ ಕೆಲಸಕಾರ್ಯಗಳನ್ನು ಮಾಡಬೇಕಾಗುತ್ತದೆ. ಇದು ಕಟ್ಟುನಿಟ್ಟಾಗಿದೆ.

೭. ಗಂಡ ಹೆಂಡತಿಯ ಜಗಳದಲ್ಲಿ ಗಂಡ ಹೆಂಡತಿಗೆ ಹೊಡೆದನೆಂದರೆ, ಹೆಂಡತಿಯಾದವಳು ಯಾವುದೇ ಸಂದರ್ಭದಲ್ಲಿ ಗಂಡನಿಗೆ ತಿರುಗಿ ಹೊಡೆಯುವ ಆಗಿಲ್ಲ, ಒಂದು ವೇಳೆ ಹಾಗೇನಾದರು ಅವಳು ಹೊಡೆದರೆ ೧೦೧ ರೂ.ವರಗೆ ದಂಡವನ್ನು ಹಾಕುತ್ತಾರೆ. ದಂಡವನ್ನು ಕಟ್ಟಲು ಅಗದಿದ್ದರೆ ಅಥವಾ ನಿರಾಕರಿಸಿದರೆ ಅಂಥವಳನ್ನು ಜಾತಿಯಿಂದ ಹೊರಗೆ ಹಾಕಿ ಅವಳು ಆ ದಂಡವನ್ನು ಕಟ್ಟಿದ ನಂತರವೇ ಅವಳನ್ನು ಜಾತಿಯ ಒಳಗೆ ಸೇರಿಸಿಕೊಳ್ಳುತ್ತಾರೆ.

೮. ಒಬ್ಬ ಗಂಡಸು ಅಪ್ಪಿತಪ್ಪಿ ತನ್ನ ತಂಗಿ ಅಥವಾ ಅಕ್ಕ, ಚಿಕ್ಕಮ್ಮ, ದೊಡ್ಡಮ್ಮ, ಅತ್ತೆ, ಅತ್ತಿಗೆ ಇಂಥವರೊಂದಿಗೆ ಲೈಂಗಿಕ ಸಂಬಂಧವನ್ನಿಟ್ಟುಕೊಂಡರೆ ಅವರನ್ನು ತೀವ್ರವಾದ ದಂಡನೆಗೆ ಒಳಪಡಿಸುತ್ತಾರೆ. ಏಕೆಂದರೆ

ಈ ತರಹದ ಸಂಬಂಧಗಳಿಗೆ ಇವರಲ್ಲಿ ತುಂಬಾ ಕಟ್ಟುನಿಟ್ಟಿನ ನಿಷೇಧವಿದೆ. ಇಂತವರಿಗೆ ವಿಧಿಸುವ ದಂಡದ ಹಣ ಕೂಡ ಬೇರೆ ಬೇರೆ ಯಾಗಿರುತ್ತದೆ.

೯. ಇವರಲ್ಲಿ ಚಪ್ಪಲಿಯಿಂದ ಹೊಡೆದವನಿಗೂ ಹಾಗೂ ಹೊಡೆಸಿಕೊಂಡವನಿಗೆ ಇಬ್ಬರಿಗೂ ದಂಡವನ್ನು ಹಾಕುತ್ತಾರೆ. ತಪ್ಪಿಲ್ಲದೇ ಹೊಡೆಸಿಕೊಂಡವನಿಗೆ ರೂ. ೧೦೦ಗಳ ದಂಡ ವಿಧಿಸಿದರೆ, ಚಪ್ಪಲಿಯಿಂದ ಹೊಡೆದವನಿಗೆ ರೂ. ೫, ೧೦ ರೂ. ದಂಡವನ್ನು ವಿಧಿಸುತ್ತಾರೆ. ಇಂಥಹ ಸಂದರ್ಭದಲ್ಲಿ ಕೇವಲ ದಂಡವನ್ನು ಹಾಕಿ ಕೈ ತೊಳೆದುಕೊಳ್ಳು ತ್ತಾರೆಯೇ ಹೊರತು ಕುಡಿ ತಿನ್ನುವ ಯಾವ ಕಾರ್ಯಕ್ರಮಗಳನ್ನು ಇಟ್ಟುಕೊಳ್ಳುವುದಿಲ್ಲ.

೧೦. ಹೆಂಗಸು ಗಂಡಸಿಗೆ ಕಾಲಿನಿಂದ ಒದ್ದರೆ, ಅಂತಹ ಹೆಣ್ಣಿಗೆ ೫೦೦.೦೦ ರೂ.ಗಳ ವರೆಗೆ ದಂಡ ಹಾಕುತ್ತಾರೆ. ಹೆಂಗಸಿನ ಕಾಲಿನಿಂದ ಒದೆಸಿಕೊಂಡವನಿಗೆ ಅವರ ಭಾಷೆಯಲ್ಲಿ "ಲಾತ್‌ನಾ ಮಾರ್ ಘದೆಲೊ" ಎಂದು ಕರೆಯುತ್ತಾರೆ.

ಯಾರಾದರೂ ಇವರ ಜಾತಿ ಹೆಸರಿಡಿದು ಬೈದರೆ ಅಂಥವರಿಗೆ ೧೫ ರೂ. ದಂಡ ಹಾಕುತ್ತಾರೆ. ಈ ಮೇಲೆ ತಿಳಿಸಿದ ಎಲ್ಲಾ ನಿಬಂಧನೆಗಳು ಈಗಲೂ ಹೆಚ್ಚು ಕಡಿಮೆ ಚಾಲ್ತಿಯಲ್ಲಿವೆ. ಕೆಲವು ನಿಬಂಧನೆಗಳಲ್ಲಿ ಸ್ವಲ್ಪ ಸಡಿಲಿಕೆಯೂ ಕಂಡು ಬರುತ್ತಿದೆ. ಕೆಲವು ಮಾತ್ರ ಪೂರ್ತಿಯಾಗಿ ಕೈಬಿಟ್ಟು ಹೋಗಿವೆ. ದಿನದಿಂದ ದಿನಕ್ಕೆ ಬದಲಾಗುತ್ತಿರುವ ಈ ಸಾಮಾಜಿಕ ಬದಲಾವಣೆಗಳ ನಡುವೆ ಈ ಬದಲಾವಣೆಗಳು ಸರ್ವೆಸಾಮಾನ್ಯ. ದಿನದಿಂದ ದಿನಕ್ಕೆ ಸರಳವಾಗುತ್ತಿರುವ ಪಾರ್ಧಿಯರ ಜೀವನದಂತೆ ಅವರ ನ್ಯಾಯ ನಿಯಮಗಳೂ ಸರಳವಾಗುತ್ತಿವೆಯೆಂದೇ ಹೇಳಬಹುದು.

ಪಾರ್ಧಿಯರಲ್ಲಿ ಅನೈತಿಕ ಸಂಬಂಧ ಯಾರಾದರೂ ಹೊಂದಿದ್ದರೆ ಅವರು, ಒಂದೇ ಜಾತಿಯ ಬೇರೆ ಬೇರೆ ಬಳ್ಳಿಯವರು ಅಥವಾ ಗೋತ್ರದವರು ಇದ್ದರೆ, ಅವರನ್ನು ಮದುವೆ ಮಾಡಲು ಹಿರಿಯರಿಗೆ ಒಪ್ಪಿಸಿ ಕೊಡುವ ಅಥವಾ ತೆಗೆದುಕೊಳ್ಳುವ ಮಾತು ಗಟ್ಟಿಯಾದರೆ ಒಪ್ಪಿಗೆಯಾದರೆ ಮದುವೆ ಮಾಡುತ್ತಾರೆ. ಇಲ್ಲದಿದ್ದರೆ ಇಬ್ಬರಿಗೆ ದಂಡವನ್ನು ಹಾಕಿ ಇನ್ನೊಂದು ಸಾರಿ ತಪ್ಪು ಮಾಡಬಾರದೆಂದು ಗಂಡಿನವರ ಮನೆಗೆ ಗಂಡನ್ನು ಹೆಣ್ಣಿನವರ ಮನೆಗೆ ಹೆಣ್ಣನ್ನು ಒಪ್ಪಿಸಿ ಕಳುಹಿಸುತ್ತಾರೆ. ಬೇರೆ ಜಾತೀಯ ಹೆಣ್ಣನ್ನು ಅಥವಾ ಗಂಡನ್ನು ಅನೈತಿಕ ಸಂಬಂಧ ಹೊಂದಿದ್ದರೆ, ಅವರನ್ನು ಕರೆದುಕೊಂಡು ಬಂದು ಅವರನ್ನು ವಿಚಾರಣೆ ಮಾಡಿ ಅವರು ಮದುವೆ ಮಾಡಿಕೊಳ್ಳಲು ಒಪ್ಪಿಗೆಯಾದರೆ ಪಾರ್ಧಿ ಜಾತಿಗೆ ಸೇರುವನಾದರೆ ಪಾರ್ಧಿ ಜಾತಿಗೆ ಸೇರಿಸಿಕೊಂಡು ಗಂಡಿಗೆ ಅಥವಾ ಹೆಣ್ಣಿಗೆ ಮತ್ತು ಕೊಡುವ ಅಥವಾ ತೆಗೆದುಕೊಳ್ಳುವ ಸಂಬಂಧ ಗೋತ್ರಗಳಿಗೆ, ಸೇರಿಸಿಕೊಂಡು ಅವರಿಗೆ ಆ ಗೋತ್ರದವರು ಮದುವೆ ಮಾಡಿಸುತ್ತಾರೆ. ಅವರಿಗೆ ಪಾರ್ಧಿಜಾತಿಗೆ ಸೇರಲು ಇಷ್ಟವಿಲ್ಲದಿದ್ದರೆ ಪಾರ್ಧಿ ಜಾತಿಯವರು ಯಾರು ಇರುತ್ತಾರೆಯೋ ಅವರಿಗೆ ದಂಡವನ್ನು ಹಾಕಿ ಇನ್ನೊಂದು ಸಾರಿ ಈ ತಪ್ಪನ್ನು ಮಾಡಬಾರದೆಂದು ಬುದ್ಧಿಯನ್ನು ಹೇಳುತ್ತಾರೆ. ಇದಕ್ಕೆ ಮಾತು ತಪ್ಪಿದರೆ ಅನೈತಿಕ ಸಂಬಂಧ ಹೊಂದಿದ ಮನೆಯವರನ್ನು ಜಾತಿಹೊರಗೆ ಹಾಕುವ ನಿರ್ಧಾರವನ್ನು ಪಂಚಾಯಿತಿಯಲ್ಲಿ ತಿರ್ಮಾನಿಸುತ್ತಾರೆ.

ಹೀಗೆ ನ್ಯಾಯ ತೀರ್ಮಾನಗಳಲ್ಲಿ ವಿಧಿಸುವ ದಂಡಗಳ ರೂಪದಲ್ಲಿ ಬರುವ ಹಣವನ್ನು ನಾಯಕನಿಗೆ ಸಲ್ಲುವ ಬಾಬ್ತನ್ನು ತೆಗೆದು ಉಳಿದ ಹಣವನ್ನು ಗುಂಪಿನ ಹಿರಿಯರು ಹಾಗೂ ಸಮುದಾಯದ ಎಲ್ಲ ಕುಟುಂಬಗಳಿಗೂ ಸಮಾನಾಗಿ ಹಂಚಲಾಗುತ್ತದೆ ಅಥವಾ ಆ ಹಣದಿಂದ ಮಧ್ಯವನ್ನು ತರಿಸಿ ಎಲ್ಲಾರಿಗೂ ನೀಡಲಾಗುತ್ತದೆ. ಪ್ರಸ್ತುತ ದಿನಗಳಲ್ಲಿ ಇಂತಹ ನ್ಯಾಯ ತೀರ್ಮಾನಗಳಿಂದ ಬರುವ ದಂಡದ ಹಣವನ್ನು ಹಂಚಿಕೊಳ್ಳದೆ, ಧಾರ್ಮಿಕ ಹಬ್ಬ, ಜಾತ್ರೆ ಹಾಗೂ ಇನ್ನೂಳಿದ ಉಳಿತು ಕಾರ್ಯಗಳಿಗೆ ವಿನಿಯೋಗಿಸಲಾಗುತ್ತಿದೆ.

೫. ಚಪ್ಪರಬಂದ

ಕರ್ನಾಟಕದಲ್ಲಿ ಧಾರವಾಡ, ಗದಗ, ಬಿಜಾಪುರ, ಬಳ್ಳಾರಿ ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ಇವರು ಮೂಲತಃ ಅಲೆಮಾರಿ ಬುಡಕಟ್ಟು. ಪುರುಷರು ಮುಸ್ಲಿಂರಂತೆ ಗಡ್ಡ ಬಿಟ್ಟರೂ ಹಿಂದೂಗಳಂತೆ ಧೋತರ, ಅಂಗಿ ಪಟಗಗಳನ್ನು ಧರಿಸುತ್ತಾರೆ. ಇತ್ತೀಚೆಗೆ ಹೊರ ಜಗತ್ತಿಗೆ ಇವರು ತಮ್ಮನ್ನು ಮುಸ್ಲೀಮರಂತೆ ತೋರಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ತಾವು ಚಪ್ಪರ ಬಂದರೆಂದರೆ ತಮ್ಮನ್ನು ತುಂಬಾ ಕೀಳಾಗಿ ಕಾಣುತ್ತಾರೆ, ಎಂಬ ಮನೋಭವನೆ ಇವರಲ್ಲಿ ಮೂಡಿದೆ. ಹೀಗಾಗಿ ಹೊರಗಡೆ ತಾವು ಮುಸ್ಲೀಂರಂತೆ ಇರಲು ಪ್ರಯತ್ನಿಸುತ್ತಾರೆ. ಕ್ಷೇತ್ರಕಾರ್ಯದಲ್ಲಿ ಚಪ್ಪರ್‌ಬಂದರನ್ನು ಹುಡುಕಿಕೊಂಡು ಹೋದಾಗ ಅವರಾರೂ ತಾವು ಚಪ್ಪರಬಂದರೆಂದು ಹೇಳಿಕೊಳ್ಳಲೇ ಇಲ್ಲ. ತಾವು ಮುಸ್ಲೀಂರು, ತಾವೆಲ್ಲಾ ಕೂಲಿ ಕೆಲಸಗಳಿಗೆ ಹೋಗುವುದರಿಂದ ತಮ್ಮ ಉರ್ದು ಭಾಷೆ ತುಂಬಾ ಒರಟಾಗಿ ಕಾಣುತ್ತದೆ. ತಾವು ಮಾತನಾಡುವ ಭಾಷೆ ಉರ್ದು ಎನ್ನುವ ರೀತಿಯಲ್ಲಿ ವರ್ತಿಸಿದರು. ನಿಧಾನವಾಗಿ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ತರುವಾಯ ಒಂದೊಂದೆ ವಿಚಾರಗಳನ್ನು ತಿಳಿಸತೊಡಗಿದರು.

ಚಪ್ಪರಬಂದ ಎನ್ನುವ ಹೆಸರು ಪ್ರಾಯಶಃ ಛಾಪ ಎನ್ನುವ ಪದದಿಂದ ಬಂದಿರಬೇಕು. ಛಾಪ ಎಂದರೆ ಮೊಹರು ಎಂದರ್ಥ. ಇವರು ಹಿಂದೆ ನಕಲಿ ನಾಣ್ಯಗಳನ್ನು ತಯಾರಿಸುತ್ತಿದ್ದರೆಂಬ ನಂಬಿಕೆ ಇದೆ. (ಥರ್ಸ್ಟನ್:೧೯೦೯:ಪು.೨೨) ಚಪ್ಪರ್‌ಬಂದ ಎಂದರೆ ಗುಡಾರಗಳನ್ನು ಹಾಕುವವನು, ಡೇರೆ ಈ ವೃತ್ತಿಯೊಂದಿಗೆ ನಾಣ್ಯಗಳ ತಯಾರಿಕೆಯನ್ನು ಸಹ ಮಾಡುತ್ತಿದ್ದರು. ಇವರು ಮರಾಠಿ ಭಾಷೆಯೊಂದಿಗೆ ಉರ್ದು, ಕನ್ನಡ ಭಾಷೆಗಳನ್ನು ಸಹ ಮಾತನಾಡುತ್ತಾರೆ. ಬರವಣಿಗೆಗೆ ಕನ್ನಡದೊಂದಿಗೆ ಉರ್ದು, ಪಾರ್ಷಿ, ಅರಾಬಿಕ್ ಭಾಷೆಯನ್ನು ಉಪಯೋಗಿಸುತ್ತಾರೆ. ಜೊತೆಗೆ ತಂತಮ್ಮೊಳಗೇ ಮಾತನಾಡಿಕೊಳ್ಳಲು ಗುಪ್ತ ಭಾಷೆಯೊಂದನ್ನು ಬಳಕೆ ಮಾಡುತ್ತಾರೆ. ಇವರು ಮಾಂಸಾಹಾರಿಗಳು, ಜೊತೆಗೆ ಅಕ್ಕಿ, ಜೋಳ, ಗೋದಿ, ಇತ್ಯಾದಿಗಳನ್ನು ಆಹಾರಕ್ಕಾಗಿ ಬಳಸುತ್ತಾರೆ ಎಂದು ತಿಳಿಸುತ್ತಾರೆ (ಎಂಥೋವನ್: ೧೯೨೦: ಪು.೨೮೬).

ಚಪ್ಪರಬಂದರನ್ನು ನಾಣ್ಯಗಳನ್ನು ಮಾಡುವ ಫಕೀರರೆಂದು ಕರೆಯುತ್ತಾರೆ. ಇವರು ತಮ್ಮ ತಮ್ಮೊಳಗೆ ಮಾತನಾಡಿಕೊಳ್ಳುವಾಗ 'ಭಾತು' ಎಂದು ಕೊಳ್ಳುತ್ತಾರೆ. ಉತ್ತರ ಭಾಗದಲ್ಲಿ ಇವರನ್ನು (ಕುಲಸೂರ್ಯ

ನಕಲಿ ನಾಣ್ಯ ತಾಯರಿಸುವವರು) ಎಂದು ಕರೆಯುತ್ತಾರೆ (ಕಿಮಿನಲ್ ಕ್ಲಾಸಸ್ ಇನ್ ಬಾಂಬೆ ಪ್ರೆಸಿಡೆನ್ಸಿ:೧೯೦೮:ಪು,೪೯).

ಚಪ್ಪರಬಂದರು ಮೂಲ ಗುಜಾರಾತ್ ಇದ್ದು ಅವರು ಅಲ್ಲಿಂದ ಮಹಾರಾಷ್ಟ್ರ ಮತ್ತು ಕರ್ನಾಟಕಕ್ಕೆ ವಲಸೆ ಬಂದಿರುವುದಾಗಿ ತಿಳಿದು ಬರುತ್ತದೆ (ಸಿಂಗ್.ಕೆ.ಎಸ್:೧೯೯೪:೬೩೭).

ಚಪ್ಪರಬಂದರನ್ನು ಮಹಾರಾಷ್ಟ್ರದಲ್ಲಿ ಚಪ್ಪರ್ ಬಸಿ, ಪರದೇಶಿ ಎಂದು ಕರೆಯುತ್ತಾರೆ. ಚಪ್ಪರಬಂದರಿಗೆ ಚಪ್ಪರ ಬಸಿ, ಪರದೇಶಿ, ಚಪ್ಪರ್ ವಾಲೆ, ರಜಪೂತ್ ಚಪ್ಪರ್ ಬಂಧ್ ಪರದೇಶ ಚಪ್ಪರ ಬಂಧ್, ಚಪ್ಪರಿಯಾ, ಇತ್ಯಾದಿ ಹೆಸರುಗಳಿಂದಲೂ ಗುರುತಿಸಲಾಗುತ್ತದೆ.

ಕನ್ನಡದಲ್ಲಿ ಚಪ್ಪರ ಎಂದರೆ ಗುಡಿಸಲು ಮೇಲ್ಛಾವಣಿಗೆ ಹೊದಿಸಿದ ಹೊದಿಕೆ, ಹಂದರ ಮುಂತಾದ ಅರ್ಥಗಳಿವೆ. ಆದರೆ ಚಪ್ಪರ ಎಂಬುದು ತಮ್ಮ ಹಿರಿಯರು ಇದ್ದ ಊರು. ಆ ಊರಿನ ಹೆಸರಿನಿಂದಲೇ ತಮ್ಮನ್ನು ಚಪ್ಪರ ಬಂಧ್ ಎಂದು ಕರೆಯಲಾಗುತ್ತದೆ. ಚಪ್ಪರ್ ಎಂಬುದು ರಜಪೂತ್ ರಾಜಸ್ಥಾನ ಮೂಲದ ಒಂದು ಊರಿನ ಹೆಸರು. ತಮ್ಮ ಹಿರಿಯರು ರಾಜಸ್ಥಾನದಿಂದ ಈ ಕಡೆ ವಲಸೆ ಬಂದಿದ್ದಾರೆ (ಸಿಂಗ್.ಕೆ.ಎಸ್:೧೯೯೪:೬೩೮) ಎಂದು ತಿಳಿಸುತ್ತಾರೆ.

ಮೂಲತಃ ಮೊಘಲ್ ಅರಸರ ಕಾಲದಲ್ಲಿ ತಾವು ಸೈನ್ಯ ಶಿಬಿರಗಳಿಗೆ ಡೇರೆಗಳನ್ನು ಹಾಕುವ ಕಾಯಕ ಮಾಡುತ್ತಿದ್ದವರು. ಹೀಗಾಗಿ ತಮಗೆ ಚಪ್ಪರಬಂದ ಎನ್ನುವ ಹೆಸರು ಬಂದಿತು. ಮೊಘಲ್ ಅರಸರ ಕಾಲಕ್ಕೆ ತಮ್ಮ ಹಿರಿಯರು ಮುಸ್ಲೀಂಧರ್ಮದ ಪ್ರಭಾವಕ್ಕೆ ಒಳಗಾಗಿ ಆ ಧರ್ಮವನ್ನು ಅನುಸರಿಸಿದರೇನೋ, ಬುಡಕಟ್ಟು ಮೂಲದವರಾದ ತಮ್ಮನ್ನು ಇತರೆ ಮುಸ್ಲಿಂರು ಒಳಗೆ ಸೇರಿಸಿಕೊಳ್ಳದೆ ಅಸ್ಪೃಶ್ಯರಂತೆ ಕಾಣುವಂತಾಯಿತು. ಮುಸ್ಲಿಂ ಧರ್ಮಕ್ಕೆ ಪಲಾಯನ ಮಾಡಿದ್ದರಿಂದ ತಮ್ಮ ಮೂಲ ಬುಡಕಟ್ಟು ಸಹ ತಮ್ಮನ್ನು ದೂರಮಾಡಿತು. ಈ ಕಡೆಗೂ ಸಲ್ಲದೆ ಆ ಕಡೆಗೂ ಸಲ್ಲದೆ ಮಧ್ಯದಲ್ಲಿ ತಾವು ಅತಂತ್ರವಾಗಿ ಉಳಿದೆವು. ಹೀಗೆ ಅತಂತ್ರವಾಗಿ ಉಳಿದುದರಿಂದ ತಮ್ಮದೇ ಆದ ಒಂದು ಪಂಗಡ ಸೃಷ್ಟಿಗೊಂಡಿತು. ವೃತ್ತಿಯನ್ನು ಅನುಸರಿಸಿ ಇತರರು ತಮ್ಮನ್ನು ಚಪ್ಪರಬಂದರೆಂದು ಕರೆಯುತ್ತಿದ್ದರು. ಅದೇ ಹೆಸರು ತಮ್ಮ ಜಾತಿ ಸೂಚಕ ಹೆಸರಾಗಿ ಉಳಿಯಿತು ಎಂದು ಹಿರಿಯ ವಕ್ತೃಗಳಾದ ಮಹಿಬೂಬಸಾಬ ಪಂಗಿವಾಲೆ ಬಿಜಾಪುರ ಇವರು ತಿಳಿಸಿದರು. ಒಟ್ಟಾರೆಯಾಗಿ ಇವರು ಮಾಡುವ ವೃತ್ತಿಯಿಂದಾಗಿ ಇವರನ್ನು ಚಪ್ಪರಬಂಧ್ ಎಂದು ಕರೆಯಲಾಗುತ್ತದೆ.

ಚಪ್ಪರ ಬಂಧರ ಬೆಡಗಗಳು

ಚಪ್ಪರ ಬಂಧದಲ್ಲಿ ಎರಡು ವಿಭಾಗಗಳಿವೆ. ಇವುಗಳನ್ನು ನನ್ನಿಭಾಯಿ ಮತ್ತು ಬಡೇ ಭಾಯಿ ಎಂದು ಕರೆದುಕೊಳ್ಳುತ್ತಾರೆ. ಅವುಗಳನ್ನು ಛೇ ಗಂಡ, ಭಾರೆ ಗಂಡ ಎಂದೂ ಸಹ ಕರೆಯುತ್ತಾರೆ. ಬಡೇಭಾಯಿ ಬಾರ ಗಂಡದವರಾದರೆ, ನನ್ನಿಭಾಯಿ ಛೇ ಗಂಡದವರಾಗಿರುತ್ತಾರೆ.

ಬಾರಗಂಡ ಮತ್ತು ಥೇಗಂಡ ಇಬ್ಬರಲ್ಲಿಯೂ ವೈವಾಹಿಕ ಸಂಬಂಧಗಳು ಏರ್ಪಡುವುದಿಲ್ಲ. ಬಾರ ಗಂಡದ ಗಂಡು ಅನ್ಯಜಾತಿಯ ಹೆಣ್ಣನ್ನು ವಿವಾಹವಾಗಿ ತನ್ನ ಜಾತಿಗೆ ಸೇರಿಸಿಕೊಂಡರೆ ಆಕೆಯಲ್ಲಿ ಹುಟ್ಟಿದ ಮಕ್ಕಳು ಥೇ ಗಂಡದವರಾಗುತ್ತವೆ. (ನನ್ನಿ ಬಾಯಿ) ಅವರು ಕೇವಲ ಥೇ ಗಂಡದವರೊಂದಿಗೆ ಮಾತ್ರ ಸಂಬಂಧ ಬೆಸೆದುಕೊಳ್ಳಲು ಸಾಧ್ಯ

ಒಬ್ಬೇ ವ್ಯಕ್ತಿಯು ತನ್ನ ಜಾತಿಯ ಹೆಣ್ಣನ್ನು ಮದುವೆಯಾಗಿ ಆಕೆಯ ಹೊಟ್ಟೆಯಲ್ಲಿ ಮಕ್ಕಳು ಹುಟ್ಟದರೆ ಅವು ಬಾರ ಗಂಡವಾಗುತ್ತದೆ. ಅದೇ ವ್ಯಕ್ತಿಯು ಇನ್ನೊಂದು ಜಾತಿಯ ಹೆಣ್ಣನ್ನು ಮದುವೆಯಾಗಿ ತನ್ನ ಜಾತಿಗೆ ಅವಳನ್ನು ಸೇರಿಸಿಕೊಂಡರೂ ಅವಳಿಗೆ ಹುಟ್ಟುವ ಮಕ್ಕಳ ಥೇ ಗಂಡ ವರ್ಗಕ್ಕೆ ಸೇರುತ್ತವೆ ಎಂದು ವಕ್ತೃಗಳು ತಿಳಿಸಿದರು. ಆದರೆ ಬಾರ ಗಂಡ ಹಾಗೂ ಥೇ ಗಂಡಗಳ ಮಧ್ಯ ಬೆಡಗುಗಳ ವಿಚಾರವಾಗಿ ಯಾವುದೇ ಅಂತರವಿಲ್ಲ. ಬಾರ ಗಂಡದಲ್ಲಿರುವ ಬೆಡಗುಗಳೇ ಥೆ ಗಂಡದವು ಸಹ ಆಗಿರುತ್ತವೆ. ಬೆಡಗುಗಳು ತಂದೆಯ ಮೂಲಕ ತನ್ನ ವಂಶದ ಮುಂದಿನ ಪೀಳಿಗೆಗೆ ಹೋಗುವುದರಿಂದ ಎರಡೂ ಪಂಗಡಗಳ ಬೆಡಗುಗಳಲ್ಲಿ ಅಂತಹ ವ್ಯತ್ಯಾಸವೇನಿಲ್ಲ. ಒಟ್ಟರೆಯಾಗಿ ಎರಡೂ ಪಂಗಡಗಳಿಗೆ ಸೇರಿ ಇರುವ ಒಟ್ಟು ಬೆಡಗುಗಳು ಕ್ರಮವಾಗಿ ಈ ಕೆಳಗಿನಂತಿವೆ.

೧. ಗಾರೆ, ೨. ಅಡಗಾರೆ, ೩. ಬಡೇಗಾರೆ, ೪. ತಿಟವಾಲೆ, ೫. ಜಾರೂವಾಲೆ, ೬. ಪಿರ್‌ಜಾದೆ, ೭. ಪೇರ್ ಭಾಯಿ, ೮. ಭೋಲೆವಾಲೆ, ೯. ಚೊಂಡಕಿವಾಲೆ, ೧೦. ಆಗವಾಲೆ, ೧೧. ಜೋತೀವಾಲೆ, ೧೨. ಬಕವಾಲೆ, ೧೩. ದತ್ತುರವಾಲೆ, ೧೪. ಹರಿಯಾವಾಲೆ, ೧೫. ಪುಂಗಿ ವಾಲೆ, ೧೬. ಸೂಜಿವಾಲೆ, ೧೭. ರಾವತ್, ೧೮. ಬಳ್ಳಾರಿ ವಾಲೆ, ೧೯. ಲಿಗಳವಾಲೆ, ೨೦. ಕಾರಾವಾಲೆ, ೨೧. ಕೆಡಗಿ ವಾಲೆ, ೨೨. ಗುಡುವಾಲೆ, ಹೀಗೆ ೨೨ ಬೆಡಗುಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ ಇನ್ನೂ ಕೆಲವು ಬೆಡಗುಗಳು ಅಳಿಸಿ ಹೋಗಿರುವ ಸಾಧ್ಯತೆಗಳಿವೆಯೆಂದು ಕೆಲವು ಹಿರಿಯ ವಕ್ತೃಗಳು ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಬೆಡಗುಗಳಲ್ಲಿ ಸಜಾತಿ ಬೆಡಗಿನವರು ವಿವಾಹವಾಗುವುದಿಲ್ಲ. ವಿಜಾತಿ ಬೆಡಗುಗೊಳೊಂದಿಗೆ ಸಂಬಂಧ ಬೆಳೆಯುತ್ತವೆ. ಆದರೆ ಬೆಡಗು ನೋಡುವ ಪೂರ್ವದಲ್ಲಿ ಅವರು ಬಡೇ ಭಾಯಿಯೋ, ನನ್ನ ಭಾಯಿಯೋ ಎಂಬುದನ್ನು ತರುವಾಯ ಬೆಡಗನ್ನು ಕೇಳಿ ತರುವಾಯ ಹೆಣ್ಣನ್ನು ನೋಡುವ ಕಾರ್ಯ ಮಾಡುತ್ತಾರೆ.

ವಿವಾಹ

ಹೆಣ್ಣು ನೋಡುವುದು ನಿರಂತರವಾಗಿ ಅಲೆಮಾರಿತನವನ್ನೇ ಮೈಗೂಡಿಸಿಕೊಂಡಿರುವ ಪುರುಷರು ತ್ಮಮೊಂದಿಗೆ ಹೆಂಗಸರನ್ನು ಕಡಿದುಕೊಂಡು ಹೋಗುವುದಿಲ್ಲ. ಗಂಡಂದಿರು ಮನೆಗೆ ಮರಳಿ ಬರುವವರೆಗೂ ಇಡೀ ಮನೆಯ ಜವಾಬ್ದಾರಿ ಹೆಂಗಸರದ್ದೇ ಆಗಿರುತ್ತದೆ. ಹೀಗಾಗಿ ಮನೆಗೆ ಸೊಸೆಯಾಗಿ ಬರುವವಳು ಧೈರ್ಯ ಶಾಲಿಯಾಗಿದ್ದು ಮನೆಯ ಎಲ್ಲಾ ಒಳಾಡಳಿತವನ್ನು ನಡೆಸುವವಳಾಗಿರಬೇಕೆಂದು ಆಪೇಕ್ಷಿಸುತ್ತಾರೆ. ಹೀಗಾಗಿ ತಮ್ಮ ಮಗನಿಗೆ ಅನುರೂಪವಾದ ಹೆಣ್ಣನ್ನು ಹುಡುಕುವ ಕಾಯಕ ಮೊದಲಿಗೆ ನಡೆಯುತ್ತದೆ.

ಸಾಮಾನ್ಯವಾಗಿ ಬಂಧು ಬಳಗದಲ್ಲಿಯೇ ಹೆಣ್ಣನ್ನು ಮದುವೆ ಮಾಡಿಕೊಳ್ಳುವುದು ಹೆಚ್ಚಾಗಿ ಕಂಡುಬರುತ್ತದೆ. ಗಂಡಿನ ಕಡೆಯ ತಂದೆ ಮತ್ತು ಇತರ ಹಿರಿಯರು ಹೆಣ್ಣನ್ನು ನೋಡಲು ಹೋಗುತ್ತಾರೆ. ಹೆಣ್ಣು ನೋಡಿದ ತರುವಾಯ ಒಂದು ದಿನ ನಿಶ್ಚಿತಾರ್ಥ ಕಾರ್ಯವಿಟ್ಟುಕೊಳ್ಳುತ್ತಾರೆ.

ನಿಶ್ಚಿತಾರ್ಥ: ನಿಶ್ಚಿತಾರ್ಥದ ದಿನ ಹೆಣ್ಣಿಗೆ ಎಷ್ಟು ತೆರಕೊಡಬೇಕು. ಸೀರೆಗಳು ಎಷ್ಟು ಕೊಡಬೇಕು. ಇತ್ಯಾದಿಗಳನ್ನು ಮಾತನಾಡುತ್ತಾರೆ. ತರುವಾಯ ಸೇರಿದ ದೈವಕ್ಕೆ ಎಲೆ, ಅಡಿಕೆ, ಸಕ್ಕರೆ ಹಂಚಿ ಊರಮಾಡಿದ ತರುವಾಯ ಹೆಣ್ಣನ್ನು ನಿಶ್ಚಿಯಿಸಿದಂತಾಗುತ್ತದೆ.

ತೆರ, ವರದಕ್ಷಿಣ ಪದ್ಧತಿ: ತೆರ ಎಂದರೆ ವಧು ದಕ್ಷಿಣ, ಇವರಲ್ಲಿ ಇಂದಿಗೂ ಹುಡುಗಿಗೆ ತೆರ ಕೊಡುವ ಪದ್ಧತಿ ಇದೆ. ಸಾಮಾನ್ಯವಾಗಿ ಇವರಲ್ಲಿ ಭಾರ ಗಂಡ, ಮತ್ತು ಛೇ ಗಂಡ ಎನ್ನುವ ಭೇದಗಳಿವೆ. ಭಾರ ಗಂಡದವರು ಒಂದು ಗಂಡಕ್ಕೆ ಮೂರು ರೂಪಾಯಿಂತೆ ಕನಿಷ್ಟ ೩೬ ರೂಪಾಯಿಗಳನ್ನು ಕನಿಷ್ಟ ತೆರವಾಗಿ ನೀಡಬೇಕು. ಇಲ್ಲವೇ ತಮ್ಮ ಯೋಗ್ಯತೆಗೆ ತಕ್ಕಂತೆ ಎಷ್ಟಾದರೂ ತೆರ ಕೊಡಬಹುದು. ಇದರಲ್ಲಿ ೩೬ ರೂಪಾಯಿಯಿಂದ ಹಿಡಿದು ೩೬೦೦ ರೂಪಾಯಿವರೆಗೆ ತೆರ ಕೊಡುತ್ತಾರೆ. ಗಂಡುಗಳಿಗೆ ವರದಕ್ಷಿಣೆ ನೀಡುವ ಪದ್ಧತಿ ಇರುವುದಿಲ್ಲ.

ಬಹುಪತ್ನಿತ್ವ, ಬಹುಪತಿತ್ವ: ಇವರಲ್ಲಿ ಬಹುಪತಿತ್ವ ಪದ್ಧತಿ ಇರುವುದಿಲ್ಲ. ಹಾಗೇ ಬಹುಪತ್ನಿತ್ವ ಪದ್ಧತಿಯೂ ಇಲ್ಲ. ಸಾಮಾನ್ಯವಾಗಿ ಹೆಂಡತಿ ತೀರಿಕೊಂಡರೆ ವಿಧುರನು ಮತ್ತೊಂದು ಹೆಣ್ಣನ್ನು ಮದುವೆಯಾಗುವು ದುಂಟು. ಅದರ ಹೊರತಾಗಿ ಹೆಂಡತಿ ಬದುಕಿದ್ದಾಗಲೇ ಮತ್ತೊಂದು ಹೆಣ್ಣನ್ನು ಮದುವೆ ಮಾಡಿಕೊಳ್ಳುವುದಿಲ್ಲ.

ಹಂದರ ಹಾಕುವ ಕಾರ್ಯ: ದೈವದ ಎಲ್ಲಾ ಕುಟುಂಬದ ಒಬ್ಬೊಬ್ಬ ಸದಸ್ಯರಂತೆ ಕಾಡಿಗೆ ಹೋಗಿ ಹಂದರಕ್ಕೆ ಹಾಕುವ ಸೊಪ್ಪನ್ನು ತರುತ್ತಾರೆ. ಮನೆಯ ಮುಂಭಾಗದಲ್ಲಿ ಬಿದಿರುಗಳನ್ನು ಬಳಸಿ ಹಂದರ ಹಾಕಿ ಅದರ ಮೇಲೆ ಹಂದರದ ತಪ್ಪಲು ಹಾಕಲಾಗುತ್ತದೆ. ಹುಡುಗಿ ಮನೆ ಮುಂದೆ ಮದುವೆ ಮಾಡುವುದರಿಂದ ಹುಡುಗಿಯೂ ಮನೆ ಮುಂದೆ ಹಂದರ ಹಾಕುತ್ತಾರೆ. ಹಾಗೇ ಹುಡುಗನ ಮನೆಯ ಮುಂದೆಯೂ ಹಂದರ ಹಾಕಲಾಗಿರುತ್ತದೆ. ಹುಡುಗಿಯ ಸೋದರ ಮಾವ ಹಾಗೂ ಸೋದರತ್ತೆಯಾಗುವವರು ಹಂದರ ಪೂಜೆ ಮಾಡುತ್ತಾರೆ. ಹಂದರಕ್ಕೆ ಕೆಮ್ಮಣ್ಣು ಸುಣ್ಣ ಹಚ್ಚುವುದಿಲ್ಲ. ಹುಡುಗಿಯ ಸೋದರ ಮಾವ ಹಾಲಗಂಭವನ್ನು ತಂದು ಹಂದರದ ಬಲಭಾಗದ ಕಂಭಕ್ಕೆ ಕಟ್ಟುತ್ತಾನೆ. ಚಪ್ಪರಭಂದದಲ್ಲಿಯೂ ಹಾಲಗಂಭ ತರುವ ಶಾಸ್ತ್ರವಿದೆ. ಹಂದರ ಹಾಕಿದ ತರುವಾಯ ಮದುವೆ ಕಾರ್ಯ ಪ್ರಾರಂಭಗೊಳ್ಳುತ್ತದೆ.

ಒರಳು ಒಣಕೆ ಬೀಸಕಲ್ಲು ಪೂಜೆ : ಹುಡುಗಿ ಮತ್ತು ಹುಡುಗ ಎರಡು ಮನೆಗಳಲ್ಲೂ ವೈಯಕ್ತಿಕವಾಗಿ ಒರಳು ಹಾಗೂ ಒಣಕೆ ಪೂಜೆ ಮಾಡುತ್ತಾರೆ. ಒರಳೊಳಗೆ ಯಾವುದಾದರೂ ಧಾನ್ಯವನ್ನು ಹಾಕಿ ಒಣಕೆಯಿಂದ ಮುತ್ತೈದೆಯರು ಮತ್ತು ಮಧುವಣಗಿತ್ತಿ ಸೇರಿ ಪೂಜಿಸಿ ತರುವಾಯ ಕುಟ್ಟುವ ಶಾಸ್ತ್ರ ಮಾಡುತ್ತಾರೆ. ತರುವಾಯ ಬೀಸುವ ಕಲ್ಲನ್ನು ಪೂಜಿಸಲಾಗುತ್ತದೆ. ಬೀಸುವ ಕಲ್ಲಿಗೆ ಸ್ವಲ್ಪ ಧಾನ್ಯವನ್ನು

ಹಾಕಿ ವಧುವಿನ ಕೈಯಿಂದ ಬೀಸುವ ಶಾಸ್ತ್ರ ಮಾಡುತ್ತಾರೆ. ಒರಳು, ಒಣಕೆ, ಮತ್ತು ಬೀಸುವ ಕಲ್ಲಿಗೆ ನೈವೇದ್ಯವಾಗಿ ಬೆಲ್ಲ, ಬೇಳೆ, ಹಿಟ್ಟು ಮುಂತಾದವುಗಳನ್ನು ಮರದಲ್ಲಿ ಇರಿಸುತ್ತಾರೆ. ಪೂಜೆಯ ತರುವಾಯ ಅವನ್ನು ಮನೆ ಬಳಕೆಗಾಗಿ ತೆಗೆದುಕೊಂಡು ಹೋಗಲಾಗುತ್ತದೆ.

ಹಸಿರು ಬಳೆ ತೊಡಿಸುವ ಮತ್ತು ಮೆಹಂದಿ ಕಾರ್ಯ: ವಧುವಿಗೆ ಮತ್ತು ಇತರ ಮುತ್ತೈದೆ ಹೆಣ್ಣುಮಕ್ಕಳಿಗೆ ಹಸಿರು ಬಳೆ ತೊಡಿಸುವ ಶಾಸ್ತ್ರ ಮಾಡಲಾಗುತ್ತದೆ. ಬಳೆ ತೊಡಿಸಲು ಬಂದ ಬಳೆಗಾರನಿಗೆ ಉತ್ತುತ್ತಿ, ಬೆಲ್ಲ, ಬೇಳೆ, ಹಿಟ್ಟು ಮತ್ತು ಚಾಜವನ್ನು ಕೊಡುತ್ತಾರೆ. ಅಂದೇ ರಾತ್ರಿ ಮೆಹಂದಿ ಕಾರ್ಯ ನಡೆಯುತ್ತದೆ. ಮೆಹಂದಿ ಕಾರ್ಯ ತುಂಬಾ ಸಂಭ್ರಮದಿಂದ ಕೂಡಿರುವಂಥದ್ದು, ಮೊದಲೇ ತಯಾರಿಸಿದ್ದು ಕೊಂಡ ಮೆಹಂದಿಯನ್ನು ಮೊದಲಿಗೆ ಮುತ್ತೈದೆ ಹೆಂಗಸರು ವಧುವಿಗೆ ಹಾಕುತ್ತಾರೆ. ಹಚ್ಚುತ್ತಾರೆ. ತರವಾಯ ಎಲ್ಲಾ ಮುತ್ತೈದೆಯರು ಮಹೆಂದಿಯಿಂದ ತಮ್ಮ ಕೈಗಳು ಹಾಗೂ ಕಾಲುಗಳ ಮೇಲೆ ಚಿತ್ತಾರಗಳನ್ನು ಬರೆದುಕೊಳ್ಳುತ್ತಾರೆ. ಸಾಮಾನ್ಯವಾಗಿ ಊಟದ ತರುವಾಯ ಈ ಕಾರ್ಯಕ್ರಮ ಪ್ರಾರಂಭವಾಗಿ ಮಧ್ಯರಾತ್ರಿಯವರೆಗೂ ಅದು ಮುಂದುವರೆಯುತ್ತದೆ.

ಹರಿಸಿಣ ಹಚ್ಚುವ ಶಾಸ್ತ್ರ: ಹಂದರದ ಕೆಳಗೆ ಮಣಿಯೊಂದನ್ನು ಹಾಕಿ ಹುಡುಗಿಯನ್ನು ಕೂರಿಸುತ್ತಾರೆ. ಹಿರಿಯ ಮಹಿಳೆಯರೆಲ್ಲಾ ಒಂದು ಕಡೆ ಸೇರಿ ತಮ್ಮ ಭಾಷೆಯಲ್ಲಿ ಹರಿಸಿಣ ಹಚ್ಚುವ ಶಾಸ್ತ್ರದ ಹಾಡುಗಳನ್ನು ಡೋಲಕ್ ಬಾರಿಸುತ್ತಾ ಹಾಡುತ್ತಿರುತ್ತಾರೆ. ಈ ಕಡೆ ಮುತ್ತೈದೆಯರು ಮೊದಲಿಗೆ ಹುಡುಗಿಯ ಮುಖ, ಕೈ, ಕಾಲುಗಳಿಗೆ ಹರಿಸಿಣ ಹಚ್ಚುತ್ತಾರೆ. ತರುವಾಯ ಹುಡುಗಿಯನ್ನು ಹಂದರದ ಮಧ್ಯಭಾಗದಲ್ಲಿ ಹಿಟ್ಟನ್ನು ಬಳಸಿ ಹಾಕಿದ ವಿಶಿಷ್ಟ ರಂಗೋಲಿಯ ಮಧ್ಯಭಾಗಕ್ಕೆ ಮಣಿ ಹಾಕಿ ಹುಡುಗಿಯೊಂದಿಗೆ ಅವಳ ತಂಗಿಯಾಗುವವಳನ್ನು ಕೂರಿಸಿ ಹರಿಸಿಣ ನೀರು ಹಾಕುತ್ತಾರೆ. ತರುವಾಯ ಹುಡುಗನಿಗೂ ಇದೇ ರೀತಿ ಹರಿಸಿಣ ಹಚ್ಚಿ ಹುಡುಗನಿಗೆ ಸೊಸೆಯಾಗುವ ಚಿಕ್ಕ ಹುಡುಗಿಯೊಂದಿಗೆ ಕೂರಿಸಿ ಹರಿಸಿಣ ನೀರು ಹಾಕುತ್ತಾರೆ.

ಸುರಗಿ ಪದ್ಧತಿ: ಸುರಗಿ ಪದ್ಧತಿ ಇವರಲ್ಲಿ ಮೊದಲಿಗೆ ಇದ್ದಿತು ಆದರೆ ಈಗ ಸುರಗಿ ಪದ್ಧತಿ ಅಳಿಸಿ ಹೋಗಿದೆ ಆದರೆ ಅದರ ಛಾಯೆ ಇನ್ನೂ ಈ ಸಮುದಾಯದಲ್ಲಿ ಜೀವಂತವಾಗಿರುವುದನ್ನು ಕಾಣಬಹುದು.

ಬೀಗರನ್ನು ಎದುರುಗೊಳ್ಳುವ ಶಾಸ್ತ್ರ: ಬೀಗರು ಮದುವೆ ಮನೆಗೆ ಹತ್ತಿರದಲ್ಲಿರುವ ಯಾವುದಾದರೂ ಗುಡಿಯಲ್ಲಿರುತ್ತಾರೆ. ಅವರನ್ನು ಹಿಂದೆ ಬ್ಯಾಂಡು ಭಜಂತ್ರಿಗಳೊಂದಿಗೆ ಎದುರುಗೊಳ್ಳುತ್ತಿದ್ದರಂತೆ. ಇಂದು ಬ್ಯಾಂಡ್ ಭಜಂತ್ರಿಗಳನ್ನು ಬಳಸುವುದಿಲ್ಲ. ಬದಲಿಗೆ ಹೆಣ್ಣಿನ ಕಡೆಯ ಜನ ಹಾಡುತ್ತಾ ಹೋಗಿ ಬೀಗರನ್ನು ಎದುರುಗೊಳ್ಳುತ್ತಾರೆ. ಬೀಗರನ್ನು ಮದುವೆ ಮನೆಗೆ ಕರೆತಂದ ತರುವಾಯ ಅವರಿಗೆ ಶರಬತ್ತು ಅಥವಾ ಟೀಯನ್ನು ಕುಡಿಯಲು ಕೊಡುತ್ತಾರೆ. ತರುವಾಯ ಹಿರಿ ವೀಳ್ಯಾ ಶಾಸ್ತ್ರ ನಡೆಯುತ್ತದೆ.

ಹಿರಿಯ ವೀಳ್ಯ : ನಿಖಾ ಮಾಡುವ (ಮದುವೆ) ಪೂರ್ವದ ಮೊದಲ ರಾತ್ರಿ ಈ ಕಾರ್ಯ ಮಾಡಲಾಗುತ್ತದೆ. ಹುಡುಗನ ಕಡೆಯವರು ಬೆಲ್ಲ, ಬೇಳೆ, ಹಿಟ್ಟು, ಉತ್ತುತ್ತಿ, ಇತ್ಯಾದಿಗಳೊಂದಿಗೆ ೫

ಸೇರು ಅಡಿಕೆ ಮತ್ತು ೫ ಚಟ್ಟು ಎಲೆ, ಸಕ್ಕರೆಯನ್ನು ತಂದಿರುತ್ತಾರೆ. ಅಂದು ಹುಡುಗನಿಗೆ ಸಲ್ಲಬೇಕಾದ ತೆರವು ಹಣವನ್ನು ಗಂಡಿನ ಕಡೆಯವರು ಸಲ್ಲಿಸಬೇಕು. ತರುವಾಯ ದೈವಕ್ಕೆ ಸಲ್ಲಿಸಬೇಕಾದ ಮೊಬಲಗನ್ನು ಹುಡುಗಿ ಕಡೆಯವರು ಹಾಗೂ ಹುಡುಗನ ಕಡೆಯವರು ಸಲ್ಲಿಸುತ್ತಾರೆ. ಹುಡುಗಿ ಕಡೆಯವರು ರೂ. ೧೦ ಹಾಗೂ ಹುಡುಗನ ಕಡೆಯವರು ರೂ. ೧೦ನ್ನು ದೈವಕ್ಕೆ ಸಲ್ಲಿಸಿದ ತರವಾಯ ದೈವದ ಸಮ್ಮತಿ ಮೇರೆಗೆ ವೀಳ್ಯ ಹಂಚಲಾಗುತ್ತದೆ. ಮೊದಲಿಗೆ ವೀಳ್ಯವನ್ನು ದೈವದವರಿಗೆ, ತರುವಾಯ ಜಮಾತಕ್ಕೆ ತರುವಾಯ ಹೆಣ್ಣಿನ ಕಡೆಯವರಿಗೆ ಕೊಟ್ಟು ನಂತರ ಎಲ್ಲಾ ದೈವದವರಿಗೆ ಹಾಗೂ ಎಲ್ಲಾ ಬೆಡಗಿನವರಿಗೆ ವೀಳ್ಯವನ್ನು ಹಂಚಲಾಗುತ್ತದೆ. ವೀಳ್ಯ ಕೊಡುವ ಹಿರಿಯನು ಪುಂಗಿವಾಲೆ, ಗಾರೆವಾಲೆ, ಪೂನೆವಾಲೆ, ಹೀಗೆ ಬೆಡಗುಗಳ ಹೆಸರು ಹಾಗೂ ಅವರ ಬಂಧುಗಳ ಊರುಗಳ ಹೆಸರು ಹೇಳಿ ವೀಳ್ಯವನ್ನು ಹಂಚುತ್ತಾರೆ. ಈ ರೀತಿ ವೀಳ್ಯವನ್ನು ಹಂಚಿದ ತರುವಾಯ ಇಡೀ ರಾತ್ರಿ ವಿವಿಧ ಕಾರ್ಯಗಳು ಮುಂದುವರೆಯುತ್ತವೆ. ಹಾಗೇ ಕೆಲಸ ಕಾರ್ಯಗಳನ್ನು ಕೆಲವು ನಿರ್ದಿಷ್ಟ ವ್ಯಕ್ತಿಗಳನ್ನು ಛಡವಾನ (ವಾಲಿಕಾರ)ರೆಂದು ನೇಮಿಸಿ ಅವರಿಗೆ ವೀಳ್ಯದೇವರಿಗೆ ರೂ. ೧೦ನ್ನು ನೀಡುತ್ತಾರೆ. ಈ ರೀತಿ ಜಾಜು ಪಡೆದ ವ್ಯಕ್ತಿಗಳು ಮದುವೆಯ ಕಾರ್ಯಗಳು ಸೂಸೂತ್ರವಾಗಿ ನಡೆಯುವಂತೆ ನೋಡಿಕೊಳ್ಳಬೇಕು.

ಡಾಲಿ ಶಾಸ್ತ್ರ

ಡಾಲಿ ಎಂದರೆ ಹುಡುಗಿಗೆ ಬೇಕಾದ ವಸ್ತ್ರ, ಒಡವೆ, ಕನ್ನಡಿ, ಬಳೆ, ಇತ್ಯಾದಿ ಎಲ್ಲಾ ವಸ್ತುಗಳನ್ನು ದೊಡ್ಡ ಬಿದರಿನ ಪುಟ್ಟಿಯಲ್ಲಿ ಇರಿಸಿರುತ್ತಾರೆ. ಅದೇ ರೀತಿ ಹುಡುಗಿಯ ಮನೆಯವರು ಹುಡುಗನಿಗೆ ಅವಶ್ಯಕವಾದ ವಸ್ತ್ರ ಇತ್ಯಾದಿ ವಸ್ತುಗಳನ್ನು ಬಿದಿರುಪುಟ್ಟಿಯಲ್ಲಿ ಇರಿಸಿರುತ್ತಾರೆ. ಈ ರೀತಿ ವಸ್ತುಗಳನ್ನು ಇರಿಸಿದ ಪುಟ್ಟಿಗಳಿಗೆ ಡಾಲಿ ಎನ್ನುತ್ತಾರೆ.

ಮೊದಲಿಗೆ ಹುಡುಗನ ಕಡೆಯವರು ತಮ್ಮ ಬಿಡದಿ ಮನೆಯಿಂದ ಹುಡುಗಿಗೆ ಡಾಲಿ ಒಪ್ಪಿಸುವ ಕಾರ್ಯ ಮಾಡುತ್ತಾರೆ. ಸಾಮಾನ್ಯವಾಗಿ ಈ ಡಾಲಿಯನ್ನು ಹುಡುಗನ ಹಿರಿಯ ಅತ್ತಿಗೆ ಹೊರುತ್ತಾಳೆ. ಎರಡು ಡಾಲಿಗಳಿದ್ದರೆ ಇಬ್ಬರು ಅತ್ತಿಗೆಯರು ಡಾಲಿಯನ್ನು ಹೋರುತ್ತಾರೆ. ಈ ಡಾಲಿಯನ್ನು ಮೆರವಣಿಗೆಯೊಂದಿಗೆ ಹೋಗಿ ಒಪ್ಪಿಸಿ ಬರುತ್ತಾರೆ. ತರುವಾಯ ಹುಡುಗಿಯ ಕಡೆಯವರು ಹುಡುಗನಿಗೆ ಡಾಲಿ ಒಪ್ಪಿಸುತ್ತಾರೆ. ಹುಡುಗಿಯ ಅತ್ತಿಗೆ ಅಥವಾ ಹೆಣ್ಣಿನ ಮನೆಯ ಹಿರಿಯ ಸೊಸೆ ಈ ಡಾಲಿ ಹೋರುವ ಹಕ್ಕನ್ನು ಹೊಂದಿರುತ್ತಾಳೆ. ಇವರು ಸಹ ಮೆರವಣಿಗೆಯೊಂದಿಗೆ ಹೋಗಿ ಹುಡುಗನಿಗೆ ಡಾಲಿ ಒಪ್ಪಿಸುತ್ತಾರೆ.

- ಡಾಲಿ ಹೋರುವವರಿಗೆ ಕೆಲವು ನಿರ್ಬಂಧ ಹಾಗೂ ನಿಷೇಧಗಳಿವೆ.
- ಡಾಲಿ ಹೋರುವ ಹೆಣ್ಣುಮಕ್ಕಳು ಅಂಗವಿಕಲರಾಗಿರಬಾರದು.
- ಯಾವುದೇ ರೀತಿಯ ಕಳಂಕಕ್ಕೆ ಒಳಗಾಗಿರಬಾರದು.
- ಮುತ್ತೈದೆಯರಾಗಿರಬೇಕು.

ಈ ಮೂರು ನಿರ್ಬಂಧಗಳಿಗೆ ಒಳಗಾದವರು ಮಾತ್ರ ಡಾಲಿ ಹೋರಲು ಯೋಗ್ಯರೆಂದು ಪರಿಗಣಿಸಲಾಗುತ್ತದೆ. ಮೊದಲ ಸೊಸೆ ವಿಧವೆಯಾಗಿದ್ದರೆ ಅಥವಾ ಅಂಗವಿಕಲ ಅಥವಾ ಇನ್ನಾವುದೇ ನ್ಯೂನ್ಯತೆಗಳಿದ್ದರೆ ಡಾಲಿ ಹೋರುವ ಹಕ್ಕು ಎರಡನೇ ಸೊಸೆಗೆ ಬರುತ್ತದೆ. ಇವರಲ್ಲಿ ಸಪ್ತಪದಿ ತುಳಿಯುವುದು, ಸುರುಗಿ ಇತ್ಯಾದಿ ಪದ್ಧತಿಗಳಿದ್ದವು. ಆದರೆ ಕ್ಷೇತ್ರಕಾರ್ಯದಲ್ಲಿ ಗಮನಿಸಿದಾಗ ಮೂಲ ಆಚರಣೆಗಳು ಎಷ್ಟೋ ಬದಲಾಗಿ ಅವುಗಳ ಪಳೆಯುಳಿಕೆ ಮಾತ್ರ ಈ ಸಮುದಾಯದಲ್ಲಿ ಉಳಿದಿವೆ ಎನಿಸುತ್ತದೆ.

ಹುಡುಗಿ ಮತ್ತು ಹುಡುಗನಿಗೆ ಹರಿಸಿಣ ನೀರು ಹಾಕುವ ಪೂರ್ವದಲ್ಲಿ ಗೋದಿ ಅಥವಾ ಅಕ್ಕಿ ಹಿಟ್ಟಿನಿಂದ ವಿಶಿಷ್ಟವಾಗಿ ಚೌಕಾಕಾರದ ರಂಗೋಲಿಯನ್ನು ಹಾಕಲಾಗುತ್ತದೆ. ಈ ರಂಗೋಲಿ ಹಾಕಲು ಬಳಸುವ ಪರಿಕರಗಳೆಂದರೆ ಒಂದು ಉದ್ದನೆಯ ಸೌಟು(ಚಮಚ) ಹಾಗೂ ಹಿಟ್ಟು, ಸೌಟು ಚಿಕ್ಕದಿರುವುದರಿಂದ ಇಂತಹ ಎರಡು ರಂಗೋಲಿಗಳನ್ನು ಒಂದರ ಪಕ್ಕ ಒಂದು ನಿರ್ಮಿಸುತ್ತಾರೆ. ಒಂದು ರಂಗೋಲಿಯ ಒಳಗೆ ಹುಡುಗಿ ಕುಳಿತರೆ ಇನ್ನೊಂದು ರಂಗೋಲಿಯ ಒಳಗೆ ಹುಡುಗ ಕೂಡಬೇಕು. ಪ್ರಾಯಶಃ ಹಿಂದೆ ಇವರಲ್ಲಿ ಸುರಗಿ ಪದ್ಧತಿ ಜಾರಿಯಿದ್ದಿತು. ತರುವಾಯ ಅದು ಮಾಯವಾದ ನಂತರ ಈ ರೀತಿಯ ರಂಗೋಲಿಯನ್ನು ಸುರಗಿ ಆಕಾರದಲ್ಲಿ ಬರೆಯುವ ಪದ್ಧತಿ ಜಾರಿಗೆ ಬಂದಿರಬೇಕೆಂದು ಕಾಣಿಸುತ್ತದೆ. ಈ ವಾದಕ್ಕೆ ಪುಷ್ಟಿಯಾಗುವಂತೆ ಚಪ್ಪರಬಂಧ್ ಹಿರಿಯ ವಕ್ತೃವೊಬ್ಬರು ತಮ್ಮಲ್ಲಿ ಮೊದಲು ಸುರಗಿ ಪದ್ಧತಿ ಇದ್ದಿತು. ಕಾಲಾಂತರದಲ್ಲಿ ಅದು ಅಳಿಸಿ ಹೋಯಿತು. ಅದರ ಬದಲಾಗಿ ಈ ರಂಗೋಲಿ ಹಾಕುವ ಪದ್ಧತಿ ತಮ್ಮಲ್ಲಿ ಬಳಕೆಗೆ ಬಂದಿತು ಎಂದು ತಿಳಿಸುತ್ತಾರೆ.

ತಾಳಿಶಾಸ್ತ್ರ

ಇವರು ಕೊರಳಿಗೆ ಕರಿಮಣಿ ಸರವನ್ನು ಕಟ್ಟಲಾಗುತ್ತದೆ. ಹುಡುಗನನ್ನು ತಾಳಿ ಕಟ್ಟುವ ಸ್ಥಳಕ್ಕೆ ಹುಡುಗನ ಸೋದರ ಮಾವ ಹೊತ್ತುಕೊಂಡು ಬರುತ್ತಾನೆ. ಹುಡುಗಿಯನ್ನು ಸಹ ಆಕೆಯ ಸೋದರಮಾವ ಹೊತ್ತುಕೊಂಡು ಬರುತ್ತಾನೆ. ಹೀಗೆ ಹಂದರದೊಳಗೆ ಹೊತ್ತುಕೊಂಡು ಬಂದ ತರುವಾಯ ಹುಡುಗನ ಸೋದರ ಮಾವನು ಅಥವಾ ಸಮುದಾಯದ ಹಿರಿಯನು ಮದುವೆ ಕಾರ್ಯವನ್ನು ಪೂರೈಸುವನು. ಮದುವೆ ಕಾರ್ಯದ ಪುರೋಹಿತಕೆ ವಹಿಸಿಕೊಂಡು ಇಂಥ ಮನೆಯ ಹುಡುಗಿಯನ್ನು ಇಂಥವರ ಮನೆಗೆ ಕೊಟ್ಟು ಮದುವೆ ಮಾಡಲಾಗುತ್ತಿದೆ. ಇನ್ನು ಮೇಲೆ ಅವರು ಗಂಡಹೆಂಡಿರೆಂದು ದೈವದವರು ಒಪ್ಪಿಕೊಂಡಿರುತ್ತಾರೆ. ಅವರು ಕೊನೆಯವರೆಗೂ ಸುಖ-ಸಂತೋಷ ನೆಮ್ಮದಿಯಿಂದ ಇರಲಿ ಎಂದು ತಿಳಿಸಿ ತರುವಾಯ ಹುಡುಗನ ಕೈಯಲ್ಲಿ ತಾಳಿಯ ಕರಿಮಣಿ ಸರ ಮುಟ್ಟಿಸಿ ಆ ತಾಳಿಯನ್ನು ಹುಡುಗಿಯ ಸೋದರತ್ತೆಗೆ ತಲುಪಿಸುತ್ತಾನೆ. ಸೋದರತ್ತೆಯೇ ತಾಳಿಯನ್ನು ಕಟ್ಟುತ್ತಾಳೆ. ತರುವಾಯ ಸಪ್ತಪದಿಯನ್ನು ತುಳಿಯುವುದು, ಕೊಬ್ಬರಿ ಮುರಿಯುವುದು, ಮೂಗುತಿ ಹುಡುಕುವ ಶಾಸ್ತ್ರ ಇತ್ಯಾದಿಗಳನ್ನು ಮಾಡುತ್ತಿದ್ದರು. ಆದರೆ ಇತ್ತೀಚೆಗೆ ಮುಸ್ಲೀಂ ಮೌಲ್ವಿಯೊಬ್ಬ ಬಂದು ನಿಖಾ ಪುಸ್ತಕದಲ್ಲಿ ನಿಖಾ ಬರೆಯುವ ಕಾರ್ಯವನ್ನು ಮಾಡುತ್ತಾರೆ. ಹಾಗೂ ನಿಖಾ ನಡೆಯುವವರೆಗೂ ಖುರಾನು ಪಠಣ ನಡೆಯುತ್ತದೆ ತರುವಾಯ ಬಂಧು ಬಾಂಧವರಿಗೆ ಊಟೋಪಚಾರದ ತರುವಾಯ ಹುಡುಗ ಹುಡುಗಿ ಕೈಯಿಂದ ಕೊಬ್ಬರಿ ಗಿಟುಗ ಮುರಿಸುವ ಶಾಸ್ತ್ರವನ್ನು ಮಾಡುತ್ತಾರೆ.

ತರುವಾಯ ಹುಡುಗಿಯ ಮನೆಗೆ ಹುಡುಗ ಬರುವುದು, ಹುಡುಗನ ಮನೆಗೆ ಹುಡುಗಿ ಕಳಿಸುವ ಶಾಸ್ತ್ರ ಮಾಡಲಾಗುತ್ತದೆ. ಆದರೆ ಸೋಬನವಾಗುವವರೆಗೂ ಇಬ್ಬರು ಒಂದೇ ಕಡೆ ಸೇರಲು ಬಿಡುವುದಿಲ್ಲ. ಮದುವೆಯಾದ ೧೬ ದಿನಕ್ಕೆ, ತಿಂಗಳೊಳಗೆ, ಮೂರು ತಿಂಗಳಿಗೆ, ಅಥವಾ ವರ್ಷದೊಳಗೆ ಸೋಬನ ಕಾರ್ಯ ನೆರವೇರಿಸಲಾಗುತ್ತದೆ.

ಬಾಲ್ಯವಿವಾಹ : ಬಾಲ್ಯವಿವಾಹ ಪದ್ಧತಿ ಇವರಲ್ಲಿ ಇನ್ನು ಜೀವಂತವಾಗಿದೆ. ಮೊದಲೆಲ್ಲಾ ಮಗು ಹುಟ್ಟಿದ ತಕ್ಷಣ ತೊಟ್ಟಿಲಲ್ಲೇ ಇಂಥವರ ಮಗನಿಗೆ ಈ ಹುಡುಗಿ ನಿಶ್ಚಯವೆಂದು ನಿರ್ಣಯಿಸಿ ೭-೮ ವರ್ಷದೊಳಗೇ ಮದುವೆ ಮಾಡಿಬಿಡುತ್ತಿದ್ದರು. ಇತ್ತೀಚೆಗೆ ಹುಡುಗಿ ಮೈನೆರೆಯುವವರೆಗೂ ಕಾಯಲಾಗುತ್ತದೆ. ಆದರೆ ಸಾಮಾನ್ಯವಾಗಿ ಹುಡುಗಿ ನೈನೆರದ ವರ್ಷಪೂರ್ತಿನಲ್ಲಿ ಮದುವೆ ಮಾಡುವುದೇ ಹೆಚ್ಚು. ಸಾಮಾನ್ಯವಾಗಿ ಹುಡುಗನಿಗೂ ಸಹ ೨೦ ವರ್ಷದೊಳಗೆ ಮದುವೆ ಮಾಡುವುದು ಹೆಚ್ಚು. ಇತ್ತೀಚೆಗೆ ಅಲ್ಪಸ್ವಲ್ಪ ವಿದ್ಯಾಭ್ಯಾಸ ಮಾಡಿದವರು ಮದುವೆಯನ್ನು ತಡವಾಗಿ ಮಾಡಿಕೊಳ್ಳಲು ಆಪೇಕ್ಷಿಸುತ್ತಾರೆ.

ವಿಧವಾ ವಿವಾಹ : ಇವರಲ್ಲಿ ವಿಧವಾ ವಿವಾಹ ಪದ್ಧತಿ ಜಾರಿಯಲ್ಲಿದೆ. ಸಾಮಾನ್ಯವಾಗಿ ಸಣ್ಣ ವಯಸ್ಸಿನಲ್ಲಿಯೇ ಗಂಡ ಸತ್ತರೆ ಅಂತಹ ಹೆಣ್ಣನ್ನು ಗಂಡನ ಮನೆಯ ಒಳಗಾಗಲೀ ಅಥವಾ ಹೊರಗಾಗಲೀ ಕೊಡುವ ಪದ್ಧತಿ ಇದೆ. ಆದರೆ ಈ ಮದುವೆಯನ್ನು ಅಂತಹ ವಿಜೃಂಭಣೆಯಿಂದ ಮಾಡುವುದಿಲ್ಲ. ಮದುವೆಯಾಗಬೇಕಾದ ಗಂಡಸು ಒಪ್ಪಿ ಹುಡುಗಿಗೆ ಇಂತಿಷ್ಟೆಂದು ತೆರವು ಕೊಟ್ಟು ದೈವಕ್ಕೆ ಇಂತಿಷ್ಟೆಂದು ಶುಲ್ಕ ಪಾವತಿ ಮಾಡಿ ಹೆಣ್ಣಿನ ಹೊಸ ಸೀರೆ ತಂದು ಮದುವೆ ಮಾಡಿಕೊಳ್ಳಲಾಗುತ್ತದೆ. ಇದನ್ನು ಉಡಕಿ ಮದುವೆ ಎಂದು ಕರೆಯುತ್ತಾರೆ.

ವಿಧುರ ವಿವಾಹ : ಮಹಿಳೆಯರಂತೆ ಪುರುಷರೂ ಸಹ ತನ್ನ ಹೆಂಡತಿ ತೀರಿದ ತರುವಾಯ ಬೇರೆ ಹೆಣ್ಣನ್ನು ಮದುವೆಯಾಗಬಹುದು. ಸಾಮಾನ್ಯವಾಗಿ ವಿಧುರ ಗಂಡಸು ವಿಧವೆ ಹೆಂಗಸನ್ನು ಮದುವೆಯಾಗುವುದೇ ಹೆಚ್ಚು. ಅಕಸ್ಮಾತ್ ಕೆಲವು ಗಂಡಸರು ಕನ್ಯೆ ಹೆಣ್ಣನ್ನು ಮದುವೆಯಾಗುವುದೂ ಉಂಟು.

ಸೀಮಂತ ಕಾರ್ಯ: ಇವರು ಇತರೆ ಸಮುದಾಯಗಳು ಮಾಡುವಂತೆ ಹುಡುಗಿ ಬಸಿರಾದರೆ ಏಳು ತಿಂಗಳಿಗೆ ಅವಳಿಗೆ ಸೀಮಂತ ಕಾರ್ಯ ಮಾಡುತ್ತಾರೆ. ಸೀಮಂತ ಕಾರ್ಯಕ್ಕೆ ಸೀರೆ ಮಾಡುವುದು, ಕುಪ್ಪಸ ಮಾಡುವುದು ಎಂದು ಕರೆಯುತ್ತಾರೆ. ಸೀಮಂತ ಕಾರ್ಯಕ್ಕೆ ಹೋಳಿಗೆ, ರೊಟ್ಟಿ ಪಲ್ಯಗಳು, ಮೊಸರನ್ನ ಇತ್ಯಾದಿ ತೆಗೆದುಕೊಂಡು ಬರುತ್ತಾರೆ. ಅಳಿಯ ಮತ್ತು ಮಗಳನ್ನು ಒಂದು ಕಡೆ ಕೂಡಿಸಿ ಹೊಸಬಟ್ಟೆ ಕೊಡುತ್ತಾರೆ. (ಆದರೆ ಹಿಂದೂಗಳಂತೆ ಆರತಿ ಮಾಡುವುದಿಲ್ಲ. ತುಂಬಾ ಹಿಂದೆ ಕಳಸ ಇಡುವುದು ಚಾಲ್ತಿಯಲ್ಲಿತ್ತಂತೆ, ಅದನ್ನು ಇಂದು ಕೈ ಬಿಟ್ಟಿದ್ದಾರೆ) ಈ ರೀತಿ ಕೂಡಿಸಿದ ತರುವಾಯ ಸೇರಿದ ಬಂಧು ಬಾಂಧವರಿಗೆ ತವರಿನವರೇ ಊಟ ಹಾಕುತ್ತಾರೆ. ಮಾರನೆ ದಿನ ಮಗಳನ್ನು ತವರಿಗೆ ಕರೆದುಕೊಂಡು ಹೋಗುತ್ತಾರೆ.

ಜನನ

ಸಾಮಾನ್ಯವಾಗಿ ಹೆರಿಗೆಯನ್ನು ಮನೆಯಲ್ಲಿಯೇ ಮಾಡಿಸಿಕೊಳ್ಳಲಾಗುತ್ತದೆ. ಕುಟುಂಬದ ಹಿರಿಯ ಹೆಂಗಸು ಅಥವಾ ಸಮುದಾಯದೊಳಗಿನ ಸೂಲಗಿತ್ತಿ ಹೆರಿಗೆಯನ್ನು ಮಾಡಿಸಿಕೊಳ್ಳುತ್ತಾರೆ. ಮಗು ಹೆರಿಗೆಯಾದ ತಕ್ಷಣ ಹೊಕ್ಕಳ ಹುರಿ ಕಟ್ಟಿ ಮಾಸವನ್ನು ಮಗುವಿನಿಂದ ಬೇರ್ಪಡಿಸುತ್ತಾರೆ. ತರುವಾಯ ತಾಯಿ ಮತ್ತು ಮಗು ಇಬ್ಬರಿಗೂ ಸ್ನಾನ ಮಾಡಿಸಲಾಗುತ್ತದೆ. ತರುವಾಯ ಹೆರಿಗೆ ಮಾಡಿಸಿಕೊಂಡ ಸೂಲಗಿತ್ತಿ ಮತ್ತು ಬಟ್ಟೆಗಳನ್ನು ಅವರಿಗೆ ಉಡಲು ಕೊಡುತ್ತಾರೆ. ನಂತರ ಅವರಿಗೆಲ್ಲ ಉಡಿತುಂಬದೇ ಹೋದರು ಸೆರಗಿನಲ್ಲಿ ಒಂದು ಸೇರು ಅಕ್ಕಿ ಅಥವಾ ಜೋಳವನ್ನು ಹಾಕಿ ಕಳುಹಿಸುತ್ತಾರೆ.

ಇತರರಂತೆ ಇವರೂ ಸಹ ಚಿಕ್ಕ ಗಡಿಗೆಯಲ್ಲಿ ಮಾಸವನ್ನು ತುಂಬಿ ತಲಬಾಗಿಲ ಮುಂಭಾಗದ ಬಲಭಾಗಕ್ಕೆ ಹೂಳುತ್ತಾರೆ. ಆದರೆ ಮಾಸದ ಗಡಗಿ ಹೂಳಿದ ಜಾಗವನ್ನು ಪೂಜೆ ಮಾಡುವುದಿಲ್ಲ.

ಹೆರಿಗೆಯಾದ ಮನೆಯನ್ನು ಇವರು ಸಹ ಮೈಲಿಗೆ ಮನೆ ಎಂದೆ ಪರಿಗಣಿಸುತ್ತಾರೆ. ಐದನೇ ದಿನಕ್ಕೆ ಶಲಿಗೈವ್ವನ ಪೂಜೆ ಮಾಡಲಾಗುತ್ತದೆ. ಶಲಿಗೆವ್ವನ ಪೂಜೆ ಎಂದರೆ ಮೊರದಲ್ಲಿ ಬೆಲ್ಲ, ಬೇಳೆ ಗೋಧಿಹಿಟ್ಟು ಇತ್ಯಾದಿ ಐದು ದಿವಸುಗಳನ್ನು ಇರಿಸಿ ಮಗು ಹುಟ್ಟಿದ ಜಾಗದಲ್ಲಿ ಇರಿಸುತ್ತಾರೆ. ತರುವಾಯ ಆ ಜಾಗದಲ್ಲಿ ಕೋಳಿಯೊಂದನ್ನು ಕೊಯ್ದು ಶಟ್ಟಿಗೆದ್ದನಿಗೆ ಸಂತೃಪ್ತ ಮಾಡಲಾಗುತ್ತದೆ. ಈ ಕೋಳಿಯನ್ನು ಮನೆಯಲ್ಲಿ ಅಡುಗೆ ಮಾಡಿ ಬಾಣಂತಿಗೆ ಮೊದಲು ಕೊಟ್ಟು ತರುವಾಯ ಎಲ್ಲರೂ ಊಟ ಮಾಡುತ್ತಾರೆ. ಅಂದೇ ನಾಮಕರಣವನ್ನು ಸಹ ಮಾಡುತ್ತಾರೆ. ಒಮ್ಮೊಮ್ಮೆ ಮಗು ಹುಟ್ಟಿದ ದಿನವೇ ಹೆಸರನ್ನು ಇಡುವುದುಂಟು.

ನಾಮಕರಣ: ಮಗುವಿಗೆ ನಾಮಕರಣವನ್ನು ಮಾಡುವುದಕ್ಕಾಗಿ ತೊಟ್ಟಿಲನ್ನು ಸಿಂಗರಿಸುತ್ತಾರೆ. ಕಾಯಂಕಾಲ ಕುಲದ ಯಜಮಾನ ಬಂದು ಮಗುವಿನ ಕಿವಿಯೊಳಗೆ ಇಸ್ಲಾಂ ಸಂಪ್ರದಾಯದ ಪ್ರಕಾರ ಮಂತ್ರಗಳನ್ನು ಹೇಳುತ್ತಾನೆ. ತರುವಾಯ ಮನೆಯಲ್ಲಿ ಮಗುವಿನ ಸೋದರತ್ತೆ ಅಥವಾ ಸೋದರಮಾವನು ಮೊದಲಿಗೆ ಮನೆ ದೇವರ ಹೆಸರು, ಹಿರಿಯರ ಹೆಸರು ಹೇಳಿ ತರುವಾಯ ಮಗುವಿಗೆ ಯಾವ ಹೆಸರು ಇಡಬೇಕೋ ಆ ಹೆಸರನ್ನು ಹೇಳುತ್ತಾನೆ. ಸಾಮಾನ್ಯವಾಗಿ ತಮ್ಮ ಮನೆ ದೇವರ ಹೆಸರನ್ನೇ ಇಡುವುದು ಹೆಚ್ಚಾಗಿ ಕಂಡುಬರುತ್ತದೆ. ಇತ್ತೀಚೆಗೆ ಆಧುನಿಕ ಇಸ್ಲಾಂ ಹೆಸರುಗಳನ್ನು ಮಕ್ಕಳಿಗೆ ಇಡಲಾಗುತ್ತಿದೆ.

ಸುನ್ನಿ: ಗಂಡು ಮಗು ಏಳು ಅಥವಾ ಎಂಟು ವರ್ಷಕ್ಕೆ ಬಂದಾಗ ಮಗುವಿಗೆ ಸುನ್ನಿ ಮಾಡಿಸುವ ಶಾಸ್ತ್ರ ಮಾಡಲಾಗುತ್ತದೆ. ಸಮುದಾಯದಲ್ಲಿ ಹಿರಿಯ ಅನುಭವಿ ವ್ಯಕ್ತಿ ಹರಿತವಾದ ಚಾಕುವಿನಿಂದ ಸುನ್ನಿ ಮಾಡುತ್ತಾನೆ. ಸುನ್ನಿಯ ತರುವಾಯ ಮಕ್ಕಳನ್ನು ೪೦ ದಿನಗಳ ವರೆಗೆ ಎಲ್ಲಿಯೂ ಹೊರಗೆ ಕಳಿಸುವುದಿಲ್ಲ. ಸುನ್ನಿ ಶಾಸ್ತ್ರ ಮಾಡಿದ ತರುವಾಯ ಹುಡುಗರಿಗೆ ಹೂಮುಡಿಸುವ ಕಾರ್ಯವನ್ನು ಸಹ ಮಾಡುತ್ತಾರೆ. ಸಾಮಾನ್ಯವಾಗಿ ಆ ದಿನಗಳಲ್ಲಿ ಮಕ್ಕಳಿಗೆ ಉತ್ತುತ್ತಿ, ಕೊಬ್ಬರಿ, ಬೆಲ್ಲಗಳಿಂದ ತಯಾರಿಸಿದ ಪೌಷ್ಟಿಕ ಆಹಾರವನ್ನು ತಿನ್ನಲು ಕೊಡುತ್ತಾರೆ. ಹಾಗೇ ಚಾಪಾತಿ, ಕೋಳಿ, ಕುರಿ ಮುಂತಾದ ಆಹಾರವನ್ನು ಕೊಡುತ್ತಾರೆ. ೪೦ನೇ ದಿನಕ್ಕೆ ಹುಡುಗರನ್ನು ಹೊರಗೆ ಕಳಿಸಲಾಗುತ್ತದೆ.

ಋತುಮತಿ: ಹುಡುಗಿ ಮೈನೆರದರೆ ಅವಳನ್ನು ಮೊದಲಿಗೆ ಬುಡಕಟ್ಟು ಸಂಪ್ರದಾಯದಂತೆ ಮನೆಯ ಹೊರಭಾಗಕ್ಕೆ ಚಿಕ್ಕ ಡೇರೆ ನಿರ್ಮಿಸಿ ಅದರಲ್ಲಿ ಬಿಡುತ್ತಿದ್ದರಂತೆ. ಆದರೆ ಇತ್ತೀಚೆಗೆ ಆ ರೀತಿ ಹುಡುಗಿಯನ್ನು ಹೊರಗೆ ಪ್ರತ್ಯೇಕವಾಗಿ ಡೇರೆ ರಚಿಸಿ ಅದರಲ್ಲಿ ಬಿಡುವುದಿಲ್ಲ. ಬದಲಿಗೆ ಮನೆಯೊಳಗೆ ಪಡಸಾಲೆಯ ಒಂದು ಮೂಲೆಯಲ್ಲಿ ಹುಡುಗಿಯನ್ನು ಕೂರಿಸುತ್ತಾರೆ. ಐದು ದಿನಗಳವರೆಗೆ ಹುಡುಗಿ ಈ ರೀತಿ ಮೂಲೆಯಲ್ಲಿ ಕೂತಿರಬೇಕು. ಅವಳ ಸೋದರತ್ತೆ ಅಥವಾ ಮನೆಯ ಹಿರಿಯ ಹೆಂಗಸು ಮುಟ್ಟು ನೀರು ಎರೆಯುತ್ತಾಳೆ. ಅವಳಿಗೆ ಹರಿಸಿಣ ಹಚ್ಚುತ್ತಾರೆ. ಮತ್ತು ಹರಿಸಿಣದ ಐದು ಉಂಡೆಗಳನ್ನು ಮಾಡಿ ಹಿಮ್ಮುಖವಾಗಿ ಗೋಡೆಗೆ ಎಸೆಯಲು ಹೇಳುತ್ತಾರೆ. ಐದು ದಿನದ ತರುವಾಯ ಹುಡುಗಿ ಹತ್ತಿರದ ಯಾವುದಾದರೂ ದೇವಸ್ಥಾನಕ್ಕೆ ಹೋಗಿ ಬರುತ್ತಾರೆ. ಇಲ್ಲವ ಹದಿನಾರು ದಿನಕ್ಕೆ ದೇವಸ್ಥಾನ ಅಥವಾ ಮಹಬೂಬ್ ಸುಬಾನಿ ಕಟ್ಟೆ, ದರ್ಗಾ ಯಾವುದಾದರೂ ಒಂದು ಪವಿತ್ರ ಸ್ಥಳಕ್ಕೆ ಹೋಗಿ ಬರುತ್ತಾಳೆ. ಹುಡುಗಿಗೆ ೧೬ನೇ ದಿನಕ್ಕೆ ಎಬ್ಬಿಸುವ ಶಾಸ್ತ್ರ ಮಾಡುತ್ತಾರೆ. ಎಬ್ಬಿಸುವ ಶಾಸ್ತ್ರವೆಂದರೆ ಅಂದು ಹುಡುಗಿಗೆ ಅಲಂಕರಿಸಿ ಹೂಮುಡಿಸುವ ಕಾರ್ಯವಿಟ್ಟುಕೊಳ್ಳುತ್ತಾರೆ. ಹುಡಿ ನೆಂಟರಾಗುವವರು ಅಂದು ಹೊಸಗೆಯನ್ನು ತರುತ್ತಾರೆ. ಅಕ್ಕಪಕ್ಕದ ಮನೆಯವರು ಸಹ ಮುಯ್ಯವನ್ನು ಕೊಡುವುದು ಇತ್ಯಾದಿ ಮಾಡುವ ಮೂಲಕ ತಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತಾರೆ.

ಮರಣ

ಚಪ್ಪರ ಬಂಧದಲ್ಲಿ ಯಾವುದೇ ವ್ಯಕ್ತಿ ಮರಣ ಹೊಂದಿದರೂ ಶವ ಸಂಸ್ಕಾರವನ್ನು ಮುಸ್ಲೀಂ ಪದ್ಧತಿಯಲ್ಲಿಯೇ ಮಾಡುತ್ತಾರೆ. ಶವ ಸಂಸ್ಕಾರಕ್ಕೆ ಸ್ಮಶಾನಕ್ಕೆ ಮಹಿಳೆಯರು ಹೋಗುವುದಿಲ್ಲ. ಪುರುಷರು ಮಾತ್ರ ಶವಸಂಸ್ಕಾರಕ್ಕೆ ಹೋಗುತ್ತಾರೆ. ಶವ ಸಂಸ್ಕಾರವಾದ ಮೂರು ದಿನಕ್ಕೆ ಕಾರ್ಯವೊಂದನ್ನು ಮಾಡಲಾಗುತ್ತದೆ.

ಮೂರುದಿನದ ಕಾರ್ಯ: ಸತ್ತ ವ್ಯಕ್ತಿಯ ಆಶೆಗಳು ಏನೇನಿವೆಯೋ ಅವುಗಳನ್ನು ಪೂರೈಸುವ ಕಾರ್ಯ ಇದಾಗಿದೆ. ಸತ್ತ ವ್ಯಕ್ತಿ ಆಪೇಕ್ಷೆಪಡುತ್ತಿದ್ದ ಆಹಾರ ಪರಾರ್ಥಗಳನ್ನೆಲ್ಲಾ ಅಂದು ಸ್ಮಶಾನಕ್ಕೆ ಒಯ್ಯಲಾಗುತ್ತದೆ. ಒಂದು ಪತ್ರಾವಳಿ ಎಲೆಯ ಮೇಲೆ ಎಲ್ಲಾ ಆಹಾರ ಪದಾರ್ಥಗಳನ್ನು ಇರಿಸಿ ಓದಿಕೆ ಮಾಡಲಾಗುತ್ತದೆ. ತರುವಾಯ ಕಾಗಿ ಬಂದು ಆಹಾರ ಪದಾರ್ಥವನ್ನು ಮುಟ್ಟಿದ ತರುವಾಯ ಮನೆಗೆ ಬಂದು ಎಲ್ಲರೂ ಊಟ ಮಾಡುತ್ತಾರೆ. ಸಾಮಾನ್ಯವಾಗಿ ಅವರು ಎಲ್ಲಾ ಬಗೆಯ ಮಾಂಸಹಾರಗಳನ್ನು ಮಾಡಿರುತ್ತಾರೆ.(ಹಂದಿ ಇವರಿಗೆ ನಿಷಿದ್ಧವಾದುದು)

ಒಂಭತ್ತು ದಿನದ ಕಾರ್ಯ: ವ್ಯಕ್ತಿ ಸತ್ತ ಒಂಭತ್ತನೇ ದಿನಕ್ಕೆ ಬಂಧು ಬಾಂಧವರೆಲ್ಲ ಸೇರುತ್ತಾರೆ. ಅಂದು ಯಾವುದಾದರೂ ಓತು ಅಥವಾ ಕುರಿಯನ್ನು ಕೊಯ್ಯುಲಾಗುತ್ತದೆ. (ಬ್ಯಾಟಿ ಮಾಡುವುದು) ಅಂದು ವಿಶೇಷವಾಗಿ ಹೆಣ ಹೊತ್ತವರಿಗೆ ಹೊತ್ತವರ ಹೊರೆ ಇಳಿಸಲಾಗುತ್ತದೆ. ಅಂದರೆ ಹೆಣ ಹೊತ್ತವರಿಗೆ ಸಂತೃಪ್ತಿಯಾಗುವವರೆಗೂ ಊಟ ಮಾಡಿಸಲಾಗುತ್ತದೆ. ತರುವಾಯ ಬಂಧು ಬಾಂಧವರೆಲ್ಲಾ ಊಟ ಮಾಡುತ್ತಾರೆ.

೪೦ ದಿನದ ಕಾರ್ಯ: ಈ ಕಾರ್ಯದಲ್ಲಿ ಸತ್ತವರ ಬಟ್ಟೆಗಳನ್ನು ಒಂದು ಗಂಟಿನಲ್ಲಿ ಕಟ್ಟಿ ಅವುಗಳಿಗೆ ಪೂಜೆ ಮಾಡಲಾಗುತ್ತದೆ. ಅಂದು ಸಹಿತ ಕುರಿ ಓತುವೊಂದನ್ನು ಕೊಯ್ದು ಸತ್ತ ವ್ಯಕ್ತಿಗೆ ಎಡೆ ಮಾಡಿ ಓದಿಕೆ ಮಾಡುತ್ತಾರೆ. ಪೂಜೆ ಮಾಡಿದ ಮಾರನೆ ದಿನ ವ್ಯಕ್ತಿಯ ಬಟ್ಟೆಗಳನ್ನು ದೂರ ಚಲ್ಲಿ ಬರುತ್ತಾರೆ.

ವರ್ಷದೊಳಗಿನ ಕಾರ್ಯ: ವ್ಯಕ್ತಿ ಸತ್ತು ಒಂದು ವರ್ಷ ತುಂಬುವದರೊಳಗೆ ಸತ್ತ ವ್ಯಕ್ತಿಯನ್ನು ಹಿರಿಯರೊಳಗೆ ಸೇರಿಸಿಕೊಳ್ಳುವ ಕಾರ್ಯ ಮಾಡುತ್ತಾರೆ. ಅಂದು ಸತ್ತ ವ್ಯಕ್ತಿಯ ಫೋಟೋ ಇತ್ಯಾದಿ ಇರಿಸಿ ಪೂಜಿಸಲಾಗುತ್ತದೆ. ಹಾಗೂ ಹೊಸ ಬಟ್ಟೆಗಳನ್ನು ತಂದು ಸತ್ತ ವ್ಯಕ್ತಿಗೆ ಏರಿಸಿ ಪೂಜೆ ಮಾಡಿ ಲೋಬಾನ ಹಾಕುತ್ತಾರೆ. ಅಂದು ಕೂಡ ಕುರಿ ಓತದ ಬ್ಯಾಟಿ ಮಾಡಿ ಬಂಧು ಬಾಂಧವರಿಗೆ ಊಟ ಮಾಡಿಸುತ್ತಾರೆ. ಈ ವರ್ಷದ ಕಾರ್ಯ ಮುಗಿದ ತರುವಾಯ ಸತ್ತ ವ್ಯಕ್ತಿಯ ಎಲ್ಲಾ ಕಾರ್ಯಗಳು, ಮುಗಿದಂತೆ ಎಂದು ಇವರು ತಿಳಿಯುತ್ತಾರೆ.

ದೈವಾಚರಣೆ, ದೇವರು

ಇಸ್ಲೀಂ ಪದ್ಧತಿಯ ಪ್ರಕಾರ ಪ್ರವಾದಿ ಮೊಹಮ್ಮದ್ ಪೈಗಂಬರನ್ನು ಹಾಗೂ ಅವರ ಅನುಯಾಯಿಗಳನ್ನು ಆರಾಧಿಸುವ ಇವರು ಅಲ್ಲಾಹ ಒಬ್ಬನೇ ದೇವರು ಎಂದು ತಿಳಿಸುವರು. ಆದರೆ ಅ ಅಲ್ಲಾಹನನ್ನು ಪ್ರತಿಯೊಂದು ಚರಾಚರ ವಸ್ತುವಿನಲ್ಲಿಯೂ ಕಾಣಲು ಪ್ರಯತ್ನಿಸುವರು.

ಇವರು ಇಸ್ಲಾಂ ಧರ್ಮಾನುಯಾಯಿಗಳಾದರೂ ಸೂಫಿ ಸಂತರನ್ನು ಹೆಚ್ಚು ಆರಾಧಿಸುತ್ತಾರೆ. ಯಮನೂರು ಉರ್ಸ್‌ಗೆ ಹೋಗುತ್ತಾರೆ. ತಮ್ಮ ಬೆಡಗುಗಳ ದೈವಗಳನ್ನು ಆಯಾ ಬೆಡಗಿನವರು ಪೂಜಿಸುತ್ತಾರೆ. ಉದಾಹರಣೆಗೆ ಪುಂಗಿವಾಲೆ ಬೆಡಗಿನವರಿಗೆ ನರಸಿಂಹ ಅಥವಾ ನರಸ್ಯಾ ದೈವವಾಗಿದೆ. ಇವರ ಹಿರಿಯರ ಮನೆಯಲ್ಲಿ ಆ ದೈವಗಳಿರುತ್ತವೆ. ಸಾಮಾನ್ಯವಾಗಿ ಬೆಳ್ಳಿಯಲ್ಲಿ ಆ ದೈವಗಳ ಮುಖಗಳನ್ನು ಮಾಡಿಸಿರುತ್ತಾರೆ. ಆ ಮುಖಗಳನ್ನು ವರ್ಷಕ್ಕೊಮ್ಮೆ ಹೊರತೆಗೆದು ಆ ಬೆಡಗಿನವರೆಲ್ಲಾ ಸೇರಿ ಪೂಜಿಸುತ್ತಾರೆ. ಇಲ್ಲವೇ ತಮಗೆ ಅನುಕೂಲವಾದಾಗ ಆಯಾ ಬೆಡಗಿನವರು ತಮ್ಮ ಹಿರಿಯರ ಮನೆಗೆ ಹೋಗಿ ತಮ್ಮ ಬೆಡಗಿನ ದೈವವನ್ನು ಪೂಜಿಸಿ ಬರುತ್ತಾರೆ. ಇದೇ ರೀತಿ ಇತರ ಬೆಡಗಿನವರಿಗೂ ಆಯಾ ದೈವಗಳಿವೆ. ತಿಮ್ಮಪ್ಪ, ಕಾಳಮ್ಮ, ಹುಲಿಗೆಮ್ಮ, ಹನುಮಂತ ಮುಂತಾದ ದೈವಗಳು ಬೆಡಗಿನ ದೈವಗಳಾಗಿವೆ. ಅವುಗಳನ್ನು ಆಯಾ ಬೆಡಗಿನವರು ಮಾತ್ರ ಪೂಜಿಸುತ್ತಾರೆ.

ಹಾಗೇ ಹನುಮಂತ ದೇವರು, ಮತ್ತು ಕ್ಷುದ್ರ ಸ್ತ್ರೀ ದೈವಗಳನ್ನು ಆರಾಧಿಸುವ ಕ್ರಮಮೂ ಇವರಲ್ಲಿದೆ. ಇತ್ತೀಚೆಗೆ ಸಂಸ್ಕೃತೀಕರಣದ ಪ್ರಭಾವದಿಂದಾಗಿ ತಮ್ಮ ಆರಾಧ್ಯ ದೈವಗಳನ್ನು ಆರಾಧಿಸುವುದು ಕಡಿಮೆಯಾಗುತ್ತಿದೆ. ಈ ಮುಸ್ಲೀಂರು ಆಚರಿಸುವ ರಂಜಾನ್, ಈದ್ ಮಿಲಾದ್, ಬಕ್ರೀದ್ ಮುಂತಾದ ಹಬ್ಬಗಳೊಂದಿಗೆ ಮಾಬುಸುಭಾನಿ ಗ್ಯಾರ್ವಿಯನ್ನು ಸಹ ಮಾಡುತ್ತಾರೆ. ಗ್ಯಾರ್ವಿಗೆ ಕುರಿಯನ್ನು ಕೊಯ್ದು ಹಬ್ಬ ಮಾಡುತ್ತಾರೆ. ಹಾಗೇ ಮೊಹರಂ ಆಚರಣೆ ಇವರಲ್ಲಿ ಕಂಡುಬರುತ್ತದೆ. ಸೆಟ್ಲಮೆಂಟನೊಳಗಿರುವ ಮಸೀದಿಗಳಲ್ಲಿ ಈ ಸಮುದಾಯದವರೆ ಮೌಲ್ವಿಗಳಾಗಿ ಕಾರ್ಯ ನಿರ್ವಹಿಸುತ್ತಾರೆ. ಮೊಹರಂ ಕೇವಲ

ಚಪ್ಪರ ಬಂಧರು ಮಾತ್ರವಲ್ಲ. ಇಡೀ ಸೆಟ್ಲಮೆಂಟ್ ಜನವೇ ಮೊಹರಂ ಹಬ್ಬವನ್ನು ತುಂಬಾ ಸಂಭ್ರಮದಿಂದ ಮಾಡುತ್ತಾರೆ. ಇದರಾಚೆಗೆ ಬೇರೆ ಯಾವ ಹಬ್ಬಗಳನ್ನು ಇವರು ಮಾಡಿದಂತೆ ಕಂಡುಬರುವುದಿಲ್ಲ.

ಕಂಜರ್ ಭಾಟ್

ಸಮುದಾಯದ ಹೆಸರು, ಔಚಿತ್ಯ

ಭಾರತದ ವಿವಿಧ ಕಡೆಗೆ ನೆಲೆಸಿರುವ ಕಂಜರಭಾಟ ಸಮುದಾಯವು ತನ್ನದೇ ಆದ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಿಕೊಂಡು ಬಂದಿದೆ. ಈ ಜನ ಉಳಿದ ಸಮುದಾಯಗಳೊಂದಿಗೆ ಸಂಪರ್ಕ ಬೆಳೆಸಿಕೊಳ್ಳದೆ ಪ್ರತ್ಯೇಕವಾಗಿ ಉಳಿದುಕೊಂಡಿದೆ. ಕರ್ನಾಟಕದಲ್ಲಿ 'ಕಂಜರಭಾಟ' ಸಮುದಾಯವನ್ನು 'ಭಾಟ', 'ಲೋಲ್ಯಾರ' ಮುಂತಾದ ಹೆಸರುಗಳಿಂದಲೂ ಕರೆಯುತ್ತಾರೆ. ಭಾರತದ ತುಂಬೆಲ್ಲ ಹರಡಿಕೊಂಡಿರುವ ಇವರಿಗೆ ಭಿನ್ನ ಭಿನ್ನ ಪ್ರದೇಶಗಳಲ್ಲಿ ಬೇರೆ ಬೇರೆ ನಾಮಗಳಿಂದ ಕರೆಯುತ್ತಾರೆ (ಕೋಷ್ಟಕ ೧.೧).

ಕೋಷ್ಟಕ ೪.೫: ಕಂಜರಭಾಟರ ರಾಜ್ಯ ಮತ್ತು
ಕೇಂದ್ರಾಡಳಿತ ಪ್ರದೇಶವಾರು ಪರ್ಯಾಯ ಪದಗಳ ಪಟ್ಟಿ

ಕ್ರಸಂ.	ರಾಜ್ಯ, ಕೇಂದ್ರ ಆಡಳಿತ ಪ್ರದೇಶ	ಪರ್ಯಾಯ ಪದಗಳು
೧	ಅಂಡಮಾನ-ನಿಕೋಬಾರ್	ಭಾಂತು, ಸಾಂಸಿ
೨	ಆಂಧ್ರ ಪ್ರದೇಶ	ನಟ್, ಸಾಂಸಿ
೩	ಬಿಹಾರ	ಬೇಡಿಯ, ಕಂಜರ, ನಟ್
೪	ಛತ್ತೀಸಗಡ್	ಕಂಜರ, ನಟ್, ಸಾಂಸಿ
೫	ದೆಹಲಿ	ಬೇಡಕುಟ, ಕಂಜರ, ಸಾಂಸಿ
೬	ಗುಜರಾತ	ಅಡೋಡಿಯ, ಛಾರಾ, ಸಾಂಸಿ
೭	ಹರಿಯಾಣ	ಬೇಡಕುಟ, ನಟ್, ಸಾಂಸಿ
೮	ಹಿಮಾಚಲ ಪ್ರದೇಶ	ಬೇಡಕುಟ, ನಟ್, ಸಾಂಸಿ
೯	ಜಮ್ಮು-ಕಾಶ್ಮೀರ	ಭಾಂತು, ಧವಳೆ, ಸಾಂಸಿ
೧೦	ಕರ್ನಾಟಕ	ಭಾಟ, ಕಂಜರಭಾಟ, ಲೋಲ್ಯಾರ
೧೧	ಮಧ್ಯ ಪ್ರದೇಶ	ಭಾಂತು, ಬೇಡಿಯ, ಕಂಜರ, ನಟ್, ಸಾಂಸಿ
೧೨	ಮಹಾರಾಷ್ಟ್ರ	ಕಂಜರ, ಕಂಜರಭಾಟ, ಕಾರವಾನ, ನಟ್, ಸಾಂಸಿ,
೧೩	ಒರಿಸ್ಸಾ	ಭಾಟ, ಬೇಡಿಯ, ಸಾಂಸಿ
೧೪	ಪಂಜಾಬ	ಬೇಡಕುಟ, ನಟ್, ಸಾಂಸಿ
೧೫	ಪಶ್ಚಿಮ ಬಂಗಾಲ	ಭಾಂತು, ಬೇಡಿಯ, ಕಂಜರ, ನಟ್

೧೬	ರಾಜಸ್ಥಾನ	ಭಾಂತು, ಬೇಡಿಯ, ಕಂಜರ, ಕಪಾಡಿಯಾ, ನಟ್, ಸಾಂಸಿ
೧೭	ತ್ರಿಪುರಾ	ಸಾಂಸಿ
೧೮	ಉತ್ತರ ಪ್ರದೇಶ	ಭಾಂತು, ಬೇಡಿಯ, ಧವಳೆ ಭಾಂತು, ಕಂಜರ, ಕಪಾಡಿಯ, ನಟ್, ಸಾಂಸಿ, ಸಾಂಸಿಯ

ಭಾರತದಲ್ಲಿ ಪಸರಿಸಿರುವ ಕಂಜರಭಾಟರ ಪರ್ಯಾಯ ಪದಗಳೆಲ್ಲಮೂ ಒಂದೇ ಮೂಲದವಾಗಿದ್ದರೂ ಇವರು ಮಾಡುವ ಕಸುಬುಗಳಲ್ಲಿ ಭಿನ್ನತೆ ಕಂಡುಬರುತ್ತದೆ. ಈ ಕಸುಬುಗಳ ಹಿನ್ನೆಲೆಯಲ್ಲಿ ಇವರಿಗೆ ಬೇರೆ ಬೇರೆ ಹೆಸರುಗಳು ಬಳಕೆಯಲ್ಲಿವೆ. ಆದರೆ ಇವರ ಭಾಷೆ, ವೇಷ-ಭೂಷಣ, ಆಚಾರ-ವಿಚಾರ, ಆಹಾರ-ವಿಹಾರ, ಬಳಿಗಳಿಂದ ಇವರೆಲ್ಲರೂ ಕಂಜರಭಾಟರೆಂದು ಗುರುತಿಸಲು ಸಾಧ್ಯ.

ಕರ್ನಾಟಕದಲ್ಲಿ ಅಭುವಾ, ಬಾಗಡ, ಭಾಟುಂಗೆ, ಇಂದರಾ, ಗಾರಿಯೆ, ಘಮಂಡಿ, ಘಾಸಿ, ಕರಾಳೆ, ಮಲಕೆ, ಮಾಛರೆ, ಮೀಣಾ, ನವಲ್ಲಾ, ನೆಥಲೆ, ರವಳೆ, ತಮಾಯಚಿ, ಮುಂತಾದ ಮನೆತನದ ಅಡ್ಡ ಹೆಸರುಗಳಿಂದಲೂ ಈ ಸಮುದಾಯವನ್ನು ಗುರುತಿಸಲಾಗುತ್ತದೆ.

ಪದ ನಿಷ್ಪತ್ತಿ : ಕಂಜರಭಾಟ ಎನ್ನುವುದು ರಾಜಸ್ಥಾನಿ ಸ್ಥಳೀಯ ಭಾಷೆಯಲ್ಲಿಯ ಎರಡು ಪದಗಳ ಜೋಡುನುಡಿ. ಕಂಜರ ಎಂದರೆ ಕಬ್ಬಿಣದ ಕತ್ತಿ, ಚಾಕು ಎಂದರ್ಥ. ಭಾಟ್ ಎಂದರೆ ಕೀಳು ಕುಲವೆಂದರ್ಥ. ಕಂಜರಭಾಟ ಎಂದರೆ ಕಬ್ಬಿಣದ ಕತ್ತಿ ಚಾಕುಗಳನ್ನು ತಯಾರಿಸುವ ಕೀಳು ಕುಲದವರೆಂದು ಅರ್ಥೈಸಲಾಗಿದೆ. ಕಿಟ್ಟೆಲರ ಅರ್ಥಕೋಶದಲ್ಲಿ ಕಂಜರ್ ಎಂಬ ಪದಕ್ಕೆ ಮೌನ (ಕಿಟ್ಟೆಲ್,ಎಫ್:೧೯೯೩:೩೩೫) ಮತ್ತು ಭಾಟ ಎಂಬ ಪದಕ್ಕೆ ಬಣ್ಣ, ಕೂಲಿ, ಬಾಡಿಗೆ (ಅದೇ:೧೧೬೮) ಹಾಗೂ ಇವರ ಸಾಸಿ ಎಂಬ ಪದಕ್ಕೆ ಸಾಹಸಿ (ಅದೇ:೧೫೫೦)ಎಂಬ ಅರ್ಥಗಳನ್ನು ನೀಡಿದ್ದಾರೆ. ಪ್ರಾಯಶಃ ಈ ಸಮುದಾಯದವರು ಹಿಂದೆ ರಾಜ್ಯಗಳ ರಕ್ಷಣೆಗೆ ಅವಶ್ಯಕವಾದ ಕಬ್ಬಿಣದ ಕತ್ತಿ, ಗುರಾಣಿ ಮುಂತಾದ ಯುದ್ಧೋಪಕರಣಗಳನ್ನು ತಯಾರಿಸುವ ಸಮುದಾಯವಾಗಿರಬೇಕು. ಹೀಗಾಗಿ ಈ ಸಮುದಾಯಕ್ಕೆ ಕಂಜರಭಾಟ್ ಎಂದು ಕರೆಯಲ್ಪಟ್ಟಿರಬೇಕು. ಯುದ್ಧೋಪಕರಣಗಳನ್ನು ತಯಾರಿಸುತ್ತಿದ್ದ ಈ ಸಮುದಾಯದ ಪುರುಷರು ರಾಜಸ್ಥಾನಿ ಅರಸರ ಸೈನಿಕರಾಗಿಯೂ ಕಾರ್ಯನಿರ್ವಹಿಸುತ್ತಿದ್ದಿರಬಹುದೆನಿಸುತ್ತದೆ. ಹೀಗಾಗಿ ರಾಜಸ್ಥಾನದಲ್ಲಿ ಕಂಜರಭಾಟರನ್ನು ಸಾಂಸಿಗಳು ಎಂದು ಸಹ ಕರೆಯಲಾಗುತ್ತದೆ. ಪಂಜಾಬಿನ ಅಮೃತಸರದ ಪರಿಸರದಲ್ಲಿ ಇವರು ಇಂದಿಗೂ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಇವರ ಮಾತೃಭಾಷೆ 'ಸಾಂಸಿಯಾ' ಎಂದು ಭಾಷಾತಜ್ಞ ಗುಸ್ಸೈಂ ಅವರು ದಾಖಲಿಸಿದ್ದಾರೆ.

ಕಂಜರಭಾಟರಲ್ಲಿಯ ವೈವಾಹಿಕ ಸ್ಥಾನಮಾನ

ಕಂಜರಭಾಟರಲ್ಲಿ ವಿವಾಹಿತ ಪುರುಷರು ೪೦೨ ಮತ್ತು ಸ್ತ್ರೀಯರು ೪೩೮ ಒಟ್ಟು ೮೪೦ ವಿವಾಹಿತರು ಕಂಡುಬರುತ್ತಾರೆ. ಇವರಲ್ಲಿ ಅವಿವಾಹಿತರು ಒಟ್ಟು ೧೦೫೮ ಇದ್ದು ಅದರಲ್ಲಿ ಪುರುಷರು ೫೬೩ ಮತ್ತು

೫೨೧ ಸ್ತ್ರೀಯರಿರುವರು. ಇವರಲ್ಲಿ ವಿಧುರರಿಗಿಂತ ವಿಧವೆಯರ ಪ್ರಮಾಣವು ಅಧಿಕವಾಗಿರುವುದು. ಮತ್ತು ೬೮ರಷ್ಟಿದ್ದು. ಇಲ್ಲಿ ವಿಧರರ ಪ್ರಮಾಣಕ್ಕಿಂತ ವಿಧವರೆಯ ಪ್ರಮಾಣವೇ ಹೆಚ್ಚಾಗಿರುವುದು ಹಾಗೂ ವೈವಾಹಿಕ ಬಂಧನದಿಂದ ಬೇರ್ಪಟ್ಟ ಪುರುಷರೊಬ್ಬರು ದಾಖಲಾಗಿರುವರು.

ಕೋಷ್ಟಕ ೪.೬: ಸಮೀಕ್ಷೆಗೊಳಪಟ್ಟ ಕಂಜರಭಾಟರ ವೈವಾಹಿಕ ಸ್ಥಾನಮಾನ

ವೈವಾಹಿಕ ಸ್ಥಾನಮಾನ	ಪುರುಷ	ಸ್ತ್ರೀ	ಒಟ್ಟು
ವಿವಾಹಿತರು	೪೦೨	೪೩೮	೮೪೦
ಅವಿವಾಹಿತರು	೫೬೩	೫೨೧	೧೦೮೪
ವಿಧುರ ವಿಧವೆಯರು	೨	೬೬	೬೮
ಬೇರ್ಪಟ್ಟವರು	೧	–	೧

ಬೆಡಗುಗಳು

ಅಲೆಮಾರಿ ಸಮುದಾಯಗಳು ಸಾಮಾಜಿಕ ವ್ಯವಸ್ಥೆ ಮತ್ತು ಆಡಳಿತ ವ್ಯವಸ್ಥೆಯನ್ನು ತಮ್ಮದೇ ಆದ ರೀತಿಯಲ್ಲಿ ಮಾಡಿಕೊಂಡಿರುತ್ತಾರೆ. ಸಾಮಾನ್ಯವಾಗಿ ಬುಡಕಟ್ಟುಗಳು ತಮ್ಮ ವಂಶದ ಪರಿಶುದ್ಧತೆಗಾಗಿ ಕುಲಗೋತ್ರ, ಬೆಡಗುಗಳನ್ನು ರೂಪಿಸಿಕೊಂಡಿರುತ್ತಾರೆ. ಕಂಜರಭಾಟ ಸಮುದಾಯದಲ್ಲಿ ಸಹ ಬೆಡಗುಗಳನ್ನು ಕಾಣಬಹುದಾಗಿದೆ.

ಕಂಜರಭಾಟ ಸಮಾಜದಲ್ಲಿ ವೈವಾಹಿಕ ಸಂಬಂಧ ಬೆಳೆಸುವಾಗ ಬೆಡಗು ಮತ್ತು ಗೋತ್ರಗಳ ಬಗೆಗೆ ವಿಚಾರಿಸಲಾಗುವುದು. ಇವರಲ್ಲಿ ಎರಡು ಬೆಡಗುಗಳು ಮುಖ್ಯವಾಗಿವೆ. ಅವು 'ಮಾಲ್ಹಾ' ಮತ್ತು 'ಬಿಡ್ಡು' ಪಂಗಡಗಳು. ಈ ಎರಡೂ ಪಂಗಡಗಳನ್ನು ಸೇರಿಸಿ ಸೈಸಮಲ್ ಎಂದು ಕರೆಯುತ್ತಾರೆ. ಮಾಲ್ಹಾದಲ್ಲಿ ಒಂಭತ್ತು ಜಾತಿಗಳಿದ್ದು ಇವರೆಲ್ಲರು ಅಣ್ಣ-ತಮ್ಮಂದಿರು ಎಂದು ಭಾವಿಸಲಾಗುತ್ತದೆ. ಇವರಲ್ಲಿ ವೈವಾಹಿಕ ಸಂಬಂಧಗಳನ್ನು ಬೆಳೆಸಲು ಬರುವುದಿಲ್ಲ. ಒಂದು ವೇಳೆ ಅವರು ತಮ್ಮ ತಮ್ಮೊಳಗೆ ಸಂಬಂಧ ಬೆಳೆಸಿಕೊಂಡರೆ ಅದಕ್ಕೆ ಸಮುದಾಯದಲ್ಲಿ ಮಾನ್ಯತೆ ದೊರೆಯುವುದಿಲ್ಲ. ಅಂಥ ಸಂಬಂಧಕ್ಕೆ ಪಾಪವೆಂದು ಪರಿಗಣಿಸಲಾಗುವುದು. ಅದೇ ರೀತಿ 'ಬಿಡ್ಡು'ದಲ್ಲಿಯೂ ಒಂಭತ್ತು ಜಾತಿಗಳುಂಟು. ಇವರೆಲ್ಲರೂ ಸಹೋದರ ಸಂಬಂಧಗಳಾಗಿದ್ದಾರೆ. ಇವರಲ್ಲಿಯೂ ವೈವಾಹಿಕ ಸಂಬಂಧಗಳು ಮಾಡಲು ಬರುವುದಿಲ್ಲ. ಒಂದು ವೇಳೆ ಇವರಲ್ಲಿ ಅನ್ಯೆತಿಕ ಸಂಬಂಧವಾಗಲಿ, ವೈವಾಹಿಕ ಸಂಬಂಧವಾದರೆ ಸಮುದಾಯದಲ್ಲಿ ಅದಕ್ಕೆ ಅನುಮತಿ ಇಲ್ಲ. ಇಂಥ ಸಂಬಂಧಗಳು ಪಾಪವೆಂದೇ ಪರಿಗಣಿಸಲಾಗುವುದು. ಮಾಲ್ಹಾದವರು ಬಿಡ್ಡು ಜೊತೆಗೆ ಬಿಡ್ಡುದವರು ಮಾಲ್ಹಾ ಜೊತೆಗೆ ವೈವಾಹಿಕ ಸಂಬಂಧವನ್ನು ಬೆಳೆಸಿ ವಂಶಾವಳಿ ಬೆಳವಣಿಗೆ ಮಾಡಿಕೊಳ್ಳುತ್ತಾರೆ. ಈ ಪದ್ಧತಿ ಸಮುದಾಯದಲ್ಲಿ ತುಂಬಾ ಪೂರ್ವದಿಂದಲೆ ಜಾರಿಯಲ್ಲಿದೆ. ಇವರಲ್ಲಿ ರಕ್ತ ಸಂಬಂಧ ಇರುವವರ ಜೊತೆಗೆ ಸಂಬಂಧ ಬೆಳೆಸಿಕೊಳ್ಳುವುದಿಲ್ಲ. ರಕ್ತ ಸಂಬಂಧ ಇಲ್ಲದವರ ಜೊತೆಗೆ ಹೊಸ ಸಂಬಂಧವನ್ನು ಮಾಡಿಕೊಳ್ಳುವ ಪದ್ಧತಿ ಉಂಟು.

ಕಂಜರಭಾಟ ಸಮಾಜದಲ್ಲಿ ಎರಡು ಬೆಡಗುಗಳು ೧. ಮಾಲ್ಹಾ ೨. ಬಿಡ್ಡು ಹೀಗೆ ಎರಡು ಬೆಡಗುಗಳು ಅವುಗಳಲ್ಲಿರುವ ಉಪ ಬೆಡಗುಗಳು ಈ ಕೆಳಗಿನಂತಿವೆ.

ಮಾಲ್ಹಾ	ಬಿಡ್ಡು
೧. ತಮಾಯಚಿ (ಬಾಗಡ)	೧. ಗಾಗಡ
೨. ಮೀಣಾ	೨. ಬಾಟ್ಟು
೩. ಅಭುವಾ	೩. ಕರಾಳಾ
೪. ಗುಮಾನೆ	೪. ರವಳೆ
೫. ಕಾಂಬಳ	೫. ಟಿಡ್ಡಾ
೬. ಮಲಕಿಯಾ	೬. ಇಂದರಾ
೭. ಭಜರಂಗ	೭. ಮಾಥರ
೮. ಗಾರಿಯೆ	೮. ನೆಥಲೆ
೯. ಡುಂಗರ	೯. ಘಮಂಡಿ

ಇವು ಕಂಜರಭಾಟ ಸಮುದಾಯದ ಮುಖ್ಯ ಉಪ ಬೆಡಗುಗಳು

ವಿವಾಹ (ಬ್ಯಾಹ)

ಆಯ್ಕೆ ಪ್ರಕ್ರಿಯೆ : ಕಂಜರಭಾಟ ಸಮುದಾಯದಲ್ಲಿ ಸಾಮಾನ್ಯವಾಗಿ ೧೪-೧೫ನೇ ವಯಸ್ಸಿನಲ್ಲಿಯೆ ಮದುವೆ ಮಾಡಿಬಿಡುತ್ತಾರೆ. ಈ ಪದ್ಧತಿ ಇಂದಿಗೂ ನಡೆಯುತ್ತದೆ. ಇವರು ಅಕ್ಕನ ಮಗಳನ್ನು ಮದುವೆ ಮಾಡಿಕೊಳ್ಳುವುದಿಲ್ಲ. ಸಂಬಂಧ ಬೆಳೆಸಬೇಕಾದರೆ ಬೆಡಗು ನೋಡಿ ಸಂಬಂಧ ಬೆಳೆಸುತ್ತಾರೆ. ಮ್ಹಾಲಾ ಬೆಡಗುಗಳು ಬಿಡ್ಡು ಬೆಡಗುಗಳೊಂದಿಗೆ ಪರಸ್ಪರ ವೈವಾಹಿಕ ಸಂಬಂಧಗಳನ್ನು ಮಾಡಬಹುದಾಗಿದೆ.

ನಿಶ್ಚಿತಾರ್ಥ (ಮಾಂಗ) : ನಿಶ್ಚಯ ಕಾರ್ಯಕ್ಕಾಗಿ ವಧು-ವರರ ಎರಡೂ ಕಡೆಯವರು ದೈವಕ್ಕೆ ತಲಾ ಐವತ್ತು ರೂಪಾಯಿಗಳನ್ನು ಕೊಡುತ್ತಾರೆ. ದೈವದವರೆಲ್ಲರು ಹೆಣ್ಣಿನ ಮನೆಗೆ ಬಂದು ಸೇರುವರು. ಗಂಡಿನವರು ತಮ್ಮ ಮನೆಯಿಂದ ಹೆಣ್ಣಿನವರ ಮನೆಗೆ ಬರುತ್ತಾರೆ. ಎರಡೂ ಕಡೆಯವರು ಒಪ್ಪಿದ ಮೇಲೆ ಅವರ ಬೆಡಗುಗಳ ಬಗೆಗೆ ವಿಚಾರಿಸಿ ನಿಶ್ಚಿತಾರ್ಥ ಕಾರ್ಯ ನಡೆಯುವುದು. ಮೊದಲು ದೈವದವರು ಎರಡು ರೂಪಾಯಿ ಪಂಚಾಯಿತಿಯ ಶುಲ್ಕ ತೆಗೆದುಕೊಳ್ಳುತ್ತಿದ್ದರು. ಆದರೆ ಈಗ ಎರಡು ಕಡೆಯವರಿಂದ ೫೦೦ ರೂಪಾಯಿಗಳು ಪಂಚಾಯಿತಿ ಶುಲ್ಕ ಪಡೆದು ಮುಂದಿನ ಮಾತುಕತೆ ಪ್ರಾರಂಭ ಮಾಡುತ್ತಾರೆ. ಮೊದಲು ಹೆಣ್ಣಿಗೆ ತೆರವು ಕೊಡುತ್ತಾರೆ. ೨-೩ ನೂರು ವರ್ಷಗಳ ಹಿಂದೆ ಹೆಣ್ಣಿನ ಬೆಲೆ ೧೨೦೦ ರೂ.ಗಳವರೆಗೆ ತೆರವು ಕೊಡುತ್ತಿದ್ದರಂತೆ. ಈ ಪರಂಪರೆ ಇಂದಿಗೂ ಇದೆ. ಅದರಲ್ಲಿ ಮದುವೆ ಸಮಯಕ್ಕೆ ೫೨೫ ರೂಪಾಯಿ ತೆರ ನೀಡಬೇಕು. ಗಂಡಿನವರು ಅತ್ತೆಗೆ ಏಳು ಸೀರೆ ಕೊಡಬೇಕು. ಮದುಮಗಳ ಅಕ್ಕ-ತಂಗಿಯರಿಗೆ ಬಳೆಯನ್ನುಡಿಸಬೇಕು. ಮದುವೆಯ ಖರ್ಚು ಎರಡು ಕುಟುಂಬಗಳು ಹಂಚಿಕೊಳ್ಳಬೇಕು.

ಗಂಡಿನವರು ಹೆಣ್ಣುಮಗಳಿಗೆ ಹೊಸ ಸೀರೆಯನ್ನು ಉಡಿಸಿ ಹಸಿರು ಬಳೆಗಳನ್ನು ತೊಡಿಸಿ ಹುಡುಗ ಹುಡುಗಿಗೆ ಮಣೆಯ ಮೇಲೆ ಕೂರಿಸಿ ಹುಡುಗನ ಕೈಯಿಂದ ಹುಡುಗಿಯ ಹಣೆಗೆ ಕುಂಕುಮ ಹಚ್ಚಿಸುವರು. ಮುತ್ತೈದೆಯರು ಆರತಿ ಮಾಡಿ ಎಲ್ಲರಿಗೂ ಸಕ್ಕರೆಯನ್ನು ಹಂಚುವ ಮೂಲಕ ನಿಶ್ಚಿತಾರ್ಥ ಕಾರ್ಯವು ನಡೆಯುವುದು.

ವರದಕ್ಷಿಣೆ (ದಹೆಜ್) : ಕಂಜರಭಾಟ ಸಮುದಾಯದಲ್ಲಿ ವರದಕ್ಷಿಣೆಯ ಪದ್ಧತಿ ಇರುವುದಿಲ್ಲ..

ವಿವಾಹ (ಬ್ಯಾಹ) : ಕಂಜರಭಾಟ ಸಮುದಾಯದಲ್ಲಿ ಮದುವೆ ಹೆಣ್ಣಿನ ಮನೆಯ ಮುಂದೆ ನಡೆಯುವುದು. ಮದುಮಗಳ ಮನೆಯ ಮುಂದೆ ದೊಡ್ಡ ಹಂದರ ಹಾಕುವರು. ಮದುಮಗನ ಮನೆಯ ಮುಂದೆ ಸಣ್ಣ ಹಂದರ ಹಾಕುವರು. ಹಂದರ ಹಾಕುವಾಗ ಧಾರ್ಮಿಕ ಕಾರ್ಯಗಳನ್ನು ಮಾಡಲು ಅವರ ಕುಲದ ಗುರುಗಳು (ಗೊಡ್ಡಿವಾನ) ಇರುತ್ತಾರೆ. ಅವರಿಗೆ ಒಂದು ರೂಪಾಯಿ ನಾಲ್ಕಾಣೆ ಕೊಟ್ಟು ಹಂದರದ ಕುಣಿಯನ್ನು ಅವರ ಕೈಯಿಂದ ತೋಡಿಸಿ ಹಂದರ ಹಾಕುತ್ತಾರೆ. ಅಂದು ಮೊದಲು ತಮ್ಮ ಕುಲದೇವತೆಯ ಪೂಜೆಯನ್ನು ಮಾಡುತ್ತಾರೆ. ಮೊದಲು ವರನ ಮನೆಯಲ್ಲಿ ವರನಿಗೆ ಅರಿಷಿಣ ಹಚ್ಚಿ ಸ್ನಾನ ಮಾಡಿಸುವರು. ಮದುಮಗನ ಅತ್ತಿಗೆ ವರನ ಕೈಗೆ ಎಲೆ, ಅರಿಷಿಣ ಬೇರಿನ ಕಂಕಣವನ್ನು ಕಟ್ಟುವರು. ಅವಳಿಗೆ ಒಂದು ರೂಪಾಯಿ ನಾಲ್ಕಾಣೆಯನ್ನು ಕೊಡುವರು. ಮದುಮಗನ ದೊಡ್ಡಪ್ಪ ಇಲ್ಲವೇ ಚಿಕ್ಕಪ್ಪ ಹೆಗಲ ಮೇಲೆ ಹೊತ್ತು ಮದುವೆ ಮಂಟಪಕ್ಕೆ ತಂದು ವರನನ್ನು ಮಣೆಯ ಮೇಲೆ ಕೂರಿಸುವನು. ಅವನಿಗೂ ಸಹ ಒಂದು ರೂಪಾಯಿ ನಾಲ್ಕಾಣೆಯನ್ನು ನೀಡಲಾಗುತ್ತದೆ. ದೈವದವರು ಮದುಮಗನ ಮುಂದೆ ಬಂದು ಕುಳಿತುಕೊಳ್ಳುವರು. ಅವರ ಮುಂದೆ ಎಲೆ ಅಡಿಕೆ, ತಂಬಾಕು ತುಂಬಿದ ಹರಿವಾಣ ಇಡಲಾಗಿರುತ್ತದೆ. ಇದಲ್ಲದೆ ಮದುಮಗಳ ತಾಯಿಗೆ ಕೊಡಬೇಕಾದ ಏಳು ಸೀರೆಗಳನ್ನು ಇಟ್ಟಿರುವ ತಟ್ಟೆ ಮತ್ತು ಆರತಿಯನ್ನು ಮದುಮಗನ ಮಗ್ಗಲಿಗೆ ತಂದು ಇಡುತ್ತಾರೆ.

ಇನ್ನೊಂದು ಕಡೆಗೆ ಮದುಮಗಳಿಗೆ ಹಸಿರು ಬಳೆಗಳನ್ನು ತೊಡಿಸಿ ಮುತ್ತೈದೆಯರು ಅರಿಷಿಣ ಹಚ್ಚಿ, ಸ್ನಾನ ಮಾಡಿಸುವರು. ಮದುಮಗಳ ಅತ್ತಿಗೆ ಹೆಣ್ಣಿನ ಕೈಗೆ ಎಲೆ ಅರಿಷಣ ಬೇರಿನ ಕಂಕಣವನ್ನು ಕಟ್ಟುವಳು. ಅವಳಿಗೂ ಒಂದು ರೂಪಾಯಿ ನಾಲ್ಕಣೆ ಕೊಡುವರು. ವಧುವನ್ನು ಅವಳ ದೊಡ್ಡಪ್ಪನಾಗಲಿ ಇಲ್ಲವೆ ಚಿಕ್ಕಪ್ಪನಾಗಲಿ ಹೆಗಲ ಮೇಲೆ ಹೊತ್ತು ಮನೆಯ ಒಳಗೆ ಒಯ್ಯುವರು. ಅವರಿಗೂ ಸಹ ೧.೨೫ ಪೈ. ರೂಪಾಯಿ ಕೊಡುವರು.

ನಂತರ ಮದುವೆಯ ವಿಧಿಗಳು ಪ್ರಾರಂಭವಾಗುವುದು. ಮದುವೆಯಲ್ಲಿ ಪುರೋಹಿತಿಕೆಗೆ ಬ್ರಾಹ್ಮಣರಾಗಲಿ, ಪೂಜಾರಿಗಳನ್ನಾಗಲಿ ಕರೆಯಿಸುವುದಿಲ್ಲ. ಸಮುದಾಯದ ಹಿರಿಯರೆ ಮದುವೆಯನ್ನು ಮಾಡಿಸುತ್ತಾರೆ. ಮದುಮಗನನ್ನು ಮೆರವಣಿಗೆಯ ಮೂಲಕ ಮದುಮಗಳ ಮನೆಗೆ ಕರೆದುಕೊಂಡು ಬರುತ್ತಾರೆ. ಮದುಮಗನ ಅಕ್ಕ ಇಲ್ಲವೇ ತಂಗಿ ಆರತಿಯನ್ನು ಹಿಡಿದುಕೊಂಡು ಮದುಮಗನ ಜೊತೆಗೆ ಬರುತ್ತಾಳೆ. ಮದುಮಗಳ ಹಂದರ ಮುಟ್ಟುವವರೆಗೆ ಆರು ಸಲ ಆರತಿ ಮಾಡುತ್ತಾರೆ. ಹಂದರದಲ್ಲಿ ಎರಡು ಮಣೆಗಳನ್ನು ಇಟ್ಟು

ಮದುವೆ ವ್ಯವಸ್ಥೆ ಮಾಡಿರುತ್ತಾರೆ. ಒಂದು ಮಣೆಯ ಮೇಲೆ ಮದುಮಗ ಬಂದು ನಿಲ್ಲುತ್ತಾನೆ. ನಂತರ ಮದುಮಗಳಿಗೆ ಹಂದರದಲ್ಲಿ ಕರೆ ತರುತ್ತಾರೆ. ಅವಳಿಗೂ ಮಣೆಯ ಮೇಲೆ ನಿಲ್ಲಿಸಿ ಸಮುದಾಯದ ಹಿರಿಯರು ತಾಳಿಯನ್ನು ಕಟ್ಟಿಸುತ್ತಾರೆ. ತದನಂತರ ಮದುಮಕ್ಕಳಿಗೆ ದೈವದವರ ಮಧ್ಯದಲ್ಲಿ ಕೂರಿಸಿ ವಧುವಿನ ತೆರ ೫೭೫ ರೂ.ಗಳನ್ನು ಕೊಡಿಸುವರು. ಈ ಹಣವನ್ನು ಮದುಮಗನ ತಂದೆ ನೀಡುತ್ತಾನೆ. ಮದುಮಕ್ಕಳ ತಂದೆಯವರು ತಮ್ಮ ಕುಲಗುರುಗಳೊಂದಿಗೆ ದೈವದಲ್ಲಿ ಕುಳಿತುಕೊಳ್ಳುವರು. ಈ ಸಮುದಾಯದಲ್ಲಿ ಸೆರೆಯ ನೈವೇದ್ಯ ಇಲ್ಲದೆ ಮದುವೆಯಾಗುವುದಿಲ್ಲ. ಮೊದಲು ದೇವರಿಗೆ ನೈವೇದ್ಯ ಕೋಡಲು ಸೆರೆಗೆ ಏಳು ರೂಪಾಯಿ, ಕುಲದ ಗುರುಗಳಿಗೆ ೨ ರೂ. ಮತ್ತು ಭೂತಾಯಿಯ ಹೆಸರಲ್ಲಿ ೨ ರೂ. ತೆಗೆದಿಡಲಾಗುತ್ತದೆ. ಮದುಮಗನಿಗೆ ಮದುಮಗಳ ತಾಯಿ ಕೊಬ್ಬರಿ ಬಟ್ಟಲುಗಳ ಹಾರವನ್ನು ಹಾಕುವಳು ಮದುಮಗ ತಮ್ಮ ಅತ್ತೆಯ ಮೈಮೇಲೆ ೨ ಸೀರೆಗಳನ್ನು ಹಾಕುವನು. ದೈವಕ್ಕೆ ಎರಡೂ ಕಡೆಯಿಂದ ತಲಾ ೫೦೦ ರೂ. ನೀಡಲಾಗುತ್ತದೆ. ನಂತರ ದೈವದವರು ಎರಡೂ ಕಡೆಯವರಿಂದ ೨-೨ ರೂಪಾಯಿಗಳನ್ನು ಪಡೆದು ಸೆರೆಯನ್ನು ಬಾಟ್ಲಿಯಲ್ಲಿ ತರಿಸುವರು. ತರಿಸಿದ ಸೆರೆಯನ್ನು ನಾಲ್ಕು ಲೋಟಗಳಲ್ಲಿ ಹಾಕಿಸಿ ಮನೆ ಯಜಮಾನನ ಜೊತೆಗೆ ಅವರ ಮನೆತನದ ಗುರುಗಳನ್ನು ಕುಳ್ಳಿರಿಸಿ ದೇವತೆಗಳಿಗೆ ಸೆರೆಯ ನೈವೇದ್ಯ ಕೊಡುತ್ತಾರೆ. ದೇವತೆಗಳ ಹೆಸರುಗಳನ್ನು ಪಠಣ ಮಾಡುತ್ತಾ ಬಾಟ್ಲಿಯಿಂದ ಒಂದೊಂದು ಹನಿ ನೆಲದ ಮೇಲೆ ಸೆರೆ ಹಾಕುತ್ತಾರೆ. ಇದು ಈ ಸಮುದಾಯದಲ್ಲಿ ಮಹತ್ವದ ಕಾರ್ಯವಾಗಿದೆ. ಸೆರೆಯ ನೈವೇದ್ಯ ಕೊಟ್ಟರೆ ನಿಜವಾದ ಮದುವೆಯಾಗಿದೆ. ಇಂದಿನಿಂದ ನೀವಿಬ್ಬರು ದಂಪತಿಗಳೆಂದು ದೈವದವರು ಸಾರುತ್ತಾರೆ. ಬಂದಿರುವ ಬಂಧುಬಳಗದವರಿಗೆ ಊಟೋಪಚಾರ ನಡೆಯುವುದು.

ಮೊದಲರಾತ್ರಿ (ಗುಣ) : ಮದುವೆಯ ಮರುದಿನ ನವದಂಪತಿಗಳ ಮೊದಲನೆ ರಾತ್ರಿ ಕಾರ್ಯಕ್ರಮ ಮನೆಯ ಹೊರಗೆ ಸಣ್ಣ ಗುಡಿಸಲು (ಝೋಪಡಿ) ಕಟ್ಟುತ್ತಾರೆ. ವಧುವಿನ ಅಕ್ಕ-ತಂಗಿಯರು ತಮ್ಮ ಮಾವ ಹಾಗೂ ಸಹೋದರಿಯೊಂದಿಗೆ ಮಿಠಾಯಿಯನ್ನು ತಿನ್ನುತ್ತಾರೆ. ನಂತರ ಗುಡಿಸಲಿನಲ್ಲಿ ಅವರಿಬ್ಬರಿಗೆ ಬಿಟ್ಟು ಹೋಗುವರು. ಮೊದಲ ರಾತ್ರಿಯಂದು ಹೆಣ್ಣಿನ ಶೀಲದ ಪರೀಕ್ಷೆಯನ್ನು ಮಾಡುವ ಪದ್ದತಿ ಇವರಲ್ಲಿದೆ.

ಏಕಪತ್ನಿತ್ವ (ಏಕಬಯರ) : ಕಂಜರಭಾಟ ಸಮುದಾಯದಲ್ಲಿ ಏಕಪತಿತ್ವ ಮತ್ತು ಏಕಪತ್ನಿತ್ವ ಪದ್ಧತಿ ಜಾರಿಯಲ್ಲಿದೆ. ಗಂಡ ಇನ್ನೊಂದು ಮದುವೆಯಾಗಲು ಇಚ್ಛಿಸಿದರೆ ಅದಕ್ಕೆ ಮೊದಲನೆಯ ಪತ್ನಿಯು ಅನುಮತಿ ಕೊಟ್ಟರೆ ಮಾತ್ರ ಎರಡನೆಯ ಹೆಂಡತಿ ಮಾಡಿಕೊಳ್ಳಲು ಸಾಧ್ಯ. ಒಂದು ವೇಳೆ ಪತ್ನಿ ಅನುಮತಿ ನೀಡದಿದ್ದರೆ ಎರಡನೆಯ ಮದುವೆ ಮಾಡಿಕೊಳ್ಳಲು ದೈವ ಒಪ್ಪುವುದಿಲ್ಲ. ಇವರಲ್ಲಿ ಏಕಪತಿತ್ವ ಮತ್ತು ಏಕಪತ್ನಿತ್ವ ಪದ್ಧತಿ ಕಟ್ಟುನಿಟ್ಟಾಗಿ ಪಾಲಸಲಾಗುತ್ತದೆ.

ಅಂತರ್ಜಾತಿ ವಿವಾಹ (ದುಸರೆ ಜಾತಕಿ ಬ್ಯಾಹ) : ಈ ಸಮುದಾಯದಲ್ಲಿ ಅಂತರ್ಜಾತಿ ವಿವಾಹಕ್ಕೆ ಅನುಮತಿ ಇದೆ. ಬೇರೆ ಸಮುದಾಯದ ಸ್ತ್ರೀಯರನ್ನು ಇವರು ವಿವಾಹವಾದರೆ ಅವಳಿಗೆ ದೈವದವರು ವಿಧಿ ವಿಧಾನಗಳನ್ನು ಮಾಡಿ ೧೭೫೦ ರೂ.ಗಳನ್ನು ದಂಡವಾಗಿ ಕಟ್ಟಿಸಿಕೊಂಡು ಅವಳಿಗೆ ಕಂಜರಭಾಟದ

ಮದುಮಗನ ಬೆಡಗು ನೋಡಿ ಒಬ್ಬನ ತೊಡೆಯ ಮೇಲೆ ಹೆಣ್ಣನ್ನು ಕೂಡಿಸಿ ಅವರ ಮಗಳೆಂದು ಸಾರಿ ಮದುವೆ ಮಾಡಿ ಕೊಡುತ್ತಾರೆ. ನಾಲ್ಕು ರೂಪಾಯಿಯ ಸೆರೆಯನ್ನು ತಂದು ಅದರಲ್ಲಿ ಬೆಳ್ಳಿಯ ರೂಪಾಯಿಯನ್ನು ಹಾಕಿ ದೇವರಿಗೆ ನೈವೇದ್ಯ ಕೊಟ್ಟು ಅವಳಿಗೆ ಜಾತಿಯಲ್ಲಿ ಸೇರಿಸಿಕೊಳ್ಳವರು ಈ ಸಮುದಾಯದ ಮಹಿಳೆ ಪರಜಾತಿಯ ಪುರುಷನೊಂದಿಗೆ ಸಂಬಂಧ ಬೆಳೆಸಿಕೊಂಡರೆ ಅವಳಿಗೆ ಸಮುದಾಯದೊಳಗೆ ಸ್ಥಾನಮಾನ ದೊರೆಯುವುದಿಲ್ಲ. ಅವರ ಮನೆಯಲ್ಲಿ ಯಾವುದಾದರು ಕಾರ್ಯ ಬಂದರೆ ದೈವಕ್ಕೆ ದಂಡವನ್ನು ಕೊಟ್ಟು ತಮ್ಮ ಕಾರ್ಯವನ್ನು ಮಾಡಿಸಿಕೊಳ್ಳುತ್ತಾರೆ.

ವಿಧವಾ ವಿವಾಹ (ರಾಂಡಮುಂಡಾಕಾ ಬ್ಯಾಹ) : ಕಂಜರಭಾಟ ಸಮಾಜದಲ್ಲಿ ವಿಧವಾ ವಿವಾಹ ಪದ್ಧತಿ ಜಾರಿಯಲ್ಲಿದೆ. ಸಣ್ಣ ವಯಸ್ಸಿನಲ್ಲಿ ಗಂಡ ಮರಣ ಹೊಂದಿದರೆ ಅವಳ ವಿವಾಹವನ್ನು ತಂದೆ ತಾಯಿ ಮತ್ತು ಮಾವ ಅತ್ತಿ ಸಮ್ಮತಿಯಿಂದ ವಿವಾಹ ಮಾಡಿಕೊಡುತ್ತಾರೆ. ಒಂದು ವೇಳೆ ಅವಳಿಗೆ ಮೊದಲನೆಯ ಗಂಡನ ಮಕ್ಕಳು ಇದ್ದರೆ ಈಗ ಮಾಡಿಕೊಂಡ ಗಂಡ ಆ ಮಕ್ಕಳನ್ನು ಜೋಪಾನ ಮಾಡಬಹುದು. ಇಲ್ಲವೆ ಜೋಪಾನ ಮಾಡಲಿಕ್ಕಿಲ್ಲ. ಜೋಪಾನ ಮಾಡಲು ಒಪ್ಪದಿದ್ದರೆ ಮೊದಲನೆಯ ಗಂಡನ ಮನೆಯಲ್ಲಿ ಆ ಮಕ್ಕಳನ್ನು ಬಿಡುತ್ತಾರೆ. ಹೆಚ್ಚಾಗಿ ವಿಧವೆಯರನ್ನು ಅವರ ಮೈದುನರೆ ಮದುವೆ ಮಾಡಿಕೊಳ್ಳುತ್ತಾರೆ. ತಮ್ಮ ಅಣ್ಣನ ಸಂತಾನವನ್ನು ತಮ್ಮಲ್ಲಿಯೆ ಉಳಿಸಿಕೊಳ್ಳಲು ಪ್ರಯತ್ನ ಮಾಡುತ್ತಾರೆ.

ವಿವಾಹ ವಿಚ್ಛೇದನ (ಮುಸಳ ಕಾಟಣಾ) : ಇವರಲ್ಲಿ ಹಲವಾರು ಕಾರಣಗಳಿಗಾಗಿ ವಿವಾಹ ವಿಚ್ಛೇದನೆ ಮಾಡುವರು.

ಈ ಸಮುದಾಯದಲ್ಲಿ ವಿವಾಹ ವಿಚ್ಛೇದನ ಮಾಡುವ ಹಕ್ಕು ಸಮುದಾಯದ ದೈವಕ್ಕೆ ಮಾತ್ರ ಇದೆ. ದೈವದವರು ಗಂಡ-ಹೆಂಡತಿಯರನ್ನು ಪಂಚಾಯಿತಿಯಲ್ಲಿ ಕರೆಯಿಸಿ ಅವರ ವಿವಾಹ ವಿಚ್ಛೇದನೆಯ ಕಾರಣಗಳನ್ನು ಕೇಳುತ್ತಾರೆ. ವಿಚ್ಛೇದನೆಗೆ ಸರಿಯಾದ ಕಾರಣ ಇದ್ದರೆ ೧೨೫೦ ರೂ.ಗಳನ್ನು ತೆಗೆದುಕೊಂಡು ಅವರ ವಿಚ್ಛೇದನ ಮಾಡುತ್ತಾರೆ. ದೈವಕ್ಕೆ ಯೋಗ್ಯ ಕಾರಣ ದೊರೆಯದೆ ಇದ್ದಲ್ಲಿ ವಿಚ್ಛೇದನ ನೀಡುವುದಿಲ್ಲ. ಆಗ ಗಂಡನಾಗಲಿ, ಹೆಂಡತಿಯಾಗಲಿ ಯಾರಾದರೊಬ್ಬರು ವಿಚ್ಛೇದನ ಬೇಕೇ ಬೇಕು ಎಂದು ಹಠ ಮಾಡಿದರೆ ಅವರ ತಂದೆ-ತಾಯಿಗಳ ಅನುಮತಿ ತೆಗೆದುಕೊಂಡು ವಿಚ್ಛೇದನ ಮಾಡುತ್ತಾರೆ. ವಿಚ್ಛೇದನ ನಡೆದು ಸ್ವಲ್ಪ ದಿನಗಳ ನಂತರ ಅವರಿಬ್ಬರೂ ಮತ್ತೆ ಕೂಡಲು ಇಚ್ಛೆ ಪಟ್ಟರೆ ದೈವಕ್ಕೆ ೧೨೫೦ ರೂಪಾಯಿ ಕೊಟ್ಟು ಮತ್ತೆ ತಮ್ಮ ದಾಂಪತ್ಯ ಜೀವನವನ್ನು ಸಾಗಿಸಬಹುದು. ಈ ರೀತಿ ಮಾಡುವಾಗ ನಾಲ್ಕು ರೂಪಾಯಿಯ ಸೆರೆ ತಂದು ದೇವರಿಗೆ ನೈವೇದ್ಯ ಕೊಟ್ಟು ಅವರಿಗೆ ಕೂಡಿಸುತ್ತಾರೆ.

ವಿವಾಹ ವಿಚ್ಛೇದನ ಮಾಡಲು ಪಂಚರು ನಿರ್ಣಯವನ್ನು ಕೈಕೊಂಡರೆ ಒಂದು ಕಟ್ಟಿಗೆ ತುಂಡು ತಂದು ಕೊಡ್ಲಿಯನ್ನು ತರಸಿ ದೈವದ ಮಧ್ಯದಲ್ಲಿ ಇರಿಸಿ ಗಂಡನಿಗೆ ಕರೆಯಿಸಿ ಅವನ ಕೈಯಿಂದ ಕಟ್ಟಿಗೆಯ ಎರಡು ತುಂಡು ಮಾಡುವರು. ಇದು ವಿವಾಹ ವಿಚ್ಛೇದನ ಮಾಡುವ ರೀತಿ. ವಿವಾಹ ವಿಚ್ಛೇದನವಾದ ನಂತರ ಗಂಡ-ಹೆಂಡತಿ ಕೂಡಲು ಅಪೇಕ್ಷೆ ಪಟ್ಟರೆ ಎರಡೂ ಕಡೆಯಿಂದ ತಲಾ

ಎರಡು, ಎರಡು ರೂಪಾಯಿಯ ಬೆಲ್ಲ ತರಿಸಿ ದೈವದ ಮಧ್ಯದಲ್ಲಿ ಗಂಡನಿಗೆ ಕೂಡಿಸಿ ಎರಡು ಕಟ್ಟಿಗೆಯ ತುಂಡುಗಳನ್ನು ತರಸಿ ಬೆಲ್ಲದಿಂದ ಜೋಡಿಸಿ ನಾಲ್ಕು ರೂಪಾಯಿಯ ಸೆರೆ ತರಿಸಿ ದೇವರಿಗೆ ನೈವೇದ್ಯ ಕೊಟ್ಟು ಗಂಡ-ಹೆಂಡತಿ ಒಂದು ಗೂಡಿಸುವರು.

ಆರಾಧನೆ, ಆಚರಣೆ, ನಂಬಿಕೆಗಳು

ಜನನ ಹಾಗೂ ಪೂರ್ವಾಚರಣೆಗಳು : ಕಂಜರಭಾಟ ಸಮುದಾಯದಲ್ಲಿ ಗರ್ಭವತಿ ಮಹಿಳೆಗೆ ಮನೆಯಲ್ಲಿ ಒಂದು ಪ್ರತ್ಯೇಕ ಸ್ಥಳದಲ್ಲಿ ಹೆರಿಗೆಗಾಗಿ ವ್ಯವಸ್ಥೆಯನ್ನು ಮಾಡುವರು. ಗರ್ಭಿಣಿಗೆ ಹೆರಿಗೆಯಾಗುವಾಗ ಎಷ್ಟೇ ತೊಂದರೆಗಳು ಆದರೂ ಸಹ ದವಾಖಾನೆಗೆ ಕರೆದುಕೊಂಡು ಹೋಗುವುದು ತುಂಬಾ ಅಪರೂಪ. ಸೂಲಗಿತ್ತಿಯು ಗರ್ಭವತಿಗೆ ಯಾವ ತೊಂದರೆ ಆಗದಂತೆ ನೋಡಿಕೊಳ್ಳುತ್ತಾರೆ. ಬಾಣಂತನದ ನೋವು ಆಗದಂತೆ ಗರ್ಭವತಿಯ ಬೆನ್ನಿನ ಮೇಲೆ ಬಿಸಿ ನೀರನ್ನು ಹಾಕುತ್ತಾರೆ. ಚಹಾಪುಡಿ, ಸಕ್ಕರೆ ಬೆರೆಸಿ ಹಾಗೂ ಒಳ್ಳೆಣ್ಣೆಯನ್ನು ಹಾಕಿ ಡಿಕಾಕ್ಷನ್ ಮಾಡಿ ಕುಡಿಸುತ್ತಾರೆ. ಇದರಿಂದ ಹೆರಿಗೆ ಸುಲಭವಾಗಿ ಬೇಗನೆ ಆಗುತ್ತದೆಂದು ಸೂಲಗಿತ್ತಿಯು ಹೇಳುತ್ತಾಳೆ. ಹೆರಿಗೆ ಬೇಗನೆ ಆಗದಿದ್ದರೆ ಗರ್ಭವತಿಯ ಗಂಡ ಭೂತಾಯಿಗೆ ಬೇಡಿಕೊಳ್ಳುವನು. ಮಗು ಹುಟ್ಟಿದ ಒಂದು ತಿಂಗಳ ನಂತರ ಭೂಮಿ ತಾಯಿಗೆ ಎರಡು ತೆಂಗಿನಕಾಯಿಗಳನ್ನು ಹೊಡೆದು ತಮ್ಮ ಹರಕೆಯನ್ನು ಪೂರ್ಣ ಮಾಡುವರು.

ಹುಟ್ಟಿದ ಮಗು ಗಂಡಾಗಲಿ, ಹೆಣ್ಣಾಗಲಿ ಸೂಲಗಿತ್ತಿಯರು ಮೊದಲು ಹೊಕ್ಕಳು ಹುರಿಯನ್ನು ಗಾಜಿನಿಂದ ಕತ್ತರಿಸಿ ಮಾಸವನ್ನು ಬೇರ್ಪಡಿಸುವರು. ಮಾಸದ ಗಂಟನ್ನು ಒಂದು ತಗ್ಗು ತೊಡಿ ಅದರಲ್ಲಿ ಹುಗಿಯುವರು. ನಂತರ ಬಿಸಿ ನೀರಿನಲ್ಲಿ ಮಗುವಿಗೆ ಮತ್ತು ಬಾಣಂತಿಗೆ ಸ್ನಾನ ಮಾಡಿಸಿ ಮನೆಯಲ್ಲಿ ಪ್ರತ್ಯೇಕ ಸ್ಥಳದಲ್ಲಿ ಮಲಗಲು ವ್ಯವಸ್ಥೆಯನ್ನು ಮಾಡುವರು. ಅವಳ ಊಟದ ಪಾತ್ರೆ, ಹಾಸಿಗೆ, ಬಟ್ಟೆ, ಪ್ರತ್ಯೇಕವಾಗಿ ಇಡುವರು. ಒಂದು ತಿಂಗಳವರೆಗೆ ಮೈಲಿಗೆ ಕಳೆಯುವವರೆಗೂ ಬಾಣಂತಿ ಮಗುವಿನೊಂದಿಗೆ ಬೇರೆ ಇರಬೇಕಾಗುತ್ತದೆ.

ಬಾಣಂತಿಗೆ ಪ್ರಾರಂಭದಲ್ಲಿ ತುಪ್ಪ, ಬೆಲ್ಲದಲ್ಲಿ ಶ್ಯಾವಿಗೆಯ ಪಾಯಸ ಮಾಡಿ ತಿನ್ನಲು ನೀಡುತ್ತಾರೆ. ಅದರಲ್ಲಿ ಜೀರಗಿ ಹಾಕುತ್ತಾರೆ. ಈ ರೀತಿ ಮೂರು ದಿನ ಸತತವಾಗಿ ನೀಡಲಾಗುತ್ತದೆ. ಮೂರು ದಿನಗಳವರೆಗೆ ಮಗುವಿಗೆ ಕತ್ತೆಯ ಹಾಲು ಕೊಡುತ್ತಾರೆ. ಕತ್ತೆಯ ಹಾಲು ಕೊಡುವುದರಿಂದ ಕೆಮ್ಮು, ದಮ್ಮು ಬರುವುದಿಲ್ಲ, ಇದಲ್ಲದೆ ಮಗು ಶಕ್ತಿ ಶಾಲಿಯಾಗುವನು, ಜಾಣನಾಗುವನು ಎನ್ನುವ ನಂಬುಗೆ ಅವರಲ್ಲಿದೆ. ತಾಯಿಯ ಹಾಲು ಪೂರೈಕೆಯಾಗುವವರೆಗೆ ಜೇನುತುಪ್ಪ ಹಾಗೂ ಬೆಲ್ಲದ ನೀರನ್ನು ಮಗುವಿನ ನಾಲಿಗೆಗೆ ಹಚ್ಚುವರು. ಆರು ದಿನಗಳವರೆಗೆ ಮಗುವಿಗೆ ಬಟ್ಟೆ ತೊಡಿಸುವುದಿಲ್ಲ. ಬಟ್ಟೆಯಲ್ಲಿ ಸುತ್ತಿ ಮಲಗಿಸುವರು.

ನಾಮಕರಣ : ಮಗು ಹುಟ್ಟಿದ ಆರನೆಯ ದಿನ ಮಗುವಿಗೆ ನಾಮಕರಣದ ಕಾರ್ಯಕ್ರಮ ಜರುಗುವುದು. ಇದಕ್ಕೆ ಛಟ್ಟಿ ಎಂದು ಕರೆಯುತ್ತಾರೆ. ಮಗುವಿಗೆ ಸ್ನಾನ ಮಾಡಿಸಿ ಹೊಸ ಬಟ್ಟೆಗಳನ್ನು ತೊಡಿಸುವರು. ಕೈ ಕಾಲುಗಳಲ್ಲಿ ಕರಿಮಣಿಗಳ ಸರಗಳನ್ನು ಹಾಗೂ ಉಡುದಾರವನ್ನು ಕಟ್ಟುವರು. ಇವುಗಳಿಂದ ಮಗುವಿಗೆ

ದೃಷ್ಟಿಯಾಗುವುದಿಲ್ಲ ಎಂಬುದು ಇವರ ನಂಬಿಕೆ. ಅಂದು ಗೋಧಿ ಚಪಾತಿ, ಬೆಲ್ಲದ ಪಾಯಸ ಮಾಡಿ ಎರಡೂ ಬೆರೆಸಿ ನೆರೆಹೊರೆಯ ಚಿಕ್ಕ ಮಕ್ಕಳಿಗೆ ಕರೆಯಿಸಿ ಊಟ ಮಾಡಿಸುವರು. ಇದಕ್ಕೆ ಛಟ್ಟಿ ಎಂದು ಕರೆಯುತ್ತಾರೆ. ರಾತ್ರಿ ಮಗುವಿನ ಸೋದರಮಾವ ನಾಮಕರಣ ಮಾಡುವ ಮೊದಲು ಒಂದು ಕಪ್ಪು ದಾರವನ್ನು ತೆಗೆದುಕೊಂಡು ಅದರ ತುದಿಯಿಂದ ಮಗುವಿನ ಪಕ್ಕೆಯ ಬಲಕ್ಕೆ, ಎಡಕ್ಕೆ ಮತ್ತು ಎದೆಗೆ ಸುಡುವನು. ಈ ರೀತಿ ಸುಡುವದರಿಂದ ಯಾವ ರೋಗ ರುಜಿನಗಳು ಬರುವುದಿಲ್ಲ ಎಂದು ಹಿರಿಯರು ಹೇಳುತ್ತಾರೆ. ಸೋದರಮಾವನಿಗೆ ಒಂದು ರೂಪಾಯಿ ನಾಲ್ಕಾಣೆ ಕೊಡುತ್ತಾರೆ. ನಂತರ ಬಂದಂತಹ ಕುಲಸ್ಥರ ಮಹಿಳೆಯರು ಮತ್ತು ಮನೆಯ ಮಹಿಳೆಯರು ಸೇರಿ ಮಗುವಿನ ನಾಮಕರಣ ಮಾಡುವರು. ಒಂದು ತಿಂಗಳ ನಂತರ ಬಾಣಂತಿಯು ಮನೆ ಪ್ರವೇಶಿಸುವಳು. ಬಾಣಂತಿ ಉಪಯೋಗಿಸಿದ ಬಟ್ಟೆ ಹಾಸಿಗೆಗಳನ್ನು ಮನೆಯೊಳಗೆ ತರದೆ ಅವುಗಳನ್ನು ಹೊರಗೆ ಚಲ್ಲುವರು.

ಋತುಮತಿ: ಕಂಜರಭಾಟರು ತಮ್ಮ ಹೆಣ್ಣು ಮಕ್ಕಳು ಮೈನೆರೆದಾಗ ಬಂಧುಬಳಗದವರಿಗೆ ಸುದ್ದಿಯನ್ನು ಹೇಳಿ ಕಳಿಸುತ್ತಾರೆ. ಅವಳಿಗೆ ಮನೆಯಲ್ಲಿ ಪ್ರತ್ಯೇಕ ಸ್ಥಳದಲ್ಲಿ ಕೂರಿಸುತ್ತಾರೆ. ಅವಳು ಮಾಡಿದ ಅಡಿಗೆಯನ್ನು ಯಾರೂ ತಿನ್ನುವುದಿಲ್ಲ. ಅವಳಿಗೆ ಒಣಕೊಬ್ಬರಿ, ಬೆಲ್ಲ, ತುಪ್ಪ, ಉತ್ತತ್ತಿ ಮುಂತಾದ ಪೌಷ್ಟಿಕ ಆಹಾರವನ್ನು ನೀಡುವರು. ಏಳು ದಿನಗಳ ನಂತರ ಅವಳಿಗೆ ಕೈಯಲ್ಲಿ ಹಸಿರು ಬಳೆಗಳನ್ನು ಹಾಕಿಸುವರು. ಹೊಸದಾದ ಹಸಿರು ಬಣ್ಣದ ಸೀರೆಯನ್ನು ತಂದು ಉಡಿಸುವರು. ಆಭರಣಗಳನ್ನು ಹಾಕಿ ಶೃಂಗಾರಿಸಿ ಮುತ್ತೈದೆಯರು ಉಡಿ ತುಂಬುವರು. ಬಂದಂತಹ ಕುಲದ ಗುರು ಹಾಗೂ ಹಿರಿಯರಿಗೆಲ್ಲಾ ಊಟ ಅಥವಾ ಅಲ್ಪ ಆಹಾರದ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಮಾರನೆಯ ದಿನದಿಂದ ಅವಳಿಗೆ ದೇವರ ಮನೆಗೆ ಪ್ರವೇಶಿಸಲು, ಅಡುಗೆಯನ್ನು ಮಾಡಲು, ಎಲ್ಲರ ಜೊತೆಗೆ ಸರಾಗವಾಗಿ ವ್ಯವಹರಿಸಲು ಅನುಮತಿ ಸಿಕ್ಕಂತಾಗುತ್ತದೆ. ಈ ರೀತಿಯಾಗಿ ಋತುಮತಿ ಶಾಸ್ತ್ರವನ್ನು ಸಾಂಪ್ರದಾಯದ ನಿಯಮದಂತೆ ಮಾಡಲಾಗುತ್ತದೆ.

ಮರಣ (ಮೌತ್)

ಶವ ಸಂಸ್ಕಾರ (ಮಾಟ್ಟಕರಣಾ) : ಕಂಜರಭಾಟ ಸಮುದಾಯದವರು ವ್ಯಕ್ತಿ ಸತ್ತ ನಂತರ ಹಾಸಿಗೆಯ ಮೇಲೆ ಶವವನ್ನು ಹಾಕಿ ಕಾಲುಗಳನ್ನು ಮಡಚುತ್ತಾರೆ. ನಂತರ ತಲೆಗೆ ಪಗಡಿ ಸುತ್ತುತ್ತಾರೆ. ಕಾಲು ಹಾಗೂ ತಲೆಯ ಹತ್ತಿರ ಚಾಕು ಇಲ್ಲವೆ ಚೂರಿಗಳನ್ನು ಇಡುತ್ತಾರೆ. ಮನೆಯ ಮುಂದೆ ಬೆಂಕಿ ಹಾಕುತ್ತಾರೆ. ಬಂಧು ಬಳಗ, ಮಿತ್ರರಿಗೆ ಸಾವಿನ ಸುದ್ದಿ ಮುಟ್ಟಿಸಲು ಒಬ್ಬ ವ್ಯಕ್ತಿಯನ್ನು ನೇಮಿಸಿ ಕಳಿಸುತ್ತಾರೆ. ಈ ಸಮುದಾಯದ ದೈವದವರು ಸೇರಿ ಸತ್ತವರ ಹಿರಿಯರಿಗೆ ಮತ್ತು ಅವರ ಕುಲಗುರು(ಗೊಡ್ಡಿವಾನ)ಗಳಿಗೆ ಕರೆಯಿಸಿ ಜಾತಿಯ ಪದ್ಧತಿಯಂತೆ ಮುಂದಿನ ಕಾರ್ಯಗಳನ್ನು ಶುರುಮಾಡುತ್ತಾರೆ. ಸತ್ತವರ ಮನೆಯಲ್ಲಿ ಹಿರಿಯರು ಯಾರು ಇರುತ್ತಾರೋ ಅವರಿಗೆ ಶವ ಸಂಸ್ಕಾರದ ಕಾರ್ಯಗಳು ಮುಗಿಯುವರೆಗೆ ಜವಾಬ್ದಾರಿಯನ್ನು ಕೊಟ್ಟು ತಲೆಯ ಮೇಲೆ ಟೊಪ್ಪಿಗೆ ಅಥವಾ ಪಗಡಿ ವಗೈರೆ ಇದ್ದರೆ ಅದನ್ನು ತಗೆಯುತ್ತಾರೆ. ಅದಕ್ಕೆ 'ಮೊಡ್ಡಾ' ಎನ್ನುತ್ತಾರೆ. ಅವನಿಂದ ಅವರ ಕುಲಗುರುಗಳಿಗೆ ೭ ರೂ.ಗಳನ್ನು ಕೊಡಿಸುತ್ತಾರೆ. ಅದಕ್ಕೆ 'ಗೊಡ್ಡಿ' ಎನ್ನುತ್ತಾರೆ. ಇವರಿಬ್ಬರು ಹೆಗಲು ಕೊಡುವವರಲ್ಲಿ ಮುಖ್ಯರು. ಇನ್ನಿಬ್ಬರು

ಅವರ ಸಂಬಂಧಿಕರನ್ನು ಆಯ್ಕೆ ಮಾಡಿ ನಾಲ್ಕು ಜನರಿಗೆ ಶವಸಂಸ್ಕಾರದ ಜವಾಬ್ದಾರಿಯನ್ನು ಕೊಡುತ್ತಾರೆ. ಹೆಣಕ್ಕೆ ಹೆಗಲು ಕೊಡುವವರ ಮನೆಯಲ್ಲಿ ಮೈಲಿಗೆಯಾಗಿದ್ದರೆ ಅಂತಹ ಮನೆಯವರು ಹೆಣಕ್ಕೆ ಹೆಗಲು ಕೊಡುವುದಿಲ್ಲ. ಸತ್ತವರಲ್ಲಿ 'ಬಾಗಡ' ಬೆಡಗಿಗೆ ಸೇರಿದವರಾಗಿದ್ದಾರೆ ಹೊರಸಿನ (ಖಾಟ) ಮೇಲೆ ಒಯ್ಯುತ್ತಾರೆ. ನಾಳಾದವರು ಇದ್ದರೆ ಬಿದರಿನ ಚಟ್ಟ ಕಟ್ಟಿ ಶವವನ್ನು ಒಯ್ಯುತ್ತಾರೆ.

ಗಂಡಸರು ಸತ್ತಿದ್ದರೆ ಬಿಳಿ ಬಣ್ಣದ ಬಟ್ಟೆ ತೆಗೆದುಕೊಳ್ಳುತ್ತಾರೆ. ಮೂರು ಮೀಟರ್ ಧೋತರ, ಒಂದೂವರೆ ಮೀಟರ್ ಅಂಗಿಗೆ ಮೂರು ಮೀಟರ್ ತಲೆಯ ಪಗಡಿಗೆ, ಮೂರು ಮೀಟರ್ ಶವದ ಮೇಲೆ ಹೊದಿಸಲು (ಕಫನ) ಹಾಗೂ ಕಾಲು ಮೀಟರನ ಎರಡು ತುಂಡುಗಳನ್ನು ಮಾಡಿ ಒಂದು ತುಂಡು ನಡಕ್ಕೆ ಕಟ್ಟಲು, ಒಂದು ತುಂಡು ತಲೆಗೆ ಕಟ್ಟಲು ತೆಗೆದುಕೊಳ್ಳುತ್ತಾರೆ. ಹೆಂಗಸರು ಸತ್ತಿದ್ದರೆ ಕೆಂಪು ಬಣ್ಣದ ಬಟ್ಟೆ ತೆಗೆದುಕೊಳ್ಳುತ್ತಾರೆ. ಮೂರು ಮೀಟರ್ ಲಂಗ, ಒಂದೂವರೆ ಮೀಟರ್ ಅಂಗಿಗೆ, ಮೂರು ಮೀಟರ್ ಶವದ ಮೇಲೆ (ಕಫನ) ಹಾಕಲು ಬಟ್ಟೆ ತೆಗೆದುಕೊಳ್ಳುತ್ತಾರೆ. ನಂತರ ಹೊರಸಿಗೆ ಕಾತಿ, ಡಂಬು ವಗೈರೆ ತೆಗೆದುಕೊಳ್ಳುತ್ತಾರೆ. ಚಟ್ಟ ತಯಾರಿಸುವುದು ಇದ್ದರೆ ಬಿದಿರು, ಕಾತಿ, ಸಣಬು ತೆಗೆದುಕೊಳ್ಳುತ್ತಾರೆ. ಇದಲ್ಲದೆ ಮೈದಾಹಿಟ್ಟು, ಗೋಧಿ, ಬ್ಲೆಡ್, ಗಂಧದ ಕಟ್ಟಿಗೆ, ಬಾಚಣಿಕೆ, ಗಂಧದೆಣ್ಣೆ, ಒಣಕೊಬ್ಬರಿ, ಕಡ್ಡಿಪೆಟ್ಟಿಗೆ, ಸಾಬೂನು, ತುಪ್ಪ, ಹರಳೆ, ಕುಳ್ಳು, ಹೂಮಾಲೆ, ಸೂಜಿ, ದಾರ, ಗಡಗಿ ಮುಂತಾದವುಗಳನ್ನು ತೆಗೆದು ಕೊಳ್ಳುತ್ತಾರೆ. ನಂತರ ನಾಲ್ಕು ಜನರು ಒಂದು ಕೊಡ ನೀರು ತರುವರು. ಶವಕ್ಕೆ ಸಾಬೂನು ಹಚ್ಚಿ ಸ್ನಾನ ಮಾಡಿಸುವರು. ಧೋತರ ಉಡಿಸಿ, ಅಂಗಿ ಹಾಕಿ ತಲೆಗೆ ಪಗಡಿಯನ್ನು ಸುತ್ತಿ ನಡ ಕಟ್ಟುವರು. ತದನಂತರ ಹೊರಸು ಇದ್ದರೆ ಒಂದು ಕಡೆಯ ಬಿದರಿಗೆ ಕಚ್ಚು ಹಾಕಿ ಮನೆಯ ಯಜಮಾನನು ಮುರಿಯುವನು. ಹೊರಸು ಡಬ್ಬು ಹಾಕಿ ಅದನ್ನು ಕಾತಿಯಿಂದ ಕಟ್ಟುವರು. ಅದರ ಮೇಲೆ ಶವವನ್ನು ಹಾಕುತ್ತಾರೆ ಚಟ್ಟ ಇದ್ದರೆ ಅದರ ಮೇಲೆ ಉತ್ತರಕ್ಕೆ ತಲೆ ಮಾಡಿ ಶವ ಹಾಕುವರು. ಶವದ ಕೈಯಲ್ಲಿ ಮೈದಾಹಿಟ್ಟು ಇಟ್ಟು ಅದರಲ್ಲಿ ಒಂದು ಗಟ್ಟಿ ರೂಪಾಯಿ ಇಡುತ್ತಾರೆ. ಹಾಗೇ ಒಂದು ರೂಪಾಯಿ ಬಾಯಿಯಲ್ಲಿ, ಒಂದು ರೂಪಾಯಿ ಎದೆಯ ಮೇಲೆ ಇಡುತ್ತಾರೆ. ಕೊಡ್ಲಿಯನ್ನು ತೆಗೆದುಕೊಂಡು ಏಳು ಸಲ ಹಲ್ಲಿಗೆ ಬಡೆಯುತ್ತಾರೆ. ಗಡಗಿಗೆ ಕಲ್ಲಿನಿಂದ ಸ್ವಲ್ಪ ಒಡೆದು, ಕುಳ್ಳಿನೊಂದಿಗೆ ಬೆಂಕಿ ಹಾಕುವರು. ಗಡಗಿಯನ್ನು ಸತ್ತವರ ಮನೆತನದ ಹುಡುಗರಿಗೆ ಕೊಟ್ಟು ಶವದ ಮುಂದೆ ನಡೆಯಲು ಹೇಳುತ್ತಾರೆ. ಹರಳೆ, ಗೋಧಿ, ಕವಡಿಗಳನ್ನು ಬೆರಸಿ ಒಂದು ಅರಿವೆಯಲ್ಲಿ ಹಾಕಿ ಹುಡುಗನ ಕೈಯಲ್ಲಿ ಕೊಡುವರು. ಈ ರೀತಿ ಸಜ್ಜುಗೊಳಿಸಿ ಆರತಿ ಮಾಡಿ, ನೇಮಿಸಿದ ನಾಲ್ಕು ಜನರು ಶವವನ್ನು ಹೊತ್ತೊಯ್ಯುತ್ತಾರೆ. ಕಂಜರಭಾಟ ಸಮುದಾಯದಲ್ಲಿ ಮದುವೆಯಾದವರನ್ನು ಸುಡುತ್ತಾರೆ. ಸಣ್ಣ ಮಕ್ಕಳನ್ನು ಹುಗಿಯುತ್ತಾರೆ. ಹದಿನೈದು ವರ್ಷದ ಮೇಲ್ಪಟ್ಟವರು ಮದುವೆಯಾಗದೆ ತೀರಿಕೊಂಡರೆ ಅವರಿಗೆ ಅರಿಷಿಣ ಹಚ್ಚಿ ಆಲದ ಗಿಡದ ಜೊತೆಗೆ ಮದುವೆಮಾಡಿ ಸುಡುತ್ತಾರೆ.

ಶವಯಾತ್ರೆ : ಶವದ ಮುಂಭಾಗದಲ್ಲಿ ಬೆಂಕಿಯ ಗಡಗಿಯನ್ನು ಅವರ ಮನೆತನದ ಹುಡುಗನು ತೆಗೆದುಕೊಂಡು ಹೋಗುತ್ತಾನೆ. ಒಬ್ಬನು ಹರಳೆ, ಗೋಧಿ, ಕವಡಿಗಳನ್ನು ದಾರಿಗುಂಟ ಚೆಲ್ಲುತ್ತಾ ಸಾಗುತ್ತಾನೆ.

ಮುಕ್ತಿಧಾಮದ ಸಮೀಪಕ್ಕೆ ಬಾರಿಗಿಡವನು ನೋಡಿ ಆ ಗಿಡಕ್ಕೆ ನಾಲ್ಕು ಜನರು ಶವವನ್ನು ಹೊತ್ತುಕೊಂಡು ಮುಂಭಾಗದಿಂದ ನಾಲ್ಕು ಸುತ್ತು ನಂತರ ಹಿಂಭಾಗದಿಂದ ಮೂರು ಸುತ್ತು ಬಾರಿಗಿಡಕ್ಕೆ ಸುತ್ತುಹಾಕಿ ಶವವನ್ನು ಕೆಳಗೆ ಇಡುತ್ತಾರೆ. ಶವದ ಮೇಲೆ ಹಾಕಿದ ಬಿಳಿಬಟ್ಟೆಯ ತುದಿಯ ಒಂದು ಗೇಣು ನಾಲ್ಕು ಬೊಟ್ಟು ಅಳತೆ ಮಾಡಿ ಬಟ್ಟೆ ಹರಿಯುತ್ತಾರೆ. ಅದಕ್ಕೆ ಕಫನ ಎನ್ನುತ್ತಾರೆ. ಅದನ್ನು ಬಾರಿಗಿಡಕ್ಕೆ ಸುತ್ತುತ್ತಾರೆ. ನಂತರ ಕೈಯಲ್ಲಿದ್ದ ಮೈದಾಹಿಟ್ಟು ತೆಗೆದು ಅದರಲ್ಲಿಯ ಗಟ್ಟಿ ರೂಪಾಯಿ ತೆಗೆದುಕೊಂಡು ಮೈದಾಹಿಟ್ಟು ಬಾರಿ ಗಿಡದ ಬುಡಕ್ಕೆ ಹಾಕುತ್ತಾರೆ. ಶವವನ್ನು ಅಲ್ಲಿಯೇ ಬಿಟ್ಟು ನಾಲ್ಕು ಜನರು ಗಟ್ಟಿ ರೂಪಾಯಿ ತೆಗೆದುಕೊಂಡು ಮುಕ್ತಿಧಾಮಕ್ಕೆ ಹೋಗಿ ಸ್ಥಳವನ್ನು ಆಯ್ಕೆ ಮಾಡಿ ಅಲ್ಲಿ ರೂಪಾಯಿ ಇಟ್ಟು ಬರುತ್ತಾರೆ. ನಂತರ ಶವವನ್ನು ಮುಕ್ತಿಧಾಮಕ್ಕೆ ತರುವರು. ಆಯ್ಕೆ ಮಾಡಿದ ಸ್ಥಳದ ಮೇಲೆ ಕಟ್ಟಿಗೆಯ ಒಂದು ಥರವನ್ನು ಇಟ್ಟು ಶವವನ್ನು ಅದರ ಮೇಲೆ ಬೋರಲು ಹಾಕಿ ಕಟ್ಟಿಗೆಗಳನ್ನು ಇಡುತ್ತಾರೆ. ಸ್ವಲ್ಪ ದಂಟಿನ ಹೊರಿ ಕಟ್ಟಿ ಗಡಗಿಯಲ್ಲಿದ್ದ ಬೆಂಕಿಯಿಂದ ದಂಟಿಗೆ ಹಚ್ಚುತ್ತಾರೆ. ಮನೆತನದ ಯಜಮಾನ ಬೆಂಕಿ ಹಚ್ಚಿದ ದಂಟಿನ ಹೊರಿಯನ್ನು ತೆಗೆದುಕೊಂಡು ಶವದ ಸುತ್ತ ಏಳು ಸುತ್ತು ಹಾಕಿ ಅಂತಿಮ ಸಂಸ್ಕಾರದ ವಿಧಿ ಮುಗಿಸಿ ಬೆಂಕಿ ಹಚ್ಚುತ್ತಾನೆ. ಸ್ವಲ್ಪ ವೇಳೆಯ ನಂತರ ಗಂಡು ಬಿದಿರು (ಭೇಡಣಿ) ತೆಗೆದುಕೊಂಡು ತಲೆಗೆ ಏಳು ಸಲ ಬಡೆಯುತ್ತಾನೆ. ಶವಸಂಸ್ಕಾರಕ್ಕೆ ಬಂದ ಜನರಿಗೆ ಒಣಕೊಬ್ಬರಿ, ಗಂಧದ ಕಟ್ಟಿಗೆ ತುಂಡು, ಕುಳ್ಳು ಇವುಗಳನ್ನು ಕೊಟ್ಟು ಚಿತೆಯಲ್ಲಿ ಹಾಕಿಸುವರು. ಇದಕ್ಕೆ ಧರ್ಮ ಥಾಪಡಿ ಎನ್ನುತ್ತಾರೆ. ಶವಸಂಸ್ಕಾರದ ನಂತರ ಎಲ್ಲರೂ ಸ್ನಾನ ಮಾಡುತ್ತಾರೆ. ಮನೆಯ ಸಮೀಪಕ್ಕೆ ಸತ್ತವರ ಕುಟುಂಬದ ಹುಡುಗನು ನೀರು ತೆಗೆದುಕೊಂಡು ನಿಲ್ಲುತ್ತಾನೆ. ಶವಸಂಸ್ಕಾರ ಮುಗಿಸಿ ಬಂದ ಮನೆಯ ಯಜಮಾನನಿಗೆ ಮೊದಲು ನೀರು ಸಿಂಪಡಿಸುತ್ತಾನೆ. ನಂತರ ಆ ನೀರನ್ನು ಹಿಡಿದುಕೊಂಡು ಎಲ್ಲರ ಮೇಲೆ ಸಿಂಪಡಿಸುತ್ತಾನೆ. ಇದಾದ ಮೇಲೆ ಎಲ್ಲರೂ ಓಣಿಯಲ್ಲಿ ಹೋಗುವರು. ಮನೆತನದ ಬಂಧು ಬಳಗದವರು ಉಂಡಿ, ಪೇಡಾ, ಜಿಲೇಬಿ, ಮೈಸೂರುಪಾಕ ಮಿಠಾಯಿಯನ್ನು ತಂದಿರುತ್ತಾರೆ. ಮೈದಾಹಿಟ್ಟಿನಿಂದ ರೊಟ್ಟಿ ಬಡಿದು ಬೆಂಕಿಯ ಮೇಲೆ ಹಂಚು ಇಟ್ಟು ಒಂದೇ ಮಗ್ಗುಲಿಗೆ ರೊಟ್ಟಿಯನ್ನು ಬೇಯಿಸುತ್ತಾರೆ. ಸತ್ತವರ ಮನೆತನದ ಗುರುಗಳು ತಂದಂತಹ ಸಿಹಿ ತಿಂಡಿಗಳನ್ನು ಒಂದು ತಟ್ಟೆಯಲ್ಲಿ ತೆಗೆದುಕೊಂಡು ಓಣಿಯ ಹೊರಗೆ ಹೋಗುತ್ತಾರೆ. ರೊಟ್ಟಿಯನ್ನು ಎಕ್ಕಿ ಎಲ್ಲೆಯ ಮೇಲೆ ಇಟ್ಟು ನಾಲ್ಕು ಭಾಗಗಳನ್ನು ಮಾಡಿ ನಾಲ್ಕು ದಿಕ್ಕಿಗೆ ಚಲ್ಲುತ್ತಾರೆ. ಇವತ್ತಿನಿಂದ ನಿನ್ನ ಪಾಲು ನಮ್ಮಿಂದ ಮುಗಿಯಿತು ಎಂದು ಹೇಳುತ್ತಾರೆ. ಇದಲ್ಲದೆ ತಂದಂತಹ ಸಿಹಿತಿಂಡಿಗಳನ್ನು ತಟ್ಟೆಯಲ್ಲಿ ಪುಡಿ ಮಾಡಿ ಭೂತಾಯಿಗೆ ಅರ್ಪಿಸುತ್ತಾರೆ. ನಂತರ ಎಲ್ಲರೂ ಉಳಿದ ಸಿಹಿತಿಂಡಿಗಳನ್ನು ತಿಂದು ವಿಷದ ಬಾಯಿ ತೊಳೆಯುತ್ತಾರೆ. ಈ ರೀತಿ ಅಂದಿನ ವಿಧಿಕಾರ್ಯಗಳು ಮುಗಿಯುತ್ತವೆ.

ಸಮಾಧಿ : ಶವಸಂಸ್ಕಾರದ ಮರುದಿನ ಚಿತಾ ಭಸ್ಮ ನಂದಿಸುವ ಕಾರ್ಯಕ್ರಮ. ಅಂದು ಸತ್ತವರ ಮನೆಯ ಮುಂದೆ ಎಲ್ಲರು ಬಂದು ಸೇರುವರು. ಬಂಧುಬಳಗ ಸಮುದಾಯದ ಹಿರಿಯರು ತಮ್ಮ ಶಕ್ತಿ ಅನುಸಾರ ಅಂದಿನ ಕ್ರಿಯಾ ವಿಧಿಗೆ ಹಣ ಕೊಡುವರು. ಮೊದಲು ಈ ಸಮುದಾಯದಲ್ಲಿ ಸಮಾಧಿಗಳನ್ನು

ಕಟ್ಟುತ್ತಿರಲಿಲ್ಲ. ಈಗ ಮಾತ್ರ ಸಮಾಧಿಗಳನ್ನು ಕಟ್ಟುತ್ತಾರೆ. ಸಿಮೆಂಟ್, ಇಟ್ಟಿಗೆ, ಮರಳುಗಳಿಂದ ಸಮಾಧಿಗಳನ್ನು ನಿರ್ಮಿಸುವರು.

ಪಿಂಡ ಶ್ರಾದ್ಧಾ : ಶವಸಂಸ್ಕಾರದ ಮರುದಿನ ಚಿತಾಭಸ್ಮ ನಂದಿಸುವ ಕಾರ್ಯಕ್ರಮಕ್ಕೆ ಬೇಕಾಗುವ ಗೋಧಿಹಿಟ್ಟು, ಬೆಲ್ಲ, ತುಪ್ಪ, ಕಟ್ಟಿಗೆ, ಕಡ್ಡಿಪೆಟ್ಟಿಗೆ, ಅರ್ಧ ಮೀಟರ್ ಬಿಳಿ ಬಟ್ಟೆ, ಗಡಗಿ, ಮುಚ್ಚಳ, ಬಿಂದಗಿ, ಮಗಿ ತೆಗೆದುಕೊಂಡು ನೇರವಾಗಿ ಸ್ಮಶಾನಕ್ಕೆ (ಮುಕ್ತಿಧಾಮಕ್ಕೆ) ಹೋಗುತ್ತಾರೆ. ಈ ವಿಧಿ ಕಾರ್ಯಕ್ರಮ ಮಾಡುವ ಯಜಮಾನ ಅಂದು ಉಪವಾಸ ಇದ್ದು ಕಾರ್ಯಕ್ರಮಗಳನ್ನು ಮಾಡುತ್ತಾನೆ. ಮೊದಲು ಸ್ವಲ್ಪ ಬೆಲ್ಲ ತೆಗೆದುಕೊಂಡು ಕಟ್ಟಿಗೆಯಿಂದ ತಯಾರಿಸಿದ ವರ್ತುಲಾಕಾರದ ಪಾತ್ರೆ(ಡೋಕ್ಕಾ)ಯಲ್ಲಿ ಬೆರಸಿ ಮೊದಲು ಮನೆಯ ಯಜಮಾನ ಬೆಲ್ಲದ ನೀರನ್ನು ಚಿತಾಭಸ್ಮದ ಮೇಲೆ ಹಾಕಿ ತಣ್ಣಗೆ ಮಾಡುವನು. ನಂತರ ಉಳಿದ ಮೂವರು ಬೆಲ್ಲದ ನೀರು ಹಾಕುವರು. ಬಂದಂತಹ ಜನರು ತಂಬಿಗೆಯಿಂದ ನೀರು ಹಾಕಿ ತಣ್ಣಗೆ ಮಾಡುವರು. ನಂತರ ಚಿತೆಯಲ್ಲಿ ಹಾಕಿದ ಮೂರು ಗಟ್ಟಿ ರೂಪಾಯಿಗಳನ್ನು ಬೂದಿಯಲ್ಲಿ ಕೈಹಾಕಿ ಹುಡುಕುತ್ತಾರೆ ಹಾಗೂ ಅಸ್ಥಿಗಳನ್ನು ಆರಿಸಿ ಬಿಳಿ ಅರಿವೆಯಲ್ಲಿ ಹಾಕಿ ಇಡುತ್ತಾರೆ. ಸ್ಮಶಾನದಲ್ಲಿ ಏಳು ಒಲೆಗಳನ್ನು ನಿರ್ಮಿಸಿ ಹೆಣ್ಣು ಮಕ್ಕಳು ಚಪಾತಿ ಮಾಡುತ್ತಾರೆ. ಒಂದು ಡಬರಿಯಲ್ಲಿ ಬೆಲ್ಲದ ನೀರಿನ ಪಾಯಸ ಮಾಡುತ್ತಾರೆ. ಎಲ್ಲರ ಕಡೆಯಿಂದ ಇಪ್ಪತ್ತೊಂದು ಚಪಾತಿಗಳನ್ನು ತೆಗೆದುಕೊಂಡು ಸಣ್ಣಾಗಿ ಪುಡಿ ಮಾಡಿ ಅದರಲ್ಲಿ ಬೆಲ್ಲ ಮತ್ತು ತುಪ್ಪ ಹಾಕಿ ಕಲಿಸುತ್ತಾರೆ. ಅವುಗಳನ್ನು ಸರಿಯಾಗಿ ಬೆರೆಸಿ ಅದರಿಂದ ಪಿರಾಮಿಡ್ ಆಕಾರದ ಪಿಂಡೊ(ಪಿಂಡಿ) ತಯಾರಿಸುತ್ತಾರೆ. ಅದಕ್ಕೆ ಬೆಲ್ಲದ ಕಣ್ಣುಗಳನ್ನು ಹಚ್ಚುತ್ತಾರೆ. ಸಮಾಧಿ ತಯಾರಾದ ಮೇಲೆ ಬಾಗಡದವರು ಆಗಿದ್ದರೆ ಅಸ್ಥಿಗಳನ್ನು ಅರಿವೆಯಲ್ಲಿ ಸುತ್ತಿ ಗೋರಿಯ ಮೇಲೆ ಇಡುವರು. ಅದರ ಮುಂದೆ ತಯಾರಿಸಿದಂತಹ ಪಿಂಡ ಇಡುತ್ತಾರೆ. ನಾಳಾದವರಾಗಿದ್ದರೆ ನೀರು ತುಂಬಿದ ಬಿಂದಗಿಯನ್ನು ಸಮಾಧಿಯ ಮೇಲೆ ಇಡುತ್ತಾರೆ. ಪಿಂಡವನ್ನು ಕೆಳಗೆ ಇಡುತ್ತಾರೆ. ನಂತರ ಒಂದು ಪಾತ್ರೆಯಲ್ಲಿ ಚಪಾತಿ, ಬೆಲ್ಲ, ತುಪ್ಪದ ಮಿಶ್ರಣವನ್ನು ತಯಾರಿಸಿ ನೈವೇದ್ಯಕ್ಕೆ ಕೊಡುತ್ತಾರೆ. ಶವಕ್ಕೆ ಹೆಗಲು ಕೊಟ್ಟವರು ನಾಲ್ವರು ಸಮಾಧಿಯ ಮುಂದೆ ಕುಳಿತುಕೊಳ್ಳುವರು. ಬೆಂಕಿಯ ಕೆಂಡಗಳನ್ನು ತಂದು ಹಾಕುವರು. ಹಿರಿಯರು ಹೇಳಿದಂತೆ ಮನೆಯ ಯಜಮಾನನು ಪೂಜೆ ಪ್ರಾರಂಭ ಮಾಡುವನು. ಚಪಾತಿ, ಬೆಲ್ಲ, ತುಪ್ಪಗಳನ್ನು ಬೆರಸಿ ಬೆಂಕಿಯಲ್ಲಿ ಹಾಕಿ ಮೇಲೆ ತುಪ್ಪ ಸಿಂಪಡಿಸುವರು. ತುಪ್ಪ ಸಿಂಪಡಿಸಿದ ಮೇಲೆ ಧಗ್ಗನೆ ಬೆಂಕಿ ಹತ್ತಬೇಕು. ಬೆಂಕಿ ಹತ್ತುವವರೆಗೆ ಪೂಜೆ ನಡೆಯುವುದು. ಪೂಜೆಯ ಸಮಯಕ್ಕೆ ದೇವತೆಗಳ ಹೆಸರು, ಸ್ವರ್ಗವಾಸಿಯಾದ ಪ್ರತಿಯೊಂದು ಕುಲದ ಹಿರಿಯರ ಹೆಸರು ಪಠಣ ಮಾಡುವರು. ಬೆಂಕಿ ಹತ್ತಿದ ಮೇಲೆ ಅಂದಿನ ಕಾರ್ಯ ಸ್ವರ್ಗವಾಸಿಯಾದ ವ್ಯಕ್ತಿಗೆ ಮುಟ್ಟಿದಂತೆ ಪಿಂಡದ ಮೇಲಿನ ಭಾಗವನ್ನು ಕೈಯಿಂದ ತೆಗೆದು ಅವನ ಪಾಲಿದೆಂದು ಕಲ್ಲಿನ ಮೇಲೆ ಇಡುವರು. ನಂತರ ಉಪವಾಸ ಇದ್ದ ವ್ಯಕ್ತಿ ಮೊದಲು ಪ್ರಸಾದ ಸ್ವೀಕಾರ ಮಾಡಿ ನಂತರ ಉಳಿದ ಮೂವರಿಗೆ ಪ್ರಸಾದ ಕೊಟ್ಟು ಉಳಿದದ್ದನ್ನು ಗಂಡಸರಿಗೆ, ಹುಡುಗರಿಗೆ ಕೊಡುವರು. ಪಿಂಡದ ಪ್ರಸಾದ ಗಂಡಸರು ಮಾತ್ರ ತಿನ್ನುವರು. ಹೆಂಗಸರಿಗೆ ಕೊಡುವುದಿಲ್ಲ. ಮಾಡಿದಂತಹ ಅಡಿಗೆಯನ್ನು ಸ್ಮಶಾನದಲ್ಲಿ ಗಂಡಸರು, ಹೆಂಗಸರು, ಚಿಕ್ಕಮಕ್ಕಳು

ಊಟ ಮಾಡುತ್ತಾರೆ. ಮಡಕೆಯಲ್ಲಿ ಅಸ್ಥಿಗಳನ್ನು ಮತ್ತು ಮೂರು ರೂಪಾಯಿಗಳನ್ನು ಹಾಕಿ ಮಡಕೆಯನ್ನು ಹುಗಿಯುತ್ತಾರೆ. ಕೊನೆಗೆ ಕಟ್ಟಿಗೆಯಿಂದ ಮಾಡಿದ ವರ್ತುಲಾಕಾರದ (ಡೊಕ್ಕು) ಪಾತ್ರೆಯನ್ನು ಎರಡು ಕಲ್ಲುಗಳ ಮೇಲೆ ಇಟ್ಟು ಬಿದರಿನಿಂದ ಒಡೆದು ತುಂಡು ಮಾಡಿ ಮನೆಗೆ ಹಿಂದಿರುಗುವರು.

ದಿನಕ್ರಮ (ಕುಂಡಾ) : ಮೂರನೆಯ ದಿನ ದಿನಕರ್ಮ ಮಾಡಲಾಗುವುದು. ಈ ಕಾರ್ಯಕ್ರಮವನ್ನು ವಾಸಿಸುವ ಸ್ಥಳದಿಂದ ದೂರ ಮಾಡುವರು. ಪೇಟೆಯಿಂದ ಅಕ್ಕಿ, ಸಕ್ಕರೆ, ತುಪ್ಪ, ಉತ್ತತ್ತಿ, ಬಾದಾಮಿ, ಗೊಡಂಬಿ, ದ್ರಾಕ್ಷಿ, ಕಸಕಸ, ಒಣಕೊಬ್ಬರಿ, ಸಿಹಿತಿಂಡಿಗಳು ಮುಂತಾದವುಗಳನ್ನು ತರುತ್ತಾರೆ. ಇದಲ್ಲದೆ ಒಂದು ಬಾನಿ (ಕುಂಡಾ), ಬಿಂದಗಿ, ಮಗಿ, ದೊಡ್ಡ ಮಡಕೆ ತರುತ್ತಾರೆ. ಈ ಎಲ್ಲ ವಸ್ತುಗಳನ್ನು ನೇರವಾಗಿ ದಿನಕ್ರಮ ಕುಂಡಾ ಮಾಡುವ ಸ್ಥಳಕ್ಕೆ ಒಯ್ಯುವರು. ಅಲ್ಲಿ ಮೊದಲು ಏಳು ಒಲೆಗಳನ್ನು ಇಡುವರು. ಒಂದು ಒಲೆಯ ಮೇಲೆ ದೊಡ್ಡ ಮಡಕೆಯನ್ನಿಟ್ಟು ೨–೩ ಕೆ.ಜಿ. ಅಕ್ಕಿ ಹಾಕುವರು. ಇದನ್ನು ಮನೆಯ ಯಜಮಾನ ಹಾಗೂ ಇನ್ನೂಳಿದ ಮೂವರು ಹೆಗಲು ಕೊಟ್ಟವರು ಮಾಡುವರು. ಉಳಿದ ಒಲೆಗಳ ಮೇಲೆ ಹೆಣ್ಣು ಮಕ್ಕಳು ತಮ್ಮ ಪಾಲಿನ ಅಕ್ಕಿ ತೆಗೆದುಕೊಂಡು ಅನ್ನ ಮಾಡುವರು. ಒಂದು ಬಾರಿಗಿಡದ ಟೊಂಗೆಯನ್ನು ತಂದು ಅಲ್ಲಿ ಹುಗಿಯುವರು. ಬಾರಿಗಿಡದ ಕಟ್ಟಿಗೆಯಿಂದ ಸೌಟು ಮಾಡಿ ದೊಡ್ಡ ಮಡಕೆಯ ಅನ್ನ ಮಾಡಲು ಉಪಯೋಗಿಸುವರು. ಸಕ್ಕರೆ, ಉತ್ತತ್ತಿ, ಗೋಡಂಬಿ, ದ್ರಾಕ್ಷಿ, ಬಾದಾಮಿ, ಕಸಕಸ, ಒಣಕೊಬ್ಬರಿ, ತಂದಿರುವ ಸಿಹಿತಿಂಡಿಗಳ ಮಿಶ್ರಣ ಮಾಡುವರು. ಬಾರೆ ಗಿಡದ ಟೊಂಗೆಯ ಕೆಳಗೆ ಮರಳು ಹಾಕಿ ಬಾನಿಯನ್ನು ಅದರ ಮೇಲೆ ಡಬ್ಬು ಹಾಕಿ ಅರಿವೆಯಿಂದ ಮುಚ್ಚುವರು. ಸ್ವಲ್ಪ ವೇಳೆಯ ನಂತರ ಅರಿವೆಯನ್ನು ತೆಗೆಯುವರು. ಮರಳಿನ ಮೇಲೆ ಏನಾದರೂ ಗುರುತು ಕಂಡರೆ ಸತ್ತ ವ್ಯಕ್ತಿ ಬಂದು ಇಂಥ ಗುರುತು ಕೊಟ್ಟು ಹೋದನು ಎಂದು ಹೇಳುವರು. ನಂತರ ಬಾನಿ(ಕುಂಡಾ)ಯನ್ನು ತೆಗೆದುಕೊಂಡು ದೊಡ್ಡ ಮಡಕೆಯ ಹತ್ತಿರ ಕುಳಿತು ಕೊಳ್ಳುವರು. ಬಾರಿಗಿಡದ ಸೌಟುನಿಂದ ಮನೆಯ ಯಜಮಾನ ಏಳು ಸಲ ಅನ್ನವನ್ನು ತೆಗೆದು ಬಾನಿಯಲ್ಲಿ ಹಾಕುವನು. ಅದನ್ನು ಕೈಯಿಂದ ಸಮ ಮಾಡಿ ಮಿಶ್ರಣವನ್ನು ಅದರ ಮೇಲೆ ಹಾಕಿ ತುಪ್ಪ ಹಾಕುವನು. ಇದೇ ರೀತಿ ಉಳಿದ ಮೂವರು ಹೆಗಲು ಕೊಟ್ಟವರು ಒಂದೊಂದು ಪದರ ಅನ್ನ, ತುಪ್ಪ ಮಿಶ್ರಣ ಹಾಕುವರು. ಇನ್ನು ಮೂರು ಪದರುಗಳನ್ನು ಉಳಿದವರು ಯಾರಾದರೂ ಹಾಕಿ ಒಟ್ಟು ಏಳು ಪದರು ಹಾಕಿ ಅದರ ಮಧ್ಯದಲ್ಲಿ ನಾಲ್ಕು ಉತ್ತತ್ತಿಗಳನ್ನು ಹಾಕಿ ಬಾನಿಯನ್ನು ಬಾರಿಗಿಡದ ಬುಡಕ್ಕೆ ಇಡುವರು. ನಂತರ ಅರಿವೆಯಿಂದ ಮುಚ್ಚಿ ಬಿಂದಗಿಯನ್ನು ತೆಗೆದುಕೊಂಡು ನೀರು ತರುವರು. ಎಲ್ಲರೂ ಮಾಡಿದ ಅನ್ನದ ಡಬರಿಯಿಂದ ಒಂದೊಂದು ಚಮಚ ಅನ್ನವನ್ನು ತೆಗೆದುಕೊಂಡು ಅದರಲ್ಲಿ ಸಕ್ಕರೆ, ತುಪ್ಪ ಹಾಕುವರು. ಬೆಂಕಿಯ ಕೆಂಡಗಳನ್ನು ತಂದು ಹಾಕುವರು, ಮನೆಯ ಯಜಮಾನ ಅಂದು ಮುಂಜಾನೆಯಿಂದ ಉಪವಾಸ ಇರುತ್ತಾನೆ. ಅವನ ಹಸ್ತದಿಂದ ನೈವೇದ್ಯ ಕಾರ್ಯನಡೆಯುವುದು. ಹೆಗಲು ಕೊಟ್ಟ ನಾಲ್ವರು ಕುಳಿತುಕೊಳ್ಳುವರು ಸಮುದಾಯದ ಹಿರಿಯರು ಮರಣ ಹೊಂದಿದ ಹಿರಿಯರ ಹೆಸರು ಪಠಿಸುತ್ತಾ ನೈವೇದ್ಯದ ಅನ್ನವನ್ನು ಬೆಂಕಿಯಲ್ಲಿ ಹಾಕುವರು. ಅದರ ಮೇಲೆ ತುಪ್ಪ ಸಿಂಪಡಿಸುವರು. ತುಪ್ಪ ಹಾಕಿದ ಕೂಡಲೆ ಬೆಂಕಿ ಹತ್ತಿದರೆ ದಿನಕ್ರಮ

ಮಾಡಿದ್ದು ಸಾರ್ಥಕವಾಯಿತು ಎಂದು ಭಾವಿಸುತ್ತಾರೆ. ಬೆಂಕಿ ಹತ್ತಿದ ಮೇಲೆ ಬಾರಿಗಿಡದ ಬುಡಕ್ಕೆ ಇಟ್ಟ ಬಾನಿಯ ಮೇಲಿನ ಅರಿವೆಯನ್ನು ತೆಗೆದು ಅದರ ಮಧ್ಯದಲ್ಲಿದ್ದ ಉತ್ತತ್ತಿಗಳೊಂದಿಗೆ ಕೈಯಿಂದ ಅನ್ನವನ್ನು ಮನೆಯ ಯಜಮಾನ ತೆಗೆದು ಸತ್ತವನ ಪಾಲಿಂದು ಕಲ್ಲಿನ ಮೇಲೆ ಇಡುವನು. ನಂತರ ತಾನು ನೈವೆದ್ಯದ ಪ್ರಸಾದವನ್ನು ತಿಂದು ಉಳಿದವರಿಗೆ ಹಂಚುವನು. ಬಾನಿಯಲ್ಲಿರುವ ಅನ್ನವನ್ನು ಮೊದಲು ಮೂರು ಜನ ಹೆಗಲು ಕೊಟ್ಟವರಿಗೆ ಹಾಕಿ ಕೊಡುವನು. ನಂತರ ಉಳಿದ ಗಂಡಸರಿಗೆ ಮಕ್ಕಳಿಗೆ ತೆಗೆದುಕೊಡುವನು. ಉಳಿದ ಅನ್ನುವನ್ನು ಬಾನಿಯಲ್ಲಿ ಅವನು ಊಟ ಮಾಡುವನು. ನಂತರ ಅದರಲ್ಲಿಯೇ ಕೈತೊಳೆದು ಏಳು ಸಲ ಬಾಯಿಯಲ್ಲಿ ನೀರು ತೆಗೆದುಕೊಂಡು ಮುಕ್ಕಳಿಸಿ ಉಗಳುವನು. ಬಾರಿಗಿಡದ ಕೆಳಗೆ ಡಬ್ಬು ಹಾಕುವನು. ಬಂದಂಥವರೆಲ್ಲರೂ ಊಟ ಮಾಡುತ್ತಾರೆ. ಕೊನೆಗೆ ದೊಡ್ಡ ಮಡಕೆಯನ್ನು ಒಲೆಯ ಮೇಲೆ ಇಟ್ಟು ಒಡೆದು ಮುಚ್ಚುತ್ತಾರೆ. ಹಾರಿಯಿಂದ ವರ್ತುಲಾಕಾರವನ್ನು ಹಾಕಿ ಮನೆಗೆ ಬರುವರು. ಇಲ್ಲಿ ಒಬ್ಬ ಹುಡುಗ ನೀರು ತೆಗೆದುಕೊಂಡು ಬಂದು ಮನೆ ಯಜಮಾನನ ಮೇಲೆ ಸಿಂಪಡಿಸುವನು. ನಂತರ ಅವನು ಎಲ್ಲರ ಮೇಲೆ ಸಿಂಪಡಿಸುತ್ತಾನೆ ತರುವಾಯ ಎಲ್ಲರೂ ಮನೆಯ ಒಳಗೆ ಹೋಗುತ್ತಾರೆ. ಅವರ ಮನೆತನದ ಗುರು ಸತ್ತವರ ಗಂಡು ಮಕ್ಕಳ ಕೂದಲು ಕತ್ತರಿಸುವನು. ಇದಾದ ನಂತರ ಮನೆಯ ಅಕ್ಕ-ತಂಗಿಯರು ಒಂದು ಬಾಟ್ಲಿ ಸೆರೆ ತಂದು ದೇವರಿಗೆ ನೈವೇದ್ಯಕೊಟ್ಟು ಮನೆಯ ಯಜಮಾನನ ತಲೆಯ ಮೇಲೆ ಪಗಡಿಯನ್ನು ಕಟ್ಟುವರು. ಈ ಕಾರ್ಯಕ್ರಮದ ನಂತರ ಅವನು ಎಲ್ಲರ ಜೊತೆಗೆ ಸೇರಿ ಊಟವನ್ನು ಮಾಡುವ ಅನುಮತಿ ದೊರೆಯುವುದು. ಈ ಎಲ್ಲ ಕಾರ್ಯಕ್ರಮಗಳು ಮುಗಿಯುವವರೆಗೆ ಅವನು ಯಾರ ಜೊತೆಗೆ ಊಟ ಮಾಡುವಂತಿಲ್ಲ. ಅವನು ತಿಂದ ಪದಾರ್ಥಗಳನ್ನು ಯಾರೂ ತಿನ್ನುವುದಿಲ್ಲ. ಈ ರೀತಿ ಮೂರು ದಿನ ಕಾರ್ಯಕ್ರಮಗಳನ್ನು ಮಾಡುತ್ತಾರೆ.

ಹದಿನೈದು ವರ್ಷದೊಳಗಿನ ಮಕ್ಕಳು ಸತ್ತರೆ ಅವರಿಗೆ ಹುಗಿಯುತ್ತಾರೆ. ಸತ್ತ ಮಗುವಿಗೆ ಬಿಳಿ ಅರಿವೆಯಲ್ಲಿ ಸುತ್ತಿ ಕುಣಿ ತೆಗೆದು ಹುಗಿಯುವರು. ೨-೩ ತಿಂಗಳ ಮಗು ಇದ್ದರೆ ಮರುದಿನ ಬಾರಿಗಿಡದ ಎಲೆ ತಂದು ಅದರಲ್ಲಿ ಉಂಡಿಯ ಪುಡಿಯನ್ನು ತುಂಬಿ ಎಲೆಯನ್ನು ಹರಿದು ಚೆಲ್ಲುತ್ತಾರೆ. ಊಟ ಮಾಡುವ ಮಗು ಮರಣ ಹೊಂದಿದರೆ ದೊಡ್ಡವರ ದಿನಕ್ರಮವನ್ನು ಮಾಡುವ ರೀತಿ ದಿನಕ್ರಮ (ಕುಂಡಾ) ಮಾಡುತ್ತಾರೆ.

ಹದಿನೈದು ವರ್ಷದ ಮೇಲ್ಪಟ್ಟ ಅವಿವಾಹಿತ ಗಂಡುಮಗು ತೀರಿಕೊಂಡರೆ ದೊಡ್ಡವರಿಗೆ ಮಾಡುವ ರೀತಿಯಲ್ಲಿ ಅಂತ್ಯಕ್ರಿಯೆ ಮಾಡುವರು. ಅರಿಷಣ ಹಚ್ಚಿ ಎಕ್ಕೆ ಗಿಡಕ್ಕೆ ತಾಳಿಕಟ್ಟಿ ಮದುವೆ ಮಾಡುತ್ತಾರೆ. ನಂತರ ಅವನಿಗೆ ಸುಡುತ್ತಾರೆ. ಅವಿವಾಹಿತ ಹೆಣ್ಣು ಮಗಳು ತೀರಿಕೊಂಡರೆ ದೊಡ್ಡವರಿಗೆ ಮಾಡುವ ಪದ್ಧತಿಯನ್ನು ಮಾಡುವರು. ಹಸಿರು ಬಳೆ ತೊಡಿಸಿ, ಅರಿಷಿಣ ಹಚ್ಚಿ ತಾಳಿ ಹಾಕಿ ಎಕ್ಕಿಗಿಡದ ಜೊತೆಗೆ ಮದುವೆ ಮಾಡಿ ಸುಡುತ್ತಾರೆ. ಎರಡು ದಿನದ ದಿನಕ್ರಮಗಳನ್ನು ದೊಡ್ಡವರಿಗೆ ಮಾಡುವ ಪದ್ಧತಿಯಂತೆ ಮಾಡುತ್ತಾರೆ. ಹೀಗೆ ಕಂಜರಭಾಟ ಜನಾಂಗವು ಹುಟ್ಟಿನಿಂದ ಸಾವಿನವರೆಗೆ ಹಲವಾರು ರೀತಿಯ ಆಚರಣೆಗಳನ್ನು ಆಚರಿಸುತ್ತಾರೆ.

ಧಾರ್ಮಿಕ ವಿಧಿ ವಿಧಾನಗಳು

ಈ ಜನ ತಮ್ಮ ಕುಲದೇವತೆಗಳಾದ ಕಾಳಿಕಾದೇವಿ, ರಾಮದೇವಜಿ(ಅಲಖ) ಹನುಮಾನ, ನಾಥ್ಯಾ, ಬೋಜ್ಯಾ, ಗುಗ್ಗಾ, ದುರ್ಗಾಮಾತಾ, ಶಿರಸಿ ಮಾರಿಕಾಂಬೆ, ಶ್ರೀಕೃಷ್ಣ, ವಿಠ್ಠಲ, ಶಿವ ಮುಂತಾದ ದೇವರನ್ನು ಪೂಜಿಸುವರು.

ಕಾಳಿಕಾದೇವಿ ಪೂಜೆ : ಮಾಘ ಮಾಸದಲ್ಲಿ ಹೋಳಿ ಹುಣ್ಣಿಮೆ ಹಬ್ಬ ಬರುವುದು. ಹೋಳಿ ಹುಣ್ಣಿಮೆಯ ದಿನ ಕಾಳಿಕಾದೇವಿಯ ಪೂಜೆಯನ್ನು ಬಹಳಷ್ಟು ವಿಜೃಂಭಣೆಯಿಂದ ಮಾಡಲಾಗುತ್ತದೆ. ಕಾಳಿಕಾದೇವಿ ಪೂಜೆಯನ್ನು ಕಂಜರಭಾಟ ಸಮುದಾಯದ ಕೆಲ ಜನರು ವರ್ಷಕ್ಕೊಮ್ಮೆ ಮಾಡುತ್ತಾರೆ. ಇದರ ಸ್ಥಾನ ಪಾವಗಡ ಮತ್ತು ಕಲಕತ್ತಾದಲ್ಲಿದೆ. ಅಂದು ಮನೆಯ ಮುಖ್ಯಸ್ಥ ಉಪವಾಸ ಇರುವನು. ಅವರ ಮನೆತನದಲ್ಲಿ ಯಾರಿಗಾದರೂ ದೇವರು ಬರುತ್ತಿದ್ದರೆ ಅವರು ಕೈಯಲ್ಲಿ ಕಬ್ಬಿಣದ ಸರಪಳಿಯನ್ನು ಹಿಡಿದು ತನ್ನ ಮೈಗೆ ಬಡಿದುಕೊಳ್ಳುವರು. ಅವರ ಮನೆಯಲ್ಲಿ ಯಾರಾದರೂ ತಪ್ಪು ಮಾಡಿದ್ದರೆ ಅವರನ್ನು ಎಲ್ಲರ ಎದುರಿಗೆ ಕರೆಯಿಸಿ ಕಬ್ಬಿಣದ ಸರಪಳಿಯಿಂದ ಹೊಡೆದು ಅವರು ಮಾಡಿದ ತಪ್ಪನ್ನು ಒಪ್ಪಿಕೊಳ್ಳುವಂತೆ ಮಾಡಿಸುವರು. ನಂತರ ದೇವರಿಗೆ ನೈವೇದ್ಯವಾದ ಅನ್ನ ಹಾಗೂ ತುಪ್ಪವನ್ನು ಹೋಮದಲ್ಲಿ ಹಾಕುವರು. ಬೆಂಕಿ ಹತ್ತುವವರೆಗೆ ಅದರಲ್ಲಿ ಅನ್ನ ಹಾಗೂ ತುಪ್ಪ ಹಾಕುತ್ತಾರೆ. ಬೆಂಕಿ ಹತ್ತಿದ ಮೇಲೆ ಪೂಜೆ ಮಾಡಿದ್ದು ಸಾರ್ಥಕವಾಯಿತು ಎಂದು ಭಾವಿಸುತ್ತಾರೆ. ನಂತರ ಸೆರೆಯ ನೈವೇದ್ಯವನ್ನು ಕೊಟ್ಟು ಹಿರಿಯರ ಹೆಸರುಗಳನ್ನು ಪಠಿಸುತ್ತಾ ಉಪವಾಸ ಇದ್ದ ವ್ಯಕ್ತಿ ಬಟ್ಟಲದಲ್ಲಿ ಹಿಡಿದಿಟ್ಟ ಹಸಿ ರಕ್ತದಲ್ಲಿ ಸೆರೆಯನ್ನು ಹಾಕಿ ಕಾಳಿಕ ದೇವಿಯ ಹೆಸರನ್ನು ಸ್ಮರಿಸುತ್ತಾ ಕುಡಿಯುತ್ತಾನೆ. ಅನ್ನದ ಪ್ರಸಾದವನ್ನು ತೆಗೆದುಕೊಂಡು ಉಪವಾಸ ಮುಕ್ತಾಯಗೊಳಿಸಿ ಬಂದಂತಹ ಜನರಿಗೆ ಊಟ ಮಾಡಿಸುವರು. ಪೂಜೆಗೆ ಇಟ್ಟ ಹೋತಮರಿಯ ತಲೆ ಹಾಗೂ ಕಾಲುಗಳನ್ನು ಹುರುದು ಅದರ ಪಲ್ಯೆಸಾರು ಮಾಡಿ ಮನೆತನದವರಷ್ಟೇ ತಿನ್ನುತ್ತಾರೆ. ಈ ರೀತಿ ಇವರು ಕಾಳಿಕದೇವಿಯ ಪೂಜೆ ಮಾಡುತ್ತಾರೆ.

ಶ್ರೀರಾಮದೇವಜಿ ಪೂಜೆ (ಅಲಖ) : ಕಂಜರಭಾಟ ಸಮುದಾಯದವರು ಶ್ರೀರಾಮದೇವಜಿಯ ಪೂಜೆಯನ್ನು ಮಾಡುತ್ತಾರೆ. ಇದು ಕೆಲವರ ಕುಲದೇವರು. ರಾಜಸ್ತಾನದ ರಣಭೋಡದಲ್ಲಿ ಶ್ರೀರಾಮದೇವಜಿಯ ದೇವಸ್ಥಾನ ಇದೆ. ಹೋಳಿಹುಣ್ಣಿಮೆಯ ೧೫ ದಿನ ಮೊದಲು ಪೂಜಾ ಸಮಾರಂಭ ನಡೆಯುವುದು. ಈ ಪೂಜೆಗೆ ಬೆಳದಿಂಗಳು ಇರಬೇಕು. ರಾಮದೇವಜಿಯ ಪೂಜಾ ಮಾಡುವ ಮನೆತನದ ಹಿರಿಯ ಅಂದು ಉಪವಾಸ ಇದ್ದು ಪೂಜೆಯನ್ನು ಮಾಡುತ್ತಾರೆ. ಮನೆಯ ಮುಂದೆ ಹಂದರವನ್ನು ಹಾಕಿ ಆಕಳ ಸಗಣಿ ಮತ್ತು ಮೂತ್ರದಿಂದ ನೆಲವನ್ನು ಸಾರಿಸಿ ಕುಂಕುಮ ಹಚ್ಚಿ ಸಿಂಗರಿಸುವರು. ನಂತರ ಚಪಾತಿ, ಬೆಲ್ಲ ತುಪ್ಪದ ಮಿಶ್ರಣವನ್ನು ತೆಗೆದುಕೊಂಡು ಮನೆಯ ಯಜಮಾನ ಪೂಜೆ ಪ್ರಾರಂಭ ಮಾಡುತ್ತಾನೆ. ಬೆಂಕಿಯನ್ನು ತರಿಸಿ ನೆಲದ ಮೆಲೆ ಹಾಕಿ ದೇವತೆಗಳ ಹೆಸರು ಮತ್ತು ಹಿರಿಯರ ಹೆಸರುಗಳನ್ನು ಪಠಿಸುತ್ತಾ ನೈವೇದ್ಯ ಬೆಂಕಿಯಲ್ಲಿ ಹಾಕುತ್ತಾರೆ. ಮನೆಯ ಯಜಮಾನ ಮೊದಲು ಪ್ರಸಾದ ಸೇವಿಸಿ ಉಪವಾಸ ಮುಕ್ತಾಯ ಮಾಡಿ ಕುಲಗುರು(ಗೋಡ್ಡಿವಾನ) ಅವರಿಗೆ ಪ್ರಸಾದ ಕೊಟ್ಟು ನಂತರ ಉಳಿದ

ಪ್ರಸಾದ ಪುರುಷರಿಗೆ ಕೊಡುವನು. ಸಣ್ಣ ಪಿಂಡವನ್ನು ಮನೆಯ ಯಜಮಾನ ತಿನ್ನುತ್ತಾನೆ. ದೊಡ್ಡ ಪಿಂಡಾವನ್ನು ಉಳಿದ ಪುರುಷರೆಲ್ಲರು ತಿನ್ನುವರು. ಪಿಂಡದ ಪ್ರಸಾದ ಮಹಿಳೆಯರಿಗೆ ಕೊಡುವುದಿಲ್ಲ. ನಂತರ ಚಪಾತಿ ಮತ್ತು ಬೆಲ್ಲದ ಪಾಯಸ ಎರಡೂ ಕೂಡಿಸಿ ಎಲ್ಲರೂ ಊಟವನ್ನು ಮಾಡುವರು. ಈ ರೀತಿ ಶ್ರೀರಾಮದೇವಜಿಯ ಪೂಜೆಯನ್ನು ಮಾಡುತ್ತಾರೆ.

ಶ್ರೀಕೃಷ್ಣ ಆಧ್ಯಾತ್ಮಿಕ ಮಂದಿರ : ಹುಬ್ಬಳ್ಳಿಯಲ್ಲಿ ನೆಲೆಯೂರಿದ ಕಂಜರಭಾಟ ವಸಾಹತಿಯಲ್ಲಿ ೧೯೭೦ರಲ್ಲಿ ಶ್ರೀಕೃಷ್ಣ ಆಧ್ಯಾತ್ಮಿಕ ಮಂದಿರ ಸ್ಥಾಪನೆಯಾಗಿ ಪ್ರತಿ ವರ್ಷ ಶ್ರೀಕೃಷ್ಣ ಜಯಂತಿ, ರಾಮನವಮಿ, ತುಳಸಿ ಮದುವೆ, ಗಣೇಶ ಚವತಿ ಮುಂತಾದ ಉತ್ಸವಗಳನ್ನು ಈ ಮಂದಿರಲ್ಲಿ ಮಾಡುತ್ತಾರೆ. ನಿತ್ಯ ಭಜನೆ, ಆರತಿ ಕಾರ್ಯಕ್ರಮಗಳು ಜರುಗುತ್ತವೆ.

ಶ್ರೀ ಯೋಗೇಶ್ವರ ಕೃಷ್ಣ ಮಂದಿರ : ಗದಗ ಬೆಟಗೇರಿಯ ಗಾಂಧಿನಗರದಲ್ಲಿ ನೆಲೆಯೂರಿದ ಕಂಜರಭಾಟ ವಸಾಹತಿಯಲ್ಲಿ ೧೯೮೬ರಲ್ಲಿ ಈ ಮಂದಿರ ಸ್ಥಾಪನೆಯಾಗಿದೆ.

ಶ್ರೀಕೃಷ್ಣ ಜನ್ಮಾಷ್ಟಮಿ : ಕಂಜರಭಾಟರು ಪ್ರತಿವರ್ಷ ಶ್ರಾವಣ ಮಾಸ ಕೃಷ್ಣಪಕ್ಷ ಅಷ್ಟಮಿಯ ದಿನ ಶ್ರೀಕೃಷ್ಣ ಜನ್ಮಾಷ್ಟಾಮಿಯನ್ನು ಆಚರಿಸುತ್ತಾರೆ. ಕೃಷ್ಣಜನ್ಮಾಷ್ಟಮಿಯ ದಿನ ಎಲ್ಲರೂ ಉಪವಾಸ ಇರುತ್ತಾರೆ. ಅಂದು ಮುಂಜಾನೆ ಧ್ವಜಪೂಜೆ, ವೀಣೆ ಮತ್ತು ತಾಳದ ಪೂಜೆಯನ್ನು ಮಾಡುತ್ತಾರೆ ವೀಣೆಯನ್ನು ಎರಡು ದಿನಗಳವರೆಗೆ ನೆಲದ ಮೇಲೆ ಇಡುವುದಿಲ್ಲ. ರಾತ್ರಿ ೧೨ ಗಂಟೆಗೆ ಶ್ರೀಕೃಷ್ಣ ಜನ್ಮಾಷ್ಟಮಿ ಆಚರಿಸುತ್ತಾರೆ. ಮುಚ್ಚಿದ ಮೂರ್ತಿಯ ಮೇಲಿನ ಅರಿವೆಯನ್ನು ತೆಗೆಯುತ್ತಾರೆ. ಶ್ರೀಕೃಷ್ಣ ಜನ್ಮ ಆಯಿತೆಂದು ಜೋಗುಳ ಹಾಡುವರು. ನಂತರ ಪ್ರಸಾದದೊಂದಿಗೆ ಎಲ್ಲರೂ ಉಪವಾಸ ಮುಗಿಸಿ ರಾತ್ರಿ ಊಟ ಮಾಡುತ್ತಾರೆ. ಮರುದಿನ ಶ್ರೀಕೃಷ್ಣ ಮಂದಿರದಿಂದ ದಿಂಡಿಯಾತ್ರೆ ಭಜನೆ ಮಾಡುತ್ತ ಮೊಸರು ಗಡಿಗೆ ಕಟ್ಟಿದ ಸ್ಥಳಕ್ಕೆ ಬರುವರು. ಅಲ್ಲಿ ಎತ್ತರದಲ್ಲಿ ಮೊಸರು ಗಡಿಗೆಯನ್ನು ಕಟ್ಟಿರುತ್ತಾರೆ. ಹಾಗೆ ಕೆಳಗೆ ನೆಲವನ್ನು ಅಗಿದು ನೀರು ಹಾಕಿರುತ್ತಾರೆ. ಅದರಲ್ಲಿ ಯುವಕರು ಮೊಸರಿನ ಗಡಿಗೆ ಹೊಡೆಯುವ ಪ್ರಯತ್ನ ಮಾಡುತ್ತಾರೆ. ಅವರ ಮೇಲೆ ಇತರರು ಬಣ್ಣದ ನೀರು ಎರಚುತ್ತಾರೆ. ಯುವಕರು ಕೆಳಗೆ ವೃತ್ತಕಾರದಲ್ಲಿ ನಿಂತು ಒಬ್ಬರ ಮೇಲೊಬ್ಬರು ಹತ್ತಿ ಮೊಸರು ಗಡಿಗೆಯನ್ನು ಹೊಡೆಯುತ್ತಾರೆ. ನಂತರ ಶ್ರೀಕೃಷ್ಣ ಮಂದಿರಕ್ಕೆ ಬಂದು ಭಕ್ತಿ ಭಾವಾವೇಶದಿಂದ ಸ್ತುತಿ ಮಾಡಿ ಕಾರ್ಯಕ್ರಮಗಳನ್ನು ಮುಕ್ತಾಯ ಮಾಡಿ ಪ್ರಸಾದ ಹಂಚುತ್ತಾರೆ. ಈ ರೀತಿ ಕಂಜರಭಾಟರು ಶ್ರೀಕೃಷ್ಣ ಜಯಂತಿ ಉತ್ಸವವನ್ನು ಆಚರಿಸುತ್ತಾರೆ.

ಹೋಳಿಹಬ್ಬ : ಹೋಳಿ ಹುಣ್ಣಿಮೆ ಹಬ್ಬವನ್ನು ನಮ್ಮ ದೇಶದ ತುಂಬೆಲ್ಲ ಆಚರಿಸುತ್ತಾರೆ. ಈ ಹಬ್ಬವನ್ನು ಜನರು ತಮ್ಮದೇ ಆದ ರೀತಿಯಿಂದ ಆಚರಿಸುತ್ತಾರೆ. ಕಂಜರಭಾಟರು ಆಚರಿಸುವ ಹಬ್ಬಗಳಲ್ಲಿ ಈ ಹಬ್ಬ ಬಹು ಪ್ರಮುಖವಾಗಿದೆ. ಇದೇ ಸಮಯಕ್ಕೆ ಇವರು ತಮ್ಮ ಕುಲದೇವತೆಗಳ ಪೂಜೆಯನ್ನು ಮಾಡುತ್ತಾರೆ. ಈ ಹಬ್ಬವನ್ನು ಗಂಡಸರು, ಹೆಂಗಸರು ಸೇರಿ ಆಚರಿಸುತ್ತಾರೆ. ಈ ಹಬ್ಬದಲ್ಲಿ ಹಾಡುವುದು, ಕುಣಿಯುವುದು ವಿಶೇಷವಾಗಿರುವುದರಿಂದ ಹೋಳಿ ಹಬ್ಬದ ಪೂರ್ವದಲ್ಲಿಯೇ ದಿನಾಲು ರಾತ್ರಿ ಹಾಡುವುದು ಕುಣಿಯುವುದು ರೂಢಿ ಮಾಡುತ್ತಾರೆ.

ಹೋಳಿ ಹಬ್ಬದ ದಿನ ಒಂದು ಔಡಲ ಗಿಡವನ್ನು ತಂದು ನೆಲದಲ್ಲಿ ಹುಗಿಯುತ್ತಾರೆ. ಅದರ ಸುತ್ತಲು ಕಟ್ಟಿಗೆ, ಕುಳ್ಳುಗಳನ್ನು ಇಟ್ಟು ಹೂವಿನ ಮಾಲೆ, ತೆಂಗಿನಕಾಯಿಯನ್ನು ಗಿಡಕ್ಕೆ ಜೊತು ಬಿಡುತ್ತಾರೆ. ಅಂದು ಎಲ್ಲರೂ ಹೊಸ ಬಟ್ಟೆ ಧರಿಸುತ್ತಾರೆ. ಮನೆಯಲ್ಲಿ ಹೋಳಿಗೆ ಮಾಡುತ್ತಾರೆ. ಗಂಡಸರು, ಹೆಂಗಸರು, ಹುಡುಗರು ಎಲ್ಲರೂ ಮದ್ಯಸೇವನೆ ಮಾಡಿ ಎಲ್ಲರೂ ರಸಭರಿತವಾದ 'ಕಾಮ'(ಲೈಂಗಿಕ) ಗೀತೆಗಳನ್ನು ಹಾಡುತ್ತಾ ಕುಣಿಯುತ್ತಾರೆ. ಕಾಮನ ದಹನದ ಸಿದ್ಧತೆಗಳನ್ನು ಮಾಡುತ್ತಾರೆ. ಅಲಂಕರಿಸಿದ ಔಡಲ ಗಿಡದ ಸುತ್ತಲು ಪುರುಷರು ಮಹಿಳೆಯರು, ಮಕ್ಕಳು ಕೈ ಕೈ ಹಿಡಿದು ಸುತ್ತುತ್ತಾರೆ. ಅಶ್ಲೀಲವಾದ ಬಿಂಗಿ ಪದಗಳನ್ನು ಹಾಡುತ್ತಾ ಹಿರಿಯರ ಹೆಸರುಗಳನ್ನು ಸ್ಮರಿಸುತ್ತ ಲಬ ಲಬ ಎಂದು ಬೊಬ್ಬೆ ಹೊಡೆಯುತ್ತಾರೆ. ಯಾವ ಭೇದ, ಭಾವ ಇಲ್ಲದೆ ಕಂಜರಭಾಟ ಸಮುದಾಯದ ಎಲ್ಲರು ಭಾಗವಹಿಸಿ ಈ ಹಬ್ಬವನ್ನು ಆಚರಿಸುವರು.

ದಸರಾ ದುರ್ಗಾದೇವಿ ಪೂಜೆ : ಈ ಹಬ್ಬವನ್ನು ಒಂಭತ್ತು ದಿನ ಆಚರಿಸುತ್ತಾರೆ. ಇದಕ್ಕೆ ನವರಾತ್ರಿ ಎಂದು ಕರೆಯುತ್ತಾರೆ. ಒಂಭತ್ತು ದಿನ ದುರ್ಗಾದೇವಿಗೆ ಶೃಂಗರಿಸಿ ದಿನಾಲು ಪೂಜೆ ಮಾಡುತ್ತಾರೆ. ಭಕ್ತಿ ಭಾವಗಳಿಂದ ಹಾಡಿ, ದಾಂಡಿಯಾ ಕೋಲಾಟ ಆಡುತ್ತಾರೆ. ಒಂಬತ್ತನೆಯ ದಿನ ಕುರಿಯನ್ನು ಬಲಿ ಕೊಟ್ಟು ತಮ್ಮ ಕುಲದೇವತೆಗೆ ಪೂಜೆಯನ್ನು ಸಲ್ಲಿಸುತ್ತಾರೆ. ಕೊಟ್ಟ ಬಲಿಯನ್ನು ಸ್ವೀಕರಿಸಿ ಸಮಸ್ತ ಜನರಿಗೆ ಸುಖ, ಶಾಂತಿ, ಸಂಪತ್ತು ಕೊಟ್ಟು ರಕ್ಷಿಸಬೇಕೆಂದು ಬೇಡಿಕೊಳ್ಳುತ್ತಾರೆ. ದಶಮಿಯ ದಿನ ರಾತ್ರಿ ಬನ್ನಿಗಿಡದಿಂದ ಬನ್ನಿಯನ್ನು ತಂದು ಹಿರಿಯರಿಗೆ ಕೊಟ್ಟು ಕಾಲಿಗೆ ನಮಸ್ಕರಿಸಿ ಆಶೀರ್ವಾದ ಪಡೆಯುತ್ತಾರೆ. ಈ ರೀತಿ ನವರಾತ್ರಿ ಹಾಗೂ ವಿಜಯದಶಮಿಯನ್ನು ವಿಶಿಷ್ಟ ರೀತಿಯಲ್ಲಿ ಆಚರಿಸುತ್ತಾರೆ.

ಕಂಜರಭಾಟರ ನ್ಯಾಯ ಪಂಚಾಯ್ತಿ

ನ್ಯಾಯ ಪಂಚಾಯತಿ ರಚನೆ

ಸಮಾಜದ ಕಾರ್ಯಕಲಾಪಗಳು ಸರಿಯಾಗಿ ನಡೆಯಲು ಕೆಲ ನಿಮಯಗಳನ್ನು ಪಾಲಿಸಬೇಕಾಗುತ್ತದೆ. ಸಮುದಾಯದಲ್ಲಿ ಮದುವೆ, ಮರಣ, ನ್ಯಾಯ ಇತ್ಯಾದಿ ವ್ಯವಹಾರಗಳು ಸಮುದಾಯದ ಹಿರಿಯರ ಮುಖಾಂತರ ನಡೆಯುವುದು. ಈ ಜವಾಬ್ದಾರಿಯನ್ನು ಹಿರಿಯರು ಹೊತ್ತು ನ್ಯಾಯಬದ್ಧ ಹಾಗೂ ಪ್ರಾಮಾಣಿಕವಾಗಿ ಕಾರ್ಯಗಳನ್ನು ಮಾಡುತ್ತಾರೆ. ಕಂಜರಭಾಟ ಸಮುದಾಯದ ಸಾಮಾಜಿಕ ವ್ಯವಸ್ಥೆ ನೆಮ್ಮದಿ ಹಾಗೂ ಅದರ ಬೆಳವಣಿಗೆಗಾಗಿ ಪಂಚಾಯತ ವ್ಯವಸ್ಥೆ ಮಾಡಲಾಗಿದೆ. ಇದಕ್ಕೆ "ಜಾತ ಪಂಚಾಯತ್" ಎಂದು ಕರೆಯುತ್ತಾರೆ. ಪ್ರತಿಯೊಂದು ಕಾರ್ಯಗಳನ್ನು ಸುಲಭ ಹಾಗೂ ಸುವ್ಯವಸ್ಥಿತ ರೀತಿಯಲ್ಲಿ ಕಂಜರಭಾಟ ಸಮುದಾಯವು ಮಾಡಲು ಪ್ರಯತ್ನಿಸುತ್ತಾ ಬಂದಿದೆ.

ಈ ಸಮುದಾಯದಲ್ಲಿ ಉದ್ಭವಿಸುವ ಸಮಸ್ಯೆಗಳು ಸಮುದಾಯದ ಪಂಚಾಯತಿಯಲ್ಲಿ ಬಗೆ ಹರಿಸಿಕೊಳ್ಳುತ್ತಾರೆ. ಇವರ ನ್ಯಾಯಗಳು ಪೊಲೀಸ್ ಠಾಣೆಗಳಿಗೆ ಹೋಗುವುದಿಲ್ಲ. ಕೊಲೆ, ಜಗಳ, ಕಳ್ಳತನ, ಮೋಸತನ, ಗಂಡಹೆಂಡತಿ ಜಗಳ, ಹೊಲ, ಮನೆತನದ ವ್ಯವಹಾರ, ಅನೈತಿಕ ಸಂಬಂಧ ಸೋಡಾಚೀಟಿ ಮುಂತಾದ ವಿಷಯಗಳ ಬಗ್ಗೆ ನ್ಯಾಯಗಳು ಬಂದರೆ ಅವು ಸಮುದಾಯದ

ಪಂಚಾಯತಿಯಲ್ಲಿ ನ್ಯಾಯಬದ್ಧವಾಗಿ ಸರಿಯಾದ ನಿರ್ಣಯಗಳನ್ನು ಕೊಟ್ಟು ಸಮುದಾಯದ ದುಃಖಗಳನ್ನು ಪಂಚರು ತೆಗೆದುಕೊಂಡು ಅವರಿಗೆ ಸುಖ ಕೊಡುತ್ತಾರೆ. ಸಮುದಾಯದ ಪಂಚರು ಕೊಟ್ಟ ನ್ಯಾಯಕ್ಕೆ ಸಮಾಜದವರು ತಲೆ ಬಾಗುತ್ತಾರೆ. ಹೀಗಾಗಿ ಇಲ್ಲಿಯವರೆಗೆ ಈ ಸಮುದಾಯದವರ ಮೇಲೆ ಕೇಸುಗಳು ದಾಖಲವಾಗಿರುವುದಿಲ್ಲ.

ಕಂಜರಭಾಟ ಸಮಾಜದಲ್ಲಿ ಪೂರ್ವದಿಂದಲೂ ಜಾತ ಪಂಚಾಯತ ಪದ್ಧತಿ ಇದೆ. ಈ ಜನ ಸಂಚಾರಿಗಳಾಗಿದ್ದರು ೮-೧೦ ಕುಟುಂಬಗಳು ಒಂದು ಕಡೆ ಸೇರಿದಾಗ ತಮ್ಮ ನ್ಯಾಯಗಳನ್ನು ಪಂಚರಿಗೆ ಒಪ್ಪಿಸಿ ನ್ಯಾಯ ಪಡೆದುಕೊಳ್ಳುತ್ತಿದ್ದರು. ಜಾತ ಪಂಚಾಯತಿಯ ಸದಸ್ಯರೆಲ್ಲರೂ ಗಿಡದ ಬುಡಕ್ಕೆ ವೃತ್ತಕಾರದಲ್ಲಿ ಕುಳಿತು ಕೈಯಲ್ಲಿ ಡೊಂಕು ಮುಖದ ಬೆತ್ತದ ಬಡಿಗೆ(ಖುಂಡಿಯಾ)ಯನ್ನು ತೆಗೆದುಕೊಂಡು ನೆಲಕ್ಕೆ ಬಡಿದು, ಬಡಿದು ಪಂಚಾಯತಿ ಮಾಡುತ್ತಾರೆ.

ಪಂಚಾಯತಿ ನಡೆಸಲು ಸಮುದಾಯದಲ್ಲಿ ಒಬ್ಬ ಮುಖ್ಯಸ್ಥ ಇರುತ್ತಾನೆ. ಅವನಿಗೆ 'ಸರಪಂಚ' ಎಂದು ಕರೆಯುತ್ತಾರೆ. ಸರಪಂಚ ಪಂಚಾಯತಿಯ ಪ್ರತಿಯೊಂದು ಕಾರ್ಯಗಳನ್ನು ನಡೆಸುತ್ತಾನೆ. ಇವನು ಪಂಚಾಯತಿಯ ಮುಖ್ಯಸ್ಥನಾಗಿದ್ದು ಸಮುದಾಯದಲ್ಲಿ ಪ್ರತಿಷ್ಠಿತ ವ್ಯಕ್ತಿ ಆಗಿರುತ್ತಾನೆ. ಸಮುದಾಯದ ಅಂತರಿಕ ಹಾಗೂ ವ್ಯವಹಾರಿಕ ನ್ಯಾಯಗಳನ್ನು ಇತರ ಪಂಚರೊಂದಿಗೆ ಚರ್ಚಿಸಿ ಬುದ್ಧಿವಂತಿಕೆಯಿಂದ ಯಾರಿಗೂ ಅನ್ಯಾಯವಾಗದಂತೆ ಪ್ರತಿಯೊಬ್ಬರಿಗೂ ಯೋಗ್ಯ ನ್ಯಾಯ ದೊರೆಯುವಂತೆ ಮಾಡುತ್ತಾನೆ. ಸರಪಂಚ ನ್ಯಾಯಬದ್ಧವಾಗಿ ನಿರ್ಣಯಗಳನ್ನು ಕೊಟ್ಟರೆ ಸಮುದಾಯದಲ್ಲಿ ಅಂಥವರಿಗೆ ಗೌರವ ದೊರೆಯುವುದು. ಸಮುದಾಯದಲ್ಲಿ ಸರಪಂಚರಿಗೆ ಪೂರ್ವಕಾಲದಿಂದಲೂ ಗೌರವದಿಂದ ಕಾಣುತ್ತಾ ಬಂದಿದ್ದಾರೆ. ಸಮುದಾಯದ ಆಗುಹೋಗುಗಳಿಗೆಲ್ಲ ಸರಿಯಾಗಿ ನ್ಯಾಯ ಕೊಡಲು ಸಮುದಾಯದ ಅನುಭವಿಕ ಹಿರಿಯರನ್ನು ಕೂಡಿಸಿ ಪಂಚಾಯತಿ ಮಾಡುತ್ತಾರೆ. ಈ ಸಮುದಾಯದ ಆಡಳಿತ ಸ್ವರೂಪ ಇತರ ಸಮುದಾಯಗಳಿಗಿಂತ ಭಿನ್ನವಾಗಿದೆ. ಎಲ್ಲ ಹಂತಗಳಲ್ಲೂ ಸಮುದಾಯದ ಒಗ್ಗಟ್ಟನ್ನು ಕಾಯ್ದುಕೊಳ್ಳುವ ಸಾಮರ್ಥ್ಯ ಈ ಜನರಲ್ಲಿ ಮುಖ್ಯವಾಗಿ ಕಂಡುಬರುತ್ತದೆ. ಬ್ರಿಟಿಷರು ಕಂಜರಭಾಟರ ನ್ಯಾಯಗಳನ್ನು ಕುರಿತು ವಿಕ್ಷಿಸುತ್ತಿದ್ದರು. ಇವರು ಸರಿಯಾದ ನ್ಯಾಯ ನಿರ್ಣಯ ಕೊಡುತ್ತಾರೆ ಎಂದು ತಮ್ಮ ವಾರ್ಷಿಕ ವರದಿಯಲ್ಲಿ ಪ್ರಕಟಿಸಿದ್ದಾರೆ.

ಈ ಪಂಚಾಯತಿ ಪದ್ಧತಿ ಸಮುದಾಯದಲ್ಲಿ ಇಲ್ಲಿಯವರೆಗೆ ಉಳಿಯಲು ಪಂಚರ ಮೇಲಿನ ವಿಶ್ವಾಸವೇ ಮುಖ್ಯವಾಗಿದೆ. ಪಂಚರೆಂದರೆ ದೇವರ ಸಮಾನ ಎಂದು ಹೇಳುತ್ತಾರೆ. ಈ ಪದ್ಧತಿ ಬಹಳ ವರ್ಷಗಳಿಂದ ನಡೆದು ಬಂದ ಪದ್ಧತಿ ಇದಕ್ಕೆ ಒಂದು ಉದಾಹರಣೆ ಇದೆ.

ರಾಜಸ್ತಾನದಲ್ಲಿ ಸಾಂಸಿ (ಕಂಜರಭಾಟ) ಜನರು ವಾಸವಾಗಿದ್ದರು ಇವರು ಧೈರ್ಯಶಾಲಿಗಳು, ಸಾಹಸಿ ವೀರರಾಗಿದ್ದರು. ರಜಪೂತ ರಾಜರ ಕಡೆಗೆ ಕೆಲಸವನ್ನು ಮಾಡುತ್ತಿದ್ದರು. ರಜಪೂತ ರಾಜರೊಬ್ಬರ ಕಡೆಗೆ ಸಾಂಸಿ ಸಮುದಾಯದ ಧೀರಿಯಾ ಎಂಬಾತ ಕೆಲಸಕ್ಕೆ ಇದ್ದನು. ರಾಜನು ಅವನಿಗೆ ರಸ್ತೆ

ಮಾಡಿಸುವ ಕೆಲಸವನ್ನು ಒಪ್ಪಿಸಿದನು. ಅವನು ದುಡಿಸಿಕೊಳ್ಳಲು ಜನರನ್ನು ಬೇರೆ ಬೇರೆ ಊರುಗಳಿಂದ ಹಿಡಿದು ತರುತ್ತಿದ್ದನು. ಸಾಂಸಿ ಸಮುದಾಯದ ಯುವಕ, ಯುವತಿಯರನ್ನು ಹಿಡಿದುಕೊಂಡು ದುಡಿಸತೊಡಗಿದನು. ಧೀರಿಯಾ ಸಮುದಾಯದ ಮೇಲೆ ಅತ್ಯಾಚಾರ ಮಾಡುತ್ತಿದ್ದನು. ಇವನು ಖೊಟ್ಟಿ ನಾಣ್ಯಗಳನ್ನು ಚಲಾವಣೆ ಮಾಡತೊಡಗಿದನು. ಅಸಲಿ ನಾಣ್ಯಗಳನ್ನು ಅರಮನೆಯ ಖಜಾಂಚಿಯೊಂದಿಗೆ ಸೇರಿ ತಾವೇ ಹಂಚಿಕೊಳ್ಳುತ್ತಿದ್ದರು. ಈ ಕಾರ್ಯ ಎಷ್ಟೋ ದಿನ ನಡೆಯುತ್ತಾ ಬಂತು. ಧೀರಿಯಾ ತನ್ನಷ್ಟಕ್ಕೆ ತಾನು ನನ್ನಂಥವರು ಯಾರು ಇಲ್ಲ ಎಂದು ತಿಳಿದುಕೊಂಡನು. ಸಾಂಸಿ ಜನರು ಇವನ ಕೃತ್ಯಗಳಿಂದ ಬೇಸತ್ತಿದ್ದರು. ಧೀರಿಯಾನ ಮೊಮ್ಮಗ (ಮಗಳ ಮಗ) ಲಾಲಜಿ ಅಜ್ಜನ ಕಾರ್ಯಗಳನ್ನು ನೋಡಿ ನೊಂದುಕೊಂಡನು. ಇದನ್ನು ತನ್ನ ತಾಯಿಗೆ ಹೇಳಿದನು. ತಾಯಿ ಸಹ ತನ್ನ ತಂದೆಗೆ ಹೆದರುತ್ತಿದ್ದಳು. ಲಾಲಜಿ ೨-೩ ಸಲ ಅಜ್ಜನಿಗೆ ಹೇಳಿದ ಅಜ್ಜ ನೀನು ಮಾಡುತ್ತಿರುವ ಕಾರ್ಯ ಸರಿ ಇಲ್ಲ ಸಮುದಾಯ ದ್ರೋಹದ ಕೆಲಸವಾಗಿದೆ. ಎಂದಾಗ ಧೀರಿಯಾ ತನ್ನ ಮೊಮ್ಮಗನಿಗೆ ಸಿಟ್ಟು ಮಾಡಿದನು. ಲಾಲಜಿ ತನ್ನ ವಿಚಾರ ಬಿಡಲಿಲ್ಲ. ಪದೇ ಪದೇ ತನ್ನ ತಾಯಿಯ ಜೊತೆಗೆ ಚರ್ಚೆ ಮಾಡುತ್ತಾ ಇದನ್ನು ಒಂದು ದಿನ ತಾಯಿಗೆ ಹೇಳುತ್ತಾನೆ. ನೋಡು ತಾಯಿ ನಿನ್ನ ತಂದೆಗೆ ಹೋಗಿ ಹೇಳು ಸಮುದಾಯದ ಯುವಕ ಯುವತಿಯನ್ನು ಬಿಟ್ಟು ಬಿಡು. ಇಂಥ ಕ್ರೂರ ಕೆಲಸ ಮಾಡಬೇಡವೆಂದು ಅಜ್ಜನಿಗೆ ತಿಳಿಸಲು ತಾಯಿಗೆ ಹೇಳುತ್ತಾನೆ ಆಗ ಅವನ ತಾಯಿಯು "ನಾನು ಹೋಗುತ್ತೇನೆ ನನ್ನ ತಂದೆಗೆ ಹೇಳುತ್ತೇನೆ. ಕೇಳಿದರೆ ಒಳ್ಳೇಯದು. ನನ್ನ ಹಾದಿ ಮೂರು ದಿನ ಕಾಯು, ನಾನು ಒಂದು ವೇಳೆ ಮೂರುದಿನದೊಳಗೆ ಬರದಿದ್ದರೆ ನಾನು ಸಂಕಟದಲ್ಲಿ ಬಿದ್ದಿದ್ದೇನೆ ಎಂದು ನೀನು ತಿಳಿದುಕೊಳ್ಳಬೇಕು ಎಂದು ಮಗನಿಗೆ ಹೇಳಿ ಹೋದಳು. ಊರಿಗೆ ಹೋಗಿ ಲಾಲಜಿಯ ವಿಚಾರ ತಂದೆಗೆ ಹೇಳುತ್ತಾಳೆ. ಧೀರಿಯಾ ಸಿಟ್ಟಿಗೆದ್ದು ನನಗೆ ಬುದ್ಧಿವಾದ ಹೇಳಲು ಬಂದಿಯಾ ಸುಮ್ಮನೆ ಹೋಗು ಎನ್ನುತ್ತಾನೆ. ನಾನು ಹೋಗುವುದಿಲ್ಲ ಎಂದು ಹೇಳುತ್ತಾಳೆ. ಧೀರಿಯಾ ಸಿಟ್ಟಿಗೆದ್ದು ತನ್ನ ಮಗಳಿಗೆ ಗಿಡಕ್ಕೆ ಕಟ್ಟಿ ಹಾಕುತ್ತಾನೆ. ಈ ಸುದ್ದಿ ತಿಳಿದ ಕೂಡಲೆ ಲಾಲಜಿ ತನ್ನ ಅಜ್ಜನ ಊರಿಗೆ ಬರುತ್ತಾನೆ. ತಾಯಿಯ ಪರಿಸ್ಥಿತಿ ನೋಡಿ ಕಣ್ಣು ಕೆಂಪಾದವು. ಅಜ್ಜನ ತಪ್ಪ್.ಗಳನ್ನು ಎತ್ತಿ ತೋರಿಸುತ್ತಾನೆ. ಆದರೆ ಅಜ್ಜ ಲಾಲಜಿಯ ಮಾತಿಗೆ ಬೆಲೆ ಕೊಡುವುದಿಲ್ಲ. ನಾನು ನಿನ್ನ ಕಾರಭಾರವೆಲ್ಲ ರಾಜನಿಗೆ ಹೇಳುತ್ತೇನೆ ಎಂದು ಹೇಳುತ್ತಾನೆ. ನೀನು ರಾಜನಿಗೆ ಹೇಳಿ ನನಗೆ ಬಂಧನಕ್ಕೊಳಪಡಿಸದಿದ್ದರೆ ನಿನಗೆ ಗೋಣಿ ಚೀಲದಲ್ಲಿ ಕಟ್ಟಿ ಸಮುದ್ರದಲ್ಲಿ ಚಲ್ಲುತ್ತೇನೆ ಎಂದು ಧೀರಿಯಾ ಹೇಳಿದನು. ನಿನ್ನ ನೈಜ ರೂಪವಯನ್ನು ರಾಜನಿಗೆ ತಿಳಿಸಿ ನಿನ್ನ ಅಪರಾಧಗಳನ್ನು ಸಿದ್ಧಪಡಿಸಿ ಬಂಧನಗೊಳಿಸಿ ಜೈಲಿಗೆ ಕಳಿಸದಿದ್ದರೆ ನನ್ನ ಹೆಸರು ಲಾಲಜನೇ ಅಲ್ಲ ನಿನಗೆ ಜೀವಂತ ಗೋಣಿ ಚೀಲದಲ್ಲಿ ಹಾಕಿ ಕಟ್ಟಿ ಸಮುದ್ರದಲ್ಲಿ ಚಲ್ಲುತ್ತೇನೆ ಎಂದು ಸವಾಲುಹಾಕಿ ತಾಯಿಗೆ ಬಿಡಿಸಿಕೊಂಡು ತನ್ನ ಊರಿಗೆ ಹೋದನು. ಸಮಯ ನೋಡಿ ರಾಜನಿಗೆ ಭೇಟಿಯಾಗಿ ಅಜ್ಜ ಮಾಡುತ್ತಿರುವ ಅನ್ಯಾಯದ ಬಗೆಗೆ ಸವಿಸ್ತಾರವಾಗಿ ಹೇಳುತ್ತಾನೆ. ರಾಜ ತನ್ನ ಗುಪ್ತಚಾರರನ್ನು ಕಳಿಸಿ ನಿಜ ಸಂಗತಿ ತಿಳಿದು ಕೊಳ್ಳುತ್ತಾನೆ. ಲಾಲಜಿ ಹೇಳಿದ್ದು ನಿಜವೆಂದು ಗೊತ್ತದಾಗ ಧೀರಿಯಾನನ್ನ ಬಂಧಿಸಿ ಜೈಲಿಗೆ ಕಳಿಸುತ್ತಾನೆ. ಕೆಲ ದಿನಗಳ ನಂತರ ಧೀರಿಯಾ

ಜೈಲಿನಿಂದ ಬಿಡುಗಡೆಯಾಗಿ ಬಂದು ಮೊದಲು ಮೊಮ್ಮಗ ಲಾಲಜಿಗೆ ಭೇಟ್ಟಿಯಾಗಿ ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಾನೆ. ಲಾಲಜಿ ತನ್ನ ಅಜ್ಜನಿಗೆ ಜೀವಂತ ಗೋಣಿ ಚೀಲದಲ್ಲಿ ಹಾಕಿ ಸಮುದ್ರದಲ್ಲಿ ಚೆಲ್ಲುತ್ತಾನೆ. ಧೀರಿಯಾನ ಎಲುವು ಲಾಲಜಿ ಮೀನುಗಳಿಗೆ ತಿನಿಸಿದನು ಎಂದು ಹೇಳುತ್ತಾರೆ. ಲಾಲಜಿ ಮಾಡಿದ ಸಾಹಸಕ್ಕೆ ಎಲ್ಲರೂ ಮೆಚ್ಚಿಗೆ ವ್ಯಕ್ತಪಡಿಸುತ್ತಾರೆ.

ಸ್ವಲ್ಪ ದಿನಗಳ ನಂತರ ದಿಲಾರಖಾ ಜೈಲಿನಿಂದ ಬಿಡುಗಡೆಯಾಗಿ ಬರುತ್ತಾನೆ. ಮನೆಗೆ ಬಂದು ತನ್ನ ತಂಗಿಯರ ಬಗೆಗೆ ವಿಚಾರಿಸುತ್ತಾನೆ. ಧೀರಿಯಾ ಹಿಡಿದುಕೊಂಡು ಹೋಗಿದ್ದಾನೆ ಎಂದು ಹೇಳುತ್ತಾರೆ. ಅವನು ಸಿಟ್ಟಿಗೆದ್ದು ಧೀರಿಯಾನ ಊರಿಗೆ ಒಂಟೆಯ ಮೇಲೆ ಹೋಗುತ್ತಾನೆ. ಧೀರಿಯಾ ಸತ್ತ ಸುದ್ದಿ ಹಾಗೂ ಲಾಲಜಿಯ ಸಾಹಸದ ಬಗೆಗೆ ದಿಲಾರಖಾಗೆ ಗೊತ್ತಾಗುತ್ತದೆ. ದಿಲಾರಖಾ ಸಮುದಾಯದ ಎಲ್ಲ ಜನರಿಗೆ ಬಿಡಿಸಿ ಅಲ್ಲಿಯೇ ಸಮುದಾಯದ ಹಿರಿಯರನ್ನು ಕೂಡಿಸಿ ಸಮುದಾಯದಲ್ಲಿ ಆಗುತ್ತಿರುವ ಅನ್ಯಾಯಗನ್ನು ತಡೆಗಟ್ಟಲು ಸಮುದಾಯದ ಪಂಚಾಯತಿ ಮಾಡುವುದು ಅವಶ್ಯ ಇದೆ ಎಂದು ಮನವರಿಕೆ ಮಾಡಿಕೊಡುತ್ತಾನೆ. ಎಲ್ಲರು ಅದಕ್ಕೆ ಒಪ್ಪಿಕೊಂಡರು. ಒಂದು ದಿನ ಸಮುದಾಯದ 'ಮ್ಹಾಲ್ಲಾ' ಮತ್ತು 'ಬಿಡ್ಡು' ಪಂಗಡದ ಜನರು ಎಲ್ಲರೂ ಸೇರಿದರು. ಇವುಗಳಲ್ಲಿರುವ ಒಂಭತ್ತು ಮ್ಹಾಲ್ಲಾ ಹಾಗೂ ಒಂಭತ್ತು ಬಿಡ್ಡು ಜಾತಿಯವರು ಸೇರಿದರು. ಮೊದಲು ಮುಖ್ಯಸ್ಥನ ಆಯ್ಕೆ ಮಾಡಿದರು. ದಿಲಾರಖಾನಿಗೆ ಮುಖ್ಯಸ್ಥನ ಸ್ಥಾನಕೊಟ್ಟು ಆಯ್ಕೆ ಮಾಡಿದರು. ಸಮುದಾಯದ ಆಡಳಿತ ಸರಿಯಾಗಿ ನಡೆಸಲು ಮೊದಲು ಕಾಯ್ದೆ ಕಾನೂನುಗಳ ರಜನೆಯಾಗಬೇಕೆಂದರು. ಸಮುದಾಯದ ನ್ಯಾಯಗಳನ್ನು ನಾವೇ ನ್ಯಾಯ ಬದ್ಧವಾಗಿ ನಿರ್ಣಯಿಸಿ ಜನತೆಗೆ ಆಗುವ ಅನ್ಯಾಯಗಳನ್ನು ದೂರ ಮಾಡಬೇಕೆಂದು ಹೇಳಿದರು. ದಿಲಾರಖಾ ಸಭೆಗಳನ್ನು ಕರೆದು ಸಮುದಾಯದ ಕಾಯ್ದೆ ಕಾನೂನುಗಳ ರೂಪರೇಷೆಗಳನ್ನು ತಯಾರಿಸಿ ಸಮುದಾಯದಲ್ಲಿ ಕಾರ್ಯರೂಪಕ್ಕೆ ತಂದನು. ಎಲ್ಲರಿಗೂ ಒಂದೊಂದು ಪದವಿ(ಖಾತೆ)ಗಳನ್ನು ಕೊಟ್ಟು ಆಡಳಿತ ಪ್ರಾರಂಭಿಸಿದನು. ಘಟನಾ (ಸಂವಿಧಾನ) ರಚನೆ ಮಾಡುವ ಕಾರ್ಯವನ್ನು ಹದಿನೆಂಟು ಮನೆತನ ಹಿರಿಯರು ಸೇರಿ ಪ್ರಾರಂಭಿಸಿದರು.

ಆಡಳಿತಾತ್ಮಕ ಸಮಿತಿ

ತಮಾಯಚಿ (ಬಾಗಡೆ)		– ದಿಲಾರಖಾ –	ಬಜೀರ ಪ್ರಧಾನ
	– ಮೇಧಿಯಾ	– ಧರ್ಮ ಬಜೀರ	
	– ಭೋಮಾ	– ಗೌರ್ನ್ನರ	
ಮಾಥರ	– ಬನಿಯಾ	– ಬಿಡವಾನಿ	
ಮೀಣಾ		– ಹಡಗಗಳ ಮಾಲಿಕ ಮತ್ತು ಟಪಾಲ	
ಇಂದರಾ		– ಒಂಭತ್ತು ಊರಿನ ಮಾಲಿಕ	
ಘಮಂಡಿ	– ಲಾಲಾಜಿ	–	
ಭಜರಂಗ			

ಕರಾಳಾ

ಕಾಂಬಳ

ಡುಂಗರ

ನೆಥಲಾ	– ಏಳು ಊರಿನ ರಾಜ
ಬಾಟ್ಟು	– ಒಂದೂವರೆ ಮನೆ ರಾಜ
ಗಾಗಡ	– ಸಂರಕ್ಷಕ (ಪನೇಶರ)
ಮಲಕಿಯಾ	– ಕೆಂಪು ಟೊಪ್ಪಿಗೆಯ ರಾಜ
ಗುಮಾನಾ	– ತಾರಮಾಸ್ತರ
ಗಾರಿಯಾ	– ರಸ್ತೆಗಳ ರಾಜ (ರೋಡ ಬಜೀರ)
ರಾವಳ	– ಲಲ್ಲುಸಾಹಿಬ
ಟಿಡ್ಡಾ	– ಲೈಟನ್ ಸಾಹೇಬ
ಅಭುವಾ	– ತಳವಾರ(ಜೆ.ವಿ.ಬಾಗಡೆ:೨೦೦೮)

ಈ ರೀತಿ ಆಡಳಿತಾತ್ಮಕ ಸಮಿತಿಯನ್ನು ಮಾಡಿ ಮೇಲಿಂದ ಮೇಲೆ ಸಭೆಗಳನ್ನು ತೆಗೆದುಕೊಂಡು ಸಮುದಾಯದ ಕಾಯ್ದೆಗಳನ್ನು ರಚಿಸಿದರು. ಬುಚ್ಚಾಕುವಾ, ರೇತಿಯಾ, ತಳಾವ, ಪೀಳಿಭಿಂತ, ಹಾಲತಿ ಕಿಂಕರ, ಬಾಡ್ನೇರ, ಭಾರಾಭಾಟ್ಟೆ ಈ ಊರುಗಳಲ್ಲಿ ಸಭೆ ಸೇರಿ ಜನತೆಯ ಹಿತರಕ್ಷಣೆಗಾಗಿ ನ್ಯಾಯ ಪಂಚಾಯತಿಯ ರಚನೆಯಾಯಿತು. ಇದೇ ಪದ್ಧತಿಯನ್ನು ಪ್ರತಿಯೊಂದು ಊರಲ್ಲಿ ಅನುಸರಿಸುತ್ತ ಇಂದಿಗೂ ನ್ಯಾಯ ನಿರ್ಣಯವನ್ನು ಕೊಡುತ್ತಾರೆ.

ಪಂಚಾಯತಿಯ ಕಾರ್ಯಗಳು : ಕಂಜರಭಾಟ ಸಮುದಾಯದಲ್ಲಿ ಪ್ರತಿಯೊಂದು ಊರಿಗೆ ಒಂದು ಪಂಚಾಯತಿ ಇದೆ. ಇದರಲ್ಲಿ ಒಬ್ಬ ಸರಪಂಚ ಇರುತ್ತಾನೆ. ಇನ್ನೂಳಿದವರು ಪಂಚರು ಇರುತ್ತಾರೆ. ಪಂಚಾಯತಿ ಯಾವಾಗಲೂ ಗಿಡದ ಕೆಳಗೆ ವೃತ್ತಕಾರದಲ್ಲಿ ಕುಳಿತು ನ್ಯಾಯ ನಿರ್ಣಯ ಕೊಡುತ್ತಾರೆ. ಪಂಚಾಯತಿಯಲ್ಲಿ ಮಾತನಾಡುವನನು ಡೊಂಕು ಮುಖದ ಬೆತ್ತದ ಬಡಿಗೆ ಕೈಯಲ್ಲಿ ಹಿಡಿದು ಮಾತನಾಡುತ್ತಾನೆ. ಈ ಪರಂಪರೆ ತಲೆಮಾರುಗಳಿಂದ ನಡೆದು ಬಂದಿದೆ. ನ್ಯಾಯ ಪಂಚಾಯತಿಯ ಕೆಲಸವೆಂದರೆ ದೇವರ ಕೆಲಸ ಇದ್ದ ಹಾಗೆ. ಇಂದಿಗೂ ಈ ಸಮುದಾಯದ ಜಾತ ಪಂಚಾಯತಿ ಬಲಿಷ್ಠವಾಗಿದೆ. ಸಮುದಾಯದ ರಕ್ಷಣೆ, ಆಗುಹೋಗುಗಳ ಬಗೆಗೆ ನಿಷ್ಪಕ್ಷಪಾತವಾಗಿ ಪ್ರಾಮಾಣಿಕತನದಿಂದ ನ್ಯಾಯ ಒದಗಿಸಿ ಜನರ ವಿಶ್ವಾಸವನ್ನು ಗಳಿಸಿದ್ದಾರೆ. ಕಂಜರಭಾಟದ ಪಂಚಾಯತಿಯ ಕಾರ್ಯಗಳು ಇಂತಿವೆ.

ನಿಶ್ಚಿತಾರ್ಥ, ಮದುವೆ, ವಿಧವೆಯರ ಮದುವೆ, ಸ್ತ್ರೀ ಅಥವಾ ಪುರುಷರ ಎರಡನೆ ಮದುವೆ, ಅಂತರಜಾತಿಯ ಮದುವೆ, ಅನೈತಿಕ ಸಂಬಂಧ, ಯುವತಿಯರನ್ನು ಮಾರಾಟ ಮಾಡಿದರೆ, ಗಂಡ–ಹೆಂಡರ ಜಗಳ, ಮರಣ, ಸೋಡಚೀಟಿ, ಕೊಲೆ, ಕಳ್ಳತನ, ದರೋಡೆ, ಮೋಸ, ಹುಡುಗಿಯನ್ನು

ಓಡಿಸಿಕೊಂಡು ಹೋದರೆ, ಸಾಲ, ಹೊಲಮನೆ, ಮನೆತನದ ವ್ಯವಹಾರ ಮುಂತಾದ ನ್ಯಾಯಗಳು ಪಂಚರ ಕಡೆಗೆ ಬರುತ್ತದೆ. ನ್ಯಾಯದ ಬಗ್ಗೆ ತಕರಾರು ಕೊಡುವವರು. ತಮ್ಮ ಊರಿನ ಸರಪಂಚರಿಗೆ ಫೀ ಕೊಟ್ಟು ಪಿರ್ಯಾದಿ ಕೊಡುವರು. ಪೀರ್ಯಾದಿ ಯಾರ ಹೆಸರಿಗೆ ಕೊಟ್ಟಿರುತ್ತಾರೆ ಅವರಿಗೆ ಸಮುದಾಯದ ತಳವಾರನನ್ನು ಕಳಿಸಿ ಸುದ್ದಿ ಮುಟ್ಟಿಸುವರು. ವಾದಿ ಮತ್ತು ಪ್ರತಿವಾದಿ ಹಾಗೂ ಪಂಚರಿಗೆ ದಿನ ಮತ್ತು ವೇಳೆಯನ್ನು ತಿಳಿಸಿ ಸರಿಯಾಗಿ ಹಾಜರಿರಲು ತಿಳಿಸುತ್ತಾರೆ. ಈ ರೀತಿ 'ಜಾತ ಪಂಚಾಯತಿ'ಯ ಕಾರ್ಯಗಳು ಪ್ರಾರಂಭವಾಗುವವು.

ನ್ಯಾಯ ನಿರ್ಣಯಗಳು : ಈ ಸಮುದಾಯದ ನ್ಯಾಯಗಳು ಪೋಲಿಸ್ ಠಾಣೆಗಳಿಗೆ ಹೋಗುವುದಿಲ್ಲ. ಒಂದು ವೇಳೆ ನ್ಯಾಯಲಯಕ್ಕೆ ನಿರ್ಣಯ ಪಡೆದುಕೊಂಡು ಬಂದರೆ ಅದಕ್ಕೆ ಸಮಾಜ ಒಪ್ಪಿಗೆ ಕೊಡುವುದಿಲ್ಲ. ಜಾತ ಪಂಚಾಯತಿಯಲ್ಲಿ ಮತ್ತೆ ವಾದಿ ಪ್ರತಿವಾದಿಗಳು ತಮ್ಮ ನ್ಯಾಯವನ್ನು ಮಂಡಿಸಿ ತೀರ್ಪುನ್ನು ಪಂಚಾಯತಿಯಲ್ಲಿ ಪಡೆಯಬೇಕಾಗುತ್ತದೆ. ಸರ್ಕಾರಿ ನ್ಯಾಯಾಲಗಳಿಗಿಂತಲೂ ಜಾತ ಪಂಚಾಯತಗಳು ಶ್ರೇಷ್ಠವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಏಕೆಂದರೆ ಸರಿಯಾದ ನ್ಯಾಯ ಸಿಗುವವರೆಗೆ ವಾದಿ ಪ್ರತಿವಾದಿಗಳಿಗೆ ಬಿಡುಗಡೆ ದೊರೆಯುವುದಿಲ್ಲ. ಹೀಗಾಗಿ ಜಾತ ಪಂಚಾಯತ ಬಲಿಷ್ಠವಾಗಿದೆ. ನ್ಯಾಯ ಸರಿ ದೊರೆಯುವುದು ಜನರಿಗೆ ಖಚಿತವಾಗಿರುವುದರಿಂದ ಬೇಕಾದಂತಹ ನ್ಯಾಯವಿರಲಿ ಸಮಾಜದ ಪಂಚಾಯತಿಯಲ್ಲಿಯೇ ಮಾಡಿಸಿಕೊಳ್ಳುತ್ತಾರೆ.

ನ್ಯಾಯ ಪಂಚಾಯತಿ ಕೂಡಿದಾಗ ಎರಡೂ ಪಂಗಡದವರು ಬಂದು ಕೂಡುತ್ತಾರೆ. ಇವತ್ತಿನ ಪಂಚಾಯತಿ ಕೂಡಿಸಲು ಕಾರಣವೇನು ಎಂದು ಮೊದಲು ಪಿರ್ಯಾದಿ ಕೊಟ್ಟವನಿಗೆ ಕೇಳುತ್ತಾರೆ. ಇವನು ಮೊನ್ನೆ ನಮ್ಮ ಮನೆಗೆ ಬಂದಿದ್ದನು ಮನೆಯ ಕಪಾಟನಲ್ಲಿಟ್ಟ ಬಂಗಾರದ ಚೈನನ್ನು ಕಳುವ ಮಾಡಿದ್ದಾನೆ ಎಂದು ಸಾಕ್ಷಿ, ಪುರಾವೆಗಳೊಂದಿಗೆ ಅವನ ಮೇಲೆ ಅಪರಾಧ ಹೊರಿಸುತ್ತಾನೆ. ನಂತರ ಪ್ರತಿವಾದಿಗೆ ವಿಚಾರಿಸುತ್ತಾರೆ. ಇವರು ಹೇಳುವುದು ನಿಜವೇನು ಎಂದು ಕೇಳಿದಾಗ ಒಪ್ಪಿಕೊಂಡರೆ ಸರಿ ಇಲ್ಲದಿದ್ದರೆ ನಾನಾ ರೀತಿಯ ಉದಾಹರಣೆಗಳನ್ನು ಕೊಟ್ಟು ಅವನು ಕಳ್ಳತನ ಮಾಡಿದ್ದರೆ ಕಬೂಲ ಮಾಡಿಸುತ್ತಾರೆ. ಅವನು ತಪ್ಪು ಒಪ್ಪಿಕೊಂಡರೆ ಎರಡೂ ಕಡೆಯಿಂದ ಪಂಚಾಯತಿ ಶುಲ್ಕ ಹಾಕಿಸುತ್ತಾರೆ. ಮೊದಲು ಎರಡು ರೂಪಾಯಿ ತೆಗೆದುಕೊಳ್ಳುತ್ತಿದ್ದರು. ಈಗ ಮಾತ್ರ ಪಂಚಾಯತಿಯ ಶುಲ್ಕ ೫೦೦ ರೂ.ಗಳು ಹಾಕಿ ಮತ್ತೆ ನ್ಯಾಯದ ವೈಖರಿಯನ್ನು ನೋಡಿ ದುಡ್ಡು ಹಾಕಿಸಿ ಅವರು ಕೊಟ್ಟ ನ್ಯಾಯದ ವಿಚಾರಣೆಗೆ ಪಂಚರು ಸಮುದಾಯದಿಂದ ಹೊರಗೆ ಕುಳಿತು ನ್ಯಾಯದ ಬಗೆಗೆ ಪ್ರತಿಯೊಬ್ಬ ಪಂಚರ ವಿಚಾರವನ್ನು ಪಡೆಯುತ್ತಾರೆ. ಎಲ್ಲರೂ ತಮ್ಮ ತಮ್ಮ ಅಭಿಪ್ರಾಯಗಳು ಮತ್ತು ವಿಚಾರಗಳನ್ನು ಪ್ರಕಟ ಮಾಡುತ್ತಾರೆ. ಅವನು ಕಳ್ಳತನ ಮಾಡಿದ್ದನ್ನು ಒಪ್ಪಿಕೊಂಡ ಮೇಲೆ ಅವನು ಅಪರಾಧಿ ಎಂಬುದು ನಿರ್ಧಾರಿಸಿ ಅವನಿಗೆ ದಂಡ ಕಟ್ಟ ಬೇಕೋ ಅಥವಾ ಕ್ಷಮಿಸಬೇಕೊ ಎಂಬುದನ್ನು ನಿರ್ಧರಿಸಲಾಗುತ್ತದೆ. ಕಳ್ಳತನ ಮಾಡಿದ್ದು ತಪ್ಪು, ಬಂಗಾರದ ಚೈನನ್ನು ತಿರುಗಿ ಕೊಡಬೇಕು ಕಳ್ಳತನಕ್ಕೆ ಅವನಿಗೆ ದಂಡ ಕಟ್ಟಬೇಕೆಂದು ನಿರ್ಣಯಿಸಿ ತಿರುಗಿ ಸಮುದಾಯದಲ್ಲಿ ಬಂದು ಎರಡು ಕಡೆಯವರನ್ನು ಕರೆಯಿಸಿ ಪಂಚಾಯತಿಯ ಮಧ್ಯದಲ್ಲಿ

ನೆಲದ ಮೇಲೆ ಒಂದು ವೃತ್ತಕಾರವನ್ನು ಹಾಕಿ ಮೊದಲು ಪೀರ್ಯಾದಿ ಕೊಟ್ಟವನನ್ನು ಕರೆಯಿಸಿ ನೆಲೆದ ಮೇಲೆ ಇರುವ ಸ್ವಲ್ಪ ಮಣ್ಣು ಕೈಯಲ್ಲಿ ತೆಗೆದುಕೊಂಡು ನೀವು ಕೊಟ್ಟ ನಿರ್ಣಯಕ್ಕೆ ನಾನು ಒಪ್ಪಿಕೊಳ್ಳುತ್ತೇನೆ ಎಂದು ಮಣ್ಣಿನ ಆಣೆ ಮೂರು ಸಲ ಮಾಡಿಸುತ್ತಾರೆ. ಇದೇ ರೀತಿ ಪ್ರತಿವಾದಿಗೂ ಅದೇ ರೀತಿ ಮಣ್ಣಿನ ಆಣೆ ಮಾಡಿಸಲಾಗುತ್ತದೆ. ನಂತರ ಬಂಗಾರದ ಚೈನ ಕಳ್ಳತನ ಮಾಡಿದ್ದ ಅಪರಾಧಿ ಚೈನನ್ನು ಹಿಂತಿರುಗಿಸಕೊಡಬೇಕು, ಕಳ್ಳತನ ಮಾಡಿದಕ್ಕೆ ಸಾವಿರ ಎರಡು ಸಾವಿರ ಹೀಗೆ ದಂಡ ಕಟ್ಟುತ್ತಾರೆ. ಬಂಗಾರದ ಚೈನ ಹಾಗೂ ದಂಡದ ಹಣವನ್ನು ವಸೂಲ ಮಾಡಿ ನ್ಯಾಯವನ್ನು ಬಗೆ ಹರಿಸುತ್ತಾರೆ.

ಗಂಡ-ಹೆಂಡತಿ ಜಗಳ : ಗಂಡ ತನ್ನ ಹೆಂಡತಿಗೆ ಕಿರುಕುಳ ನೀಡುತ್ತಿದ್ದು ಹಾಗೂ ಹೊಡೆಯುವುದು ಮಾಡುತ್ತಿದ್ದರೆ, ಹೆಂಡತಿ ಗಂಡನ ಕಿರುಕುಳ ತಾಳಲಾರದೆ ಗಂಡನ ವಿರುದ್ಧ ಪಂಚಾಯತಿ ಕೂಡಿಸಲು ಸರಪಂಚರಿಗೆ ಪೀರ್ಯಾದಿಯನ್ನು ನೀಡುತ್ತಾಳೆ. ಇದಕ್ಕೆ ಪಂಚರು ಆರೋಪಿಯ ಸ್ಥಾನದಲ್ಲಿರುವ ಗಂಡಿಗೆ ನೀನು ಇನ್ನು ಮುಂದೆ ಇದೇ ರೀತಿ ನಡೆದುಕೊಂಡಲ್ಲಿ ೧೦೦೦ ರೂ. ದಂಡವಾಗಿ ಕಟ್ಟಬೇಕಾಗುತ್ತದೆ ಹಾಗೂ ಕಠಿಣ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ ಎಂದು ಮುನ್ನಚ್ಚರಿಕೆ ನೀಡಿ ಅವನಿಗೆ ಬುದ್ಧಿವಾದವನ್ನು ಹೇಳಲಾಗುತ್ತದೆ. ಗಂಡ-ಹೆಂಡತಿ ಯಾವುದೇ ಸಣ್ಣಪುಟ್ಟ ಮಾತಿಗೂ ಜಗಳವಾಡಬಾರದು ಎಂದು ಇಬ್ಬರಿಗೂ ತಾಕೀತ ಮಾಡಿ ನ್ಯಾಯವನ್ನು ಬಗೆ ಹರಿಸುತ್ತಾರೆ.

ಕೊಲೆ ಪ್ರಕರಣ : ಆಸ್ತಿಗಾಗಿ ಅಥವಾ ಇನ್ನಿತರ ಯಾವುದೆ ಕಾರಣಕ್ಕೆ ಜಗಳವಾಗಿ ಕೊಲೆ ಆದರೆ, ಇಂಥ ಸಮಸ್ಯೆ ಪೋಲಿಸ್ ಠಾಣೆಯಲ್ಲಿ ದೂರು ದಾಖಲು ಆಗಿದ್ದರೂ ಸಹ ಪಂಚರು ಹಾಗೂ ಸರಪಂಚನು ಸೇರಿ ತಲಾಟಿಗೆ ಕಳಿಸಿ ಆ ವ್ಯಕ್ತಿಯನ್ನು ಕರೆಯಿಸುತ್ತಾರೆ. ಅವನು ನನ್ನ ಕೇಸು ಪೋಲಿಸ್ ಠಾಣೆಯಲ್ಲಿದೆ ನಾನು ಪಂಚಾಯತಿಯಲ್ಲಿ ಬರುವುದಿಲ್ಲ ಎಂದು ಕೂಗಾಡಿದರೆ ಆಗ ಪಂಚರು ಅವನಿಗೆ ತಿಳಿ ಹೇಳಿ ಪಂಚಾಯತಿಯಲ್ಲಿ ಕೂಡಲು ಮನವಲಿಸುತ್ತಾರೆ. ಒಂದು ವೇಳೆ ಪಂಚಾಯತಿಗೆ ಬರಲು ಒಪ್ಪದಿದ್ದರೆ ಅವನಿಗೆ ಜಾತಿಯಿಂದ ಬಾಹಿಷ್ಕಾರಿಸಲಾಗುತ್ತದೆ. ನ್ಯಾಯ ನಿರ್ಣಯ ಕೊಡಲು ಜಟಿಲವಾದಾಗ ಈ ನ್ಯಾಯಕ್ಕಾಗಿ ಬೇರೆ ಊರುಗಳಿಂದ ಅನುಭವಿಕ ಪಂಚರನ್ನು ಕರೆಯಿಸಿ ಆಣಿಕೇರಿ(ಗೋಳಾ)ಯ ತಯಾರಿ ಮಾಡುತ್ತಾರೆ. ಎರಡೂ ಕಡೆಯವರಿಂದ ತಲಾ ೧೫೦೦೦ ರೂಪಾಯಿ ಪಂಚರ ಪೀ ತೆಗೆದು ಕೊಳ್ಳುತ್ತಾರೆ.

ಆಪಾದನೆ ಯಾರ ಮೇಲೆ ಇದೆ ಆ ವ್ಯಕ್ತಿಯನ್ನು ಪಂಚರು ತಮ್ಮ ವಶದಲ್ಲಿ ತೆಗೆದುಕೊಂಡು ಎರಡು ರೂಪಾಯಿ ಬೆಲ್ಲ ತರಿಸಿ ಎಲ್ಲ ಪಂಚರು ಕೈಯಲ್ಲಿ ಬೆಲ್ಲ ತೆಗೆದುಕೊಂಡು ನಾನು ಪ್ರಾಮಾಣಿಕವಾಗಿ ನ್ಯಾಯ ಮಾಡುತ್ತೇನೆ ಯಾರ ಹಂಗಿನಲ್ಲಿ ಇರುವುದಿಲ್ಲ ಎಂದು ದೇವರ ಸಾಕ್ಷಿ ಎಂದು ಪ್ರತಿಜ್ಞೆ ಮಾಡುತ್ತಾನೆ. ಎಲ್ಲ ಪಂಚರು ಅವನನ್ನು ಊರ ಹೊರಗಿನ ಜನನಿಬಿಡದ ಪ್ರದೇಶದಲ್ಲಿ ಕರೆದುಕೊಂಡು ಹೋಗಿ ಒಂದು ಮರದ ಬುಡದಲ್ಲಿ ಅಂದು ರಾತ್ರಿ ಆರೋಪಿಯನ್ನು ಮಧ್ಯದಲ್ಲಿ ಮಲಗಿಸಿಕೊಂಡು ಸುತ್ತಲು ಪಂಚರು ಹಾಗೂ ಕುಲಸ್ಥರು ವೃತ್ತಕಾರದಲ್ಲಿ ಮಲಗುತ್ತಾರೆ. ಮುಂಜಾನೆ ಎದ್ದು ಕೂಡಲೆ ಅಪರಾಧಿಯನ್ನು ಸ್ನಾನ ಮಾಡಿಸಿ ಅವನಿಗೆ ಸಕ್ಕರೆ ತಿನ್ನಿಸುತ್ತಾರೆ. ಪ್ರತಿಯೊಬ್ಬ ಪಂಚರಿಗೆ ಒಂದೊಂದು ಕೆಲಸವನ್ನು

ಒಪ್ಪಿಸುತ್ತಾರೆ. ಕುಳ್ಳಿನ ಬೆಂಕಿಯನ್ನು ಮಾಡಿ ಅದರಲ್ಲಿ ಕಬ್ಬಿಣದ ತುಂಡನ್ನು ಹಾಕುತ್ತಾರೆ. ಅದು ಬೆಂಕಿ ಕೆಂಡದಂತೆ ಆಗುವವರೆಗೆ ಕಾಯಿಸಿ ನಂತರ ಒಂದು ವೃತ್ತಕಾರವನ್ನು ಹಾಕಿ ಅದರ ಮಧ್ಯದಲ್ಲಿ ಅಪರಾಧಿಯನ್ನು ನಿಲ್ಲಿಸಿ ಅವನ ಕೈಗಳನ್ನು ಮೊದಲಿಗೆ ಪರೀಕ್ಷೆ ಮಾಡುತ್ತಾರೆ. ಕೈ ಮೇಲೆ ಯಾವುದಾದರೂ ಗಾಯ, ಕಲೆಗಳು ಇವೆಯೆ ಎಂದು ಪರೀಕ್ಷಿಸಿ ನಂತರ ಕೈ ಮೇಲೆ ಆಲದ ಎಲೆಗಳನ್ನು ಇಟ್ಟು ದಾರದಿಂದ ಸುತ್ತುತ್ತಾರೆ. ನಂತರ ಹತ್ತು ಹೆಜ್ಜೆಗೆ ಒಂದು ಗೆರೆಯನ್ನು ಹಾಕಿ ಅವನಿಗೆ ನಿಲ್ಲಿಸುತ್ತಾರೆ. ಪಂಚರು ದೇವರ ಸಾಕ್ಷಿಯಾಗಿ ಕಾದ ಕಬ್ಬಿಣದ ತುಂಡನ್ನು ಅವನ ಕೈ ಮೇಲೆ ಇಡುತ್ತಾರೆ. ಅವನಿಗೆ ಹತ್ತು ಹೆಜ್ಜೆ ನಡೆಯಲು ಹೇಳುತ್ತಾರೆ. ಅವನು ಅಪರಾಧಿ ಆಗಿದ್ದರೆ ದಾರ, ಎಲೆ ಸುಟ್ಟು ಅವನ ಕೈ ಸುಡುವುದು. ಒಂದು ವೇಳೆ ನಿರಾಪರಾಧಿ ಎಂದು ಹಾಗೂ ತಾನು ಹೇಳಿದ್ದು ಸತ್ಯವೆಂದಾದರೆ ದಾರ ಸಹಿತ ಸುಡುವುದಿಲ್ಲ. ಈ ನ್ಯಾಯವನ್ನು ನೋಡಲು ಸಾವಿರಾರು ಜನರು ಸೇರುವರು. ಈ ನ್ಯಾಯದಲ್ಲಿ ಪ್ರತಿವಾದಿ ಕೊಲೆಯಾದವನ ತಮ್ಮ ಕೊಲೆ ಮಾಡಿದ್ದು ಸಾಬೀತು ಆಯಿತು. ಕೈಯ ಮೇಲೆ ಕಾಯಿಸಿದ ಕಬ್ಬಿಣ ತುಂಡು ಇಟ್ಟ ತಕ್ಷಣ ಕೈಗೆ ಸುತ್ತಿದ ದಾರ ಮತ್ತು ಎಲೆ ಸುಟ್ಟು ಅವನ ಕೈಗೆ ಗಾಯಗಳಾದವು. ಇವನು ಪಂಚರಿಗೆ ಸುಳ್ಳು ಹೇಳಿದ್ದು ಸಾಬೀತಾಗಿ ಅವನು ಗುನ್ಹೆಗಾರನೆಂದು ಅವನಿಗೆ ದಂಡ ಕಟ್ಟುತ್ತಾರೆ. ಸತ್ತವನ ಕುಟುಂಬಕ್ಕೆ ೨ ಅಥವಾ ೩ ಲಕ್ಷ ರೂಪಾಯಿವರೆಗೂ ಕೊಡಿಸುತ್ತಾರೆ. ಈ ರೀತಿ ನ್ಯಾಯ ನಿರ್ಣಯ ಕೊಟ್ಟದನ್ನು ಕಂಡು ಎಲ್ಲರೂ ಆಶ್ಚರ್ಯ ವ್ಯಕ್ತಪಡಿಸಿದರು.

ವಿಚ್ಛೇದನೆ ಕಂಜರಭಾಟ ಸಮುದಾಯದಲ್ಲಿ ವಿವಾಹ ವಿಚ್ಛೇದನಕ್ಕೆ ಅವಕಾಶವಿದೆ. ಆದರೆ ಪಂಚರು ಹೆಂಡತಿಯು ವಿಚ್ಛೇಧನಕ್ಕೆ ವಿರೋಧ ವ್ಯಕ್ತಪಡಿಸಿ ಪಂಚಾಯ್ತಿಗೆ ಬಂದರೆ ಪಂಚರು ವಾದ ಪ್ರತಿವಾದವನ್ನು ಆಲಿಸಿ ಅವರಿಬ್ಬರನ್ನು ಒಂದುಗೂಡಿಸಲು ಪಂಚರು ಹಾಗೂ ಆರೋಪಿಯ ತಂದೆ ತಾಯಿ ಸಾಕಷ್ಟು ಮನವೊಲಿಸಲು ಪ್ರಯತ್ನಿಸುತ್ತಾರೆ. ಪಂಚರು ನಿನಗೆ ದಂಡ ಕೊಡುವ ಪ್ರಸಂಗ ಬರುವುದು ಎಂದು ಹೇಳಿದರು ಇವರ ಪ್ರಯತ್ನಕ್ಕೆ ಫಲವಿಲ್ಲದಾಗ ಪಂಚರು ಸಮುದಾಯದ ಪಂಚಾಯಿತಿ ಕಟ್ಟೆಯಿಂದ ಹೊರ ಹೋಗಿ ಈ ವಿಷಯದ ಜಟಿಲತವನ್ನು ಚರ್ಚಿಸಿ ಸರಪಂಚರು ಹಾಗೂ ಪಂಚರು ಒಂದು ಅಂತಿಮ ನಿರ್ಧಾರಕ್ಕೆ ಬಂದು ಮತ್ತೆ ಪಂಚಾಯಿತಿ ಕಟ್ಟೆಗೆ ಬಂದು ಸೋಡ ಚೀಟಿಯನ್ನು ನೀಡುವುದಾಗಿ ತಿಳಿಸಿ ಹಾಗೆಯೇ ವಾದಿಗೆ ಆಗಿರುವಂಥ ಅನ್ಯಾಯಕ್ಕೆ ಮತ್ತು ಅವಳ ಮುಂದಿನ ಭವಿಷ್ಯದ ಬಗ್ಗೆ ವಿಚಾರಿಸಿ ಇವಳಿಗೆ ಯಾರು ಮದುವೆ ಮಾಡಿಕೊಳ್ಳುತ್ತಾರೆ ಇವಳ ಜೀವನವನ್ನು ಹಾಳು ಮಾಡಿದ್ದಾನೆ. ಅದಕ್ಕೆ ಅವಳ ಜೀವನಕ್ಕಾಗಿ ೧,೫೦,೦೦೦ ರೂ.ಗಳನ್ನು ಪರಿಹಾರವಾಗಿ ಹೆಣ್ಣಿಗೆ ನೀಡಬೇಕು ಎಂದು ಪಂಚರು ತೀರ್ಮಾನಿಸುತ್ತಾರೆ.

ಒಂದು ವೇಳೆ ಹೆಣ್ಣು ನನಗೆ ಈ ಗಂಡನ ಮೇಲೆ ಮನಸ್ಸು ಇಲ್ಲ ನನಗೆ ಇವನಿಂದ ಸೋಡಚೀಟಿ ಮಾಡಿಸಿ ಎಂದು ಹೇಳಿದಾಗ ಎಲ್ಲ ರೀತಿಯಿಂದ ವಿಚಾರಿಸಿ ಅದರಲ್ಲಿ ಗಂಡನ ಯಾವುದೇ ತಪ್ಪು ಕಾಣದಿದ್ದರೆ ಹೆಣ್ಣುಮಗಳು ಅವಳ ಗಂಡನನ್ನು ಅಲ್ಲಗಳೆದ ಕಾರಣ ಅವಳಿಗೆ ದಂಡ ವಿಧಿಸಿ ಸೋಡಚೀಟಿ ಮಾಡಿ ಗಂಡನ ಮನೆಯವರು ಮದುವೆಗಾಗಿ ಮಾಡಿರುವ ಖರ್ಚಿನ ಎಲ್ಲ ರೀತಿಯ ಬಾಬ್ತನ್ನು ಹುಡುಗಿಯ ಕಡೆಯವರು ಪರಿಹಾರವಾಗಿ ಕಟ್ಟಿಕೊಡಬೇಕು.

ಅನೈತಿಕ ಸಂಬಂಧ : ತಾಯಿ-ಮಗ, ತಂದೆ-ಮಗಳು, ಅತ್ತೆ-ಅಳಿಯ, ಮಾವ- ಸೊಸೆ, ಚಿಕ್ಕಪ್ಪ-ಅಣ್ಣನ ಮಗಳು, ಚಿಕ್ಕಮ್ಮ-ಮೈದುನನ ಮಗ, ಸಹೋದರ-ಸಹೋದರಿ, ಮಾಲ್ಹಾ-ಮಾಲ್ಹಾ, ಬಿಡ್ಡು-ಬಿಡ್ಡು, ಇವುಗಳಲ್ಲಿ ಅನೈತಿಕ ಸಂಬಂಧವಾದರೆ ಅದಕ್ಕೆ ಪಾಪ ಎಂದು ಕರೆಯುತ್ತಾರೆ. ಪಂಚಾಯತಿಯಲ್ಲಿ ಈ ವಿಷಯ ಚರ್ಚೆಗೆ ಬಂದು ಅವರಿಬ್ಬರಲ್ಲಿ ಅನೈತಿಕತೆ ಇರುವುದು ಸಾಭಿತಾದರೆ ಅಥವಾ ತಪ್ಪೊಪ್ಪಿಗೆ ಮಾಡಿಕೊಂಡರೆ ಅವರಿಗೆ ಸಮುದಾಯದಿಂದ ಕಠಿಣ ಶಿಕ್ಷೆಯನ್ನು ವಿಧಿಸಲಾಗುತ್ತದೆ. ಇದು ಒಂದು ರಕ್ತಸಂಬಂಧಕ್ಕೆ ಮಾಡಿದ ದ್ರೋಹ ಇಂಥವರು ಸಮಾಜಕ್ಕೆ ಕೆಡಕು ಹಾಗೂ ಸಮುದಾಯದ ಹೆಸರು ಕೆಡಿಸುತ್ತಾರೆ. ಅದ್ದರಿಂದ ಸಮುದಾಯದ ವಿಧಿ ವಿಧಾನಗಳನ್ನು ಮಾಡಿ ಜಾತಿಯಲ್ಲಿ ಸೇರಿಸಿಕೊಳ್ಳಬೇಕು. ಪಂಚಾಯತಿ ಇಂಥ ಆರೋಪಿಗಳಿಗೆ ತಲಾ ೨೦೦೦ ರೂ.ಗಳನ್ನು ದಂಡವಾಗಿ ಕಟ್ಟಿಸಿಕೊಂಡು ನಿರ್ಣಯ ಕೊಡುವರು.

ಇಂಥ ಸಂಬಂಧ ಮಾಡಿದ ಹೆಣ್ಣಿಗೆ 'ಪಾಂತಣಿ' ಎಂದು ಕರೆಯುತ್ತಾರೆ. ಗಂಡಿಗೆ 'ಪಾಂತಿಯಾ' ಎಂದು ಕರೆಯುತ್ತಾರೆ.

ವಿಧಿ-ವಿಧಾನ : ಅನೈತಿಕ ಸಂಬಂಧ ಮಾಡಿದ ಇಬ್ಬರಿಗೂ ದೈವದವರು ಪೇಟೆಯಿಂದ ೩ ಮೀಟರ್‌ನ ಬಿಳಿ ಬಟ್ಟೆಯನ್ನು ತರಿಸುತ್ತಾರೆ. ಈ ವಿಧಿಯನ್ನು ಒಬ್ಬೊಬ್ಬರಿಗೆ ಮಾಡುತ್ತಾರೆ. ಪೇಟೆಯಿಂದ ಹಿಟ್ಟು ತರಿಸಿ ಅದರ ಉಂಡೆಗಳನ್ನು ಮಾಡಿಸುತ್ತಾರೆ. ಎಕ್ಕಿ ಗಿಡದ ಕಟ್ಟಿಗೆ ತಂದು ಹುಡುಗರ ಕೈಯಲ್ಲಿ ಕೊಡುತ್ತಾರೆ. ತಪ್ಪು ಮಾಡಿದವರಿಗೆ ನೀರಿನಲ್ಲಿ ಹಾಲು ಹಾಕಿ ಸ್ನಾನ ಮಾಡಿಸುತ್ತಾರೆ. ಜನಿವಾರ ಹಾಕಿ ಅವರಿಗೆ ಬಿಳಿ ಬಟ್ಟೆಯನ್ನು ಸುತ್ತಿ ಬರೇ ಮೈಯಿಂದ ಅರವತ್ತು ಹೆಜ್ಜೆ ಓಡಲು ಹೇಳುತ್ತಾರೆ. ಓಡುವ ಸಮಯಕ್ಕೆ ಅವನಿಗೆ ಹಿಂದಿನಿಂದ ಹಿಟ್ಟಿನ ಉಂಡೆಗಳಿಂದ ಹೊಡೆಯುತ್ತಾರೆ. ಈ ಕಾರ್ಯಕ್ರಮವನ್ನು ಸಮುದಾಯದ ಸಾವಿರಾರು ಜನರು ವಿಕ್ಷಿಸುವರು. ಎಲ್ಲರ ಎದುರಿಗೆ ಇಂಥ ಶಿಕ್ಷೆಯನ್ನು ಕೊಟ್ಟು ಅವರಿಂದ ದಂಡ ಕಟ್ಟಿಸಿಕೊಂಡು ಮುಂದೆ ಎಂದೂ ಇಂತಹ ತಪ್ಪು ಮಾಡಬಾರದೆಂದು ಕಟ್ಟಪ್ಪಣೆ ಮಾಡುತ್ತಾರೆ.

ಶಿಕ್ಷೆಗಳ ವಿವರ

ದೈವದವರು ನೀಡಿದ ನ್ಯಾಯಕ್ಕೆ ಸಿರಿವಂತನಿರಲಿ, ಬಡವನಿರಲಿ ತಲೆಯನ್ನು ಬಾಗಬೇಕು.

ಅನೈತಿಕ ಸಂಬಂಧ : ಅನೈತಿಕ ಸಂಬಂಧ ಮಾಡಿದ ವ್ಯಕ್ತಿಯನ್ನು ಪಂಚಾಯತಿಯಲ್ಲಿ ಹೆಣ್ಣಿನವರು ದೈವದ ಎದುರಿಗೆ ಕರೆಯಿಸುತ್ತಾರೆ. ಮದುವೆಯ ಪೂರ್ವದಲ್ಲಿ ಅನೈತಿಕ ಸಂಬಂಧ ಬೆಳೆಯಿಸಿದರೆ ಅಂಥವರಿಗೆ ದಂಡ ಹಾಗೂ ಶಿಕ್ಷೆಯನ್ನು ನೀಡಲಾಗುವುದು. ಹೆಣ್ಣಿನವರು ತಮ್ಮ ಮನೆತನದ ದೇವರಿಗೆ ಸಲ್ಲುವ ಪೂಜೆ ಪುರಸ್ಕಾರಗಳನ್ನು ಮಾಡಬೇಕಾಗುತ್ತದೆ.

ಪರಜಾತಿಯ ಗಂಡಸಿನ ಜೊತೆಗೆ ದೈಹಿಕ ಸಂಬಂಧವಾಗಿದ್ದರೆ ಹೆಣ್ಣಿನ ಕಡೆಯವರಿಗೆ ೧೦೦೦ ರೂ. ದಂಡ ವಿಧಿಸಲಾಗುತ್ತದೆ.

ರಕ್ತಸಂಬಂಧಿಕರೊಂದಿಗೆ ಅನೈತಿಕ ಸಂಬಂಧವಾದರೆ ಅದು ಪಾಪವೆಂದು ಪರಿಗಣಿಸಲಾಗಿದ್ದು ಅದಕ್ಕೆ ೧೮೦೦೦ ರೂ. ಪಂಚಾಯಿತಿ ಶುಲ್ಕವಾಗಿ ಕೊಡಬೇಕು. ಇದಲ್ಲದೆ ಇಬ್ಬರಿಗೂ ತಲಾ ೫೦೦೦ ರೂ. ದಂಡ ತೆತ್ತಬೇಕಾಗುತ್ತದೆ. ವಿಧಿ ವಿಧಾನಗಳು ಆಗುವವರೆಗೆ ಅವರಿಗೆ ಬಹಿಷ್ಕಾರ ಹಾಕುತ್ತಾರೆ.

ಮಕ್ಕಳ ಮಾರಾಟ ಮಾಡಿದರೆ ಅದರಲ್ಲೂ ಮಗಳನ್ನು ಮಾರಾಟ ಮಾಡಿದರೆ ಅಂಥವರು ದೈವಕ್ಕೆ ೫೦೦೦ ರೂ. ಕೊಡಬೇಕಾಗುತ್ತದೆ. ಹಾಗೆಯೇ ಅವರಿಗೆ ಅಂದಿನಿಂದ ಪರಜಾತಿಯ ಹೆಣ್ಣು ಎಂದು ಘೋಷಿಸಿ ಅವರಿಗೆ ಸಮಾಜದ ಯಾವ ಕಾರ್ಯಕಲಾಪಗಳಿಗೆ ಬಾರದಂತೆ ಪ್ರತಿಬಂಧವನ್ನು ಮಾಡಲಾಗುತ್ತದೆ.

ಅಂತರಜಾತಿಯ ಮದುವೆಯನ್ನು ಮಾಡಿಕೊಂಡರೆ ಅಂಥವರಿಗೆ ೫೦೦೦ ರೂ. ದಂಡ ವಿಧಿಸಲಾಗುತ್ತದೆ.ನ್ಯಾಯ ಪಂಚಾಯತಿಯಲ್ಲಿ ಹದ್ದು ಮೀರಿ ಮಾತನಾಡಿದರೆ ಅಂಥ ವ್ಯಕ್ತಿಯು ೨೫, ೬೦, ಇಲ್ಲವೇ ೧೦೦ ರೂ.ಗಳವರೆಗೆ ದಂಡ ಕಟ್ಟಬೇಕಾಗುತ್ತದೆ.

ಪಂಚಾಯತಿ ಕೂಡಿ ದೈವದವರು ನೀಡಿದ ತೀರ್ಪನ್ನು ಕೇಳದೇ ಪಂಚಾಯತಿ ಬಿಟ್ಟು ವಾದಿಯಾಗಲಿ, ಪ್ರತಿವಾದಿಯಾಗಲಿ ಹೋದರೆ ಅಂಥವರಿಗೆ ಬಹಿಷ್ಕಾರ ಹಾಕುತ್ತಾರೆ.

ಈ ರೀತಿ ಕಂಜರಭಾಟ ಸಮುದಾಯದಲ್ಲಿ ನಾನಾ ರೀತಿಯ ಕಟ್ಟಳೆಗಳನ್ನು ಹಾಕಿ ದಂಡ ಮತ್ತು ಶಿಕ್ಷೆಗಳನ್ನು ವಿಧಿಸುತ್ತಾರೆ.

ಸಮುದಾಯದ ನ್ಯಾಯಗಳು ಸಮುದಾಯದಲ್ಲಿಯೇ ಬಗೆ ಹರಿಯಬೇಕು ಸರ್ಕಾರದಲ್ಲಿ ಹೋಗಬಾರದೆಂದು ನಾಲ್ಕು ವಿಭಾಗೀಯ ಪಂಚಾಯತಿಗಳನ್ನು ಮಾಡಿ ಸಮುದಾಯದ ನಾಗರಿಕರಿಗೆ ಅನುವು ಮಾಡಿದ್ದಾರೆ. ಕೋರ್ಟಿಗೆ ಹೋದರೆ ಬೇಗನೆ ನ್ಯಾಯ ಸಿಗುವುದಿಲ್ಲ. ಇಲ್ಲಿ ಮಾತ್ರ ಒಂದು ದಿನ ಇಲ್ಲವೆ ಎರಡು ಮೂರು ದಿನಗಳಲ್ಲಿ ತೀರ್ಪು ಸಿಗುತ್ತದೆ. ತೀರ್ಪು ಬೇಗನೆ ಸಿಗಲೆಂದು ನಾಲ್ಕು ವಿಭಾಗಗಳನ್ನು ಮಾಡಿ. ಸಮುದಾಯದಲ್ಲಿ ನಡೆಯುವ ನ್ಯಾಯಗಳ ಇತ್ಯರ್ಥ ಬೇಗನೆ ಮಾಡಲಾಗುತ್ತದೆ.

ಊರಿನ ಪಂಚಾಯತಿ, ಜಿಲ್ಲಾ ಪಂಚಾಯತಿ, ರಾಜ್ಯ ಪಂಚಾಯತಿ (ಹೆಚ್ಚು ಸಮುದಾಯ ಇದ್ದ ಊರು), ಖಂಡಪೀಠ (ಒಂದೇರಡು ರಾಜ್ಯಗಳ ನಾಮಾಂಕಿತ) ಎಂಬ ನಾಲ್ಕು ಹಂತದ ಪಂಚಾಯತಿಗಳಿವೆ. ಪಂಚರು ಸ್ಥಳೀಯ ಪಂಚಾಯತಿಯಲ್ಲಿ ನ್ಯಾಯ ಹೂಡಿ ತೀರ್ಪು ಕೇಳುತ್ತಾರೆ. ತೀರ್ಪು ಕೇಳಿ ಯಾರಿಗಾದರೂ ಕೊಟ್ಟಂತಹ ನ್ಯಾಯ ಸರಿ ಅನಿಸದಿದ್ದರೆ ಅವರು ಆಗಿಂದಾಗಲೆ ೮೦ ರೂ. ಪಂಚಾಯಿಗೆ ಶುಲ್ಕ ಕೊಟ್ಟು ಅಪೀಲ ಮಾಡಿಕೊಳ್ಳುತ್ತಾರೆ. ನನಗೆ ಈ ನ್ಯಾಯ ಮಾಡಲು ಬೇರೆ ಊರಿಗೆ ಹೋಗಲು ಅನುಮತಿ ಕೊಡಬೇಕೆಂದು ಕೇಳುತ್ತಾರೆ. ಪಂಚರು ಅವರು ಕೇಳಿದ ಊರಾಗಲಿ ಅಥವಾ ಪಂಚರು ಯಾವುದಾದರೂ ಊರು ಆಯ್ಕೆ ಮಾಡಿ ತಾರೀಖು ನೀಡಲಾಗುತ್ತದೆ. ಇನ್ನೊಂದು ಪ್ರತಿವಾದಿಗೂ ಅಲ್ಲಿ ಹಾಜರಾಗಲು ತಿಳಿಸುತ್ತಾರೆ. ಇಲ್ಲಿ ನ್ಯಾಯ ಪಂಚಾಯತಿಯಲ್ಲಿ ನಡೆದ ವಿಷಯಗಳನ್ನು ಆ ಊರಿನ ಪಂಚರಿಗೆ ಟಪಾಲು ಮುಖಾಂತರ ಕಳಿಸುತ್ತಾರೆ. ವಾದಿ ಪ್ರತಿವಾದಿಗಳು ಅಲ್ಲಿ ಹೋಗಿ ತಮ್ಮ ನ್ಯಾಯ ಮಾಡಿಸಿ ಕೊಳ್ಳುತ್ತಾರೆ. ಅಲ್ಲಿಯೂ ಅವರಿಗೆ ತೀರ್ಪು ಮಾನ್ಯವಾಗದಿದ್ದರೆ ಮುಂದಿನ ಖಂಡಪೀಠ ಸುಪ್ರೀಮ ಕೋರ್ಟ್‌ದಲ್ಲಿ

ನ್ಯಾಯ ಮಾಡಿಸಿಕೊಳ್ಳುತ್ತಾರೆ. ಇದು ಕೊನೆಯ ಹಂತದ ನ್ಯಾಯಾಲಯವಾಗಿದ್ದು ಇಲ್ಲಿ ನೀಡುವ ತೀರ್ಪಿಗೆ ತಲೆ ಬಾಗಲೇಬೇಕು.

ಭಾಷೆ ಮತ್ತು ಸಾಹಿತ್ಯ

ವಿಶ್ವದ ಎಲ್ಲಾ ಮನುಷ್ಯರಿಗೂ ಮೂಲದಲ್ಲಿ ಸಂಜ್ಞಾರೂಪದ ಒಂದೇ ಭಾಷೆಯಿರಬೇಕು. ಮೂಲತಃ ಭಾಷೆಯನ್ನು ಪ್ರಾಣಿ, ಪಕ್ಷಿಗಳ ಅನುಕರಣೆ ಮಾಡುವುದರಿಂದ ಮನುಷ್ಯನು ಭಾಷೆಯನ್ನು ಕಲಿತಿರಬಹುದೆಂದು ಭಾಷಾ ತಜ್ಞರು ಅಭಿಪ್ರಾಯಪಡುತ್ತಾರೆ. ಇಂದು ಜಗತ್ತಿನಲ್ಲಿ ಸಾವಿರಾರು ಭಾಷೆಗಳಿವೆ. ಭಾರತದಂತಹ ದೇಶದಲ್ಲಿ ಜಾತಿಗೊಂದು ಭಾಷೆಯನ್ನು ಗುರುತಿಸಬಹುದು. ಪ್ರಸ್ತುತ ಇಲ್ಲಿ ಸೆಟಲಮೆಂಟಿನ ವಿಮುಕ್ತ ಬುಡಕಟ್ಟುಗಳ ಮೂಲ ಭಾಷೆಯ ಮತ್ತು ಅವರಲ್ಲಿ ಪ್ರಚಲಿತವಿರುವ ಸಾಹಿತ್ಯದ ಸಂಕ್ಷಿಪ್ತ ಪರಿಚಯ ಮಾಡಿಕೊಡಲು ಪ್ರಯತ್ನಿಸಲಾಗಿದೆ.

ಭೋವಿ ಮತ್ತು ಗಂಟಿಚೋರರ ಭಾಷೆ ಮತ್ತು ಸಾಹಿತ್ಯ ಒಂದೇ ಆಗಿವೆ. ಭೋವಿ ಮತ್ತು ಗಂಟಿಚೋರ ಮೂಲತಃ ಒಂದೇ ಮೂಲದಿಂದ ಬಂದಿರುವ ಸಮುದಾಯಗಳು, ಒಡಿಯಾ ಮೂಲದ ಒಂದು ಪಂಗಡ ಕಾಲಾಂತರದಲ್ಲಿ ಎರಡು ಭಾಗಗಳಾಗಿ ಭೋವಿ ಮತ್ತು ಗಂಟಿಚೋರ್‌ಗಳಾಗಿ ಬದಲಾಗಿವೆ. ಗಂಟಿಚೋರ ಎಂಬುದು ಅಪರಾಧ ಸೂಚಕ ಪದವಾದುದರಿಂದ ಭೋವಿಗಳು ಅವರನ್ನು ದೂರವಿರಿಸಿದರೇನೊ, ಒಟ್ಟಾರೆಯಾಗಿ ಒಂದೇ ಮೂಲದಿಂದ ಈ ಎರಡು ಸಮುದಾಯಗಳ ಬಂದಿರುವುದು ಮಾತ್ರ ಸತ್ಯ. ಭೋವಿ ಮತ್ತು ಗಂಟಿಚೋರ ಎರಡು ಭಾಷೆಗಳಲ್ಲಿಯೂ ಸಾಮ್ಯತೆ ಇದೆ. ಆದರೆ ಪ್ರಾದೇಶಿಕ ಕಾರಣಗಳಿಗಾಗಿ ಅಲ್ಪಸ್ವಲ್ಪ ಭಿನ್ನತೆಗಳಿರಬಹುದಾದ ಸಾಧ್ಯತೆಗಳೂ ಇರಬಹುದು.

ಗಂಟಿಚೋರರು ತಾವು ಮೂಲತಃ ತೆಲುಗು ಮಾತನಾಡುವ ಜನರು ಎಂದು ತಿಳಿಸುತ್ತಾರೆ. ಉಚಲ್ಯಾ ಎನ್ನುವ ಮರಾಠಿ ಆತ್ಮಕಥೆ ಬರೆದ ಲಕ್ಷ್ಮಣ ಗಾಯಕ್ವಾಡರೂ ಸಹ ಇದೇ ಮಾತನ್ನು ತಿಳಿಸುತ್ತಾರೆ. ಆದರೆ ದ್ರಾವಿಡ ಮೂಲ ಭಾಷೆಯೊಂದನ್ನು ಆಡುವ ಗಂಟಿಚೋರರ ಭಾಷೆಯಲ್ಲಿ ಪ್ರಾದೇಶಿಕ ಪ್ರಭಾವಗಳಿಂದಾಗಿ ಒಡಿಯಾ ಮೂಲದೊಂದಿಗೆ ತೆಲುಗು, ಕನ್ನಡ, ಮರಾಠಿ ಭಾಷೆಗಳ ಪ್ರಭಾವವೂ ಆಗಿರುವುದನ್ನು ಕಾಣಬಹುದಾಗಿದೆ. ಇಂದು ಗಂಟಿಚೋರರ ಭಾಷೆಯಲ್ಲಿ ತೆಲುಗು ಪ್ರಧಾನ ಪಾತ್ರ ವಹಿಸುವುದಾದರೂ ಕನ್ನಡ ಮತ್ತು ಮರಾಠಿ, ಒಡಿಯಾ ಭಾಷೆಯ ಪದಗಳನ್ನು ಗುರುತಿಸಬಹುದು.

ಭೋವಿಗಳಲ್ಲಿ (ಹುಬ್ಬಳ್ಳಿ ಸೆಟ್ಲಮೆಂಟ್) ಕೆಲವೇ ಕೆಲವು ಹಿರಿಯ ತಲೆಮಾರಿನ ಅಜ್ಜ, ಅಜ್ಜಿಯರಿಗೆ ಭೋವಿ ಭಾಷೆಯ ಪರಿಚಯವಿದೆ. ಆದರೆ ಅವರಾರೂ ಇಂದು ಭೋವಿ ಭಾಷೆಯನ್ನು ಮಾತನಾಡುವುದಿಲ್ಲ. ಕ್ಷೇತ್ರಕಾರ್ಯಕ್ಕೆ ತೆರಳಿದಾಗ ಭೋವಿ ಭಾಷೆ ನಿಮಗೆಲ್ಲರಿಗೂ ಗೊತ್ತಿದೆಯಾ ಎಂದು ಪ್ರಶ್ನೆಸಿದಾಗ ಒಬ್ಬ ಯುವಕ ನಮ್ಮ ಅಜ್ಜಿಗೆ ಆ ಭಾಷೆ ಗೊತ್ತು, ನಮಗೆ ಆ ಭಾಷೆ ಬಾರದು ಎಂದು ತಿಳಿಸಿದ, ಅದೇ ಸೆಟ್ಲಮೆಂಟಿನ ರಾಮಪ್ಪಜ್ಜ ಎನ್ನುವ ೮೫ ವರ್ಷದ ಭೋವಿ ಹಿರಿಯ ವ್ಯಕ್ತಿ ತನಗೆ ಆ ಭಾಷೆ ಗೊತ್ತು, ತನ್ನ ಮಕ್ಕಳಿಗೆ ಮತ್ತು ಮೊಮ್ಮಕ್ಕಳಿಗೆ ಆ ಭಾಷೆ ಬಾರದು, ಬಳ್ಳಾರಿಯ ತಮ್ಮ ಸಂಬಂಧಿಕರು ಬಂದಾಗ

ಮಾತ್ರ ತಾನು ತಮ್ಮ ಭಾಷೆಯಲ್ಲಿ ಮಾತನಾಡುವುದಾಗಿ ತಿಳಿಸಿದ. ನೀವೇನು ತೆಲುಗು ಮಾತನಾಡುತ್ತೀರಾ ಎಂಬ ಪ್ರಶ್ನೆಗೆ ತಾವು ಮಾತನಾಡುವುದು ತೆಲುಗು ಭಾಷೆಯೆ ಆದರೆ ತೆಲುಗಿಗೂ ತಮ್ಮ ಭಾಷೆಗೂ ಅಲ್ಪ ಸ್ವಲ್ಪ ವ್ಯತ್ಯಾಸವಿದೆ ಎಂಬುದಾಗಿ ಹೇಳಿದ ಹಾಗೂ ತನಗೆ ನೆನಪಿಗೆ ಬರುವಷ್ಟು ತಿಳಿಸುವುದಾಗಿ ಹೇಳಿದ. ಆ ವ್ಯಕ್ತಿಯಿಂದ ಸಂಗ್ರಹಿಸಿದ ಭಾಷೆಯ ಮಾಹಿತಿ ಈ ಕೆಳಗಿನಂತಿದೆ.

ಕನ್ನಡ	ತೆಲುಗು	ಭೋವಿ ಭಾಷೆ
ಹೆಸರು ಗೊತ್ತಿಲ್ಲ	ಪೇರು ತೆಲಿಯದು	ಪೇರ ಗೊತ್ತಲೇದು
ಅವನು	ವಾನು,ವಾಡು	ವಾನಿ
ತಿಂಗಳು	ನೆಲಕು	ನೆಲಾಕು
ದಿನ	ರೋಜು	ದಿನಾಮು
ನಾನು	ನೇನು	ನೀನು
ಮಾತು	ಮಾಟ	ಮಾಟಲು
ಕುಳಿತುಕೊಳ್ಳಿ	ಕುರ್ಚಂಡಿ	ಕೂಸಂಡಿ
ಬಂದನು	ವಚ್ಚಾನು	ವಚ್ಚಿಂಡಂದಿ
ಹುಚ್ಚ	ಪಿಚ್ಚುವಾಡು	ತಿಕ್ಕಲೋಡು
ತಂಗಿ	ಚಲ್ಲಿಲು	ಸೆಲ್ಲಿಲು
ಅಣ	ಅನ್ನಗಾರು	ಅನ್ನ
ಇವನು	ವೀಡು	ಈಡು
ಸಿಗುತ್ತದೆ	ದೊರಕುತುಂದಿ	ಸಿಗುತುಂದಿ
ಹೆಸರು	ಪೇರು	ಪೆಸ್ರು
ನೀರು ಕುಡಿ	ನೀಳ್ಳು ತ್ರಾಗು	ನೀಳ್ಳು ತಾಗು
ಬಾ	ರಾ	ದಾ
ಓದು	ಚೆದುಗು	ಓದಂಡಿ

ಭೋವಿಗಳ ಸಾಹಿತ್ಯ

ಭೋವಿಗಳು ತಮ್ಮ ಇಂದಿನ ತಲೆಮಾರಿನವರು ತಮ್ಮ ಮೂಲ ಭಾಷೆಯನ್ನು ಮರೆತೋ ಬಿಟ್ಟಿರುವುದರಿಂದ ಕನ್ನಡದೇಯೋ ಕಥೆ, ಒಟಗು, ಐತಿಹ್ಯ, ಹಾಡು ಇತ್ಯಾದಿಗಳನ್ನು ಹೇಳುತ್ತಾರೆ. ಅವರಲ್ಲಿ ಪ್ರಚಲಿತವಿರುವ ಕೆಲವು ಕಥೆ ಹಾಗೂ ಜನಪದ ಹಾಡುಗಳನ್ನು ಇಲ್ಲಿ ಕೊಡಲಾಗಿದೆ.

ಕಥೆ ೧: ಒಂದು ದಿನ ಶಿವ-ಪಾರ್ವತಿಯರ ತಿರುಗಾಡುತ್ತಾ ಭೂಮಿಗೆ ಬಂದರು ಅವರು ಬಂದಾಗ ತುಂಬಾ ಬಿಸಿಲಿತ್ತು. ಬಿಸಿಲಿನ ತಾಪ ತಾಳಲಾಗದೆ ಇಬ್ಬರೂ ಚಡಪಡಿಸಿದರು. ಇಬ್ಬರಿಗೂ ನೀರಡಿಕೆಯಾಯಿತು.

ನೀರಿಗಾಗಿ ಹುಡುಕಾಟ ನಡೆಯಿತು. ಎಲ್ಲಿಯೂ ನೀರು ದೊರೆಯಲಿಲ್ಲ. ಬಿಸಿಲಿನಿಂದಾಗಿ ದೇಹದಿಂದ ಬೆವರು ಬರಹತ್ತಿತು. ಶಿವನ ದೇಹದಿಂದ ಬಿದ್ದ ಬೆವರ ಹನಿಯಿಂದ ಒಬ್ಬ ಪುರುಷನು ಪಾರ್ವತಿಯ ಬೆವರಿನಿಂದ ಒಬ್ಬ ಮಹಿಳೆಯೂ ನೆಲದಲ್ಲಿ ಹುಟ್ಟಿದರು ಅವರಿಬ್ಬರಿಗೂ ಗುದ್ದಲಿ, ಚಲಿಕೆ , ಪುಟ್ಟಿಗಳನ್ನು ಕೊಟ್ಟು "ನೀವು ಬಾವಿಯನ್ನು ತೋಡಿ ನೀರನ್ನು ಕೊಡಿರಿ" ಎಂದು ಶಿವ ಪಾರ್ವತಿಯರು ತಿಳಿಸಿದರು. ಆ ಪುರುಷ ಮತ್ತು ಮಹಿಳೆಯರು ಶಿವ ಪಾರ್ವತಿರುವ ಆಜ್ಞೆಯನ್ನು ಪಾಲಿಸುವುರಕ್ಕಾಗಿ ಬಾವಿಯನ್ನು ತೋಡಿದರು ಅವರ ಕಾರ್ಯಕ್ಕೆ ಮೆಚ್ಚಿದ ಶಿವ ಪಾರ್ವತಿಯರು ನಿಮಗೆ ಏನು ವರಬೇಕು ಕೇಳಿ ಎಂದರು ಅಗ ಅವರ ಈಗ ನಮಗೆ ಕೊಟ್ಟಿರುವ ಈ ಸಲಕರಣೆಗಳನ್ನೇ ಕೊಡಿ ಕೇಳಿದರು ಆ ಸಲಕರಣೆ ಬಳಸಿ ಜೀವನ ಸಾಗಿಸುತ್ತಿರುವುದರಿಂದ ಇವರ ವೃತ್ತಿ ಅದೇ ಆಯಿತು

ಇವರಲ್ಲಿ ಪ್ರಚಲಿತವಿರುವ **ಇನ್ನೊಂದು ಕಥೆ** ಹೀಗೆ ಇದೆ. ಭೂಮಿಗೆ ಬಂದ ದೇವತೆಗಳು ತಮಗೆ ಒಂದು ಕುಡಿಯುವ ನೀರಿನ ಭಾವಿಯನ್ನು ತೋಡಲು ಆಜ್ಞೆ ಮಾಡಿದರು ಬಾವಿಯನ್ನು ತೋಡಿದ ಭೋವಿಗಳು ಶಿವನಿಗೆ ಕೂಲಿಯನ್ನು ಕೇಳಿದರು. ಶಿವನ ಕೂಲಿಯನ್ನು ಕೊಡುವ ಬದಲು ಬೂದಿಯನ್ನು ಕೊಟ್ಟನು. ಬೂದಿಯನ್ನು ತೆಗೆದು ನೊಡದೆ ಮನೆಗೆ ಬಂದು ನೆಲಕೆಯಲ್ಲಿ ಬೂದಿ ಇರಿಸಿ ಮಲಗಿದರು. ಮಾರನೆ ದಿನ ಬೆಳಿಗ್ಗೆ ಬೂದಿಯು ಹಣವಾಗಿ ಪರಿವರ್ತನೆಯಾಯಿತು. ಆ ಹಣವನ್ನು ಎಣಿಕೆ ಮಾಡಿ ನೋಡೆದರೆ ತಾವು ಮಾಡಿದ ಕೆಲಸಕ್ಕೆ ಈ ಹಣ ಕಡಿಮೆಯಾಯಿತೆಂದು ಭಾವಿಸಿ ಇನ್ನು ಹಣ ಬೇಕೆಂದು ಶಿವನನ್ನು ಕಾಡತೊಡಗಿದರು. ಇವರ ದುರಾಸೆಯನ್ನು ನೋಡಿ ಶಿವ ಶಾಪ ಕೊಟ್ಟನು. ನೀವು ದುಡಿದು ಗಳಿಸಿದ ಹಣ ನಿಮಗೆ ಸಾಲದೇ ಹೋಗಲಿ ಎಂದನು. ಆದರೆ ಪಾರ್ವತಿ ಕರುಣೆಯಿಂದ ಭೋವಿಗಳಗೆ ಇನ್ನಷ್ಟ ಹಣವನ್ನು ಕೊಟ್ಟಳು. ಪಾರ್ವತಿಯಿಂದಾಗಿ ಶಿವನು ಶಾಂತವಾಗಿ ತಾನೂ ಸ್ವಲ್ಪ ಬಂಗಾರಯರನ್ನು ನಾಣ್ಯವನ್ನು ಕೊಟ್ಟನು ಅವನ್ನು ತಂದು ಮಣ್ಣಿನ ಕುಡಿಕೆಯಲ್ಲಿ ಹಾಕಿ ಭೂಮಿಯಲ್ಲಿ ಹುಗಿದರು ಆ ಹುಗಿದ ಮಡಿಕೆಯ ಜಾಗ ಮರುತುಹೋದದರಿಂದ ಅವರಿಗೆ ಮಡಿಕೆ ದೊರೆಯಲಿಲ್ಲ. ಇದರಿಂದಾಗಿ ಇವರು ಬಡತನ ಅನುಭವಿಸುವಂತಾಯಿತು.

ಕಥೆ ೩: ಒಮ್ಮೆ ಶಿವನು ತನ್ನ ಒಡ್ಡೋಲಗವನ್ನು ಸಿಂಗರಿಸುವ ಕೆಲಸವನ್ನು ಭೊವಿಗಳಗೆ ವಹಿಸಿಕೊಟ್ಟನು ಆದರೆ ಮುಂಗಡ ಕೂಲಿ ಪಡೆದ ಭೋವಿಗಳು ಕೆಲಸ ಮಾಡದೆ ಹೋದರು ಇದರಿಂದ ಕುಪಿತಗೊಂಡ ಶಿವನು ಭೋವಿಗಳಿಗೆ ಶಾಪ ಕೊಟ್ಟನು. ಅಂದಿನಿಂದ ಅವರು ಬಡತನ ಅನುಭವಿಸುವಂತಾಯಿತು.

ಕಥೆ ೪: ವಡ್ಡ ಮತ್ತು ರಡ್ಡಿ ಎಂಬ ಅಣ್ಣ ತಮ್ಮರಿದ್ದರು. ಇಬ್ಬರೂ ಶಿವ-ಪಾರ್ವತಿಯರ ಮಕ್ಕಳು. ಈ ಮಕ್ಕಳು ದೊಡ್ಡವರಾದರು ದೊಡ್ಡವರಾದ ಮೇಲೆ ಈ ಮಕ್ಕಳಿಗೆ ದುಡಿಮೆ ಮಾಡಿ ಸ್ವಂತ ಕಾಲಮೇಲೆ ನಿಲ್ಲಿ ಎಂದು ಪಾರ್ವತಿ ತಿಳಿಸಿದಳು. ಆದರೆ ತಾವು ಯಾವ ಕೆಲಸ ಮಾಡಬೇಕು ಎಂದು ಈ ಮಕ್ಕಳು ಕೇಳಿದಾಗ ಸಲಿಕೆ, ಗದ್ದಲಿ, ಪುಟ್ಟಿಗಳನ್ನು ಒಂದು ಕಡೆ ಇಟ್ಟಳು. ಮತ್ತೊಂದು ಕಡೆ ಬೂದುಕುಂಬಳಕಾಯನ್ನು ಇಟ್ಟಳು. ವಡ್ಡಗೆ ನಿನಗಾವುದು ಬೇಕೋ ಅದನ್ನು ತೆಗೆದುಕೋ ಎಂದು ಹೇಳಿದಳು. ಆಗ ವಡ್ಡ ಪುಟ್ಟಿ, ಸಿಲಿಕೆಗಳನ್ನು ಆಯ್ಕೆ ಮಾಡಿಕೋಂಡ ರೆಡ್ಡಿ ಕುಂಬಳ ಕಾಯಿ ತೆಗೆದುಕೊಂಡು ಹೋದನು. ಕುಂಬಳ

ಕಾಯಿ ಕೊಯ್ಯಲು ಒಳಗೆ ಬಂಗಾರದ ಬೀಜಗಳಿದ್ದವು. ಬಂಗಾರದ ಬೀಜಗಳನ್ನು ನೋಡಿ ಆಶೆ ಬಿದ್ದ ರೆಡ್ಡಿ ಪರರ ಹೊಲದಲ್ಲಿದ್ದ ಕುಂಬಳಕಾಯಿಗಳನ್ನು ಕದಿಯ ತೊಡಗಿದ. ಹೀಗಾಗಿ ಅವನ್ನು ಗಂಟಿಚೋರನಾದ. ಸಲಿಕೆ ಗುದ್ದಲಿ ಪಡೆದಾತ ಭೋವಿಯಾದ.

ಕಥೆ ೫: ಒಂದಾನೊಂದು ಕಾಲದಲ್ಲಿ ಒಬ್ಬ ರಾಜನು ಕೆರೆ ಕಟ್ಟಲು ಭೋವಿಗೆ ತಿಳಿಸಿದ. ಕೆರೆ ಕಟ್ಟುವುದು ಮುಗಿದ ಮೇಲೆ ಆನೆ ಗಾತ್ರದ ಬಂಗಾರವನ್ನು ಕೊಡುವುದಾಗಿ ತಿಳಿಸಿದ ಬಂಗಾರದ ಆಸೆಗೆ ಭೋವಿಯು ಬೇಗ ಬೇಗ ಕೆರೆ ಕಟ್ಟಿದ. ನಂತರ ಬಂಗಾರ ಕೇಳಲು ರಾಜನ ಬಳಿಗೆ ಹೋದರೆ ರಾಜ ತನ್ನ ಬಳಿ ಬಂಗಾರ ಅಳೆಯುವ ಸೇರು ಇಲ್ಲ ಎಂದನು. ಹಾಗದರೆ ಸೇರು ತರುವುದಾಗಿ ಹೇಳಿ ಮನೆ ಕಡೆ ಹೊರಟ ಎದುರಿಗೆ ಕುರುಬನೊಬ್ಬ ಬರುತ್ತಿದ್ದನು. ಅತನ ಬಳಿ ಬಿದಿರಿನ ಒಳಕೆಯಿತ್ತು. ಇದು ಏನು ಎಂದು ಭೋವಿ ಕೇಳಿದ. ನೀರು ಕುಡಿಯಲು ಬಳಸುವ ಒಳಕೆ ಎಂದು ಕುರುಬ ಹೇಳಿದ. ಇದರಲ್ಲಿ ಬಂಗಾರ ಅಳೆಯಲು ಬರುತ್ತದೆಯಾ ಎಂದು ಭೋವಿ ಕೇಳಿದ. ಆ ಪ್ರಶ್ನೆಗೆ ಕುರುಬ ಹೋ ಬರುತ್ತದೆ ಎಂದು ತಿಳಿಸಿದ. ಆ ಒಳಕೆ ಕೊಟ್ಟರೆ ಅದರ ನಾಲ್ಕು ಬಾಗ ಬಂಗಾರ ಕೊಡುವುದಾಗಿ ಕುರುಬನಿಗೆ ತಿಳಿಸಿ ಭೋವಿ ಒಳಿಕೆ ಪಡೆದುಕೊಂಡುನು, ರಾಜನು ತನ್ನ ಬಳಿ ಇರುವ ಬಂಗಾರವನ್ನು ಒಳಕೆಯಲ್ಲಿ ಅಳೆದು ಕೊಡತೊಡಗಿದ. ಆದರೆ ಆ ಬಂಗಾರ ಆನೆ ಗಾತ್ರಕ್ಕೆ ಸರಿದೂಗಲಿಲ್ಲ. ಅದಕ್ಕಾಗಿ ತನ್ನ ಮಗಳನ್ನು ಕೊಟ್ಟನು. ಒಳಕೆ ಕೊಟ್ಟ ಕುರುಬನಿಗೆ ಅಳೆದು ಕೊಟ್ಟರೆ ರಾಜ ಕೊಟ್ಟ ಬಂಗಾರವೆಲ್ಲ ಕುರುಬನಿಗೆ ಸೇರಿತು. ಕೊನೆಗೆ ಭೋವಿ ತನ್ನ ಮೂಲ ಕಸುಬನ್ನು ಮಾಡಬೇಕಾಯಿತು

ಮದುವೆ ಕಾರ್ಯದಲ್ಲಿ ಹೆಣ್ಣನ್ನು ಒಪ್ಪಿಸುನ ಕಾರ್ಯ, ಬೀಸಕಲ್ಲು ಪೂಜೆ ಶಾಸ್ತ್ರ, ಒಣಕೆ ಶಾಸ್ತ್ರ, ಬೀಗಳನ್ನು ಎದುರುಗೋಳ್ಳುವ ಶಾಸ್ತ್ರ ಪ್ರತಿಯೊಂದು ಕಾರ್ಯದಲ್ಲಿಯೂ ಭೋವಿಗಳ ಮಹಿಳೆಯರು ಹಲವಾರು ಪದಗಳನ್ನು ಹಾಡುತ್ತಾರೆ, ಸಾಮಾನ್ಯವಾಗಿ ಬೀಗರನ್ನು ಎದರುಗೊಳ್ಳುವಾಗ ಭೋವಿ ಮತ್ತು ಗಂಟಿಚೋರ ಸಮಾಜದ ಜನ ಕನ್ನಡದ ಜನಪದ ಹಾಡುಗಳನ್ನು ಹಾಡುತ್ತಾರೆ

ಆನಿ ಬರುತಾವಂತ ಆರ ಬಣವಿಯ ಕೊಂಡಿವ
ಆನೆಲ್ಲಿ ನಿಮ್ಮ ದಳವೆಲ್ಲ ಬೀಗರೆ
ಬೀಳಲು ಹೋರಿ ಮ್ಯಾಗ ಬಂದೀರಿ
ಒಂಟಿ ಬರ್ತಾವಂತ ಎಂಟ ಬಣವಿಯ ಕೊಂಡ್ವಿ
ಒಂಟಲ್ಲಿ ನಿಮ್ಮ ದಳವೆಲ್ಲಿ ಬೀಗರೆ
ಕುಂಬ ಹೋರಿಯ ಮ್ಯಾಲೆ ಬಂದೀರಿ.

ಭೋವಿಗಳು ತಮ್ಮ ಜಾರಿ ಸೂಚಕ ಗಾದೆ ಮಾತುಗಳನ್ನು ತಾವಾಗಿ ಹೇಳಿಕೊಂಡು ಸಂತೋಷಪಡುತ್ತಾರೆ. ಜನತೆಯ ಅನುಭವದ ಅಭಿವ್ಯಕ್ತಿಯೇ ಗಾದೆಗಳ ಸ್ವರೂಪವನ್ನು ಹೊಂದಿವೆಯನಿಸುತ್ತದೆ. ಅವರು ಸಂತೋಷದಿಂದ ಹೇಳಿಕೊಳ್ಳುವ ಗಾದೆಗಳ ಹಿಂದೆ ಕೇವಲ ಮನೋರಂಜನೆ ಮಾತ್ರವಿರದೆ ಅದರ ಹಿಂದೆ ಒಂದು ತಾತ್ವಿಕ ತಿಳುವಳಿಕೆಯೂ ಇರುವಂತೆ ತೋರುತ್ತದೆ.

ಭೋವಿಗಳಲ್ಲಿ ಪ್ರಚಲಿತವಿರುವ ಗಾದೆ ಮಾತುಗಳಲ್ಲಿ ಕೆಲವನ್ನು ಇಲ್ಲಿ ನೀಡಲಾಗಿದೆ.

೧. ಭೋವಿಗೊಂದು ಊರಿಲ್ಲ. ಬೆಳ್ಳಕ್ಕಿಗೆ ಒಂದು ಕೆರೆ ಇಲ್ಲ.

೨. ಹೆಣ ಬಿದ್ದರೂ ಸರಿಯೇ ಹೇಳಿದ ದಿನ ಬರಬೇಕು.

೩. ಕೆಟ್ಟ ಕಣ್ಣಿಗೆ ಕಲ್ಲೂ ಕರಗುತೈತಿ

೪. ಭೋವಿ ಕೂಡಿ ಕೆಟ್ಟ, ಡೊಂಬ ಅಗಲಿ ಕೆಟ್ಟ

೫. ದಡ್ಡನಾದರೂ ಚಿಂತೆಯಿಲ್ಲ ಹೆಡ್ಡನಾಗಬಾರದು.

೬. ಭೋವಿ ಒಡ್ಡರಿಗೆ ಕುಬುಸ ಕೇಳಿದಂಗಾಯ್ತು.

೭. ತಿಂಗಳಿಗೆ ಒಂದೇ ಅಮಾಸಿ, ಭೋವಿಗೆ ದಿನಾಲೂ ಅಮಾಸಿ.

೮. ಕುರುಬನ ಬುದ್ದಿ ಕುಂಡ್ಯಾಗ, ಭೋವಿ ಬುದ್ಧಿ ಮಂಡ್ಯಾಗ

ಜನಪದರು ತಮ್ಮ ಅನುಭವವನ್ನೇ ಸಾಮಾನ್ಯೀಕರಿಸಿ ಗಾದೆಗಳಾಗಿ ಹೆಣೆದಿಟ್ಟಿದ್ದಾರೆ. ವ್ಯಕ್ತಿಯೊಬ್ಬ ಅಡ್ಡದಾರಿ ತುಳಿಯದಂತೆ ಬುದ್ಧಿ ಹೇಳುವ ಕಾರ್ಯವನ್ನು ಈ ಗಾದೆಗಳು ಒಗಟುಗಳು ಮಾಡುತ್ತವೆ. "ಮನುಷ್ಯ ಸ್ವಭಾವ ಎಲ್ಲಿದ್ದರೂ ಮನುಷ್ಯ ಸ್ವಭಾವ ಎಂದು ನಿರೂಪಿಸುವಂತೆ ಜಗತ್ತಿನಾದ್ಯಂತ ನಾನಾ ಭಾಷೆಗಳಲ್ಲಿ ಈ ಗಾದೆಗಳು ಕಂಡುಬರುತ್ತವೆ

ಗಂಟಿಚೋರ

ನಂದೂರಾಮ್ ರವರು ಗಂಟಿಚೋರರ ಭಾಷೆಯ ಕುರಿತು ಹೀಗೆ ತಿಳಿಸುತ್ತಾರೆ. "The Gantichores speak both Kannada and Telugu, Kannada in spoken at home with family members while Telugu, a part from Marathi and Hindi Languages are used for Gantichora Community Communication The Kannada Script is used for writting" (ನಂದೂರಾಮ್:2007: ಪು.೨೩೯).

ಗಂಟಿಚೋರರ ಭಾಷೆಯನ್ನು ಸ್ವತಂತ್ರ ದ್ರಾವಿಡ ಭಾಷಾ ಪ್ರಭೇದಕ್ಕೆ ಸೇರಿಸಬಹುದು. ಗಂಟಿಚೋರರು ತಮ್ಮ ಮೂಲ ಭಾಷೆಯೊಂದಿಗೆ ಯಾರಿಗೂ ತಿಳಿಯದ ತಮ್ಮ ಸಮುದಾಯಕ್ಕೆ ಮಾತ್ರ ತಿಳಿಯುವ ಮರುಗು ಭಾಷೆಯನ್ನು ಸಹ ಮಾತನಾಡುತ್ತಾರೆ. ತಮ್ಮ ತಮ್ಮೊಳಗೆ ಅವರು 'ವಡ್ಡಂ' ಮಾತು ಆಡುವರು. ಅವರಿಗೆ ಮರಾಠಿ, ಕನ್ನಡ, ಹಿಂದೂಸ್ತಾನಿ ಭಾಷೆಗಳು ಬರುತ್ತದೆ. ಕನ್ನಡ ಮಾತಾಡುವಾಗ್ಗೆ 'ಹ' ಕಾರವನ್ನು ಲೋಪಮಾಡುತ್ತಾರೆ. ವಿಜಾಪುರ ಗಂಟೀ ಚೌಡೆಯರು ಮನೆಯಲ್ಲಿ ಕನ್ನಡ ಮಾತನಾಡುತ್ತಾರೆ (ಬಾಂಬೆ ಪ್ರಸಿಡೆನ್ಸಿ:೧೯೦೮:ಪು.೧೪). ಇತ್ತೀಚೆಗೆ ಗಂಟಿಚೋರ ಮತ್ತು ಭೋವಿ ಸಮುದಾಯಗಳೆರಡೂ ತಮ್ಮ ಮಾತೃ ಭಾಷೆಯನ್ನು ಮರೆತು ಕನ್ನಡ ಮಾತನಾಡುತ್ತಾರೆ.

ಕರ್ನಾಟಕದ ಎಲ್ಲಾ ಸೆಟ್ಲಮೆಂಟ್‌ಗಳಲ್ಲಿಯೂ ಗಂಟಿಚೋರ ಮತ್ತು ಭೋವಿ ಸಮುದಾಯದ ಅಂದರೆ ೬೦ ರ ಮೇಲ್ಪಟ್ಟು ವಯೋಮಾನದವರಲ್ಲಿ ಕೆಲವರು ಮಾತ್ರ ತಮ್ಮ ಮೂಲ ಭಾಷೆಯನ್ನು

ಮಾತನಾಡುವರು. ಆದರೆ ಅದರೀಚೆಗಿನ ಆ ಸಮುದಾಯದ ಜನಕ್ಕೆ ತಮ್ಮ ಮಾತೃ ಭಾಷೆಯ ಪರಿಚಯವಿಲ್ಲದಾಗಿದೆ. ಅವರು ತಮ್ಮ ಮನೆ ಮತ್ತು ಮನೆಯ ಹೊರಗೆ ಕನ್ನಡ, ಹಿಂದಿ ಭಾಷೆಗಳನ್ನು ಮಾತನಾಡುವುದನ್ನು ಕಾಣಬಹುದಾಗಿದೆ. ಗಂಟಿಚೋರ ಮತ್ತು ಭೋವಿಗಳು ಮಹಾರಾಷ್ಟ್ರ ಆಂಧ್ರಗಳಲ್ಲಿರುವ ತಮ್ಮ ಸಮುದಾಯದ ಜನ ತಮ್ಮ ಮಾತೃಭಾಷೆಯನ್ನಾಡುತ್ತಾರೆ ಎಂದು ತಿಳಿಸುತ್ತಾರೆ. ಕರ್ನಾಟಕದ ಆಚೆ ಹೊರರಾಜ್ಯಗಳಲ್ಲಿಯೂ ಸಂಬಂಧಗಳನ್ನು ಬೆಳೆಸಿಕೊಳ್ಳುತ್ತಾರೆ. ಹೊರರಾಜ್ಯದ ಗಂಟಿಚೋರ ಮತ್ತು ಭೋವಿಗಳೊಂದಿಗೆ ಹೇಗೆ ವ್ಯವಹರಿಸುತ್ತೀರ ಎಂದು ಕೇಳಿದರೆ ಹೊರರಾಜ್ಯಗಳಲ್ಲಿರುವ ಬಹುತೇಕ ತಮ್ಮ ಸಮುದಾಯದ ಜನಕ್ಕೆ ಕನ್ನಡ ಮಾತನಾಡಲು ಬರುತ್ತದೆ. ಅದರಿಂದ ಯಾವ ಸಮಸ್ಯೆಗಳು ಬರುವುದಿಲ್ಲ. ಮನೆಯಲ್ಲಿ ಹೆಂಗಸರೂ ಸಹಿತ ಕನ್ನಡ ಮಾತನಾಡುತ್ತಾರೆ. ಹೀಗಾಗಿ ಸಮಸ್ಯೆ ಇಲ್ಲ ಎಂದು ತಿಳಿಸುತ್ತಾರೆ. ಗಂಟಿಚೋರ ಮತ್ತು ಭೋವಿಗಳು ಮಾತನಾಡುವ ಭಾಷೆ ಒಂದೇ ಆದರೂ ಸಹ ಗಂಟಿಚೋರರ ಗುಪ್ತ ಭಾಷೆ ಭೋವಿಗಳಿಗೆ ಅರ್ಥವಾಗುವುದಿಲ್ಲ. ಗಂಟಿಚೋರರ ಹಿರಿಯ ವಕ್ತೃಗಳಿಂದ ಗಂಟಿಚೋರರ ಮರಗು ಭಾಷೆಯ ಸ್ವರೂಪವನ್ನು ತಿಳಿದುಕೊಳ್ಳಲಾಯಿತು. ಅದರ ವಿವರ ಈ ಕೆಳಗೆ ಕೊಟ್ಟಿದೆ.

ಕನ್ನಡ		ಗಂಟಿಚೊರ ಗುಪ್ತಭಾಷೆ
ಡೊಂಕಾದ ಚೂರಿ	-	ಉಲ್ಮುಖ, ವಾಘನಕ
ಪೌಜುದಾರ	-	ಘಡ್ಡದ, ಗೋಷಡ
ಬಂದನು	-	ಒಚಬರ
ಅಠಗು	-	ಡಾಂಗಿರುಸಿ
ಪೋಲೀಸ್ ಸಿಪಾಯಿ	-	ನೆಲ್ಲಕುಕ್ಕಲು
ಚಿನ್ನದ ಆಭರಣ	-	ಯೆರವೆಲಕ
ರೂಪಾಯಿ	-	ಪೈಪಲು
ಬೆಳ್ಳಿ ತಂಪು	-	ಕೈಂಬಲು
ಗುಪ್ತಭಾಷೆ	-	ಫಾರಶೀ
ಅಮಲವಾರ	-	ಮಂಗಕರ
ಬೆಳ್ಳಿ	-	ತಲುಪು ಕಯ್ಯಲ
ಅಲ್ಲಿ ಇದೆ	-	ಉಂಡ್ಯೆ
ಸುಳ್ಳು ಹೆಸರು	-	ತಾಪಸಿ ಚಪ
ಹೇಳಬೇಡ	-	ತುಲಗ
ಗಂಟು	-	ಗಂಟ
ಜಡ	-	ಫಡ್ಡಡ

ಅವನ ಹತ್ತಿರವಿದೆ	-	ಚಿಕಿ
ಹುಡುಗರು	-	ಪಿನ್ನಂ
ದುಡ್ಡು ಇಡುವ ಚೀಲ	-	ದುಗಾಣಿ
ಮೂಲ	-	ಕಡು
ಓಡು	-	ಬುಡ್ಸು
ಕಳ್ಳ	-	ಕೊಡ್ರು
ಶಟೊ	-	ಏಕಾಂತದಲ್ಲಿ ಹೊಡೆಯೋಣ

ಹೆಚ್ಚು ಕಡಿಮೆ, ಇವೇ ಅರ್ಥಗಳನ್ನು ಕ್ರಿಮಿನಲ್ ಕ್ಲಾಸಸ್ ಇನ್ ದಿ ಬಾಂಬೆ ಪ್ರೆಸಿಡೆನ್ಸಿ ಎಂಬ ಕೃತಿಯಲ್ಲಿಯೂ ಕೊಡಲಾಗಿದೆ. ಇದೇ ಕೃತಿಯಲ್ಲಿ ಮಹಾರಾಷ್ಟ್ರದ ಭಾಮ್ಟಗಳು ಕೆಲವು ಆಂಗಿಕ ಸಂಜ್ಞೆಗಳನ್ನು ಬಳಸುತ್ತಿದ್ದುದಾಗಿ ತಿಳಿಸುತ್ತಾರೆ (ನೋಡಿ ಪು. ೧೫).

ಗಂಟಿಚೋರರು ಮದುವೆ ಮುಂತಾದ ಶುಭ ಸಮಾರಂಭಗಳಲ್ಲಿ ತಮ್ಮ ಭಾಷೆಯಲ್ಲಿಯೇ ಸೋಬಾನೆ ಪದಗಳನ್ನು ಹಾಡುತ್ತಿದ್ದುದಾಗಿ ಸೆಟ್ಲಮೆಂಟಿನಲ್ಲಿ ವಾಸಿಸುತ್ತಿರುವ ಗಂಟಿಚೋರ ಹಿರಿಯ ವಕ್ತೃಗಳು ತಿಳಿಸುತ್ತಾರೆ. ಅವರ ಮೂಲ ಭಾಷೆಯ ಸ್ಥಾನಮಾನವನ್ನು ಇಂದು ಕನ್ನಡ ಆವರಿಸಿದೆ. ಮದುವೆ, ಮೈನೆರೆದಾಗ, ತೊಟ್ಟಿಲು ಇಡುವಾಗ ಮುಂತಾದ ಶುಭಕಾರ್ಯಗಳಲ್ಲಿ ಸೋಬಾನೆ ಪದಗಳನ್ನು ಕನ್ನಡದಲ್ಲಿಯೆ ಹೇಳುತ್ತಾರೆ. ಇವರಲ್ಲಿ ಕನ್ನಡದಲ್ಲಿ ಬಳಕೆಯಲ್ಲಿರುವ ಜನಪದ ಕಥೆಗಳಿವೆ. ಸಾಮಾನ್ಯವಾಗಿ ಕಳ್ಳತನಕ್ಕೆ ಸಂಬಂಧಿಸಿದ ರೋಚಕ ಕಥೆಗಳನ್ನು ಇವರು ಹೇಳುತ್ತಾರೆ. ಗಾದೆ, ಒಗಟು, ಒಡಪು, ಮುಂತಾದವುಗಳು ಬೇರೆ ಸಮುದಾಯಗಳಲ್ಲಿರುವಂತೆ ಇವರಲ್ಲಿಯೂ ಮನೆ ಮಾಡಿವೆ.ಗಂಟಿಚೋರರಲ್ಲಿ ಇಂದು ಮೂಲಭಾಷೆ ತೀರಿಹೋಗಿದೆ.

ಕೊರಮ

ಕೊರಮರು ತಮ್ಮ ಜಾತಿಯ ಹುಟ್ಟಿನ ಬಗೆಗೆ, ದೇವತೆಗಳ ಬಗೆಗೆ ಹತ್ತು ಹಲವು ಕತೆ, ಐತಿಹ್ಯಗಳನ್ನು ಹೇಳುತ್ತಾರೆ. ಹಾಗೆ ಮದುವೆ, ಹುಟ್ಟು, ಮೈನೆರೆದಾಗ ಮುಂತಾದ ಸಂದರ್ಭಗಳಲ್ಲಿ ಹಾಡುಗಳನ್ನು ಹೇಳುವುದನ್ನು ಕಾಣಬಹುದು. ಅದರೊಂದಿಗೆ ಒಡಪು, ಗಾದೆಗಳನ್ನು ಹೇಳುವ ಮೂಲಕ ತಮ್ಮ ಬುದ್ಧಿವಂತಿಕೆ ವ್ಯಕ್ತಪಡಿಸುವುದುಂಟು, ಕೊರಮರು ಜಬರಿಗೆ ಹೋದಾಗ ತಮ್ಮ ಬೇಸರವನ್ನು ಕಳೆಯಲು ಹಾಡು, ಕತೆಗಳಲ್ಲಿ ತೊಡಗುತ್ತಾರೆ. ಕೊರಮರಲ್ಲಿ ಪ್ರಚಲಿತವಿರುವ ಜನಪದ ಸಾಹಿತ್ಯದ ಅವಲೋಕವನ್ನು ಇಲ್ಲಿ ಮಾಡಲಾಗಿದೆ.

ಐತಿಹ್ಯ ೧ : ಕೌರವ ಪಾಂಡವರ ನಡುವೆ ವೈಮನಸ್ಯ, ದ್ವೇಷ ಹಾಗೂ ಅವರಿಬ್ಬರ ನಡುವೆ ನಡೆದ ಯುದ್ಧವೇ ಮಹಾಭಾರತ ಕಥೆಯ ತಿರುಳು. ಬಾಲ್ಯದಿಂದಲೂ ಬದ್ಧ ದ್ವೇಷಿಗಳಾದ ಈ ಕೌರವ ಪಾಂಡವರು ವಯಸ್ಕರಾದಂತೆಲ್ಲಾ ಅವರಿಬ್ಬರ ನಡುವಣ ದ್ವೇಷವೂ ವೃದ್ಧಿಸತೊಡಗಿತು. ದಿನೇ ದಿನೇ ಮಿತಿಮೀರತೊಡಗಿದ ದುರ್ಯೋಧನನ ಅತಿಯಾದ ದುರ್ಬುದ್ಧಿಯಿಂದ ಬೇಸತ್ತು ಹೋದ ರಾಜಕುಮಾರ ಧರ್ಮರಾಜನು

ದುರ್ಯೋಧನನ ಮುಖವನ್ನು ಸಹ ನೋಡಬಾರದೆಂಬ ಉದ್ದೇಶದಿಂದ ರಾಜ್ಯವನ್ನು ತೊರೆದು ಒಮ್ಮೆ ದೇಶಾಂತರ ಹೊರಟು ಹೋಗುತ್ತಾನೆ. ಆದರೆ ಧರ್ಮರಾಜನನ್ನು ಒಬ್ಬ ಹುಡುಗಿ ಬಹಳ ಗಾಢವಾಗಿ ಪ್ರೀತಿಸಿರುತ್ತಾಳೆ. ಧರ್ಮರಾಜ ಹೊರಟು ಹೋಗು ವಾಗ ಅವಳನ್ನು ಸಹ ಮರೆತಿರುತ್ತಾನೆ. ಆದರೆ ಆ ಹುಡುಗಿ ಮಾತ್ರ ಅವನನ್ನು ಮರೆತಿರುವುದಿಲ್ಲ. ಧರ್ಮರಾಜ ಊರು ಬಿಟ್ಟು ಹೊರಟು ಹೋದ ಎಂಬ ಸುದ್ದಿ ಕಿವಿಗೆ ಬೀಳುತ್ತಿದ್ದಂತೆಯೇ ದಿಗ್ಭ್ರಾಂತಳಾಗುತ್ತಾಳೆ. ರಾಜಕುಮಾರನನ್ನು ಸಂಪೂರ್ಣವಾಗಿ ಮರೆಯಲೂ ಆಗದೇ ಸೇರಿಕೊಳ್ಳಲೂ ಆಗದೆ ತೊಳಲಾಟಕ್ಕೆ ಸಿಲುಕಿಕೊಳ್ಳುತ್ತಾಳೆ. ಕೊನೆಗೆ ಒಂದು ದಿನ ಅವಳು ಮನೆಬಿಟ್ಟು ಹೊರಟು ಹೋಗುತ್ತಾಳೆ. ಗೊತ್ತುಗುರಿಯಿಲ್ಲದ ಆ ಹುಡುಗಿ ಅಪರಿಚಿತ ಸ್ಥಳಗಳಲ್ಲಿ ಅಪರಿಚಿತ ಜನರ ನಡುವೆ ವ್ಯವಹರಿಸಲು ಭಯಗ್ರಸ್ಥಳಾಗುತ್ತಾಳೆ. ಆಗ ಅವಳಿಗೊಂದು ಉಪಾಯ ಹೊಳೆಯುತ್ತದೆ. ಆ ಪ್ರಕಾರ ಭವಿಷ್ಯ ನುಡಿಯುವವಳಂತೆ ವೇಷ ಹಾಕಿಕೊಂಡು ಊರೂರು, ಬೀದಿ ಬೀದಿ ಅಲೆಯುತ್ತಾ ರಾಜಕುಮಾರ ಧರ್ಮರಾಜನನ್ನು ಹುಡುಕುತ್ತಾಳೆ. ಕೊನೆಗೊಂದು ದಿನ ತನ್ನ ಪ್ರಯತ್ನದಲ್ಲಿ ಯಶಸ್ವಿಯೂ ಆಗುತ್ತಾಳೆ. ಅಂದರೆ ಧರ್ಮರಾಜನನ್ನು ಪತ್ತೆ ಹಚ್ಚಿ ಅವಳು ಅವನ ಜೊತೆಗೆ ಸೇರಿಕೊಳ್ಳುತ್ತಾಳೆ. ಆಗ ಗರ್ಭಿಣಿಯಾಗುತ್ತಾಳೆ. ಹೀಗೆ ಈ ಸಂದರ್ಭದಲ್ಲಿ ಇವರಿಬ್ಬರಿಗೆ ಹುಟ್ಟಿದ ಸಂತಾನವೇ ಕೊರವ ಎಂಬ ಹೆಸರನ್ನು ಪಡೆಯಿತು.

ಐತಿಹ್ಯ ೨: ಯಾವುದೋ ಒಂದು ಸಂದರ್ಭದಲ್ಲಿ ಒಮ್ಮೆ ಪಾರ್ವತಿದೇವಿಯು ಕೊರವಂಜಿಯ ವೇಷಧರಿಸಿ ಶಿವನಿಗೆ ಭವಿಷ್ಯ ಹೇಳಿದಳಂತೆ. ಕೊರಮರು ಪಾರ್ವತಿಯ ಮಕ್ಕಳಾದ್ದರಿಂದ ಅಂದಿನಿಂದ ಇವರಿಗೆ ಕೊರವರು, ಕೊರವಂಜಿಗಳು ಎಂಬ ಹೆಸರು ಬಂದಿತಂತೆ.

ಐತಿಹ್ಯ ೩: ಒಮ್ಮೆ ಪಾರ್ವತಿ ದೇವಿಯು ಸರ್ಪವನ್ನು ಹಿಡಿದುಕೊಂಡು ಸೀಳುತ್ತಾಳೆ. ಅದರ ಹೊಟ್ಟೆಯಲ್ಲಿ ವಜ್ರವೈಢೂರ್ಯಗಳನ್ನು ತುಂಬುತ್ತಾಳೆ. ಅದನ್ನು ತನ್ನ ಮಗುವೆಂದು ಭಾವಿಸಿಕೊಂಡು ಅದಕ್ಕೊಂದು ತೊಟ್ಟಿಲನ್ನು ಮಾಡಿ ಕೊಡುವಂತೆ ಮೇದರವನೊಬ್ಬನಿಗೆ ಹೇಳುತ್ತಾಳೆ. ಸರ್ಪವನ್ನುಕಂಡು ಭಯಗ್ರಸ್ಥನಾದ ಮೇದರವನು ತೊಟ್ಟಿಲು ಮಾಡಿ ಕೊಡಲು ಒಪ್ಪುವುದಿಲ್ಲ. ಆದರೆ ಅದೇ ಮಾತನ್ನು ಪಾರ್ವತಿದೇವಿಯು ಕೊರಚನೊಬ್ಬನಿಗೆ ಹೇಳುತ್ತಾಳೆ. ಆಗ ಆ ಕೊರಚನು ಅವಳು ಕೇಳಿದಾಕ್ಷಣ ಎರಡೆಣಿಸದೆ ಒಂದು ಸುಂದರವಾದ ತೊಟ್ಟಿಲನ್ನು ಮಾಡಿಕೊಡುತ್ತಾನೆ. ಮೇದರವನು ನಿರಾಕರಿಸಿದ್ದನ್ನು ಕೊರಚನು ಶಿರಸಾವಹಿಸಿ ಮಾಡಿಕೊಟ್ಟಿದದರಿಂದ ಪಾರ್ವತಿದೇವಿಯು ಬಹಳ ಸಂತುಷ್ಟಳಾಗುತ್ತಾಳೆ. ಆಗ ಕೊರಚರವನಿಗೆ ತನ್ನಲ್ಲಿದ್ದ ಮಂತ್ರದಂಡವನ್ನು ಕೊರವಂಜಿ ಕುಕ್ಕೆ ಮತ್ತು ಕೇರುವ ಮೊರವನ್ನು ಬಹುಮಾನವಾಗಿ ಕೊಟ್ಟು ಭವಿಷ್ಯ ಹೇಳುವ ಅಧಿಕಾರವನ್ನು ಅನುಗ್ರಹಿಸುತ್ತಾಳೆ. ಅಂದಿನಿಂದ ಈ ಕೊರವರಲ್ಲಿ ಕೊರವಂಜಿ ಸಂತತಿ ಬೆಳೆಯಿತು ಹಾಗೂ ಭವಿಷ್ಯ ನುಡಿಯುವ ಕಲೆ ದೈವದತ್ತವಾಗಿ ಒಲಿಯಿತಂತೆ.

ಗಾದೆಗಳು

* ಕೊಕ್ಕರೆಗೊಂದು ಕೆರೆಯೇ
  ಕೊರವನಿಗೊಂದು ಊರೆ.

* ಕೊರಮ ಕೂಡಿ ಕೆಟ್ಟ
  ಡೊಂಬ ಆಗಲಿ ಕೆಟ್ಟ
* ಕೋತಿಯ ಶವವನ್ನು
  ಕೊರವರ ಸ್ಮಶಾನವನ್ನು ಕಂಡವರುಂಟೆ
* ಪಂಡಿತನಿಗೆ ಆನೆ ಕೊಡು
  ಕೊರಮನಿಗೆ ಬೆಕ್ಕು ಕೊಡು
* ಕೊರವರ ಮತ್ತು ಇದಿಯನ್‌ಗಳ ಜಗಳ
  ಸುಲಭವಾಗಿ ಬಗೆಹರಿಯತ್ಯೆ
* ಕೊರವರ ಹೆಂಗ್ಸು ಹೆತ್ರೆ
  ಕೊರವ ಗಂಡ್ಸು ಇಂಗ್‌ತಿಂದ
* ಕೊರವಂಜಿಗೆ ಬುಟ್ಟಿ ತಪ್ಪೋಲ್ಲ
  ಜಂಗಮನಿಗೆ ಜೋಳಿಗೆ ತಪ್ಪೋಲ್ಲ
* ಕೊರಮನಿಗೊಂದು ಹೆಸರಿಲ್ಲ
  ಕೊಕ್ಕರೆಗೊಂದು ಕೆರೆಯಿಲ್ಲ

ಭಾಷೆ

ಕೊರಮ ಸಮುದಾಯದಲ್ಲಿ ವೃತ್ತಿಗನುಗುಣವಾಗಿ ಕಾಲಾಂತರದಲ್ಲಿ ಹಲವು ಪ್ರಭೇದಗಳು ಉಂಟಾಗಿದ್ದರೂ ಭಾಷೆಯ ದೃಷ್ಟಿಯಿಂದ ಭಿನ್ನತೆಗಳು ತೋರುವುದಿಲ್ಲ. ಸಾಮಾನ್ಯವಾಗಿ ಅಲೆಮಾರಿ ಸಮುದಾಯಗಳ ಭಾಷೆಗಳೆಲ್ಲಮೂ ಲಿಪಿರಹಿತವಾದವುಗಳೇ ಆಗಿವೆ. ಇಂತಹ ವೈಶಿಷ್ಟ್ಯಗಳಿಂದ ಕೂಡಿದ ಹಲವಾರು ಲಿಪಿರಹಿತ ಭಾಷೆಗಳಲ್ಲಿ ಈ ಕೊರವರು ಆಡುವ ಕುಳಿರ್(ಕುಳುವ) ಎಂಬ ಭಾಷೆಯೂ ಒಂದಾಗಿದೆ. ಇದು ತಮಿಳು, ತೆಲುಗು ಹಾಗೂ ಕನ್ನಡ ಪದಗಳೆಲ್ಲಮೂ ಸಮ್ಮಿಳಿತಗೊಂಡಿರುವ ಒಂದು ಅಪಭ್ರಂಶ ಭಾಷೆಯಾಗಿದೆ.

ಮೂಲತಃ ದ್ರಾವಿಡ ಜನಾಂಗಕ್ಕೆ ಸೇರಿದವರಾದ ಇವರು ಪ್ರಾಯಶಃ ತಮಿಳುನಾಡಿನಿಂದ ವಲಸೆ ಬಂದು ಕರ್ನಾಟಕದಲ್ಲಿ ನೆಲೆನಿಂತವರಿರಬಹುದು. ಕಾರಣ ಇವರು ಮಾತನಾಡುವ ಕುಳಿರ್ ಭಾಷೆಯಲ್ಲಿ ಕನ್ನಡ ತೆಲುಗಿನ ಪ್ರಭಾವಕ್ಕಿಂತ ತಮಿಳಿನ ಪ್ರಭಾವವೇ ಹೆಚ್ಚಾಗಿ ಕಂಡುಬರುತ್ತದೆ. ಇವರು ಮೂಲತಃ ತಮಿಳುನಾಡಿನವರಾದರೂ ಬಹಳ ದಿನಗಳ ಕಾಲದಿಂದಲೂ ಕರ್ನಾಟಕದಲ್ಲಿ ನೆಲೆಸಿ ಕನ್ನಡಿಗರೊಡನೆ ಸಮ್ಮಿಳಿತಗೊಂಡಿರುವುದರಿಂದ ಅವರ ಭಾಷೆಯ ಮೇಲೆ ಕನ್ನಡ ಭಾಷೆಯ ಪ್ರಭಾವವಾಗಿರುವುದನ್ನು ಗಮನಿಸಬಹುದು.

ಹಿರೇಂದ್ರ ಕೆ. ರಕ್ಷಿತ್ ಅವರು ಕೊರಚರ ಭಾಷೆಯು ತಮಿಳು ಮೂಲದ್ದು ಎಂಬ ಮಾತಿಗೆ ಪೂರಕವಾಗಿ ಈ ಕೆಳಗಿನಂತೆ ತಿಳಿಸುತ್ತಾರೆ. ಇದನ್ನು ಗಮನಿಸಿದಾಗ ತಮಿಳು ಅವರ ಮೂಲ ಭಾಷೆ,

ಭೌಗೋಳಿಕ ಹಿನ್ನೆಲೆಯಲ್ಲಿ ಭಾಷೆ ರೂಪಾಂತರ ಹೊಂದಿ ಅನ್ಯ ಭಾಷೆಯ ಶಬ್ದಗಳನ್ನು ಒಳಗೊಂಡಿದೆ ಎನ್ನಬಹುದಾಗಿದೆ. Originally they spoke Tamil in all the Tree States. But for the last several decades they are fast taking to the languages of the respective states. ಎಡ್ಗರ್ ಥರ್ಸ್ಟನ್ ಅವರು "In communication among them selves. The Koravas and the Yerukalas speak a corrupt polyglot. In which the words derived from several Languages been little ressembalance to the original. Their words appear to be taken chiefly from Tamil, Telagu and Canarise"ಎಂದು ಹೇಳಿದ್ದು ಕೊರವರು ಮತ್ತು ಯರಕುಲರು ಕನ್ನಡ, ತಮಿಳು ಮತ್ತು ತೆಲುಗು ಭಾಷೆಗಳ ರೂಪಾಂತರಗೊಂಡ ಶಬ್ದಗಳನ್ನು ಬಳುಸುತ್ತಿದ್ದು. ಅವು ಮೂಲ ಭಾಷೆಯೊಡನೆ ಹೊಂದಿರುವ ಸಂಬಂಧವನ್ನು ಗಮನಿಸಬಹುದಾಗಿದೆ. ಬೇರೆ ಬೇರೆ ಭೌಗೋಳಿಕ ಹಿನ್ನೆಲೆಯಲ್ಲಿ ಅನ್ಯ ಭಾಷೆಯ ಭಾಷೆಗಳ ಸಂಪರ್ಕದಿಂದ ಈ ಬೆಳವಣಿಗೆಯನ್ನು ಕಾಣಬಹುದಾಗಿದೆ.

ಅಬೇ ಡುಬೋಯಿಸ್ ಅವರು Koravas besides speaking Telugu Tamilu and Kanarese are said also to have a Gipsy Language of theirown ಎಂದು ಹೇಳಿರುವುದು ಕೊರಚರು ಕನ್ನಡ, ತಮಿಳು, ತೆಲುಗು ಮಿಶ್ರಣದ ಭಾಷೆಯನ್ನು ಬಳಸುತ್ತಾರೆ ಎಂದು ಅದು ಅವರದ್ದೇ ಆದ ಜಿಪ್ಸಿ ಎಂದು ಹೇಳಿದ್ದು ಆದರೆ ಜಿಪ್ಸಿ ಭಾಷೆಯ ಕುರಿತು ಹೆಚ್ಚಿನ ವಿವರವನ್ನು ಅವರು ನೀಡದೆ ಇರುವುದರಿಂದ ಜಿಪ್ಸಿ ಭಾಷೆಯ ಮೂಲ ಕುರಿತು ತಿಳಿಯಲು ಸಾಧ್ಯವಾಗುವುದಿಲ್ಲ.

ಕೊರಮ ಸಮುದಾಯದಲ್ಲಿ ತಮ್ಮ ಮೂಲ ಭಾಷೆಯನ್ನು ತೊರೆದು ಹೆಚ್ಚಾಗಿ ಕನ್ನಡವನ್ನೇ ಅವಲಂಬಿಸಿ ಮಾತನಾಡುತ್ತಾರೆ. ಇಂದಿನ ತಲೆಮಾರಿನ ಜನಾಂಗಕ್ಕೆ ಕುಳಿರ್ ಭಾಷೆಯ ಬಗ್ಗೆ ಹೆಚ್ಚಿನ ಅರಿವು ಇಲ್ಲದಿರುವುದು ಸಮೀಕ್ಷೆಯಿಂದ ತಿಳಿದು ಬರುತ್ತದೆ. ಕೊರಮರು ಮನೆಯಲ್ಲಿ ಕುಳಿರ್ ಭಾಷೆಯನ್ನು ಮಾತನಾಡಿದರೆ ಹೊರಗೆ ಸ್ಥಳೀಯವಾಗಿ ಬಳಕೆಗೊಳ್ಳುವ ಭಾಷೆಯನ್ನು ಮಾತನಾಡುತ್ತಾರೆ.

ಕೋಷ್ಟಕ ೪.೭: ಸಮೀಕ್ಷೆಗೊಳಪಟ್ಟ ಕೊರಮರ ಕುಳಿರ್ (ಕುಳುವ) ವಾಕ್ಯಗಳ ರಚನೆ

ಕನ್ನಡ	ಕುಳಿರ್
ಹೆಸರೇನು	ಪೇರ್ ಎಂದರವಾ
ಊಟಮಾಡು	ಉಂಗುರದವಾ
ಕುಳಿತುಕೋ	ಉಕ್ಕೋ
ಊಟಾ ಆಯಿತೆ	ಉಂಗರದು ಆಸಾ
ಹೊಟ್ಟೆ ಹಸಿಯುವುದು	ವರಗಪೆಸಿಗಿ
ಸ್ನಾನ ಆಯಿತೆ	ತೆಣ್ಣಿವಾಂತರಣಂಗ
ಮದುವೆ ಆಯಿತಾ	ಕನ್ಯಾಳು ಆಸಾ

ಊಟಮಾಡು	ಸೋರ್ ಮುಗ್ಗು
ಹನುಮಯ್ಯ ಬಾ ಬಾ	ಹನುಮಯ್ಯ ವಾ ವಾ
ರಾಮಯ್ಯ ಹೋಗು	ರಾಮಯ್ಯ ಓವಾ
ಊರುಕುಹೊಗರೆ	ಊರಿಗೆ ಹೋಗುತ್ತೇನೆ
ಎಮನು ವರ್ರಿ	ಯಾವತ್ತು ಬರುತಿ
ಉಡಲೆ ಎರ್ರೆ	ನಾಳೆಬರುತ್ತೇನೆ

ಕನ್ನಡ	ಕುಳಿರ್\ಕುಳುವ	ಕನ್ನಡ	ಕುಳಿರ್\ಕುಳುವ
ಪದಾರ್ಥಗಳು			
ಹಿಟ್ಟು	ಕಳಿ	ದುಡ್ಡು	ಪನ್ನು
ಅನ್ನ	ಸೋರು	ಸಾರು	ಕಟ್ಟು
ಮಾಂಸ	ಕರಿ	ತೆಂಗಿನಕಾಯಿ	ತೋಗಾಯಿ
ಅಕ್ಕಿ	ಎರಸಿ	ಜೋಳ	ಜೊಳಮು
ಭತ್ತ	ನೆಲ್ಲು	ರಾಗಿ	ಕೋರುಗು
ತಂದೆ	ಯಾವ	ತಾಯಿ	ಯಮ್ಮ
ಚಿಕ್ಕಪ್ಪ	ಸಣವ	ದೊಡ್ಡಪ್ಪ	ಬೆರಾವ
ಹೆಂಡತಿ	ಕುಳಸಿ	ಅತ್ತಿಗೆ	ನಂಗ
ಅಳಿಯ	ಮರಮಗ	ನಾದಿನಿ	ಮುಚ್ಚಿನ್ಸ್
ಭಾವಮೈದ	ಮುಚ್ಚಾದಿ	ಸಣಮ್ಮ	ಚಿಕ್ಕಮ್ಮ
ಹಂದಿ	ಪಂಡ್ರಿ	ಕೋಳಿ	ಕೊಯಿ
ಎಮ್ಮೆ	ಎಲ್ಮಡ್	ಕುರಿ	ಕುರುಬಡು, ಗೂರ್ರಿ
ಕೊತಿ	ಪೂನೆ	ಸಿಂಹ	ಸಿಂಹನ್‌ಪಾರು
ಮೊರ	ಸೋಟಿ	ಕುಕ್ಕೆ	ಪಣಿ
ಬಿದಿರು	ಇದಿರು	ಎಮ್ಮೆ	ಎಲಿಮಿ
ಸಾರಾಯಿ	ಕರತನ್ನಿ	ಹಗ್ಗ	ಕರಗು

ಕನ್ನಡ	ಕುಳಿರ್\ಕುಳುವ	ಕನ್ನಡ	ಕುಳಿರ್\ಕುಳುವ
ಒಲೆ	ಅಡುಪು	ಚೀಲ	ತಿತ್ತಿ
ಹೊದೆಯುವುದ	ಪೋತಿಗ್ರದು	ಕತ್ತೆ	ಕದಿ
ದನ	ಮಾಡು	ನಾಯಿ	ಕವಾಲು

ಮೊಲ	ಕುಂದೇಲಿ	ಪೊರಕೆ	ಪರಕಡ್ಡಿ
ಕರೆಮೂತಿಹಕ್ಕಿ	ಕರೆತೆಲಿಯ	ಮುರಕಾಟಿ	ಮುರುವ
ಆಗಸ	ಸಾಕ್ಲವು	ಕ್ಷೌರಿಕ	ತಲಕಾಯಿಬಟ್ರವು
ಕೈಶ್ಯಾತಾಳು	ಕುರಿ	ಕುರುಬಾಡು	
ಕಾಗೆಸಿಳ್ಳ	ಏಲಿಗ	ಕೂದಲು	ಮೆಗರು
ಗೌಜಿಗನಹಕ್ಕಿ	ಕೆರವಾದಿ	ಹಂದಿ	ಪಂಡ್ರಿ
ಅಂಗನಕ್ಕಿ	ಕಾಡ	ಬಾವಲಿ	ಸೀಕ್ರೆಕುಂಜು
ನರಿ	ಬೆರನಕ್ಕ	ಸಂಬಾರಕಾಗೆ	ಸಂಬಾರುಪೊತು
ಕಾಲು	ಕಾಪಾಲು	ಬೆನ್ನು	ಎನ್ನು
ಸೆರ್ಲೆಹಕ್ಕಿ	ಸೆರಗ	ಕೊಳವಂಕ	ಕಾನೋಗೋಯಿ
ತೆಂಗಿನಕಾಯಿ	ಒಡಿಪಾನು	ಉಣಿಗೊರವ	ನಣುವಯಾ
ಕರಿಮೀನು	ಕೆರವಾಡು	ಕುಲ್ಡಗೊಕ್ರ	ಮಡೆಗುಡ್ಡ
ಹರಿವೆಸೊಪ್ಪು.	ಗೊದ್ದರನಕ್ಕಿ	ಅಕ್ಕಿ	ಕೆಂಚಾಳನಕ್ಕಿ
ಬೆಲ್ಲ	ತೀಪಾನು	ಅಕ್ಕಿನರಿ	ಗುಂತನಕ್ಕ
ಈರುಳ್ಳಿ	ಉಲಗಡ್ಡಿ	ಬೆಳ್ಳುಳ್ಳಿ	ಒಂಗೆಡ್ಡಿ
ಅಸಿಟ್ಟು	ಮಾವು	ಮೆಣಸು	ಮಳಕಾಯಿ
ಮಣವು	ಗಂಡ	ಅಂಬ್ಬಿಮಾನ	ಗಂಡುಮಗ
ಪಂಗೇರಾಗುಂಟ್ಟೆ	ಹೆಣ್ಣುಮಗು	ಅಪಡೆ ಕಗೆ	ತಾತ
ಕಗಿಸಿ	ಆಯಿ	ಬೆರ್ರಮ್ಮ	ದೊಡ್ಡವ್ವ
ಮ್ಯಾನತ್ತೆ	ಸೋದರತ್ತೆ	ಮ್ಯಾನಮಾವ	ಸೋದರಮಾವ
ಮೆಚ್ಚನಿಸಿ	ಗಂಡನತಂಗಿ	ಮೆಚ್ಚನ	ಮೈದುನ
ನಂಗಾ	ಅಣ್ಣನ ಹೆಂಡತಿ	ಸಿಗಳಿ	ನಾಳೆ

ಕನ್ನಡ	ಕುಳಿರ್\ಕುಳುವ	ಕನ್ನಡ	ಕುಳಿರ್\ಕುಳುವ
ಪೂನಿ	ಬೆಕ್ಕು	ನಕ್ಕಿ	ನರಿ
ಸಲಗ	ಗಂಡುಹಂದಿ	ಪಡ್ಡಿಗುನ್ನಿ	ಹೆಣ್ಣುಹಂದಿ
ಕೊಯಿಕುಂಜು	ಕೋಳಿಮರಿ	ಮುಟ್ಟಿ	ತತ್ತಿ
ಕರ್ರಿ	ಮಾಂಸ	ಮುಂಗ್ಲಿ	ಮುಂಗುಸಿ
ಎಲುಕುಟ್ಟಿ	ಇಲಿ	ಎಲ್ಮಿದೊಡಿ	ಎಮ್ಮಿಕರ
ಮಾಡು	ಧನ	ಕುಟ್ಟಿ	ಮರಿ

ಪಾಕು	ಅಡಕೆ	ಎಲಾಬಾಕು	ಎಲೆ ಅಡಕಿ
ಸುಣಾಯು	ಸುಣ್ಣ	ಹೊಟಿನಾಯಿ	ಬೇಟೆನಾಯಿ
ಬಂತಿ	ಕವದಿ	ಕಳತು	ಪ್ಲೇಟ್
ಎಗಿ	ದಾರಿ	ಸೋಟಿ	ಮರ
ಚಂಬು	ತೆಂಬಿಗೆ	ಚರಪಂಗ	ಚಪ್ಪಲ್
ಸಟ್ಟಿ	ಕುಬುಸ	ಊಸಲು	ಬಾಕಲು
ಊಟು	ಮನೆ	ಮಗರು	ಕೂದಲು
ಗಾಜಂಗ	ಬಳಿ	ಪೂವಾ	ಹೂವಾ
ತೆನ್ನಿ	ನೀರು	ವಾಯಿ	ಬಾಯಿ
ತೆರಿ	ನೆಲ	ಮಾತಿ	ಮಾತು
ನೇಸು	ನಿನ್ನೆ	ಮುಂದೆನೆಸು	ನಾಡದ
ಇಮನು	ಇವತ್ತು	ಪೆರು ಪೆಗರು	ಹೆಸರು
ಕಂದ್ಲು	ತೊಗರಿ	ಶೆಟ್ಟಿ	ಗಡಿಗಿ
ನೆವ್ವಿ	ತುಪ್ಪ	ಪಾಲು	ಹಾಲು
ಪೆರಗು	ಮೊಸರು	ಮೆರಿಮಗ	ಸೊಸೆ
ಅಕ್ಕತಂಗ್ಸಿ	ಅಕ್ಕತಂಗಿ	ತಂಗ್ಸಿ	ತಂಗಿ
ಸಡಿ	ಗಿಡ	ಮಳಕಾಯಿ	ಮೆಣಸಿನಕಾಯಿ
ಪಚ್ಚಮಳಕಾಯಿ	ಹಸಿಮೆಣಸಿನಕಾಯಿ	ಕೊಲ್ಲಿಕಿಹೋಗಾರೆ	ವಲಕ್ಕೆ ಹೋಗುತ್ತೇನೆ
ಕಳ್ಳ	ಹೆಂಡ	ಕುಡುಸುವರ್ರೆ	ಕುಡಿದುಬರುತ್ತೇನೆ

ಕುಳಿರ್	ಕನ್ನಡ	ಕುಳಿರ್	ಕನ್ನಡ
ಕರ್ತ್‌ತೆನ್ನಿ	ಸರಾಯಿ	ಉಂಗಾರೆ	ಮಗಸು ಊಟ
ಹೊಡರು	ಬ್ಯಾಡರ್	ನಕ್ಕಳಿಹೂಡ್ರವಿ	ಉಪ್ಪರ್
ವಳಗವಿ	ಗೌಡ	ಸೋರವಿ	ವಡ್ಡರ್
ತೆಲಿಮೆನವಿ	ಕಬ್ಲಿಗೆಯ	ಪೆಣಮವಿ	ಕುಲ್ಕರ್ಣಿ
ಉಲ್ಗೊಗ್ರು	ಮುಸ್ಲಿಂ	ಗೊಲ್ಲವಿ	ಗೊಲ್ರ
ಮೊಗರವಿ	ಕುರುಬರು	ಜಂಗತವಿ	ಸ್ವಾಮಿ
ಬಡಿಗೇವಿ	ಬಡಿಗೇರು	ವೆರವರಗಯ್ಯ	ಬಳೆಗುಂಡು
ವರಗು	ಕಟ್ಟಿಗಿ	ನೆರಪು	ಬೆಂಕಿ
ವಡಪು	ವಲಿ	ಕಟ್ಟಡ	ಅಂಚು

ಪೆಲ್ಲು	ಹಲ್ಲು		ಪರ್ರವಿ	ಮಾದಿಗ	
ಬೆರ್‌ಪರ್ರವಿ	ಹೊಲೆಯರು		ಹುಳ್ಳಿ	ಒಳಗಡೆ	
ಬೈಲಿ	ಹೊರಗಡೆ		ಊಟು	ಮನೆ	
ಇಡಿಗೆವಿ	ಇಳಿಗೇರು		ಅಣ್ಣಿಹೊಡರವಿ	ಗಾಣಿಗೆರು	
ತಿಪು	ಸಿಹಿ		ಪೂವು	ಹೂವು	
ನೀರು	ತಣ್ಣಿ	ತನ್ನಿ	ಅಕ್ಕಿ	ಅರಸಿ	ಎರಸಿ
ಮುದ್ದೆ	ಕಳಿ	ಕಳಿ	ಅನ್ನ	ಚೋರು	ಸೋರು
ಸಾರು	ಕೊಳಂಬು	ಕಟ್ಟು	ಹಾಲು	ಪಾಲು	ಪಾಲು
ರಾಗಿ	ಕೆವರು	ಕೋರ್‍ಗ್ಗು	ಬಟ್ಟೆ	ತುನಿಯೂ	ತುಣಿವಾನು
ಮದುವೆ	ಕಲ್ಯಾಣ	ಕಣಾಳ	ಮನೆ	ವೀಡು	ಮೂಡು
ಬೆಂಕಿ	ನೆರುಪು	ನೆರ್ಪು	ದೀಪ	ವಿಳಕ್ಕು	ವಳಕು
ಹಾವು	ಪಾಂಬು	ಪಾಮು			
ಸಂಖ್ಯೆಗಳು					
ಒಂದು	ಒಂಡ್ರು	ಒಂಡು	ಎರಡು	ಇರಂಡು	ರಂಡು
ಮೂರು	ಮೂನ್ರ	ಮೂಡು	ನಾಲ್ಕು	ನಾಂಗು	ನಾಲು
ಐದು	ಐಂದು	ಅಂಜು	ಆರು	ಆರು	ಆರು
ಏಳು	ಏಲು	ಓಗ್	ಎಂಟು	ಎಟ್ಟು	ಆಟ್ಟು
ಒಂಭತ್ತು	ಒಂಬದು	ಒಂಬದಿ	ಹತ್ತು	ಪತ್ತು	ಪತ್ತು
ಹನ್ನೊಂದು	ಪದಿನೊಣ್ಣು	ಪನ್ನೊಂಡು	ಹನ್ನೆರಡು	ಪನಿರೆಂಡು	ಪನ್ನೆಂಡು

ಹೀಗೆ ಮೇಲಿನ ಪದಗಳನ್ನು ಗಮನಿಸಿದಾಗ ಕೊರಮ ಭಾಷೆಯು ತಮಿಳು ಮೂಲದ ಭಾಷೆಯಾಗಿರಬೇಕೆನಿಸುತ್ತದೆ.

ಪಾರ್ಧಿ

ಕರ್ನಾಟಕ ರಾಜ್ಯದ ಪಾರ್ಧಿಯರಲ್ಲಿ ವಾಗ್ರಿ ಭಾಷೆ ಮತ್ತು ಸಾಹಿತ್ಯ ಗಟ್ಟಿಯಾಗಿ ಉಳಿದುಕೊಂಡಿರುವುದು. ಇವರ ಸಾಹಿತ್ಯ ಮತ್ತು ಭಾಷೆಯನ್ನ ಇವರ ಕಥೆ, ಹಾಡು, ಸಂಪ್ರದಾಯ ಆಚರಣೆಗಳಲ್ಲಿ ಕಾಣಬಹುದು.

ವಾಗ್ರಿ ಭಾಷೆಯ ಕತೆ

ಏಕ್ ದೇಖ್‌ನೊ ಏಕ್ ರಾಜಾತೊ ಯೊ ರಾಜಾ ಏಕ್‌ದಿನ್ ಇನೊ ಮಂತ್ರಿ ಸೇನಾಧಿ ಪತಿ ಯೊ ಗಾಂನ್ನೂ ಅದ್ಮಿ ಖಾರು ಮಳೀನ್ ಏಕ್ ಸಭೆ ಉಯ್ಯಿತೂ. ಯೊ ಸಭೆಮಾ ದೇಖ್‌ನಿ ಸಮಾಚಾರ್ ಚಾಲಿ ಬಿಜು ಉಯ್ಯಿತೂ ಏಕ್ ಮಾಡ್ತಿ ಖೇಲಾಡಿಯೊ ತೊ ಘಣು ಅಚ್ತೂ ಖೇಲಿ. ಮಂತ್ರಿ ಸೇನಾಧಿಪತಿ ಯೊಗಾಂನೂ ಲೋಕ್ ಯೊ ಮಾಡ್ತೀನಾ ಹೊನ್ನು ರೂಪು ಧಾನ್ಯ ಖಾರೂದ್ದಿದು., ರಾಜಾನೆ ಯೊ

ಮಾಡ್ಕಿನ ತೂ ಘಣು ಅತ್ತೂಸಿಖೇಲಿ ಮಾರಾ ಮಂತ್ರಿನೆ ಮಾರಾ ಸೇನಾಧಿಪತಿನೇ ಮಾರಾ ದೇಖ್ನೊ ಆದ್ಮಿನೆ ಖಾರೂ ವೈಢೂರ್ಯ ಧಾನ್ಯ ದಿಡು ಮೇ ತೂ ಶಾತ್‌ಭೋಲಸ್ ಯೊ ದೇವಾನಾ ಮೆ ತಯಾರ್, ಯೊ ರಾಣಿನೇ ಬೋಲಿ ಮೆ ಬೋಲಿಶ್ ತೂ ಖಮ್‌ಜಿಸ್ ಕಿ ಶೂ ರಾಜಾ ಒಪ್ಪಿಗೊ, ತೂ ಶಾತ್ ಭೋಲಸ್ ಮೆ ಖಂಜಾನಾ ತಯಾರ್ ಯೊ ಖೇಲಿತೆ ಮಾಡ್ತಿನೆ ಬೋಲಿ ತಾರಿ ಸಿಂಹಾಸನಾ ಫರ್ ಮೆ ಅಂಗ್‌ನೂ. ಸಭೆ ಸೇರಿ ರಹಿದೇಖ್ ತ್ಕೂ ಟೇಂಪರ್ ತದೆ ರಾಜಾನಾ ಘಣು ಮಾನಾಜಾಸ್ ತದೆ ಯೋಚನೆಕರಸ್ ಮೇರಾಜ್ಯಾತ್ತೂ ಮೆಹಲಿಜಾನು ನಕೊತೊ ಮಾರಿ ಸಿಂಹಾಸನಾಫರ್ ಯೊ ಖೇಲಾವಳಿ ಮಾಡ್ಕಿ ಅಂಗ್ನು. ಬೇ ತೀರ್ಮಾನ್ ಉಯ್ಯಿಗಿಬೇರೂಸ್ ಟೈಂ ಲಿದೊ ಸೋಚೊ ಕಿಂ ಕರು ತ್ಕೊ ದಿನ್ ಅಸ್ ದೇಖ್ ದೇಖ್ ನಾ ರಾಜಾನಾ ಅವಾತ್ ಭೋಲಿ ಮೋಕುಲಿಯೊ. ಕೋಣ್‌ಬಿ ಉತ್ತರಕೋದ್ದೋನಿ ಏಕ್ ದೇಖ್‌ನೊ ಮಂತ್ರಿಯೊ ಪ್ರಸ್ನೇನಾ ಕಂಜೇನ್ ಇನೆ ಉತ್ತರ ಶೋಚೊ ಇನೆ ಬಲರಾಕಿತ್ತೆ ಶಾತ್ ಸಿಂಹಾಸನಾಫರ್ ಅಂಗುಸಾಕ್ರಿಖಾಲಿ. ಶಾತ್ ತೋಬಿ ಏಕ್ ತೊಟ್ ತೊ ಬಿ ಮುತ್ತರ್ ಫಡಿಗೂತೊ ಇನೆ ಯಾಸ್‌ಧರಿ ಖತರ್‌ನಕ್‌ದೇನೂ. ಯೊ ರಾಜಾನಾ ಅವುತ್ರ ಭೋಲಿ ಮೋಕ್‌ಲಿಯೊ ಸಭೆ ಸೇರಿಗೊ ರಾಜಾ ಮಂತ್ರಿ ಸೇನಾಧಿಪತಿ ದೇಖ್‌ನೂ ಆದ್ಮಿ ಅಕ್ಕು ಸೇರಿಗೂ ಮಾಡ್ಕಿಅಯ್, ಸಬೆಮಾ ರಾಜಾ ಮಂತ್ರಿನಾ ಭೋಲಿಯೊ ಮಂತ್ರಿ ಅಪ್ಣಿ ಕಂಡೀಷನ್ ಭೋಲ್ ಮಂತ್ರೀನೆ ದೇಕ್‌ಲಿ ಖೇಲಾವಳಿ ಮಾಡ್ಕಿ ತಾತ್‌ತೊಬಿ ತೂ ಬೋಲ್ ರಾಕೀತೆ ಹಂಗಾನ ಶಾತ್‌ತೊಬಿ ಏಕ್ ತೊಟ್ ಮುತ್ತರ್ ಪಡಿಉತೊ ತುನಾಅಸ್ ಕತರ್‌ನಕ್ ದೀಶ್, ಭೋಲ್ ದ್ಯಾವಾಮ ಯೊ ಮಾಡ್ಕಿ ಡರೀಗಿ. ಬಿಜೂ ಉತ್ತರಾಕಿನೆ ಭೋಲಿಯೂ ಮಂತ್ರಿನೇ ಭೋಲಿಯೂ ತದೆ ಯೊ ಮಾಡ್ಕಿ ಯೊ ಮಂತ್ರೀಸ್‌ನಾ ಒಪ್ಪೀನ್ ಯಾ ಕರ್ಲೇಸ್, ರಾಜಾನಾ ಕೊ ಒಪ್ಪಾನಿ ರಾಜಾ ಕೆತ್ರೂ ಭೋಲಾತೊಭಿ ಯೊ ರಾಜಾನಾ ಯಾ ಕೊಕರಾನಿ. ಯೊ ಕರಸ್ತೆ ಯಹಾ ಮಂತ್ರೀನೆ ಜೈನ್.(ಲಕ್ಕಿ ಪೃಥ್ವಿರಾಜ್, ಶಿಕಾರಿ ರಾಮು: ೨೦೦೮: ೯೪-೯೫)

ಅನುವಾದ

ಒಂದು ದೇಶದಲ್ಲಿ ಒಬ್ಬ ರಾಜ ಇದ್ದ. ಒಂದು ದಿನ ರಾಜನ ಮಂತ್ರಿ ಸೇನಾಧಿಪತಿ ಆ ದೇಶದ ಜನರು ಒಟ್ಟಾಗಿ ಒಂದು ಸಭೆ ನಡೆಸಿದರು. ಆ ಸಭೆಯಲ್ಲಿ ದೇಶದ ಕಷ್ಟ ಸುಖದ ಬಗ್ಗೆ ಮಾತನಾಡಿದರು. ಮಾತನಾಡಿ ಕೊನೆಯಲ್ಲಿ ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದರು. ಒಂದು ಹೆಂಗಸು ಸಂಗೀತ ನಾಟ್ಯವನ್ನು ಆ ಸಭೆಯಲ್ಲಿ ಆಡಿ ತೋರಿಸಿ ದಳು. ಆ ಸಭೆಯಲ್ಲಿ ಮಂತ್ರಿ ಸೇನಾಧಿಪತಿ ಆ ದೇಶದ ಜನರು ಅವಳ ನೃತ್ಯವನ್ನು ನೋಡಿ ಮೆಚ್ಚಿ ಅವಳಿಗೆ ಚಿನ್ನ ಬೆಳ್ಳಿ ಬಂಗಾರ ದವಸ ಧಾನ್ಯಗಳನ್ನು ಕೊಟ್ಟರು. ಆದರೆ ಆ ದೇಶದ ರಾಜ ಅವಳಿಗೆ ಕೇಳಿದನು 'ನಮ್ಮ ದೇಶದ ಜನರು, ಸೇನಾಧಿಪತಿ, ಮಂತ್ರಿಯರು ಎಲ್ಲವನ್ನೂ ಕೊಟ್ಟಿದ್ದಾರೆ. ಆದರೆ ನೀನು ನನಗೆ ಏನು ಕೇಳುತ್ತೀಯೆ ಕೇಳು ಅದನ್ನು ನಾನು ಕೊಡಲು ಸಿದ್ಧನಾಗಿದ್ದೇನೆ'. ಎನ್ನಲು, ಆಗ ಆ ನೃತ್ಯದ ಹೆಂಗಸು 'ನಾನು ಕೇಳಿದ್ದನ್ನು ಕೊಡಲು ಸಿದ್ದನಿದ್ದೀಯ' ಎಂದು ಮತ್ತೊಮ್ಮೆ ಪ್ರಶ್ನಿಸಿದಳು. ಅದಕ್ಕೆ 'ಆಯಿತು ನೀನು ಏನು ಕೇಳುತ್ತೀಯ ಅದನ್ನು

ಕೊಡಲು ಸಿದ್ಧನಾಗಿದ್ದೇನೆ' ಎಂದು ಹೇಳಿದನು. ಆಗ ನೃತ್ಯದ ಹೆಂಗಸು 'ನಾನು ಈ ಸಭಾಂಗಣದಲ್ಲಿಯೇ ನಿನ್ನ ಸಿಂಹಾಸನದ ಮೇಲೆ ಹೇಲಬೇಕು' ಎಂದು ಕೇಳುತ್ತಾಳೆ. ಆದರೆ ರಾಜನಿಗೆ ಇದು ಅವಮಾನದ ಮಾತಾಗಿರುತ್ತದೆ. ಅದನ್ನು ಸಹಿಸಿಕೊಂಡು ಎರಡು ದಿನ ಸಮಯವನ್ನು ಕೇಳುತ್ತಾನೆ. ಆ ಎರಡೂ ದಿನಗಳಲ್ಲಿ ದೇಶದೇಶದ ರಾಜರುಗಳಿಗೆ ಮತ್ತು ಮಂತ್ರಿಗಳಿಗೆ ಈ ವಿಷಯವನ್ನು ತಿಳಿಸುತ್ತಾನೆ. ಆದರೆ ಇದಕ್ಕೆ ಉತ್ತರ ಯಾರಿಂದಲೂ ಬರುವುದಿಲ್ಲ. ಅವನ ಮಂತ್ರಿಯೆ ಇದನ್ನು ಯೋಚನೆ ಮಾಡಿ ಅವಳು ಹೇಳಿರುವುದು ಹೇಲಲು ಮಾತ್ರ. ಆದರೆ ಒಂದು ತೊಟ್ಟು ಸಹ ಉಚ್ಚೆಯನ್ನು ಹೊಯ್ಯುವಂತಿಲ್ಲ ಎಂದು ರಾಜನಿಗೆ ಸಲಹೆ ಕೊಟ್ಟನು. ಮಾರನೆಯ ದಿನ ಸಭೆ ಸೇರಿತು. ಆ ನೃತ್ಯದ ಹೆಂಗಸು ಸಹ ಬಂದಳು. ಅವಳ ಮುಂದೆ ಮಂತ್ರಿ ಈ ಉತ್ತರವನ್ನು ತಿಳಿಸಿದನು. ಅದಕ್ಕೆ ಅವಳು ಹೆದರಿ ರಾಜನಿಗೆ ಮೆಚ್ಚಿಗೆ ಕೊಡದೆ ಮಂತ್ರಿಗೆ ಮೆಚ್ಚಿಗೆ ಕೊಟ್ಟು ತನ್ನ ಮನಸ್ಸನ್ನು ಅವನಿಗೆ ಒಪ್ಪಿಸುತ್ತಾಳೆ. ರಾಜ ಅವಳನ್ನು ಮದುವೆಯಾಗಲು ಹೇಳುತ್ತಾನೆ. ಆದರೆ ಅವಳು ಒಪ್ಪದೆ ಮಂತ್ರಿಯನ್ನು ಮದುವೆಯಾಗುತ್ತಾಳೆ.

ಐತಿಹ್ಯ

ದಂಡಿನ ದುರ್ಗಮ್ಮ: ಪಾರ್ಧಿಯರ ಧಾರ್ಮಿಕ ಆಚರಣೆಗಳಲ್ಲಿ ಅತಿ ಮುಖ್ಯವಾದ ಮತ್ತು ಎಲ್ಲಾ ಜಾತಿಯವರು ಬೆಡಗಿವರು ಸೇರಿ ಆಚರಣೆ ಮಾಡುವ ಜಾತ್ರೆ ಅಂದರೆ ಗದುಗಿನಿಂದ ಆರೇಳು ಕಿಮೀ ದೂರದಲ್ಲಿರುವ ರೋಣ ರಸ್ತೆಯ ನಾಗಸಮುದ್ರ ಎಂಬ ಗ್ರಾಮದ ಹತ್ತಿರದ ದಂಡಿನ ದುರ್ಗಾದೇವಿ ಜಾತ್ರೆ, ಇದು ಪ್ರತಿ ವರ್ಷ ದವನದ ಹುಣ್ಣಿಮೆ ಆದ ನಂತರ ಬರುವ ರವಿವಾರ, ಸೋಮವಾರ, ಮಂಗಳವಾರ, ಮತ್ತು ಬುಧವಾರ, ವಿಜೃಂಭಣೆಯಾಗಿ ಜರುಗುವುದು. ಇದರಲ್ಲಿ ದೇಶದ ಎಲ್ಲಾ ಭಾಗದಲ್ಲಿರುವ ಪಾರ್ಧಿ, ಹರಣಿ ಶಿಕಾರಿ, ಹಕ್ಕಿಪಿಕ್ಕಿ ಬುಡಕಟ್ಟಿನವರು ದೇವಿಯ ದರ್ಶನಕ್ಕೆ ಬಂದು ಜಾತ್ರೆಯಲ್ಲಿ ಭಾಗವಹಿಸಿ ತಮ್ಮ ಹಿತೈಷಿಗಳಿಗೆ ಮತ್ತು ಬಂಧುಬಳಗದ ಜೊತೆಗೆ ಸೇರಿ ಕಷ್ಟ ಸುಖಗಳನ್ನು ವಿಚಾರಿಸಿ ಹೋಗುವರು. ಪಾರ್ಧಿ ಬುಡಕಟ್ಟಿಗೆ ಈ ಸ್ಥಳವು ಅತಿಮುಖ್ಯವಾದ ಯಾತ್ರಾಸ್ಥಳವಾಗಿರುವುದು.

ಗದಗಿನ ಬೆಟಗೇರಿ ಸುತ್ತ ಮುತ್ತ ವಾಸವಾಗಿದ್ದ ಪಾರ್ಧಿ ಬುಡಕಟ್ಟಿನವರು ನಾಗಸಮುದ್ರದ ಸುತ್ತಮುತ್ತ ಜಿಗರಿ, ಬೇಟೆಗಾಗಿ ಅವಲಿ, ಮನ್‌ಪೂ, ಗೋವಿಂದು, ಇನ್ನೂ ಇತರರು ಬೇಟೆಗೆ ಬಲೆಗಳನ್ನು ತೆಗೆದುಕೊಂಡು ಹೋಗುತ್ತಾ, ಬರುತ್ತಾ ಇದ್ದರು. ಒಂದು ದಿವಸ ಅವಲಿ ದಾರಿ ಹಿಡಿದುಕೊಂಡು ಬೇಟೆಗೆ ಹೋಗುವ ಸಮಯದಲ್ಲಿ ಒಬ್ಬ ಅಜ್ಜೀಯ ವೇಷದಲ್ಲಿ ಶ್ರೀದಂಡಿನ ದುರ್ಗಾದೇವಿಯು ಪ್ರತ್ಯಕ್ಷಳಾಗಿ ಹೇ ಅವಲಿ ನೀನು ಈ ದುಗ್ಗಾಣಿಯನ್ನು ತೆಗೆದುಕೊ ಮುಂದೆ ನನ್ನ ಸೇವೆಯನ್ನು ಮಾಡೆಂದು ಕೇಳಿದಳು. ಆಗ ಅವಲಿ ನೀನು ಯಾರು ನಿನ್ನ ಹೆಸರೇನು ನಾನು ಏನು ಕೆಲಸ ಮಾಡಬೇಕು ಎಂದಾಗ ನಾನು ಶ್ರೀದಂಡಿನ ದುರ್ಗಾದೇವಿ ನಾನು ಎಲ್ಲಿಗೆ ಹೋಗಬೇಕಾಗಿತ್ತು ಅಲ್ಲಿಗೆ ಹೋಗಲಿಕ್ಕೆ ಅಗತ್ಯ ಇಲ್ಲ. ಈ ಸ್ಥಳ ಬಿಟ್ಟು ಹೋಗಲಿಕ್ಕೆ ಮನಸ್ಸಾಗಲಿಲ್ಲ. ಆದರಿಂದ ಇದೇ ಸ್ಥಳದಲ್ಲಿ ವಾಸವಾಗುತ್ತೇನೆ. ನನ್ನ ಪೂಜೆ ಪುರಸ್ಕಾರಗಳನ್ನು ನೆರವೇರಿಸುತ್ತಾ ನನ್ನ ಕೀರ್ತಿಯನ್ನು ಎತ್ತಿ ಹಿಡಿಯುವಂತಾಬೇಕು ಎಂದಾಗ ಅವಲಿ ತಾಯಿ ನಿನ್ನ ಹೆಸರು ದೊಡ್ಡದು ನಿನ್ನ ಪೂಜೆ ಮಾಡಲು ನನ್ನಿಂದ ಆಗುವುದಿಲ್ಲ.

ಆದರಿಂದ ನೀನು ನಿನ್ನ ಕೀರ್ತಿಯನ್ನು ಹಬ್ಬಿಸುವಂತೆ ವ್ಯಕ್ತಿಯನ್ನು ನೀನೇ ಆರಿಸ ಕೊಳ್ಳಬೇಕು ಈ ಕೆಲಸ ನನ್ನಿಂದ ಆಗುವುದಿಲ್ಲ. ನಮ್ಮ ಮನೇಯ ದೇವತೆ ಒಪ್ಪುವುದಿಲ್ಲ. ಎಂದಾಕ್ಷಣ ಅಜ್ಜಿಯ ವೇಷದಲ್ಲಿ ಬಂದ ದೇವತೆಯು ಮಾಯವಾದಳು. ಅಲ್ಲಿಂದ ಮನ್‌ಪೋ ಮತ್ತು ಗೋವಿಂದೂ ತಂದೆ ಮಕ್ಕಳು ಇಬ್ಬರು ಅದೇ ಸ್ಥಳದ ಸುತ್ತ ಮುತ್ತ ಬೇಟೆಗೆ ಬಂದಿದ್ದರು. ಅಂದಿನ ದಿನ ಯಾವುದೇ ಬೇಟೆಯು ಕಣ್ಣಿಗೆ ಕಂಡರು ಬೇಟೆಯಾಗಲಿಲ್ಲ. ಮನೆಗೆ ಹಿಂದುರಿಗಿ ಮರುದಿನ ಗೊವಿಂದು ಒಬ್ಬನೇ ಟಾಂಟ್‌ಳೋಬಲೆ ತೆಗೆದುಕೊಂಡು ನಾಗಸಮುದ್ರದ ಹತ್ತಿರದಲ್ಲಿ ಚಿಗರಿಗಳು ಕಣ್ಣಿಗೆ ಕಂಡವು ಅವುಗಳನ್ನು ಹಿಡಿಯಲೆಂದು ಚಿಗರಿಗಳು ಹೋಗುವ ಮತ್ತು ಬರುವ ಜಾಡನ್ನು ನೋಡಿ ಬಲೆಯನ್ನು ಹಾಕಿದನು. ನಂತರ ಹೊತ್ತು ಹೋದಂತೆಲ್ಲಾ ಚಿಗರಿಗಳು ಆ ಜಾಡಿಗೆ ಬರಲೆ ಇಲ್ಲ. ಏಕೆ ಈ ಜಾಡಿಗೆ ಬರಲಿಲ್ಲ ಎಂದು ಗುನುಗುತ್ತಾ ಬಲೆ ಹಾಕಿದ ಕಡೆಗೆ ಹೋದನು. ಬಲೆ ಹಾಕಿದ ಸ್ಥಳದಲ್ಲಿ ಬಲೆ ಇರಲಿಲ್ಲ. ಸುತ್ತ ಹುಡುಕಾಡಿದನು ಎಲ್ಲಿಯೂ ಬಲೆ ಕಾಣಲಿಲ್ಲ. ಆಗ ಬಲೆ ಯಾರು ತೆಗೆದುಕೊಂಡು ಹೋಗಿರಬಹುದೆಂದು ಸುತ್ತ ಕಣ್ಣಾಡಿಸಿದನು. ಎಲ್ಲೋ ದೂರದಲ್ಲಿ ಒಬ್ಬ ಅಜ್ಜಿ ತನ್ನ ಕಡೆಗೆ ಬರುವುದನ್ನು ಕಂಡನು. ಆ ಅಜ್ಜಿಯ ಹತ್ತಿರ ಹೋಗಿ ತಾಯಿ ಈ ಸ್ಥಳದಲ್ಲಿ ನಾನೊಂದು ಬಲೆಯನ್ನು ಹಾಕಿದ್ದೆ ಆ ಬಲೆ ಕಣ್ಣಿಗೆ ಬೀಳುತ್ತಿಲ್ಲ, ಮತ್ತು ಯಾರು ತೆಗೆದುಕೊಂಡಿರುವುದು ಗೊತ್ತಾಗುತ್ತಾ ಇಲ್ಲ. ಹಾಗಾದರೆ ನಿನ್ನ ಬಲೆಯನ್ನು ನಾನು ಪತ್ತೆಹಚ್ಚಿ ಕೊಡುತ್ತೇನೆ. ನನ್ನ ಮಾತನ್ನು ನೀನು ನಡೆಸಿ ಕೊಡಬೇಕು ಎಂದು ಅವರಿಗೆ ಕೇಳಿದ ವಿಷಯವನ್ನೇ ಗೋವಿಂದನಿಗೂ ವಿವರವಾಗಿ ತಿಳಿಸಿದಳು. ಆಗ ಗೋವಿಂದ ನನ್ನ ಕೈಗೆ ಆಗುವುದಿಲ್ಲ ಎಂದನು. ಆಗ ದೇವಿಯ ಕೋಪಗೊಂಡು ಗೋವಿಂದ ಹಾಕಿದ ಬಲೆಯ ಒಂದು ಭಾಗದಲ್ಲಿ ಗೋವಿಂದನಿಗೂ ಅದೃಶ್ಯ ಮಾಡಿದಳು. ಹೀಗೆ ಮೂರು ದಿನ ಕಳೆದವು. ಗೋವಿಂದನ ಹೆಂಡತಿ ತಮ್ಮ ಗುಂಪಿನ ಬೇಟೆಗಾರರಿಗೆ ಎಲ್ಲಾರಿಗೂ ನನ್ನ ಗಂಡನ ಅಡವಿಯಲ್ಲಿ ಎಲ್ಲಾದರು ಭೇಟಿಯಾಗಿದ್ದೀರಾ ಎಂದು ಕೇಳಿದಾಗ ಬೇಟೆಗಾರರು ನಮ್ಮ ಜೊತೆಗೆ ಬರಲೇ ಇಲ್ಲ ನಮಗೆ ಅಡವಿಯಲ್ಲಿ ಎಲ್ಲೂ ಭೇಟಿಯಾಗಿಲ್ಲ ಎಂದು ಹೇಳುತ್ತಿದ್ದರು. ಆಗ ಹೆಂಡತಿಯು ತನ್ನ ಗಂಡ ಹೋದ ಕಡೆಗೆ ಹುಡುಕುತ್ತ ಹೊರಟಳು. ನಾಗಸಮುದ್ರದ ಹತ್ತಿರ ಹೋಗುತ್ತಿರುವಾಗ ಒಬ್ಬ ಅಜ್ಜಿಯು ಕಣ್ಣಿಗೆ ಬಿದ್ದಳು. ಆ ಅಜ್ಜಿಯ ಹತ್ತಿರ ಹೋಗಿ ಅಜ್ಜಿ ನನ್ನ ಗಂಡ ಈ ಕಡೆಗೆ ಬೇಟೆಗೆಂದು ಬಂದಿದ್ದರು. ಮೂರುದಿನದಿಂದ ಮನೆ ಕಡೆಗೆ ಬಂದೇಯಿಲ್ಲ, ನೀವು ಎಲ್ಲಿಯಾದರೂ ಈ ಭಾಗದಲ್ಲಿ ಕಂಡಿದ್ದೀರಾ ಎಂದಾಗ ಅಜ್ಜಿಯು ನಿನ್ನ ಗಂಡ ಇಲ್ಲಿಯೇ ಇದ್ದಾನೆ ಅವನು ನಾನು ಹೇಳಿದ ಕೆಲಸಕ್ಕೆ ತಿರಸ್ಕರಿಸಿದ್ದಾನೆ. ಅದನ್ನು ನೆರವೇರಿಸಿಕೊಡುತ್ತೇನೆ ಎಂದರೆ ನಿನ್ನ ಗಂಡನನ್ನು ತೋರಿಸುತ್ತೇನೆ. ಎಂದಾಗ ತಾಯಿ ನೀನು ಯಾರು ಎಂದು ಕೇಳಿದಳು. ಅಜ್ಜಿಯು ಅದನ್ನು ಒಪ್ಪಲಿಲ್ಲ. ನಿನ್ನ ಕೈಯಲ್ಲಿ ಈ ದುಗ್ಗಾಣಿಯನ್ನು ಕೊಡುವುದಿಲ್ಲ. ನಿನ್ನ ಗಂಡನಿಗೆ ಒಪ್ಪಿಸಿದ ನಂತರ ನಿನ್ನ ಗಂಡನ ಕೈಗೆ ಈ ದುಗ್ಗಾಣಿಯನ್ನು ಕೊಡುತ್ತೇನೆಂದು ಗಂಡ ಹಾಕಿದ ಬಲೆಯ ಕಡೆಗೆ ಅಜ್ಜಿಯು ಕರೆದುಕೊಂಡು ಹೊರಟಳು. ಬಲೆಯ ಪಕ್ಕದಲ್ಲಿ ಕೂಗು ನಿನ್ನ ಗಂಡ ಬರುತ್ತಾನೆ ಎಂದಾಗ ಹೆಂಡತಿಯು ಗಂಡನನ್ನು ಕೂಗಿದಳು ಕೂಗಿದಾಗ ಬಲೆಯ ಪಕ್ಕದಲ್ಲಿ ಮಲಗಿದವನಂತೆ ಎದ್ದು ಬಂದು ಏನೆಂದು ಕೇಳಿದನು. ಆಗ ನಡೆದ ವಿಷಯವನ್ನೆಲ್ಲಾ ಗಂಡನ ಮುಂದೆ

ತಿಳಿಸಿದಳು. ಆಗ ಗಂಡ ತಾಯಿ ನಿನ್ನ ಸೇವೆ ಮಾಡುತ್ತೇನೆ ನಮಗೆ ಏನು ದಾರಿ ತೋರಿಸುತ್ತೀಯಾ ಅದನ್ನು ಪಾಲಿಸಿಕೊಂಡು ಹೋಗುತ್ತೇವೆ ಎಂದು ತಾಯಿಯ ಸನ್ನಿದಾನದಲ್ಲಿ ಒಪ್ಪಿಕೊಂಡಾಗ ತಾಯಿಯು ನಿಮ್ಮ ಮನೆತನ ಇರುವವರೆಗೆ ನನ್ನ ಸೇವೆಯನ್ನೇ ಮಾಡುತ್ತಾ ಇರಿ, ನಿಮ್ಮ ಮನೆತನದವರಿಗೆ ಯಾವುದೇ ಕಷ್ಟ ಬಾರದಂತೆ ನಾನು ನೋಡಿ ಕೊಳ್ಳುತ್ತೇನೆ. ಮತ್ತು ನಿಮ್ಮ ಜನಾಂಗದವರು ನನ್ನ ಹತ್ತಿರ ಬಂದು ಹೋಗುವವರೆಗೆ ಅವರ ಕಷ್ಟ ಪರಿಹರಿಸುತ್ತೇನೆಂದು ಗೋವಿಂದನ ಕೈಗೆ ದುಗ್ಗಾಣಿಯನ್ನು ಕೊಟ್ಟು ತಾನು ಸ್ಥಾಪನೆಯಾಗುವ ಸ್ಥಳವನ್ನು ತೋರಿಸಿ ಮಾಯವಾದಳು.

ಒಗಟುಗಳು

* ಮ್ಹೀ ಜೂವ್ವನಿ ತಡಕೋ ಜೂವ್ವನಿ, ವಾಯ್‌ರೋ, ಜೂವ್ವನಿ,
ಕದ್ದೇಯ್ ಬಾಕ್ಕೂಂ ಪಾಡಿನ್ ಪಡ್ಯೂರಹ (ಕಾಳವಟ್‌ನಿ ಜಗ)
[ಮಳೆ ನೋಡಲ್ಲಾ, ಬಿಸಿಲು ನೋಡಲ್ಲಾ, ಗಾಳಿನೋಡಲ್ಲಾ
ಯಾವಾಗಲೂ ಬಾಯಿ ತೆರೆದು ಬಿದ್ದಿರುತ್ತದೆ (ಎರೆ ಭೂಮಿ)]

* ಜಾವಾನಿ ವಖಥ್, ಫೂಲ್‌ನು ಬಾಗ್

* ಆವಾನಿ ವಖಥ್, ಮಿಥೋ ಬಾಗ್ (ಖ್ಹುತ್ತರ್‌ನು ಛೆತ್ತರ್)
[ಹೋಗುವಾಗ ಹೂವಿನ ತೋಟ,
ಬರುವಾಗ ಬರೀ ತೋಟ (ಹತ್ತಿ ಹೊಲ)]

* ವೈದಾನ್‌ಮೊ ಟೋಪಿ ಲಗಾಡಿ ಬೇಟೊ
[ವೈದಾನದಲ್ಲಿ ಯಾರೊ ಟೋಪಿ ಹಾಕಿ ಕುಳಿತಿದ್ದಾರೆ]

ಭಾಷೆ

ಪಾರ್ಧಿಯರ ಭಾಷೆ 'ವಾಗ್ರಿ' ಆಗಿದೆ. ಇದನ್ನು ಅವರು ವಾಗರಿಯೋ ಎಂದು ಹೇಳುತ್ತಾರೆ. ಗಿಮ್ಮ ಭಾಷೆಯ ಇತಿಹಾಸವನ್ನಾಗಲಿ ಅಥವಾ ಅದು ಎಷ್ಟು ವರ್ಷಗಳಿಂದ ಚಾಲ್ತಿಯಲ್ಲಿದೆ ಎಂಬುದರ ಬಗ್ಗೆಯಾಗಲಿ ಯಾವೊಬ್ಬ ಪಾರ್ಧಿಯರ ಬಳಿಯು ಯಾವುದೇ ಮಾಹಿತಿಯಾಗಲಿ ಅಥವಾ ದಾಖಲೆಯಾಗಲಿ ಇಲ್ಲ. ಈ ವಾಗ್ರಿ ಭಾಷೆಯು ಅನೇಕ ಪ್ರಾದೇಶಿಕ ಭಾಷೆಗಳ ಮಿಶ್ರಣವಾಗಿದೆ. ಇವರು ತಮಿಳು, ತೆಲಗು, ಗುಜರಾತಿ, ಮರಾಠಿ, ಹಿಂದಿ, ಉರ್ದು, ಈ ರೀತಿಯಾಗಿ ಅನೇಕ ಭಾಷೆಗಳನ್ನು ಮಿಶ್ರಮಾಡಿ ಒಂದು ರೀತಿಯ ಮಿಶ್ರಣ ಭಾಷೆಯಂತೆ ಮಾತನಾಡುತ್ತಾರೆ. ಗುಜರಾತಿ ಭಾಷೆಯ ಪ್ರಭಾವ ಇವರ ಭಾಷೆಯ ಮೇಲೆ ಹೆಚ್ಚಿರುವುದನ್ನು ಕಾಣಬಹುದಾಗಿದೆ.

ವಾಗ್ರಿ ಭಾಷೆಯ ಕೆಲವು ವಾಕ್ಯ ರೂಪಗಳನ್ನು ಇಲ್ಲಿ ನೀಡಲಾಗಿದೆ.

೧. ಪಜ್ಜೆ ಪಡುಸ್ –ನಾನು ನಿಮಗೆ ಕೈಮುಗಿಯುತ್ತೇನೆ ಅಥವಾ ನಮಸ್ಕಾರ ಎಂದರ್ಥ.

೨. ತಾರು ನಾಂ ಶ್ಯಂ- ನಿನ್ನ ಹೆಸರೇನು?

೩. ಧಾನ್ ಖಾದ್ಯಂ? - ಊಟ ಮಾಡಿದ್ದೀರಾ?

೪. ರೊಟ್ಟು ಖಾದ್ಯಂ ಯಾ ಭೊಟ್ಟು ಖಾದ್ಯಂ?-ರೋಟಿ ಊಟ ಮಾಡಿದ್ದೀರಾ?.

೫. ಮಾ ಆವೇಲಿ ಟೈಮು ತು ಚಹಾಜೋತೋ? -ನಾನು ನಿಮ್ಮಲ್ಲಿಗೆ ಬಂದಾಗ ನೀವು ಎಲ್ಲಿಗೆ ಹೋಗಿದ್ದಿರಿ?.

ಕನ್ನಡ	ವಾಗ್ರಿ	ಕನ್ನಡ	ವಾಗ್ರಿ
ಮೀಸೆ	ಮುಛ್ಛೀಂಯೀ	ಗಂಧ	ಗಂಧ್
ಕೇಶ ಗಡ್ಡ	ಡಾಢೋಂ	ಚಿರಾತಾ ಚಿರತೆ	ಬ್‌ಕಾಳೂವಾಗ್
ಗಂಟಲು	ಡೋಡ್‌ಓ	ಜಾಪತ್ರೆ	ಜಾಫಳ್
ಕೆನ್ನೆಗಳು	ಗಾಲ್	ಜೀರಿಗೆ	ಜೀರು
ಮೂತ್ರಕೋಶ	ಮೂತ್ರವಾನುನಳ್	ತುಳಸಿ	ತರ್‌ಸಿಂಳೂ
ತೊಡೆ	ಖ್ಹಾಥಳ್	ಕೊತ್ತಂಬರಿ	ಮಖ್ಹಾಲನು
ಮೊಲೆ ತೊಟ್ಟು	ಬಿಂಟ್‌ಮೂಂ	ಶೀಗೆಕಾಯಿ	ಷೀಂಚೇಕಾಯ್
ಮುಖ	ಬಾಕ್ಕೂಂ	ಅಡಿಕೆ	ಖ್ಹೂಪಾರಿ
ಎದೆ	ಛಾತ್ತೀ	ಬಳಿಗಾರ	ಸುಡಿಂಯೀಹಾರೂ
ಮೊಲೆ	ಬೂಬ್ಬೋ	ಒಣಶುಂಠಿ	ಖ್ಹುಕ್ಕೀಖ್ಹುಂಠಿ
ಪಿತ್ತಕೋಶ	ಪಿಂತೋಂ	ಕಿನ್ನರಿಕಾಯಿ	ಘೋಲ್ಲೂ
ಆಲುಗಡ್ಡೆ	ಲೋಢ್	ಬಾಳೆಹಣ್ಣು	ಚೇಳೀಂವ್
ಅಂಗ	ಡೀಲ್	ಹುಣಸೆಹಣ್ಣು	ಆಂಬ್ಲಿ
ದಾಡಿ	ಡಾಢ್ಹೂ	ಹಲಸಿನಹಣ್ಣು	ಓರ್ಝುರ್
ಹಲ್ಲು	ದಾಂತ್	ಕಮಲ	ಹರಿಕವಳನು
ತಲೆಸುತ್ತುವುದು	ಮುಂಡ್‌ಘರ್‌ವಾನು	ಗೋಡಂಬಿ	ಬಾದಮ್
ನೆಗಡಿ	ಸಿಂಭರ್ಡು	ಮುನಿ	ಬಳ್ಳಿ
ಚಳಿಜ್ವರ	ಥಾಢ್‌ನು ರೋಗ	ನಿಂಬೆಹಣ್ಣು	ಲಿಂಬು
ಚಳಿ	ಥಾಢ್	ಕೆಂಪುಮೂಲಂಗಿ	ಗಾಜ್ಜರ್
ಹೊಟ್ಟೆತೊಳಸುವುದು	ಪೇಟ್‌ಧೋವ್‌ಡಾನು	ಸೇವಂತಿಗೆ	ಸಾವಂತೀನು
ಆರೋಗ್ಯ	ಆರಾಮ್ ಆಚ್ಛೋ	ಮುಟ್ಟಿದರೆ	ಖ್ಹರ್‌ಮಾತಿ
ಉಗುಳು	ಥೋಂಚ್	ಗುಲಾಬಿ	ಗುಲಾಬಿನು

ಉಬ್ಬಸ	ದಮ್‌ವಾವಾನು	ಬೀಜ	ಬೀಜ್
ನಿದ್ರಾರೋಗ	ನಿಂದರ್‌ನುರೋಗ್	ದತ್ತೂರಿ	ದತ್ತೋರೋ
ನಿದ್ರೆ	ನಿಂದರ್	ಪೇರುಹಣ್ಣು	ಜಾಂಬ್
ಕಲ್ಲು	ಭಾರ್ಥೋ	ನಾಗಪುಷ್ಪ	ಖ್ಞಾಪ್‌ನು ಫೂಲ್
ಬೆವರು	ಪರ್‌ವೇಖ್ಞೋ	ತೆಂಗಿನಕಾಯಿ	ನಾರೇಳ್
ಹುಚ್ಚು	ವಾಂಡೋ	ಕಿತ್ತಳೆಹಣ್ಣು	ನಾರಂಜಿ
ಮತಿಭ್ರಮಣೆ	ವಾಂಡಿ ಖ್ಯಾನ್	ನಿಂಬೇಹಣ್ಣು	ಲಿಂಬು
ಕೀವು	ಪರ್ರು	ಪರಂಗಿಹಣ್ಣು	ಬೂಫ್ಡಾಯಿ
ಕಡಾಯಿ	ಕಢಾಯ್	ನೃತ್ಯಗಾರ	ನಾಚ್‌ನಾರೋ
ಸೌಟು	ಪಳೋ	ನಾಟಕಕಾರ	ನಾಟಕ್‌ಹಾರೋ
ಹಂದಿ	ಖ್ಞರ್‌ಡು	ಮಾಣಿಕ್ಯ	ಹಾವಳ
ಹೆಣ್ಣುಹಂದಿ	ಖ್ಞರ್‌ಡಿ	ಮಾಲೆ	ಹಾರ್‌ಡೋ
ಚಿಗರಿ	ಆಖರಿ	ಕಿರೀಟ	ಕಿರೀಟ್
ಕಾಲುಂಗರ	ಜೋಡವಿ	ಆನೆ	ಅಥೀ
ಗಂಟೆ	ಘಂಟೋ	ಮದ್ದಲೆ	ಮದ್ದಲೀಂವ್
ಮೊಸಳೆ	ಖ್ಞತರ್	ತಮಟೆ	ತಪ್ಪಡಿ
ತಬಲ	ಡುಮ್‌ಕು	ಹೆಬ್ಬಾವು	ಚಿತರಿ
ಕಹಳೆ	ಭಾರಿಫೋಂಜಿ	ನಾಗರಹಾವು	ಖ್ಞಾದುಖ್ಞಾಪ್
ಕೊಳಲು	ಪಿಖ್‌ವೋ	ಎರೆಹುಳು	ಚೆಂಚವೋ
ಏಡಿ	ಕಾಂಕ್‌ಡೋ	ಕಾಳು, ಧಾನ್ಯ	ಕಣಕ

ಚಪ್ಪರಬಂದರ ಭಾಷೆ

ಚಪ್ಪರಬಂದ ಸಮುದಾಯವು ಒಂದು ವಿಶಿಷ್ಟ ಸಮುದಾಯವಾಗಿದೆ. ಹಿಂದೂ ಆಚರಣೆಗಳೊಂದಿಗೆ ಇಸ್ಲಾಂ ಧರ್ಮವನ್ನು ಪರಿಪಾಲಿಸುವ ಇವರು ತಮ್ಮದೇ ಆದ ವಿಶಿಷ್ಟ ಭಾಷೆಯನ್ನು ಮಾತನಾಡುತ್ತಾರೆ. ಮೇಲ್ನೋಟಕ್ಕೆ ಇವರು ಮಾತನಾಡುವ ಭಾಷೆ ಉರ್ದುವೆನಿಸಿದರೂ, ಉರ್ದುವಿಗಿಂತ ತುಂಬಾ ಭಿನ್ನವಾದ ಭಾಷೆಯನ್ನು ಮೈಗೂಡಿಸಿಕೊಂಡಿದ್ದಾರೆ. ಆದರೆ ಮಾತನಾಡುವ ಶೈಲಿ ಮಾತ್ರ ಉರ್ದು ಭಾಷೆಯನ್ನು ಹೋಲುತ್ತದೆ. ಇವರು ಮದುವೆ ಮುಂತಾದ ಶುಭ ಕಾರ್ಯಗಳಲ್ಲಿ ತಮ್ಮ ಭಾಷೆಯಲ್ಲಿ ಜನಪದ ಹಾಡುಗಳನ್ನು ಹಾಡುತ್ತಾರೆ. ಬಹುತೇಕ ಆ ಹಾಡಿನ ಧಾಟಿ, ಮಟ್ಟು, ಶೈಲಿಗಳೆಲ್ಲಾ ಕನ್ನಡದ ಜನಪದ ಶೈಲಿಯನ್ನು ಅಳವಡಿಸಿಕೊಂಡಂತೆ ಕಂಡುಬರುತ್ತದೆ.

ಕೆ.ಎಸ್. ಸಿಂಗ್‌ರವರು ಚಪ್ಪರ ಬಂಧರು ಮಾತನಾಡುವ ಭಾಷೆಯ ಕುರಿತು ಹೀಗೆ ತಿಳಿಸುತ್ತಾರೆ. "They Speak a dialect of the marathi Language amang them selves and urdu and Kannada The Kannada and perso-Aravic Scripts are used, gt has been reported that They have a seaet language of their own for Communication" (Sing K.S. : 637)

ಇವರು ಹಿಂದೂಸ್ತಾನಿ ಭಾಷೆಯನ್ನು ಮಾತನಾಡುತ್ತಾರೆ. ಆದರೆ ತಲಾ (ನೀನು) ಎಂಬುದಕ್ಕೆ ತೆ ಎಂದೂ, ತೇರಾ (ನಿನ್ನದು) ಎಂಬುದಕ್ಕೆ ತೋರಾ, ಮತ್ತು ಮೇರಾ (ನನ್ನ) ಎಂಬುದಕ್ಕೆ 'ಮೋರಾ' ಎಂದು ಮಾತನಾಡುತ್ತಾರೆ. ಇವರಿಗೆ ಕನ್ನಡ ಮಾತು ಸಹ ಬರುತ್ತದೆ. ಮತ್ತು ಉತ್ತರಕ್ಕೆ ಹೋದಾಗ ಬೇರೆಯವರಿಗೆ ತಿಳಿಯದ ಹಾಗೆ ಮಾತನಾಡಬೇಕಾದರೆ ಕನ್ನಡ ಮಾತನಿಂದ ಮಾತಾಡುವರು (ಕ್ರಿಮಿನಲ್ಸ್ ಟ್ರೈಬ್ಸ್ ರೀಪೋರ್ಟ್ ಇನ್ ಬಾಂಬೆ ಪ್ರೆಸಿಡೆನ್ಸಿ ಪುಟ. ೩೫).

ಕ್ಷೇತ್ರಕಾರ್ಯದಲ್ಲಿ ಗಮನಿಸಿದಂತೆ ಇವರು ಹೊರಗೆ ವ್ಯವಹರಿಸಲು ಕನ್ನಡ ಮತ್ತು ಹಿಂದಿ ಭಾಷೆಗಳನ್ನು ಬಳಸುತ್ತಾರೆ. ಇವರಲ್ಲಿ ಕೆಲವರು ಮಹಾರಾಷ್ಟ್ರದ ಪೂನ, ಮತ್ತು ಮುಂಬೈ, ಅಹ್ಮದಾಬಾದ್, ಸೊಲ್ಲಾಪುರ ಮುಂತಾದ ಕಡೆಗೆ ಹೊಟ್ಟೆ ಪಾಡಿಗೆ ದುಡಿಯಲು ಹೋದ ಮತ್ತು ಅಲ್ಲಿಯ ಸೆಟ್ಲಮೆಂಟ್‌ಗಳಲ್ಲಿ ನೆಲೆಸಿದ ಚಪ್ಪರಬಂದ ಜನರೊಂದಿಗೆ ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಂಡಿದ್ದಾರೆ. ಮಹಾರಾಷ್ಟ್ರದಿಂದ ಮದುವೆಯಾಗಿ ಕರ್ನಾಟಕಕ್ಕೆ ಬಂದ ಹುಡುಗಿಗೆ ಚಪ್ಪರಬಂದ ಭಾಷೆಯೊಂದಿಗೆ, ಮರಾಠಿ ಮತ್ತು ಕನ್ನಡ ಭಾಷೆಗಳು ಬರುತ್ತವೆ. ಕೆಲವು ಜನ ಪುರುಷರು ವ್ಯವಹಾರಿಕವಾಗಿ ಮರಾಠಿ ಸಹ ಮಾತನಾಡುವುದು ಕಂಡುಬರುತ್ತದೆ. ಕರ್ನಾಟಕದ ಚಪ್ಪರಬಂದರು ವ್ಯವಹಾರಿಕವಾಗಿ ಕನ್ನಡ ಮಾತನಾಡಿದರೂ ತಮ್ಮ ತಮ್ಮೊಳಗೆ ಮಾತನಾಡಲು ಚಪ್ಪರಬಂದ ಭಾಷೆಯನ್ನೇ ಬಳಸುತ್ತಾರೆ. ಇಂದಿಗೂ ಪ್ರತಿಯೊಂದು ಸೆಟ್ಲಮೆಂಟ್‌ನಲ್ಲಿಯೂ ಈ ಭಾಷೆ ಜೀವಂತವಾಗಿರುವುದು ಕಂಡುಬರುತ್ತದೆ. ಜಾಗತೀಕರಣದ ಪ್ರಭಾವದಿಂದಾಗಿ ಕೆಲವು ದಶಕಗಳಲ್ಲಿ ಜಾತಿಗಳು ನಾಮಾವಶೇಷವಾಗಬಹುದು. ಆ ಜಾತಿಗಳೊಂದಿಗೆ ಜೀವಂತವಾಗಿರುವ ಭಾಷೆಗಳೂ ಸಹ ನಾಮವಾಶೇಷಗೊಳ್ಳುವ ಸಾಧ್ಯತೆಗಳೇ ಹೆಚ್ಚಾಗಿವೆ. ಮಧ್ಯ ಯುಗೀನ ಭಾರತದ ರಾಜಕೀಯ ಸಂದರ್ಭದಲ್ಲಿ ಸೃಷ್ಟಿಗೊಂಡ ಚಪ್ಪರಬಂದ ಸಮುದಾಯ ತಮ್ಮ ಪಂಗಡಗಳೊಂದಿಗೆ ಸಂಪರ್ಕಿಸಲು ಸೃಷ್ಟಿಸಿಕೊಂಡ ಭಾಷೆಯು ಇದಾಗಿದೆ.

ಯಾವುದೋ ಒಂದು ಕಾಲಘಟ್ಟದಲ್ಲಿ ರಾಜಸ್ತಾನದಿಂದ ದಕ್ಷಿಣ ಭಾರತಕ್ಕೆ ವಲಸೆ ಬಂದ ಈ ಸಮುದಾಯ ಮುಸ್ಲಿಂ ಅರಸರ ಆಶ್ರಯಕ್ಕೆ ಒಳಗಾಯಿತು. ತರುವಾಯ ಯಾವುದೋ ಒಂದು ಕಾರಣಕ್ಕೆ ಇಸ್ಲಾಂ ಮತವನ್ನು ಅನುಸರಿಸಬೇಕಾಯಿತು.

ಹೀಗೆ ರೂಪಗೊಂಡ ಒಂದು ಸಮುದಾಯವು ತನ್ನ ಮೂಲ ಭಾಷೆಯೊಂದಿಗೆ ಉರ್ದು, ಮತ್ತು ಇತರ ಸಂಪರ್ಕ ಭಾಷೆಗಳನ್ನು ಬೆರೆಸಿ ಹೊಸ ಭಾಷೆಯೊಂದನ್ನು ಸೃಷ್ಟಿಸಿಕೊಂಡಿತು. ಈ ಭಾಷೆ ಆರ್ಯ ಭಾಷಾ ವರ್ಗಕ್ಕೆ ಸೇರಿದ ಭಾಷೆಯಾಗಿದೆ. ಚಪ್ಪರಬಂದ ಭಾಷೆಗೆ ಲಿಪಿ ಇರುವುದಿಲ್ಲ. ಕನ್ನಡ ಮತ್ತು ಅರೇಬಿಕ್ ಭಾಷೆಯನ್ನು ಲಿಪಿಯಾಗಿ ಬಳಸುತ್ತಾರೆ. ಚಪ್ಪರಬಂದರು ತಮ್ಮ ಭಾಷೆಯಲ್ಲಿಯೇ ಗುಪ್ತ

ಭಾಷೆಯೊಂದನ್ನು ಬಳಸುತ್ತಿದ್ದು ಅದನ್ನು ಮರಗು ಭಾಷೆ ಎಂದು ಹೇಳುತ್ತಾರೆ. ಆ ಭಾಷೆಗೆ ಸಂಬಂಧಿಸಿದ ಕೆಲವು ಪದಗಳನ್ನು ಕನ್ನಡ ಅರ್ಥದೊಂದಿಗೆ ಇಲ್ಲಿ ಕೊಡಲಾಗಿದೆ.

ಕನ್ನಡ	ಚಪ್ಪರ ಬಂಧ್ ಭಾಷೆ
ತಂಡದ ನಾಯಕ	- ಖಾಗಾ, ಖಾಗಡಾ, ಬೈಟನಾರಾ, ಬೈಟನೇ ವಾಲಾ
ಖೋಟಾ ನಾಣ್ಯಗಳನ್ನು ಚಲಾವಣೆ ಮಾಡುವವನು	- ಭೋಂದರ
ಹುಡುಗ	- ಲಂಡವಾ (ನಂದವಾ ಗುಪ್ತಭಾಷೆ)
ತಂಡದೊಂದಿಗೆ ಇರುವ ಹುಡುಗ	- ಹಂಡಿವಾಲ, ಹಾಂಡಿವಾಲ, (ಹಂಥೀಲಾವಾಲ ಗುಪ್ತ ಬಾಷೆ)
ಹುಡುಗಿ	- ಲೋಂಡಿಯಾ
ಸಿಪಾಯಿ	- ಕುತ್ತಾ ಖಪರಾಲಾ
ಮಾಂಸ	- ರಯಂಕ (ಹೇರಾ - ಗುಪ್ತಾ ಭಾಷೆ)
ಅಚು	- ಖಾಮಾ, ಪಾಟ,
ತಂಡ	- ಮಂಡಳ, (ಘೋಟೋರಿ - ಗುಪ್ತ ಭಾಷೆ)
ಖೋಟಾ ಹಣ	- ಆಗು
ಸರಾಯಿ	- ಕರ್ಚ
ಸಾಲ ನೀಡುವವನು	- ಗುಟಾರಾ
ಚಪ್ಪರ ಬಂಧ್	- ಭಾತೂ
ಪರಕೀಯ	- ನುಮತಾ (ಕಜವಾ - ಗುಪ್ತಭಾಷೆ)
ಸೀಸ	- ಸೀಸ, (ರಾಂಗ - ಗುಪ್ತಭಾಷೆ)
ತವರ	- ಕಾಯಿನ,
ಬಂಗಾರ	- ದುಮಡ, (ಬೋನಾ - ಗುಪ್ತಭಾಷೆ)
ಅಮಲದಾರ	- ಚಿಬಡಾ
ಹೆಂಗಸು	- ತಥಾನಿ
ಗುಪ್ತಭಾಷೆ	- ರಶೀ
ಮಾದುವೇಷ	- ಬೈಗೀ
ಹಣ	- ಥೈರಿ
ಸುಳ್ಳುನಾಣ್ಯ ಸೃಷ್ಟಿಸು	- ಖಾಮಾ ಭುರಲೋ
ಚಿಲ್ಲರೆ ಸ್ಥಾನ	- ಥೈರ,

ಸಂಕೇತ ಸ್ಥಾನ	-ನೈರ
ಬಚ್ಚಿಡು	-ನಿಮಾಲೋ, (ಮಕಾದೆವ - ಗುಪ್ತಭಾಷೆ)
ಪೋಲೀಸರ ಕೈಯಲ್ಲಿ ಸಿಗಲಿಲ್ಲ	-ತೋವಾಗಯಾ
ಓದು	-ತಬಜೋ
ಜೊತೆಗಾರರು ಬರುತ್ತಾರೆ	- ಜೋಡಿ ಆವರೀ ಹೈ
ಅವನನ್ನು ಹಿಡಿದರು	-ಧರಲೀ ಸಯಿ
ಚಮಚೆ (ಸೌಟು)	-ನರೋಟಿ
ರೊಟಿ	- ಟಿಪಿ
ಏನೂ ಹೇಳಬೇಡ	- ಕೋನಸಾ ಬೇ ಬೋಲೆಮತ
ಗುಟ್ಟನ್ನು ಹೊರಹಾಕಬೇಡ	- ಜಿನೀ ಭೋಲೇ
ಮನೆ	- ಡೊಂಕ
ದಾರಿ	- ಕಿಂಡ
ದಾರಿಯ ಮೇಲೆ ಮಾಡಿದ ಗುರುತು	-ಪಾನ
ಹಳ್ಳಿ	-ನನ
ಪೋಲೀಸ್‌ಠಾಣೆ	-ನಾವಡಿ
ಅಚ್ಚಿಗೆ ಬಳಸುವ ಮಣ್ಣು	- ಚಿಮಟಿ
ಹಿಂಡ	- ಕುಲಕುಲೀ
ಜಾಗ್ರತೆ	- ಹುಸಾರೋ
ಇರಬೇಕು	- ರಹೋ
ಎಲ್ಲರೂ	- ತುಮರೀ
ಖೋಭಾಹಣ	– ಆಗು.
ಸರಾಯಿ	– ಕರ್ಚ
ಸಾಲ ನೀಡುವವನು	– ಗುಟಾದಾ
ಚಪ್ಪರಬಂದ	– ಭಾತೂ
ಪರಕೀಯ	– ನುಮತಾ(ಕಜವಾ–ಗುಪ್ತಭಾಷೆ)
ಸೀಸ	– ಸೀಸ,(ರಾಂಗ–ಗುಪ್ತಭಾಷೆ)
ತವರ	– ಕಾಯಿನ.
ಬಂಗಾರ	– ದುಮಡ.(ಬೋನಾ–ಗುಪ್ತ ಭಾಷೆ.
ಅಮಲದಾರ	– ಚಿಬಡಾ

ಹೆಂಗಸು	– ತಥಾನಿ
ಗುಪ್ತಭಾಷೆ	– ರಶೀ
ಮಾರುವೇಷ	– ಬೈಗೀ
ಹಣ	– ಥೈರಿ
ಸುಳ್ಳು ನಾಣ್ಯ ಸೃಷ್ಟಿಸುವವನು	– ಖಾಮಾ ಭುರತೋ
ಚಿಲ್ಲರೆ ಹಣ	– ಥೈರಾ
ಸಂಕೇತ ಸ್ಥಾನ	– ನೈರ.
ಬಚ್ಚಿಡು	– ಗಿಮಾಲೋ,(ನುಕಾದೇವ–ಗುಪ್ತ ಭಾಷೆ)
ಪೋಲೀಸರ ಕೈಯಲ್ಲಿ ಸಿಗಲಿಲ್ಲ	– ತೋವಾಗಯೂ
ಓದು	– ತಬಜೋ,
ಜೊತೆಗಾರರು ಬರುತ್ತಾರೆ	– ಜೋಡಿ ಆದರೇ ಹೈ
ಅವನನ್ನು ಹಿಡಿದರು	– ಧರಲೀಸಯಿ.
ಚಮಚೆ,(ಸೌಟ)	– ನರೋಟಿ
ರೊಟ್ಟಿ	– ಟಿಪಿ,
ಏನೂ ಹೇಳಬೇಡ	– ಕೋನಸಾ ಬೇಬೋಲೆಮತ,
ಗುಟ್ಟನ್ನು ಹೊರಹಾಕಬೇಕು	– ಜನೀಭೋತೀ
ಮನೆ	– ಡೊಂಕ.
ದಾರಿ	– ರೆಂಡ
ದಾರಿಯ ಮೇಲೆ ಮಾಡಿದ ಗುರುತು	– ಪಾನ
ಹಳ್ಳಿ	– ನನ
ಪೋಲೀಸ್ ಠಾಣೆ	– ನಾವಡಿ
ಅಚ್ಚಿಗೆ ಬಳಸುವ ಮಣ್ಣು	– ಚಿಮಟಿ
ಹೆಂಡ	– ಕುಲಕುಲೀ
ಜಾಗೃತಿ	– ಹುಸಾರೂ
ಇರಬೇಕು	– ಹೋ
ಎಲ್ಲರೂ	– ತುಮರೀ

ಕಂಜರಭಾಟ

ಕಂಜರಭಾಟ ಸಮುದಾಯದಲ್ಲಿ ಜನಪದ ಸಾಹಿತ್ಯ ವಿಪುಲವಾಗಿದೆ. ಹಾಡು ಹಾಡುವಾಗ ಮೃದುಂಗ, ತಬಲಾ, ಡೋಲಕ, ತಾಳ ಮುಂತಾದ ವಾದ್ಯಗಳನ್ನು ಉಪಯೋಗಿಸುತ್ತಾರೆ.

ಭಾಷೆ : ಕಂಜರಭಾಟ ಸಮುದಾಯದ ಜನ ಕಂಜರಭಾಟ ಭಾಷೆಯನ್ನು ಇಂದಿಗೂ ಜೀವಂತವಾಗಿರಿಸಿ ಕೊಂಡಿದ್ದಾರೆ. ಇವರು ಮಾತನಾಡುವ ಶೈಲಿ, ಶಬ್ದ ಇವುಗಳ ಬಳಕೆಯಿಂದ ಇದು ಕಂಜರಭಾಟ ಭಾಷೆ ಎಂದು ಗುರುತಿಸಲು ಸಾಧ್ಯವಾಗುತ್ತದೆ. ಕಂಜರಭಾಟರ ಭಾಷೆಗೆ ಕರ್ನಾಟಕ, ಮಹಾರಾಷ್ಟ್ರದಲ್ಲಿ ಕಂಜರಭಾಟ ಭಾಷೆ ಎಂದು ಕರೆದರೆ. ಗುಜರಾತದಲ್ಲಿ ಧಾರಾಭಾಷೆ, ರಾಜಸ್ತಾನ ಹಾಗೂ ಉತ್ತರ ಭಾರತದ ಇನ್ನಿತರ ರಾಜ್ಯಗಳಲ್ಲಿ ಸಾಂಸಿ ಬೋಲ ಭಾಷೆ ಎಂದು ಕರೆಯುತ್ತಾರೆ. ಇದು ಇಂಡೊ ಆರ್ಯನ್ ಭಾಷಾ ಗುಂಪಿಗೆ ಸೇರುವ ಭಾಷೆಯಾಗಿದೆ. ಈ ಭಾಷೆಗೆ ಲಿಪಿ ಇಲ್ಲ ಹಾಗೂ ತನ್ನದೇ ಆದ ಸ್ವತಂತ್ರ ಇತಿಹಾಸವೂ ಇಲ್ಲ. ಆಯಾ ರಾಜ್ಯಗಳ ಭಾಷಾ ಪ್ರಭಾವಕ್ಕೆ ಒಳಗಾಗಿ ಇದೊಂದು ಮಿಶ್ರಭಾಷೆಯಾಗಿ ರೂಪಾಂತರಗೊಂಡಿದೆ. ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ವಲಸೆ ಬಂದ ಈ ಜನರ ಮೇಲೆ ಉತ್ತರ ಭಾರತದ ಭಾಷೆಗಳ ಪ್ರಭಾವ ಹೆಚ್ಚು ಬಿದ್ದಿದೆ. ಈ ಭಾಷೆಯಲ್ಲಿ ಹಿಂದಿ ಭಾಷೆಯ ಬಳಕೆ ಹೆಚ್ಚಿನ ಪ್ರಮಾಣ ಕಂಡುಬರುತ್ತದೆ. ಶತಶತಮಾನಗಳಿಂದ ಮೌಖಿಕ ರೂಪದಲ್ಲಿಯೇ ಈ ಭಾಷೆ ಉಳಿದಿದೆ. ಆಯಾ ಪ್ರಾಂತಿಯ ಭಾಷೆಗಳ ಲಿಪಿಯಲ್ಲಿಯೇ ಅವರ ಸಾಹಿತ್ಯ ನಿರ್ಮಾಣವಾಗಿದೆ. ಅನ್ಯ ಭಾಷೆಗಳ ಪ್ರಭಾವಕ್ಕೆ ಒಳಗಾಗಿದ್ದರೂ ತನ್ನದೇ ಆದ ವಿಶಿಷ್ಟ ಶಬ್ದ ಸಂಪತ್ತನ್ನು ಉಳಿಸಿಕೊಂಡಿದೆ.

ಈ ಭಾಷೆಯು ಆರ್ಯ ಪರಿವಾರ ಹಿಂದಿ ಭಾಷೆಯ ಉಪಭಾಷೆಗಳಾದ ಮಾರವಾಡಿ ರಾಜಸ್ತಾನಿ ಹಾಗೂ ಮಧ್ಯಪ್ರದೇಶದ ಮಾಳವಿ ಭಾಷೆಗಳೊಂದಿಗೆ ಹೆಚ್ಚಾಗಿ ಹೋಲುತ್ತದೆ. ಪ್ರತಿಯೊಂದು ಸಮುದಾಯದಲ್ಲಿ ಭಾಷೆ ತನ್ನ ಸ್ಥಾನಮಾನವನ್ನು ಕಾಯ್ದುಕೊಂಡಿದೆ.

ಇಲ್ಲಿ ಕನ್ನಡದ ಅರ್ಥದೊಂದಿಗೆ ಕಂಜರಭಾಟ ಭಾಷೆಯ ಕೆಲವು ಪದಗಳನ್ನು ಅದರ ಗುಪ್ತ ಭಾಷೆಯೊಂದಿಗೆ ಕೊಡಲಾಗಿದೆ

ಕನ್ನಡಭಾಷೆ	ಕಂಜರಭಾಟ ಭಾಷೆ	ಗುಪ್ತಭಾಷೆ
ಹುಡುಗ	ಛೋರಾ	ಚುಬಕಾ
ಹುಡುಗಿ	ಛೋರಿ	ಚುಬಕಿ
ಪೋಲಿಸ	ಪೋಲಿಸ್	ಚಿವಡ
ಸುಮ್ಮನಿರು	ಗಪ್ಪರಹ	ಟವ್ಯಾರವಗ
ಕಲ್ಲು	ಪತ್ತರ	ನಥ್ಥರ
ಹೊಲದಲ್ಲಿ	ಖೇತ್ತಾಮ	ರೇಥ್ಥಾಮ
ತಗ್ಗು	ಖಡ್ಡಾ	ರ್ಥಡ್ಡೇಮ
ಮನೆ	ಘರ	ಖೌಲ್ಲಾ
ಗಂಡಸು	ಆದಮಿ	ಕೌದಮಿ
ನೀರು	ಪಾಣಿ	ಚಂಯ
ಓಡು	ನ್ಹಸ	ಖಸಕ

ದುಡ್ಡು	ಪೈಸೆ	ಡೊಖಳೆ
ಸೆರೆ	ದಾರು	ತ್ಯಾರಿ
ಹೆಂಡತಿ	ಬಯರ	ಛಿತಾಣಿ
ಗಂಡ	ಭಾಂತು	ಛಾಂತು
ಒಂದು	ಏಕ	ಬೇಕ
ಎರಡು	ದೊ	ಧೋರ
ಮೂರು	ತೀನ	ಥೇರ
ನಾಲ್ಕು	ಚಾರ	ಚೌಗ
ಐದು	ಪಾಂಚ	ನಾಂಚ
ಹತ್ತು	ದಸ	ಖಸ
ಇಪ್ಪತ್ತು	ಬೀಸ	ಖಬೀಸ
ಮೂವತ್ತು	ತೀಸ	ಖತೀಸ
ನಾಲ್ವತ್ತು	ಚಾಳಿಸ	ನಾಳಿಸ
ಐವತ್ತು	ಪಚಾಸ	ನಚಾಸ
ಕಣ್ಣು	ಆಂಖ	ಕೌಂಖ
ಕೈ	ಹಾಥ	ಖೌತ
ಹೊಟ್ಟೆ	ಪೆಟ	ನೇಟ
ಬೆರಳು	ಆಂಗಳ	ಕೌಂಗಳ
ಬಟ್ಟೆ	ಕಾಪಡೆ	ಡಿಫಡೆ
ಹರಿ	ಫಾಡ	ನ್ಹಾಢ
ಹೊಡೆ	ಫೋಡ	ನೋಹಡ
ನೀರು ಕುಡಿ	ಪಾಣಿ ಪೀ	ಚಂಯ ಟೋಫ
ಸೈಕಲ್ ಮೇಲೆ	ಸಾಯಕಲಿಪರ	ನೈಹಿಕಲಿಪರ
ಮೋಟಾರು	ಮೋಟರ	ಟುಮರ
ಸಕ್ಕರೆ	ಸಕ್ಕರ	ನ್ಹಕ್ಕರ
ಬಂಗಾರು	ಸವನ್ನಾ	ಬೌನ್ನಾ
ಆಫೀಸ	ಆಫೀಸ್	ನ್ಹಾಪೀಸ
ಕಛೇರಿ	ಕಚೇರಿ	ನಚೇರಿ
ಕಳು	ಚೋರಿ	ಬೌಲಿ
ಆಟಕ್ಕೆ	ಖೇಲಣ	ರೇಲಣ

ಗ್ರಂಥ ಋಣ

೧. ಪ್ರಭಾಕರ ಎ.ಎಸ್., ಕರ್ನಾಟಕದ ಡೊಂಬರು, : ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.೨೦೦೭

೨. [ಸಂ] ಎ ಎಸ್ ಪ್ರಭಾಕರ: ಆದಿವಾಸಿ ಆಖ್ಯಾನ: ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ :೨೦೦೬

3. Thurston, Edger, Rangachar K , Caste and Tribes in Southern India: Asian Educational Services: New delhi: 1987.

೪. [ಸಂ] ಕಲಬುರ್ಗಿ ಎಂ ಎಂ: ಮೆಕೆಂಜಿಯವರ ಕೈಫಿಯತ್ತು (ಸಂಪುಟ-೧): ಪ್ರಸಾರಾಂಗ, ಕ ವಿ ವಿ, ಹಂಪಿ:೧೯೯೮)

೫. ಕುಮಾರ್ ಆರ್ ಬಿ : ಮುದ್ದೆ ಕಂಬಾರರು: ಸಾರಾ ಎಂಟರ್ ಪ್ರೈಸಸ್ ಮೈಸೂರು: ೨೦೦೪

೬. (ಸಂ)ಬೆಟಗೇರಿ. ವೈ ವೈ:ವಡ್ಡರ ಪರಂಪರೆ: ಜೆ ಬಿ ಪಬ್ಲಿಕೇಶನ್, ಗದಗ: ೧೯೯೯.

7. Buchanan F A: A Journey from Madras, through the countries of Mysore, canara and malbar (vol-3) Oxford university press, London: 1807

8. Sing K S: People of India, Oxford university press, Delhi: 1994

9. Nanduram : Scheduled castes and Scheduled tribes of India:Gyan Publishing house, New Delhi:2007.

10. ರುದ್ರಪ್ಪ, ಕರಿಶೆಟ್ಟಿ: ಮ್ಯಾಸ ನಾಯಕರು-ಒಂದು ಜನಾಂಗಿಕ ಅಧ್ಯಯನ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು: ೧೯೯೫.

11. Criminal Classes in the Bombay Presidency: Government central press, Bombay :1908

೧೨. ಕಿಟ್ಟೆಲ್:*ಕನ್ನಡ ಇಂಗ್ಲಿಷ್ ಡಿಕ್ಷನರಿ* (ನವದೆಹಲಿ: ಏಷಿಯನ್ ಎಜುಕೇಷನಲ್ ಸರ್ವಿಸೆಸ್, ೧೯೯೩).

೧೩. ಚಂದ್ರಶೇಖರ ಕಂಬಾರ: ಜಾನಪದ ವಿಶ್ವಕೋಶ: ಕನ್ನಡ ಸಾಹಿತ್ಯ ಪರಿಷತ್ತು: ಬೆಂಗಳೂರು: ೧೯೮೫

೧೪. ದ್ರಾವಿಡಿಯನ್ ಎಟಮಲಾಜಿಕಲ್ ಡಿಕ್ಸನರಿ (ಡಿ.ಇ.ಡಿ) ನಂಬರ್ ೧೫೩೦

15. Thurston, E, Castes and Tribes of Southern India (Madras:Government press,1909.

16. H.K Rakshit: Socio-Cultural practices among the Tribes of Middle and South India..1995

17. Enthoven R E: Tribes and Castes of Bombay : Govt Press Bombay:1920.

೧೮. ಮಾನಸ:ಕೊರಮ: ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು:೧೯೯೩.

೧೯. ಮೇತ್ರಿ ಕೆ ಎಂ(ಸಂ),ಲಕ್ಕಿ ಪೃಥ್ವಿರಾಜ., ಹೆಚ್ ಪಿ ಸಿಕಾರಿ ರಾಮು:ಪಾರ್ಧಿ: ಕನ್ನಡ ಪುಸ್ತಕ ಪ್ರಾಧಿಕಾರ,ಬೆಂಗಳೂರು: ೨೦೦೮.

ಅಧ್ಯಾಯ ಐದು

ಆರ್ಥಿಕ ಸ್ಥಿತಿ–ಗತಿ

ಆರ್ಥಿಕ ಜೀವನ

ಉಡುಗೆ ತೊಡುಗೆಗಳು

ವಿಮುಕ್ತ ಬುಡಕಟ್ಟು ಸಮುದಾಯಗಳ ವೃತ್ತಿಗಳು

ಅಧ್ಯಾಯ ಐದು

ಆರ್ಥಿಕ ಸ್ಥಿತಿ-ಗತಿ

ಒಂದು ಕಾಲಕ್ಕೆ ಕಾಡನ್ನೇ ನಂಬಿ ಕಾಡಿನ ಮಧ್ಯ ಸ್ವತಂತ್ರವಾಗಿ ಬದುಕುತ್ತಿದ್ದ ಬುಡಕಟ್ಟುಗಳು ಬ್ರಿಟೀಷರ ಪ್ರವೇಶದಿಂದಾಗಿ ಮತ್ತು ಅವರು ಹೊತ್ತು ತಂದ ಔದ್ಯೋಗೀಕರಣದಿಂದಾಗಿ ಜರ್ಜರಿತಗೊಂಡವು. ಅದಕ್ಕಿಂತ ಹೆಚ್ಚಾಗಿ ದೇಶೀ ಮೂಲದ ಕುಶಲಕರ್ಮಿಗಳನ್ನು ಮತ್ತು ವ್ಯಾಪಾರಿಗಳನ್ನು ತುಳಿದು ಆ ಸಮುದಾಯಗಳು ಆರ್ಥಿಕವಾಗಿ ದುರ್ಬಲಗೊಳ್ಳುವಂತೆ ವಸಾಹತುಶಾಹಿ ವ್ಯವಸ್ಥೆ ನೋಡಿಕೊಂಡಿತು. ಈ ಜನರನ್ನು ನಿಯಂತ್ರಿಸಲೆಂದೇ ಬ್ರಿಟೀಷ್ ವಸಾಹತುಶಾಹಿಯು ಹೊಸ ಹೊಸ ಕಾನೂನು ಕಾಯ್ದೆಗಳನ್ನು ಜಾರಿಗೊಳಿಸಿತು. ಇವರ ವ್ಯಾಪಾರದ ಮೇಲೆ ನಿಯಂತ್ರಣವೇರಿತು, ಅರಣ್ಯ ಕಾಯ್ದೆಯನ್ನು ಜಾರಿಗೊಳಿಸಿತು. ಒಟ್ಟಾರೆಯಾಗಿ ಆ ಜನರನ್ನು ಬಲವಂತವಾಗಿ ತಮ್ಮ ತೊತ್ತುಗಳಾಗಿ ರೂಪಿಸಿಕೊಳ್ಳುವಲ್ಲಿ ಅದು ಯಶಸ್ವಿಯಾಯಿತು. ಆ ಮೂಲಕ ಅವರ ಆರ್ಥಿಕ ಸ್ವಾವಲಂಬೀತನವನ್ನು ವಸಾಹತುಶಾಹಿಯು ಅತಂತ್ರಗೊಳಿಸಿತು.

ಬ್ರಿಟೀಷರು ಭಾರತವನ್ನು ಬಿಟ್ಟು ಹೊರಹೋದ ನಂತರದ ಚಿತ್ರಣವೇನೂ ಬದಲಾಗಲಿಲ್ಲ. ಇಲ್ಲಿಯ ಅಧಿಕಾರಸ್ಥರು ಮತ್ತು ಸರ್ಕಾರಗಳು ಇವರನ್ನು ನಿರ್ಲಕ್ಷಿಸಿದವು. ಈ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಹಲವು ಯೋಜನೆಗಳನ್ನು ರೂಪಿಸಲಾಯಿತಾದರೂ ಅವುಗಳ ಅನುಷ್ಠಾನದಲ್ಲಿ ಸರ್ಕಾರ ಸೋತಿತು. ಕೇವಲ ಮುಂಗೈ ಬಲವಿದ್ದವರಿಗೆ ಮಾತ್ರ ಯೋಜನೆಯ ಲಾಭಗಳು ದೊರೆಯುವಂತಾದವು. 'ಭಾರತದ ಸಂದರ್ಭದಲ್ಲಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಕಾರ್ಯಕ್ರಮಗಳಿವೆ ವಿನಾ ಬುಡಕಟ್ಟು ನೀತಿ ಎಂಬುದೇನೂ ಇಲ್ಲ. ನೀತಿ ಎಂದರೆ ಪ್ರಜ್ಞಾಪೂರ್ವಕವಾಗಿ ರೂಪಿಸಿದ ಉದ್ದೇಶಗಳನ್ನು ಒಳಗೊಂಡ ಒಂದು ಕಾಯಕಲ್ಪ. ಈ ಕಾಯಕಲ್ಪದ ಉದ್ದೇಶಗಳನ್ನು ಈಡೇರಿಸಲು ಇರುವ ಚಟುವಟಿಕೆಗಳೇ ಕಾರ್ಯಕ್ರಮ'(ಚಂದ್ರಶೇಖರ್ ಟಿ ಆರ್, ೨೦೦೪:೧) ಭಾರತದ ಮಟ್ಟಿಗೆ ಯೋಜನೆಗಳೆಂಬವು ಕೇವಲ ಯೋಜನೆಗಳನ್ನು ರೂಪಿಸುವವರಿಗೆ

ಹೊರತು ಅದರ ಲಾಭ ಪಡೆಯಬೇಕಾದ ಫಲಾನುಭವಿಗಳಿಗಲ್ಲ ಎಂಬ ಮಾತು ಬುಡಕಟ್ಟುಗಳ ಅಭಿವೃದ್ಧಿ ವಿಚಾರದಲ್ಲಿ ನಿಜವಾಗಿದೆ. ಈ ಕೆಳಗೆ ಕ್ಷೇತ್ರ ಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿಗಳನ್ನಾಧರಿಸಿ ಸೆಟಲಮೆಂಟ ಬುಡಕಟ್ಟುಗಳ ಅವಲಂಭಿತ ವೃತ್ತಿಗಳು ಹಾಗೂ ಅವರ ಆರ್ಥಿಕ ಸ್ಥಿತಿ ಗತಿಯನ್ನು ನೋಡಲಾಗಿದೆ.

ಬೋವಿ ಸಮುದಾಯದ ವೃತ್ತಿಗಳು

ಬೋವಿಗಳ ಮೂಲ ವೃತ್ತಿ ಕಲ್ಲು ಒಡೆಯುವುದು, ಕಲ್ಲಿನ ಕ್ವಾರಿ ಮಾಡುವುದು ಹಾಗೂ ಗೋಡೆ ಕಟ್ಟುವುದು. ಇವರು ಕುಶಲ ಕರ್ಮಿ ಸಮುದಾಯಗಳಲ್ಲಿ ವಾಸ್ತುಶಿಲ್ಪವನ್ನು ತಮ್ಮದಾಗಿಸಿಕೊಂಡಿದ್ದರು. ಪ್ರಾಚೀನ ಕಾಲದ ದೇವಾಲಯಗಳು, ಅರಮನೆಗಳು ಇವರ ಕೌಶಲ್ಯದಿಂದಾಗಿಯೇ ಸೃಷ್ಟಿಗೊಂಡವುಗಳು. ಇವರು ಪೂರ್ವದಲ್ಲಿ ಮುದ್ದೆಕಂಬಾರರಂತೆ ಓಜ ಎಂಬ ಪ್ರತ್ಯಯವನ್ನು ತಮ್ಮ ಹೆಸರಿನೊಂದಿಗೆ ಇರಿಸಿಕೊಳ್ಳುತ್ತಿದ್ದರು. ಮುದ್ದೆಕಂಬಾರರಿಗೆ ತೀರಾ ಹತ್ತಿರದ ನಂಬಿರುವ ಬೋವಿಗಳು ಪೂರ್ವದಲ್ಲಿ ಒಂದೇ ಸಮುದಾಯವಾಗಿರುವ ಸಾಧ್ಯತೆಗಳೂ ಇವೆ.

ಕುಶಲಕರ್ಮಿಗಳಲ್ಲಿ ಮನು, ಮಯ, ತ್ವಷ್ಟಿ, ಶಿಲ್ಪಿ, ದೈವಜ್ಞ ಎಂಬ ಐದು ಪಂಗಡಗಳಿದ್ದು ಆ ಐದು ಪಂಗಡಗಳಲ್ಲಿ ಒಂದಾದ ಶಿಲ್ಪಿಗಳು ತಾವೆಂದು ಬೋವಿ ಸಮುದಾಯದ ವಕ್ತೃಗಳು ತಿಳಿಸುತ್ತಾರೆ.

ಕೋಷ್ಟಕ ೫.೧: ಭೋವಿಗಳ ಕುಶಲಕರ್ಮಿ ಪಂಗಡಗಳ ವಿವರ

ಕ್ರಸಂ.	ದೈವ	ಮೂಲಪುರುಷ	ಗೋತ್ರ	ವೃತ್ತಿ	ಜಾತಿ
೧	ರುದ್ರ	ಮನು	ಸಾನಗ	ಲೋಹರ	ಕಮ್ಮಾರ
೨	ವಿಷ್ಣು	ಮಯ	ಸನಾತನ	ಕಾಷ್ಟ	ಬಡಿಗ
೩	ಬ್ರಹ್ಮ	ತ್ವಷ್ಟಿ	ಅಹಭೂನ	ಕಂಚು	ಕಂಚುಗಾರ
೪	ಇಂದ್ರ	ಶಿಲ್ಪಿ	ಪ್ರತ್ನ	ಶಿಲಾ	ಭೋವಿ
೫	ಸೂರ್ಯ	ದೈವಜ್ಞ	ಸಪರ್ನಾಸ್ಯ	ಸ್ವರ್ಣ	ಅಕ್ಕಸಾಲಿ

ಪೂರ್ವದಲ್ಲಿ ಬಲಿಷ್ಟವಾದ ಬೋವಿಗಳು ಅರಸರ ಮನೆಯ ಪೆಲ್ಲುಮಕ್ಕಳು ಹೊರಗೆ ಹೋಗುವ ಸಂದರ್ಭದಲ್ಲಿ ಅವರಿಗೆ ಅಂಗರಕ್ಷಕನಾಗಿ ಬೋವಿಗಳನ್ನು ನೇಮಿಸಲಾಗುತ್ತಿತ್ತು. ಹಾಗೇ ಅವರು ಕುಳಿತ ಮೇಣೆಗಳನ್ನು ಹೋರುವ ಕಾಯಕದಲ್ಲಿ ಬೋವಿಗಳು ತೊಡಗಿರುತ್ತಿದ್ದದು ತಿಳಿದುಬರುತ್ತದೆ.

ಮೂರ್ತಿ ಕೆತ್ತನೆ, ಗಣಿಗಾರಿಕೆ, ವಾಸ್ತುಶಿಲ್ಪದಲ್ಲಿ ಪರಿಣಿತರಿದ್ದ ಇವರು ಕಟ್ಟಡ ಕೆಲಸವನ್ನು ಮಾಡುತ್ತಿದ್ದರು. ಹಾಗೂ ಕೆರೆ, ಬಾವಿ, ಕಾಲುವೆಗಳ ನಿರ್ಮಾಣದಲ್ಲಿ ಇವರ ಪಾತ್ರ ಹಿರಿದಾಗಿತ್ತು. ಮಹಿಳೆಯರು ಸಾಮಾನ್ಯವಾಗಿ ಬೀಸುವ ಕಲ್ಲು, ಒರಳು ಕಲ್ಲು, ಗುಂಡುಗಳಿಗೆ (ಮುಳ್ಳು ಹಾಕುವುದು) ಹೋಳಿ ಹೊಯ್ಯುವ ಕೆಲಸಗಳನ್ನು ಮಾಡುತ್ತಿದ್ದರು. ಆದರೆ ಇತ್ತೀಚಿಗೆ ಇವರಲ್ಲಿ ಕೆಲವರು ಮಾತ್ರ ಕಟ್ಟಡಗಳನ್ನು ಕಟ್ಟಲು ಕೂಲಿಗಳಾಗಿ ಕಾರ್ಯ ನಿರ್ವಹಿಸುತ್ತಿರುವುದು ಕಂಡುಬರುತ್ತದೆ. ಅದರೊಂದಿಗೆ ಆಧುನಿಕ ಪರಿಸ್ಥಿತಿ ಹಾಗೂ ಪರಿಣಾಮಗಳಿಂದಾಗಿ ಇತರ ವೃತ್ತಿಗಳಲ್ಲಿಯೂ ತೊಡಗಿಕೊಂಡಿದ್ದಾರೆ.

ಬೋವಿಗಳಲ್ಲಿ ೦-೧೭ರ ವಯೋಮಾನದವರನ್ನು ಹಾಗೂ ೬೦ ವಯೋಮಾನಕ್ಕಿಂತ ಮೇಲ್ಪಟ್ಟ ವಯಸ್ಸಿನವರನ್ನು ಕಾಯಕ ಮಾಡಲು ಅರ್ಹರಾದವರಲ್ಲ ಎಂದು ಪರಿಗಣಿಸಲಾಗುತ್ತದೆ.

ಕೋಷ್ಟಕ ೫.೨: ಸಮೀಕ್ಷೆಗೊಳಪಟ್ಟ ಭೋವಿಗಳ ಕಾಯಕಾರ್ಹವಲ್ಲದ ಆಶ್ರಿತರ ಗುಂಪು

ವಯೋಗುಂಪು	ಪುರುಷರು	ಮಹಿಳೆಯರು	ಒಟ್ಟು
೦-೧೭	೨೫೧	೨೧೨	೪೬೩
೬೦	೩೩	೩೦	೬೬
ಒಟ್ಟು	೨೮೪	೨೪೨	೫೨೬

ಬೋವಿ ವಯೋಗುಂಪು

೧೯೯ ಕುಟುಂಬಗಳಲ್ಲಿರುವ ಒಟ್ಟು ಜನರನ್ನು ಐದು ವಯೋಗುಂಪುಗಳಲ್ಲಿ ವಿಂಗಡಿಸಲಾಗಿದೆ. ೦.೪ರ ವಯೋಮಿತಿಯವರು, ೫-೧೭ರ ವಯೋಮಿತಿಯವರು, ೬೦ರ ವಯೋಮಿತಿಯನ್ನು ದಾಟಿದವರು.

ಇವರಲ್ಲಿ ೦.೪ರ ವಯೋಮಿತಿಯವರ ಒಟ್ಟು ಪ್ರಮಾಣ ಶೇ.ಕಡ ೬.೯೧ರಷ್ಟಿದೆ. ಇದರಲ್ಲಿ ಗಂಡುಮಕ್ಕಳು ಶೇ. ೭.೪೫ ಹಾಗೂ ಹೆಣ್ಣುಮಕ್ಕಳು ಶೇ. ೬.೨೬ರಷ್ಟಿದ್ದಾರೆ.

೫-೧೭ರ ವಯೋಮಿತಿಯವರ ಒಟ್ಟು ಪ್ರಮಾಣವು ಶೇ. ೩೪.೬೯ ಇದ್ದು ಅದರಲ್ಲಿ ಪುರುಷರು ಶೇ. ೩೪.೨೨ ಹಾಗೂ ಮಹಿಳೆಯರು ಶೇ. ೩೫.೨೨ರಷ್ಟು ಕಂಡುಬರುತ್ತಾರೆ. ೧೮-೪೦ರೊಳಗಿನ ವಯೋಮಿತಿಯವರ ಒಟ್ಟು ಜನಸಂಖ್ಯೆ ಪ್ರಮಾಣವು ಶೇ. ೩೬.೪೮ ಇದ್ದು ಅವರಲ್ಲಿ ಪುರುಷರು ಶೇ. ೩೬.೫೬ ಹಾಗೂ ಮಹಿಳೆಯರು ಶೇ. ೩೬.೩೯ರಷ್ಟಿದ್ದಾರೆ.

೪೦-೬೦ರ ವಯೋಮಾನದವರ ಜನಸಂಖ್ಯೆ ಪ್ರಮಾಣವು ಒಟ್ಟು ಶೇ. ೧೬.೨೬ ಇದ್ದು ಅದರಲ್ಲಿ ಪುರುಷರು ಶೇ. ೧೬.೨೯ ಹಾಗೂ ಮಹಿಳೆಯರು ಶೇ. ೧೬.೨೬ರಷ್ಟಿದೆ.

೬೦ಕ್ಕಿಂತ ಹೆಚ್ಚಿನ ವಯೋಮಿತಿಯವರ ಒಟ್ಟು ಪ್ರಮಾಣವು ಶೇ. ೫.೬೬ರಷ್ಟಿದೆ. ಇದರಲ್ಲಿ ಪುರುಷರು ಶೇ. ೫.೪೮ ಹಾಗೂ ಮಹಿಳೆಯರು ಶೇ. ೫.೮೭ರಷ್ಟಿದೆ.

ಈ ಐದು ಗುಂಪುಗಳಲ್ಲಿ ಅತೀ ಹೆಚ್ಚು ಪ್ರಮಾಣದ ಜನಸಂಖ್ಯೆ ಹೊಂದಿದ ಗುಂಪು (ಶೇ.೩೬.೪೮) ೧೬-೪೦ರ ವಯೋಮಿತಿಯದ್ದಾಗಿದೆ. ಅತೀ ಕನಿಷ್ಟ ಜನಸಂಖ್ಯೆ ಹೊಂದಿದ ಗುಂಪು ೬೦ಕ್ಕಿಂತ ಮೇಲ್ಪಟ್ಟು ವಯಸ್ಸಿನವರಿದ್ದಾಗಿದೆ. (ಶೇ. ೫.೬೬)

ಬೋವಿಗಳಲ್ಲಿ ಕಾಯಕ ಮಾಡಲು ಅರ್ಹವಲ್ಲದವರು ಒಟ್ಟು ೫೨೬ ಜನರಿದ್ದಾರೆ. ಇವರಲ್ಲಿ ಪುರುಷರು ೨೮೪ ಹಾಗೂ ಮಹಿಳೆಯರು ೨೪೨ರಷ್ಟು ಜನ ಕಂಡುಬರುತ್ತಾರೆ. ಆಶ್ರಿತರ ಗುಂಪಿನ ಒಟ್ಟು ಪ್ರಮಾಣವು ಶೇ. ೪೭.೨೬ರಷ್ಟಿದೆ.

ಕೋಷ್ಟಕ ೫.೩: ಸಮೀಕ್ಷೆಗೊಳಪಟ್ಟ ಭೋವಿ ಸಮುದಾಯದ ಕಸಬುಗಳು

	ಪುರುಷ	ಸ್ತ್ರೀ	ಒಟ್ಟು
ಒಟ್ಟು ಜನಸಂಖ್ಯೆ	೬೦೨	೫೧೧	೧೧೧೩
೦-೧೭ ವಯಸ್ಸಿನ ಗುಂಪು	೨೫೧	೨೧೨	೪೬೩
೬೧ ವಯಸ್ಸಿನ ಮೇಲ್ಪಟ್ಟವರ ಗುಂಪು	೩೩	೩೦	೬೩
ಒಟ್ಟು ಆಶ್ರಿತ ಗುಂಪು	೨೮೪	೨೪೨	೫೨೬
ಕಾಯಕರ್ಹ ಗುಂಪು	೩೧೮	೨೬೯	೫೮೭
ಕೆಲಸಗಾರರ ಗುಂಪು	೨೨೧	೨೦೯	೪೩೦
ಕೃಷಿಕರು	೧೫	೧೨	೨೭
ಕೃಷಿಕಾರ್ಮಿಕರು	೨೩	೩೨	೫೫
ಸರಕಾರಿ ನೌಕರರು	–	–	–
ಆಟೋಚಾಲಕರು	೩೮	–	೩೮
ವ್ಯಾಪರಸ್ತರರು	೧೩	೯	೨೨
ಪಾತ್ರೆ ತೊಳೆಯುವುದು	–	೫೩	೫೩
ಕಾರಪೇಂಟರ್	೮	–	೮
ಇತರೆ ಉದ್ಯೋಗಿಗಳು	೧೨೪	೧೦೩	೨೨೭
ನಿರುದ್ಯೋಗಿಗಳು	೯೭	೬೦	೧೫೭

ಭೋವಿಗಳಲ್ಲಿ ಕಾಯಕಾರ್ಹರ ಒಟ್ಟು ಪ್ರಮಾಣವು ಶೇ. ೫೨.೭೪ ಇದ್ದು ಇದರಲ್ಲಿ ಪುರುಷರು ಶೇ. ೫೨.೮೪ ಹಾಗೂ ಮಹಿಳೆಯರು ಶೇ. ೫೨.೬೫ರಷ್ಟು ಕಂಡುಬರುತ್ತಾರೆ.

ಹುಬ್ಬಳ್ಳಿ ಸೆಟ್ಲ್‌ಮೆಂಟ್‌ಗಳಲ್ಲಿ ಮಾತ್ರ ನೆಲೆಸಿರುವ ಭೋವಿಗಳಲ್ಲಿ ಕೆಲವರಿಗೆ ಬ್ರಿಟಿಷ್ ಸರ್ಕಾರವೇ ಭೂಮಿಗಳನ್ನು ಕೊಟ್ಟಿದೆ. ಈ ರೀತಿ ಭೂಮಿ ಪಡೆದವರಲ್ಲಿ ಕೆಲವರು ಭೂಮಿಗಳನ್ನು ಮಾರಿಕೊಂಡು ಕೂಲಿಕೆಲಸದಲ್ಲಿ ತೊಡಗಿದ್ದಾರೆ. ಆದರೆ ಭೂಮಿಯನ್ನು ಇರಿಸಿಕೊಂಡ ಕೇವಲ ಬೆರಳಣಿಕೆಯಷ್ಟು ಜನ ಕೃಷಿಯಲ್ಲಿ ತೊಡಗಿರುವುದನ್ನು ಕಾಣಬಹುದಾಗಿದ್ದಾರೆ. ಈ ರೀತಿ ಕೃಷಿಯಲ್ಲಿ ತೊಡಗಿದವರ ಒಟ್ಟು ಪ್ರಮಾಣವು ಶೇ. ೬.೨೭ರಷ್ಟಿದೆ. ಕೃಷಿ ಕೂಲಿ ಕಾರ್ಮಿಕರಾಗಿ ಕಾರ್ಯ ನಿರ್ವಹಿಸುವವರು ಪ್ರಮಾಣವು ಒಟ್ಟು ಶೇ. ೧೨.೭೯ ಇದ್ದು ಅದರಲ್ಲಿ ಪುರುಷರು ಶೇ. ೧೦.೪ ಹಾಗೂ ಮಹಿಳೆಯರು ಶೇ. ೧೫.೧೩ರಷ್ಟಿದ್ದಾರೆ. ಕೃಷಿಕೂಲಿಯಲ್ಲಿ ತೊಡಗಿರುವರಲ್ಲಿ ಪುರುಷರಿಗಿಂತ ಮಹಿಳೆಯರ ಪಾಲೇ ಹೆಚ್ಚಾಗಿದೆ.

ಭೋವಿ ಪುರುಷರು ನಗರದಲ್ಲಿ ಆಟೋ ಚಾಲಕರಾಗಿ ಕಾರ್ಯ ನಿರ್ವಹಿಸುತ್ತಿದ್ದು ಪುರುಷರಲ್ಲಿ ಅವರ ಪ್ರಮಾಣವು ಶೇ. ೧೭.೨ ಇದ್ದು, ಒಟ್ಟು ಪ್ರಮಾಣವು ಶೇ. ೮.೮೨ ಇದೆ.

ಭೋವಿಗಳಲ್ಲಿ ಕೆಲವರು ಚಿಕ್ಕ ಪುಟ್ಟ ವ್ಯಾಪಾರ ೧೦ರಲ್ಲಿ ಅಂದರೆ ಐಸ್ ಕ್ಯಾರಕ ಮಾರುವುದು, ಡಬ್ಬಿ ಅಂಗಡಿ ವ್ಯಾಪಾರ ಇತ್ಯಾದಿಗಳಲ್ಲಿ ತೊಡಗಿಕೊಂಡವರು ಒಟ್ಟು ಪ್ರಮಾಣ ಶೇ. ೦೫.೧೧ ಇದ್ದು, ಇದರಲ್ಲಿ ಪುರುಷರು ಶೇ. ೫.೯ ಹಾಗೂ ಮಹಿಳೆಯರು ಶೇ. ೪.೩ರಷ್ಟು ಕಂಡುಬರುತ್ತಾರೆ.

ಭೋವಿ ಸಮುದಾಯದ ಮಹಿಳೆಯರು ನಗರದ ಬೇರೆ ಬೇರೆ ಕಡೆ ಮುಸರಿ ಪಾತ್ರೆ ತೊಳೆಯಲು ಇತ್ಯಾದಿ ಮನೆ ಕೆಲಸ ನಿರ್ವಹಿಸಲು ಹೋಗುತ್ತಾರೆ. ಈ ರೀತಿ ಹೋಗುವ ಮಹಿಳೆಯರ ಪ್ರಮಾಣ ಶೇ. ೨೫.೩೫ ಇದ್ದು, ಇದರಲ್ಲಿ ಒಟ್ಟು ಪ್ರಮಾಣವು ಶೇ. ೧೨.೫೨ರಷ್ಟಿದೆ.

ಕೆಲವು ಭೋವಿಗಳು ಬಡಗಿ ಕೆಲಸವನ್ನು ಸಹ ನಿರ್ವಹಿಸುತ್ತಾರೆ. ಈ ರೀತಿ ಬಡಗಿ ಕೆಲಸ ನಿರ್ವಹಿಸುವ ಪುರುಷರ ಪ್ರಮಾಣವು ಶೇ. ೩.೬೧ ಇದ್ದು ಒಟ್ಟು ಪ್ರಮಾಣವು ಶೇ. ೧.೮ ರಷ್ಟಾಗುತ್ತದೆ. ರದ್ದಿ ಪೇಪರ್ ಆಯುವುದು, ಗುಜರಿ ವಸ್ತುಗಳ ಖರೀದಿ, ಇತ್ಯಾದಿ ಭಿನ್ನ ಭಿನ್ನ ಉದ್ಯೋಗಗಳಲ್ಲಿ ತೊಡಗಿದವರ ಒಟ್ಟು ಪ್ರಮಾಣವು ಶೇ. ೫೨.೬೯ ಇದ್ದೂ ಅದರಲ್ಲಿ ಪುರುಷರು ಶೇ. ೫೬.೧೨ ಹಾಗೂ ಮಹಿಳೆಯರ ಶೇ. ೪೯.೨೮ರಷ್ಟು ಇದ್ದಾರೆ.

ಒಟ್ಟಾರೆಯಾಗಿ ಬಹುತೇಕ ಜನ ವಿವಿಧ ಕೆಲಸಗಳಲ್ಲಿ ತೊಡಗಿರುವುದರಿಂದ ಇವರಲ್ಲಿ ನಿರುದ್ಯೋಗಿಗಳ ಪ್ರಮಾಣ ಕಡಿಮೆ ಇದೆ. ಆದರೂ ಒಟ್ಟು ನಿರುದ್ಯೋಗಿಗಳು ಪ್ರಮಾಣ ಕಾಲು ಭಾಗದಷ್ಟು (ಶೇ. ೨೬)ಕಂಡುಬರುತ್ತದೆ. ಇದರಲ್ಲಿ ಶೇ. ೩೦.೫೧ರಷ್ಟು ಪುರುಷರು ಹಾಗೂ ಶೇ. ೨೨.೩೧ರಷ್ಟು ಮಹಿಳೆಯರು ನಿರುದ್ಯೋಗಿಗಳಾಗಿದ್ದಾರೆ. ಇದರಲ್ಲಿ ಮಹಿಳೆಯರು ಗೃಹ ಕೃತ್ಯಗಳನ್ನು ಮಾಡುವುದರಿಂದ ಅವರನ್ನು ನಿರುದ್ಯೋಗಿಗಳೆಂದು ಪರಿಗಣಿಸುವುದು ಅಷ್ಟು ಸಮಂಜಸವೆನಿಸುವುದಿಲ್ಲ.

ಇತ್ತೀಚೆಗೆ ಓದಿ ಹೊರಬಂದ ಯುವಕರು ವಿವಿಧ ಕೆಲಸಗಳಲ್ಲಿ ತೊಡಗಿಕೊಳ್ಳುವುದು ಸ್ವಲ್ಪ ಅಪರೂಪ ಹೀಗಾಗಿ ಇಂತಹ ಯುವಕರೇ ಈ ಸಮುದಾಯದಲ್ಲಿ ನಿರುದ್ಯೋಗದ ಪ್ರಮಾಣ ಹೆಚ್ಚಳಗೊಳ್ಳಲು ಕಾರಣವಾಗಿರಬಹುದು ಎನಿಸುತ್ತದೆ.

ಕೋಷ್ಟಕ ೫.೪: ಸಮೀಕ್ಷೆಗೊಳಪಟ್ಟ ಭೋವಿ ಸಮುದಾಯದ ಮಾಸಾಶನ ಪಟ್ಟಿ

	ಪುರುಷ	ಸ್ತ್ರೀ	ಒಟ್ಟು
ಒಟ್ಟು ಜನಸಂಖ್ಯೆ	೬೦೨	೫೧೧	೧೧೧೩
ವಿವಾಹಿತರು	೨೬೫	೨೬೮	೫೩೩
ವಿಧುರ/ವಿಧವೆಯರು	೩	೨೩	೨೬
ವಿಧವಾ ವೇತನದಾರರು	೧೨	–	೧೨
ವೃದ್ಧರ ಗುಂಪು	೩೩	೩೦	೬೩
ವೃದ್ದಾಪ್ಯ ವೇತನ ಪಡೆಯುವವರ ಗುಂಪು	೧೯	೧೧	೪೦

ವಿಧವಾ ವೇತನ ಹಾಗೂ ಇತರ ಸೌಲಭ್ಯ ಪಡೆಯುವವರ ವಿವರ

ವಿಧವರೆಯರು ೨೩ ಜನರಿದ್ದಾರೆ. ಇದರಲ್ಲಿ ಒಟ್ಟು ಶೇ ೫೨.೧೭ರಷ್ಟು ಜನ ವಿಧವೆಯರು ವಿಧವಾವೇತನ ಪಡೆಯುತ್ತಿದ್ದಾರೆ. ಇನ್ನುಳಿದವರಲ್ಲಿ ಕೆಲವರು ವೃದ್ಯಾಪ್ಯವೇತನ ಪಡೆಯುವುದರಿಂದ ಮತ್ತು ಇತರ ಕಾರಣಗಳಿಗಾಗಿ ವಿಧವಾ ವೇತನ ಪಡೆಯಲು ಸಾಧ್ಯವಾಗಿಲ್ಲ

೬೦ ಹಾಗೂ ಅದಕ್ಕಿಂತಲೂ ಮೇಲ್ಪಟ್ಟ ವಯೋಮಾನದ ಹಿರಿಯರಿಗೆ ವೃದ್ಧಾಪ್ಯ ವೇತನವನ್ನು ಸರ್ಕಾರ ನೀಡುತ್ತದೆ. ೬೦ ವರ್ಷಕ್ಕಿಂತ ಮೇಲ್ಪಟ್ಟು ವೃದ್ಧರಲ್ಲಿ ಪುರುಷರು ೩೩ ಹಾಗೂ ಮಹಿಳೆಯರು ೩೦ಒಟ್ಟು ೬೩ ಜನರಿದ್ದಾರೆ. ಇವರಲ್ಲಿ ವೃದ್ಧಾಪ್ಯ ವೇತನ ಪಡೆಯುತ್ತಿರುವ ಪುರುಷರು ಶೇ. ೫೭.೫೭ ರಷ್ಟಿದ್ದಾರೆ, ಮಹಿಳೆಯರು ಶೇ ೩೬.೬೬ರಷ್ಟಿದ್ದಾರೆ. ವೃದ್ಯಾಪ್ಯವೇತನ ಪಡೆಯುವವರ ಒಟ್ಟು ಪ್ರಮಾಣ ಶೇ೬೩.೪೯ರಷ್ಟಿದೆ.

ಹಾಗೆ ಬಡತನ ರೇಖೆಗಿಂತ ಕೆಳಗಿರುವವರಿಗೆ ನೀಡುವ ಪಡಿತರ ಚೀಟಿ ಪಡೆದವರು ಶೇ ೫೫.೨೭, ಶೇ ೧೭.೭೮ ರಷ್ಟು ಭಾಗ್ಯ ಜ್ಯೋತಿ ಮುಂತಾದ ಯೋಜನೆಗಳ ಅಡಿಯಲ್ಲಿ ವಿದ್ಯುತ್ ಸೌಲಭ್ಯ, ಶೇ ४३ ರಷ್ಟು ಜನ ನಿರ್ಮಲ ಕರ್ನಾಟಕ ಯೋಜನೆಯಡಿ ದೊರೆತ ಶೌಚಾಲಯ ಸೌಚಾಲಯ ಸೌಲಭ್ಯ ಮುಂತಾದವುಗಳನ್ನು ಪಡೆದಿದ್ದಾರೆ. ಆದರೆ ಎಷ್ಟೋ ಸೆಟಲಮೆಂಟ ಜನರಿಗೆ ಇಂದಿಗೂ ಸ್ನಾನ ಗೃಹದಂತಹ ಕನಿಷ್ಠ ಸೌಲತ್ತುಗಳು ಇಲ್ಲವಾಗಿವೆ.

ಕೋಷ್ಟಕ ೫.೫: ಸಮೀಕ್ಷೆಗೊಳಪಟ್ಟ ಇತರೆ ಸೌಲಭ್ಯಗಳು

ಇತರೆ ಸೌಲಭ್ಯಗಳು	
ಕುಟುಂಬಗಳು	೧೯೯
ಪಡಿತರ ಚೀಟಿದಾರರು	೧೧೦
ಸ್ವಂತ ವಿದ್ಯುತ್ ಹೋಂದಿದವರು	೧೧೫
ಸರಕಾರದಿಂದ ವಿದ್ಯುತ್ ಸಂಪರ್ಕ ಹೋಂದಿದವರು	೩೫
ಸಿಲೆಂಡರ್ ಗ್ಯಾಸ್ ಹೋಂದಿದವರು	೧೨
ನಳ	೧೨೧
ಶೌಚಾಲಯ	೮೭
ಸ್ನಾನ ಗೃಹ	೧೪೩
ಸೈಕಲ್	೨೬
ರೇಡಿಯೋ	೨೧
ಟೇಪ್	४೦
ಟಿ.ವಿ	೩೯
ಮೊಬೈಲ್	४೯

ಗಂಟಿಚೋರರ ವೃತ್ತಿಗಳು

ನಂದೂರಾಮ್‌ರವರು ಗಂಟಿಚೋರರ ವೃತ್ತಿಗಳ ಕುರಿತು ತಿಳಿಸುತ್ತಾ ಈ ಮಾತುಗಳನ್ನು ಹೇಳುತ್ತಾರೆ.

"They have now taken up daily wage casual labour and pety trade to eain their livelihood. A few of them have acquired agriucltural land and are engaged as cultivaties. The distribution of goupti chove workess in different Industrial categories (ನಂದೂರಾಮ್:೨೪೦).

೧೯೬೧ ರಿಂದ ೨೦೦೧ರವರೆಗೆ ವಿವಿಧ ವೃತ್ತಿಗಳಲ್ಲಿ ತೊಡಗಿದ ಗಂಟಿಚೋರ ಜನರ ಮಾಹಿತಿ ಈ ಕೆಳಗಿನಂತಿದೆ.

ಕೋಷ್ಟಕ ೫.೬: ೧೯೬೧–೨೦೦೧ರವರೆಗಿನ ಗಂಟಿಚೋರರ ವಿವಿಧ ವೃತ್ತಿಗಳ ಮಾಹಿತಿ

ಕ್ರಸಂ.	ವಿವರ	ಪುರುಷ	ಮಹಿಳೆ
೦೧.	ಒಟ್ಟು ವೃತ್ತಿನಿರತರು	೧೬೮	೧೧೪
೦೨.	ಕೃಷಿ	೧೨೧	೮೬
೦೩.	ಕೃಷಿ ಕೂಲಿ	೨೨	೨೩
೦೪.	Livestock ಅರಣ್ಯಮೀನುಗಾರಿಕೆ ಇತ್ಯಾದಿ	೨	೨
೦೫.	ಗಣಿಗಾರಿಕೆ, ಕ್ವಾರಿ ಕೆಲಸ	-	-
೦೬.	ವಸ್ತುಗಳ ತಯಾರಿ	೧೯	೩
೦೭.	ಇತರೆ	೪	-

೧೯೭೧

ಕ್ರಸಂ.	ವಿವರ	ಪುರುಷ	ಮಹಿಳೆ
೦೧.	ಒಟ್ಟು ವೃತ್ತಿನಿರತರು	೧೮೯	೯೫
೦೨.	ಕೃಷಿ	೭೫	೨೭
೦೩.	ಕೃಷಿ ಕೂಲಿ	೯೭	೫೮
೦೪.	Livestock ಅರಣ್ಯಮೀನುಗಾರಿಕೆ ಇತ್ಯಾದಿ	೫	೫
೦೫.	ಗಣಿಗಾರಿಕೆ, ಕ್ವಾರಿ ಕೆಲಸ	-	-
೦೬.	ವಸ್ತುಗಳ ತಯಾರಿ	೨	-
೦೭.	ಇತರೆ	೧೦	೫

೧೯೮೧

ಕ್ರಸಂ.	ವಿವರ	ಪುರುಷ	ಮಹಿಳೆ
೦೧.	ಒಟ್ಟು ವೃತ್ತಿನಿರತರು	೭೫೬	೧೬೫
೦೨.	ಕೃಷಿ	೨೯೫	೧೬
೦೩.	ಕೃಷಿ ಕೂಲಿ	೧೯೨	೧೨೨
೦೪.	Livestock ಅರಣ್ಯಮೀನುಗಾರಿಕೆ ಇತ್ತ್ಯಾದಿ	೪೧	೫
೦೫.	ಗಣಿಗಾರಿಕೆ, ಕ್ವಾರಿ ಕೆಲಸ	೧	-
೦೬.	ವಸ್ತುಗಳ ತಯಾರಿ	೧೪೯	೬
೦೭.	ಇತರೆ	೭೮	೧೬

೧೯೯೧

ಕ್ರಸಂ.	ವಿವರ	ಪುರುಷ	ಮಹಿಳೆ
೦೧.	ಒಟ್ಟು ವೃತ್ತಿನಿರತರು	೭೭೧	೩೫೩
೦೨.	ಕೃಷಿ	೨೦೩	೫೩
೦೩.	ಕೃಷಿ ಕೂಲಿ	೨೪೨	೨೨೬
೦೪.	ಪಶುಪಾಲನೆ, ಅರಣ್ಯ, ಮೀನುಗಾರಿಕೆ ಇತ್ಯಾದಿ	೪೦	೧
೦೫.	ಗಣಿಗಾರಿಕೆ, ಕ್ವಾರಿ ಕೆಲಸ	೪	-
೦೬.	ವಸ್ತುಗಳ ತಯಾರಿಕೆ	೧೩೦	೪೧
೦೭.	ಇತರೆ	೧೫೨	೩೨

೨೦೦೧

ಕ್ರಸಂ.	ವಿವರ	ಪುರುಷ	ಮಹಿಳೆ
೦೧.	ಒಟ್ಟು ವೃತ್ತಿನಿರತರು	೯೯೨	೫೨೬
೦೨.	ಕೃಷಿ	೨೯೪	೭೦
೦೩.	ಕೃಷಿ ಕೂಲಿ	೨೯೬	೩೨೨
೦೪.	ಪಶುಪಾಲನೆ, ಅರಣ್ಯ, ಮೀನುಗಾರಿಕೆ ಇತ್ಯಾದಿ	೧೭	೨೨
೦೫.	ಗಣಿಗಾರಿಕೆ, ಕ್ವಾರಿ ಕೆಲಸ	೩೮೫	೧೧೨
೦೬.	ವಸ್ತುಗಳ ತಯಾರಿ	೧೦೨	–
೦೭.	ಇತರೆ	೩೨	–

ಕೃಪೆ: ನಂದೂರಾಮ್:೨೦೦೭:ಪು.೨೪೦

ಕರ್ನಾಟಕ ಸೆಟ್ಲಮೆಂಟಿನಲ್ಲಿರುವ ಗಂಟಿ ಚೋರ ಜನರು ವಿವಿಧ ವೃತ್ತಿಗಳಲ್ಲಿ ತೊಡಗಿರುವುದನ್ನು ೨೦೦೮-೦೯ರಲ್ಲಿ ಗಣತಿ ಮಾಡಲಾಯಿತು.

ಸೆಟ್ಲಮೆಂಟಿನಲ್ಲಿ ೦-೧೭ ವಯೋಮಾನದವರು ೧೧೫೦ ಹಾಗೂ ೬೦ ವರ್ಷಕ್ಕಿಂತ ಮೇಲ್ಪಟ್ಟವರು ೧೫೫ ಒಟ್ಟು ೧೩೦೫ ಜನರಿದ್ದಾರೆ. ಸರ್ಕಾರದ ನಿಯಮದ ಪ್ರಕಾರ ಈ ವಯೋಮಾನದವರು ಯಾವುದೇ ವೃತ್ತಿಗಳಲ್ಲಿ ತೊಡಗಲು ಬರುವುದಿಲ್ಲ. ಹೀಗಾಗಿ ಇವರನ್ನು ಆಶ್ರಿತರ ಗುಂಪೆಂದು ಪರಿಗಣಿಸಲಾಗಿದೆ.

ಕೋಷ್ಟಕ ೫.೭: ಸಮೀಕ್ಷೆಗೊಳಪಟ್ಟ ಗಂಟಿಚೋರರ ಕಾಯಕಾರ್ಹವಲ್ಲದ ಗುಂಪು

ಕ್ರಸಂ.	ವಿವರ	ಪುರುಷ	ಮಹಿಳೆ	ಒಟ್ಟು
೦೧.	೦-೧೭	೬೦೨	೫೪೮	೧೧೫೦
೦೨.	೬೧+	೮೦	೭೫	೧೫೫

೧೮ ರಿಂದ ೬೦ ವರ್ಷದೊಳಗಿನ ಜನರನ್ನು ಯಾವುದೇ ವೃತ್ತಿಯನ್ನು ಮಾಡಲು ಯೋಗ್ಯರೆಂದು ಪರಿಗಣಿಸುವುದರಿಂದ ಅವರನ್ನು ಕಾಯಕಾರ್ಹಗುಂಪೆಂದು ಪರಿಗಣಿಸಲಾಗಿದೆ. ಇವರು ಒಟ್ಟು ಶೇ. ೫೫.೮೬ರಷ್ಟಿದ್ದಾರೆ. ಕಾಯಕಾರ್ಹ ಗುಂಪಿನಲ್ಲಿ ಕೇವಲ ಶೇ. ೫.೬೧ರಷ್ಟು ಜನ ಕೃಷಿಕರಾಗಿದ್ದಾರೆ. ಪ್ರಾಯಶಃ ಬ್ರಿಟಿಷರ ಕೃಷಿ ಮಾಡಲೆಂದು ಪುಕ್ಕಟೆಯಾಗಿ ಇವರ ಹಿರಿಯರಿಗೆ ಕೊಟ್ಟ ಒಣ ಬೇಸಾಯ ಭೂಮಿಯನ್ನು ಈ ಜನರೂ ಸಹ ಊಳುತ್ತಿದ್ದಾರೆ. ಮುಖ್ಯವಾಗಿ ಕೃಷಿಯಲ್ಲಿ ತೊಡಗಿದ ಪುರಷರು ಶೇ. ೫.೦೯ ಇದ್ದರೆ ಮಹಿಳೆಯರು ಶೇ. ೬.೪೩ ರಷ್ಟಿದ್ದಾರೆ. ಇದಕ್ಕೆ ಕಾರಣ ಒಣ ಬೇಸಾಯದಿಂದ ಹೆಚ್ಚಿನ ಲಾಭ ಸಿಗದೆಂದು ತಿಳಿದ ಪುರುಷರು ವಿವಿಧ ಕೂಲಿ ಇತ್ಯಾದಿ ಕೆಲಸಗಳಿಗೆ ತೆರಳುವುದರಿಂದ ಅವರ ಪ್ರಮಾಣ ಕಡಿಮೆ ಇದೆ. ಆದರೆ ಮಹಿಳೆಯರು ಮನೆ ಕೆಲಸದ ತರುವಾಯ ಕೃಷಿಯಲ್ಲಿ ತೊಡಗುತ್ತಾರೆ. ಹೀಗಾಗಿ ಇವರ ಪ್ರಮಾಣ ಹೆಚ್ಚಿದೆ.

ಕೃಷಿ ಕೂಲಿಗಳಲ್ಲಿ ಸಹ ಮಳೆಯರ ತಾವೇ ಅಧಿಕವಾಗಿದೆ. ಅವರು ಶೇ. ೬.೨೩ರಷ್ಟಿದ್ದರೆ ಪುರುಷರು ಕೇವಲ ಶೆ. ೨.೨೩ರಷ್ಟು ಮಾತ್ರ ಇದ್ದಾರೆ. ಒಟ್ಟಾರೆ ಒಟ್ಟು ಕೃಷಿ ಕೂಲಿಗರ ಪ್ರಮಾಣ ಶೇ. ೩.೭೬ರಷ್ಟು ಇದೆ. ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕೆಳಹಂತದ ನೌಕರಿಗಳನ್ನು ಮಾತ್ರ ಮಾಡುವ ಗಂಟಿ ಚೋರರು ಕೇವಲ ಶೇ. ೧.೩೯ರಷ್ಟಿದ್ದಾರೆ. ಇದರಲ್ಲಿ ಪುರುಷರ ಪ್ರಮಾಣ ಶೇ. ೧.೮೬ ಇದ್ದರೆ ಮಹಿಳೆಯ ಪ್ರಮಾಣ ಗಣನೀಯವಾಗಿ (ಶೇ. ೦.೬೦) ಕಡಿಮೆ ಇದೆ.

ಒಟ್ಟು ಆಟೋ ಚಾಲಕರು ಶೇ. ೧.೩೯ರಷ್ಟಿದ್ದಾರೆ. ಚಿಕ್ಕಪುಟ್ಟ ವ್ಯಾಪಾರದಲ್ಲಿ (ಐಸ್ ಕ್ಯಾಂಡಿ, ಚಿಲ್ಲರೆ ವ್ಯಾಪಾರ, ಪೆಟ್ಟಿ ಪಾಪ್, ಇತ್ಯಾದಿ) ತೊಡಗಿದವರ ಒಟ್ಟು ಪ್ರಮಾಣ ಶೇ. ೮.೬೮ರಷ್ಟಿದೆ. ಇದರಲ್ಲಿ ಪುರುಷ (೭.೪೬)ರಿಗಿಂತ ಮಹಿಳೆಯರು (ಶೇ. ೧೦.೬೬) ಹೆಚ್ಚಿನ ಪ್ರಮಾಣದಲ್ಲಿ ತೊಡಗಿರುವುದನ್ನು

ಕಾಣಬಹುದಾಗಿದೆ. ೬೪.೯೪ ಪಾತ್ರೆ ತೊಳೆಯುವ ಮಹಿಳೆಯರ ಪ್ರಮಾಣ ಒಟ್ಟು ಶೇ. ೨.೧೬ರಷ್ಟಿದೆ. ಬಡಿಗೆತನ ಮಾಡುವ ಪುರುಷರ ಒಟ್ಟು ಪ್ರಮಾಣ ಕೇವಲ ಶೇ. ೧.೦೧ರಷ್ಟಿದೆ.

ಇತರೆ ಕೂಲಿ, ಹಮಾಲಿ, ಮುಂತಾದ ಕಾರ್ಯಗಳಲ್ಲಿ ನಿರತರವಾದವರು ಒಟ್ಟು ಪ್ರಮಾಣ ಶೇ. ೭೬.೦೯ ಇದೆ. ಇದರಲ್ಲಿ ಪುರುಷರು ಶೇ. ೭೯.೮೫ ಹಾಗೂ ಮಹಿಳೆಯರು ಶೆ. ೭೦.೦೨ರಷ್ಟಿದ್ದಾರೆ. ಇವರಲ್ಲಿ ಒಟ್ಟು ನಿರುದ್ಯೋಗಿಗಳ ಪ್ರಮಾಣ ಶೇ. ೨೧.೧೯ರಷ್ಟಿದೆ. ಇದರಲ್ಲಿ ಪುರುಷರು ಶೇ. ೫.೧೮ರಷ್ಟಿದ್ದರೆ ಮಹಿಳೆಯರು ಶೇ. ३೮.೧೦ರಷ್ಟಿದ್ದಾರೆ. ಪ್ರಾಯಶಃ ಇದಕ್ಕೆ ಕಾರಣ ೧೮ ವರ್ಷ ತುಂಬಿದವರು ಸಹ ಇಂದು ಕಾಲೇಜ್ ಇತ್ಯಾದಿ ಸಂಸ್ಥೆಗಳಲ್ಲಿ ಓದಲು ಹೋಗುತ್ತಾರೆ. ಈ ರೀತಿ ಓದಲು ಹೋದ ಪುರುಷರು ಮತ್ತು ಮಹಿಳೆಯರು ಸಹ ನಿರುದ್ಯೋಗಿಗಳ ಸಾಲಿನಲ್ಲಿ ಸೇರುತ್ತಾರೆ. ಇನ್ನುಳಿದಂತೆ ಮಹಿಳೆಯರ ಮನೆಯಲ್ಲಿ ಗೃಹಕೃತ್ಯ ಕಾರ್ಯಗಳಲ್ಲಿ ತೊಡಗಿರುತ್ತಾರೆ. ಹೀಗಾಗಿ ಇವರಾರನ್ನು ನಿರುದ್ಯೋಗಿಗಳೆಂದು ಪರಿಗಣಿಸುವುದು ಅಷ್ಟು ಸಮರ್ಪಕವಾದುದಲ್ಲವೆನಿಸುತ್ತದೆ.

ಕೋಷ್ಟಕ ೫.೮: ಸಮೀಕ್ಷೆಗೊಳಪಟ್ಟ ಗಂಟಿಚೋರ್ ಸಮುದಾಯದ ಕಸಬುಗಳು

	ಪುರುಷ	ಸ್ತ್ರೀ	ಒಟ್ಟು
ಒಟ್ಟು ಜನಸಂಖ್ಯೆ	೧೫೩೦	೧೪೨೬	೨೯೫೬
೦-೧೭ ವಯಸ್ಸಿನ ಗುಂಪು	೬೦೨	೫೪೮	೧೧೫೦
೬೧ ವಯಸ್ಸಿನ ಮೇಲ್ಪಟ್ಟವರ ಗುಂಪು	೮೦	೭೫	೧೫೫
ಒಟ್ಟು ಆಶ್ರಿತ ಗುಂಪು	೬೮೨	೬೨೩	೧೩೦೫
ಕಾಯಕರ್ಹ ಗುಂಪು	೮೪೮	೮೦೩	೧೬೫೧
ಕೆಲಸಗಾರರ ಗುಂಪು	೮೦೪	೪೯೭	೧೩೦೧
ಕೃಷಿಕರು	೪೧	೩೨	೭೩
ಕೃಷಿಕಾರ್ಮಿಕರು	೧೮	೩೧	೪೯
ಸರಕಾರಿ ನೌಕರರು	೧೫	೩	೧೮
ಆಟೋಚಾಲಕರು	೧೪	೩	೧೭
ವ್ಯಾಪಾರಸ್ತರು	೬೦	೫೩	೧೧೩
ಪಾತ್ರೆತೊಳೆಯುವುದು	೧	೨೭	೨೮
ಬಡಗಿ	೧೩	೦	೧೩
ಇತರೆ ಉದ್ಯೋಗಿಗಳು	೬೪೨	೩೪೮	೯೯೦
ನಿರುದ್ಯೋಗಿಗಳು	೪೪	೩೦೬	೩೫೦

ಗಂಟಿಚೋರ ಸಮುದಾಯದವರು ಪಡೆದಿರುವ ಸರ್ಕಾರಿ ಸೌಲಭ್ಯಗಳು

ವಿಧವರೆಯರು ೩೪ ಜನರಿದ್ದಾರೆ. ಇದರಲ್ಲಿ ಒಟ್ಟು ಶೇ ೩೫.೨೯ರಷ್ಟು ಜನ ವಿಧವೆಯರು ವಿಧವಾವೇತನ ಪಡೆಯುತ್ತಿದ್ದಾರೆ. ಇನ್ನುಳಿದವರಲ್ಲಿ ಕೆಲವರು ತಿಳುವಳಿಕೆಯ ಕೊರತೆಯ ಕಾರಣದಿಂದಾಗಿಯೂ ವಿಧವಾ ವೇತನ ಪಡೆಯಲು ಸಾಧ್ಯವಾಗಿಲ್ಲ

೬೦ ಹಾಗೂ ಅದಕ್ಕಿಂತಲೂ ಮೇಲ್ಪಟ್ಟ ವಯೋಮಾನದ ಹಿರಿಯರಿಗೆ ವೃದ್ಧಾಪ್ಯ ವೇತನವನ್ನು ಸರ್ಕಾರ ನೀಡುತ್ತದೆ. ೬೦ ವರ್ಷಕ್ಕಿಂತ ಮೇಲ್ಪಟ್ಟು ವೃದ್ಧರಲ್ಲಿ ಪುರುಷರು ೮೦ ಹಾಗೂ ಮಹಿಳೆಯರು ೭೫ ಒಟ್ಟು ೧೫೫ ಜನರಿದ್ದಾರೆ. ಇವರಲ್ಲಿ ವೃದ್ಧಾಪ್ಯ ವೇತನ ಪಡೆಯುತ್ತಿರುವ ಪುರುಷರು ಶೇ. ೧೬.೨೫ರಷ್ಟಿದ್ದಾರೆ, ಮಹಿಳೆಯರು ಶೇ ೧೧.೯೯ರಷ್ಟಿದ್ದಾರೆ. ವೃದ್ಯಾಪ್ಯವೇತನ ಪಡೆಯುವವರ ಒಟ್ಟು ಪ್ರಮಾಣ ಶೇ ೧೪.೧೯ರಷ್ಟಿದೆ.

ಹಾಗೆ ಬಡತನ ರೇಖೆಗಿಂತ ಕೆಳಗಿರುವವರಿಗೆ ನೀಡುವ ಪಡಿತರ ಚೀಟಿ ಪಡೆದವರು ಶೇ ೫೫.೨೭, ಶೇ ೧೭.೭೮ ರಷ್ಟು ಭಾಗ್ಯ ಜ್ಯೋತಿ ಮುಂತಾದ ಯೋಜನೆಗಳ ಅಡಿಯಲ್ಲಿ ವಿದ್ಯುತ್ ಸೌಲಭ್ಯ, ಶೇ ४३ ರಷ್ಟು ಜನ ನಿರ್ಮಲ ಕರ್ನಾಟಕ ಯೋಜನೆಯಡಿ ದೊರೆತ ಶೌಚಾಲಯ ಸೌಚಾಲಯ ಸೌಲಭ್ಯ ಮುಂತಾದವುಗಳನ್ನು ಪಡೆದಿದ್ದಾರೆ. ಆದರೆ ಎಷ್ಟೋ ಸೆಟಲಮೆಂಟ್ ಜನರಿಗೆ ಇಂದಿಗೂ ಸ್ನಾನ ಗೃಹದಂತಹ ಕನಿಷ್ಟ ಸೌಲತ್ತುಗಳು ಇಲ್ಲವಾಗಿವೆ.

ಕೋಷ್ಟಕ ೫.೯ ಸಮೀಕ್ಷೆಗೊಳಪಟ್ಟ ಗಂಟಿಚೋರರ ಮಾಸಾಶನ ಪಟ್ಟಿ

	ಪುರುಷ	ಸ್ತ್ರೀ	ಒಟ್ಟು
ಒಟ್ಟು ಜನಸಂಖ್ಯೆ	೧೫೩೦	೧೪೨೬	೨೯೫೬
ವಿವಾಹಿತರು	೭೪೦	೭೪೨	೧೪೮೨
ವಿದುರ/ವಿದುವೆಯರು	೧೭	೩೪	೫೧
ವಿದವಾ ವೇತನದಾರರು	೧೨	–	೧೨
ವೃದ್ಧರ ಗುಂಪು	೮೦	೭೫	೧೫೫
ವೃದ್ಧಾಪ್ಯ ವೇತನ ಪಡೆಯುವವರ ಗುಂಪು	೧೩	೯	೨೨

ಮನೆಯ ಸ್ವರೂಪ

ಕುಟುಂಬಗಳು	೬೨೫
ಗುಡಾರ	೮
ಗುಡಿಸಲು	೫೪
ತಗಡು	೧೩೦
ಮಾಳಿಗೆ ಮನೆ	೧೯೮

ಆರ್‌ಸಿಸಿ ಮನೆ	೨೩
ಹೆಂಚಿನಮನೆ	೧೨೫
ಆಶ್ರಯ ಮನೆ	೭೦
ಬಾಡಿಗೆ ಮನೆ	೧೭

ಇತರೆ ಸೌಲಭ್ಯಗಳು

ಕುಟುಂಬಗಳು	೬೨೫
ಪಡಿತರ ಚೀಟಿದಾರರು	೧೭೪
ಸ್ವಂತ ವಿದ್ಯುತ್ ಹೊಂದಿದವರು	೧೦೮
ಸರಕಾರದಿಂದ ವಿದ್ಯುತ್ ಸಂಪರ್ಕ ಹೊಂದಿದವರು	೧೫
ಸಿಲೆಂಡರ್ ಹೊಂದಿದವರು	೧೨೩
ನಳ	೪೬

ಕೊರಮರಲ್ಲಿ ಆಶ್ರಿತರ ವಯೋಗುಂಪು

ಸರ್ಕಾರವು ೦-೧೭ರ ವಯೋಮಾನದವರನ್ನು ನೇಮಕಾತಿಗೆ ಅನರ್ಹವೆಂದು ಭಾವಿಸುತ್ತದೆ. ಹಾಗೆ ೬೦ವರ್ಷಕ್ಕಿಂತ ಮೇಲ್ಪಟ್ಟವರು ಕೆಲಸ ಮಾಡಲು ಸಾದ್ಯವಾಗದ ಅಸಹಾಯಕರೆಂದು ಪರಿಗಣಿಸಲಾಗುತ್ತದೆ. ಕೊರಮರಲ್ಲಿ ೦-೧೭ರೊಳಗಿನವರ ಪ್ರಮಾಣ ೪೮.೪೬ ಇದೆ. ಹಾಗೇ ೬೦ ವರ್ಷಕ್ಕಿಂತ ಮೇಲ್ಪಟ್ಟವರ ಪ್ರಮಾಣವು ೫.೯ ರಷ್ಟಿದೆ. ಅಂದರೆ ಕಾಯಕಾರ್ಹವಲ್ಲದ ಗುಂಪಿನ ಪ್ರಮಾಣವು ೫೩.೮೬ ಎಂದು ತಿಳಿದುಬರುತ್ತದೆ. ಇವರನ್ನು ಅವಲಂಬಿತ ಗುಂಪೆಂದು ಪರಿಗಣಿಸಲಾಗಿದೆ.

ಕೋಷ್ಟಕ ೫.೧೦: ಸಮೀಕ್ಷೆಗೊಳಪಟ್ಟ ಕೊರಮರ ಆಶ್ರಿತರ ವಯೋಗುಂಪು

ವಯೋಗುಂಪು	ಗಂಡು	ಹೆಣ್ಣು	ಒಟ್ಟು
೦-೧೭ ವಯಸ್ಸಿನ ಗುಂಪು	೧೩೬೧	೧೨೮೨	೨೬೪೩
೬೧ ವರ್ಷ ಮೆಲ್ಪಟ್ಟವರ ಗುಂಪು	೧೫೪	೧೪೦	೨೯೪

ಕೊರಮರ ಕಾಯಕಾರ್ಹ ವಯೋಗುಂಪು

೧೮-೬೦ರ ವಯೋಮಾನದೊಳಗಿನವರನ್ನು ಕಾಯಕಾರ್ಹ ಗುಂಪೆಂದು ಪರಿಗಣಿಸಲಾಗಿದೆ. ಅಂಥವರು ಕೊರಮರಲ್ಲಿ ೫೫.೬೩ರ ಪ್ರಮಾಣದಲ್ಲಿದ್ದಾರೆ. ಕಾಯಕಾರ್ಹರಲ್ಲಿ ಪುರುಷರು ೫೫.೭೬, ಹಾಗೂ ಮಹಿಳೆಯರು ೫೫.೬೦ರ ಪ್ರಮಾಣದಲ್ಲಿದ್ದಾರೆ.

ಕೋಷ್ಟಕ ೫.೧೧: ಸಮೀಕ್ಷೆಗೊಳಪಟ್ಟ ಕೊರಮರ ಕಾಯಕಾರ್ಹ ವಯೋಗುಂಪು

ವಯೋಗುಂಪು	ಗಂಡು	ಹೆಣ್ಣು	ಒಟ್ಟು
೧೮–೬೦ ವಯಸ್ಸಿನ ಗುಂಪು	೧೫೫೭	೧೪೭೭	೩೦೩೪

ಕೊರಮರಲ್ಲಿ ವಿವಿಧ ಕೆಲಸಗಳಲ್ಲಿ ತೊಡಗಿಕೊಂಡವರ ಪ್ರಮಾಣ

ಕೊರಮ ಸಮುದಾಯದಲ್ಲಿ ೧೮ ರಿಂದ ೬೦ ವಯೋಗುಂಪಿನವರನ್ನು ವಿಶೇಷವಾಗಿ ಕಾಯಕಾರ್ಹ ಗುಂಪೆಂದು ಪರಿಗಣಿಸಲಾಗಿದೆ. ಇವರಲ್ಲಿಯ ವಿವಿದ ವೃತ್ತಿಗಳನ್ನು ಅವಲಂಬಿಸಿರುವವರು ಹೀಗಿದ್ದಾರೆ. ಸರ್ಕಾರಿ ನೌಕರರು ಶೇ ೧.೪೪ ಇದ್ದಾರೆ. ಕೃಷಿಕರು ಶೇ ೫.೯೪, ಕೃಷಿ ಕಾರ್ಮಿಕರು ಶೇ ೯.೦೬, ಆಟೋ ಚಾಲಕರು ಶೇ ೪.೮೧, ವ್ಯಾಪಾರಸ್ಥರು ಶೇ ೭.೦೧, ಮುಸುರೆ ತಿಕ್ಕವ ಮಹಿಳೆಯರು ಶೇ ೬.೭೭, ಬಡಿಗೆ ಕೆಲಸಗಾರರು ಶೇ ೨.೨೬, ಇತರೆ ಉದ್ಯೋಗಿಗಳು ಶೇ ೬೨.೭೧ ಇದ್ದಾರೆ. ಇವರಲ್ಲಿ ನಿರುದ್ಯೋಗಿಗಳ ಪ್ರಮಾಣವು ಶೇ ೩೫.೬೭ ರಷ್ಟಿದೆ. ನಿರುದ್ಯೋಗಿಗಳಲ್ಲಿ ೧೮ ವರ್ಷ ಮೇಲ್ಪಟ್ಟ ವಿಧ್ಯಾರ್ಥಿಗಳು, ಗೃಹಿಣಿಯರೂ ಬರುತ್ತಾರೆ. ಗೃಹಿಣಿಯರು ಮನೆಕೆಲಸದಲ್ಲಿ ತೊಡಗಿದ್ದರೆ ವಿಧ್ಯಾರ್ಥಿಗಳು ಶಿಕ್ಷಣ ಪಡೆಯುವಲ್ಲಿ ತೊಡಗಿರುತ್ತಾರೆ. ಇವರನ್ನು ನಿರುದ್ಯೋಗಿಗಳೆಂದು ಪರಿಗಣಿಸುವುದು ಅಷ್ಟೇನೂ ಸಮರ್ಪಕವಲ್ಲ.

ಕೋಷ್ಟಕ ೫.೧೨: ಸಮೀಕ್ಷೆಗೊಳಪಟ್ಟ ಕೊರಮರ ವಿವಿಧ ಕೆಲಸಗಳಲ್ಲಿ ತೊಡಗಿಕೊಂಡವರ ಪ್ರಮಾಣ

ವಿವರ	ಪುರುಷ	ಸ್ತ್ರೀ	ಒಟ್ಟು
ಕೃಷಿಕರು	೬೮	೪೮	೧೧೬
ಕೃಷಿಕಾರ್ಮಿಕರು	೧೦೪	೭೩	೧೭೭
ಸರಕಾರಿ ನೌಕರರು	೨೧	೦೭	೨೮
ಆಟೋಚಾಲಕರು	೯೪	೦೦	೯೪
ವ್ಯಾಪಾರಸ್ತರು	೧೨೫	೧೨	೧೩೭
ಪಾತ್ರೆ ತೊಳೆಯುವವರು	೦೦	೧೩೨	೧೩೨
ಬಡಗಿ ಕೆಲಸಗಾರರು	೪೪	–	೪೪
ಇತರೆ ಉದ್ಯೋಗಿಗಳು	೪೮೨	೬೦೦	೧೦೮೨

ಕೃಷಿ

ಕೆಲವು ಸೆಟಲಮೆಂಟ್‌ಗಳಲ್ಲಿ ನೆಲೆಸಿರುವ ಕೊರಮರಿಗೆ ಹಿಂದೆ ಬ್ರಿಟೀಷ್ ಸರ್ಕಾರವೇ ಕೃಷಿ ಭೂಮಿಯನ್ನು ಉಂಬಳಿಯಾಗಿ ಬಿಟ್ಟು ಕೊಟ್ಟಿದೆ ಹಾಗೇ ಆರ್ಥಿಕವಾಗಿ ಸುಧಾರಿಸಿದ ಕೆಲವು. ಕೊರಮರು ಭೂಮಿಯನ್ನು ನಂತರ ಕೊಂಡಿರುವ ಉದಾಹರಣೆಗಳೂ ಉಂಟು. ಹೀಗಾಗಿ ಇವರಲ್ಲಿ ಕೆಲವರು ವ್ಯವಸಾಯವನ್ನು ಅವಲಂಬಿಸಿದ್ದಾರೆ.

ಭೂರಹಿತ ಕುಟುಂಬಗಳು ತಾವು ನೆಲೆಯೂರಿದ ನಗರಗಳ ಮಿಲ್ ಹಾಗೂ ಇತರ ಕಡೆ ದಿನಗೂಲಿಗಳಾಗಿ ಕೆಲಸಕ್ಕೆ ಹೋಗುತ್ತಾರೆ. ನಗರ ಪ್ರದೇಶಗಳಲ್ಲಿ ನೆಲೆಸಿರುವುದರಿಂದ ಒಂದಲ್ಲಾ ಒಂದು ದಿನಗೂಲಿ ವರ್ಷದ ಎಲ್ಲಾ ತಿಂಗಳುಗಳಲ್ಲಿ ದೊರೆಯುವುದು ಕಂಡು ಬರುತ್ತದೆ.

ಪಾರ್ಧಿ

ಮಾನವ ಸಮಾಜವು ಸಾಮಾಜಿಕ ಸಂಬಂಧಗಳ ಬಲೆ. ಇದನ್ನು 'ಸಾಮಾಜಿಕ ವ್ಯವಸ್ಥೆ' ಎಂದು ಕರೆಯಬಹುದಾಗಿದೆ. ಪಾರ್ಧಿ ಬುಡಕಟ್ಟಿನ ಜೀವನ ವಿಧಾನ, ಲೋಕರೂಢಿ, ಸಂಪ್ರದಾಯ, ವೃತ್ತಿ, ಬೆಡಗು, ವಿವಾಹ, ಕುಟುಂಬ, ನ್ಯಾಯ ಪದ್ಧತಿಗಳು ಸಾಮಾಜಿಕ ನಿಯಂತ್ರಣವನ್ನೊಳಗೊಂಡ ಕ್ರಮಬದ್ಧವಾದ ವ್ಯವಸ್ಥೆಯಾಗಿದೆ. ಈ ಸಾಮಾಜಿಕ ವ್ಯವಸ್ಥೆ ಯಲ್ಲಿ ಇತರ ಹಲವಾರು ಒಳ ವ್ಯವಸ್ಥೆಗಳಿದ್ದು, ಇವೆಲ್ಲಮೂ ತನ್ನದೇ ಆದ ವಿಶಿಷ್ಟ ಕಾರ್ಯಗಳನ್ನು ನಿರ್ವಹಿಸುತ್ತವೆ.

ಪಾರ್ಧಿ ಬುಡಕಟ್ಟಿನ ಜೀವನ ವಿಧಾನ, ವೇಷ-ಭೂಷಣ, ಆಹಾರ, ವಸತಿ, ವೃತ್ತಿ, ಬೆಡಗು, ರಕ್ತಸಂಬಂಧ, ಕುಟುಂಬ, ನ್ಯಾಯ ಪದ್ಧತಿ ಮತ್ತು ವಿಧಿ-ನಿಷೇಧಗಳನ್ನು ಮಾನವಶಾಸ್ತ್ರೀಯ ದೃಷ್ಟಿಕೋನದಿಂದ ನೋಡಲಾಗಿದೆ. ಭೌಗೋಳಿಕ ಹಿನ್ನೆಲೆಯಲ್ಲಿ ಇವರ ಆರ್ಥಿಕ ವ್ಯವಸ್ಥೆ ಅವಲಂಬಿಸಿದೆ. ಚಡ್ಡಿ ಚಲ್ಲಣ ತೊಟ್ಟು, ಮಾತೃಭಾಷೆಯನ್ನೇ ಅಪಭ್ರಂಶ ವಾಗಿ ಮಾತನಾಡುವ, ಗುಡಿಸಲುಗಳಲ್ಲಿ ವಾಸಿಸುವ, ಬೇಟೆಗಾರರಾಗಿ ಗುಡಿಕಟ್ಟೆ ಮತ್ತು ಕಟ್ಟೆಮನೆಗಳಲ್ಲಿ ನ್ಯಾಯ ತೀರ್ಮಾನ ಮಾಡಿಕೊಳ್ಳುವ, ಬಡತನದ ಬೇಗೆಯಲ್ಲಿ ಬಳಲುತ್ತಿರುವ, ಪ್ರಾಚೀನ ಕಾಲದ ಬುಡಕಟ್ಟು ಸಂಸ್ಕೃತಿಯನ್ನು ಉಳಿಸಿಕೊಂಡಿರುವ, ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ ಮತ್ತು ನಗರೀಕರಣಕ್ಕೆ ಒಳಗಾಗದಂಥ ಸಾಮಾಜಿಕ ವ್ಯವಸ್ಥೆ ಮತ್ತು ಜೀವನ ವಿಧಾನ ಪ್ರಸ್ತುತ ಪಾರ್ಧಿಯರಲ್ಲಿ ಕಂಡು ಬರುತ್ತದೆ.

ಆರ್ಥಿಕ ಜೀವನ : ಇವರು ರಾಜ್ಯದ ಕೆಲವು ಕಡೆ ಮೀನುಗಾರಿಕೆ, ಪ್ರಾಣಿ, ಪಕ್ಷಿಗಳ ಬೇಟೆ, ಹಂದಿ, ಕುರಿ ಮೇಕೆಗಳ ಸಾಕಾಣಿಕೆ, ಗೋರಂಜನೆ, ಕರಿಮಣಿಗಳ ವ್ಯಾಪಾರ, ಶ್ರೀಮಂತ ರೈತರ ಹೊಲಗಳಲ್ಲಿ ಕೂಲಿಕಾರ್ಮಿಕರಾಗಿ ದುಡಿಯುವುದು, ಭಟ್ಟಿಸಾರಾಯಿ ಮಾಡುವುದು ಇವರ ವೃತ್ತಿಗಳು. ಅಬಕಾರಿ ಇಲಾಖೆ ಹಾಗೂ ಸರ್ಕಾರದ ಕಾನೂನುಕ್ರಮಗಳಿಂದ ಅನೇಕ ಕಡೆ ಇಂದು ಭಟ್ಟಿಸರಾಯಿ ನಿಂತುಹೋಗಿದೆ. ಬದಲಾದ ಕಾಲಕ್ಕನುಗುಣವಾಗಿ ಇತ್ತೀಚಿಗೆ ಬೇರೆ ಬೇರೆ ಸಮುದಾಯಗಳಂತೆ ಇವರೂ ಸಹ ತಮ್ಮ ಮೂಲ ಕಸುಬುಗಳನ್ನು ಬಿಡುತ್ತಾ ಇತರರಂತೆ ಬೇರೆ ಬೇರೆ ಉದ್ಯೋಗಗಳಲ್ಲಿ ಸಹ ತೊಡಗಿಸಿಕೊಳ್ಳುತ್ತಲಿದ್ದಾರೆ. ಅಪರೂಪ ವೆನ್ನುವಂತೆ ಅಲ್ಲೊಬ್ಬ ಇಲ್ಲೊಬ್ಬ ಸರ್ಕಾರದ ಬೇರೆ ಬೇರೆ ಇಲಾಖೆಗಳಲ್ಲಿಯು ಸರ್ಕಾರಿ ನೌಕರರಾಗಿ ಕಾರ್ಯ ಮಾಡುತ್ತಿರುವುದು ಕಂಡುಬರುತ್ತಿದೆ.

ಇದೆಲ್ಲದರ ಜೊತೆಗೆ ಇವರ ಗಿಡಮೂಲಿಕೆ ಔಷಧಗಳ ಜನಕರೇ ಆಗಿದ್ದಾರೆ. ಕಾಡು ಉತ್ಪನ್ನಗಳಾದ ಗೆಡ್ಡೆಗೆಣಸು ಹಾಗೂ ಜೇನುಗಳನ್ನು ಸಹ ಮಾರಾಟ ಮಾಡಿ ತಮ್ಮ ಆರ್ಥಿಕ ಜೀವನಕ್ಕೆ ನೆರವಾಗುವರು.

ಕಾಯಕಾರ್ಹವಲ್ಲದ ವಯೋಗುಂಪು

ಸರ್ಕಾರವು ಸಾಮಾನ್ಯವಾಗಿ ೦-೧೭ರ ವಯೋಮಾನದವರನ್ನು ನೇಮಕಾತಿಗಳಿಗೆ ಅನರ್ಹವೆಂದು ಮತ್ತು ೬೦ ವರ್ಷ ದಾಟಿದವರನ್ನು ವದ್ಧರೆಂದು ಪರಿಗಣಿಸಿ ಕಾಯಕರ್ಹವಲ್ಲದ ಗುಂಪೆಂದು ಪರಿಗಣಿಸಿದೆ. ಪಾರ್ಧಿಯರಲ್ಲಿ ೧೭ ವರ್ಷ ಒಳಗಿನವರ ಸಂಖ್ಯೆ ೩೭೮೯. ಹಾಗೆಯೇ ೬೧ ವರ್ಷಕ್ಕಿಂತ ಮೇಲ್ಪಟ್ಟವರ ಸಂಖ್ಯೆ ೩೪೨. ಹೀಗಾಗಿ ಕಾಯಕರ್ಹವಲ್ಲದ ಜನಸಂಖ್ಯೆ ೪೧೩೧ ಎಂದು ಪ್ರಸ್ತುತ ಗಣತಿಯಲ್ಲಿ ದಾಖಲಾಗಿದೆ. ಇವರನ್ನು ಅವಲಂಬಿತ ಗುಂಪೆಂದು ಕರೆಯಬಹುದು.

ಕೋಷ್ಟಕ ೫.೧೩: ಸಮೀಕ್ಷೆಗೊಳಪಟ್ಟ ಪಾರ್ಧಿಯರ ಆಶ್ರಿತರ ವಯೋಗುಂಪು

ಸಂ.	ವಯೋಗುಂಪು	ಪುರುಷರು	ಮಹಿಳೆಯರು	ಒಟ್ಟು
೧.	೦-೧೭ ವರ್ಷ	೧೯೭೯	೧೮೧೦	೩೭೮೯
೨.	೬೧ ವರ್ಷ ಮೇಲ್ಪಟ್ಟವರು	೧೪೮	೧೯೪	೩೪೨
	ಒಟ್ಟು	೨೧೨೭	೨೦೦೪	೪೧೩೧

ಕಾಯಕರ್ಹ ವಯೋಗುಂಪು

೧೮ ರಿಂದ ೬೦ರ ವಯೋಮಾನದೊಳಗಿನವರನ್ನು ಕಾಯಕರ್ಹ ಗುಂಪೆಂದು ಪರಿಗಣಿಸಲಾಗಿದೆ. ಅಂತಹವರು ಪಾರ್ಧಿಯರಲ್ಲಿ ೪೯೨೦ ಜನರಿದ್ದಾರೆ. ಇದರಲ್ಲಿ ಪುರುಷರು ೨೪೦೬ ಮತ್ತು ಮಹಿಳೆಯರು ೨೫೧೪ ಸೇರಿರುವರು.

ಕೋಷ್ಟಕ ೫.೧೪: ಸಮೀಕ್ಷೆಗೊಳಪಟ್ಟ ಪಾರ್ಧಿಯರಲ್ಲಿಯ ಕಾಯಕರ್ಹ ವಯೋಗುಂಪು

ವಯೋಗುಂಪು	ಗಂಡು	ಹೆಣ್ಣು	ಒಟ್ಟು
೦–೧೭ ವಯಸ್ಸಿನ ಗುಂಪು	೧೪೧೬	೧೩೫೮	೨೭೭೪
೬೧ ವಯಸ್ಸಿನ ಮೆಲ್ಪಟ್ಟವರ ಗುಂಪು	೯೫	೧೦೯	೨೦೪

ಪಾರ್ಧಿಯರಲ್ಲಿಯ ೧೮ ರಿಂದ ೪೦ ವಯೋಗುಂಪಿನವರನ್ನು ವಿಶೇಷವಾಗಿ ಕಾಯಕರ್ಹ ಗುಂಪೆಂದು ಪರಿಗಣಿಸಲಾಗಿದೆ. ಇವರಲ್ಲಿಯ ವಿವಿಧ ವೃತ್ತಿಗಳನ್ನು ಅವಲಂಬಿಸಿರುವವರು ಹೀಗಿದ್ದಾರೆ. ಕೃಷಿಕರು ಶೇ. ೫.೦೮ರಷ್ಟು, ಕೃಷಿಕಾರ್ಮಿಕರು ಶೇ. ೩೨.೯೮ರಷ್ಟು, ವ್ಯಾಪರಸ್ಥರು ಶೇ. ೪.೯೭ರಷ್ಟು, ಸರ್ಕಾರಿ ನೌಕರಿಯಲ್ಲಿ ಶೇ. ೧.೭೪ರಷ್ಟು, ಮೀನುಗಾರಿಕೆ ಯಲ್ಲಿ ಶೇ. ೧.೪೦ರಷ್ಟು, ಧಾರ್ಮಿಕ ಭಿಕ್ಷಾಟನೆಯಲ್ಲಿ ಶೇ. ೩.೩೯ರಷ್ಟು ಹಾಗೂ ಇತರೆ ಕೆಲಸಗಳಲ್ಲಿ ಶೇ. ೩೨.೮೦ರಷ್ಟಿದ್ದು ಇತರೆ ಕೆಲಸಗಳಾದ ಬೇಟೆ, ಹೊಲಕಾಯುವುದು, ಗೀಡಮೂಲಿಕೆ ಔಷಧಿ, ಪಶುಪಾಲನೆ, ವಾದ್ಯಗಳನ್ನು ಬಾರಿಸುವುದು, ಕಟ್ಟಡ ಕೆಲಸಗಳು, ಗಾರೆ ಕೆಲಸ, ಮೇಕಾನಿಕ್, ಪೆಂಟಿಂಗ್ ಇತ್ಯಾದಿಗಳಲ್ಲಿ ತೊಡಗಿಸಿಕೊಂಡಿರುವುದು ಇವರ ಆರ್ಥಿಕ ಅಭದ್ರತೆಯನ್ನು ಬೆರಳುಮಾಡಿ ತೋರಿಸುತ್ತದೆ.

ಕೋಷ್ಟಕ ೫.೧೫: ಸಮೀಕ್ಷೆಗೊಳಪಟ್ಟ ಪಾರ್ಧಿಯರು ಕೆಲಸಗಳಲ್ಲಿ ತೊಡಗಿಕೊಂಡಿರುವ ಪ್ರಮಾಣ

ಸಂ.	ಕಾಯಕಗಳು	ಪುರುಷರು	ಮಹಿಳೆಯರು	ಒಟ್ಟು
೧.	ಕೃಷಿಕರು	೧೧೧	೫೧	೧೬೨
೨.	ಕೃಷಿಕಾರ್ಮಿಕರು	೪೭೨	೩೪೦	೮೧೨
೩.	ಸರಕಾರಿ ನೌಕರರು	೨೫	೬	೩೧
೪.	ಆಟೋಚಾಲಕರು	೮೫	–	೮೫
೫.	ವ್ಯಾಪಾರಸ್ಥರು	೨೭	೫	೩೨
೬.	ಪಾತ್ರೆ ತೊಳೆಯುವುದು	–	೧೨೨	೧೨೨
೭.	ಕಾರಪೇಂಟರ್	೧೫	–	೧೫

ಕಸುಬಿನ ಬಗೆಗೆ ನಂಬಿಕೆಗಳು: ಪಾರ್ಧಿಯರಲ್ಲಿ ಎಷ್ಟೇ ಕಷ್ಟಬಂದರೂ ಯಾವುದೇ ಕಾರಣಕ್ಕೂ ಬೇರೆಯವರಲ್ಲಿ ಜೀತಕ್ಕೆ ದುಡಿಯುವುದಿಲ್ಲ. ಜೀತಕ್ಕಿದ್ದರೆ ಮಾಲಿಕರು ಎಂಥ ಕೆಲಸ ಹೇಳಿದರು ಮಾಡಲೇಬೇಕು. ಅಂಥಹ ವ್ಯಕ್ತಿಯನ್ನು ಪಾರ್ಧಿ ಸಮಾಜವು ಕೀಳಾಗಿ ಕಾಣುವುದು.

ಕೃಷಿ, ಭೂ ಒಡೆತನ : ರಾಜ್ಯದ ಪಾರ್ಧಿಯರಿಗೆ ಭೂಮಿಯ ಮೇಲಿನ ಒಡೆತನ ಸಿಕ್ಕಿರು ವುದಿಲ್ಲ. ಆದರೆ ಕೆಲವು ಕಡೆ ತುಂಡು ಭೂಮಿಯಿದ್ದರು ಸಹ ಬಂಜರು ಭೂಮಿಯಾಗಿರುತ್ತದೆ. ಹೀಗಾಗಿ ಇವರಲ್ಲಿ ಕೃಷಿ ಮತ್ತು ಭೂ ಒಡೆತನ ತುಂಬಾ ಅಪರೂಪವೇ ಸರಿ.

ಚಪ್ಪರಬಂದರ ವೃತ್ತಿಗಳು

ಮೂಲತಃ ಅಲೆಮಾರಿ ಬುಡಕಟ್ಟಿನವರಾದ ಚಪ್ಪರಬಂದರು ಅರಣ್ಯವಾಸಿಗಳು, ಯಾವುದೋ ಒಂದು ಕಾಲಕ್ಕೆ ತಮ್ಮ ಮೂಲ ನೆಲೆಯನ್ನು ಬಿಟ್ಟು ದಕ್ಷಿಣ ಭಾರತದತ್ತ ವಲಸೆ ಬಂದ ಇವರು ಮೊಘಲರ ಸೈನಿಕರಿಗೆ ಚಪ್ಪರ, ಡೇರೆ ಹಾಕುವ ಕಾಯಕದಲ್ಲಿ ತೊಡಗಿದ್ದವರಂತೆ, ಮೊಘಲ್ ಅರಸರ ಪತನಾನಂತರ ಅನ್ಯಮಾರ್ಗವಿಲ್ಲದೆ ಬಿಕ್ಷಾಟನೆ, ನಕಲಿ ನಾಣ್ಯ ತಯಾರಿಕೆ, ಮುಂತಾದ ಕಾಯಕಗಳಲ್ಲಿ ತೊಡಗಿದರು ಎಂಬುದನ್ನು ವಕ್ತೃಗಳು ತಿಳಿಸುತ್ತಾರೆ. ಇದಾದ ತರುವಾಯ ಬ್ರಿಟೀಷರು ಅಪರಾಧಿ ಬುಡಕಟ್ಟುಗಳಿಗಾಗಿಯೇ ನಿರ್ಮಿಸಿದ ವಸಾಹತುಗಳಲ್ಲಿ ಇವರನ್ನು ಬಂಧಿಸತೊಡಗಿದರು. ಬ್ರಿಟೀಷರ ಈ ಕಾರ್ಯದ ತರುವಾಯ ಇವರ ವೃತ್ತಿಜೀವನ ಬೇರೆಯದೇ ಸ್ವರೂಪವನ್ನು ಪಡೆಯಿತು.

ಪ್ರಸ್ತುತ ಎಲ್ಲಾ ಕರ್ನಾಟಕದ ಸೆಟ್ಲಮೆಂಟ್‌ಗಳನ್ನು ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡು ಕ್ಷೇತ್ರ ಕಾರ್ಯ ನಡೆಸಿದ ತರುವಾಯ ಈ ಸಮುದಾಯದವರ ವೃತ್ತಿಗಳ ಕುರಿತು ಒಂದು ಸ್ಪಷ್ಟ ಚಿತ್ರಣ ದೊರೆಯಿತು.

ಇವರಲ್ಲಿ ಆಶ್ರಿತರ ಗುಂಪು (೦-೧೭, ಮತ್ತು ೬೧ ಮೇಲ್ಪಟ್ಟವರು) ವಯೋಮಾನದವರ ಪ್ರಮಾಣ ಒಟ್ಟು ಸೇ. ೪೮.೧೩ರಷ್ಟಿದೆ.

ಇವರ ಹೊರತಾಗಿ ಕಾಯಕಾರ್ಹರ ಒಟ್ಟು ಪ್ರಮಾಣ ೫೧.೮೭ರಷ್ಟಿದೆ. ಆದರೆ ವಿವಿಧ ಕೆಲಸಗಳಲ್ಲಿ ತೊಡಗಿದವರ ಪ್ರಮಾಣ ಒಟ್ಟು ಶೇ. ೭೨.೬೭ರಷ್ಟಿದೆ. ಅಂದರೆ ವೃತ್ತಿಗಳನ್ನು ನಿರ್ವಹಿಸಲು ಯೋಗ್ಯವಾದವರಿಗಿಂತ ಹೆಚ್ಚಿನ ಪ್ರಮಾಣದಲ್ಲಿಯೇ ಜನರು ಕೆಲಸಗಳನ್ನು ಮಾಡುತ್ತಿರುವುದು ಕಂಡುಬರುತ್ತದೆ. ಇವರಲ್ಲಿ ಕೃಷಿಕರ ಒಟ್ಟು ಪ್ರಮಾಣ ಕೇವಲ ಶೇ. ೨.೯೧ರಷ್ಟು ಮಾತ್ರ ಇದೆ.

ಕೃಷಿ ಕೂಲಿ ಕಾರ್ಮಿಕರು ಪುರುಷರಲ್ಲಿ ಶೇ. ೩.೮೬ ಹಾಗೂ ಮಹಿಳೆಯರಲ್ಲಿ ಶೇ. ೭.೫೨ ರಷ್ಟಿದ್ದು ಇವರ ಒಟ್ಟು ಪ್ರಮಾಣವು ಶೇ. ೫.೧೮ ರಷ್ಟು ಇದೆ. ಕೃಷಿ ಕೂಲಿ ಕಾರ್ಮಿಕರಲ್ಲಿ ಮಹಿಳೆಯರ ಸಾಲು ಹೆಚ್ಚಾಗಿರುವುದು ಕಂಡುಬರುತ್ತದೆ.

ವಿವಿಧ ಇಲಾಖೆಗಳಲ್ಲಿ ಸರ್ಕಾರಿ ದ್ವಿತೀಯ ದರ್ಜೆ ಸಹಾಯಕ ಪ್ರಾಥಮಿ ಶಾಲಾ ಶಿಕ್ಷಕ, ಪೋಲೀಸ್ ಮುಂತಾದ ಸಾಕಂಗಳನ್ನು ಮಾಡುವವರ ಒಟ್ಟು ಪ್ರಮಾಣವು ಕೇವಲ ಶೇ. ೧.೭೮ರಷ್ಟು ಇದೆ.

ಇವರಲ್ಲಿ ಪುರುಷ ಶೆ. ೨.೩೨ ಇದ್ದರೆ ಮಹಿಳೆಯರು ಕೇವಲ ಶೇ. ೦.೮೮ ರಷ್ಟು ಕಂಡುಬರುತ್ತಾರೆ.

ತಾವು ನೆಲೆಸಿದ ನಗರಗಳಲ್ಲಿ ಆಟೋ ಚಾಲಕರಾಗಿ ಕೆಲವು ಯುವಕರು ಇಂದು ಕಾರ್ಯನಿರ್ವಸುತ್ತಿದ್ದಾರೆ. ಅವರ ಪ್ರಮಾಣವು ಒಟ್ಟು ಶೇ. ೨.೪೩ರಷ್ಟಿದೆ.

ಚಿಕ್ಕಪುಟ್ಟ ಡಬ್ಬಿ ಅಂಗಡಿ ಇತ್ಯಾದಿಗಳನ್ನಿರಿಸಿಕೊಂಡು ವ್ಯಾಪಾರ ಮಾಡುವವರು ಪುರುಷರಲ್ಲಿ ಶೇ. ೧.೩೬ ಹಾಗೂ ಮಹಿಳೆಯರಲ್ಲಿ ಶೇ. ೧.೭೬ ಒಟ್ಟು ಪ್ರಮಾಣ ಶೇ. ೧.೬೩ರಷ್ಟು ಮಾತ್ರ ಕಂಡುಬರುತ್ತದೆ.

ಚಪ್ಪರಬಂದ್ ಮಹಿಳೆಯರು ನಗರದ ವಿವಿಧ ಮನೆಗಳೆ ಹೋಗಿ ಪಾತ್ರೆ ತೊಳೆಯುವ ಕೆಲ ಮಾಡುತ್ತಾರೆ. ಅಂಥವರ ಪ್ರಮಾಣ ಒಟ್ಟು ಶೇ. ೭.೩೦ಯಷ್ಟಿದೆ. ಹಾಗೆ ಪುರುಷರಲ್ಲಿ ಕೆಲವರು ಬಡಿತನ ವೃತ್ತಿ ಮಾಡುತ್ತಾರೆ. ಅವರ ಪ್ರಮಾಣವು ಒಟ್ಟು ಶೇ. ೪.೦೫ರಷ್ಟು ಇದೆ. ಇವರ ಹೊರತಾಗಿ ಕಟ್ಟಡ ನಿರ್ಮಾಣ ಕೆಲಸ, ಮಿಲ್‌ಗಳಲ್ಲಿ ದಿನಗೂಲಿ ನೌಕರಿ ಇತ್ಯಾದಿ ಕೆಲಸಗಳಲ್ಲಿ ತೊಡಗಿದವರ ಪ್ರಮಾಣ ಅತ್ಯಧಿಕ (ಶೇ. ೭೪.೭೧) ವಾಗಿದೆ. ಇವರಲ್ಲಿ ಪುರುಷರು ಶೆ. ೭೯.೭೯ ಹಾಗೂ ಮಹಿಳೆಯರು ಶೇ. ೬೫.೯೨ರಷ್ಟು ಕಂಡುಬರುತ್ತಾರೆ.

ಆದರೆ ಕಾಯಕಾರ್ಹರಲ್ಲಿಯೇ ಒಟ್ಟು ಶೇ. ೨೭.೩೩ ರಷ್ಟು ಪ್ರಮಾಣದ ಜನ ನಿರುದ್ಯೋಗಿಗಳಾಗಿದ್ದಾರೆ. ಇವರಲ್ಲಿ ಪುರುಷರು ಶೇ. ೯.೯೧ರಷ್ಟು ಹಾಗೂ ಮಹಿಳೆಯರು ಶೇ. ೪೫.೫೪ರಷ್ಟಿದ್ದಾರೆ. ಓದಿದ ಕೆಲವು ಯುವಕರು ಸರ್ಕಾರಿ ಉದ್ಯೋಗದ ಕಡೆಗೆ ಮುಖಮಾಡಿ ಬೇರೆ ಕೆಲಸಗಳ ಕಡೆಗೆ ಮನಸ್ಸು ಕೊಡದೇ ಇರುವುದರಿಂದ ಪುರುಷರಲ್ಲಿ ಈ ನಿರುದ್ಯೋಗ ಸಮಸ್ಯೆ ಕಾಡಿದರೆ ಮಹಿಳೆಯರಲ್ಲಿ ಬಹುತೇಕ ಜನ ಗೃಹಕೃತ್ಯಗಳಲ್ಲಿ ತೊಡಗಿದವರೆ ಆಗಿದ್ದಾರೆ. ಹೊರಗೆ ಆರ್ಥಿಕ ಮೂಲಗಳನ್ನು ಹುಡುಕಿ ಕೆಲಸ ನಿರ್ವಹಿಸದೇ ಇದ್ದಾಗ್ಯೂ ಕೂಡ ಇವರು ಮನೆಯಲ್ಲಿಯೇ ಕೆಲಸ ಮಾಡುತ್ತಾರೆ. ಒಂದರ್ಥದಲ್ಲಿ ಮಹಿಳೆಯರು ನಿರುದ್ಯೋಗಿಗಳೇ ಅಲ್ಲವೆನ್ನಬಹುದು.

ಕಂಜರಭಾಟ

ಮೂಲ ಕಸಬು : ಕಂಜರಭಾಟರ ಆರ್ಥಿಕ ಪರಿಸ್ಥಿತಿ ಚಿಂತಾಜನಕವಾಗಿದೆ. ಈ ಜನ ಸಂಚಾರಿಗಳು, ಹಳ್ಳಿ ಹಳ್ಳಿಗೆ ಸಂಚಾರಿಸಿ ತಮ್ಮ ಜೀವನ ಸಾಗಿಸುವರು. ಭಿಕ್ಷಾಟನೆ, ಸೆರೆ, ತಯಾರಿಸುವುದು, ಕೂಲಿ, ರೀಕ್ಷಾ ಚಾಲಕರು ಮೋಡಕಾ ಸಾಮಾನು ವ್ಯಾಪಾರ ಮುಂತಾದ ಕಸಬುಗಳನ್ನು ಮಾಡುತ್ತಾರೆ.

ಕೋಷ್ಟಕ ೫.೧೬: ಸಮೀಕ್ಷೆಗೊಳಪಟ್ಟ ಕಂಜರಭಾಟರ ಕಾಯಕಾರ್ಹವಲ್ಲದ ವಯೋಗುಂಪು

ವಯೋಗುಂಪು	ಗಂಡು	ಹೆಣ್ಣು	ಒಟ್ಟು
೦-೧೭ ವಯಸ್ಸಿನ ಗುಂಪು	೧೪೪	೧೧೭	೨೬೧
೬೧ ವಯಸ್ಸಿನ ಮೆಲ್ಪಟ್ಟವರ ಗುಂಪು	೧೩	೭	೨೦
ಒಟ್ಟು	೧೫೭	೧೨೪	೨೮೧

ಇನ್ನು ೧೮ ರಿಂದ ೬೦ರ ವಯೋಮಾನದೊಳಗಿನವರು ಯಾವುದೇ ಕೆಲಸಕಾರ್ಯಗಳಲ್ಲಿ ನಿರತರಾಗಿರಬಹುದು ಹಾಗೂ ಯಾವುದೇ ವೃತ್ತಿಯಲ್ಲಿ ತೊಡಗಲು ಯೋಗ್ಯರೆಂದು ಭಾವಿಸಲಾಗಿದೆ. ಅಂತಹ ವಯೋಮಾನದವರು ಒಟ್ಟಾರೆಯಾಗಿ ೧೦೩೫ ಜನರಿದ್ದಾರೆ. ಅದರಲ್ಲಿ ಪುರುಷರು ೫೧೮ರಷ್ಟಿದ್ದರೆ, ಮಹಿಳೆಯರು ೫೫೫ ರಷ್ಟಿದ್ದಾರೆ.

ವಿವಿಧ ವೃತ್ತಿಗಳನ್ನು ಮಾಡುವವರು ಈ ಸಮುದಾಯದಲ್ಲಿ ಈ ಕೆಳಗಿನಂತಿದ್ದಾರೆ. ಸರ್ಕಾರಿ ನೌಕರರಲ್ಲಿ ಪುರುಷರು ೨೪ ಇದ್ದು, ಮಹಿಳೆಯರು ಇರುವುದಿಲ್ಲ. ಇವರಲ್ಲಿ ಕೃಷಿಕರಾಗಲಿ, ಕೃಷಿಕೂಲಿ ಕಾರ್ಮಿಕರಾಗಲಿ ಕಂಡುಬರುವುದಿಲ್ಲ. ಬಾಟಲಿ ಚೂರು, ಪ್ಲಾಸ್ಟಿಕ್ ಇತ್ಯಾದಿ ಅನುಪಯುಕ್ತ ವಸ್ತುಗನ್ನು ಆರಿಸುವವರು, ಮುಂತಾದ ಕೆಲಸಗಳಲ್ಲಿ ತೊಡಗಿದ ಇತರರಲ್ಲಿ ಪುರುಷರ ಸಂಖ್ಯೆ ೪೩ ರಷ್ಟಿದ್ದಾರೆ. ಮಹಿಳೆಯರ ಸಂಖ್ಯೆ ೫೮ ರಷ್ಟಿದ್ದಾರೆ. ಅಂದರೆ ಒಟ್ಟು ೧೦೧ ಜನ ಇತರ ಕೆಲಸಗಳಲ್ಲಿ ತೊಡಗಿಸಿಕೊಂಡಿರುವುದು ತಿಳಿದುಬರುತ್ತದೆ. ಇನ್ನು ಇವರಲ್ಲಿ ಭಿಕ್ಷಾಟನೆ ನಡೆಸುವವರು ಪುರುಷರು ೩೩೬ ರಷ್ಟಿದ್ದರೆ ಮಹಿಳೆಯರು ೫೪ ರಷ್ಟಿದ್ದಾರೆ. ಒಟ್ಟು ವಿವಿಧ ವೃತ್ತಿಗಳನ್ನು ಮಾಡುವ ಪುರುಷರು ೪೦೩ರಷ್ಟು ಮಹಿಳೆಯರು ೧೧೨ ರಷ್ಟು ಒಟ್ಟು ೫೧೫ ರಷ್ಟಿದ್ದಾರೆ.

ಇವರಲ್ಲಿ ನಿರುದ್ಯೋಗಿಗಳ ಪ್ರಮಾಣವು ಉದ್ಯೋಗಿಗಳ ಪ್ರಮಾಣಕ್ಕಿಂತ ಹೆಚ್ಚಾಗಿಯೇ ಇದ್ದು ಅವರ ಪ್ರಮಾಣವು ಒಟ್ಟಾರೆ ೫೫೮ರಷ್ಟಿದೆ. ಅದರಲ್ಲಿ ಪುರುಷ ೯೯ರಷ್ಟಿದ್ದರೆ, ಮಹಿಳಾ ೪೫೯ರಷ್ಟು ನಿರುದ್ಯೋಗಿಗಳಾಗಿರುವುದು ಕಂಡುಬರುತ್ತದೆ.

ಕೋಷ್ಟಕ ೫.೧೭೬: ಸಮೀಕ್ಷೆಗೊಳಪಟ್ಟ ಕಂಜರಭಾಟರ ಮೂಲವೃತ್ತಿಯೊಂದಿಗೆ ಇತರೆ ಕೆಲಸಗಳಲ್ಲಿ ತೊಡಗಿಕೊಂಡಿರುವರ ಪ್ರಮಾಣ

ವಿವರಗಳು	ಪುರುಷ	ಸ್ತ್ರೀ	ಒಟ್ಟು
ಒಟ್ಟು ಜನಸಂಖ್ಯೆ	೨೯೬	೨೬೧	೫೫೭
೦-೧೭ ವಯಸ್ಸಿನ ಗುಂಪು	೧೪೪	೧೧೭	೨೬೧
೬೧ ವಯಸ್ಸಿನ ಮೇಲ್ಪಟ್ಟವರ ಗುಂಪು	೧೩	೭	೨೦
ಒಟ್ಟು ಆಶ್ರಿತ ಗುಂಪು	೧೫೭	೧೨೪	೨೮೧
ಕಾಯಕರ್ಹ ಗುಂಪು	೧೩೯	೧೩೭	೨೭೬
ಕೆಲಸಗಾರರ ಗುಂಪು	೧೯೭	೧೪೧	೩೩೮
ಕೃಷಿ ಕಾರ್ಮಿಕರು	೫೫	೩೬	೯೧
ಆಟೋಚಾಲಕರು	೨೭	–	೨೭
ವ್ಯಾಪಾರಸ್ತರು	೨೦	೧೦	೩೦
ಪಾತ್ರೆ ತೊಳೆಯುವುದು	–	೪೦	೪೦
ಬಡಗಿ	೫	–	೫
ಇತರೆ ಉದ್ಯೋಗಿಗಳು	೯೦	೫೫	೧೪೫
ನಿರುದ್ಯೋಗಿಗಳು	–	–	–

ಕಂಜರಭಾಟರಲ್ಲಿ ಕಾಯಕಾರ್ಹ ಗುಂಪಿನ ಪ್ರಮಾಣ ಶೇಕಡ ಒಟ್ಟು ಶೇ ೪೯.೫೫ ಇದೆ, ಆಶ್ರಿತರ ಗುಂಪು ಒಟ್ಟು ಶೇ ೫೦.೪೫ ಇದೆ. ಆದರೆ ಕೆಲಸ ನಿರ್ವಹಿಸುವವರ ಪ್ರಮಾಣ ಒಟ್ಟು ಶೇ ೧೨೨.೪೬ ರಷ್ಟಿದೆ. ಅಂದರೆ ಕಾಯಕಾರ್ಹ ಗುಂಪಿಗಿಂತ ವಿವಿಧ ಕೆಲಸಗಳಲ್ಲಿ ತೊಡಗಿಕೊಂಡವರ ಪ್ರಮಾಣ ಅತ್ಯಧಿಕವಾಗಿದೆ.

ಇವರಲ್ಲಿ ಕೃಷಿಕರಿಲ್ಲ. ಆದರೆ ಕೃಷಿ ಕಾರ್ಮಿಕರು ಒಟ್ಟು ಶೇ೨೬.೯೨ರಷ್ಟಿದ್ದಾರೆ, ಆಟೋ ಚಾಲಕ ಪುರುಷರು ಒಟ್ಟು ಶೇ೭.೯೯ ರಷ್ಟಿದ್ದಾರೆ, ಚಿಕ್ಕ ಪುಟ್ಟ ವ್ಯಾಪಾರ, ಗುಜರಿ ವಸ್ತು ಖರೀದಿಸುವುದು ಮುಂತಾದ ಕೆಲಸದಲ್ಲಿ ತೊಡಗಿದವರು ಶೇ. ೮.೮೮, ಹಾಗೂ ಪಾತ್ರೆ ತೊಳೆಯುವ ಕೆಲಸ ನಿರ್ವಹಿಸುವ ಮಹಿಳೆಯರ ಪ್ರಮಾಣ ಶೇ ೧೧.೮೩, ಬಡಗಿ ಕೆಲಸ ನಿರ್ವಹಿಸುವವರು ಶೇ ೧.೪೯, ಇತರೆ ರದ್ದಿ ಆಯುವುದು ಮುಂತಾದ ಕೆಲಸ ಮಾಡುವವರ ಪ್ರಮಾಣ ಒಟ್ಟು ಶೇ. ೪೨.೮೯ರಷ್ಟು ಕಂಡುಬರುತ್ತಾರೆ.

ಆಹಾರ ಹಾಗೂ ಉಡುಗೆ ತೊಡುಗೆಗಳು

ಅಲೆಮಾರಿ ಬುಡಕಟ್ಟು ಸಮುದಾಯಗಳ ಪೂರ್ವಿಕರು ಆಹಾರಕ್ಕಾಗಿ ಕಾಡಿನಲ್ಲಿ ಸಿಗುವ ಗಡ್ಡೆ ಗೆಣಸು ಮತ್ತು ಕಾಡಿನಿಂದ ಬೇಟೆಯಾಡಿ ಪ್ರಾಣಿಗಳನ್ನು ತರುತ್ತಿದ್ದರು. ಆಹಾರ ಶೇಖರಣೆ

ಮಾಡಿಕೊಂಡಿರುತ್ತಿರಲಿಲ್ಲ. ಬೇಟೆಯಲ್ಲಿ ದೊಡ್ಡ ಬೇಟೆಯಾದರೆ ಅಂದರೆ ಕಾಡುಹಂದಿ, ಜಿಂಕೆ, ಸಾರಂಗ, ತೋಳ, ನರಿ, ಮುಳ್ಳುಹಂದಿ, ಇತ್ಯಾದಿ ಪ್ರಾಣಿಗಳನ್ನು ಬೇಟೆಯಾಡಿದಾಗ ಹಟ್ಟಿಗೆ ತಂದು ಎಲ್ಲರಿಗೂ ಭಾಗಮಾಡಿ ಕೊಡುತ್ತಿದ್ದರು. ಮಾಂಸವನ್ನು ಬೇಕಾದಷ್ಟು ಉಪಯೋಗಿಸಿಕೊಂಡು ಉಳಿದ ಮಾಂಸವನ್ನು ಒಣಗಿಸಿ ಇಟ್ಟುಕೊಳ್ಳುತ್ತಿದ್ದರು. ಜೊತೆಗೆ ಜೋಳ, ಗೋಧಿ, ನವಣೆ, ರಾಗಿ, ಸಜ್ಜೆ, ನೆಲ್ಲು, ಇತ್ಯಾದಿ ಆಹಾರ ಧಾನ್ಯಗಳನ್ನು ಬಳಸುತ್ತಿದ್ದರು. ಕಾಡಿನಲ್ಲಿ ದೊರೆಯುವ ಪಲ್ಲೆಗಳು ಅಥವಾ ಸೊಪ್ಪು ಉಪಯೋಗಿಸಿ ಕೊಳ್ಳುತ್ತಿದ್ದರು.

ಕಾಡಿನಲ್ಲಿ ಬೆಳೆಯುವ ಮರದ ತೊಗಟೆ ಮತ್ತು ಹಣ್ಣುಗಳನ್ನು ಕೊಳೆ ಹಾಕಿ ತಾವೆ ಪಾನೀಯಗಳನ್ನು (ಸಾರಾಯಿ) ತಯಾರಿಸಿಕೊಂಡು ಉಪಯೋಗಿಸಿಕೊಳ್ಳುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಇವರು ಸಾಮಾನ್ಯ ಜನರಂತೆ ಆಹಾರ ಪಾನೀಯಗಳನ್ನು ಬಳಸುತ್ತಿದ್ದಾರೆ.

ಪಾರ್ಧಿಯಂತಹ ಸಮುದಾಯಗಳು ಹೆಚ್ಚಾಗಿ ಮಾಂಸಾಹಾರವನ್ನೇ ಇಷ್ಟ ಪಡುತ್ತವೆ. ಇಂದು ಕಾಡಿನ ಪ್ರಾಣಿಗಳು ಸಿಗುತ್ತಿಲ್ಲವಾದುದರಿಂದ ಸುಲಭವಾಗಿ ದೊರೆಯುವ ಕೋಳಿ, ಓತು, ಹಂದಿ, ದನದ ಮಾಂಸವನ್ನು ಆಹಾರವಾಗಿ ಬಳಸುತ್ತವೆ. ಬಹುತೇಕ ಸೆಟ್ಲಮೆಂಟನ ಎಲ್ಲಾ ವಿಮುಕ್ತ ಬುಡಕಟ್ಟುಗಳೂ ಮಾಂಸಾಹಾರಿಗಳೇ ಆಗಿವೆ. ಇವರು ತಮ್ಮ ಕುಲಾಚಾರದ ಪ್ರಕಾರ ಆಹಾರ ಸೇವನೆ ಮತ್ತು ಆಹಾರದ ಕುರಿತಾದ ವಿಧಿ ನಿಷೇಧಗಳನ್ನು ಒಳಗೊಂಡಿವೆ.

ಉದಾಹರಣೆಗೆ ಪಾರ್ಧಿಯರು ಆಹಾರಕ್ಕೆ ಸಂಬಂಧಿಸಿದಂತೆ ಹಲವಾರು ವಿಧಿ ನಿಷೇಧಗಳನ್ನು ಒಳಗೊಂಡಿದೆ. ಸಾವಂಡಿಯಾ ಬೆಡಗಿನವರು ಮನೆಯ ಒಲೆಯ ಮೇಲೆ ಗೋಧಿ ಹುಗ್ಗಿ ಮಾಡುವಂತಿಲ್ಲ. ಆಡು ಹಾಗೂ ಹೋತಿನ ಮಾಂಸವನ್ನು ತಿಂದವರು ಮಧ್ಯ, ಸಾರಾಯಿಯನ್ನು ಕುಡಿಯಬಾರದು. ಸಾವಂಡಿಯಾ ಹೆಣ್ಣು ಮಕ್ಕಳು ಸಾರಾಯಿ ಕುಡಿಯುವಂತಿಲ್ಲ. ಸಾವಂಡಿಯ ಗಂಡು ಮಕ್ಕಳನ್ನು ಮದುವೆಯಾಗುವ ಸ್ತ್ರೀಯರು ಸಾರಾಯಿಯನ್ನು ಕುಡಿಯುವಂತಿಲ್ಲ.

ಖ್ನೋಢಿಯಾರ್ ಬೆಡಗಿನವರನ್ನು ಬಿಟ್ಟು ಉಳಿದ ಬೆಡಗಿನವರು ಆಡು ಹಾಗೂ ಹೋತಿನ ಮಾಂಸವನ್ನು ಸೇವಿಸಿದರೆ ಸಾರಾಯಿ ಕುಡಿಯುವಂತಿಲ್ಲ. ಖೋಡ್ಡಿಯಾರ್ ಹೆಣ್ಣು ಮಕ್ಕಳು ಕುರಿ ಅಥವಾ ಟಗರಿನ ಮಾಂಸ ಸೇವಿಸುವಂತಿಲ್ಲ.

ಪಿಂಪಳಾಜ ಬೆಡಗಿನವರು ಸಾರಾಯಿ ಕುಡಿದರೆ ಅಕ್ಕಿ ಅನ್ನ ತಿನ್ನುವಂತಿಲ್ಲ. ಪಾರ್ಧಿಯರು ವಿಶೇಷವಾಗಿ ಹಬ್ಬಗಳಲ್ಲಿ ಮತ್ತು ಅವರ ಮನೆಗೆ ಅತಿಥಿಗಳು ಬಂದಾಗ (ಮಿಟ್ಟುಧಾನ್), ಬೆಲ್ಲದ ಅನ್ನ ಮಾಡಿ ಉಪಚರಿಸುವರು.

ಕಂಜರಭಾಟರು ವಿಶೇಷ ದಿನಗಳಲ್ಲಿ ಗೋಧಿ ರೊಟ್ಟಿಯನ್ನು ಮಾಂಸದ ಸಾರಿನಲ್ಲಿ ಹಾಕಿ ಬೇಯಿಸಿ ತಿನ್ನುತ್ತಾರೆ. ಇದಕ್ಕೆ 'ಖೋದ್ದಾ' ಎನ್ನುತ್ತಾರೆ. ಇದಲ್ಲದೆ ಮಾಂಸ ಮತ್ತು ರವಾ ಬೆರಸಿ ಅದರಲ್ಲಿ ಮಸಾಲೆ ಸಾಮಾನುಗಳನ್ನು ಹಾಕಿ ಪಾಯಸದಂತೆ ತಯಾರಿಸಿ ತಿನ್ನುತ್ತಾರೆ. ಇಂತಹ ಊಟಕ್ಕೆ ಇವರು 'ದಳಿಯಾ' ಎನ್ನುತ್ತಾರೆ.

ಪಾರ್ಧಿಗಳಂತೆ ಕಂಜರಭಾಟರು ಸಹ ದನ, ಕುರಿ, ಆಡು, ಚಿಗರೆ, ಮೊಲ, ಹಂದಿ, ಕೋಳಿ, ಮೀನು ಮುಂತಾದ ಪ್ರಾಣಿಗಳ ಮಾಂಸವನ್ನು ತಿನ್ನುತ್ತಾರೆ. ಮಾಂಸವನ್ನು ಒರಳಿನಲ್ಲಿ ಕುಟ್ಟಿ ಚಟ್ನಿ ರೂಪದಲ್ಲಿ ಉಪಯೋಗಿಸುವರು. ಇದಲ್ಲದೆ ಬೆಂಕಿಯಲಿ ಸುಟ್ಟು ತಿನ್ನುತ್ತಾರೆ. ಇಂಥ ಪದಾರ್ಥಗಳನ್ನು ಸೆರೆ, ಸೇಂದಿ ಸೇವಿಸುವಾಗ ಹೆಚ್ಚಾಗಿ ಉಪಯೋಗಿಸುವರು. ಈ ಸಮುದಾಯವು ಮಾಂಸ ಹಾಗೂ ಖಾರ ವಸ್ತುಗಳನ್ನು ಹೆಚ್ಚು ಉಪಯೋಗಿಸುತ್ತಾರೆ. ತುಪ್ಪ, ಹಾಲು ಇವುಗಳ ಬಳಕೆ ಕಡಿಮೆ. ಹಸಿಮೆಣಸಿನಕಾಯಿ ಹಾಗೂ ಶೆಂಗಾ ಚಟ್ನಿಯನ್ನು ಹೆಚ್ಚಾಗಿ ಆಹಾರದಲ್ಲಿ ಉಪಯೋಗಿಸುತ್ತಾರೆ. ಮಾಂಸದ ಅಡಿಗೆ ಮಾಡುವುದರಲ್ಲಿ ಈ ಸಮುದಾಯದ ಮಹಿಳೆಯರು ನಿಪುಣರಾಗಿದ್ದಾರೆ. ಅಫೀ ಮತ್ತು ಕಸಕಸಿಯಿಂದ ಇದನ್ನು ತಯಾರಿಸಿ ಹೋಳಿ ಹಬ್ಬದಲ್ಲಿ ಕುಡಿಯುತ್ತಾರೆ.

ಅದೇ ರೀತಿಯಾಗಿ ಗಂಟಿಚೋರ, ಭೋವಿಗಳ ಆಹಾರ ಕ್ರಮ ಮತ್ತು ಆಹಾರದ ಕುರಿತಾಗಿ ಇರುವ ವಿಧಿ ನಿಷೇಧಗಳು ಹೆಚ್ಚು ಕಡಿಮೆ ಒಂದೇ ರೀತಿಯಾಗಿದೆ. ಇವರು ಸಹ ಮಾಂಸಹಾರಿಗಳೆ. ಆದರೆ ಮದುವೆ ಮುಂತಾದ ಶುಭ ಸಮಾರಂಭಗಳಲ್ಲಿ ಮಾಂಸದ ಅಡುಗೆ ಮಾಡುವುದಿಲ್ಲ. ಕೊರಮರ ಆಹಾರ ಕ್ರಮ ಮತ್ತು ಆಹಾರಕ್ಕೆ ಸಂಬಂಧಿಸಿದ ವಿಧಿ ನಿಷೇಧಗಳು ಭೋವಿ ಹಾಗೂ ಗಂಟಿಚೋರರನ್ನೇ ಹೋಲುತ್ತದೆ. ಆದರೆ ಚಪ್ಪರಬಂದರು ಮಾತ್ರ ಮದುವೆ ಮುಂತಾದ ಸಂದರ್ಭಗಳಲ್ಲಿ ಮಾಂಸಾಹಾರ ಮಾಡುತ್ತಾರೆ. ಆದರೆ ಹಂದಿ ಮಾಂಸವನ್ನು ಇವರು ಸೇವಿಸುವುದಿಲ್ಲ.

ಉಡುಗೆ-ತೊಡುಗೆ

ವಿಮುಕ್ತ ಬುಡಕಟ್ಟುಗಳ ಉಡುಗೆ ತೊಡುಗೆ ವೇಷಭೂಷಣಗಳು ಒಂದೇ ರೀತಿಯಲ್ಲಿರುವುದಿಲ್ಲ. ಇವರಲ್ಲಿ ಕೊರಮ, ಗಂಟಿಚೋರ, ಭೋವಿಗಳ ವೇಷಭೂಷಣ ಒಂದು ರೀತಿಯಲ್ಲಿದ್ದರೆ ಕಂಜರಭಾಟ ಮತ್ತು ಪಾರ್ಧಿಗಳ ವೇಷಭೂಷಣ ಮತ್ತೊಂದು ರೀತಿಯಲ್ಲಿರುತ್ತವೆ. ಇಂದು ಆಧುನಿಕತೆಯ ಪ್ರಭಾವದಿಂದ ಬಹುತೇಕ ಎಲ್ಲಾ ಸಮುದಾಯಗಳ ವೇಷ ಭೂಷಣ ಒಂದೇ ರೀತಿಯಾಗಿ ಕಾಣಿಸುತ್ತವೆ. ಆದರೆ ಹಿಂದೆ ಅವರ ವೇಷಭೂಷಣಗಳಿಂದಲೇ ಇಂತಹ ಬುಡಕಟ್ಟು ಅಥವಾ ಸಮುದಾಯಕ್ಕೆ ಸೇರಿದವರು ಇವರು ಎಂದು ಹೇಳಬಹುದಾಗಿತ್ತು.

ಯಾವುದೇ ಒಂದು ಬುಡಕಟ್ಟು ವರ್ಗ/ಸಮುದಾಯವು ತನ್ನದೇ ಆದ ಭಾಷೆ, ಸಂಸ್ಕೃತಿ, ಆಚರಣೆಗಳನ್ನು ಕಾಪಾಡಿಕೊಂಡಂತೆ ತಮ್ಮ ಉಡುಗೆ ತೊಡುಗೆಗಳಲ್ಲೂ ವಿಶೇಷತೆಯನ್ನು ಕಾಯ್ದುಕೊಂಡಿರುತ್ತದೆ. ಆದರೆ ಇಂದು ಆಧುನಿಕ ಉಡುಗೆ-ತೊಡುಗೆಗಳು ಸಂಪ್ರದಾಯದ ಉಡುಗೆ-ತೊಡುಗೆಗಳ ಮೇಲೆ ಸವಾರಿ ಮಾಡುತ್ತಿರುವುದನ್ನು ಕಾಣಬಹುದಾಗಿದೆ. ಸಾಮಾನ್ಯವಾಗಿ ಪುರುಷರು ತುಂಬಾ ಶ್ರಮ ಜೀವಿಗಳು ಆಗಿದ್ದುದರಿಂದ ಮೊಣಕಾಲಿನ ಮೇಲೆ ಬರುವಂತೆ ಬಿಳಿ ದೋತರ, ಬಿಳಿಯ ಕಸೆ ಅಂಗಿ, ತಲೆಯ ಮೇಲೆ ಮುಂಡಾಸು, ಕಿವಿಗೆ ಬೆಳ್ಳಿಯ ಅಡಕೊತ್ತುಗಳನ್ನು ಹಾಕಿಕೊಳ್ಳುತ್ತಿದ್ದರು. ಸಾಮಾನ್ಯವಾಗಿ ಪುರುಷರು ಸಹ ತಲೆ ಕೂದಲು ಉದ್ದವಾಗಿ ಬಿಡುತ್ತಿದ್ದರು. ಅವರು ತುರುಬು ಕಟ್ಟಿಕೊಳ್ಳುವುದು ಕಂಡುಬರುತ್ತಿದ್ದದೂ ಉಂಟು.

ಭೋವಿ ಹೆಣ್ಣುಮಕ್ಕಳು ಚಾಕಳೆ ಸೀರೆ, ಇಲಕಲ್ ಸೀರೆಗಳನ್ನು ಹೆಚ್ಚಾಗಿ ಉಡುತ್ತಿದ್ದರು. ಇವರು ಉಡುವ ಸೀರೆಗಳು ೧೮ ಮೊಳದ ಸೀರೆಗಳೆಂದೇ ಕರೆಯಲ್ಪುಡುತ್ತಿದ್ದವು. ಮೈಯ ಮೇಲ್ಭಾಗದಲ್ಲಿ ಕುಪ್ಪಸ ತೊಡುವುದಿಲ್ಲ. ಸೀರೆಯ ಸೆರುಗುಗಳು ಎದೆಗೆ ಅಡ್ಡ ಬರುವಂತೆ ಕಟ್ಟಿಕೊಳ್ಳುತ್ತಾರೆ. ಬಲಗೈಗೆ ಕಬ್ಬಿಣ ಅಥವಾ ಬೆಳ್ಳಿ, ಸೀಮೆ ಬೆಳ್ಳಿಯ ಕಡಗವನ್ನು ಹಾಕಿಕೊಳ್ಳುತ್ತಾರೆ. ಕೆಲವರು ಎರಡೂ ಕೈಗೆ ಇಂತಹ ಕಡಗ ಹಾಕಿಕೊಳ್ಳುವುದು ಉಂಟು. ಕೆಲವರು ಮಾತ್ರ ಬಲಗೈಗೆ ಕಡಗ ಹಾಗೂ ಎಡಗೈಗೆ ಗಾಜಿನ ಬಳೆ ಹಾಕಿಕೊಳ್ಳುವುದುಂಟು. ಹಣೆಗೆ ಹಚ್ಚೆ ಬೊಟ್ಟು ಹಾಕಿಸಿಕೊಳ್ಳುತ್ತಾರೆ. ಮೂಗುತಿ, ಕಾಲುಪಿಲ್ಲೆ, ಕಾಲುಂಗರ, ಕಿವಿಯೋಲೆ, ಬುಗಡಿಕಡ್ಡಿ, ತಲ್ಲಾಕುಕಡ್ಡಿ, ಕಾಲಿಗೆ ಬೆಳ್ಳಿ ಕಡಗ ಮುಂತಾದ ಆಭರಣಗಳನ್ನು ಸಹ ಭೋವಿಯರ ಮಹಿಳೆಯರು ತೊಡುತ್ತಾರೆ.

ಬೋವಿಗಳು ಹಾಕಿಕೊಳ್ಳುವ ಬಳೆ ಕುರಿತು ಕೆ.ಜಿ.ಕೇನ್‌ರವರು ತಾವು ಕೇಳಿದ ಸ್ವಾರಸ್ಯಕರ ಕಥೆವೊಂದನ್ನು ದಾಖಲಿಸಿದ್ದಾರೆ.

ಕೆರೆ ತೋಡುವ ಒಡ್ಡರ (ಭೋವಿ) ಸಮುದಾಯದ ಮಹಿಳೆಯರು ಎಡಗೈಯಲ್ಲಿ ಮಾತ್ರ ಗಾಜಿನ ಬಳೆಗಳನ್ನು ತೊಡುತ್ತಾರೆ. ಯಾಕೆಂದರೆ ಬಳೆಗಾರನೊಬ್ಬ ಎಡಗೈಯಲ್ಲಿ ಮಾತ್ರ ಗಾಜಿನ ಬಳೆಗಳನ್ನು ತೊಡಿಸಿದ, ಬಲಗೈಗೆ ಒಳ್ಳೆಯ ಬಳೆಗಳನ್ನು ತರುವುದಾಗಿ ಹೋಗಿ ಮರಳಿ ಬರಲೇ ಇಲ್ಲ. ಅವರಲ್ಲಿಯ ಒಬ್ಬ ಮುದುಕಿಯು ಹೆಚ್ಚಾಗಿ ಬಲಗೈಯಲ್ಲಿ ಕೆಲಸಮಾಡುವುದರಿಂದ ಪದೇ ಪದೇ ಗಾಜಿನ ಬಳೆಗಳು ಒಡೆಯುತ್ತವೆ ಎಂದು ಹೇಳಿದರು. ಬೋವಿ ಸಮುದಾಯದ ಹೆಣ್ಣುಮಕ್ಕಳು ಸಹ ಕಾಡುಗೊಲ್ಲರು ಸಾಂಪ್ರದಾಯಿಕವಾಗಿ ತೊಡುವ ರೀತಿಯಲ್ಲಿಯೇ ಸೀರೆಯನ್ನು ತೊಡುತ್ತಾರೆ.

ಇತ್ತೀಚೆಗೆ ಆಧುನಿಕ ಉಡುಪುಗಳಿಗೆ ಮಾರುಹೋದ ಯುವಕರಾರೂ ಹಳೆಯ ಮಾದರಿಯ ಉಡುಗೆ-ತೊಡುಗೆಗಳನ್ನು ತೊಡುವುದಿಲ್ಲ. ಯುವಕರು ಲುಂಗಿ, ಪ್ಯಾಂಟ್‌ಗಳಿಗೆ ಹೆಚ್ಚಾಗಿ ಮಾರು ಹೋಗಿದ್ದಾರೆ. ಕ್ಷೇತ್ರವೊಂದರಲ್ಲಿಯ ಹಿರಿಯ ಭೋವಿ ಜನ ಮಾತ್ರ ದೋತರ, ಬಿಳಿ ಅಂಗಿ ತೊಡುವುದನ್ನು ಕಾಣಬಹುದು. ಹಾಗೆ ಮಹಿಳೆಯರೂ ಸಹ ಹಳೇ ತಲೆಮಾರಿನ ಉಡುಗೆ ತೊಡುಗೆಗಳನ್ನು ತೊಡುವುದನ್ನು ಬಿಟ್ಟಿದ್ದಾರೆ. ಹೊಸ ರೀತಿಯಲ್ಲಿ ಸೀರೆ ಉಡುತ್ತಾರೆ. ಹಾಗೇ ಇಂದು ಚೂಡಿದಾರ್, ಮುಂತಾದ ಆಧುನಿಕ ಉಡುಪುಗಳನ್ನು ಸೆಟ್ಲಮೆಂಟ್ ಮಹಿಳೆಯರು ತೊಡುವುದನ್ನು ಕಾಣಬಹುದಾಗಿದೆ.

ಕೊರಮರು ಸಾಮಾನ್ಯವಾಗಿ ಇಲಕಲ್ಲ ಚೌಕಳಿ ಸೀರೆ, ಕುಪ್ಪಸ ತೊಡುತ್ತಾರೆ. ಪುರುಷರು ದೋತರ, ಕಸೆ ಅಂಗಿ ತೊಡುವರು. ಆದರೆ ಇತ್ತೀಚೆಗೆ ಹಳೆ ಮಾದರಿಯ ಉಡುಗೆಗಳನ್ನು ಯಾರೂ ತೊಡುವುದಿಲ್ಲ. ಮಹಿಳೆಯರು ಬೆಳ್ಳಿ, ಬಂಗಾರದ ಮೂಗುತಿ, ಪಿಲ್ಲೆ, ತಾಳಿ ಮುಂತಾದ ಆಭರಣಗಳನ್ನು ಧರಿಸುತ್ತಾರೆ. ಪಾರಿ ಗಂಡಸರು ಕೇವಲ ಕಚ್ಚೆ (ಪಿಚ್ಚೂಡಿ) ಯನ್ನಷ್ಟೇ ಧರಿಸಿರುತ್ತಾರೆ. ಆದರೆ ಹೊರಗೆ ಹೋಗುವಾಗ ಅವರು ಪ್ಯಾಂಟು ಹಾಗೂ ಅಂಗಿಗಳನ್ನು ಧರಿಸುತ್ತಾರೆ. ಮದುವೆ ಮತ್ತು ಇತರೇ ವಿಶೇಷ ಸಂದರ್ಭಗಳಲ್ಲಿ ಕುಡುತಾ (ಅಂಗಿ), ರುಮಾಲು, ಪಂಚೆ ಮುಂತಾದವುಗಳನ್ನು ಧರಿಸಿಕೊಳ್ಳುತ್ತಾರೆ.

ದೇವರನ್ನು ಪೂಜಿಸುವಾಗ ದಪ್ಪನೆಯ ಕೆಂಪು ಬಣ್ಣದ ಬಟ್ಟೆಯನ್ನು ಸ್ಕರ್ಟ್ ರೀತಿಯಲ್ಲಿ ಧರಿಸುತ್ತಾರೆ. ಇದಕ್ಕೆ ಅವರು 'ದೇವಾನುಗಾಗರೋ' ಎಂತಲೂ ಹೇಳುತ್ತಾರೆ. ಪಾರ್ಧಿ ಹೆಣ್ಣು ಮಕ್ಕಳು ಇಂದು ಸಾಮಾನ್ಯ ರೀತಿಯ ಸೀರೆ ಉಡುತ್ತಾರೆ. ಆದರೆ ಹಿಂದೆ ಅವರ ಹೆಣ್ಣುಮಕ್ಕಳು ಲಂಗ, ಧಾವಣಿ, ಮೇಲ್ಮುಸುಕು ತೊಡುತ್ತಿದ್ದರಂತೆ. ಕೈಯ್ಯಲ್ಲಿ ಕಬ್ಬಿಣ ಬೆಳ್ಳಿ ಹಿತ್ತಾಳೆ ಬಳೆಗಳನ್ನು ತೊಡುತ್ತಿದ್ದರು. ಆದರೆ ಇಂದು ಗಾಜಿನ ಬಳೆ ತೊಡುತ್ತಾರೆ.

ಚಪ್ಪರಬಂದ ಪುರುಷರು ಮುಸ್ಲೀಮರಂತೆ ಗಡ್ಡ, ಮೀಸೆಗಳನ್ನು ಬಿಡುತ್ತಾರೆ. ಆದರೆ ಹಿಂದೂಗಳಂತೆ ದೋತರ, ಬಿಳಿ ಅಂಗಿ ತೊಡುತ್ತಾರೆ. ಮಹಿಳೆಯರು ಹಿಂದೂ ಮಹಿಳೆಯರಂತೆ ಸೀರೆ ಉಡುತ್ತಾರೆ. ಆದರೆ ಹಣೆಗೆ ಕುಂಕುಮ ಹಚ್ಚುವುದಿಲ್ಲ, ಆದರೆ ಕೈಗಳಿಗೆ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಬುರ್ಕಿ ಧರಿಸುವುದಿಲ್ಲ. ಕೊರಳಿಗೆ ಬಂಗಾರದ ಪದಕವಿಲ್ಲದ ಕರಿಮಣಿ ಸರವನ್ನು ತಾಳಿಯಾಗಿ ಕಟ್ಟಿಕೊಳ್ಳುತ್ತಾರೆ. ಮೂಗುಬೊಟ್ಟು, ಕಿವಿಯೋಲೆ, ಕಂಠೀಹಾರ ಮುಂತಾದ ಬಂಗಾರ, ಬೆಳ್ಳಿಯ ಆಭರಣಗಳನ್ನು ಹಾಕಿಕೊಳ್ಳುತ್ತಾರೆ. ಪುರುಷರು ಬೆಳ್ಳಿ ಹಿತ್ತಾಳೆ ಉಂಗುರಗಳನ್ನು ಹಾಕಿಕೊಳ್ಳುತ್ತಾರೆ.

ಕಂಜರಭಾಟ ಸಮುದಾಯದವರನ್ನು ಅವರ ವೇಷ-ಭೂಷಣಗಳಿಂದ ಗುರುತಿಸಲ್ಪಡಬಹುದು. ಕಂಜರಭಾಟ ಮಹಿಳೆಯರು ಧರಿಸುವ ವೇಷಭೂಷಣಗಳು ರಾಜಸ್ತಾನದ ಮಹಿಳೆಯರ ಉಡುಗೆ ತೊಡುಗೆಗಳನ್ನು ನೆನಪಿಸುತ್ತವೆ. ಅವರು ಧರಿಸುವ ಬಣ್ಣ ಬಣ್ಣದ ಬಟ್ಟೆಗಳು ಹಾಗೂ ಆಭರಣಗಳು ಸಹಜವಾದ ಸೌಂದರ್ಯಕ್ಕೆ ಮೆರಗು ತರುತ್ತವೆ. ಕೆಂಪು, ನೀಲಿ, ಹಳದಿ ಮುಂತಾದ ಬಣ್ಣದ ಉಡುಗೆಗಳನ್ನು ಧರಿಸುತ್ತಾರೆ. ಮಹಿಳೆಯರು ೫-೬ ಮೀಟರ್ ಅರಿವೆಯ ಲಂಗ, ಉದ್ದ ತೋಳಿನ ಕುಪ್ಪಸ ಹಾಗೂ ಓಡಣಿಯನ್ನು ಧರಿಸುತ್ತಾರೆ. ಕಂಜರಭಾಟ ಸ್ತ್ರೀಯರು ಬಂಗಾರ, ಬೆಳ್ಳಿ, ಲೋಹಗಳಿಂದ ತಯಾರಿಸಿದ ಆಭರಣಗಳನ್ನು ಧರಿಸುತ್ತಾರೆ. ಆಭರಣಗಳು ಭಾರವಾಗಿದ್ದರೂ ಅವುಗಳನ್ನು ಧರಿಸಿಕೊಳ್ಳಲು ಹಿಂಜರಿಯುವುದಿಲ್ಲ. ಕೈಯಲ್ಲಿ ಉಂಗುರ, ಬಳೆಗಳು, ಕಂಗಣ, ಕೊರಳಲ್ಲಿ ಬೆಳ್ಳಿಯಿಂದ ತಯಾರಿಸಿದ ೨೦-೩೦ ತೊಲೆಯ ದಪ್ಪ ನಕ್ಲೆಸ್ ತರಹದ ಅಭರಣ,ಮೂಗಿನಲ್ಲಿ ನತ್ತು (ಮೂಗುತಿ), ಕಿವಿಯಲ್ಲಿ ಝುಮಕಿ, ಹೂ ಬೂಗಡಿ, ಕಾಲಿನಲ್ಲಿ ಬೆಳ್ಳಿ ಚೈನಾ, ತೋಡೆ, ಕಾಲಕಡಗ, ಕೊರಳಲ್ಲಿ ಬಂಗಾರದ ಟೀಕಿ, ಬೋರಮಾಳ, ಬೆಳ್ಳಿ ನಾಣ್ಯಗಳಿಂದ ತಯಾರಿದ ಸರ (ಝೂಲರಾ) ಸೊಂಟಕ್ಕೆ ಬೆಳ್ಳಿಯ ಪಟ್ಟಿ (ಕಮರಪಟ್ಟಾ) ಧರಿಸುತ್ತಾರೆ. ಪುರುಷರು ಸಾಮಾನ್ಯವಾದ ವೇಷಭೂಷಣಗಳನ್ನು ಧರಿಸುತ್ತಾರೆ. ಧೋತರ, ಅಂಗಿ, ತಲೆಯ ಮೇಲೆ ಬಣ್ಣ ಬಣ್ಣದ ಪಗಡಿ ಧರಿಸುತ್ತಾರೆ. ಬಹುತೇಕ ಎಲ್ಲಾ ವಿಮುಕ್ತ ಬುಡಕಟ್ಟು ಜನ ಹಣೆ, ಎದೆಯ ಬಲ ಮತ್ತು ಎಡ ಭಾಗಕ್ಕೆ ಕೈಯ ಎಡ ಮತ್ತು ಬಲಭಾಗಕ್ಕೆ ಹಚ್ಚೆಯನ್ನು ಹಾಕಿಸಿಕೊಳ್ಳುತ್ತಾರೆ.

ಗ್ರಂಥಋಣ

೧. (ಸಂ)ಬೋರಲಿಂಗಯ್ಯ ಹಿ ಚಿ, ಪ್ರಭಾಕರ ಎ ಎಸ್:ಚಂದ್ರಶೇಖರ್ ಟಿ ಆರ್, ಬುಡಕಟ್ಟು ಅಭಿವೃದ್ಧಿ: ಕೆಲವು ಟಿಪ್ಪಣಿಗಳು,(ಲೇಖನ) ಬುಡಕಟ್ಟು ಅಧ್ಯಯನ-೨ : ಪ್ರಸಾರಂಗ,ಕ ವಿ ವಿ ಹಂಪಿ, ವಿದ್ಯಾರಣ್ಯ,೨೦೦೪.

೨. ಕುಮಾರ್ ಆರ್ ಬಿ, ಶೈಕ್ಷಣಿಕ ಆರ್ಥಿಕ ಪ್ರಗತಿಯಲ್ಲಿ ಯೋಜನೆಗಳ ಪಾತ್ರ ; ಅಪ್ರಕಟಿತ ಲೇಖನ: ೧೯೯೬)

3. Nanduram : Scheduled castes and Scheduled tribes of India:Gyan Publishing house, New Delhi:2007.

ಅಧ್ಯಾಯ ಆರು

ಶೈಕ್ಷಣಿಕ ಮತ್ತು ಆರೋಗ್ಯ ಸ್ಥಿತಿ-ಗತಿ

ವಿಮುಕ್ತ ಬುಡಕಟ್ಟು ಸಮುದಾಯಗಳ ಶೈಕ್ಷಣಿಕ ಸ್ಥಿತಿಗತಿ

ಸೆಟ್ಲಮೆಂಟ್ ಜನರ ಆರೋಗ್ಯದ ಸ್ಥಿತಿಗತಿ

ಅಧ್ಯಾಯ ಆರು

ಶೈಕ್ಷಣಿಕ ಮತ್ತು ಆರೋಗ್ಯ ಸ್ಥಿತಿ-ಗತಿ

ಪ್ರತಿಯೊಬ್ಬ ಮನುಷ್ಯನಿಗೂ ಮೂಲಭೂತ ಸೌಕರ್ಯಗಳ ಅಗತ್ಯವಿದೆ. ಅಂತಹ ಮೂಲಭೂತ ಸೌಕರ್ಯವೆಂದರೆ ಆಹಾರ, ಆರೋಗ್ಯ ಮತ್ತು ಶಿಕ್ಷಣವೆಂದು ಖ್ಯಾತ ಅರ್ಥಶಾಸ್ತ್ರಜ್ಞರಾದ ಅಮರ್ತ್ಯಸೇನ್ ರವರು ತಿಳಿಸುತ್ತಾರೆ. ಮೇಲ್ನೋಟಕ್ಕೆ ಈ ಮೂರು ಭಿನ್ನ ಭಿನ್ನವೆನಿಸಿದರೂ ಆಂತರ್ಯದಲ್ಲಿ ಇವುಗಳ ಮಧ್ಯ ಅಂತರ್‌ಸಂಬಂಧವಿರುವುದು ಮಾತ್ರ ಸತ್ಯ. ಭಾರತ ಪ್ರಜಾತಂತ್ರ ನೀತಿಯನ್ನಳವಡಿಸಿ ಕೊಂಡಿರುವ ದೇಶವೆಂದು ಗುರುತಿಸಿಕೊಳ್ಳುತ್ತದೆ. ಇಲ್ಲಿ ಪ್ರತಿಯೊಬ್ಬ ಭಾರತೀಯ ಪ್ರಜೆಯಾದವನಿಗೂ ಸಮಾನ ಹಕ್ಕುಗಳಿವೆ ಎಂದು ಸಂವಿಧಾನ ತಿಳಿಸುತ್ತದೆ. ಆದರೆ ಭಾರತದ ವ್ಯಕ್ತಿ ವ್ಯಕ್ತಿಗಳ ಮಧ್ಯೆ, ಸಮುದಾಯ ಸಮುದಾಯಗಳ ಮಧ್ಯದಲ್ಲಿ ಅಸಮತೋಲನವಿರುವುದು ಕಂಡುಬರುತ್ತಿದೆ. ಆರ್ಥಿಕ ಹಂಚಿಕೆಯಲ್ಲಿ ಸಮಾನತೆಯಿಲ್ಲ. ಶಿಕ್ಷಣವನ್ನು ಸರ್ವಾತ್ರಿಕರಣಗೊಳಿಸಿರುವುದಾಗಿ ಸರ್ಕಾರ ಘೋಸಿಸಿದೆ. ಅದಕ್ಕಾಗಿ ಕಡ್ಡಾಯ ಶಿಕ್ಷಣ, ಮರಳಿ ಬಾ ಶಾಲೆಗೆ, ಸರ್ವಶಿಕ್ಷಣ ಅಭಿಯಾನ, ಟೆಂಟ್ ಶಾಲೆಗಳು, ಬಿಸಿಯೂಟ ಯೋಜನೆ ಮುಂತಾದ ಹತ್ತೆಂಟು ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿದೆ. ಆದರೆ ಈ ಯೋಜನೆಗಳು ಪೂರ್ಣ ಪ್ರಮಾಣದಲ್ಲಿ ಯಶಸ್ವಿಯಾಗುವಲ್ಲಿ ಸೋತಿವೆ. ಅದರಲ್ಲೂ ವಿಮುಕ್ತ ಬುಡಕಟ್ಟು ಮಕ್ಕಳನ್ನು, ತಳ ಸಮುದಾಯದ ಮಕ್ಕಳನ್ನು ಶಿಕ್ಷಿತರನ್ನಾಗಿಸುವಲ್ಲಿ ಈ ಯೋಜನೆಗಳು ಯಶಸ್ವಿಯಾಗಿಲ್ಲ. ಬಿಸಿಯೂಟದಂತಹ ಯೋಜನೆಯಿಂದ ಆಕರ್ಶಿತವಾಗಿ ಮಕ್ಕಳು ಶಾಲೆಗೆ ಹೋಗುತ್ತವೆಯಾದರೂ ಅವು ಮಧ್ಯದಲ್ಲಿಯೇ ಶಾಲೆಯನ್ನು ತೊರೆಯುವುದು ಹೆಚ್ಚು. ಸೆಟಲಮೆಂಟಿನ ವಿಮುಕ್ತ ಬುಡಕಟ್ಟು ಮಕ್ಕಳ ಶೈಕ್ಷಣಿಕ ಪ್ರಗತಿಯನ್ನು ಅವಲೋಕಿಸಿದರೆ ಇದು ತಿಳಿಯುತ್ತದೆ.

ಹಿಂದೆ ಅಪರಾಧಿ ಬುಡಕಟ್ಟು ಮಕ್ಕಳಿಗಾಗಿ ಬ್ರಿಟೀಷರು ಸೆಟಲಮೆಂಟಗಳಲ್ಲಿ ಶಾಲೆಗಳನ್ನು ಪ್ರಾರಂಭಿಸಿದ್ದರು. ಆಗ ಸೆಟಲಮೆಂಟ ಮಕ್ಕಳು ತಮಗೆ ವಹಿಸಿದ ವೃತ್ತಿಗಳನ್ನು ಮಾಡುತ್ತಲೇ ವಿದ್ಯಾಭ್ಯಾಸವನ್ನು

ಮಾಡಬೇಕಾಗಿತ್ತು. ಮುಖ್ಯವಾಗಿ ಸೆಟಲಮೆಂಟ ಮಕ್ಕಳಿಗೆ ತಮಗೆ ಅನುಕೂಲವಾಗುವ ರೀತಿಯ ವೃತ್ತಿ ಶಿಕ್ಷಣ ನೀಡುವಲ್ಲಿ ಬ್ರಿಟೀಷರು ಹೆಚ್ಚು ಆಸಕ್ತರಾಗಿದ್ದರು. ಆದರೆ ಭಾರತ ಸ್ವತಂತ್ರವಾದ ತರುವಾಯ ಆ ರೀತಿಯ ವೃತ್ತಿ ಶಿಕ್ಷಣ ನೀಡುವುದನ್ನು ನಮ್ಮ ಸರ್ಕಾರ ಬಿಟ್ಟುಬಿಟ್ಟಿತು. ಜೊತೆಗೆ ಅಪರಾಧಿ ಬುಡಕಟ್ಟುಗಳನ್ನು ವಿಮುಕ್ತಗೊಳಿಸುವುದಷ್ಟೇ ತಮ್ಮ ಕರ್ತವ್ಯವೆಂದು ಈ ಸರ್ಕಾರ ಭಾವಿಸಿತೇನೊ, ಅದರಾಚೆಗೆ ಅದು ಹೆಚ್ಚು ತಲೆ ಕೆಡಿಸಿಕೊಳ್ಳಲಿಲ್ಲ. ಪ್ರಾಯಶಃ ವಿಮುಕ್ತ ಬುಡಕಟ್ಟು ಜನ ವಿದ್ಯಾವಂತರಾಗುವಲ್ಲಿ ಸಫಲತೆಯಾಗದಿರುವ ಕಾರಣಗಳಲ್ಲಿ ಇದೂ ಒಂದಾಗಿರಬಹುದು. ಹಾಗೆ ಬಡತನ, ಅಪರಾಧಿಗಳೆಂದು ವ್ಯವಸ್ಥೆ ನೋಡುವ ದೃಷ್ಟಿಕೋನದಿಂದಾಗುವ ಅವಮಾನ, ಕೀಳಿರಿಮೆಗಳೂ ಕಾರಣವಾಗಿರಬಹುದು. ಇದರೊಂದಿಗೆ ಮೂಲತಃ ಕಾಡುವಾಸಿ ಜನವಾದ ಬುಡಕಟ್ಟು ಜನಕ್ಕೆ ಆಧುನಿಕ ಶಿಕ್ಷಣ, ಆಧುನಿಕ ಆರೋಗ್ಯ ಪದ್ದತಿಗಳು ಅಷ್ಟೇನು ಆಪೇಕ್ಷಣೀಯವಲ್ಲವೆನಿಸಿರಬಹುದು. ಆದರೂ ಇತ್ತೀಚೆಗೆ ಇವರಲ್ಲಿ ಆಧುನಿಕ ಶಿಕ್ಷಣ ಮತ್ತು ಆರೋಗ್ಯದ ಕುರಿತು ಹೆಚ್ಚಿನ ಉತ್ಸಾಹಗಳು ಕಂಡುಬರುತ್ತಿವೆ

ಇಲ್ಲಿ ಕ್ಷೇತ್ರಕಾರ್ಯದ ಮೂಲಕ ಕಲೆಹಾಕಿದ ಮಾಹಿತಿಗಳನ್ನಿರಿಸಿಕೊಂಡು ಸೆಟಲಮೆಂಟ ಜನರ ಸಾಕ್ಷರತೆಯ ಪ್ರಮಾಣ ಮತ್ತು ಆರೋಗ್ಯವನ್ನು ನೋಡಲಾಗಿದೆ.

ಭೋವಿ ಜನರ ಶೈಕ್ಷಣಿಕ ಸ್ಥಿತಿಗತಿ

ಕಾಡನ್ನೇ ಅವಲಂಬಿಸಿ ಅಲೆಮಾರಿ ಜೀವನ ಸಾಗಿಸುತ್ತಿದ್ದ ಭೋವಿಗಳಿಗೆ ಮೊದಲು ಆಧುನಿಕ ಶಿಕ್ಷಣದ ಗಂಧ ಗಾಳಿಯೂ ಇರಲಿಲ್ಲ. ಇವರನ್ನು ಸೆಟ್ಲ್‌ಮೆಂಟ್‌ಗಳಲ್ಲಿ ಕೂಡಿ ಹಾಕಿದ ತರುವಾಯ ಇತರ ಮಕ್ಕಳು ಶಾಲೆಯ ಮುಖವನ್ನು ನೋಡುವಂತಾಯಿತು. ಬ್ರಿಟಿಷರ ಕಾಲದಲ್ಲಿ ಅಲ್ಪಸ್ವಲ್ಪ ಶಾಲೆಯನ್ನೇನೋ ಕಲಿಯುವ ಸೌಭಾಗ್ಯ ಬೋವಿ ಮಕ್ಕಳದಾಗಿತ್ತು. ಆದರೆ ಸ್ವಾತಂತ್ರ್ಯ ನಂತರ ಇವರು ಯಾವುದೇ ಹಿಡಿತಗಳಿಗೆ ಸಿಲುಕದೆ ಸ್ವತಂತ್ರ್ಯರಾದರು. ತರುವಾಯ ಇವರು ಮೊದಲಿನಂತೆಯೇ ತಮ್ಮ ಹೊಟ್ಟೆ ಪಾಡಿಗೆ ಹೆಚ್ಚಿನ ಲಕ್ಷ್ಯವನ್ನು ಕೊಟ್ಟು ಶಿಕ್ಷಣದ ಕಡೆಗೆ ಹೆಚ್ಚಿನ ಲಕ್ಷ್ಯ ಕೊಡದೆ ಹೋದರು. ಹೀಗಾಗಿ ಸ್ವಾತಂತ್ರ್ಯ ಪೂರ್ವದ ಸ್ಥಿತಿಗಿಂತಲೂ ಸ್ವಾತಂತ್ರ್ಯ ನಂತರದ ಇವರ ಶೈಕ್ಷಣಿಕ ಸ್ಥಿತಿ ತುಂಬಾ ಶೋಚನೀಯವಾಗಿಯೇ ಉಳಿಯಿತು.

ಇತ್ತೀಚಿಗೆ ಸರ್ಕಾರದ ಕಡ್ಡಾಯ ಶಿಕ್ಷಣ ನೀತಿ ಮತ್ತು ಇತರ ಸೌಲಭ್ಯಗಳಿಂದಾಗಿ ಇತ್ತೀಚಿಗೆ ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ.

ಇಲ್ಲಿ ಅಧ್ಯಯನದ ಅನುಕೂಲಕ್ಕಾಗಿ ಭೋವಿಗಳನ್ನು ಎರಡು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ. ಮೊದಲನೆಯದು ಶಿಕ್ಷಣ ಪಡೆಯಲು ಅನರ್ಹವಾದ ಗುಂಪು, ಎರಡನೇಯದು ಶಿಕ್ಷಣ ಪಡೆಯಲು ಅರ್ಹವಾದ ಗುಂಪು. ೦-೪ರ ವಯೋಮಿತಿಯ ಮಕ್ಕಳು ಸರ್ಕಾರದ ನಿಯಮದ ಪ್ರಕಾರ ಶಾಲೆಗೆ ಹೋಗಲು ಬಾರದೇ ಇರುವುದರಿಂದ ಈ ಗುಂಪಿನ ಮಕ್ಕಳನ್ನು ಶಿಕ್ಷಣ ಪಡೆಯಲು ಅನರ್ಹರೆಂದೇ ಪರಿಗಣಿಸಲಾಗಿದೆ. ಇನ್ನುಳಿದ ಎಲ್ಲಾ ವಯೋಮಾನದವರು ಸಹ ಶಿಕ್ಷಣ ಪಡೆಯಲು ಅರ್ಹವಾಗಿದ್ದಾರೆ. ಹೀಗಾಗಿ ಇವರನ್ನು ಶಿಕ್ಷಣ ಪಡೆಯಲು ಅರ್ಹವಾದ ಗುಂಪೆಂದು ಪರಿಗಣಿಸಲಾಗಿದೆ.

ಕೋಷ್ಟಕ ೬.೧: ಸಮೀಕ್ಷೆಗೊಳಪಟ್ಟ ಭೋವಿ ಸಮುದಾಯದ ಸಾಕ್ಷರತೆ ಅರ್ಹ ಮತ್ತು ಅನರ್ಹ ಗುಂಪು

ಸಂ.	ವಿವರ	ಪುರುಷರು	ಮಹಿಳೆಯರು	ಒಟ್ಟು
೦೧	ಸಾಕ್ಷರತೆ ಪಡೆಯಲು ಅನರ್ಹವಾದವರು	೪೫	೩೨	೭೭
೦೨.	ಸಾಕ್ಷರತೆ ಪಡೆಯಲು ಅರ್ಹವಾದವರು	೫೫೭	೪೭೯	೦೩೬

ಸಾಕ್ಷರತೆ ಪಡೆಯಲು ಅನರ್ಹವಾದವರ ಒಟ್ಟು ಪ್ರಮಾಣ ಶೇ. ೬.೯೧ ಇದ್ದು ಅದರಲ್ಲಿ ಗಂಡು ಮಕ್ಕಳ ಪ್ರಮಾಣ ಶೇ. ೭.೪೭ ಹಾಗೂ ಹೆಣ್ಣು ಮಕ್ಕಳ ಪ್ರಮಾಣ ಶೇ. ೬.೨೬ ಮಾತ್ರ ಕಂಡುಬರುತ್ತದೆ. ಸಾಕ್ಷರತೆ ಪಡೆಯಲು ಅರ್ಹವಾದವರ ಪ್ರಮಾಣ ಒಟ್ಟು ಶೇ. ೯೩.೦೯ ಇದ್ದು ಅದರಲ್ಲಿ ಪುರುಷರ ಪ್ರಮಾಣವು ಶೇ. ೯೨.೫೨ ಹಾಗೂ ಮಹಿಳೆಯರ ಪ್ರಮಾಣ ಶೇ. ೯೩.೭೩ ರಷ್ಟಿದೆ.

ಈ ಸಾಕ್ಷರತೆ ಪಡೆಯಲು ಅರ್ಹವಾದವರಲ್ಲಿ ಸಾಕ್ಷರತೆ ಹೊಂದಿದವರ ಪ್ರಮಾಣವು ಪುರಷರಲ್ಲಿ ಶೇ.೪೧.೮೩ ಹಾಗೂ ಮಹಿಳೆಯರಲ್ಲಿ ಶೇ. ೨೮.೧೮ ಸಾಕ್ಷರತೆಯನ್ನು ಪಡೆದವರ ಒಟ್ಟು ಪ್ರಮಾಣವು ಶೇ. ೩೫.೫೨ ರಷ್ಟು ಮಾತ್ರ ಕಂಡುಬರುತ್ತದೆ.

ಸಾಕ್ಷರತೆ ಪಡೆದವರಲ್ಲಿ ಮೆಟ್ರಿಕ್ ಪೂರ್ವ ಶಿಕ್ಷಣ ಪಡೆದವರ ಒಟ್ಟು ಪ್ರಮಾಣವು ಶೇ. ೮೧.೫೨ರಷ್ಟು ಇದೆ. ಇದರಲ್ಲಿ ಪುರುಷರು ಶೇ.೭೭.೬೮ ರಷ್ಟಿದ್ದರೆ ಮಹಿಳೆಯರು ಶೇ. ೮೮.೧೪ರಷ್ಟು ಕಂಡುಬರುತ್ತದೆ.

ಮೆಟ್ರಿಕ್ ಪೂರ್ವ ಸಾಕ್ಷರದಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಕಲಿಯುತ್ತಿರುವ ಮಕ್ಕಳು ಪ್ರಮಾಣ ಶೇ.೩೭.೩೫ ರಷ್ಟಿದೆ. ಇದರಲ್ಲಿ ಗಂಡುಮಕ್ಕಳ ಪ್ರಮಾಣ ಶೇ. ೩೪.೮ ಹಾಗೂ ಮಹಿಳೆಯರ ಪ್ರಮಾಣ ಶೇ. ೪೧.೬೮ರಷ್ಟಿದೆ.

ಮಾಧ್ಯಮಿಕ ಶಿಕ್ಷಣ ಪಡೆದವರ ಪ್ರಮಾಣವು ಒಟ್ಟು ಶೇ. ೩೬.೯೯ರಷ್ಟಿದೆ. ಇದರಲ್ಲಿ ಪುರುಷರು ೪೧.೪೫ ಮಹಿಳೆಯರು ಶೇ. ೩೦.೨೫ರಷ್ಟು ಕಂಡುಬರುತ್ತದೆ.

ಕೋಷ್ಟಕ ೬.೨: ಸಮೀಕ್ಷೆಗೊಳಪಟ್ಟ ಭೋವಿ ಸಮುದಾಯದ ಸಾಕ್ಷರತೆ ಪ್ರಮಾಣ

	ಪುರುಷ	ಸ್ತ್ರೀ	ಒಟ್ಟು
ಒಟ್ಟು ಜನಸಂಖ್ಯೆ	೬೦೨	೫೧೧	೧೧೧೩
ಸಾಕ್ಷರರು	೨೩೩	೧೩೫	೩೬೮
ಮೆಟ್ರೀಕ್ ಪೂರ್ವ ಸಾಕ್ಷರತೆ	೧೮೧	೧೧೯	೩೦೦
ಪ್ರಾಥಮಿಕ ಶಿಕ್ಷಣ	೬೩	೪೯	೧೧೨
ಮಾಧ್ಯಮಿಕ	೭೫	೩೬	೧೧೧
ಪ್ರೌಡ	೪೩	೩೪	೭೭
ಮೆಟ್ರೀಕ್ ನಂತರದ ಸಾಕ್ಷರತೆ	೫೨	೧೬	೬೮
ಪದವಿ ಪೂರ್ವ	೩೪	೧೨	೪೬
ಪದವಿ	೧೫	೩	೧೮

ಸ್ನಾತಕೋತ್ತರ	೧	೧	೨
ಇತರೆ	೨	–	೨
ಅನಕ್ಷರರು	೩೨೪	೩೪೪	೬೬೮
ರಾಜ್ಯದ ಸರಾಸರಿ ಸಾಮಾನ್ಯ ಸಾಕ್ಷರತೆ ಪ್ರಮಾಣ (೨೦೦೧)	೭೬.೨೯%	೫೭.೪೫%	೬೫.೦೪%
ಭೋವಿ ಸಮುದಾಯದ ಸರಾಸರಿ ಸಾಕ್ಷರತೆ ಪ್ರಮಾಣ (ಸಮೀಕ್ಷೆ ಪ್ರಕಾರ)	೪೧.೮೩	೨೮.೧೮	೩೫.೫೨
ಈ ಸಮುದಾಯ ಮತ್ತು ರಾಜ್ಯದ ಸರಾಸರಿ ಸಾಕ್ಷರತೆ ಪ್ರಮಾಣದ ನಡುವಿನ ಅಂತರ	೩೪.೪೬	೨೯.೨೭	೨೯.೫೨

ಪ್ರೌಢ ಶಿಕ್ಷಣ ಹೊಂದಿದವರ ಒಟ್ಟು ಪ್ರಮಾಣವು ಶೇ. ೨೫.೬೬ ಇದ್ದು ಅದರಲ್ಲಿ ಪುರುಷರು ಶೇ. ೨೩.೭೫ ಹಾಗೂ ಮಹಿಳೆಯರು ಶೇ.೨೮.೫೭ ಹಾಗೂ ಮಹಿಳೆಯರು ಕಂಡುಬರುತ್ತಾರೆ.

ಇದರಲ್ಲಿ ಪದವಿಪೂರ್ವ ಶಿಕ್ಷಣ ನಡೆಸಿದ ಮತ್ತು ನಡೆಸುತ್ತಿರುವ ಒಟ್ಟು ಪ್ರಮಾಣವು ಶೇ. ೬೭.೬೪ರಷ್ಟಿದೆ. ಇದರಲ್ಲಿ ಪುರುಷರು ಶೇ. ೬೫.೩೯ ಹಾಗೂ ಮಹಿಳೆಯರು ಶೇ. ೭೫ರಷ್ಟು ಕಂಡುಬರುತ್ತಾರೆ. ಪದವಿ ಪಡೆದವರ ಒಟ್ಟು ಪ್ರಮಾಣ ಶೇ. ೫.೯ ಇದ್ದು ಇದರಲ್ಲಿ ಪುರುಷರು ಶೇ. ೨೮.೮೫ ಹಾಗೂ ಮಹಿಳೆಯರು ಶೇ. ೧೮.೭೫ರಷ್ಟಿದ್ದಾರೆ. ಸ್ನಾತಕೋತ್ತರ ಪದವಿಯನ್ನು ಪಡೆದವರಲ್ಲಿ ಒಬ್ಬ ಪುರುಷ (ಶೇ. ೧.೯೨) ಹಾಗೂ ಒಬ್ಬ ಮಹಿಳೆ (ಶೇ. ೬.೨೫) ಮಾತ್ರ ಕಂಡುಬರುತ್ತಾರೆ.

ಜೆ.ಓ.ಸಿ. ಇತ್ಯಾದಿ ಇತರೆ ಶಿಕ್ಷಣ ಪಡೆದವರು ಪುರುಷರಲ್ಲಿ ಕೇವಲ ಇಬ್ಬರು (ಶೇ. ೩.೮೪) ಮಾತ್ರ ಕಂಡುಬರುತ್ತಾರೆ.

ಸೆಟ್ಲ್‌ಮೆಂಟ್ ಬೋವಿಗಳಲ್ಲಿ ಇವರಿಗೂ ಅನಕ್ಷರಸ್ಥರ ಪ್ರಮಾಣವು ಒಟ್ಟು ಶೇ. ೬೪.೪೭ರಷ್ಟಿದೆ. ಇದರಲ್ಲಿ ಪುರುಷರು ಶೇ. ೫೮.೧೬ ಹಾಗೂ ಮಹಿಳೆಯರು ಶೇ. ೭೧.೮೧ರ ಪ್ರಮಾಣದಲ್ಲಿ ಅನಕ್ಷರಸ್ಥರಿದ್ದಾರೆ.

ಸೆಟ್ಲ್‌ಮೆಂಟ್ ಬೋವಿಗಳ ಸಾಕ್ಷರರ ಪ್ರಮಾಣ ಒಟ್ಟು ೩೫.೫೨ ಇದೆ. ಕರ್ನಾಟಕದ ಒಟ್ಟು ಸಾಕ್ಷರತೆಯ ಪ್ರಮಾಣಕ್ಕಿಂತ ಒಟ್ಟು ಶೇ. ೨೯.೫೨ ಅಂತರದ ಪ್ರಮಾಣದಲ್ಲಿ ಈ ಸಮುದಾಯವಿದೆ.

ಗಂಟಿಚೋರ

ಸಾಕ್ಷರತೆ ಪ್ರಮಾಣ

೧೯೬೧ ರಿಂದ ೨೦೦೧ರವರೆಗಿನ ಜನಗಣತಿ ವರದಿಯನ್ನು ಅವಲೋಕಿಸಿದರೆ ಗಂಟಿ ಚೋರರಲ್ಲಿ ಎಷ್ಟು ಜನ ಸಾಕ್ಷರರಿದ್ದಾರೆ. ಎಷ್ಟು ಜನ ಶಾಲೆಗೆ ಹೋಗದೆ ಸಹಿ ಮಾತ್ರ ಮಾಡಲು ಮತ್ತು ಅಲ್ಪ ಸ್ವಲ್ಪ

ಓದಲು ಬರುವವರಿದ್ದಾರೆ, ಎಷ್ಟು ಜನ ಶಾಲೆಗೆ ಹೋಗಿ ಶಿಕ್ಷಣವನ್ನು ಪಡೆದಿದ್ದಾರೆ ಮತ್ತು ಅನಕ್ಷರಸ್ಥರೆಷ್ಟು ಎಂಬುದು ತಿಳಿದು ಬರುತ್ತದೆ.

ಕೋಷ್ಟಕ ೬.೩: ೧೯೬೧-೨೦೦೧ರವರೆಗಿನ ಗಂಟಿಚೋರರ ಸಾಕ್ಷರತಾ ಪ್ರಮಾಣ

ಕ್ರ.ಸಂ.	ವಿವರ	ಗಂಡು	ಹೆಣ್ಣು
೦೧.	ಅನಕ್ಷರಸ್ಥ	೨೪೯	೨೨೪
೦೨.	ಶಾಲೆಗೆ ಹೋಗದ ಸಾಕ್ಷರ	೨೪	೩
೦೩.	ಮೆಟ್ರಿಕ್ಯೂಲೇಷನ ಒಳಗೆ	೩	–
೦೪.	ಮೆಟ್ರಿಕ್ಯೂಲೇಷನ ನಂತರದ ಶಿಕ್ಷಣ	–	–

೧೯೭೧

ಕ್ರ.ಸಂ.	ವಿವರ	ಗಂಡು	ಹೆಣ್ಣು
೦೧.	ಅನಕ್ಷರಸ್ಥ	೩೧೫	೩೦೭
೦೨.	ಶಾಲೆಗೆ ಹೋಗದ ಸಾಕ್ಷರ	೨೫	೧೦
೦೩.	ಮೆಟ್ರಿಕ್ಯುಲೇಷನ ಒಳಗೆ	೪೧	೧೩
೦೪.	ಮೆಟ್ರಿಕ್ಯುಲೇಷನ ನಂತರದ ಶಿಕ್ಷಣ	–	–

೧೯೮೧

ಕ್ರ.ಸಂ.	ವಿವರ	ಗಂಡು	ಹೆಣ್ಣು
೦೧.	ಅನಕ್ಷರಸ್ಥ	೯೩೫	೧೧೮೭
೦೨.	ಶಾಲೆಗೆ ಹೋಗದ ಸಾಕ್ಷರ	೧೫೧	೯೮
೦೩.	ಮೆಟ್ರಿಕ್ಯುಲೇಷನ ಒಳಗೆ	೧೧೫	೧೯
೦೪.	ಮೆಟ್ರಿಕ್ಯುಲೇಷನ ನಂತರದ ಶಿಕ್ಷಣ	೩೨	೨

೧೯೯೧

ಕ್ರ.ಸಂ.	ವಿವರ	ಗಂಡು	ಹೆಣ್ಣು
೦೧.	ಅನಕ್ಷರಸ್ಥ	೭೬೫	೧೧೯೬
೦೨.	ಶಾಲೆಗೆ ಹೋಗದ ಸಾಕ್ಷರ	೨೧೭	೧೬೨
೦೩.	ಮೆಟ್ರಿಕ್ಯುಲೇಷನ ಒಳಗೆ	೫೪೦	೩೨೧
೦೪.	ಮೆಟ್ರಿಕ್ಯುಲೇಷನ ನಂತರದ ಶಿಕ್ಷಣ	೧೧೦	೨೬

೨೦೦೧

ಕ್ರಸಂ.	ವಿವರ	ಗಂಡು	ಹೆಣ್ಣು
೦೧.	ಅನಕ್ಷರಸ್ಥ	೭೦೬	೧೦೯೬
೦೨.	ಶಾಲೆಗೆ ಹೋಗದ ಸಾಕ್ಷರ	೧೧	೮
೦೩.	ಮೆಟ್ರಿಕ್ಯುಲೇಷನ ಒಳಗೆ	೧೦೦೬	೭೮೭
೦೪.	ಮೆಟ್ರಿಕ್ಯುಲೇಷನ್ ನಂತರದ ಶಿಕ್ಷಣ	೧೯೮	೬೫

೧೯೬೧ ರಿಂದ ೨೦೦೧ರವರೆಗಿನ ಸಾಕ್ಷರರ (ಗಂಟಿಚೋರ) ವರದಿಯನ್ನು ಒಟ್ಟು ಜನಸಂಖ್ಯೆಗೆ ಹೋಲಿಕೆ ಮಾಡಿ ನೋಡಿದರೆ ಸಾಕ್ಷರರ ಪ್ರಮಾಣವು ಹೆಚ್ಚುತ್ತಾ ಹೋಗಿರುವುದನ್ನು ಕಾಣಬಹುದಾಗಿದೆ. ೧೯೭೧ರವರೆಗೆ ಮೆಟ್ರಿಕ್ಯುಲೇಷನ್ ನಂತರದ ಶಿಕ್ಷಣವನ್ನು ಪೂರೈಸಿದ ಒಬ್ಬ ವ್ಯಕ್ತಿಯೂ ಕಂಡು ಬರುವುದಿಲ್ಲ. ಆದರೆ ೧೯೮೧ರ ನಂತರ ಮೆಟ್ರಿಕ್ಯುಲೇಷನ್ ನಂತರದ ಶಿಕ್ಷಣ ಪಡೆಯುವರಲ್ಲಿಯೂ ಪ್ರಮಾಣ ನಿಧಾನಕ್ಕೆ ಹೆಚ್ಚಳಗೊಂಡಿರುವುದನ್ನು ಕಾಣಬಹುದಾಗಿದೆ. (ನಂದುರಾಮ್:೨೦೦೮:೨೩೯)

ಸಮೀಕ್ಷೆ ಪ್ರಕಾರ (೨೦೦೮-೦೯ರಲ್ಲಿ) ಸೆಟ್ಲಮೆಂಟ್‌ಗಳಲ್ಲಿ ವಾಸವಿರುವ ಗಂಟಿಚೋರರ ಸಾಕ್ಷರತೆ ಪ್ರಮಾಣವನ್ನು ದಾಖಲಿಸಿಕೊಳ್ಳಲಾಯಿತು. ಆ ಪ್ರಕಾರ ಸಾಕ್ಷರತೆಗೆ ಅರ್ಹರೆಂದು ಪರಿಗಣಿಸಲು (೦-೪) ಸಾಧ್ಯವಾಗದವರು ಒಟ್ಟು ಪ್ರಮಾಣ ಶೇ. ೭.೭೩ರಷ್ಟಿದೆ.

ಕೋಷ್ಟಕ ೬.೪: ಸಮೀಕ್ಷೆಗೊಳಪಟ್ಟ ಗಂಟಿಚೋರರ ಸಮುದಾಯದ ಸಾಕ್ಷರತೆ ಪ್ರಮಾಣ

	ಪುರುಷ	ಸ್ತ್ರೀ	ಒಟ್ಟು
ಒಟ್ಟು ಜನಸಂಖ್ಯೆ	೧೫೩೦	೧೪೨೬	೨೯೫೬
ಸಾಕ್ಷರತೆಗೆ ಅನರ್ಹರರು	೧೦೮	೧೦೭	೨೧೫
ಸಾಕ್ಷರ ಅರ್ಹರು	೧೪೨೨	೧೩೧೯	೨೭೪೧
ಸಾಕ್ಷರರು	೫೩೪	೩೩೩	೮೬೭
ಮೆಟ್ರಿಕ್ ಪೂರ್ವ ಸಾಕ್ಷರತೆ	೩೯೩	೩೦೫	೬೯೮
ಪ್ರಾಥಮಿಕ ಶಿಕ್ಷಣ	೧೩೯	೧೦೯	೨೪೮
ಮಾಧ್ಯಮಿಕ	೧೩೨	೧೧೪	೨೪೬
ಪ್ರೌಢ	೧೨೨	೮೨	೨೦೪
ಮೆಟ್ರಿಕ್ ನಂತರದ ಸಾಕ್ಷರತೆ	೧೪೧	೨೮	೧೬೯
ಪದವಿ ಪೂರ್ವ	೮೭	೨೦	೧೦೭
ಡಿಪ್ಲೋಮ	೧	೦	೧
ಪದವಿ	೩೮	೭	೪೫

ಸ್ನಾತಕೋತ್ತರ	೨	೦	೨
ಇತರೆ	೧೩	೧	೧೪
ಅನಕ್ಷರರು	೮೮೮	೯೮೬	೧೮೭೪
ರಾಜ್ಯದ ಸರಾಸರಿ ಸಾಮಾನ್ಯ ಸಾಕ್ಷರತೆ ಪ್ರಮಾಣ(೨೦೦೧)	೭೬.೨೯	೫೭.೪೫	೬೫.೦೪
ಗಂಟಿಚೋರ್ ಸಮುದಾಯದ ಸರಾಸರಿ ಸಾಕ್ಷರತೆ ಪ್ರಮಾಣ (ಸಮೀಕ್ಷೆ ಪ್ರಕಾರ)	೩೭.೫೫	೨೫.೨೪	೩೧.೬೪
ಈ ಸಮುದಾಯ ಮತ್ತು ರಾಜ್ಯದ ಸರಾಸರಿ ಸಾಕ್ಷರತೆ ಪ್ರಮಾಣದ ನಡುವಿನ ಅಂತರ	೩೮.೭೪	೩೨.೨೧	೩೩

ಸಾಕ್ಷರತೆಗೆ ಅರ್ಹರಾದವರ ಪ್ರಮಾಣ ಒಟ್ಟು ಶೇ. ೯೨.೨೭ರಷ್ಟಿದೆ. ಆದರೆ ಅದರಲ್ಲಿ ನಿಜವಾಗಿಯೂ ಸಾಕ್ಷರರಾದವರ ಪ್ರಮಾಣ ಒಟ್ಟು ಶೇ. ೩೧.೫೫ ರಷ್ಟಿದೆ. ಇದರಲ್ಲಿ ಶೇ. ೩೭.೫೫ ಪುರುಷರು ಮತ್ತು ಶೇ. ೨೫.೨೪ ಮಹಿಳೆಯರ ಪ್ರಮಾಣವಿದೆ. ಅಂದರೆ ಸಾಕ್ಷರತೆ ಹೊಂದಿದವರಲ್ಲಿ ಮಹಿಳೆಯರಿಗಿಂತ ಪುರುಷರು ಹೆಚ್ಚಿನ ಸಂಖ್ಯೆಯಲ್ಲಿರುವುದು ಕಂಡು ಬರುತ್ತದೆ. ಇದರಲ್ಲಿ ಮೆಟ್ರಿಕ್ ಪೂರ್ವ ಸಾಕ್ಷರತೆ ಪಡೆದವರ ಒಟ್ಟು ಪ್ರಮಾಣ ಶೇ. ೮೦.೫೧ರಷ್ಟಿದೆ. ಇದರಲ್ಲಿ ಪ್ರಾಥಮಿಕ ಶಿಕ್ಷಣ ಪಡೆದವರ ಪ್ರಮಾಣವು ಒಟ್ಟು ಶೇ. ೩೫.೫೩ ಇದೆ. ಇದರಲ್ಲಿ ಪುರುಷರ ಪ್ರಮಾಣ ಶೇ. ೩೫.೩೭ ಇದ್ದರೆ ಮಹಿಳೆಯರ ಪ್ರಮಾಣ ಶೇ. ೩೫.೭೩ ಇದೆ. ಅಂದರೆ ಪ್ರಾಥಮಿಕ ಶಿಕ್ಷಣ ಪಡೆದವರಲ್ಲಿ ಪುರುಷರಿಗಿಂತ ಮಹಿಳೆಯರ ಪ್ರಮಾಣವೇ ಹೆಚ್ಚಿದೆ. ಮಾಧ್ಯಮಿಕ ಶಿಕ್ಷಣ ಪಡೆದವರು ಒಟ್ಟು ಶೇ. ೩೫.೨೫ರಷ್ಟಿದ್ದಾರೆ. ಪ್ರೌಢ ಶಿಕ್ಷಣ ಪಡೆದವರ ಪ್ರಮಾಣ ಒಟ್ಟು ಶೇ. ೨೯.೨೨ರಷ್ಟಿದೆ. ಮಾಧ್ಯಮಿಕದಲ್ಲಿ ಪುರುಷರ ಪ್ರಮಾಣ ಮಹಿಳೆಯರ ಪ್ರಮಾಣಕ್ಕಿಂತ ಹೆಚ್ಚುತ್ತಾ ಸಾಗುತ್ತದೆ.

ಮೆಟ್ರಿಕ್ ನಂತರದ ಸಾಕ್ಷರತೆ ಹೊಂದಿದವರ ಒಟ್ಟು ಪ್ರಮಾಣ ಶೇ. ೧೯.೪೯ ಇದೆ. ಇದರಲ್ಲಿ ಪುರುಷರು ಶೇ. ೨೬.೪೦ ಇದ್ದರೆ ಮಹಿಳೆಯರ ಪ್ರಮಾಣ ಶೇ. ೯.೧೮ ಮಾತ್ರವಿದೆ. ಇದರಲ್ಲಿ ಪದವಿಪೂರ್ವ ಶಿಕ್ಷಣ ಪಡೆದವರ ಪ್ರಮಾಣ ಅತ್ಯಧಿಕ (ಶೇ. ೬೩.೩೧) ಇದ್ದು ಅದರಲ್ಲಿ ಪುರುಷರಿಗಿಂತ (ಶೇ. ೬೧.೭೨) ಮಹಿಳೆಯರ ಪ್ರಮಾಣ (ಶೇ. ೭೧.೪೩) ಹೆಚ್ಚಾಗಿದೆ. ಆದರೆ ನಂತರ ವೃತ್ತಿ ಆಧಾರಿತ ಕೋರ್ಸ್ ಮತ್ತು ಇತರ ಪದವಿಗಳಲ್ಲಿ ಪುರುಷರಿಗಿಂತ ಮಹಿಳೆಯರ ಪ್ರಮಾಣ ಗಣನೀಯವಾಗಿ ಇಳಿಮುಖಗೊಳ್ಳುತ್ತಾ ಸಾಗಿದೆ. ಸ್ನಾತಕೋತ್ತರ ಪದವಿಯಲ್ಲಂತೂ, ಒಬ್ಬೇ ಒಬ್ಬ ಮಹಿಳೆ ಇಲ್ಲದಿರುವುದು ಕಂಡು ಬರುತ್ತದೆ.

ರಾಜ್ಯದ ಒಟ್ಟು ಸಾಕ್ಷರತಾ ಪ್ರಮಾಣಕ್ಕೆ ಹೋಲಿಕೆ ಮಾಡಿದರೆ ಗಂಟಿ ಚೋರರ ಸಾಕ್ಷರತಾ ಪ್ರಮಾಣ ಶೋಚನೀಯವಾಗಿದೆ. ರಾಜ್ಯದ ಒಟ್ಟು ಸಾಕ್ಷರತೆಗೆ ಇತರ ಸಾಕ್ಷರತೆ ಪ್ರಮಾಣದ ಅಂತರವು ಒಟ್ಟು ಶೇ. ೩೩.೪೦ರಷ್ಟಿದೆ. ಇದರಲ್ಲಿಯೂ ಪುರುಷರ ಸಾಕ್ಷರತೆ ಪ್ರಮಾಣದ ಅಂತರ ಶೇ. ೩೮.೭೪ ಹಾಗೂ ಮಹಿಳೆಯರ ಸಾಕ್ಷರತೆ ಪ್ರಮಾಣದ ಅಂತರ ಶೇ. ೩೨.೨೧ರಷ್ಟಿದೆ.

ಈ ರೀತಿ ಇವರು ಸಾಕ್ಷರತೆ ಕೊರತೆ ಅನುಭವಿಸಲು ಇರುವ ಮುಖ್ಯ ಕಾರಣ ಸಾಕ್ಷರತೆಯ ಬಗ್ಗೆ ತಿಳುವಳಿಕೆ ಇಲ್ಲದಿರುವುದು ಮತ್ತು ಬಡತನಗಳೇ ಕಾರಣವಾಗಿದೆ.

ಕೊರಮ

ಇತ್ತೀಚಿನ ದಿನಗಳಲ್ಲಿ ಪ್ರಜ್ಞಾವಂತರಾಗಿರುವ ಕೊರಮರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಲು ಹೆಚ್ಚು ಉತ್ಸಾಹ ತೋರುತ್ತಿರುವುದು ಆಶಾದಾಯಕ ವಿಚಾರವೆಂದೇ ಹೇಳಬಹುದು. ನಾವಾದರೂ ಕಲಿಯಲಿಲ್ಲ ನಮ್ಮ ಮಕ್ಕಳಾದರೂ ಕಲಿಯಲಿ ಎಂಬ ಭಾವನೆ ಇವರಲ್ಲಿ ಕಂಡುಬರುತ್ತಿದೆ. ಸಮೀಕ್ಷೆಗೆ ಒಳಪಟ್ಟವರಲ್ಲಿ ಸಾಕ್ಷರತೆಗೆ ಅರ್ಹವಾದವರು ಶೇ. ೯೧.೩೩ರ ಪ್ರಮಾಣದಲ್ಲಿದ್ದಾರೆ. ಆದರೆ ಸಾಕ್ಷರರ ಪ್ರಮಾಣ ೨೬.೩೭ರಷ್ಟು ಮಾತ್ರ ಕಂಡುಬರುತ್ತದೆ.

ಕೋಷ್ಟಕ ೬.೫: ಸಮೀಕ್ಷೆಗೊಳಪಟ್ಟ ಕೊರಮ ಸಮುದಾಯದ ಸಾಕ್ಷರತೆ ಪ್ರಮಾಣ

	ಪುರುಷ	ಸ್ತ್ರೀ	ಒಟ್ಟು
ಒಟ್ಟು ಜನಸಂಖ್ಯೆ	೩೦೭೨	೨೮೯೯	೫೯೭೧
ಸಾಕ್ಷರತೆಗೆ ಅನರ್ಹರರು	೨೭೫	೨೪೩	೫೧೮
ಸಾಕ್ಷರ ಅರ್ಹರು	೨೭೯೭	೨೬೫೬	೫೪೫೩
ಸಾಕ್ಷರರು	೯೧೯	೫೧೮	೧೪೩೮
ಮೆಟ್ರಿಕ್ ಪೂರ್ವ ಸಾಕ್ಷರತೆ	೭೮೮	೪೮೧	೧೨೬೯
ಪ್ರಾಥಮಿಕ ಶಿಕ್ಷಣ	೩೬೩	೨೬೬	೬೨೯
ಮಾಧ್ಯಮಿಕ	೨೧೨	೧೩೧	೩೪೩
ಪ್ರೌಢ	೨೧೩	೮೪	೨೯೭
ಮೆಟ್ರಿಕ್ ನಂತರದ ಸಾಕ್ಷರತೆ	೧೩೧	೩೭	೧೬೯
ಪದವಿ ಪೂರ್ವ	೮೫	೨೪	೧೦೯
ಡಿಪ್ಲೊಮಾ	೫	–	೫
ಪದವಿ	೨೮	೫	೩೪
ಸ್ನಾತಕೋತ್ತರ	೩	೩	೬
ಇತರೆ	೧೦	೫	೧೫

ಅನಕ್ಷರರು	೮೭೮	೨೧೩೮	೪೦೧೫
ರಾಜ್ಯದ ಸರಾಸರಿ ಸಾಮಾನ್ಯ ಸಾಕ್ಷರತೆ ಪ್ರಮಾಣ (೨೦೦೧)	೭೬.೨೯%	೫೭.೪೫%	೬೫.೦೪%
ಕೊರಮ ಸಮುದಾಯದ ಸರಾಸರಿ ಸಾಕ್ಷರತೆ ಪ್ರಮಾಣ (ಸಮೀಕ್ಷೆ ಪ್ರಕಾರ)	೩೨.೮೫%	೧೯.೫೦%	೨೬.೩೭%
ಈ ಸಮುದಾಯ ಮತ್ತು ರಾಜ್ಯದ ಸರಾಸರಿ ಸಾಕ್ಷರತೆ ಪ್ರಮಾಣದ ನಡುವಿನ ಅಂತರ	೪೩.೪೪%	೩೭.೯೫%	೩೮.೬೭%

೨೦೦೧ರ ಈಚೆಗೆ ವಿದ್ಯಾಭ್ಯಾಸದಲ್ಲಿ ತೊಡಗಿದವರ ಸಂಖ್ಯೆ ಈ ಸಮುದಾಯದಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ. ಸಾಕ್ಷರತೆ ಹೊಂದಿದ ಸೆಟಲಮೆಂಟ ಕೊರಮರಲ್ಲಿ ಮೆಟ್ರಿಕ್ ಪೂರ್ವ ಶಿಕ್ಷಣ ಪಡೆದವರ ಪ್ರಮಾಣ ಶೇ. ೮೮.೨೫ ಇದೆ. ಆದರೆ ಮೆಟ್ರಿಕ್ ನಂತರದ ಶಿಕ್ಷಣ ಪಡೆದವರ ಪ್ರಮಾಣ ೧೧.೭೫ ಮಾತ್ರ ಇದೆ. ಅಂದರೆ ಉನ್ನತ ಶಿಕ್ಷಣಕ್ಕೆ ಹೋದಂತೆಲ್ಲ ಕೊರಮರಲ್ಲಿ ಓದುವವರ ಪ್ರಮಾಣ ಕಡಿಮೆಯಾಗಿದೆ. ಮಾಧ್ಯಮಿಕ, ಪ್ರೌಢ ಶಿಕ್ಷಣ ಹೊಂದಿದವರಿಗಿಂತ ಪ್ರಾಥಮಿಕ ಶಿಕ್ಷಣ ಹೊಂದಿದ ಮಕ್ಕಳು ಹೆಚ್ಚಿನ ಪ್ರಮಾಣದಲ್ಲಿದ್ದಾರೆ.

ಪಾರ್ಧಿ

ಕೋಷ್ಟಕ ೬.೬: ಸಮೀಕ್ಷೆಗೊಳಪಟ್ಟ ಪಾರ್ಧಿ ಸಮುದಾಯದ ಸಾಕ್ಷರತೆ ಪ್ರಮಾಣ

	ಪುರುಷ	ಸ್ತ್ರೀ	ಒಟ್ಟು
ಒಟ್ಟು ಜನಸಂಖ್ಯೆ	೩೨೦೩	೩೨೧೨	೬೪೧೫
ಸಾಕ್ಷರತೆಗೆ ಅನರ್ಹರರು	೩೪೧	೩೫೬	೬೯೭
ಸಾಕ್ಷರ ಅರ್ಹರು	೨೮೬೨	೨೮೫೬	೫೭೧೮
ಸಾಕ್ಷರರು	೮೫೩	೪೪೦	೧೨೯೩
ಮೆಟ್ರಿಕ್ ಪೂರ್ವ ಸಾಕ್ಷರತೆ	೭೯೫	೪೨೯	೧೨೨೪
ಪ್ರಾಥಮಿಕ ಶಿಕ್ಷಣ	೩೮೪	೨೮೪	೬೬೮
ಮಾಧ್ಯಮಿಕ	೨೬೧	೧೧೧	೩೭೨
ಪ್ರೌಢ	೧೫೦	೩೪	೧೮೪
ಮೆಟ್ರಿಕ್ ನಂತರದ ಸಾಕ್ಷರತೆ	೫೮	೧೧	೬೯
ಪದವಿ ಪೂರ್ವ	೨೫	೬	೩೧
ಡಿಪ್ಲೋಮ	೭	–	೭
ಪದವಿ	೧೯	೩	೨೨

ಸ್ನಾತಕೋತ್ತರ	೨	-	೨
ಇತರೆ	೫	೨	೭
ಅನಕ್ಷರರು	೨೦೦೯	೨೪೧೬	೪೪೨೫
ರಾಜ್ಯದ ಸರಾಸರಿ ಸಾಮಾನ್ಯ ಸಾಕ್ಷರತೆ ಪ್ರಮಾಣ (೨೦೦೧)	೭೬.೨೯	೫೭.೪೫	೬೫.೦೪
ಪಾರ್ಧಿ ಸಮುದಾಯದ ಸರಾಸರಿ ಸಾಕ್ಷರತೆ ಪ್ರಮಾಣ (ಸಮೀಕ್ಷೆ ಪ್ರಕಾರ)	೨೯.೮	೧೫.೪	೨೨.೬೧
ಈ ಸಮುದಾಯ ಮತ್ತು ರಾಜ್ಯದ ಸರಾಸರಿ ಸಾಕ್ಷರತೆ ಪ್ರಮಾಣದ ನಡುವಿನ ಅಂತರ	೪೭.೪೯	೪೨.೦೫	೪೨.೪೩

ಇತ್ತೀಚೆಗೆ ಸ್ವಲ್ಪ ಮಟ್ಟಿಗೆ ಪ್ರಜ್ಞಾವಂತರಾಗಿರುವ ಪಾರ್ಧಿಗಳು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಲು ಹೆಚ್ಚು ಉತ್ಸಾಹ ತೋರುತ್ತಿರುವುದು ಆಶಾದಾಯಕ ವಿಚಾರವೆಂದೇ ಹೇಳಬಹುದು. ಆದರೂ ಸೆಟಲಮೆಂಟಿನ ಇತರ ಸಮುದಾಯಗಳಿಗೆ ಹೋಲಿಸಿದರೆ ಪಾರ್ಧಿಗಳ ಶೈಕ್ಷಣಿಕ ಸ್ಥಿತಿಯಂತೂ ಚಿಂತಾಜನಿಕವಾಗಿದೆ. ಇವರಲ್ಲಿಯ ಸಾಕ್ಷರರ ಪ್ರಮಾಣ ೨೬.೩೭ರಷ್ಟು ಮಾತ್ರ ಕಂಡುಬರುತ್ತದೆ.

೨೦೦೧ರ ಈಚೆಗೆ ವಿದ್ಯಾಭ್ಯಾಸದಲ್ಲಿ ತೊಡಗಿದವರ ಸಂಖ್ಯೆ ಈ ಸಮುದಾಯದಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ. ಸಾಕ್ಷರತೆ ಹೊಂದಿದ ಸೆಟಲಮೆಂಟ ಪಾರ್ಧಿಗಳಲ್ಲಿ ಮೆಟ್ರಿಕ್ ಪೂರ್ವ ಶಿಕ್ಷಣ ಪಡೆದವರ ಪ್ರಮಾಣ ಶೇ. ೮೮.೨೫ ಇದೆ. ಆದರೆ ಮೆಟ್ರಿಕ್ ನಂತರದ ಶಿಕ್ಷಣ ಪಡೆದವರ ಪ್ರಮಾಣ ೧೧.೭೫ ಮಾತ್ರ ಇದೆ. ಅಂದರೆ ಉನ್ನತ ಶಿಕ್ಷಣಕ್ಕೆ ಹೋದಂತೆಲ್ಲ ಪಾರ್ಧಿಗಳಲ್ಲಿ ಓದುವವರ ಪ್ರಮಾಣ ಕಡಿಮೆಯಾಗಿದೆ. ಮಾಧ್ಯಮಿಕ, (ಶೇ ೩೦.೩೯) ಪ್ರೌಢ ಶಿಕ್ಷಣ, (ಶೇ ೧೫.೦೪) ಹೊಂದಿದವರಿಗಿಂತ ಪ್ರಾಥಮಿಕ ಶಿಕ್ಷಣ ಹೊಂದಿದ ಮಕ್ಕಳು ಹೆಚ್ಚಿನ (ಶೇ ೫೪.೫೭) ಪ್ರಮಾಣದಲ್ಲಿದ್ದಾರೆ.

ಚಪ್ಪರಬಂದ

ಸಾಕ್ಷರತೆ ಪ್ರಮಾಣ

ಸಾಕ್ಷರತೆಯನ್ನು ಹೊಂದಲು ಅನರ್ಹವಾದ (೦-೪) ಗುಂಪು ಪ್ರಮಾಣವು ಒಟ್ಟು ಶೇ. ೯.೨೮ ಇದೆ. ಸಾಕ್ಷರತೆಗೆ ಅರ್ಹವಾದರ ಒಟ್ಟು ಶೇ. ಪ್ರಮಾಣ ೯.೭೨ ರಷ್ಟಿದೆ. ಆದರೆ ಸಾಕ್ಷರರ ಪ್ರಮಾಣ ಮಾತ್ರ ಶೇ. ೨೦.೪೭ರಷ್ಟಿದೆ. ಅಂದರೆ ಸಾಕ್ಷರತೆ ಅರ್ಹವಾಗಿದ್ದು ಸಾಕ್ಷರತೆಯನ್ನು ಪಡೆಯದಿರುವವರು ಶೇ. ೭೦.೨೫ ರಷ್ಟು ಪ್ರಮಾಣದಲ್ಲಿದ್ದಾರೆ.

ಕೋಷ್ಟಕ ೬.೭: ಸಮೀಕ್ಷೆಗೊಳಪಟ್ಟ ಚಪ್ಪರ್‌ಬಂದರ ಸಾಕ್ಷರತೆ ಪ್ರಮಾಣ

	ಪುರುಷ	ಸ್ತ್ರೀ	ಒಟ್ಟು
ಒಟ್ಟು ಜನಸಂಖ್ಯೆ	೮೮೨	೭೫೫	೧೬೩೭
ಸಾಕ್ಷರತೆಗೆ ಅನರ್ಹರರು	೭೫	೭೭	೧೫೨
ಸಾಕ್ಷರ ಅರ್ಹರು	೮೦೭	೬೭೮	೧೪೮೫
ಸಾಕ್ಷರರು	೧೯೦	೧೧೪	೩೦೪
ಮೆಟ್ರಿಕ್ ಪೂರ್ವ ಸಾಕ್ಷರತೆ	೧೫೯	೯೮	೨೫೭
ಪ್ರಾಥಮಿಕ ಶಿಕ್ಷಣ	೬೨	೪೫	೧೦೭
ಮಾಧ್ಯಮಿಕ	೫೦	೨೮	೭೮
ಪ್ರೌಢ	೪೭	೨೫	೭೨
ಮೆಟ್ರೀಕ್ ನಂತರದ ಸಾಕ್ಷರತೆ	೩೧	೧೬	೪೭
ಪದವಿ ಪೂರ್ವ	೨೩	೧೦	೩೩
ಡಿಪ್ಲೊಮ	೪	–	೪
ಪದವಿ	೨	–	೨
ಇತರೆ	೨	–	೨
ಅನಕ್ಷರರು	೬೧೭	೫೬೪	೧೧೮೧
ರಾಜ್ಯದ ಸರಾಸರಿ ಸಾಮಾನ್ಯ ಸಾಕ್ಷರತೆ ಪ್ರಮಾಣ (೨೦೦೧)	೭೬.೨೯%	೫೭.೪೫%	೬೫.೦೪
ಚಪ್ಪರಬಂದ ಸಮುದಾಯದ ಸರಾಸರಿ ಸಾಕ್ಷರತೆ ಪ್ರಮಾಣ (ಸಮೀಕ್ಷೆ ಪ್ರಕಾರ)	೨೩.೫೪%	೧೬.೮೧%	೨೦.೪೭
ಈ ಸಮುದಾಯ ಮತ್ತು ರಾಜ್ಯದ ಸರಾಸರಿ ಸಾಕ್ಷರತೆ ಪ್ರಮಾಣದ ನಡುವಿನ ಅಂತರ	೫೨.೭೫	೪೦.೬೪	೪೪.೫೭

ಸಾಕ್ಷರತೆಯನ್ನು ಪಡೆದವರಲ್ಲಿ ಹೆಚ್ಚಿನ ಪ್ರಮಾಣ ಮೆಟ್ರಿಕ್ ಪೂರ್ವದಲ್ಲಿ ಶಿಕ್ಷಣ ಪೂರೈಸಿದವರೇ ಹೆಚ್ಚಾಗಿದ್ದಾರೆ. ಶೇ. ೮೪.೫೩ ಉನ್ನತ ಮಟ್ಟದ ಶಿಕ್ಷಣದ ಕಡೆಗೆ ಹೋದಂತೆಲ್ಲಾ ಈ ಪ್ರಮಾಮ ಇಳಿಮುಖವಾಗುತ್ತಲೇ ಸಾಗುತ್ತದೆ.

ಮೆಟ್ರಿಕ್ ಪೂರ್ವ ಶಿಕ್ಷಣದಲ್ಲಿ ಪ್ರಾಥಮಿಕ ಶಿಕ್ಷಣ ಪಡೆದವರು ಪ್ರಮಾಣ ಒಟ್ಟು ಶೇ. ೪೧.೬೩ರಷ್ಟಿದೆ. ಅದರಲ್ಲಿ ಪುರುಷರು ಶೇ. ೩೮.೯೯ ಹಾಗೂ ಮಹಿಳೆಯರು ಶೇ. ೪೫.೯೧ರಷ್ಟು ಕಂಡುಬರುತ್ತದೆ.

ಮಾಧ್ಯಮಿಕ ಶಿಕ್ಷಣ ಪೂರೈಸಿದವರ ಒಟ್ಟು ಪ್ರಮಾಣವು ಶೇ. ೩೦.೩೫.ರಷ್ಟಿದ್ದು ಪುರುಷರು ಶೇ. ೩೧.೪೫ ಹಾಗೂ ಮಹಿಳೆಯರು ಶೇ. ೨೮.೫೭ರಷ್ಟಿದ್ದಾರೆ. ಪ್ರೌಢ ಶಿಕ್ಷಣ ಮಾಡಿದವರ ಒಟ್ಟು ಪ್ರಮಾಣ ಶೇ. ೨೮.೦೨ ಇದ್ದು ಇದರಲ್ಲಿ ಪುರುಷರು ೨೯.೫೬ ಹಾಗೂ ಮಹಿಳೆಯರು ಶೇ. ೨೫.೫೧ರಷ್ಟಿದ್ದಾರೆ.

ಮೆಟ್ರಿಕ್ ಪೂರ್ವ ಶಿಕ್ಷಣದಲ್ಲಿ ಪ್ರಾಥಮಿಕ ಶಿಕ್ಷಣ ಪಡೆಯುತ್ತಿರುವವರಲ್ಲಿ ಹುಡುಗಿಯರ ಪಾಲೇ ಹೆಚ್ಚಾಗಿದೆ. ಆದರೆ ನಂತರದ ಮಾಧ್ಯಮಿಕ ಮತ್ತು ಪ್ರೌಢ ಶಿಕ್ಷಣದಲ್ಲಿ ಹುಡುಗಿಯರ ಪಾಲು ಕಡಿಮೆಯಾಗುವುದು ಕಂಡುಬರುತ್ತದೆ.

ಪ್ರಾಯಶಃ ಇದಕ್ಕೆ ಮೂಲಕರಾಣ ಹುಡುಗಿ ಮೈನೆರೆದ ೩ ತರುವಾಯ ಮನೆಯಿಂದ ಹೊರಕಳಿಸುವುದು ಸೂಕ್ತವಲ್ಲ ಎಂಬ ಪೂರ್ವಗ್ರಹಿತ ವಿಚಾರದಿಂದಾಗಿ ಮಹಿಳೆಯರು ಹೆಚ್ಚಿನ ತರಗತಿಗಳಿಗೆ ಹೋದಂತೆಲ್ಲಾ ಕಡಿಮೆಯಾಗಲು ಕಾರಣವಿರಬಹುದು.

ಮೆಟ್ರಿಕ್ ನಂತರದ ಶಿಕ್ಷಣವನ್ನು ಪಡೆದವರು ಶೇ. ೧೫.೪೬ ರಷ್ಟಿದ್ದಾರೆ ಇದರಲ್ಲಿಯೇ ಪದವಿ ಪೂರ್ವ ಶಿಕ್ಷಣ ಮುಗಿಸಿದವರು ಶೇ. ೭೦.೨೧ ರಷ್ಟಿದ್ದಾರೆ. ಇದರಲ್ಲಿ ಪುರುಷರು ಶೇ. ೭೪.೧೯ ಹಾಗೂ ಮಹಿಳೆಯರು ಶೇ. ೬೨.೨೫ ರಷ್ಟು ಕಂಡುಬರುತ್ತದೆ.

ಪದವಿ ಪೂರ್ವ ಶಿಕ್ಷಣದ ತರುವಾಯ ವೃತ್ತಿಶಿಕ್ಷಣವಾದ ಟಿ.ಸಿ.ಎಚ್. ಡಿಪ್ಲೊಮಾ ಇತ್ಯಾದಿಗಳನ್ನು ಕೇವಲ ಪುರುಷರು ಮಾತ್ರ ಪೂರೈಸಿದ್ದು ಅವರ ಒಟ್ಟು ಪ್ರಮಾಣ ಶೇ. ೮.೫೧ರಷ್ಟು ಮಾತ್ರ ಕಂಡುಬರುತ್ತದೆ.

ಪದವಿ ತರಗತಿಯನ್ನು ಮುಗಿಸಿದವರು ಸಹ ಕೇವಲ ಪುರುಷರೇ ಆಗಿದ್ದಾರೆ. ಇವರ ಪ್ರಮಾಣ ಒಟ್ಟು ಶೇ. ೪.೨೫ರಷ್ಟು ಇದೆ. ಇತರೆ ವಿದ್ಯಾಭ್ಯಾಸ ಮಾಡಿದವರು ಶೇ. ೨.೧೬ರಷ್ಟು ಮಾತ್ರ ಕಂಡುಬರುತ್ತದೆ.

ಕಂಜರಭಾಟ

ಕೋಷ್ಟಕ ೬.೮: ಸಮೀಕ್ಷೆಗೊಳಪಟ್ಟ ಕಂಜರಬಾಟರ ಸಾಕ್ಷರತೆ ಪ್ರಮಾಣ

	ಪುರುಷ	ಸ್ತ್ರೀ	ಒಟ್ಟು
ಒಟ್ಟು ಜನಸಂಖ್ಯೆ	೨೯೬	೨೬೧	೫೫೭
ಸಾಕ್ಷರತೆಗೆ ಅನರ್ಹರರು	೨೯	೨೮	೫೭
ಸಾಕ್ಷರ ಅರ್ಹರು	೨೬೭	೨೩೩	೫೦೦
ಸಾಕ್ಷರರು	೬೪	೪೧	೧೦೬
ಮೆಟ್ರಿಕ್ ಪೂರ್ವ ಸಾಕ್ಷರತೆ	೫೨	೩೯	೯೨
ಪ್ರಾಥಮಿಕ ಶಿಕ್ಷಣ	೯	೧೬	೨೫
ಮಾಧ್ಯಮಿಕ	೧೮	೧೪	೩೨
ಪ್ರೌಡ	೨೫	೯	೩೪
ಮೆಟ್ರೀಕ್ ನಂತರದ ಸಾಕ್ಷರತೆ	೧೨	೨	೧೪

ಪದವಿ ಪೂರ್ವ	೧೦	೧	೧೧
ಪದವಿ	೨	೧	೩
ಅನಕ್ಷರರು	೨೦೩	೧೯೨	೩೯೫
ರಾಜ್ಯದ ಸರಾಸರಿ ಸಾಮಾನ್ಯ ಸಾಕ್ಷರತೆ ಪ್ರಮಾಣ (೨೦೦೧)	೭೬.೨೯%	೫೭.೪೫%	೬೫.೦೪%
ಕೊರಮ ಸಮುದಾಯದ ಸರಾಸರಿ ಸಾಕ್ಷರತೆ ಪ್ರಮಾಣ (ಸಮೀಕ್ಷೆ ಪ್ರಕಾರ)	೨೩.೯೭%	೧೭.೫೯%	೨೧.೨೦%
ಈ ಸಮುದಾಯ ಮತ್ತು ರಾಜ್ಯದ ಸರಾಸರಿ ಸಾಕ್ಷರತೆ ಪ್ರಮಾಣದ ನಡುವಿನ ಅಂತರ	೫೨.೩೨%	೩೯.೮೬%	೪೩.೮೪%

ಶೈಕ್ಷಣಿಕ ಹಿಂದುಳಿದಿರುವಿಕೆ

ಕರ್ನಾಟಕದ ಹುಬ್ಬಳ್ಳಿ, ಗದಗ ಸೆಟ್ಲಮೆಂಟಗಳಲ್ಲಿ ವಾಸಿಸುವ ಕಂಜರಭಾಟರಲ್ಲಿ ೦–೪ ರೊಳಗಿನ ವಯೋಮಾನದ ಮಕ್ಕಳು ಶೇ. ೧೦.೨೩ ರಷ್ಟಿದ್ದಾರೆ. ಇವರನ್ನು ಹೊರತುಪಡಿಸಿ ಶಿಕ್ಷಣ ಪಡೆಯಲು ಯೋಗ್ಯರಾದವರು ಶೇ. ೮೯.೭೭ ರಷ್ಟಿದ್ದಾರೆ. ಇದರಲ್ಲಿ ಗಂಡು ಶೇ. ೯೦.೨೧ ಮತ್ತು ಹೆಣ್ಣು ಶೇ .೮೯.೨೮ರಷ್ಟಿದ್ದಾರೆ. ಆದರೆ ಇವರಲ್ಲಿ ಸಾಕ್ಷರಾದವರ ಪ್ರಮಾಣ ಕೇವಲ ಶೇ. ೨೧.೨ರಷ್ಟು ಮಾತ್ರವಾಗಿದೆ. ಸಾಕ್ಷರರಲ್ಲಿ ಪುರುಷರು ಶೇ. ೨೩.೯೭ ಮತ್ತು ಮಹಿಳೆಯರು ಶೇ.೧೭.೫೯ರಷ್ಟು ಮಾತ್ರ ಇದ್ದಾರೆ. ಅಂದರೆ ಪುರುಷರ ಸಾಕ್ಷರತಾ ಪ್ರಮಾಣಕ್ಕಿಂತ ಮಹಿಳೆಯರ ಸಾಕ್ಷರತಾ ಪ್ರಮಾಣ ಈ ಸಮುದಾಯದಲ್ಲಿ ತುಂಬಾ ಕಡಿಮೆ ಇರುವುದು ಸಮೀಕ್ಷೆಯ ಮೂಲಕ ತಿಳಿದುಬರುತ್ತದೆ.

ಈ ಸಮುದಾಯದಲ್ಲಿ ಅನಕ್ಷರಸ್ಥರ ಪ್ರಮಾಣವು ಅತ್ಯಧಿಕವಾಗಿದೆ. ಪುರಷರು ಶೇ. ೭೬.೦೩ ರಷ್ಟಿದ್ದರೆ ಮಹಿಳೆಯರು ಶೇ.೮೨.೪ರಷ್ಟಿದ್ದಾರೆ. ಅಂದರೆ ಒಟ್ಟು ಶೇ ೭೯ ಅನಕ್ಷರಸ್ಥರು ಈ ಸಮುದಾಯದಲ್ಲಿದ್ದಾರೆ. ಕರ್ನಾಟಕದ ಸಾಕ್ಷರರ ಪ್ರಮಾಣ ೭೬.೨೯ (೨೦೦೧ರ ಜನಗಣತಿ ಪ್ರಕಾರ) ರಷ್ಟಿದ್ದರೆ. ಕಂಜರಭಾಟರ ಸಾಕ್ಷರರ ಪ್ರಮಾಣ ಕೇವಲ ಶೇ೨೧.೨೦ (೨೦೦೮–೦೯ ಸಮೀಕ್ಷೆ ಪ್ರಕಾರ)ರಷ್ಟು ಮಾತ್ರ ಕಂಡುಬರುತ್ತಾರೆ.

ಇತ್ತೀಚಿನ ದಶಕದಲ್ಲಿ ಈ ಸಮುದಾಯದ ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ. ಸಾಕ್ಷರರಲ್ಲಿ ಪ್ರಾಥಮಿಕ ಶಾಲೆಗೆ ಹೋಗುವ ಮಕ್ಕಳ ಒಟ್ಟು ಪ್ರಮಾಣವು ಶೇ. ೨೭.೧೭ರಷ್ಟಿದೆ. ಅದರಲ್ಲಿ ಗಂಡು ಶೇ. ೧೭.೩೧ ರಷ್ಟಿದ್ದರೆ. ಮಹಿಳೆಯರು ಶೇ. ೪೧.೦೨ ರಷ್ಟು ಪ್ರಾಥಮಿಕ ಶಾಲೆಗೆ ಹೋಗುತ್ತಿದ್ದಾರೆ. ಅಂದರೆ ಪುರುಷರಿಗಿಂತ ಮಹಿಳೆಯರ ಪ್ರಮಾಣವೇ ಪ್ರಾಥಮಿಕ ಶಾಲೆಗೆ ಹೋಗುವ ಮಕ್ಕಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ಮಾಧ್ಯಮಿಕ ಶಾಲೆಯಲ್ಲಿ ಕಲಿಯುತ್ತಿರುವ ಗಂಡು ಮಕ್ಕಳು ಶೇ. ೩೪.೬೧ ರಷ್ಟಿದ್ದು ಹೆಣ್ಣು ಮಕ್ಕಳು ಶೇ. ೩೫.೮೯ರಷ್ಟಿದ್ದಾರೆ. ಮಾಧ್ಯಮಿಕ ಶಾಲೆಯಲ್ಲಿ ಕಲಿಯುತ್ತಿರುವ ಒಟ್ಟು ಮಕ್ಕಳು ಶೇ. ೩೪.೭೮ರಷ್ಟಿದ್ದಾರೆ. ಅಂದರೆ ಇಲ್ಲಿಯೂ ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿ ಕಲಿಯುತ್ತಿರುವುದು ಕಂಡುಬರುತ್ತದೆ.

ಆದರೆ ಪ್ರೌಢಶಿಕ್ಷಣದತ್ತ ಹೊದಂತೆಲ್ಲಾ ಓದುತ್ತಿರುವವರಲ್ಲಿ ಪುರುಷರ ಪ್ರಮಾಣಕ್ಕಿಂತ ಮಹಿಳೆಯರ ಪ್ರಮಾಣವು ಕಡಿಮೆಯಾಗುತ್ತಲೇ ಸಾಗುತ್ತದೆ. ಪ್ರೌಢಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳಲ್ಲಿ ಶೇ. ೪೮.೦೮ ರಷ್ಟು ಗಂಡುಮಕ್ಕಳು ಶೇ. ೨೩.೦೭ ರಷ್ಟು ಹೆಣ್ಣುಮಕ್ಕಳು ಕಲಿಯುತ್ತಿರುವುದು ಕಂಡುಬರುತ್ತದೆ. ಪ್ರೌಢಶಾಲೆಯಲ್ಲಿ ಕಲಿಯುತ್ತಿರುವ ಒಟ್ಟು ಮಕ್ಕಳ ಸಂಖ್ಯೆ ಶೇ. ೩೮.೦೫ರಷ್ಟಿದ್ದಾರೆ.

ಮೆಟ್ರಿಕ್ ನಂತರದ ಶಿಕ್ಷಣ ಪಡೆದವರು ಒಟ್ಟು ಶೇ ೧೩.೨ ಇವರಲ್ಲಿ ಗಂಡು ಶೇ ೧೮.೭೫, ಹೆಣ್ಣು ಶೇ. ೪.೮೮ರಷ್ಟು ಕಂಡುಬರುತ್ತದೆ. ಇವರಲ್ಲಿ ಪಿ.ಯು.ಸಿ. ಹಂತದಲ್ಲಿ ಕಲಿಯುತ್ತಿರುವವರ ಪ್ರಮಾಣವೇ ಹೆಚ್ಚಾಗಿರುವುದು ಕಂಡುಬರುತ್ತದೆ. ಇದರಲ್ಲಿ ಪಿ.ಯು.ಸಿ ಒಟ್ಟು ಶೇ. ೭೮.೫೭ ರಷ್ಟು ಇದೆ. ಇದರಲ್ಲಿ ಪುರುಷರು ಶೇ. ೮೩.೩೩ರಷ್ಟಿದ್ದರೆ, ಮಹಿಳೆಯರು ಶೇ. ೫೦ ರಷ್ಟು ಮಾತ್ರ ಇದ್ದಾರೆ.

ಡಿಪ್ಲೊಮಾ ಒದಿದವರಲ್ಲಿ ಯಾರು ಕಂಡುಬರುವುದಿಲ್ಲ. ಪದವಿ ಮಾಡುತ್ತಿರುವವರಲ್ಲಿ ಗಂಡು ಶೇ ೧೬.೬೭ರಷ್ಟು ಹೆಣ್ಣು ಶೇ ೫ರಷ್ಟು ಕಂಡುಬರುತ್ತದೆ. ಸ್ನಾತಕೋತ್ತರ ಮಾಡುವವರು ಈ ಸಮುದಾಯದಲ್ಲಿ ಇಲ್ಲವೇ ಇಲ್ಲವೆನ್ನಬಹುದು.

ಒಟ್ಟಾರೆಯಾಗಿ ಗಮನಿಸಿದರೆ ಇತ್ತೀಚೆಗೆ ಕಂಜರಭಾಟರ ಮಕ್ಕಳಲ್ಲಿ ಶಾಲೆಗೆ ಹೋಗುವವರ ಪ್ರಮಾಣ ಹೆಚ್ಚಾಗುತ್ತಿದೆ. ಆದರೆ ಅದೇ ಪ್ರಮಾಣವನ್ನು ಮೇಲಿನ ಹಂತಗಳಿಗೆ ಹೋದಂತೆಲ್ಲಾ ಕಾಣಲು ಸಾಧ್ಯವಾಗುವುದಿಲ್ಲ. ಅದರಲ್ಲೂ ಮಹಿಳೆಯರ ಸಾಕ್ಷರತಾ ಪ್ರಮಾಣವು ತುಂಬಾ ಶೋಚನಿಯ ಸ್ಥಿತಿಯಲ್ಲಿದೆ.

ಪ್ರಸ್ತುತ ಕರ್ನಾಟಕದ ಸೆಟಲಮೆಂಟಗಳ ಆರು ಸಮುದಾಯಗಳ ಒಟ್ಟು ಜನಸಂಖ್ಯೆ ೧೮,೬೪೯ ರಷ್ಟಿದೆ. ಈ ಆರು ಸಮುದಾಯಗಳ ಸಾಕ್ಷರತಾ ಪ್ರಮಾಣವನ್ನು ಗಮನಿಸಲಾಗಿ ಶೈಕ್ಷಣಿಕವಾಗಿ ತುಂಬಾ ಹಿಂದುಳಿದ ಸಮುದಾಯ ಚಪ್ಪರಬಂಧರದ್ದಾಗಿದೆ(ಶೇ. ೨೦.೪೭). ಹಾಗೆ ಅತೀ ಹೆಚ್ಚು ಸಾಕ್ಷರತೆಯನ್ನು ಹೊಂದಿದ ಸಮುದಾಯ ಭೋವಿಗಳದ್ದಾಗಿದೆ(ಶೇ.೩೫.೬೫) ಇದರ ನಂತರದ ಸ್ಥಾನ ಗಂಟಿಚೋರರದಾಗಿದೆ (ಶೇ.೩೧.೬೪) ಚಪ್ಪರಬಂಧ ಸಮುದಾಯಕ್ಕೆ ಹತ್ತಿರವೆಂಬಷ್ಟು ಹತ್ತಿರದ ಸಾಕ್ಷರತಾ ಪ್ರಮಾಣವು ಕ್ರಮವಾಗಿ ಕಂಜರಭಾಟ್(ಶೇ.೨೧.೧೨) ಹಾಗೂ ಪಾರ್ಧಿ(ಶೇ.೨೨.೬೧)ಗಳದ್ದಾಗಿದೆ.

ಒಟ್ಟಾರೆ ಸೆಟಲಮೆಂಟ್ ಜನಸಂಖ್ಯಾ ಪ್ರಮಾಣವಿರಿಸಿಕೊಂಡು ನೋಡಿದರೆ ಪಾರ್ಧಿಗಳೇ ಸಾಕ್ಷರತೆಯ ಮಟ್ಟದಲ್ಲಿ ತೀರ ಕೆಳಹಂತದಲ್ಲಿರುವುದು ತಿಳಿದುಬರುತ್ತದೆ.

ಕೋಷ್ಟಕ ೬.೯: ೩೧ ಮಾರ್ಚ್ ೧೯೪೮ ರ ಪ್ರಕಾರ ಸೆಟ್ಲಮೆಂಟಿನ ಮತ್ತು ಇತರ ಶಾಲೆಗಳಲ್ಲಿ ಓದುತ್ತಿರುವ ಹುಡುಗ ಮತ್ತು ಹುಡುಗಿಯರ ಸಂಖ್ಯೆ

	ಹಗಲು ಶಾಲೆ			ರಾತ್ರಿ ಶಾಲೆ		
	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಹುಬ್ಬಳ್ಳಿ	೯	೭	೧೬	–	–	–
ಗದಗ	–	೩	೩	–	–	–
ಬಿಜಾಪುರ	೩	೩	೬	–	–	–
ಒಟ್ಟು	೧೨	೧೩	೨೫	–	–	–

ಸೆಟ್ಲಮೆಂಟಿನ ಶಾಲೆಯಲ್ಲಿ ಫ್ರೀ ಕಾಲೋನಿಯಲ್ಲಿನ ಅಪರಾಧಿ ಬುಡಕಟ್ಟು ಮಕ್ಕಳು

	ಹಗಲು ಶಾಲೆ			ರಾತ್ರಿ ಶಾಲೆ		
	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಹುಬ್ಬಳ್ಳಿ	೨೧೭	೧೮೧	೩೯೮	೧೯	೧೫	೩೪
ಗದಗ	೪೪	೩೦	೭೪	೭	೫	೧೨
ಬಿಜಾಪುರ	೨೦	೧೬	೩೬	–	–	–
ಒಟ್ಟು	೨೮೧	೨೨೭	೫೦೮	೨೬	೨೦	೪೬

ಸೆಟ್ಲಮೆಂಟ್ ಶಾಲೆಗೆ ಹಾಜರಾಗುತ್ತಿರುವ ಇತರ ಮಕ್ಕಳು

	ಒಟ್ಟು
ಹುಬ್ಬಳ್ಳಿ	೧೫೨
ಗದಗ	೩
ಬಿಜಾಪುರ	೨೪
ಒಟ್ಟು	೧೭೯

ಸೆಟ್ಲಮೆಂಟ್ ಜನರ ಆರೋಗ್ಯದ ಸ್ಥಿತಿಗತಿ

ಮೂಲತಃ ಅಲೆಮಾರಿ ಬುಡಕಟ್ಟುಗಳಾದ ಸೆಟ್ಲಮೆಂಟ್ ಜನ ತಮಗೆ ಬರುವ ರೋಗ-ರುಜಿನಗಳಿಗೆ ಸ್ವತಃ ತಾವೇ ವೈದ್ಯೋಪಚಾರಗಳನ್ನು ಮಾಡಿಕೊಳ್ಳುತ್ತಿದ್ದರು. ಕಾಡಿನೊಂದಿಗೆ ಅನನ್ಯವಾದ ಸಂಬಂಧವಿದ್ದ ಇವರು ನೈಸರ್ಗಿಕವಾಗಿ ಆರೋಗ್ಯವಂತರಾಗಿದ್ದಿರಬಹುದು. ಇಂದಿಗೂ ಹಿರಿ ತಲೆಮಾರಿನ ಸೆಟ್ಲಮೆಂಟ್ ಜನ ತಮ್ಮ ಹಿರಿಯರು ಯಾವ್ಯಾವ ರೋಗಕ್ಕೆ ಯಾವ ರೀತಿಯ ವನಸ್ಪತಿಗಳನ್ನು ಬಳಸುತ್ತಿದ್ದರು. ವೈದ್ಯೋಪಚಾರ ರೀತಿ ಹೇಗಿತ್ತು ಮುಂತಾಗಿ ತಿಳಿಸುತ್ತಾರೆ. ಇತ್ತೀಚೆಗೆ ಅವರ ವೈದ್ಯ ಪದ್ಧತಿ ನೇಪಥ್ಯಕ್ಕೆ ಸರಿದಿದೆ. ಅಲೆಮಾರಿ ಬುಡಕಟ್ಟುಗಳು ಅಪರಾಧಿಗಳೆಂದು ಗುರುತಿಸಿಕೊಂಡು ಸೆಟ್ಲಮೆಂಟ್‌ಗಳಿಗೆ ಬಂದ ತರುವಾಯ ಅವರಲ್ಲಿ ಆರೋಗ್ಯಕ್ಕೆ ಸಂಬಂಧಿಸಿದಂತೆ ಹೆಚ್ಚು ಹೆಚ್ಚು ಸಂಸ್ಥೆಗಳು ಮೈತಾಳತೊಡಗಿದವು.

ವಿಸ್ತಾರವಾದ ಕಾಡಿನಲ್ಲಿ ನೈಸರ್ಗಿಕವಾಗಿ ದೂರ ದೂರದಲ್ಲಿ ಪಂಗಡಗಳಾಗಿ ಬದುಕುತ್ತಿದ್ದ ಹಲವಾರು ಬುಡಕಟ್ಟು ಸಮುದಾಯಗಳನ್ನು ಒಂದೇ ಕಡೆ ಕೂಡಿ ಹಾಕಲಾಯಿತು. ಅವರಿಗೆ ನೈಸರ್ಗಿಕವಾಗಿಯೇ ಶೌಚ್ಯಕ್ಕೆ ಹೋಗಿ ಅಭ್ಯಾಸ, ನೈಸರ್ಗಿಕವಾದ ಕಾಡಿನಲ್ಲಿ ಅದು ಅಸಹ್ಯವಾದ ವಿಷಯವಾಗಿರಲಿಲ್ಲ. ಆದರೆ ಸೆಟ್ಲಮೆಂಟ್‌ನಲ್ಲಿ ಕಾಡಿನ ವಾತಾವರಣವಿರಲಿಲ್ಲ. ಹಾಗೂ ಜನದಟ್ಟಣೆ ಸೆಟ್ಲಮೆಂಟಿನಲ್ಲಿ ಹೆಚ್ಚಾಗಿತ್ತು. ಸೆಟ್ಲಮೆಂಟಿನಲ್ಲಿ ತಮ್ಮದೇ ಆದ ರೀತಿಯಲ್ಲಿ ಗುಡಿಸಲುಗಳನ್ನು ಈ ಸಮುದಾಯಗಳು ನಿರ್ಮಿಸಿಕೊಳ್ಳುತ್ತಿದ್ದರು. ಆದರೆ ಶೌಚಕ್ಕೆ ಎಲ್ಲ ಸಮುದಾಯಗಳೂ ಒಂದೇ ಕಡೆ ಹೋಗಬೇಕಾಗಿತ್ತು. ಬಯಲಿನಲ್ಲಿ ಒಂದೇ ಕಡೆ ಹೋಗುತ್ತಿದ್ದುದರಿಂದ ಈ ಹೊಲಸು ಸೆಟ್ಲಮೆಂಟ್ ಆರೋಗ್ಯದ ಮೇಲೆ ಪರೋಕ್ಷವಾಗಿ ಪರಿಣಾಮ ಬೀರುತ್ತಿತ್ತು. ಕಾಡಿನ ಜರಿ, ನದಿ, ಹಳ್ಳ, ಕೊಳ್ಳದಲ್ಲಿ ಸುಲಭವಾಗಿ ಹರಿಯುವ ನೀರು ಈ ಸಮುದಾಯಗಳಿಗೆ ದೊರೆಯುತ್ತಿತ್ತು. ಆದರೆ ಸೆಟ್ಲಮೆಂಟಿನಲ್ಲಿ ಮಿತವಾಗಿ ಬಾವಿಯ ನೀರನ್ನೇ ಬಳಸಬೇಕಾಗಿತ್ತು. ತುಂಬಾ ಶ್ರಮದಾಯಕ ಕೆಲಸಗಳನ್ನು ಮಾಡುತ್ತಿದ್ದ ಈ ಸಮುದಾಯಗಳಿಗೆ ಅವಶ್ಯಕವಾದಷ್ಟು ನೀರು ದೊರೆಯುತ್ತಿರಲಿಲ್ಲ. ಹೀಗಾಗಿ ನೀರಿನ ಕೊರತೆ, ಸ್ವಚ್ಛತೆಯ ಕೊರತೆಗಳಿಂದಾಗಿ ಆರೋಗ್ಯವಂತರಾಗಿದ್ದ (ಅಪರಾಧಿ) ಬುಡಕಟ್ಟುಗಳು ಸೆಟ್ಲಮೆಂಟಿನಲ್ಲಿ ಅನಾರೋಗ್ಯಕ್ಕೆ ಒಳಗಾಗುತ್ತಿದ್ದರು. ಆಂಧ್ರದಲ್ಲಿ ಸರಿಯಾದ ಸೌಲಭ್ಯಗಳಿಲ್ಲದ್ದುದರಿಂದ ಬಹುತೇಕ ಸೆಟ್ಲಮೆಂಟಿನ ಬಹುತೇಕ ಬುಡಕಟ್ಟುಗಳು ಮಲೇರಿಯಾ ಮತ್ತು ಜ್ವರ ಮತ್ತು ಕಜ್ಜಿ ಮುಂತಾದ ಚರ್ಮರೋಗಗಳಿಗೆ ಈಡಾಗಿದ್ದಾರೆಂಬುದನ್ನು ಇವರ ಆರೋಗ್ಯ ನೋಡಿಕೊಳ್ಳಲು ಮಿಷನರಿಯ ಡಾಕ್ಟರುಗಳು ನಿಯಜನೆಗೊಂಡಿದ್ದರು ಎಂದು ಮಲ್ಲಿಗಾಂಧಿಯವರು ತಿಳಿಸುತ್ತಾರೆ. (ಮಲ್ಲಿಗಾಂಧಿ: ೨೦೦೮:೨೯೩)

೧೯೨೪ರ ಅಪರಾಧಿ ಬುಡಕಟ್ಟು ಸೆಟ್ಲಮೆಂಟ್ ಕುರಿತ ವರದಿಯಲ್ಲಿ ಹುಬ್ಬಳ್ಳಿ ಮತ್ತು ಬಿಜಾಪುರ ಸೆಟ್ಲಮೆಂಟ್‌ಗಳ ನೀರಿನ ಸೌಕರ್ಯದ ಕುರಿತು ವರದಿ ಇದೆ. ಇದರಲ್ಲಿ During the year the Hubli setlement ater supply has been placed an a satisfactray basis bt the provission of well, with urilmillpump, supplimernted when necessary by hand pumping and drawing of water in the usyal way. An Angniment has also been made with the Bijapura Municipality for an improved water supply for Bijapur setlement (Budhan, No-11-12: Feb-Mar 1999) ಇದೇ ವರದಿಯಲ್ಲಿ ಸೆಟ್ಲಮೆಂಟ್ ಜನರ ಆರೋಗ್ಯದ ಕುರಿತ ವರದಿಯಿದೆ. ಸೆಟ್ಲಮೆಂಟ್‌ಗಳಲ್ಲಿಯೇ ಅತೀ ದೊಡ್ಡ ಸೆಟ್ಲಮೆಂಟ್‌ಗಳ ಜನರ ಆರೋಗ್ಯ ಸ್ಥಿತಿಗತಿ ತೃಪ್ತಿಕರವಾಗಿದೆ ಎಂದು ತಿಳಿಸುತ್ತಾ ಸಾವಿರ ಜನಕ್ಕೆ ಎಷ್ಟು ಮಕ್ಕಳ ಜನನವಾಗಿದೆ ಮತ್ತು ಎಷ್ಟು ಜನ ಮರಣ ಹೊಂದಿದ್ದಾರೆ ಎಂಬುದನ್ನು ಈ ವರದಿಯಲ್ಲಿ ತಿಳಿಸಲಾಗಿದೆ.

ಕೋಷ್ಟಕ ೬.೧೦: ೧೯೨೪ರ ಅಪರಾಧಿ ಬುಡಕಟ್ಟು ಸೆಟ್ಲಮೆಂಟ್ ವರದಿ

ಕ್ರಸಂ.	ಸೆಟ್ಲಮೆಂಟ್	ಜನಸಂಖ್ಯೆ	ಒಟ್ಟು	ಜನನ	ಒಟ್ಟು	ಮರಣ
೦೧.	ಸೊಲ್ಲಾಪುರ	೪,೦೯೫	೧೮೦	೪೩.೯೫	೧೪೭	೩೫.೮೯
೦೨.	ಇಂಡಿ	೨೦೪	೬	೨೯.೪೧	೬	೨೯.೪೧

೦೩.	ಬಿಜಾಪುರ	೧,೨೨೯	೬೯	೫೬.೧೪	೨೫	೨೦.೩೪
೦೪.	ಬಿಜಾಪುರ ವಿಶೇಷ ಸೆಟ್ಲಮೆಂಟ್	೧೪೩	೩	೨೦.೯೮	೩	೨೦.೯೮
೦೫.	ಬಾಗಲಕೋಟೆ	೩೯೭	೧೬	೪೦.೩೦	೧	೨.೫೧
೦೬.	ಗದಗ	೧,೦೨೩	೨೯	೨೮.೩೫	೧೨	೧೧.೭೩
೦೭.	ಹುಬ್ಬಳ್ಳಿ	೨,೩೨೨	೧೦೫	೪೫.೨೨	೫೯	೨೫.೪೦
೦೮.	ಧಾರವಾಡ	೪೦೫	೩	೭.೪೦	೫	೧೨.೩೦
೦೯.	ಖಾನಾಪುರ	೫೪೮	೧೪	೨೫.೫೪	೪	೭.೩೦
೧೦.	ಗೋಕಾಕ್‌ಫಾಲ್ಸ್	೬೭೨	೨೧	೩೧.೨೫	೧೨	೧೭.೮೬
೧೧.	ದಾಂಡೇಲಿ	೨೫೧	೫	೧೯.೯೨	೨	೭.೯೭
೧೨.	ಬಾರಾಮತಿ	೫೨೧	೧೦	೧೯.೨೦	೧೦	೧೯.೨೦
	ಒಟ್ಟು ಸರಾಸರಿ			೩೦.೬೪		೧೭.೫೭

೧೯೨೪ರ ಎಲ್ಲಾ ಸೆಟ್ಲಮೆಂಟ್‌ಗಳ ಒಟ್ಟು ಸರಾಸರಿ ಜನನ ಪ್ರಮಾಣ ಮರಣ ಪ್ರಮಾಣಕ್ಕಿಂತ ಹೆಚ್ಚಿದೆ. (ಶೇ.೩೦.೬೪) ಮರಣ ಪ್ರಮಾಣದ ಸರಾಸರಿ ಕೇವಲ ಶೇ.೧೭.೫೭ರಷ್ಟಿದೆ. ಜನನ ಪ್ರಮಾಣ ಮತ್ತು ಮರಣ ಪ್ರಮಾಣಗಳ ಮಧ್ಯದ ಅಂತರವು ಸರಾಸರಿಯಾಗಿ ಶೇ.೧೩.೦೭ರಷ್ಟಿದೆ. ಮರಣ ಪ್ರಮಾಣಕ್ಕಿಂತ ಜನನ ಪ್ರಮಾಣವು ಹೆಚ್ಚಿರುವುದನ್ನು ಗಮನಿಸಿದರೆ ಈ ಸೆಟ್ಲಮೆಂಟ್ ಜನರ ಅಂದಿನ ಆರೋಗ್ಯ ಸ್ಥಿತಿ ಉತ್ತಮವಾಗಿದೆ ಎನಿಸುತ್ತದೆ. ಗದಗ ಮತ್ತು ಹುಬ್ಬಳ್ಳಿ ಸೆಟ್ಲಮೆಂಟಿನಲ್ಲಿ ಸೋಂಕುಕಾರಕ ಮರುಕಳಿಸುವ ಜ್ವರದಿಂದ ಜನರು ಬಳಲುತ್ತಿರುವುದಾಗಿ ತಿಳಿಸಲಾಗಿದೆ. ಈ ಸೋಂಕುಕಾರಕ ರೋಗದ ನಿಯಂತ್ರಣಕ್ಕಾಗಿ ಆರೋಗ್ಯಧಿಕಾರಿಗಳಾದ ಡಾ.ಸ್ಟೋಕ್ಸ್ ಮತ್ತು ಡಾ.ಎಸ್.ಪಿ.ಕುಂಭಕೋಣಂರವರು ಪ್ರಯತ್ನಿಸಿದ್ದುದಾಗಿ ತಿಳಿದುಬರುತ್ತದೆ. ಸ್ವಲ್ಪಮಟ್ಟಿಗೆ ಬಿಜಾಪುರ ಮತ್ತು ಸೊಲ್ಲಾಪುರ ಸೆಟ್ಲಮೆಂಟ್‌ಗಳಲ್ಲಿ ಪ್ಲೇಗು ಹರಡಿದ್ದರೂ ಮುಂಜಾಗ್ರತವಾಗಿ ಸೆಟ್ಲಮೆಂಟ್ ಜನಕ್ಕೆ ರೋಗ ನಿರೋಧಕ ಲಸಿಕೆ ನೀಡಿದುದರಿಂದ ರೋಗ ನಿಯಂತ್ರಣಗೊಂಡಿತು. ಕಾಡಿನ ಮಧ್ಯವಿರುವ ದಾಂಡೇಲಿ ಮತ್ತು ಖಾನಪುರ ಸೆಟ್ಲಮೆಂಟ್‌ಗಳು ರೋಗ ನಿಯಂತ್ರಣಕ್ಕಾಗಿ ಆರ್ಥಿಕವಾಗಿ ತುಂಬಾ ಸಹಕಾರ ನೀಡಿದವು. (ನೋಡಿ: ಅದೇ, ಪು.೫) ಎಂದು ವರದಿಯಲ್ಲಿ ತಿಳಿಸಲಾಗಿದೆ.

೧೯೪೭-೪೮ ಅಪರಾಧಿ ಬುಡಕಟ್ಟು ಕಾಯ್ದೆಯ ವಾರ್ಷಿಕ ವರದಿಯಲ್ಲಿ The Health of satlem and free colonists in gon and was satisfatory thoughtout the year 1947048 No serious cpidemies visited the seltlements or free camies. The medical and sanitory arrengement at the settlements aere the same as those descided in my report for 1946-47 they cantinued to be satisfatory. During the year under report, these were 67 births and 36 deaths in

satlements and 267 births and 164 deaths in the free colonies. (Annual Report of the working of the Criminal inbes Act for the year 1947-48, P-8)

ಕ್ಷೇತ್ರಕಾರ್ಯ ಸಮೀಕ್ಷೆ ಪ್ರಕಾರ ಇಂದು ಸೆಟ್ಲಮೆಂಟ್‌ನಲ್ಲಿ ಹೆರಿಗೆಯಲ್ಲಿಯೇ ಮಕ್ಕಳು ಸಾಯುವ ಪ್ರಮಾಣ ಕಡಿಮೆಯಾಗಿದೆ. ಆದರೆ ಪಾರ್ಧಿ, ಚಪ್ಪರಬಂಧ್, ಗಂಬಿಚೋರ್‌ರಲ್ಲಿ ಹೆರಿಗೆ ಸಂದರ್ಭದಲ್ಲಿ ತಾಯಿ ಮತ್ತು ಮಕ್ಕಳು ಸಾಯುವುದು ಹೆಚ್ಚಾಗಿ ಕಂಡುಬರುತ್ತದೆ. ಪ್ರಾಯಶಃ ಇದಕ್ಕೆ ಕಾರಣ ಈ ಸಮುದಾಯಗಳಲ್ಲಿ ಬಹುತೇಕರು ಇನ್ನೂ ಹಿಂದಿನ ಪದ್ಧತಿಯಂತೆ ಮನೆಯಲ್ಲಿಯೇ ಹೆರಿಗೆ ಮಾಡಿಸಿಕೊಳ್ಳುವುದರಿಂದಾಗಿ ಇವರಲ್ಲಿ ಹೆರಿಗೆ ಸಂದರ್ಭದಲ್ಲಿಯೇ ಬಾಣಂತಿ ಮತ್ತು ಮಗುವಿನ ಸಾವಿನ ಪ್ರಮಾಣ ಹೆಚ್ಚಿದೆ.

ಭೋವಿಗಳಲ್ಲಿ ಹೆರಿಗೆ ಸಂದರ್ಭದಲ್ಲಿ ನಡೆಯುವ ಸಾವಿನ ಪ್ರಮಾಣ ಪಾರ್ಧಿಗಳಲ್ಲಿರುವಷ್ಟು ಭೀಕರವಾಗಿಲ್ಲ. ತರುವಾಯ ಕಂಜರಭಾಟ ಮತ್ತು ಕೊರಮರು ಬಹುತೇಕ ಪ್ರಜ್ಞಾವಂತರಾಗುವತ್ತ ಸಾಗುತ್ತಿದ್ದಾರೆ. ಹೀಗಾಗಿ ಈ ಸಮುದಾಯದ ಜನ ಹೆರಿಗೆ ಮುಂಜಾಗ್ರತೆಯಾಗಿ ಆಸ್ಪತ್ರೆಗಳಿಗೆ ತೆರಳುವುದರಿಂದ ಇವರಲ್ಲಿ ಈ ರೀತಿಯ ಸಾವಿನ ಪ್ರಮಾಣ ಮೇಲೆ ತಿಳಿಸಿದ ಸಮುದಾಯಗಳಲ್ಲಿರುವಷ್ಟು ತೀವ್ರವಾಗಿಲ್ಲ.

ಒಟ್ಟಾರೆಯಾಗಿ ನೋಡಿದರೆ ಇವರು ಒಂದಿಲ್ಲ ಒಂದು ರೀತಿಯಲ್ಲಿ ಆಧುನಿಕ ಆಸ್ಪತ್ರೆಗಳನ್ನು ಈ ಸಮುದಾಯಗಳು ಹೆಚ್ಚು ಅವಲಂಬಿಸಿವೆ. ಹೀಗಾಗಿ ಇವರಲ್ಲಿ ಜನನ ಪ್ರಮಾಣಕ್ಕಿಂತ ಮರಣ ಪ್ರಮಾಣ ಅತ್ಯಲ್ಪವಾಗಿದೆ ಎಂಬುದನ್ನು ಜನಸಂಖ್ಯೆಯಲ್ಲಿ ೦-೪ ಮತ್ತು ೬೦ರ ಮೇಲ್ಪಟ್ಟ ವಯೋಮಾನದವರ ಜನಸಂಖ್ಯಾ ಪ್ರಮಾಣ ನೋಡಿದರೆ ತಿಳಿಯುತ್ತದೆ.

ಸಾಮಾನ್ಯವಾಗಿ ಸೆಟ್ಲಮೆಂಟಿನ ಬಹುತೇಕ ಜನ ಕುಡಿತ, ಬೀಡಿ ಸೇದುವುದು, ತಂಬಾಕು ಸೇವನೆ ಮುಂತಾದ ಚಟಗಳಿಗೆ ಅಂಟಿಕೊಂಡಿದ್ದಾರೆ. ಆದಾಗ್ಯೂ ಇವರಲ್ಲಿಯ ವೃದ್ಧರು ೭೦ ವರ್ಷಗಳ ಮೇಲ್ಪಟ್ಟೇ ಬಾಳುತ್ತಾರೆ. ವಿಷಾದದ ಸಂಗತಿಯಂದರೆ ಇಂದು ಬಹುತೇಕ ಯುವಕರು ಮತ್ತು ಕೂಲಿ ಕೆಲಸಕ್ಕೆ ಹೋಗುವ ಯುವತಿಯರು ಸ್ಟಾರ್, ವಿಮಲ್ ಮುಂತಾದ ನಾನಾ ಹೆಸರುಗಳ ಪಾನ್ ಪರಾಗು ಹವ್ಯಾಸಕ್ಕೆ ಒಳಗಾಗಿದ್ದಾರೆ. ಮತ್ತು ಮಧು, ಬಸವಣ್ಣ ಮುಂತಾದ ತಂಬಾಕನ್ನು ಹೆಚ್ಚಾಗಿ ಬಳಕೆ ಮಾಡುತ್ತಾರೆ. ಶೇ.೮೦ರಷ್ಟು ಸ್ತ್ರೀ ಪುರುಷರು ಎಲೆ, ಅಡಿಕೆ, ಹೊಗೆಸೊಪ್ಪನ್ನು ಸೇವಿಸುತ್ತಾರೆ.

ಇಂದು ಮಹಿಳೆಯರಲ್ಲಿ ಹಳೆ ಮತೆಮಾರಿನ ಹೆಂಗಸರು ನಸ್ಯವನ್ನು ತಮ್ಮ ಹಲ್ಲುಗಳಿಗೆ ಉಜ್ಜುತ್ತಾರೆ. ಮತ್ತು ಶೇ.೨೦ರಷ್ಟು ಪುರುಷರು ನಸ್ಯವನ್ನು ಮೂಗಿಗೆ ಏರಿಸಿಕೊಳ್ಳುವ ಹವ್ಯಾಸಕ್ಕೆ ಒಳಗಾಗಿದ್ದಾರೆ. ಹೀಗಾಗಿ ಇವರಲ್ಲಿ ಬಹುತೇಕರಿಗೆ ಮುಖ್ಯವಾಗಿ ಪಾನ್ ಪರಾಕ್ ಹಾಕುವವರಿಗೆ ಶ್ವಾಸಕೋಶದಲ್ಲಿ ಕಫ ಸೇರುವುದು, ಕ್ಷಯ, ನ್ಯೂಮೋನಿಯಾದಂತಹ ರೋಗಗಳು ಹೆಚ್ಚು ಕಾಡುತ್ತಿವೆ.

ದಿನಾಲೂ ಸ್ನಾನ ಮಾಡದೆ ಇರುವುದು, ಸ್ವಚ್ಛವಾದ ಉಡುಪು ಧರಿಸದೆ ಇರುವುದು ಮತ್ತು ಗರ್ಭಕೋಶದ ನಾನಾ ತೊಂದರೆಗಳು ಕಾರಣವಾಗಿ ಮಹಿಳೆಯರು ಬಿಳುಪು (White Discharge)

ಮತ್ತು ರಕ್ತ ಹೋಗುವ ಖಾಯಿಲೆಯಿಂದ ಬಳಲುವುದನ್ನು ಕಾಣಬಹುದು. ಒಟ್ಟು ಎಲ್ಲಾ ಸೆಟ್ಲಮೆಂಟಗಳನ್ನು ನೋಡಲಾಗಿ ಸುಮಾರು ೬೬ಜನ ಈ ರೀತಿಯ ರೋಗಗಳಿಂದ ಬಳಲುವ ಮಹಿಳೆರು ಕಂಡುಬಂದರು. ಅದರಲ್ಲೂ ಪಾರ್ಧಿ ಮತ್ತು ಚಪ್ಪರ ಬಂಧ ಮಹಿಳೆಯರಲ್ಲಿಯೇ ಈ ರೀತಿಯ ತೊಂದರೆಗಳು ಹೆಚ್ಚಾಗಿರುವುದು ಕಂಡುಬಂದಿತು. ಇನ್ನು ಇದನ್ನು ಹೆಚ್ಚಿನ ಸಂಖ್ಯೆಯಲ್ಲಿಯೇ ಈ ರೀತಿಯ ಖಾಯಿಲೆಯಿಂದ ಬಳಲುವವರು ಸೆಟ್ಲಮೆಂಟ್‌ಗಳಲ್ಲಿ ಇರಬಹುದಾದರೂ ಬಹಳಷ್ಟು ಮಹಿಳೆಯರು ಈ ರೀತಿಯ ಸ್ವರೂಪದ ಖಾಯಿಲೆಗಳು ತಗುಲಿವೆ ಎಂದು ತಿಳಿಸಲು ಸಂಕೋಚಪಟ್ಟು ವಿಷಯವನ್ನು ಹೇಳದೇ ಮರೆಮಾಚಿರುವ ಸಾಧ್ಯತೆಗಳು ಹೆಚ್ಚಾಗಿವೆ. ಈ ಸಮೀಕ್ಷೆಯಲ್ಲಿ ದೊರೆತ ೬೬ ಮಹಿಳೆಯರಲ್ಲಿ ಹೆಚ್ಚಿನ ಮಹಿಳೆಯರು ಮೊದ ಮೊದಲು ತಮಗೆ ಇಂತಹ ಅನಾರೋಗ್ಯಕರ ತೊಂದರೆಗಳಿವೆ ಎಂದು ಹೇಳಿಕೊಳ್ಳದೆ ನಾಚಿಕೊಂಡರಾದರೂ ತುಂಬಾ ವಿಶ್ವಾಸಕ್ಕೆ ತೆಗೆದುಕೊಂಡ ತರುವಾಯ ತಮ್ಮ ರೋಗಗಳ ಕುರಿತು ವಿಷಯವನ್ನು ಬಹಿರಂಗ ಪಡಿಸಿದರು.

ರಕ್ತ ಹೀನತೆಯಿಂದ ಬಳಲುವವರಲ್ಲಿ ಮಕ್ಕಳ ಪ್ರಮಾಣ ಹೆಚ್ಚಾಗಿದೆ. ತರುವಾಯದ ಸ್ಥಾನವನ್ನು ಮಹಿಳೆಯರು ಪಡೆದುಕೊಂಡಿದ್ದಾರೆ. ಅವರಿಬ್ಬರಿಗಿಂತ ಪ್ರಮಾಣದಲ್ಲಿ ಪುರುಷರಿದ್ದಾರೆ. ರಕ್ತಹೀನತೆಯ ಕೊರತೆ ಅನುಭವಿಸುತ್ತಿರುವ ಸೆಟ್ಲಮೆಂಟ್ ಸಮುದಾಯಗಳಲ್ಲಿ ಪಾರ್ಧಿ ಮಕ್ಕಳು ಹಾಗೂ ಮಹಿಳೆಯರೇ ಹೆಚ್ಚಾಗಿದ್ದಾರೆ. ನಂತರದ ಸ್ಥಾನ ಚಪ್ಪರಬಂಧ ಹೊಂದಿದೆ.

ಸೆಟ್ಲಮೆಂಟ್‌ನ ಒಟ್ಟು ಎಲ್ಲಾ ಸಮುದಾಯಗಳನ್ನು ಗಮನಿಸಿದರೂ ಏಡ್ಸ್ ಮತ್ತು ಗುಹ್ಯ ರೋಗಗಳನ್ನು ಹೊಂದಿದವರು ಒಬ್ಬರೂ ಸಮೀಕ್ಷೆಯಲ್ಲಿ ದೊರೆತಿಲ್ಲ. ಕಜ್ಜಿ, ಇಸುಬು, ಹುಳುಕಡ್ಡಿಯಂತಹ ಚರ್ಮರೋಗಗಳು ಸೆಟ್ಲಮೆಂಟಿನ ಜನರಲ್ಲಿ ಕಂಡುಬರುತ್ತವೆ. ಅದರಲ್ಲೂ ಈ ರೀತಿಯ ರೋಗಗಳು ಪಾರ್ಧಿಗಳಲ್ಲಿಯೇ ಹೆಚ್ಚಾಗಿ ಕಂಡುಬರುತ್ತವೆ. ಪಾರ್ಧಿಗಳು ಇಂದಿಗೂ ಬಡತನದ ಜೀವನ ಸಾಗಿಸುತ್ತಿದ್ದಾರೆ. ಸ್ವಚ್ಛ ಆಹಾರ ಇವರಿಗೆ ದೊರೆಯುವುದು ಕಷ್ಟ. ಇಂದಿಗೂ ಬಹುತೇಕ ಪಾರ್ಧಿ ಮಕ್ಕಳು ಮತ್ತು ಮಹಿಳೆಯರು ಭಿಕ್ಷಾಟನೆಗೆ ಹೋಗುವುದು ಕಂಡುಬರುತ್ತದೆ. ಜನರು ನೀಡಿದ ಹಳಸಲು ಅನ್ನ, ಪಲ್ಲೆ ಇತ್ಯಾದಿಗಳನ್ನು ತಂದು ಊಟ ಮಾಡುತ್ತಾರೆ. ಇವರಲ್ಲಿ ಎಲ್ಲಾಕ್ಕಿಂತ ಸ್ವಚ್ಛತೆಯ ಕೊರತೆ ಎದ್ದು ಕಾಣುತ್ತದೆ. ಹೀಗಾಗಿ ಪಾರ್ಧಿ ಮಕ್ಕಳು ಕಜ್ಜಿ, ತುರುಕೆ, ಹುಳುಕಡ್ಡಿ ರೋಗಗಳನ್ನು ಅನುಭವಿಸುತ್ತಿವೆ. ಅವರಲ್ಲಿ ದೊಡ್ಡವರಲ್ಲಿ ಕೆಲವರಿಗೆ ಹುಳುಕಡ್ಡಿ ಮತ್ತು ಇಸುಬುಗಳು ಇರುವುದು ಕಂಡುಬಂದಿತು. ಅದೇ ರೀತಿಯ ರೋಗಗಳು ಬೇರೆ ಸಮುದಾಯಗಲಲ್ಲಿಯಾದರೂ ಅವುಗಳ ಪ್ರಮಾಣ ಅತ್ಯಲ್ಪವಾಗಿದೆ. ಅದರಲ್ಲೂ ಕೊರಮರಲ್ಲಿ ಈ ರೀತಿಯ ರೋಗಗಳು ಇಲ್ಲವೆಂಬಷ್ಟು ಕಡಿಮೆ ಪ್ರಮಾಣದಲ್ಲಿದೆ. ಆದರೆ ಆಶ್ಚರ್ಯಕರವಾದ ವಿಚಾರವೆಂದರೆ ಒಟ್ಟಾರೆ ಸೆಟ್ಲಮೆಂಟಿನ ಎಲ್ಲಾ ಸಮುದಾಯಗಳನ್ನು ನೋಡಲಾಗಿ ಒಬ್ಬೇ ಒಬ್ಬ ವ್ಯಕ್ತಿ ಕುಷ್ಟರೋಗಿಯಾಗಲಿ ಅಥವಾ ತೊನ್ನು ರೋಗಿಯಾಗಲೀ ಇವರಲ್ಲಿ ಕಂಡು ಬರಲಿಲ್ಲ.

ನಗರಗಳಲ್ಲಿ ಆಟೋ ಓಡಿಸುವುದು, ಸಾಮಿಲ್‌ಗಳಲ್ಲಿ ಕೂಲಿ ಕೆಲಸ, ಬೀಡಿ ಸೇದುವುದು, ಅಲರ್ಜಿಗಳ ಕಾರಣವಾಗಿ ಹೆಚ್ಚು ಪುರುಷರು ಅಸ್ತಮಾ ರೋಗಕ್ಕೆ ಈಡಾಗಿದ್ದಾರೆ. ಸಾಮಾನ್ಯವಾಗಿ ಅಸ್ತಮಾ ರೋಗಕ್ಕೆ

ಒಳಗಾದ ಪುರುಷ ಮತ್ತು ಮಹಿಳೆಯರು ೫೦-೭೦ರ ವಯೋಮಾನದವರೇ ಕಂಡು ಬಂದರು. ಕಾಲರಾ, ಮಲೇರಿಯಾ ಜ್ವರ, ಮೈಗ್ರ್ರೇನ್‌ನಂತಹ ತಲೆಶೂಲೆ ಇತ್ಯಾದಿ ರೋಗದಿಂದ ಬಳಲುವವರನ್ನು ಇತರೆ ರೋಗಗಳೆಂದು ಪರಿಗಣಿಸಲಾಗಿದೆ.

ನೈರ್ಮಲ್ಯ

ಸೆಟ್ಲಮೆಂಟ್ ಪ್ರದೇಶದಲ್ಲಿ ಚರಂಡಿ ವ್ಯವಸ್ಥೆಯೇ ಕೆಲವು ಕಡೆ ತೆರೆದ ಮತ್ತು ಒಳ ಚರಂಡಿಗಳಿವೆ ಯಾದರೂ ತೆರೆದ ಚಂರಡಿಗಳನ್ನು ಸ್ವಚ್ಛಗೊಳಿಸುವುದು ಅಪರೂಪವಾಗಿದೆ. ಸೆಟ್ಲಮೆಂಟಿನ ತೆರೆದ ಮತ್ತು ಇತರೆ (ಪಾರ್ಧಿ ಪೊರತು ಪಡಿಸಿ) ಸಮುದಾಯಗಳು ತೆರೆದ ಚರಂಡಿಗಳಿಗೆ ತಮ್ಮ ಬಚ್ಚಲು ನೀರನ್ನು ಹರಿಯ ಬಿಡುತ್ತಾರೆ.

ಮಕ್ಕಳು ಶೌಚವನ್ನು ತೆರೆದ ಚರಂಡಿಗಳಲ್ಲಿಯೇ ಮಾಡುವುದು ಕಂಡುಬಂದಿತು. ಒಟ್ಟಾರೆಯಾಗಿ ಸೆಟ್ಲಮೆಂಟ್‌ನಲ್ಲಿ ಸ್ವಚ್ಛತೆಯ ಕೊರತೆ ಎದ್ದು ಕಾಣುತ್ತದೆ. ಕೊರಮ, ಭೋವಿ ಮತ್ತು ಕಂಜರಭಾಟ, ಗಂಟಿಚೋರರ ಮನೆಗಳಲ್ಲಿ ವೈಯಕ್ತಿಕ ಶೌಚಾಲಯಗಳು ಶೇ.೬೦ರಷ್ಟು ಕಂಡುಬರುತ್ತವೆ. ಇನ್ನುಳಿದಂತೆ ಶೇ.೪೦ರಷ್ಟು ಜನರಲ್ಲಿ ಪುರುಷರು ಬಯಲು ಪ್ರದೇಶಗಳು ಮತ್ತು ತಮ್ಮ ಸೆಟ್ಲಮೆಂಟಗೆ ಹತ್ತಿರವಿರುವ ರೈಲ್ವೆ ಸ್ಟೇಷನ್ ಸುತ್ತ ಮುತ್ತಲು ಪ್ರದೇಶವನ್ನು ಬಳಸಿಕೊಳ್ಳುತ್ತಾರೆ. ಇವರಲ್ಲಿ ಮಹಿಳೆಯರು ಸಹ ಸಾಮೂಹಿಕ ಶೌಚಾಲಯಗಳನ್ನು ಬಳಸಿಕೊಳ್ಳುವವರ ಪ್ರಮಾಣಮೂ ಕಡಿಮೆ ಇದೆ. ಸಾಮೂಹಿಕ ಶೌಚಾಲಯಗಳನ್ನು ಏಕೆ ಬಳಸಿಕೊಳ್ಳುತ್ತಿಲ್ಲವೆಂದು ಕೇಳಿದರೆ ಅಲ್ಲಿ ಶೌಚಕ್ಕೆ ಹೋಗಲು ಮೊದಲಿಗೆ ಹಣ ಕೊಡಬೇಕಾಗಿತ್ತು. ಮತ್ತು ಸಾಮೂಹಿಕ ಶೌಚಾಲಯಗಳು ತುಂಬಾ ಹೊಲಸಾಗಿವೆ. ನೀರಿನ ಕೊರತೆ ಇದೆ. ಹಾಗಾಗಿ ಬಯಲಿನಲ್ಲಿ ಶೌಚಕ್ಕೆ ಹೋಗುತ್ತೇವೆ ಎಂದು ಕೆಲವು ಮಹಿಳೆಯರು ತಿಳಿಸುತ್ತಾರೆ. ಪಾರ್ಧಿಗಳಂತೂ ಸಂಪೂರ್ಣವಾಗಿ ಶೌಚಕ್ಕೆ ಬಯಲನ್ನೇ ಆಶ್ರಯಿಸಿದ್ದಾರೆ. ಹೀಗೆ ಪರಿಸರ ಸ್ವಚ್ಛವಾಗಿರದ ಕಾರಣ ನೊಣ, ಸೊಳ್ಳೆಗಳ ಪ್ರಮಾಣವೂ ಇಲ್ಲಿ ಹೆಚ್ಚಿದೆ. ಹೀಗಾಗಿ ಮಲೇರಿಯಾ, ಟೈಫಾಯಿಡ್, ಕಾಮಾಲೆ, ಕಾಲರಾದಂತಹ ರೋಗಗಳು ಇವರನ್ನು ಕಾಡುತ್ತಿವೆ.

ಗ್ರಂಥಋಣ

1. Malli Gandhi; De notified Tribes: Demensions of change: Kanishka publishers: New Delhi: 2008.
2. Devy G N: Budhan : DNT Rights Group,Vadodara: No-11-12: Feb-Mar 1999
3. Annual Report of the working of the Criminal inbes Act for the year 1947-48, Poona,1950

ಅಧ್ಯಾಯ ಏಳು

ರಾಜಕೀಯ ಸ್ಥಿತಿಗತಿ

ಅಧ್ಯಾಯ ಏಳು

ರಾಜಕೀಯ ಸ್ಥಿತಿಗತಿ

ಭಾರತ ಜಾತ್ಯಾತೀತ ರಾಷ್ಟ್ರವೆಂದು ಘೋಷಿಸಿಕೊಂಡರೂ ಅದು ನಿರಂತರವಾಗಿ ಉಸಿರಾಡುತ್ತಿರುವುದು ಜಾತಿಯ ಗಾಳಿಯನ್ನೇ, ಅದರಲ್ಲೂ ಭಾರತದ ರಾಜಕೀಯ ಸ್ಥಿತಿಯಂತೂ ಜಾತಿ ರಾಜಕೀಯವೆಂದೇ ಆಗಿದೆ. ಯಾಕೆಂದರೆ ಇಂದು ಭಾರತದ ಸಣ್ಣ ಗ್ರಾಮದಿಂದ ಹಿಡಿದು ಪಾರ್ಲಿಮೆಂಟಿನವರೆಗೂ ರಾಜಕಾರಣ ಮಾಡುವವರು ಒಂದು ಜಾತಿಯಿಂದ ಬಲಿಷ್ಟರಿರಬೇಕು ಇಲ್ಲವೆ ಬಂಡವಾಳಶಾಹಿಗಳಾಗಿರಬೇಕು. ಎರಡೂ ಬಲಗಳಿಲ್ಲದವರು ರಾಜಕೀಯ ಪ್ರವೇಶ ಮಾಡದ ಸ್ಥಿತಿಗೆ ಈ ವ್ಯವಸ್ಥೆ ತಲುಪಿಬಿಟ್ಟಿದೆ.

ಇನ್ನು ಕೆಳವರ್ಗಗಳ ಸ್ಥಿತಿಯಂತೂ ತುಂಬಾ ಶೋಚನೀಯವಾಗಿದೆ. ರಾಕೀಯ ವ್ಯವಸ್ಥೆಯಲ್ಲಿ ಮೀಸಲಾತಿ ಸೌಲಭ್ಯ ಕಲ್ಪಿಸಿದ ತರುವಾಯ ಕೆಳ ಜಾತಿಗಳಿಗೆ ರಾಜಕೀಯ ಪ್ರವೇಶ ಮಾಡಲು ಸಾಧ್ಯವಾಗಿದೆಯಾದರೂ ಅದರಲ್ಲಿ ಅಸಹಾಯಕರು ಮತ್ತು ಹಿಂದುಳಿದವರಿಗೆ ಇನ್ನು ಪ್ರವೇಶ ದೊರೆಯದಾಗಿದೆ. ಕೇವಲ ಆರ್ಥಿಕವಾಗಿ ಬಲಾಢ್ಯರಾದ ಮತ್ತು ಮುಂಗೈ ಜೋರಿರುವವರಿಗೆ ಮಾತ್ರ ಮೀಸಲಾತಿ ಅಡಿಯಲ್ಲಿ ರಾಜಕೀಯ ಪ್ರವೇಶ ಮಾಡಲು ಸಾಧ್ಯವಾಗಿದೆ. ಮುಖ್ಯವಾಗಿ ಅಲ್ಪಸಂಖ್ಯಾತರು ಅದರಲ್ಲಿ ಜಾತಿಯಿಂದ ಅಲ್ಪಸಂಖ್ಯಾತರಾದ ಹಿಂದುಳಿದ ವರ್ಗಗಳು ಇಂದು ರಾಜಕೀಯ ಸ್ಥಾನಮಾನಗಳನ್ನು ಗಳಿಸಿಕೊಳ್ಳುವುದು ಕನಸಿನ ಮಾತೇ ಆಗಿದೆ.

ರಾಮಮನೋಹರ ಲೋಹಿಯಾರವರು ಭಾರತ ಸ್ವತಂತ್ರವಾದ ಕೆಲವೇ ವರ್ಷಗಳಲ್ಲಿ ಹೇಳಿದ ಮಾತುಗಳು ಹೀಗಿವೆ. "ರಾಜಕೀಯ ಪಕ್ಷಗಳಲ್ಲಿ ಅಧಿಕಾರದ ಹುದ್ದೆಗಳನ್ನು ಸೂಕ್ತ ಪ್ರಮಾಣದಲ್ಲಿ ನೀಡಬೇಕಾಗಿದೆ. ಸಮಿತಿಗಳನ್ನು ರಚಿಸುವಾಗ ಶೂದ್ರ, ಹರಿಜನ ಮತ್ತು ಮುಸಲ್ಮಾನರಿಗೆ ಹೆಚ್ಚಿನ ಪ್ರಾತಿನಿಧ್ಯವನ್ನು ನೀಡಬೇಕಾಗಿದೆ. ಅಗಸ, ಕ್ಷೌರಿಕ, ಗಾಣಿಗ, ಕಮ್ಮಾರ ಮತ್ತು ಇತರ ಹಿಂದುಳಿದ ಜಾತಿಗಳಲ್ಲಿ ನೂರಾರು ಸಮಸ್ಯೆಗಳಿವೆ. ಅವರ ಕೇರಿಗಳಿಗೆ ಒಳ್ಳೆಯ ರಸ್ತೆಗಳು ಆಗಬೇಕು, ಸುಲಭ ಬೆಲೆಗೆ ಕಚ್ಚಾ ವಸ್ತುಗಳು

ದೊರೆಯಬೇಕು. ಪೊಲೀಸರ ದಬ್ಬಾಳಿಕೆ ನಿಲ್ಲಬೇಕು. ಇವರಿಗೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ದೊರಕಿಸಿಕೊಟ್ಟು ಆ ಮೂಲಕ ಅವರ ವಿಶ್ವಾಸವನ್ನು ಗಳಿಸಿಕೊಂಡು ಈ ನತದೃಷ್ಟ ಜಾತಿಗಳ ಸಂಘಟನೆಯನ್ನು ರಾಜಕೀಯ ಕ್ಷೇತ್ರದೊಳಗೆ ತರುವುದರಿಂದ ಬಹುಜನ ಸಮಾಜ ರೂಪಿತವಾಗಬಲ್ಲದು (ರಾಮಮನೋಹರ ಲೋಹಿಯಾ:೧೯೮೬, ಪು.೧೩೫) ಎಂದು ತಿಳಿಸಿದ್ದಾರೆ.

ಇಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಸೌಲಭ್ಯ ಪಡೆಯುತ್ತಿರುವುದರಿಂದ ಆ ಮೀಸಲಾತಿ ಅಡಿಯಲ್ಲಿ ಕೆಲವರಾದರೂ ರಾಜಕೀಯವಾದ ಸ್ಥಾನಮಾನಗಳನ್ನು ಗಳಿಸಿಕೊಳ್ಳುವಂತಾಗಿದೆ ಎಂಬುದು ನಿಜ. ಆದರೆ ಆ ಮೀಸಲಾತಿ ಸೌಲಭ್ಯವನ್ನು ಪಡೆಯುತ್ತಿರುವ ಬಹುತೇಕ ಜಾತಿಗಳಲ್ಲಿ ಕೆಲವೇ ಕೆಲವು ಜಾತಿ ಜನ ಮಾತ್ರ ರಾಜಕೀಯ ಪ್ರವೇಶ ಮಾಡಿವೆ. ಮೀಸಲಾತಿ ಸೌಲಭ್ಯ ಪಡೆಯುತ್ತಿರುವ ದುರ್ಬಲ ವರ್ಗಗಳು ರಾಜಕೀಯ ಮೆಟ್ಟಿಲೇರುವುದಿರಲಿ, ಮತದಾರದ ಪಟ್ಟಿಯಲ್ಲಿ ಸೇರಲೂ ಸಹ ಸಾಧ್ಯವಾಗದಂತಹ ಸ್ಥಿತಿ ಇದೆ.

ಬಹುತೇಕ ನಿರ್ಲಕ್ಷಿತ ಜಾತಿ ಬುಡಕಟ್ಟುಗಳು ಭಾರತದಲ್ಲಿ ಇನ್ನೂ ಇವೆ. ಅವುಗಳ ಇರಿವನ್ನು ಕುರಿತು ಸರ್ಕಾರ ಗಮನವನ್ನೆ ಹರಿಸುತ್ತಿಲ್ಲ. ಅಂತಹ ನಿರ್ಲಕ್ಷಿತ ಜಾತಿ ಬುಡಕಟ್ಟುಗಳು ಸ್ವತಃ ತಾವು ನಿರ್ಲಕ್ಷಿತರು ಎಂದು ಹೇಳಿಕೊಳ್ಳಲು ಸಾಧ್ಯವಾಗದಂತಹ ಗಂಟಲಿಲ್ಲದ ಅಸಹಾಯಕರಾಗಿದ್ದಾರೆ.

ಒಂದು ಕಾಲಕ್ಕೆ ಅಪರಾಧಿಗಳೆಂಬ ಹಣೆಪಟ್ಟಿ ಕಟ್ಟಿಕೊಂಡು ಅವಮಾನಿತಗೊಂಡ ಸೆಟ್ಲಮೆಂಟ್ ವಾಸಿಗರ ಸ್ಥಿತಿ ರಾಜಕೀಯವಾಗಿ ತುಂಬಾ ಶೋಚನೀಯವಾಗಿದೆ. ಕರ್ನಾಟಕದ ಸೆಟ್ಲಮೆಂಟ್‌ಗಳಲ್ಲಿ ನೆಲೆಸಿರುವ ಒಟ್ಟು ಎಲ್ಲಾ ಜಾತಿಗಳಲ್ಲಿ ಶೇ. ೩೦ರಷ್ಟು ಜನ ಇಂದಿಗೂ ಮತದಾರರ ಪಟ್ಟಿಗೆ ಸೇರಲು ಸಾಧ್ಯವಾಗಿಲ್ಲ.

ಕೋಷ್ಟಕ ೭.೧: ಸಮೀಕ್ಷೆಗೊಳಪಟ್ಟ ಮತದಾರರ ಪಟ್ಟಿಯಿಂದ ವಂಚಿತಗೊಂಡ ಸಮುದಾಯಗಳ ಪಟ್ಟಿ

ಸಮುದಾಯಗಳು	ಭೋವಿ	ಗಂಟಿಚೋರ	ಕೊರಮ	ಪಾರ್ಧಿ	ಚಪ್ಪರಬಂದ	ಕಂಜರಬಾಟ
ಮತದಾನ ಮಾಡಲು ಅರ್ಹರ ಗುಂಪು	೬೫೦	೧೮೦೬	೩೩೨೮	೩೭೫೧	೯೩೧	೨೯೬
ಮತದಾರರ ಗುಂಪು	೪೭೫	೮೮೧	೨೯೭೯	೨೫೦೪	೫೪೮	೧೧೪
ಮತದಾರ ಪಟ್ಟಿಗೆ ಸೇರದ ಗುಂಪು	೧೭೫	೯೨೫	೩೪೯	೧೨೬೭	೩೮೩	೧೮೨

ಸೆಟ್ಲಮೆಂಟಿನ ಜನ ರಾಜ್ಯದ ವಿಧಾನ ಪರಿಷತ್ತು ಮತ್ತು ವಿಧಾನಸಭೆಯ ಸದಸ್ಯರಾಗುವುದು ಇಂದಿಗೂ ಕನಸಿನ ಮಾತು ಎನ್ನುವ ಸ್ಥಿತಿ ಇದೆ.

೧೯೫೨ರಲ್ಲಿ ಅಪರಾಧಿ ಬುಡಕಟ್ಟುಗಳು ವಿಮುಕ್ತಗೊಂಡವಾದರೂ ಇಲ್ಲಿಯವರೆಗೂ ಸೆಟ್ಲಮೆಂಟಿನ ಒಬ್ಬೇ ಒಬ್ಬ ವ್ಯಕ್ತಿ ಅದೂ ಭೋವಿ ಸಮುದಾಯದ ವ್ಯಕ್ತಿ ಮಾತ್ರ ಮೇಯರ್ ಆಗಲು ಸಾಧ್ಯವಾಗಿದೆ.

ಅಧ್ಯಯನದಲ್ಲಿ ಗಮನಿಸಿದ ಒಟ್ಟು ಸೆಟ್ಲಮೆಂಟ್‌ಗಳಲ್ಲಿ ಹುಬ್ಬಳ್ಳಿ ಮತ್ತು ಗದಗನಲ್ಲಿ ಕೊರಮ, ಬಾಗಲಕೋಟದಲ್ಲಿ ಪಾರ್ಧಿ ಸಮುದಾಯದವರು ಉಳಿದ ಸಮುದಾಯದವರಿಗಿಂತ ಸಂಖ್ಯಾ ಬಲದಿಂದ ಹೆಚ್ಚು ಇರುವುದರಿಂದ ಸ್ಥಳೀಯ ಮಟ್ಟದ ರಾಜಕೀಯ ಸ್ಥಾನಗಳಲ್ಲಿಯೂ ಹೆಚ್ಚಿನ ಪಾಲನ್ನು ಪಡೆದಿರುವುದನ್ನು ಕಾಣಬಹುದಾಗಿದೆ.

ಹುಬ್ಬಳ್ಳಿಯಲ್ಲಿ ಸೆಟ್ಲಮೆಂಟಿನಿಂದ ಬೋವಿ ಸಮುದಾಯದ ಪ್ರಕಾಶ ಕ್ಯಾರಕಟ್ಟಿಯನ್ನುವವರು ಮಾತ್ರ ೨೦೦೩-೦೪ರ ಸಾಲಿನಲ್ಲಿ ಮೇಯರ್ (ಮಹಾಪೌರ) ಆಗಿದ್ದರು. ಅವರ ಸಂಬಂಧಿಕ ಮಹಿಳೆಯೊಬ್ಬರು ಕಾರ್ಪೋರೇಟರ್ (೧೯೯೫-೨೦೦೧) ಆಗಿದ್ದುದು ತಿಳಿದು ಬರುತ್ತದೆ. ಇಂದು ಇವರ್‍ಯಾರೂ ಸೆಟ್ಲಮೆಂಟಿನಲ್ಲಿ ನೆಲೆಸಿಲ್ಲ.

ಈ ಇಬ್ಬರ ಹೊರತಾಗಿ ಬೋವಿ ಸಮುದಾಯದ ಮತ್ತೊಬ್ಬ ವ್ಯಕ್ತಿ ಮಹಾನಗರ ಸಭೆಗೆ ಆಗಲೀ ಇತರ ಸಂಸ್ಥೆಗಳಿಗಾಗಲೀ ಯಾವುದೇ ಸದಸ್ಯನಾಗಿ ಚುನಾಯಿತನಾಗಿಲ್ಲ.

ಹುಬ್ಬಳ್ಳಿ ಸೆಟ್ಲಮೆಂಟಿನ ಕೊರಮ ಸಮುದಾಯದವರಲ್ಲಿ ೧೯೮೫ರಿಂದ ೨೦೦೬ರವರೆಗೆ ೪ ಜನ ಪುರುಷರು ಮಹಾನಗರಪಾಲಿಕೆ ಸದಸ್ಯರಗಳಾಗಿದ್ದಾರೆ. ಇಬ್ಬರು ಮಹಿಳೆಯರು ೨೦೦೭ರಲ್ಲಿ ಚುನಾವಣೆಯಲ್ಲಿ ಮಹಾನಗರಪಾಲಿಕೆ ಸದಸ್ಯರುಗಳಾಗಿ ಆಯ್ಕೆಯಾಗಿದ್ದಾರೆ. ಒಬ್ಬ ಪುರುಷ ಎಪಿಎಂಸಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರಾಯಶಃ ಪರಿಶಿಷ್ಟ ಜಾತಿ ಮೀಸಲಾತಿ ಕ್ಷೇತ್ರವಿದ್ದುದರಿಂದ ಕೊರಮರು ಕಾರ್ಪೋರೇಟರ್‌ಗಳಾಗಲು ಸಾಧ್ಯವಾಯಿತು.

ಪರಿಶಿಷ್ಟ ಪಂಗಡದ ಮೀಸಲಾತಿ ಇದ್ದುದರಿಂದ ಹುಬ್ಬಳ್ಳಿ ಸೆಟ್ಲಮೆಂಟಿನ ಪಾರ್ಧಿ ಸಮುದಾಯದ ಚಂದಪ್ಪ ಕಟ್ಟಿಮನಿ ಮತ್ತು ಸೀತಾಬಾಯಿ ರಾಮು ಬಾಗಲಕೋಟರವರು ಮಹಾನಗರಪಾಲಿಕೆ ಸದಸ್ಯರಾಗಲು ಸಾಧ್ಯವಾಯಿತು.

ಪರಿಶಿಷ್ಟ ಜಾತಿಯ ಮೀಸಲಾತಿ ಅಡಿಯಲ್ಲಿ ಬರುತ್ತಿದ್ದರೂ ಗಂಟಿಚೋರ ಸಮುದಾಯದ ಒಬ್ಬ ವ್ಯಕ್ತಿ ಮಾತ್ರ (ಸುರೇಶ ಹಾನಗಲ್) ಕಾರ್ಪೋರೇಟರ್ ಆಗಲು ಸಾಧ್ಯವಾಗಿದೆ.

ಇದರಾಚೆಗೆ ಕಂಜರಭಾಟ ಮತ್ತು ಚಪ್ಪರಬಂದ ಸಮುದಾಯಗಳಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮೀಸಲಾತಿ ಸೌಲಭ್ಯವಿಲ್ಲ ಹಾಗೂ ಜನಸಂಖ್ಯಾ ಬಲಮೂ ಇಲ್ಲ ಮತ್ತು ಆರ್ಥಿಕವಾಗಿಯೂ ಅವು ಕೆಳಹಂತದಲ್ಲಿಯೇ ಇವೆ. ಹೀಗಾಗಿ ಈ ಸಮುದಾಯಗಳಿಗೆ ರಾಜಕೀಯವಾಗಿ ಯಾವ ಸ್ಥಾನಗಳು ಗಳಿಸಿಕೊಳ್ಳಲೂ ಸಾಧ್ಯವಾಗಿಲ್ಲ.

ಗದಗ ನಗರದಲ್ಲಿ ಪರಿಶಿಷ್ಟ ಜಾತಿ ಮೀಸಲಾತಿ ಅಡಿ ಕೊರಮರು ೪ ಜನ ಪುರುಷರು ನಗರ ಸಭೆಯ ಸದಸ್ಯರಾಗಲು ಸಾಧ್ಯವಾಯಿತು. ಇಂದು ಸುರೇಶ ಕಟ್ಟಿಮನಿ ಎನ್ನುವವರು ಪ್ರಸ್ತುತ ನಗರಸಭೆ ಸದಸ್ಯರಾಗಿ ಮುಂದುವರೆದಿದ್ದಾರೆ. ಗದಗಿನ ಕೊರಮ ಮಹಿಳೆಯರಿಗೆ ರಾಜಕೀಯ ಪ್ರವೇಶ ಮಾಡಲು ಇಂದಿಗೂ ಸಾಧ್ಯವಾಗುತ್ತಿಲ್ಲ.

ಗದಗ ಸೆಟ್ಲಮೆಂಟಿನಲ್ಲಿ ಭೋವಿಗಳನ್ನು ಹೊರತುಪಡಿಸಿ ಕೊರಮ, ಪಾರ್ಧಿ, ಗಂಟಿಚೋರ, ಚಪ್ಪರಬಂದ, ಕಂಜರಭಾಟ ಸಮುದಾಯಗಳಿವೆ. ಆದರೆ ಆ ಸಮುದಾಯಗಳಲ್ಲಿ ಇಂದಿಗೂ ಯಾರೂ ರಾಜಕೀಯ ಪ್ರವೇಶ ಮಾಡಲು ಮತ್ತು ರಾಜಕೀಯ ಸ್ಥಾನ ಗಳಿಸಿಕೊಳ್ಳಲು ಸಾಧ್ಯವಾಗಿಲ್ಲದೇ ಇರುವುದು ಕಂಡು ಬರುತ್ತದೆ.

ಬಾಗಲಕೋಟ ಸೆಟ್ಲಮೆಂಟಿನಲ್ಲಿ ಪಾರ್ಧಿಗಳ ಸಂಖ್ಯಾಬಲ ಹೆಚ್ಚಾಗಿದೆ. ಇಲ್ಲಿ ಪರಿಶಿಷ್ಟ ಪಂಗಡ ಮೀಸಲಾತಿ ಅಡಿ ಪಾರ್ಧಿಗಳ ೩ ಪುರುಷರು ಮತ್ತು ೪ ಜನ ಮಹಿಳೆಯರು ಒಟ್ಟು ೭ ಜನ ನಗರ ಸಭೆ ಸದಸ್ಯರಾಗಿರುವುದು ತಿಳಿದು ಬರುತ್ತದೆ.

ಬಿಜಾಪುರ ಸೆಟ್ಲಮೆಂಟಿನಲ್ಲಿರುವ ಹರಣಶಿಕಾರಿ/ಪಾರ್ಧಿಗಳು ೪ ಜನರು ನಗರ ಸಭಾ ಚುನಾವಣೆಗೆ ನಿಂತಿದ್ದರಾದಾರೂ ಅವರ್‍ಯಾರೂ ಗೆಲುವನ್ನು ಹೊಂದಲು ಸಾಧ್ಯವಾಗಿಲ್ಲ. ಪ್ರಾಯಸಃ ಇದಕ್ಕೆ ಕಾರಣ ಸೆಟ್ಲಮೆಂಟಿನ ಜನರನ್ನು ನೊಡುವ ದೃಷ್ಟಿಕೋನವೆ ಕಾರಣವಿರಬಹುದು

ಹಾಗೇ ಪರಿಶಿಷ್ಟ ಪಂಗಡದಲ್ಲಿಯೇ ಪ್ರಬಲರಾದ ನಾಯಕ ಮುಂತಾದ ಜನಸಂಖ್ಯಾ ಬಲ ಹೆಚ್ಚಿರುವ ಸಮುದಾಯಗಳು ಚುನಾವಣೆಗೆ ನಿಂತಿದಾಗ್ಯೂ ಪಾರ್ಧಿಗಳಂತಹ ಅಲ್ಪಸಂಖ್ಯಾತ ಪರಿಶಿಷ್ಟ ಪಂಗಡಗಳು ಸೋಲುವ ಸಾಧ್ಯತೆಗಳು ಹೆಚ್ಚು.

ದಾಂಡೇಲಿ ಮತ್ತು ಗೋಕಾಕ್‌ಗಳಲ್ಲಿ ಸೆಟ್ಲಮೆಂಟಿನ ಜನ ರಾಜಕೀಯ ಸ್ಥಾನಗಳಿಗಾಗಿ ಯಾವುದೇ ಚುನಾವಣೆಯಲ್ಲಿ ನೇರವಾಗಿ ಪಾಲ್ಗೊಳ್ಳದಿರುವುದು ಕಂಡು ಬರುತ್ತದೆ.

ಕೇವಲ ಕಾರ್ಪೋರೇಷನ್, ನಗರಸಭೆ, ಎ.ಪಿ.ಎಂ.ಸಿ.ಗಳಿಗೆ ಮಾತ್ರ ಇವರ ರಾಜಕೀಯ ಚಟುವಟಿಕೆ ಸೀಮಿತವಾಗಿದೆ. ಅದರಾಚೆಗೆ ರಾಜ್ಯ ಮತ್ತು ರಾಷ್ಟ್ರಮಟ್ಟದ ರಾಜಕಾರಣದಲ್ಲಿ ಇವರು ಪಾಲ್ಗೊಂಡಿರುವುದು ಎಲ್ಲಿಯೂ ಕಂಡು ಬರುವದಿಲ್ಲ. ಹುಬ್ಬಳ್ಳಿ ಸೆಟ್ಲಮೆಂಟಿನ ಕೊರಮ ಸಮುದಾಯದ ವ್ಯಕ್ತಿಯೊಬ್ಬ ಎಂ.ಎಲ್.ಎ. ಚುನಾವಣೆಗೆ ನಿಂತಿದ್ದರಾದರೂ ಅದರಲ್ಲಿ ಅವರು ಯಶಸ್ವಿಯಾಗಲು ಸಾಧ್ಯವಾಗಲಿಲ್ಲ.

ಮುಖ್ಯವಾಗಿ ಸೆಟ್ಲಮೆಂಟಿನ ಜನ ಸಮರ್ಪಕವಾಗಿ ರಾಜಕೀಯ ಪ್ರವೇಶ ಮಾಡಲು ಸಾಧ್ಯವಾಗದಿರುವುದಕ್ಕೆ ಹಲವು ಕಾರಣಗಳಿವೆ.

೧. ಬಡತನ.

೨. ಮೀಸಲಾತಿ ಕೊರತೆ.

೩. ಸೆಟ್ಲಮೆಂಟಿನವರೆಂದು ಅನಾದರಕ್ಕೆ ಒಳಗಾಗಿರುವುದು.

೪. ಇನ್ನು ಮತದಾರರ ಪಟ್ಟಿಯಲ್ಲಿ ಸೇರಬೇಕಾದವರ ಸಂಖ್ಯೆ ಹೆಚ್ಚಾಗಿರುವುದು.

ಹಿಂದೆ ಸೆಟ್ಲಮೆಂಟ್‌ಗಳಲ್ಲಿ ೨೪ ಸಮುದಾಯಗಳು ನೆಲೆಸಿದ್ದವು ಎಂಬ ವಿವರಗಳು ಇತಿಹಾಸದ ಮೂಲಕ ದೊರೆಯುತ್ತದೆ. ಆದರೆ ಇಪ್ಪತ್ನಾಲ್ಕು ಸಮುದಾಯಗಳಲ್ಲಿ ೧೮ರಷ್ಟು ಸಮುದಾಯಗಳು ಇಂದು

ಸೆಟ್ಲಮೆಂಟ್‌ಗಳನ್ನು ತೊರೆದು ಹೋಗಿವೆ. ಇನ್ನೂ ಸೆಟ್ಲಮೆಂಟ್‌ಗಳಲ್ಲಿ ಉಳಿದ ಸಮುದಾಯಗಳು ಕೇವಲ ಆರು ಇವೆ.

ಅವುಗಳಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಸಮದಯಗಳು

೧. ಕೊರಮ

೨. ಬೋವಿ/ವಡ್ಡರ್

೩. ಗಂಟಿಚೋರ

ಪರಿಶಿಷ್ಟ ಪಂಗಡಕ್ಕೆ ಸೇರಿದ ಸಮುದಾಯ

೧. ಪಾರ್ಧಿ / ಹರಿಣ ಶಿಕಾರಿ

ಇತರ ಹಿಂದುಳಿದ ವರ್ಗಕ್ಕೆ ಸೇರಿದ ಸಮುದಾಯಗಳು

೧. ಚಪ್ಪರಬಂದ

೨. ಕಂಜರಭಾಟ

ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಬರುವ ಮೂರು ಸಮುದಾಯಗಳಲ್ಲಿ ಕೊರಮ ಸ್ವಲ್ಪ ಉತ್ತಮ ಸ್ಥಿತಿಯಲ್ಲಿದೆ. ಅದರ ತರುವಾಯ ಭೋವಿ ಬರುತ್ತದೆ. ನಂತರದ ಕೊನೆಯ ಸ್ಥಾನ ಗಂಟಿಚೋರ ಸಮುದಾಯದ್ದಾಗಿದೆ. ಹೀಗಾಗಿ ಬಹುತೇಕವಾಗಿ ರಾಜಕೀಯವಾದ ಅವಕಾಶಗಳು ಸುಲಭವಾಗಿ ಕೊರಮ ಸಮುದಾಯಕ್ಕೆ ಹೆಚ್ಚು ದಕ್ಕುತ್ತವೆ. ಹಾಗೇ ಸೆಟ್ಲಮೆಂಟಿನವರೆಲ್ಲಾ ಒಂದೇ ಎಂಬ ಭಾವನೆ ಇರುವುದರಿಂದ ಭೋವಿ ಮತ್ತು ಗಂಟಿಚೋರ ಸಮುದಾಯದವರು ಇದಕ್ಕೆ ಅಡ್ಡಿಪಡಿಸುವುದಿಲ್ಲ. ಈ ಎಲ್ಲಾ ಸಮುದಾಯಗಳ ಮಧ್ಯ ಭ್ರಾತೃತ್ವ ಭಾವನೆ ಇದೆ. ಹೀಗಾಗಿ ಸೆಟ್ಲಮೆಂಟಿನ ಈ ಮೂರು ಸಮುದಾಯಗಳಲ್ಲಿ ರಾಜಕೀಯ ಅವಕಾಶಗಳಿಗಾಗಿ ಕಚ್ಚಾಟವಾಗಲೀ, ಸಂಘರ್ಷಗಳಾಗಲಿ ನಡೆಯುವುದಿಲ್ಲ.

ಪರಿಶಿಷ್ಟ ಪಂಗಡಕ್ಕೆ ಪಾರ್ಧಿ ಸಮುದಾಯವೊಂದು ಸೇರಿದೆ. ಮೀಸಲಾತಿ ಸೌಲಭ್ಯವು ಪರಿಶಿಷ್ಟ ಪಂಗಡಗಳಿಗೆ ಕೇವಲ ಶೇ. ೩ರಷ್ಟು ಮಾತ್ರವಿದೆ. ಹೀಗಾಗಿ ರಾಜಕೀಯವಾಗಿಯೂ ಇವರಿಗೆ ಅವಕಾಶಗಳು ಅತ್ಯಲ್ಪ. ಹೀಗಾಗಿ ರಾಜಕೀಯ ಸ್ಥಾನಮಾನಗಳಲ್ಲಿ ಇವರಿಗೆ ದೊರೆಯುವ ಅವಕಾಶಗಳು ತುಂಬಾ ಅತ್ಯಲ್ಪವೆಂದೇ ಹೇಳಬಹುದು.

ಕಂಜರಬಾಟ ಮತ್ತು ಚಪ್ಪರಬಂದ ಸಮುದಾಯಗಳು ಇತರೆ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿವೆ. ಇತರ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಬರುವ ಬಲಿಷ್ಟ ಜಾತಿಗಳು ಅವಕಾಶಗಳನ್ನು ಬಾಚಿಕೊಳ್ಳುವುದರಿಂದ ಈ ಎರಡು ಸಮುದಾಯಗಳು ರಾಜಕಿಯ ಪಾಲ್ಗೊಳ್ಳುವಿಕೆಯಲ್ಲಿ ಹಿಂದೆ ಸರಿಯಬೇಕಾದ ಅನಿವಾರ್ಯತೆ ಇದೆ. ಹಾಗೆ ಈ ಎರಡೂ ಸಮುದಾಯಗಳು ಸಂಖ್ಯಾ ಬಲದಿಂದಲೂ ತುಂಬಾ ಕನಿಷ್ಟವಾಗಿವೆ.

ಹೀಗಾಗಿ ಸಹಜವಾಗಿಯೇ ಈ ಎರಡು ಸಮುದಾಯಗಳು ಅವಕಾಶ ವಂಚಿತವಾಗಿವೆ. ಸಾರ್ವತ್ರಿಕ ಜನರನ್ನು ನೋಡಿದರೆ ಸೆಟ್ಲಮೆಂಟಿನವರ ಆರ್ಥಿಕ ಸ್ಥಿತಿ ತುಂಬಾ ಶೋಚನೀಯವಾಗಿದೆ. ಅದರಲ್ಲೂ ಪಾರ್ಧಿಯಂತಹ ಅತೀ ಹಿಂದುಳಿದ ಸಮುದಾಯ ಆರ್ಥಿಕವಾಗಿಯೂ ತುಂಬಾ ದುರ್ಬಲವಾಗಿದೆ.

ಬ್ರಿಟೀಷರು ಹುಟ್ಟು ಹಾಕಿದ ಎಲ್ಲಾ ಸೆಟ್ಲಮೆಂಟ್‌ಗಳು ಇಂದು ವಿಮುಕ್ತಗೊಂಡಿವೆ. ಇದರಲ್ಲಿ ನೆಲೆಸಿದವರು ಸರ್ಕಾರಿ ಆದೇಶಗಳಲ್ಲಿ ವಿಮುಕ್ತಗೊಂಡಿದ್ದಾರೆ. ಆದರೆ ಸೆಟ್ಲಮೆಂಟಿನ ಹೊರಗಿನ ಜನರ ಕಣ್ಣಿಗೆ ಇವರಿನ್ನೂ ಅಪರಾಧಿಗಳಾಗಿಯೇ ಕಾಣುತ್ತಾರೆ. ಯಾರಾದರೂ ಸೆಟ್ಲಮೆಂಟಿನ ಜನ ಚುನಾವಣೆಗೆ ನಿಂತರೆ ಸೆಟ್ಲಮೆಂಟಿನ ಹೊರಗಿನ ಜನ "ಕಳ್ಳರನ್ನು ಗೆಲ್ಲಿಸಬೇಕೆ?' ಎಂದು ಗೇಲಿ ಮಾಡುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಲಾಗಿದೆ. ಅಂದರೆ ಇವರನ್ನು ವ್ಯವಸ್ಥೆ ಯಾವ ದೃಷ್ಟಿಕೋನದಲ್ಲಿ ನೋಡುತ್ತಿದೆ ಎಂಬುದು ಅರ್ಥವಾಗಬಹುದು.

ಸೆಟ್ಲಮೆಂಟಿನ ಜನ ಬಡತನದಿಂದಾಗಿ ಇಂದಿಗೂ ಅಲೆಮಾರಿಗಳಾಗಿದ್ದಾರೆ. ಇವರಲ್ಲಿ ಎಷ್ಟೋ ಜನ ಉದ್ಯೋಗ ಹುಡುಕಿಕೊಂಡು, ಗೋವಾ, ಪುಣೆ, ಮುಂಬೈ, ಹೈದರಾಬಾದ್, ಅಹ್ಮದ್‌ಬಾದ್ ಮುಂತಾದ ಕಡೆ ವಲಸೆ ಹೋಗುತ್ತಲೇ ಇರುತ್ತಾರೆ. ಈ ರೀತಿ ವಲಸೆ ಹೋದಾಗ ಮತದಾರರ ಪಟ್ಟಿ ತಯಾರಿಸಲು ಸಮೀಕ್ಷೆ ನಡೆಸಲಾಗುತ್ತದೆ. ಸಮೀಕ್ಷೆ ನಡೆಸಿದಾಗ ಸಮೀಕ್ಷೆಯಿಂದ ಹೊರಗುಳಿದ ಜನ ಸಹಜವಾಗಿಯೇ ಮತದಾರರ ಪಟ್ಟಿಯಲ್ಲಿ ಸೇರುವುದಿಲ್ಲ.

ಈ ರೀತಿ ಮತದಾರರ ಪಟ್ಟಿಯಲ್ಲಿ ಸೇರದ ಜನ ಎಲ್ಲಾ ಸೆಟ್ಲಮೆಂಟ್‌ಗಳಲ್ಲಿಯೂ ದೊರೆಯುತ್ತಾರೆ. ಅಂತಹ ಜನರ ಕುರಿತು ಈ ಕೆಳಗಿನ ಮಾಹಿತಿ ನೀಡಲಾಗಿದೆ.

ಭೋವಿ

ಕರ್ನಾಟಕ ಸೆಟ್ಲಿಮೆಂಟಿನಲ್ಲಿಯು ಭೋವಿ ಸಮುದಾಯ ದಲ್ಲಿ ೦-೧೭ರ ವಯೋಮಾನದ ಪುರುಷರು ಶೇ. ೪೧.೬೮ ಹಾಗೂ ಮಹಿಳೆಯರು ಶೇ. ೪೧.೪೮ರಷ್ಟಿದ್ದಾರೆ. ಒಟ್ಟು ಶೇ. ೪೧.೬ರಷ್ಟು ಜನರನ್ನು ಮತದಾನ ನೀಡುವ ವಯೋಮಿತಿ ತಲುಪಿಲ್ಲದಿರುವುದರಿಂದ ಮತದಾನ ನೀಡಲು ಅರ್ಹರಲ್ಲವೆಂದು ಪರಿಗಣಿಸಲಾಗಿದೆ. ಇದರಾಚೆಗೆ ಶೇ. ೫೮.೪ರಷ್ಟು ಜನ ಮತದಾನ ಮಾಡಲು ಅರ್ಹರಿದ್ದಾರೆ. ಆದರೆ ಇದರಲ್ಲಿ ಮತದಾರರ ಪಟ್ಟಿಯಲ್ಲಿ ಇರುವವರ ಒಟ್ಟು ಪ್ರಮಾಣ ಶೇ. ೭೩.೦೭ರಷ್ಟು ಮಾತ್ರ, ಅದರಲ್ಲೂ ಪುರುಷರು ಶೇ. ೬೭.೭೩ ಹಾಗೂ ಮಹಿಳೆಯರು ಶೇ. ೭೯.೫೯ರಷ್ಟು ಇದ್ದಾರೆ.

ಕೋಷ್ಟಕ ೭.೨: ಸಮೀಕ್ಷೆಗೊಳಪಟ್ಟ ಭೋವಿ ಸಮುದಾಯದ ಮತದಾನ ಸೌಲಭ್ಯ ಪಟ್ಟಿ

	ಪುರುಷ	ಸ್ತ್ರೀ	ಒಟ್ಟು
ಒಟ್ಟು ಜನಸಂಖ್ಯೆ	೬೦೨	೫೧೧	೧೧೧೩
೦-೧೭ ವಯಸ್ಸಿನ ಗುಂಪು	೨೫೧	೨೧೨	೪೬೩
ಮತದಾನ ಮಾಡಲು ಅರ್ಹರ ಗುಂಪು	೩೫೧	೨೯೯	೬೫೦
ಮತದಾರರ ಗುಂಪು	೨೩೭	೨೩೮	೪೭೫
ಮತದಾರ ಪಟ್ಟಿಗೆ ಸೇರದ ಗುಂಪು	೧೧೪	೬೧	೧೭೫

ಒಟ್ಟಾರೆಯಾಗಿ ಮತದಾರರ ಪಟ್ಟಿಯಿಂದ ಹೊರಗುಳಿದವರ ಒಟ್ಟು ಪ್ರಮಾಣ ಶೇ. ೨೬.೯೩ರಷ್ಟಿದೆ. ಇದರಲ್ಲಿ ಪುರುಷರು ಶೇ. ೩೨.೨೭ ಹಾಗೂ ಮಹಿಳೆಯರು ಶೇ. ೨೦.೪೧ರಷ್ಟಿದ್ದಾರೆ. ಒಟ್ಟಾರೆಯಾಗಿ ಭೋವಿ ಮತದಾರರ ಪಟ್ಟಿಯಲ್ಲಿರುವ ಮಹಿಳೆಯರಿಗಿಂತ ಪುರುಷರ ಪ್ರಮಾಣ ಅತ್ಯಂತ ಕಡಿಮೆ ಇದೆ. ಪ್ರಾಯಶಃ ಭೋವಿ ಪುರುಷರು ದುಡುಮೆ ಹುಡುಕಿಕೊಂಡು ಬೇರೆ ಬೇರೆ ಪ್ರದೇಶಗಳಿಗೆ ವಲಸೆ ಹೋಗುವುದೇ ಈ ರೀತಿಯ ಪರಿಣಾಮಗಳಿಗೆ ಕಾರಣವಿರಬೇಕು.

ಗಂಟಿಚೋರ

ಕರ್ನಾಟಕ ಸೆಟ್ಲಿಮೆಂಟಿನಲ್ಲಿಯು ಗಂಟಿ ಚೋರ್ ಸಮುದಾಯದಲ್ಲಿ ೦-೧೭ರ ವಯೋಮಾನದವರು ಒಟ್ಟು ಶೇ. ೩೮.೯೦ರಷ್ಟಿದ್ದಾರೆ. ಇದರಲ್ಲಿ ಪುರುಷರು ಶೇ. ೫೨.೩೪ ಹಾಗೂ ಮಹಿಳೆಯರು ಶೇ. ೪೭.೬೬ರಷ್ಟಿದ್ದಾರೆ. ಒಟ್ಟು ಶೇ. ೩೮.೯೦ರಷ್ಟು ಜನರನ್ನು ಮತದಾನ ನೀಡುವ ವಯೋಮಿತಿ ತಲುಪಿಲ್ಲದಿರುವುದರಿಂದ ಮತದಾನ ನೀಡಲು ಅರ್ಹರಲ್ಲವೆಂದು ಪರಿಗಣಿಸಲಾಗಿದೆ. ಇದರಾಚೆಗೆ ಶೇ. ೬೧.೧೦ರಷ್ಟು ಜನ ಮತದಾನ ಮಾಡಲು ಅರ್ಹರಿದ್ದಾರೆ. ಆದರೆ ಇದರಲ್ಲಿ ಮತದಾರರ ಪಟ್ಟಿಯಲ್ಲಿ ಇರುವವರು ಕೇವಲ ಒಟ್ಟು ಪ್ರಮಾಣ ಶೇ. ೪೮.೭೮ರಷ್ಟು ಮಾತ್ರ, ಅದರಲ್ಲೂ ಪುರುಷರು ಶೇ. ೫೧.೫೩ ಹಾಗೂ ಮಹಿಳೆಯರು ಶೇ. ೪೮.೪೭ರಷ್ಟು ಇದ್ದಾರೆ.

ಕೋಷ್ಟಕ ೭.೩: ಸಮೀಕ್ಷೆಗೊಳಪಟ್ಟ ಗಂಟಿಚೋರರ ಮತದಾನ ಸೌಲಭ್ಯ ಪಟ್ಟಿ

	ಪುರುಷ	ಸ್ತ್ರೀ	ಒಟ್ಟು
ಒಟ್ಟು ಜನಸಂಖ್ಯೆ	೧೫೩೦	೧೪೨೬	೨೯೫೬
೦-೧೭ ವಯಸ್ಸಿನ ಗುಂಪು	೬೦೨	೫೪೮	೧೧೫೦
ಮತದಾನ ಮಾಡಲು ಅರ್ಹರ ಗುಂಪು	೯೨೮	೮೭೮	೧೮೦೬
ಮತದಾರರ ಗುಂಪು	೪೫೪	೪೨೭	೮೮೧
ಮತದಾರ ಪಟ್ಟಿಗೆ ಸೇರದ ಗುಂಪು	೪೭೪	೪೫೧	೯೨೫

ಒಟ್ಟಾರೆಯಾಗಿ ಮತದಾರರ ಪಟ್ಟಿಯಿಂದ ಹೊರಗುಳಿದವರ ಒಟ್ಟು ಪ್ರಮಾಣ ಶೇ. ೫೧.೨೨ರಷ್ಟಿದೆ. ಇದರಲ್ಲಿ ಪುರುಷರು ಶೇ. ೫೧.೨೪ ಹಾಗೂ ಮಹಿಳೆಯರು ಶೇ. ೪೮.೭೬ರಷ್ಟಿದ್ದಾರೆ. ಒಟ್ಟಾರೆಯಾಗಿ ಸೆಟ್ಲಿಮೆಂಟಿನ ಗಂಟಿಚೋರರಲ್ಲಿ ಮತದಾರರ ಪಟ್ಟಿಯಲ್ಲಿರುವವರಿಗಿಂತ (ಶೇ. ೪೮.೭೮) ಮತದಾರರ ಪಟ್ಟಿಯಲ್ಲಿ ಇರದಿರುವವರ ಪ್ರಮಾಣ (ಶೇ. ೫೧.೨) ಹೆಚ್ಚಾಗಿರುವುದನ್ನು ಕಾಣಬಹುದಾಗಿದೆ.

ಕೊರಮ

ಕರ್ನಾಟಕ ಸೆಟ್ಲಿಮೆಂಟಿನಲ್ಲಿಯು ಕೊರಮರ ಸಮುದಾಯದಲ್ಲಿ ೦-೧೭ರ ವಯೋಮಾನದವರು ಒಟ್ಟು ಶೇ. ೪೪.೨೬ ರಷ್ಟಿದ್ದಾರೆ. ಇದರಲ್ಲಿ ಪುರುಷರು ಶೇ. ೪೪.೩೦ ಹಾಗೂ ಮಹಿಳೆಯರು ಶೇ. ೪೪.೨೨ರಷ್ಟಿದ್ದಾರೆ. ಇವರನ್ನು ವಯೋಮಿತಿ ತಲುಪಿಲ್ಲದಿರುವುದರಿಂದ ಮತದಾನ ನೀಡಲು

ಕೋಷ್ಟಕ ೭.೬: ಸಮೀಕ್ಷೆಗೊಳಪಟ್ಟ ಕಂಜರಭಾಟರ ಮತದಾನ ಸೌಲಭ್ಯ ಪಟ್ಟಿ

	ಪುರುಷ	ಸ್ತ್ರೀ	ಒಟ್ಟು
ಒಟ್ಟು ಜನಸಂಖ್ಯೆ	೨೯೬	೨೬೧	೫೫೭
೦–೧೭ ವಯಸ್ಸಿನ ಗುಂಪು	೧೪೪	೧೧೭	೨೬೧
ಮತದಾನ ಮಾಡಲು ಅರ್ಹರ ಗುಂಪು	೧೫೨	೧೪೪	೨೯೬
ಮತದಾರರ ಗುಂಪು	೬೫	೪೯	೧೧೪
ಮತದಾರ ಪಟ್ಟಿಗೆ ಸೇರದ ಗುಂಪು	೮೭	೯೫	೧೮೨

ಒಟ್ಟಾರೆಯಾಗಿ ಮತದಾರರ ಪಟ್ಟಿಯಿಂದ ಹೊರಗುಳಿದವರ ಒಟ್ಟು ಪ್ರಮಾಣ ಶೇ. ೬೧.೪೯ ರಷ್ಟಿದೆ. ಇದರಲ್ಲಿ ಪುರುಷರು ಶೇ. ೫೭.೨೪ ಹಾಗೂ ಮಹಿಳೆಯರು ಶೇ. ೬೫.೯೭ ರಷ್ಟಿದ್ದಾರೆ. ಒಟ್ಟಾರೆಯಾಗಿ ಸೆಟ್ಲಿಮೆಂಟಿನ ಕಂಜರಭಾಟರಲ್ಲಿ ಸುಮಾರು ಶೇ ೬೧.೪೯ರಷ್ಟು ಮತದಾರರ ಪ್ರಮಾಣ ಕಂಡುಬರುತ್ತದೆ ಆದರೆ ಮತದಾರರ ಪಟ್ಟಿಯಲ್ಲಿರುವ ಪುರುಷರಿಗಿಂತ ಮಹಿಳೆಯರ ಪ್ರಮಾಣ ಕಡಿಮೆ ಇರುವುದನ್ನು ಕಾಣಬಹುದಾಗಿದೆ.

ಗ್ರಂಥ ಋಣ

೧. ರಾಮಮನೋಹರ ಲೋಹಿಯಾ: ರಾಜಕೀಯದಿಂದೊಂದಿಷ್ಟು ದೂರ, ಅಕ್ಷರ ಪ್ರಕಾಶನ, ಹೆಗ್ಗೋಡ, ೧೯೮೬

ಅರ್ಹರಲ್ಲವೆಂದು ಪರಿಗಣಿಸಲಾಗಿದೆ. ಇದರಾಚೆಗೆ ಶೇ. ೫೫.೭೩ರಷ್ಟು ಜನ ಮತದಾನ ಮಾಡಲು ಅರ್ಹರಿದ್ದಾರೆ. ಆದರೆ ಇದರಲ್ಲಿ ಮತದಾರರ ಪಟ್ಟಿಯಲ್ಲಿ ಇರುವವರು ಕೇವಲ ಒಟ್ಟು ಪ್ರಮಾಣ ಶೇ. ೮೯.೬೧ರಷ್ಟು ಮಾತ್ರ, ಅದರಲ್ಲೂ ಪುರುಷರು ಶೇ. ೮೭.೨೦ ಹಾಗೂ ಮಹಿಳೆಯರು ಶೇ. ೯೧.೯೬ ರಷ್ಟು ಇದ್ದಾರೆ.

ಕೋಷ್ಟಕ ೭.೪: ಸಮೀಕ್ಷೆಗೊಳಪಟ್ಟ ಕೊರಮರ ಮತದಾನ ಸೌಲಭ್ಯ ಪಟ್ಟಿ

	ಪುರುಷ	ಸ್ತ್ರೀ	ಒಟ್ಟು
ಒಟ್ಟು ಜನಸಂಖ್ಯೆ	೩೦೭೨	೨೮೯೯	೫೯೭೧
೦-೧೭ ವಯಸ್ಸಿನ ಗುಂಪು	೧೩೬೧	೧೨೮೨	೨೬೪೩
ಮತದಾನ ಮಾಡಲು ಅರ್ಹರ ಗುಂಪು	೧೭೧೧	೧೬೧೭	೩೩೨೮
ಮತದಾರರ ಗುಂಪು	೧೪೯೨	೧೪೮೭	೨೯೭೯
ಮತದಾರ ಪಟ್ಟಿಗೆ ಸೇರದ ಗುಂಪು	೨೧೯	೧೩೦	೩೪೯

ಒಟ್ಟಾರೆಯಾಗಿ ಮತದಾರರ ಪಟ್ಟಿಯಿಂದ ಹೊರಗುಳಿದವರ ಒಟ್ಟು ಪ್ರಮಾಣ ಶೇ. ೧೦.೪೯ರಷ್ಟಿದೆ. ಇದರಲ್ಲಿ ಪುರುಷರು ಶೇ. ೧೨.೮೦ ಹಾಗೂ ಮಹಿಳೆಯರು ಶೇ. ೮.೦೪ರಷ್ಟಿದ್ದಾರೆ. ಒಟ್ಟಾರೆಯಾಗಿ ಸೆಟ್ಲಿಮೆಂಟಿನ ಕೊರಮರಲ್ಲಿ ಸುಮಾರು ಶೇ ೯೦ರಷ್ಟು ಮತದಾರರ ಪ್ರಮಾಣ ಕಂಡುಬರುತ್ತದೆ ಆದರೆ ಮತದಾರರ ಪಟ್ಟಿಯಲ್ಲಿರುವ ಪುರುಷರಿಗಿಂತ ಮಹಿಳೆಯರ ಪ್ರಮಾಣ ಹೆಚ್ಚಿರುವುದನ್ನು ಮನಗಾಣಬಹುದಾಗಿದೆ.

ಪಾರ್ಧಿ

ಕರ್ನಾಟಕ ಸೆಟ್ಲಿಮೆಂಟಿನಲ್ಲಿಯು ಪಾರ್ಧಿ ಸಮುದಾಯದಲ್ಲಿ ೦-೧೭ರ ವಯೋಮಾನದವರು ಒಟ್ಟು ಶೇ. ೪೨.೪೩ ರಷ್ಟಿದ್ದಾರೆ. ಇದರಲ್ಲಿ ಪುರುಷರು ಶೇ. ೪೭.೪೯ ಹಾಗೂ ಮಹಿಳೆಯರು ಶೇ. ೪೨.೦೫ ರಷ್ಟಿದ್ದಾರೆ. ಇವರನ್ನು ವಯೋಮಿತಿ ತಲುಪಿಲ್ಲದಿರುವುದರಿಂದ ಮತದಾನ ನೀಡಲು ಅರ್ಹರಲ್ಲವೆಂದು ಪರಿಗಣಿಸಲಾಗಿದೆ. ಇದರಾಚೆಗೆ ಶೇ. ೫೭.೫೭ರಷ್ಟು ಜನ ಮತದಾನ ಮಾಡಲು ಅರ್ಹರಿದ್ದಾರೆ. ಆದರೆ ಇದರಲ್ಲಿ ಮತದಾರರ ಪಟ್ಟಿಯಲ್ಲಿ ಇರುವವರು ಕೇವಲ ಒಟ್ಟು ಪ್ರಮಾಣ ಶೇ. ೬೬.೭೮ ರಷ್ಟು ಮಾತ್ರ, ಅದರಲ್ಲೂ ಪುರುಷರು ಶೇ. ೬೮.೮೮ ಹಾಗೂ ಮಹಿಳೆಯರು ಶೇ. ೬೧.೬೫ ರಷ್ಟು ಇದ್ದಾರೆ.

ಒಟ್ಟಾರೆಯಾಗಿ ಮತದಾರರ ಪಟ್ಟಿಯಿಂದ ಹೊರಗುಳಿದವರ ಒಟ್ಟು ಪ್ರಮಾಣ ಶೇ. ೩೩.೨೨ ರಷ್ಟಿದೆ. ಇದರಲ್ಲಿ ಪುರುಷರು ಶೇ. ೩೧.೧೨ ಹಾಗೂ ಮಹಿಳೆಯರು ಶೇ. ೩೮.೩೫ ರಷ್ಟಿದ್ದಾರೆ. ಒಟ್ಟಾರೆಯಾಗಿ ಸೆಟ್ಲಿಮೆಂಟಿನ ಪಾರ್ಧಿಯರಲ್ಲಿ ಸುಮಾರು ಶೇ ೬೬.೭೮ರಷ್ಟು ಮತದಾರರ ಪ್ರಮಾಣ ಕಂಡುಬರುತ್ತದೆ ಆದರೆ ಮತದಾರರ ಪಟ್ಟಿಯಲ್ಲಿರುವ ಪುರುಷರಿಗಿಂತ ಮಹಿಳೆಯರ ಪ್ರಮಾಣ ಕಡಿಮೆ ಇರುವುದನ್ನು ಕಾಣಬಹುದಾಗಿದೆ.

ಕರ್ನಾಟಕ ಸೆಟ್ಲಿಮೆಂಟಿನಲ್ಲಿಯು ಚಪ್ಪರಬಂದ ಸಮುದಾಯದಲ್ಲಿ ೦-೧೭ರ ವಯೋಮಾನ ದವರು ಒಟ್ಟು ಶೇ. ೪೩.೧೨ ರಷ್ಟಿದ್ದಾರೆ. ಇದರಲ್ಲಿ ಪುರುಷರು ಶೇ.೪೫.೦೧ ಹಾಗೂ ಮಹಿಳೆಯರು ಶೇ. ೪೦.೯೨ ರಷ್ಟಿದ್ದಾರೆ. ಇವರನ್ನು ವಯೋಮಿತಿ ತಲುಪಿಲ್ಲದಿರುವುದರಿಂದ ಮತದಾನ ನೀಡಲು ಅರ್ಹರಲ್ಲವೆಂದು ಪರಿಗಣಿಸಲಾಗಿದೆ. ಇದರಾಚೆಗೆ ಶೇ. ೫೬.೮೭ ಜನ ಮತದಾನ ಮಾಡಲು ಅರ್ಹರಿದ್ದಾರೆ. ಆದರೆ ಇದರಲ್ಲಿ ಮತದಾರರ ಪಟ್ಟಿಯಲ್ಲಿ ಇರುವವರು ಕೇವಲ ಒಟ್ಟು ಪ್ರಮಾಣ ಶೇ.೫೮.೮೬ ರಷ್ಟು ಮಾತ್ರ, ಅದರಲ್ಲೂ ಪುರುಷರು ಶೇ. ೫೭.೩೧ ಹಾಗೂ ಮಹಿಳೆಯರು ಶೇ. ೬೦.೫೩ ರಷ್ಟು ಇದ್ದಾರೆ.

ಕೋಷ್ಟಕ ೭.೫: ಸಮೀಕ್ಷೆಗೊಳಪಟ್ಟ ಚಪ್ಪರಬಂದರ ಮತದಾನ ಸೌಲಭ್ಯ ಪಟ್ಟಿ

	ಪುರುಷ	ಸ್ತ್ರೀ	ಒಟ್ಟು
ಒಟ್ಟು ಜನಸಂಖ್ಯೆ	೮೮೨	೭೫೫	೧೬೩೭
೦–೧೭ ವಯಸ್ಸಿನ ಗುಂಪು	೩೯೭	೩೦೯	೭೦೬
ಮತದಾನ ಮಾಡಲು ಅರ್ಹರ ಗುಂಪು	೪೮೫	೪೪೬	೯೩೧
ಮತದಾರರ ಗುಂಪು	೨೭೮	೨೭೦	೫೪೮
ಮತದಾರ ಪಟ್ಟಿಗೆ ಸೇರದ ಗುಂಪು	೫೨೯	೪೦೮	೯೩೭

ಒಟ್ಟಾರೆಯಾಗಿ ಮತದಾರರ ಪಟ್ಟಿಯಿಂದ ಹೊರಗುಳಿದವರ ಒಟ್ಟು ಪ್ರಮಾಣ ಶೇ. ೪೧.೧೪ ರಷ್ಟಿದೆ. ಇದರಲ್ಲಿ ಪುರುಷರು ಶೇ. ೪೨.೬೮ ಹಾಗೂ ಮಹಿಳೆಯರು ಶೇ. ೩೯.೪೭ ರಷ್ಟಿದ್ದಾರೆ. ಒಟ್ಟಾರೆಯಾಗಿ ಸೆಟ್ಲಿಮೆಂಟಿನ ಚಪ್ಪರಬಂದರಲ್ಲಿ ಸುಮಾರು ಶೇ ೫೮.೮೬ರಷ್ಟು ಮತದಾರರ ಪ್ರಮಾಣ ಕಂಡುಬರುತ್ತದೆ ಆದರೆ ಮತದಾರರ ಪಟ್ಟಿಯಲ್ಲಿರುವ ಪುರುಷರಿಗಿಂತ ಮಹಿಳೆಯರ ಪ್ರಮಾಣ ಹೆಚ್ಚು ಇರುವುದನ್ನು ಕಾಣಬಹುದಾಗಿದೆ.

ಕಂಜರಭಾಟ

ಕಂಜರಬಾಟರ ಸಮುದಾಯದಲ್ಲಿ ೦-೧೭ರ ವಯೋಮಾನದವರು ಒಟ್ಟು ಶೇ.೪೬.೮೬ ರಷ್ಟಿದ್ದಾರೆ. ಇದರಲ್ಲಿ ಪುರುಷರು ಶೇ.೪೮.೬೪ ಹಾಗೂ ಮಹಿಳೆಯರು ಶೇ.೪೪.೮೧ ರಷ್ಟಿದ್ದಾರೆ. ಇವರನ್ನು ವಯೋಮಿತಿ ತಲುಪಿಲ್ಲದಿರುವುದರಿಂದ ಮತದಾನ ನೀಡಲು ಅರ್ಹರಲ್ಲವೆಂದು ಪರಿಗಣಿಸಲಾಗಿದೆ. ಇದರಾಚೆಗೆ ಶೇ.೫೩.೧೪ರಷ್ಟು ಜನ ಮತದಾನ ಮಾಡಲು ಅರ್ಹರಿದ್ದಾರೆ. ಆದರೆ ಇದರಲ್ಲಿ ಮತದಾರರ ಪಟ್ಟಿಯಲ್ಲಿ ಇರುವವರು ಕೇವಲ ಒಟ್ಟು ಪ್ರಮಾಣ ಶೇ.೩೮.೫೧ ರಷ್ಟು ಮಾತ್ರ, ಅದರಲ್ಲೂ ಪುರುಷರು ಶೇ.೪೨.೭೬ ಹಾಗೂ ಮಹಿಳೆಯರು ಶೇ.೩೪.೦೩ ರಷ್ಟು ಇದ್ದಾರೆ.

ಅಧ್ಯಾಯ ಎಂಟು

ಶೋಷಣೆಯ ವಿವಿಧ ಮುಖಗಳು ಮತ್ತು ವಿಮುಕ್ತ ಬುಡಕಟ್ಟುಗಳು

ಅಧ್ಯಾಯ ಎಂಟು

ಶೋಷಣೆಯ ವಿವಿಧ ಮುಖಗಳು ಮತ್ತು ವಿಮುಕ್ತ ಬುಡಕಟ್ಟುಗಳು

ಬ್ರಿಟೀಷ್ ಆಗಮನ ಪೂರ್ವದ ಭಾರತದ ಸಂರಚನೆ ವಿಭಿನ್ನವಾಗಿತ್ತು ಪ್ರತಿ ಹಳ್ಳಿಯೂ ತನಗೆ ಬೇಕಾದ ಒಟ್ಟಾರೆ ಉತ್ಪಾದನೆಯನ್ನು ತಾನೇ ಮಾಡಿಕೋಳ್ಳುತ್ತಿತ್ತು ಹಣದ ದಾಹ ಆ ಹಳ್ಳಿಯ ಸಮದಾಯಗಳಿಗೆ ಹೆಚ್ಚಾಗಿರಲಿಲ್ಲ. 'ಹಾಸಿಗೆ ಇದ್ದಷ್ಟು ಕಾಲು ಚಾಚು'ವ ಗುಣವನ್ನು ಪ್ರತಿಯೊಂದು ಸಮುದಾಯಗಳೂ ಅಳವಡಿಸಿಕೊಂಡಿದ್ದವು. ಆ ಕಾಲಕ್ಕೆ ನಿರುದ್ಯೋಗದ ಪ್ರಮಾಣ ಅತ್ಯಲ್ಪವಾಗಿತ್ತು. ಎಲ್ಲರೂ ಯಾವುದಾದರು ಒಂದು ಕೆಲಸದಲ್ಲಿ ನಿರತರಾಗಿರುತ್ತಿದ್ದರು. ವೃತ್ತಿಗಳನ್ನು ಆಧರಿಸಿ ಸೃಷ್ಟಿಗೊಂಡ ಜಾತಿಗಳಲ್ಲಿ ಶ್ರೇಣೀಕರಣವಿದ್ದಿತಾದರೂ ಜಾತಿಯ ಭೂತ ಈಗಿನಷ್ಟು ಆಗ ಕಾಡುತ್ತಿರಲಿಲ್ಲ. ಪ್ರತಿಯೊಂದು ಹಳ್ಳಿ ಒಂದು ಕುಟುಂಬದಂತೆ ಇದ್ದಿತು. ಅಂದೂ ಸಹ ಅಸಮತೋಲನ ಸಮಾಜಿಕ ಪದ್ಧತಿ ಇದ್ದಿತಾದರೂ ಅದು ಅಷ್ಟು ಭೀಕರವಾಗಿ ಮಾತ್ರ ಇರಲಿಲ್ಲವೆನಿಸುತ್ತದೆ.

ಅಲೆಮಾರಿ ಮತ್ತು ಬುಡಕಟ್ಟು ಸಮುದಾಯಗಳು ಕಾಡುಮೇಡುಗಳಲ್ಲಿ ಯಾರ ಹಂಗೂ ಇಲ್ಲದೆ ತಮ್ಮ ಮಿತಿಗಳೊಳಗೆ ತಮ್ಮ ತಮ್ಮ ಪಂಗಡ ಕುಟುಂಬಗಳೊಂದಿಗೆ ತುಂಬಾ ಸ್ವಾಭಿಮಾನದ ಜೀವನ ನಡೆಸುತ್ತಿದ್ದವು. ತಮ್ಮ ಬದುಕಿಗಾಗಿ ಕಾಡನ್ನು ಆಶ್ರಯಿಸಿ, ಅತ್ತ ಕಾಡಿಗೆ ಹಾನಿಯಾಗದಂತೆ, ನಾಡಿಗೂ ಹಾನಿಯಾಗದಂತೆ ಬದುಕುವ ಶೈಲಿ ಅವರದಾಗಿತ್ತು. ಅಲೆಮಾರಿ ಮತ್ತು ಬುಡಕಟ್ಟುಗಳು ತಮ್ಮ ಬದುಕಿಗಾಗಿ ವ್ಯಾಪಾರ, ಕುಶಲಕರ್ಮಿ ಕೆಲಸಗಳನ್ನು ಮಾಡುತ್ತಿದ್ದರು.

ಬ್ರಿಟೀಷರು ವ್ಯಾಪಾರಕ್ಕೆಂದು ಭಾರತಕ್ಕೆ ಬಂದ ತರುವಾಯ ಅವರೊಂದಿಗೆ ವಿವಿಧ ಉದ್ದಿಮೆಗಳು ಕಾಲಿರಿಸಿದವು. ಉದ್ದಿಮೆಗಳಿಗೆ ಮತ್ತು ಸಾಗಾಟಕ್ಕೆ ಸಹಾಯಕವಾಗಲೆಂದು ರೈಲು, ರಸ್ತೆಗಳು ಬಂದವು. ತರುವಾಯ ಅವರ ಆಡಳಿತದ ಬಿಗಿ ಹೆಚ್ಚತೊಡಗಿತು.

ವೆರಿಯರ್ ಎಲ್ವಿನ್ ಒಮ್ಮೆ ಮಧ್ಯ ಪ್ರದೇಶದ ಗೊಂಡರ ಕಲಾವಿದರೂದಿಗೆ ಮಾತನಾಡುತ್ತಿರುತ್ತಾರೆ. ಆ ಸಮುದಾಯದ ಕಲಾವಿದನೊಬ್ಬ ಹೀಗೆ ಹೇಳುತ್ತಾನೆ, "ಮೊದಲಿಗೆ ನಾವೆಲ್ಲಾ ನಮ್ಮ ದೇವರ ಕೃಪೆಯಿಂದ ತುಂಬಾ ಸಿರಿವಂತರಾಗಿದ್ದೇವು. ಆರೋಗ್ಯವಾಗಿದ್ದೇವು. ಅಷ್ಟರಲ್ಲಿ ರೈಲು ಬಂತು, ಅದರ ಚಂದ ನೋಡಿ ನಮ್ಮ ದೇವರು ಕೂಡಾ ಅದನ್ನು ಹತ್ತಿ ಪಟ್ಟಣಕ್ಕೆ ಹೋದ. ಆದುದರಿಂದ ಈಗ ನಾವೆಲ್ಲಾ ಬಡವರಾಗಿದ್ದೇವೆ. ಪಟ್ಟಣದವರು ಸಿರಿವಂತರಾಗಿದ್ದಾರೆ." (ಪ್ರಜಾವಾಣಿ:೧೪.೧೧.೧೯೯೯) ಗೊಂಡ ಕಲಾವಿದನ ಮಾತು ಅತೀ ಮುಗ್ಧತೆಯಿಂದ ಕೂಡಿದ ಮಾತಾದರೂ ಅದರ ಹಿಂದೆ ಒಂದು ಸತ್ಯ ಗೋಚರಿಸುತ್ತದೆ. ಆಧುನಿಕತೆಯೆಂಬುವುದು ಗೋಂಡರಂಥ ಎಷ್ಟೋ ಬುಡಕಟ್ಟು ಸಮುದಾಯಗಳನ್ನು ಬುಡಮೇಲು ಮಾಡಿದೆ. ಇದೇ ಮಾತನ್ನು ಪುಷ್ಠಿಗೊಳಿಸುವಂತಹ ಸನ್ನಿವೇಶವೊಂದನ್ನು ಇಂಟರ್ ನ್ಯಾಷನಲ್ ಹೆರಾಲ್ಡ್ ಟ್ರಬ್ಯೂನ್ ಪತ್ರಿಕೆಯ ವರದಿಗಾರರಾದ ಲಾರಿ ರೋಥರವರು ಕೋಡುತ್ತಾರೆ. ಬ್ರಿಜಿಲ್‌ನ ಅಮೇಜಾನ್ ಕೊಳ್ಳದಲ್ಲಾದ ಬದಲಾವಣೆಗಳನ್ನು ನೊಡುವ ಮತ್ತು ವರದಿ ಮಾಡುವ ಉದ್ದೇಶದಿಂದ ಅಮೇಜಾನ್ ಕಾಡಿಗೆ ತೆರಳಿದ ರೋಥರ್‌ರವರ ಮಾತುಗಳಲ್ಲಿಯೇ ಇದನ್ನು ನೋಡಿ (ಅಮೇಜಾನ್) "ಆ ಪರಿಸರ ಇನ್ನು ಉಳಿದು ಕೊಂಡುದಿಯೇ ಬದಲಾಗಿದಿಯೇ ಎಂಬ ಆಸಕ್ತಿ ನನ್ನದಾಗಿತ್ತು ಆ ಪ್ರದೇಶದಲ್ಲಿ ಈಗ ಹೆದ್ದಾರಿ ನಿರ್ಮಾಣವಾಗಿತ್ತು. ಬಡತನದಿಂದ ರೈತಾಪಿ ಜನರು ಅದರ ಎಡ ಬಲಕ್ಕೆ ತುಂಬಿಕೊಡಿದ್ದರು. ಮಿಲ್ಟ್ರಿ ಪ್ರಭುತ್ವ ಅಮೆಜಾನ್ ಕೋಳ್ಳದಲ್ಲಿ ಈ ರೈತಾಪಿ ಜನರು ಬಂದು ನೆಲೆಸಲು ಪ್ರೇರೇಪಣೆ ನೀಡಿತು. ಆದರೆ ಹೆದ್ದಾರಿಯನ್ನು ಬಿಟ್ಟು ಒಳಗೆ ಸಾಗಿದಾಗ ಖಿನ್ನತೆ ಮತ್ತು ದಿಗ್ಭ್ರಾಂತ ಸ್ಥಿತಿಯಲ್ಲಿ ಕಂಗಾಲಾಗಿ ಕುಳಿತ ನಂಭಿಕಸ್ಥ ಮೂಲವಾಸಿ ಬುಡಕಟ್ಟು ಜನರನ್ನು ಕಾಣಬಹುದಾಗಿತು"(ಲಾರಿ ರೋಥರ್:ಪ್ರಜಾವಾಣಿ:ದಿನಾಂಕ ೧೬ ನವೆಂಬರ ೨೦೦೯)

ವೆರಿಯರ್ ಎಲ್ವಿನ್ ಮತ್ತು ಲಾರಿ ರೋಥರ್ ಇಬ್ಬರು ತಿಳಿಸುವ ಎರಡು ದೃಷ್ಟಾಂತ ಗಳಲ್ಲಿಯೂ ಸಾಮ್ಯತೆ ಇದೆ. ಬ್ರಿಟೀಷ್ ಪ್ರಭುತ್ವ ತನ್ನ ಅತಿಯಾದ ಆಸೆಯಿಂದಾಗಿ ಜನ ಸಾಮಾನ್ಯರ ಬದುಕಿನೊಂದಿಗೆ ಆಟವಾಡಿತು. ಬ್ರಿಟೀಷರಿಗೆ ತಾವು ಎಲ್ಲಾ ತಿಳಿದವರು ತಮ್ಮನ್ನು ಮೀರಿಸುವವರು ಯಾರು ಇಲ್ಲ ಎಂಬ ದುರಹಂಕಾರ ಇತ್ತು. ಹೀಗಾಗಿ ಅವರ ಕಣ್ಣಿಗೆ ಜನ ಸಾಮಾನ್ಯರ, ಅಲೆಮಾರಿ ಬುಡಕಟ್ಟುಗಳ ಜೀವನ ರೀತಿ ಅರ್ಥವಾಗಲೇ ಇಲ್ಲ. ನಿಜವಾದ ಶೋಷಣೆ ಎಂಬುದು ಬ್ರಿಟೀಷರಿಂದಲೇ ಪ್ರಾರಂಭವಾಯಿತು. ಬ್ರಿಟೀಷ್‌ರಿಗಿಂತ ಪೂರ್ವದಲ್ಲಿ ಶೋಷಣೆ ಇರಲಿಲ್ಲಿ ಎಂದಲ್ಲ. ಇಲ್ಲಿಯ ಪುರೋಹಿತಶಾಹಿ, ಜಮೀನ್ದಾರಿ ವ್ಯವಸ್ಥೆ, ರಾಜಶಾಹಿ ವ್ಯವಸ್ಥೆಗಳು ಶ್ರೀಸಾಮಾನ್ಯ ಜನರನ್ನು ಶೋಷಣೆ ಮಾಡುತ್ತಿದ್ದವು. ಆದರೂ ಅವರ ಮೂಲ ಬದುಕಿನ ಬುಡಕ್ಕೆ ಎಂದು ಕೈ ಹಾಕಿರಲಿಲ್ಲ. ತಮ್ಮ ಮಿತಿಗಳಿಗೆ ತಕ್ಕಂತೆ ಜನ ಸಾಮಾನ್ಯರನ್ನು ಉಪಯೋಗಿಸಿಕೋಳ್ಳಲು ಮಾತ್ರ ಶೋಷಣೆಯ ಅಸ್ತ್ರವನ್ನು ಅವು ಬಳಸುತ್ತಿದ್ದವು.

ಬ್ರಿಟೀಷರು ಬಂದ ತರುವಾಯ ಭಾರತದಲ್ಲಿ ಶೋಷಣೆ ಮಾಡುವವರನ್ನು ಮತ್ತು ಶೋಷಣೆಗೆ ಒಳಗಾಗಿದ್ದವರನ್ನು ಹಾಗೂ ರಾಜಶಾಹಿ ವ್ಯವಸ್ಥೆಯನ್ನೊಳಗೊಂಡ ಎಲ್ಲವನ್ನು ಏಕ ಕಾಲಕ್ಕೆ ಗುಡಿಸಿ ಹಾಕಿದರು. ಅವರ ದೃಷ್ಟಿಯಲ್ಲಿ ಇಡೀ ಭಾರತೀಯರೇ ಅನಾಗರೀಕರಾಗಿ ಕಾಣತೊಡಗಿದರು.

ಇಲ್ಲಿಯ ಜನರ ಜೀವನ ಕ್ರಮ, ಮನೋಭಿಲಾಷೆ ಯಾವುದನ್ನೂ ಅರ್ಥ ಮಾಡಿಕೊಳ್ಳುವ ಸ್ಥಿತಿಯಲ್ಲಿ ಅವರಿರಲ್ಲಿಲ್ಲ. ತಮ್ಮ ಅವಶ್ಯಕತೆಗಳಗೆ ತಕ್ಕಂತೆ ಇಲ್ಲಿಯ ಜನರನ್ನು ಬಳಕೆ ಮಾಡಿಕೊಳ್ಳ ತೊಡಗಿದರು. ಅದರಲ್ಲೂ ಅಲೆಮಾರಿ ಮತ್ತು ಬುಡಕಟ್ಟು ಸಮುದಾಯಗಳನ್ನು ಅವರ ಅವಶ್ಯ ಕತೆಗೆ ತಕ್ಕಂತೆ ದುಡಿಸಿಕೊಳ್ಳಲು ಮತ್ತು ಅವರನ್ನು ಸುಲಭವಾಗಿ ನಿಯಂತ್ರಣದಲ್ಲಿರಿಸಲು ಹೊಸ ಹೊಸ ಕಾಯ್ದೆಗಳನ್ನು ರೂಪಿಸಿದರು. ಬ್ರಿಟೀಷರು ಮಾಡಿದ ಮೊಟ್ಟ ಮೊದಲ ಕೆಲಸವೆಂದರೆ ಅಲೆಮಾರಿ ಬುಡಕಟ್ಟುಗಳ ವೃತ್ತಿಗಳನ್ನು ಕಸಿದುಕೊಂಡು ಅವರನ್ನು ನಿರ್ಗತಿಕನಾಗಿಸಿದ್ದಲ್ಲದೆ ತರುವಾಯ ಅವರಿಗೆ ಅಪರಾಧಿಗಳ ಪಟ್ಟ ಕಟ್ಟಿ ಅವರನ್ನು ದನಗಳಂತೆ ಒಂದೇ ಕಡೆ ಕೂಡಿ ಹಾಕಿ ಅವರಿಂದ ತಮ್ಮ ಕೆಲಸಗಳನ್ನು ಪೂರೈಸಿಕೊಳ್ಳತೂಡಿಗಿದರು. ಪದೇ ಪದೇ ತಾವು ಅವರನ್ನು ನಾಗರೀಕರಾಗಿಸುವ ಕ್ರಿಯೆಯಲ್ಲಿ ತೊಡಗಿದ್ದೇವೆ ಮತ್ತು ಅವರಿಗೆ ಶಿಕ್ಷಣ ನೀಡುತ್ತೇವೆ, ಮುಖ್ಯವಾಹಿನಿಗೆ ತರುತ್ತೇವೆ ಎಂಬ ಸೋಗನ್ನು ಬ್ರಿಟೀಷರು ಹಾಕುತ್ತಾ ಹೋದರು.

ಹೀಗೆ ಬ್ರಿಟೀಷ್‌ರಿಂದ ಶೋಷಣೆಗೆ ಒಳಗಾದ ಬುಡಕಟ್ಟುಗಳು ಬ್ರಿಟೀಷರ ತರುವಾಯವೂ ಶೋಷಣೆಗೆ ಒಳಗಾಗುತ್ತಾ ಸಾಗಿದವು. ಸ್ವಾತಂತ್ರ್ಯಾನಂತರ ಭಾರತದ ಅಧಿಕಾರಿಗಳು, ಮಧ್ಯಮ ವರ್ಗದವರು, ಶ್ರೀಮಂತರು ಮತ್ತು ಮೇಲ್ಜಾತಿಗಳು ಹೆಚ್ಚೂ ಕಡಿಮೆ ಬ್ರಿಟೀಷರ ಶೈಲಿಯನ್ನೇ ಅನುಕರಿಸತೊಡಗಿದವು. ಇದರಿಂದಾಗಿ ಅಪರಾಧಿಗಳೆಂಬ ಪಟ್ಟವನ್ನು ಅಂಟಿಸಿಕೊಂಡ ಸಮುದಾಯಗಳು ಹೆಚ್ಚು ಹೆಚ್ಚು ಖಿನ್ನತೆಯನ್ನು, ಕೀಳರಿಮೆಯನ್ನು ಅನುಭವಿಸುವಂತಾಯಿತು.

೧೯ನೇ ಶತಮಾನದ ಮಧ್ಯ ಕಾಲಿನದ ಹೊತ್ತಿಗೆ ಬ್ರಿಟೀಷ್ ಆಡಳಿತವು ಇಂಡಿಯಾದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಬದುಕಿನ ಮೇಲೆ ಹಿಡಿತ ಸಾಧಿಸಲು ಪ್ರಾರಂಭಿಸಿತು. ಬ್ರಿಟೀಷರು ಕಂದಾಯ ವ್ಯವಸ್ಥೆಯನ್ನು ರೂಪಿಸಲು, ಅದನ್ನು ಕಾರ್ಯಬದ್ಧಗೊಳಿಸಲು ಮತ್ತು ಕೃಷಿ ಭೂಮಿಯನ್ನು ವಶಪಡಿಸಿಕೊಳ್ಳುವ ವಿಧಾನಗಳನ್ನು ಕಂಡುಕೊಳ್ಳಲು ಭಾರತದ ಹಳ್ಳಿಗಳ ಸಾಮಾಜಿಕತೆಯನ್ನು ಅಧ್ಯಯನ ಮಾಡಲು ತಮ್ಮ ಆಡಳಿತದಲ್ಲಿನ ಮಿಲಿಟರಿಯೇತರ ಅಧಿಕಾರಿಗಳನ್ನು ಹಳ್ಳಿಗಳಿಗೆ ಕಳುಹಿಸಿತು. ಭೂ ಒಡೆತನದ ನಿಯಂತ್ರಣ ಮತ್ತು ಭೂಕಂದಾಯವನ್ನು ನಿಗದಿಗೊಳಿಸುವ ಉದ್ದೇಶಗಳು ಈ ಕಾರ್ಯ ತಂತ್ರದ ಹಿಂದೆ ಕೆಲಸ ಮಾಡಿದ್ದವು. (ಉದೃತ ಪ್ರಭಾಕರ್ ಎ.ಎಸ್:೨೦೦೭,ಪು.೭೬)

ಹೀಗೆ ತಂತ್ರ ಕುತಂತ್ರಗಳಿಂದ ಭಾರತದ ಸಮಾಜವನ್ನು ಆಳಿದ ಬ್ರಿಟೀಷರು ತಮ್ಮಲ್ಲಿದ್ದ ಒಳ್ಳೆಯತನಗಳಿಗಿಂತ ಅನಿಷ್ಟತನಗಳನ್ನೇ ಭಾರತೀಯರಿಗೆ ಹೆಚ್ಚಾಗಿ ಬಿಟ್ಟು ಹೋದರು.

ಒಂದರ್ಥದಲ್ಲಿ ಬ್ರಿಟೀಷ್ ಅಧಿಕಾರಿಗಳು ಭಾರತೀಯ ಮೇಲ್ಮಧ್ಯಮ ಮತ್ತು ಇಡೀ ವ್ಯವಸ್ಥೆಗೆ ರೋಲ್ ಮಾಡೆಲ್‌ಗಳಾದರು. ಇಂದಿಗೂ ನೀವು ಯಾವುದೇ ಸೆಟ್ಲಮೆಂಟಿನ ಹಿರಿ ತಲೆಮಾರಿನ ಜನರನ್ನು ಪ್ರಶ್ನಿಸಿದರೆ, ಅವರ ಉತ್ತರದಲ್ಲಿ ಬ್ರಿಟೀಷ್ ಅಧಿಕಾರಿಗಳ ಆರಾಧನೆಯೇ ಹೆಚ್ಚಾಗಿ ವಿಜೃಂಭಿಸುತ್ತದೆ. ಅನಾಗರೀಕರಾಗಿದ್ದ ತಮ್ಮನ್ನು ನಾಗರೀಕರನ್ನಾಗಿ ಮಾಡಲು ಬ್ರಿಟಿಷ್ ಅಧಿಕಾರಿಗಳು ಎಷ್ಟೆಲ್ಲಾ ಪ್ರಯತ್ನಿಸಿದರು ಎಂಬುದರ ವರ್ಣನೆಯೇ ಅವರ ಮಾತುಗಳಲ್ಲಿ ಹೆಚ್ಚಾಗಿ ಬಿಂಬಿತವಾಗುತ್ತದೆ. ಅವರಿಗೆ ತಮ್ಮನ್ನು

ಒತ್ತೆಯಾಳುಗಳಂತೆ ಬ್ರಿಟೀಷರು ನಡೆಸಿಕೊಳ್ಳುತ್ತಿದ್ದರು. ಮಾಡದ ತಪ್ಪಿಗೆ ತಾವು ಶಿಕ್ಷೆ ಅನುಭವಿಸುವಂತಾಯಿತು. ತಮ್ಮ ಮೂಲ ಕಸುಬುಗಳನ್ನು ಬ್ರಿಟೀಷರು ಕಿತ್ತುಕೊಂಡರು. ತಮ್ಮನ್ನು ಸುಳ್ಳೇ ಅಪರಾಧಿಗಳೆಂದು ಗುರುತಿಸಿ ಅವಮಾನಿಸಿದರು ಎಂಬ ಒಂದೇ ಒಂದು ಚಕಾರಮೂ ಆ ಜನರಿಂದ ಬರುವುದಿಲ್ಲ. ಇಂದಿಗೂ ಅಷ್ಟು ಮುಗ್ಧತೆ ಅವರಲ್ಲಿದೆ.

ಪ್ರಾಯಶಃ ಅವರ ಮೇಲಿನ ಮಾತುಗಳಿಗೆ ಇನ್ನೊಂದು ಕಾರಣಮೂ ಇದೆ. ಬ್ರಿಟೀಷರು ಕೊನೆಗೆ ಅಪರಾಧಿಗಳೆಂಬ ಹಣೆ ಪಟ್ಟಿಯನ್ನು ಹಚ್ಚಿಯಾದರೂ ತಮಗೆ ನೆಲೆಯನ್ನು ಕೊಟ್ಟಿದ್ದರು. ಕೆಲಸ, ಆಹಾರವನ್ನು ಕೊಟ್ಟಿದ್ದರು. ಕೊನೆಗೆ ತಮ್ಮ ಆರೋಗ್ಯವನ್ನು ನೋಡಿಕೊಳ್ಳಲೆಂದು ಆಸ್ಪತ್ರೆಗಳನ್ನು ತೆರೆದಿದ್ದರು. ತಮಗೆ ಕೂಲಿ ಕೆಲಸವಾದರೂ ಚಿಂತೆಯಿಲ್ಲ. ಆ ಕೆಲಸಗಳ ಕೌಶಲ್ಯತೆಯನ್ನು ಕಲಿಸಲು ತರಬೇತಿ ಕೇಂದ್ರಗಳನ್ನು ತೆರೆದಿದ್ದರು. ತಮ್ಮ ಮಕ್ಕಳಿಗೆ ಆಧುನಿಕ ಶಿಕ್ಷಣ ನೀಡುವ ಶಾಲೆಗಳನ್ನು ತೆರೆದಿದ್ದರು. ಆದರೆ ಸ್ವಾತಂತ್ರ್ಯಾನಂತರದ ಸರ್ಕಾರಗಳು ತಮ್ಮ ಮೂಲಭೂತ ಸೌಲಭ್ಯಗಳಲ್ಲಿ ಯಾವುದನ್ನು ಪೂರೈಸಿವೆ ಎಂಬ ಪ್ರಶ್ನೆಯು ಸಹ ಅವರನ್ನು ಕಾಡುತ್ತಿರಬೇಕು. ೧೯೫೨ರಲ್ಲಿ ಅಂದಿನ ಪ್ರಧಾನಿ ಜವಹರಲಾಲ ನೆಹರೂ ಅವರು ಅಪರಾಧಿ ಬುಡಕಟ್ಟುಗಳನ್ನು ವಿಮುಕ್ತಗೊಳಿಸಿ ಅದಕ್ಕೆ ಸಂಬಂಧಿಸಿದ ಆದೇಶವೊಂದನ್ನು ಮಾಡಿದರೆಂಬುದು ಸರಿ. ಆದರೆ ಅತಂತ್ರ ಸ್ಥಿತಿಯಲ್ಲಿದ್ದ ಈ ಬುಡಕಟ್ಟುಗಳಿಗೆ ಮುಂದಿನ ಬದುಕಿಗೆ ದಾರಿ ತೋರಿಸುವ ನಿಟ್ಟಿನಲ್ಲಿ ಅವರು ಯೋಚಿಸಲೇ ಇಲ್ಲ. ಸ್ವಾತಂತ್ರ್ಯ ಭಾರತದ ರಾಜಕಾರಣಿಗಳು ಮತ್ತು ಅಧಿಕಾರಿಗಳು ಹೆಚ್ಚು ಹೆಚ್ಚು ಸ್ವಜನ ಪಕ್ಷಪಾತಿಗಳಾದರು ಮತ್ತು ಹೆಚ್ಚು ಭ್ರಷ್ಟರಾದರು. ಅವರಿಗೆ ತನ್ನ ದೇಶದ ಒಟ್ಟಾರೆ ಸುವ್ಯವಸ್ಥೆಗಿಂತ ತಮ್ಮ ವೈಯಕ್ತಿಕ ಬದುಕು ಮತ್ತು ಅಧಿಕಾರಿಗಳೇ ಹೆಚ್ಚಾಗ ತೊಡಗಿದವು. ಹೀಗಾಗಿ ಎಲ್ಲಾ ತಳ ಸಮುದಾಯಗಳನ್ನು ನಿರ್ಲಕ್ಷಿಸುವುದನ್ನು ಅಧಿಕಾರಿಗಳು ಮತ್ತು ರಾಜಕಾರಣಿಗಳು ಮೈಗೂಡಿಸಿ ಕೊಳ್ಳತೊಡಗಿದರು. ಕಾನೂನಿನಲ್ಲಿ ಈ ಬುಡಕಟ್ಟುಗಳು ಅಪರಾಧಿ ಸ್ಥಾನದಿಂದ ವಿಮುಕ್ತಗೊಂಡವಾದರೂ ಜನರ ಮನಸ್ಸುಗಳಲ್ಲಿ ಅವರು ಇಂದಿಗೂ ಅಪರಾಧಿಗಳಾಗಿಯೇ ಉಳಿದರು.

ಮುಖ್ಯವಾಗಿ ಸೆಟ್ಲಮೆಂಟಿನಲ್ಲಿರುವ ವಿಮುಕ್ತ ಬುಡಕಟ್ಟುಗಳು ವಿವಿಧ ಹಂತಗಳಲ್ಲಿ ವಿವಿಧ ಜನರಿಂದ ಅವಮಾನಕ್ಕೆ ಮತ್ತು ಶೋಷಣೆಗೆ ಒಳಗಾಗುತ್ತಾ ಸಾಗಿದವು.

೧. ರಾಜಕಾರಣಿ ಮತ್ತು ಇತರ ಅಧಿಕಾರಿ ವರ್ಗ

೨. ಪೋಲೀಸ್ ಇಲಾಖೆ

೩. ಸೆಟ್ಲಮೆಂಟಿನಿಂದ ಹೊರಗಿರುವ ಮೇಲ್ಮಧ್ಯಮ ಮತ್ತು ಮೇಲ್ಜಾತಿಗಳಿಂದ

೪. ಸೆಟ್ಲಮೆಂಟಿನಿಂದ ಹೊರಗಿರುವ ತಮ್ಮದೇ ಸಮುದಾಯಗಳಿಂದ ಇವರು ಶೋಷಣೆಗೆ ಒಳಗಾದವು.

ಭಾರತದ ಅಧಿಕಾರಸ್ಥ ರಾಜಕಾರಣಿಗಳು ಮತ್ತು ಅಧಿಕಾರಿಗಳು ವಿಮುಕ್ತ ಬುಡಕಟ್ಟುಗಳಿಗೆ ಮೂಲಭೂತ ಸೌಲಭ್ಯವನ್ನು ಒದಗಿಸುವಲ್ಲಿ ಸೋತವಷ್ಟೇ ಅಲ್ಲ, ಅವರ ಏಳ್ಗೆಗೆ ಅವಶ್ಯವಾದ ಮೀಸಲಾತಿ ಸೌಲಭ್ಯಗಳನ್ನು ಎಷ್ಟೋ ವಿಮುಕ್ತ ಬುಡಕಟ್ಟುಗಳಿಗೆ ಒದಗಿಸಲೇ ಇಲ್ಲ.

ಕೇವಲ ಜಾತಿ ಬಲ ಮತ್ತು ಸಂಖ್ಯಾ ಬಲದ ಮೇಲೆ ಚುನಾವಣೆಗಳನ್ನು ನಡೆಸುವ ಮತ್ತು ಗೆಲ್ಲುವ ಪರಿಪಾಠವನ್ನಿರಿಸಿಕೊಂಡರು. ರಾಜಕಾರಣಿಗಳು ಹೆಚ್ಚು ಜನಸಂಖ್ಯೆಯನ್ನು ಯಾವ ಸಮುದಾಯ ಹೊಂದಿದೆಯೋ ಅಂತಹ ಸಮುದಾಯಗಳು ಮತದಾರರ ಖಜಾನೆಗಳೆಂದು ಭಾವಿಸಿದರು. ಮತ್ತು ಅಂತಹ ಸಮುದಾಯಗಳಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಮೀಸಲಾತಿ ಸೌಲಭ್ಯವನ್ನು ದೊರಕಿಸುವಂತಹ ಕಾರ್ಯಗಳನ್ನು ಮಾಡಿದರೇ ಹೊರತು ನಿಜವಾಗಿಯೂ ಯಾರಿಗೆ ಮೀಸಲಾತಿ ಸೌಲಭ್ಯ ಅವಶ್ಯಕವಾಗಿದೆ ಎಂಬುದರ ಕಡೆಗೆ ಲಕ್ಷ್ಯವಹಿಸಿದೇ ಹೋದವು.

ಹೀಗಾಗಿ ಸೆಟ್ಲಮೆಂಟ್‌ಗಳಲ್ಲಿ ಇಂದಿಗೂ ಅವಮಾನಿತ ಜೀವನ ಸಾಗಿಸುತ್ತಿರುವ ಚಪ್ಪರಬಂದ, ಕಂಜರಭಾಟ ಮುಂತಾದ ಸಮುದಾಯಗಳು ಮೀಸಲಾತಿ ಸೌಲಭ್ಯದಿಂದ ಹೊರಗುಳಿಯುವಂತಾಯಿತು. ಇಲ್ಲಿ ಇಂತಹ ಘಟನೆಗಳನ್ನು ಸಹ ಶೋಷಣೆಯಂದೇ ಪರಿಗಣಿಸಬೇಕಾಗುತ್ತದೆ.

ಬಂಡವಾಳ ಶಾಹಿಗಳು ಸೆಟ್ಲಮೆಂಟಿನ ಕೊರಮ ಮತ್ತು ಪಾರ್ಧಿ ಮತ್ತು ಇತರ ಎಲ್ಲಾ ಸೆಟ್ಲಮೆಂಟಿನ ಸಮುದಾಯಗಳಿಂದ ಆಕ್ರಮ ಸರಾಯಿ ತಯಾರಿಸಲು ಪ್ರಚೋದನೆ ನೀಡುತ್ತಿದ್ದರು. ಮತ್ತು ಅವರಿಂದ ಕಡಿಮೆ ಬೆಲೆಗೆ ಸರಾಯಿಯನ್ನು ಕೊಂಡು ಹೆಚ್ಚಿನ ಬೆಲೆಗೆ ಬೇರೆ ಕಡೆ ವ್ಯಾಪರ ಮಾಡುತ್ತಿದ್ದರು. ಕೇವಲ ತಮ್ಮ ವೈಯಕ್ತಿಕ ಉಪಯೋಗಕ್ಕೆಂದೇ ತಯಾರಿಸಿಕೊಳ್ಳುತ್ತಿದ್ದ ಸರಾಯಿಯನ್ನು ಸೆಟ್ಲಮೆಂಟಿನ ಜನರಿಂದ ಪಡೆದು ವ್ಯಾಪಾರೀಕರಣಗೊಳಿಸುವ ಮತ್ತು ಅವರಿಂದ ತಾವು ಹೆಚ್ಚು ಲಾಭಗಳಿಸುವ ತಂತ್ರವನ್ನು ಪೋಲೀಸ್ ಇಲಾಖೆ ಮತ್ತು ಸಂಬಂಧಿಸಿದ ಇತರ ಇಲಾಖೆಗಳೂ ಕೈ ಜೋಡಿಸುತ್ತಿದ್ದವು.

ಕೇವಲ ತಮ್ಮ ಹೊಟ್ಟೆಪಾಡಿಗಾಗಿ ಸರಾಯಿ ತಯಾರಿಸಿ ಮಾರಾಟ ಮಾಡುವ ಈ ಸಮುದಾಯಗಳಿಂದ ಆಕ್ರಮ ತಯಾರಿಕೆಯ ಪಟ್ಟ ಕಟ್ಟಿ ಅದನ್ನು ಸಹ ಇಲ್ಲವಾಗಿಸುವಲ್ಲಿ ಬಂಡವಾಳ ಶಾಹಿ ಮದ್ಯ ತಯಾರಿಕಾ ಉದ್ಯಮಿಗಳು ಮತ್ತು ಅಬಕಾರಿ ಇಲಾಖೆ, ಪೋಲೀಸ್ ಇಲಾಖೆಗಳು ಯಶಸ್ವಿಯಾದರು. ಇಂದಿಗೂ ಪಾರ್ಧಿಯಂತಹ ಸಮುದಾಯವು ಕೇವಲ ತನ್ನ ಉಪಯೋಗಕ್ಕೆಂದು ತಯಾರಿಸಿಕೊಳ್ಳುವ ಮದ್ಯಕ್ಕಾಗಿ ಪೋಲೀಸರಿಗೆ ಮತ್ತು ಅಬಕಾರಿ ಇಲಾಖೆಯ ಅಧಿಕಾರಿಗಳಿಗೆ ಮಾಮೂಲು ಕೊಡಬೇಕು. ಇಲ್ಲದಿದ್ದರೆ ಅದನ್ನು ನಿರ್ಬಂಧಿಸುತ್ತಾರೆ ಮತ್ತು ಅವರನ್ನು ಅಪರಾಧಿಗಳೆಂದು ಕೋರ್ಟ ಕಛೇರಿಗಳಿಗೆ ಅಲೆದಾಡಿಸುತ್ತಾರೆ. ಇಂದು ಭಟ್ಟಿ ಸರಾಯಿ ತಯಾರಿಕೆಯನ್ನು ಈ ಸಮುದಾಯಗಳು ಮಾಡುತ್ತವೆಂದೇ ಮಾಧ್ಯಮಗಳಲ್ಲಿ ವರದಿಗಳು ಬರುತ್ತವೆಯಾದರೂ ಅದು ಅಷ್ಟು ಸಮಂಜಸವಾದ ವರದಿಯಲ್ಲ. ಯಾವುದೋ ಬಂಡವಾಳಶಾಹಿಗಳು ನಿಯಂತ್ರಿಸುವ ಮತ್ತು ತಯ್ಯಾರಿಸುವ ಸರಾಯಿ ಅಡ್ಡೆಗಳಲ್ಲಿ ಸರಾಯಿ ತಯಾರಿಕಾ ತಂತ್ರಗಳನ್ನು ಬಲ್ಲ ಈ ಸಮುದಾಯದ ಜನ ಕೂಲಿಗಳಾಗಿ ಕಾರ್ಯ ನಿರ್ವಹಸುತ್ತಾವಷ್ಟೆ. ಇಲ್ಲಿಯೂ ಇವರ ಶೋಷಣೆ ನಿರಂತರವಾಗಿ ನಡೆಯುತ್ತಿರುವುದನ್ನು ಕಾಣಬಹುದು.

೧೯೫೨ರಲ್ಲಿ ಅಪರಾಧಿ ಬುಡಕಟ್ಟುಗಳನ್ನು ವಿಮುಕ್ತ ಬುಡಕಟ್ಟುಗಳೆಂದು ಘೋಷಿಸಿ ಅವರಿಗೂ ಭಾರತದ ಸಾಮಾನ್ಯ ಪ್ರಜೆಗಳಿಗಿರುವ ಎಲ್ಲಾ ಮಾನ್ಯತೆಗಳನ್ನು ನೀಡಿರುವುದಾಗಿ ತಿಳಿಸಿದರು. ಆದರೆ

ಪೋಲೀಸ್ ಇಲಾಖೆಯ ದೃಷ್ಟಿಯಲ್ಲಿ ಅವರು ಅಪರಾಧಿಗಳಾಗಿಯೇ ಉಳಿದರು. ವಿಮುಕ್ತ ಬುಡಕಟ್ಟುಗಳನ್ನು ಅಪರಾಧಿಗಳಾಗಿ ನೋಡಲು ಸುಲಭವಾಗುವಂತೆ ಹೊಸ ಕಾಯ್ದೆಗಳನ್ನು ಪೋಲೀಸ್ ಇಲಾಖೆ ಸೃಷ್ಟಿಸಿಕೊಂಡಿತು. ಇಲ್ಲಿ ಆಶ್ಚರ್ಯಕರ ವಿಚಾರವೊಂದಿದೆ. ಇಂದಿಗೂ ನಗರದ ಅಥವಾ ಸುತ್ತಮುತ್ತ ಎಲ್ಲಿಯೇ ಕಳ್ಳತನ, ದರೋಡೆಗಳಾಗಲಿ ಅಥವಾ ಹೊಡೆದಾಟಗಳಾಗಲಿ, ಮೊದಲಿಗೆ ಪೊಲೀಸ್ ಸಿಬ್ಬಂದಿ ವಿಚಾರಣೆಗೆ ಬರುವುದು ಸೆಟ್ಲಮೆಂಟ್‌ಗಳಿಗೆ. ಅಪರಾಧ ಪದ ತೊಲಗಿ ೫೭ ವರ್ಷಗಳೇ ಸಂದಿವೆ. ಅವೆಲ್ಲಮೂ ೧೯೫೨ರಲ್ಲಿ ವಿಮುಕ್ತಗೊಂಡವು. ಆದರೆ ಪೊಲೀಸರ ದೃಷ್ಟಿಯಲ್ಲಿ ಆ ಸಮುದಾಯಗಳೆಲ್ಲಾ ಇಂದಿಗೂ ಅಪರಾಧಿಗಳಿಯೇ ಉಳಿದಿದ್ದಾರೆ. ಕಾಯ್ದೆ ಕಾನೂನುಗಳನ್ನು ಕಾಯುವವರೇ, ಅವುಗಳಿಗೆ ಮರ್ಯಾದೆ ದೊರಕಿಸಿಕೊಡಬೇಕಾದವರೇ ಇಂದಿಗೂ ಈ ಬುಡಕಟ್ಟುಗಳನ್ನು ಮತ್ತು ಅವರಿಗಾಗಿ ಮಾಡಿದ ವಿಮುಕ್ತ ಬುಡಕಟ್ಟು ಕಾಯ್ದೆಯನ್ನು ನಿರ್ಲಕ್ಷಿಸುತ್ತಿರುವುದು ನಿಚ್ಚಳವಾಗಿ ಕಾಣುತ್ತದೆ. ಇಂದು ಸೆಟ್ಲಮೆಂಟಿನ ಕೆಲವರಾದರೂ ಪೊಲೀಸ್ ಇಲಾಖೆಯಲ್ಲಿ ಪೇದೆಗಳಾಗಿ ಕಾರ್ಯ ನಿರ್ವಹಿಸುತ್ತಾರೆ. ಆದರೆ ಮೇಲಾಧಿಕಾರಿಗಳ ಎದುರಿಗೆ ತಮ್ಮ ಜನರನ್ನು ರಕ್ಷಿಸಲಾರದಷ್ಟು ಅವರು ಅಸಾಹಾಯಕರಾಗಿದ್ದಾರೆ. ಎಷ್ಟೋ ಬಾರಿ ತಮ್ಮ ಮೇಲಾಧಿಕಾರಿಗಳ ಆಜ್ಞೆಯನ್ನು ಪಾಲಿಸುವುದಕ್ಕಾಗಿ ತಮ್ಮ ಜನರನ್ನೇ ಬಂಧಿಸುವ, ವಿಚಾರಿಸುವ ಕಾರ್ಯಕ್ಕೆ ಇವರು ತೊಡಗಬೇಕಾದ ಅನಿವಾರ್ಯ ಸ್ಥಿತಿ ಇದೆ.

ಒಂದು ಕಡೆ ರಾಜಕಾರಣಿಗಳು ಮತ್ತೊಂದು ಕಡೆ ಪೋಲಿಸ್ ಮತ್ತು ಅಬಕಾರಿ ಇಲಾಖೆಗಳಿಂದ ನಾನಾ ರೀತಿಯಲ್ಲಿ ಸೆಟ್ಲಮೆಂಟಿನ ಜನ ಶೋಷಣೆಗೆ ಒಗಾಗಬೇಕಾಗಿರುವುದು ದುರಂತವೆಂದೇ ಹೇಳಬಹುದು. ಇದಕ್ಕಿಂತ ಹೆಚ್ಚಿನ ದುರಂತವೆಂದರೆ ಸೆಟ್ಲಮೆಂಟಿನ ಆಚೆ ಇರುವ ಜನರೂ ಇವರನ್ನು ಗುಮಾನಿಯಿಂದ ನೋಡುವ, ಅವಮಾನಗಳಿಗೆ ಈಡು ಮಾಡುವ ಘಟನೆಗಳು ಜರುಗುತ್ತಿವೆ.

ಇಂದಿಗೂ ಹುಬ್ಬಳ್ಳಿ, ಗದಗ, ಬಿಜಾಪುರಗಳಲ್ಲಿ ಸೆಟ್ಲಮೆಂಟ್ ಜನರೆಂದರೆ ಅವರನ್ನು ಸಾಮಾನ್ಯರು ಕಾಣುವ ರೀತಿಯೆ ಬೇರೆ. ಸೆಟ್ಲಮೆಂಟಿನೊಂದಿಗೆ ಸಂಬಂಧವಿರಿಸಿಕೊಂಡಿದ್ದಾರೆಂದು ತಿಳಿದರೆ ಅವರನ್ನು ಸಹ ಸಾಮಾನ್ಯ ಜನ ತುಂಬಾ ಗುಮಾನಿಯಿಂದಲೇ ನೋಡುತ್ತಾರೆ. ಇಂದು ಸಾಮಾನ್ಯರ ಕಣ್ಣಲ್ಲಿ ಇವರೆಲ್ಲಾ ಅಪರಾಧಿಗಳಾಗಿಯೇ ಕಾಣುತ್ತಾರೆ. ಯಾವನನ್ನು ಅಥವಾ ಯಾವ ಸಮಾಜವನ್ನು ಅಪರಾಧಿಗಳೆಂದು ಪರಿಗಣಿಸಿ ಅವರೊಂದಿಗೆ ವರ್ತಿಸುತ್ತೇವೆಯೋ ಆ ಸಮಾಜ ಮತ್ತು ವ್ಯಕ್ತಿ ಹೆಚ್ಚು ಖಿನ್ನತೆಗೆ, ಕೀಳರಿಮೆಗೆ ಒಳಗಾಗುತ್ತಾನೆ. ಈ ರೀತಿ ಒಬ್ಬ ವ್ಯಕ್ತಿ ಅಥವಾ ಒಂದು ಸಮಾಜವನ್ನು ನೋಡುವುದರಿಂದ ಅವರು ಅಪರಾಧಗಳಿಂದ ವಿಮುಕ್ತವಾಗುವುದಕ್ಕಿಂತ ಹೆಚ್ಚಾಗಿ ಅಪರಾಧಗಳಲ್ಲಿ ತೊಡಗುತ್ತಾರೆ ಎಂಬುದನ್ನು ಮರೆಯಬಾರದು.

ಕರ್ನಾಟಕದ ಸೆಟ್ಲಮೆಂಟ್‌ಗಳಲ್ಲಿ ಒಟ್ಟು ೨೪ ಸಮುದಾಯಗಳು ಮೊದಲು ಇದ್ದುದಾಗಿ ತಿಳಿದುಬರುತ್ತದೆ. ಆದರೆ ಇಂದು ಸೆಟ್ಲಮೆಂಟ್‌ಗಳಲ್ಲಿ ಕೇವಲ ೬ ಸಮುದಾಯಗಳು ಮಾತ್ರ ಉಳಿದಿವೆ. ಉಳಿದ ೧೮ ಸಮುದಾಯಗಳು ಸೆಟ್ಲಮೆಂಟಿನಿಂದ ದೂರ ಹೋಗಿವೆ. ಪ್ರಾಯಶಃ ಇದಕ್ಕೆ ಬಹುಮುಖ್ಯವಾದ ಕಾರಣ ಅವಮಾನ, ಕೀಳರಿಮೆಗಳೇ ಎಂದೆನಿಸುತ್ತದೆ. ಕೀಳರಿಮೆ, ಅವಮಾನಗಳನ್ನು ಅನುಭವಿಸಲಾಗದೆ ಎಷ್ಟೋ

ಸಮುದಾಯಗಳು ಸೆಟ್ಲಮೆಂಟನಿಂದ ಮರೆಯಾಗಿವೆ ಮತ್ತು ತಮ್ಮ ಮೂಲ ಜಾತಿಯ ಹೆಸರು ಹೇಳಿಕೊಳ್ಳಲು ನಾಚಿಕೊಳ್ಳುತ್ತವೆ. ಹೀಗಾಗಿ ಎಷ್ಟೋ ವಿಮುಕ್ತ ಬುಡಕಟ್ಟುಗಳು ತಮ್ಮ ಮೂಲ ಸಮುದಾಯದ ಹೆಸರನ್ನು ಹೇಳಿಕೊಳ್ಳುವುದಿಲ್ಲ.

ಉದಾಹರಣೆಗೆ ಚಪ್ಪರಬಂದರು ತಮ್ಮ ಸಮುದಾಯದ ಹೆಸರು ಹೇಳದೆ ತಾವು ಮುಸ್ಲೀಮರು ಎಂದು ಹೇಳುತ್ತಾರೆ. ಹಾಗೇ ಎಷ್ಟೋ ವಿಮುಕ್ತ ಬುಡಕಟ್ಟುಗಳು ತಮ್ಮ ಸಮುದಾಯವನ್ನು ಅಪರಾಧಿಗಳೆಂದು ಗುರುತಿಸುತ್ತಾರೆ ಎಂಬ ಕಾರಣಕ್ಕಾಗಿಯೇ ಮತಾಂತರಗೊಂಡಿರುವ ಉದಾಹರಣೆಗಳೂ ಇವೆ. ಅನ್ಯ ಧರ್ಮ, ಮತದ ಹೆಸರು ಹೇಳುವ ಮೂಲಕ ತಮ್ಮ ಸಮುದಾಯಕ್ಕೆ, ಆ ಮೂಲಕ ತಮಗೆ ಹತ್ತಿದ ಕಳಂಕವನ್ನು ಅವು ತೊಳೆದುಕೊಳ್ಳಲು ಮತ್ತು ಮರೆ ಮಾಚಿಕೊಳ್ಳಲು ಪ್ರಯತ್ನಿಸುತ್ತವೆ.

ಕೊನೆಯದಾಗಿ ತಮ್ಮ ಸಮುದಾಯದವರಿಂದಲೇ ಸೆಟ್ಲಮೆಂಟಿನ ಜನ ಅವಮಾನಗೊಳ್ಳುತ್ತಿರುವುದು. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಸೆಟ್ಲಮೆಂಟಿನ ಕೆಲವೊಂದು ವಕ್ತೃಗಳು ತಮ್ಮವರೇ ತಮ್ಮನ್ನು ಕೀಳಾಗಿ ಕಾಣುತ್ತಾರೆ ಮತ್ತು ತಮ್ಮೊಂದಿಗೆ ಸೇರುವುದಿಲ್ಲ. ತಮ್ಮೊಂದಿಗೆ ರಕ್ತಸಂಬಂಧವನ್ನು ಏರ್ಪಡಿಸಿಕೊಳ್ಳುವುದಿಲ್ಲ ಎಂಬ ಅಳಲನ್ನು ತೋಡಿಕೊಂಡರು.

ಒಂದು ಕಾಲದಲ್ಲಿ ಸೆಟ್ಲಮೆಂಟಿನಲ್ಲಿದ್ದ ಜನರು ತಾವು ವಿದ್ಯಾವಂತರಾಗಿ ಆರ್ಥಿಕ ಬಲ ದೊರೆತ ತಕ್ಷಣ ಸೆಟ್ಲಮೆಂಟಿನಿಂದ ದೂರ ಸಿಡಿದು ಸಾಮಾನ್ಯ ವ್ಯವಸ್ಥೆಯಲ್ಲಿ ಒಂದಾಗಿ ಸೆಟ್ಲಮೆಂಟಿನ ಹೊರಭಾಗದಲ್ಲಿ ನೆಲೆಸುತ್ತಾರೆ ಇಲ್ಲವೇ ನೆಲೆಸಲು ಆಪೇಕ್ಷಿಸುತ್ತಾರೆ. ಬಹುತೇಕ ಇಂತಹ ಜನ ತಾವೊಮ್ಮೆ ಸೆಟ್ಲಮೆಂಟ್ ವಾಸಿಗಳಾಗಿದ್ದವರು ಎಂಬುದನ್ನು ಮರೆತು ಹೋದವರಾಗಿದ್ದಾರೆ. ಸೆಟ್ಲಮೆಂಟಿನವರು ತಾವು ಎಂದು ಎಲ್ಲಿಯೂ ಪರಿಚಯಿಸಿಕೊಳ್ಳುವುದಿಲ್ಲ. ತಾವು ಸೆಟ್ಲಮೆಂಟಿನವರು ಎಂದು ಗುರುತಿಸಿಕೊಂಡರೆ ತಮಗೆ ಹೆಚ್ಚು ಅವಮಾನವಾಗುತ್ತೆಂಬ ಕೀಳರಿಮೆಯೇ ಈ ರೀತಿ ಅವರು ವರ್ತಿಸಲು ಕಾರಣವಾಗಿರಬಹುದು. ಇಂತಹ ಜನ ಸೆಟ್ಲಮೆಂಟಿನ ಹುಡುಗಿಯರನ್ನು ಮದುವೆ ಮಾಡಿಕೊಳ್ಳುವುದು ಮತ್ತು ಸೆಟ್ಲಮೆಂಟಿಗೆ ತಮ್ಮ ಮಕ್ಕಳನ್ನು ಕೊಡುವುದು ಅಪಮಾನವೆಂದೇ ಭಾವಿಸುತ್ತಾರೆ.

ತಮ್ಮವರಿಂದ ಮಾತ್ರವಲ್ಲ ಇಡೀ ವ್ಯವಸ್ಥೆಯಿಂದಲೇ ಸೆಟ್ಲಮೆಂಟಿನ ಜನ ಅಪಮಾನ ಶೋಷಣೆಗೆ ಒಳಗಾಗಿದಿದ್ದಾರೆ ಮತ್ತು ಅವಮಾನಗಳಿಗೆ ಒಳಗಾಗುತ್ತಲೇ ಇದ್ದಾರೆ. ಇಂದಿಗೂ ಅವರ ಮೂಲಭೂತ ಸೌಕರ್ಯಗಳ ಕುರಿತು ಯಾವೊಂದು ಸರ್ಕಾರವೂ ಕಾಳಜಿ ವಹಿಸುತ್ತಿಲ್ಲ. ಒಟ್ಟಾರೆಯಾಗಿ ಸೆಟ್ಲಮೆಂಟಿನ ವಿಮುಕ್ತ ಬುಡಕಟ್ಟುಗಳು ಶೋಷಿತರಲ್ಲಿಯೇ ಶೋಷಿತರಾಗಿದ್ದಾರೆ ಎಂಬುದಂತೂ ಸತ್ಯ

ಗ್ರಂಥಋಣ

೧. ಪ್ರಜಾವಾಣಿ ವಿಶೇಷ ಪುರವಣಿ: ದಿನಾಂಕ ೧೪.೧೧.೧೯೯೯

೨. ಪ್ರಜಾವಾಣ ವಿಶೇಷ ಪುರವಣಿ: ದಿನಾಂಕ ೧೬ ನವೆಂಬರ್ ೨೦೦೯

೩. ಪ್ರಭಾಕರ ಎ.ಎಸ್., ಕರ್ನಾಟಕದ ಡೊಂಬರು, ೨೦೦೭, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಅಧ್ಯಾಯ ಒಂಭತ್ತು

ಇತರ ಸಮುದಾಯಗಳೊಂದಿಗೆ ವಿಮುಕ್ತ ಬುಡಕಟ್ಟುಗಳ ಸಾಮಾಜಿಕ ಸಂಬಂಧಗಳು

ಅಧ್ಯಾಯ ಒಂಭತ್ತು

ಇತರ ಸಮುದಾಯಗಳೊಂದಿಗೆ ವಿಮುಕ್ತ ಬುಡಕಟ್ಟುಗಳ ಸಾಮಾಜಿಕ ಸಂಬಂಧಗಳು

ವ್ಯಕ್ತಿ ಸಮಾಜದ ಒಂದು ಚಿಕ್ಕಘಟಕ, ವ್ಯಕ್ತಿ-ವ್ಯಕ್ತಿಗಳು ಸೇರಿ ಪಂಗಡಗಳು, ಪಂಗಡಗಳೇ ಬೆಳವಣಿಗೆ ಹೊಂದಿ ಸಮುದಾಯವಾಗಿ, ಆ ಸಮುದಾಯಗಳು ಜಾತಿಗಳಾಗಿ ಪರಿವರ್ತಿತವಾಗಿರುವುದನ್ನು ಇತಿಹಾಸದ ಮೂಲಕ ಅರಿಯುತ್ತೇವೆ. ಇಂತಹ ಹಲವು ಪಂಗಡ, ಸಮುದಾಯ, ಜಾತಿ, ವರ್ಗಗಳು ಸೇರಿ ಸಮಾಜವಾಗಿದೆ. ಯಾವುದೇ ಒಂದು ಸಮಾಜದಲ್ಲಿ ಒಬ್ಬ ವ್ಯಕ್ತಿಯಿಂದ ಅಥವಾ ಒಂದೇ ರೀತಿಯ ಕಸುಬನ್ನು ಮಾಡುವ ಜನರಿಂದ ಇಡೀ ಸಮಾಜವಾಗುವುದಿಲ್ಲ. ತಮ್ಮ ಅವಶ್ಯಕತೆಗೆ ತಕ್ಕಂತೆ ತಮ್ಮ ತಮ್ಮಲ್ಲಿಯೇ ವಿವಿಧ ಕಸುಬಗಳನ್ನು ಹಂಚಿಕೊಂಡು ಆ ಮೂಲಕ ಒಂದು ವ್ಯವಸ್ಥಿತ ಬದುಕನ್ನು ಆ ಪಂಗಡಗಳು ರೂಪಿಸಿಕೊಂಡಿವೆ.

ಇಂದು ನಾವು ಯಾರನ್ನು ಅಲೆಮಾರಿಗಳೆಂದು ಅಥವಾ ಬುಡಕಟ್ಟುಗಳೆಂದು ಕರೆಯುತ್ತೇವೆಯೋ ಅವು ಒಂದು ಕಾಲಕ್ಕೆ ಸುವ್ಯವಸ್ಥಿತವಾದ ರೀತಿಯಲ್ಲಿ ಬದುಕನ್ನು ನಿರ್ವಹಿಸುತ್ತಿದ್ದವು. ಬ್ರಿಟಿಷ್ ಪೂರ್ವದಲ್ಲಿಯೇ ದೇಶೀ ಅರಸರು ಅಂತಹ ಪಂಗಡಗಳನ್ನು ತಮ್ಮ ಹಿಡಿತದಲ್ಲಿರಿಸಿಕೊಳ್ಳುವ ತಂತ್ರಗಳನ್ನು ಬಳಸಿದರು. ಸ್ವಾಭಿಮಾನದಿಂದ ತಮ್ಮ ಪಾಡಿಗೆ ತಾವು ಬದುಕುತ್ತಿದ್ದ ಆ ಪಂಗಡಗಳಿಗೆ ರಾಜಾಶ್ರಯದ ನೆಪದಲ್ಲಿ ತಮ್ಮ ತೆಕ್ಕೆಗೆ ತೆಗೆದುಕೊಂಡರು. ತರುವಾಯ ಈ ಪಂಗಡ/ಸಮುದಾಯಗಳ ಮುಗ್ಧತೆಯನ್ನೆ ಬಳಸಿಕೊಂಡು ಅವರನ್ನು ತಮ್ಮ ಊಳಿಗದವರಾಗಿಸಿಕೊಂಡರು. ಇಂದು ಭಿಲ್, ಘಿಸಾಡಿ, ಲಂಬಾಣಿ, ಪಾರ್ಧಿ ಮುಂತಾದ ಸಮುದಾಯಗಳು ತಾವು ರಾಣಾ ಪ್ರತಾಪನ ಆಶ್ರಯದಲ್ಲಿದ್ದುದಾಗಿ ಹೆಮ್ಮೆಯಿಂದ ಹೇಳಿಕೊಳ್ಳುತ್ತವೆ. ರಾಣಾ ಪ್ರತಾಪನ ಅವಸಾನದ ತರುವಾಯ ತಾವು ಅನಾಥರಾದುದಾಗಿಯೂ ಕೊನೆಗೆ ಅನ್ಯ ಅರಸರ ಕಿರುಕುಳ ತಾಳದೆ ಅಲೆಮಾರಿ ಕಾಡುವಾಸಿಗಳಾಗಿ ದಕ್ಷಿಣ ಭಾರತಕ್ಕೆ ವಲಸೆ ಬರಬೇಕಾದ

ಅನಿವಾರ್ಯತೆ ತಮಗುಂಟಾಯಿತೆಂದು ಹೇಳುತ್ತಾರೆ. ಆದರೆ ತಮ್ಮ ಪೂರ್ವಜರನ್ನು ರಾಣಪ್ರತಾಪ ಯಾವ ರೀತಿಯಲ್ಲಿ ಕಾಣುತ್ತಿದ್ದ, ರಾಜಾಶ್ರಯದ ನೆಪದಲ್ಲಿ ತಮ್ಮ ಶ್ರಮಶಕ್ತಿಯ ವಿನಿಯೋಗ ಹೇಗಾಗುತ್ತಿತ್ತು. ತಮ್ಮ ಜನರ ಶೋಷಣೆ ಹೇಗೆ ನಡೆಯುತ್ತಿತ್ತು ಎಂಬುದನ್ನು ಮಾತ್ರ ಹೇಳಲಾಗದ ಸ್ಥಿತಿ ಇವರದ್ದಾಗಿದೆ.

ಅಂದು ಬಹುತೇಕ ಅರಸರು ತಮ್ಮ ಸಾಮ್ರಾಜ್ಯಗಳನ್ನು ಕಟ್ಟಲು ಕುಶಲಕರ್ಮಿ ಮತ್ತು ತಮ್ಮ ಅವಶ್ಯಕತೆಗಳನ್ನು ಪೂರೈಸಲು ಉತ್ಪಾದಕ ಮತ್ತು ವ್ಯಾಪಾರಿ ಸಮುದಾಯಗಳ ಸಹಾಯವನ್ನು ಪಡೆದವು. ಆದರೆ ಆ ಅರಸರು ವಿದೇಶೀಯರ ದಾಳಿಗೆ ತತ್ತರಿಸಿ ಸೋತ ತರುವಾಯ ಈ ಸಮುದಾಯಗಳಿಗೆ ನೆಲೆ ದೊರೆಯದಾಯಿತು. ಅವರು ದಕ್ಷಿಣದತ್ತ ಚಲಿಸುತ್ತ ಬರುವಾಗ ಮರಳಿ ಬೇರೆ ಅರಸರಲ್ಲಿ ಊಳಿಗದವರಾಗಿ ದುಡಿಯುವ ಕಾರ್ಯಕ್ಕೆ ಇಳಿದರು. ಹೀಗೆ ಅರಸರಿಂದ ಅರಸರಿಗೆ ಬದಲಾಗುತ್ತ, ಅರಸರ ಉಪಟಳ ಹೆಚ್ಚಾದಾಗ ಕಾಡಿನ ಆಶ್ರಯ ಪಡೆಯುತ್ತ ಅಲೆಮಾರಿಗಳಾಗಿದ್ದ ಬುಡಕಟ್ಟುಗಳು ತಮ್ಮ ಮೂಲ ಕಸುಬನ್ನು ಬಿಟ್ಟು ಅರಣ್ಯೋತ್ಪಾದನೆಗಳ ಸಂಗ್ರಹ ಮತ್ತು ಮಾರಾಟ, ನೈಸರ್ಗಿಕವಾಗಿ ದೊರೆಯುವ ಉಪ್ಪನ್ನು ಸಂಗ್ರಹಿಸಿ ಮಾರುವ ಕಾಯಕಗಳಿಗೆ ಇಳಿದರು. ವ್ಯಾಪಾರ ವಹಿವಾಟುಗಳೆಂದರೆ ತಂತಮ್ಮೊಳಗೆ ಮಾಡಿಕೊಳ್ಳುವುದಿಲ್ಲ. ಅದು ಮುಖ್ಯ ವಾಹಿನಿಯಲ್ಲಿರುವ ಅನ್ಯ ಸಮುದಾಯಗಳೊಂದಿಗೆ ನಡೆಸುವುದಾಗಿತ್ತು. ಜೊತೆ ಜೊತೆಗೆ ಕೃಷಿ ಕೂಲಿಗಳಾಗಿಯೋ, ಸಣ್ಣ ಹಿಡುವಳಿದಾರ ಕೃಷಿಕರಾಗಿಯೋ ಕೆಲವು ಸಮುದಾಯಗಳು ತಮ್ಮ ಜೀವನ ಮಾರ್ಗಗಳನ್ನು ಕಂಡುಕೊಳ್ಳ ತೊಡಗಿದವು.

ಭಾರತದಲ್ಲಿ ಒಂದು ಜಾತಿಯೆಂದರೆ ಅದೊಂದು ಉತ್ಪಾದನಾ ಘಟಕ, ಒಂದೊಂದು ಜಾತಿ ಒಂದು ಸ್ವಯಂಪೂರ್ಣ ಸಾಮಾಜಿಕ, ಆರ್ಥಿಕ ಅವಕಾಶದ ಒಳಗೆ ಒಂದು ನಿಶ್ಚಿತ ಉತ್ಪಾದನೆಯನ್ನು ಅವಲಂಬಿಸಿಕೊಂಡು ಬಂದಿರುವುದು ಭಾರತ ಸಮಾಜದ ಒಂದು ವಿಶಿಷ್ಟ ಲಕ್ಷಣ. ಕೆಲ ಜಾತಿಗಳ ಕಸಬುಗಳು ಸರಕನ್ನು ಉತ್ಪಾದಿಸಿದರೆ, ಕೆಲವು ಜಾತಿಗಳ ಕಸುಬುಗಳು ಸರಕನ್ನು ಉತ್ಪಾದಿಸುವುದರ ಜೊತೆಗೆ ಸಮಾಜದ ಒಟ್ಟಾರೆಯ ಸೇವೆಗಾಗಿಯೂ ರೂಪುಗೊಂಡಿರುವುದು ಕಂಡುಬರುತ್ತದೆ.

ಈ ಸಮುದಾಯಗಳ ಉತ್ಪತ್ತಿ ಮತ್ತು ಕಸುಬುನ್ನು ಆಧರಿಸಿಯೇ ವ್ಯವಸ್ಥೆಯಲ್ಲಿ ಶ್ರೇಣೀಕರಣಗಳು ಸೃಷ್ಟಿಗೊಂಡವು. ಬಹುತೇಕ ಅಲೆಮಾರಿ ಮತ್ತು ಬುಡಕಟ್ಟು ಸಮುದಾಯಗಳು ಕಾಡನ್ನು ನೆಚ್ಚಿ ಅದರಿಂದ ದೊರೆಯುವ ವಸ್ತುಗಳನ್ನು ಬಳಸಿಯೋ, ಮಾರಿಯೋ ಒಂದು ಸ್ವಾವಲಂಭಿ ಸ್ವಾಭಿಮಾನದ ಬದುಕನ್ನು ರೂಪಿಸಿಕೊಂಡಿದ್ದವು. ಇಲ್ಲಿ ಸ್ವಾವಲಂಭಿ ಎಂದರೆ ತಮ್ಮ ಸೊಂಡಿಲಲ್ಲಿ ತಾವೇ ನೀರು ಕುಡಿಯುವರೆಂದಲ್ಲ. ತಮ್ಮ ಉತ್ಪಾದನೆಗಳ ಬಿಕರಿಗೆ ಅನ್ಯ ಸಮುದಾಯಗಳನ್ನು ಇವು ಅವಲಂಬಿಸಿಯೇ ಇರಬೇಕಾಗಿತ್ತು.

ಹೀಗೆ ಅಲೆಮಾರಿ ಮತ್ತು ಬುಡಕಟ್ಟುಗಳು ಮತ್ತು ಮುಖ್ಯ ವಾಹಿನಿಯಲ್ಲಿರುವ ಸಮುದಾಯಗಳು ಪರಸ್ಪರ ಕೊಡುಕೊಳ್ಳುವಿಕೆಯ ಮೂಲಕ ಒಂದು ರೀತಿಯ ನಿರ್ಧಿಷ್ಟ ದೂರವನ್ನು ಕಾಯ್ದುಕೊಂಡಾದರೂ ಅಂತರ್ ಸಂಬಂಧಗಳನ್ನು ಇರಿಸಿಕೊಂಡಿದ್ದವು.

ಬ್ರಿಟೀಷರ ಆಗಮನವಾದ ತರುವಾಯ ಬ್ರಿಟೀಷರು ತಮ್ಮ ಅಗತ್ಯಗಳಿಗೆ ಅವಶ್ಯವಾದ ಮತ್ತು ಸುಲಭವಾಗಿ ಎಟುಕುಬಹುದಾದ ಕೆಲವು ಸಮುದಾಯಗಳನ್ನು ಅಪರಾಧಿಗಳೆಂಬ ಹಣೆಪಟ್ಟಿಯನ್ನು ಹಚ್ಚಿ ಅವುಗಳನ್ನು ತಮ್ಮ ಹಿಡಿತದಲ್ಲಿರಿಸಿಕೊಂಡವು. ಭಾರತದಲ್ಲಿ ತಾವು ನೆಲೆಸಲು ಅಗತ್ಯವಾದ ಬಂಗಲೆಗಳ ಕಟ್ಟಡ ನಿರ್ಮಿಸಲು, ರೈಲು ಸಂಚಾರಕ್ಕೆ ಮಾರ್ಗಗಳನ್ನು ರಚಿಸುವ ಕಾರ್ಯಕ್ಕೂ, ತಮ್ಮ ಮಿಲ್ಲುಗಳಲ್ಲಿ ದುಡಿಯುವ ಆಳುಗಳಾಗಿಯೂ ಇವರನ್ನು ಬಳಸಿಕೊಂಡಿತು. ತಮ್ಮ ಅನುಕೂಲಕ್ಕೆ ಅವಶ್ಯಕವಾದ ಕೌಸಲ್ಯಗಳನ್ನು ಈ ಸಮುದಾಯಗಳಿಗೆ ಕಲಿಸಿದರು. ಹೀಗಾಗಿಯೇ ಟೈಲರಿಂಗ್ ಕಲಿಕಾ ಕೇಂದ್ರಗಳು, ಬಡಿಗೇರ ಕಾರ್ಖಾನೆಗಳು, ಕಮ್ಮಾರ ಶಾಲೆಗಳು, ಕಟ್ಟಡ ಕೆಲಸ ಕಲಿಸುವ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಿದರು. ಈ ಸಂಸ್ಥೆಗಳಲ್ಲಿ ಈ ಅಪರಾಧಿ ಬುಡಕಟ್ಟುಗಳಿಗೆ ಕೆಲಸ ಕೌಶಲ್ಯಗಳನ್ನು ಕಲಿಸಿದ ತರುವಾಯ ತಮ್ಮ ಊಳಿಗದ ಕೂಲಿಗಳಾಗಿ ಇವರನ್ನು ಬಳಸಿಕೊಂಡರು.

೧೯೪೭ರಲ್ಲಿ ಬ್ರಿಟೀಷರು ಭಾರತವನ್ನು ಬಿಟ್ಟು ತಮ್ಮ ನಾಡಿಗೆ ಹೋದರು. ಆದರೆ ಬಡಿಗೆತನ ಮತ್ತು ಕಟ್ಟಡ ಕೆಲಸಗಳಂತ ಶ್ರಮದಾಯಕ ಕೆಲಸಗಳನ್ನು ಕಲಿತ ಈ ಸಮುದಾಯಗಳ ಉಪಯೋಗವನ್ನು ಇತರ ನಗರವಾಸಿ ಸಮುದಾಯಗಳು ಪಡೆಯತೊಡಗಿದವು. ಸೆಟ್ಲಮೆಂಟಿನಲ್ಲಿ ವಾಸಿಸುವ ವಿಮುಕ್ತ ಬುಡಕಟ್ಟು ಸಮುದಾಯಗಳನ್ನು ಸಮಾಜದ ಇತರ ಸಮುದಾಯಗಳು ಅಪರಾಧಿಗಳು ಎಂಬ ಗುಮಾನಿಯಿಂದಲೇ ನೋಡುತ್ತದೆಯಾದರೂ ತಮ್ಮ ಅವಶ್ಯಕತೆಗಳಿಗೆ ಇವರನ್ನು ಬಳಸಿಕೊಳ್ಳುವುದನ್ನು ಮರೆಯುವುದಿಲ್ಲ.

* ಈ ಸಮುದಾಯಗಳು ಹೊಟ್ಟೆಪಾಡಿಗಾಗಿ ಇತರ ಕೆಲಸಗಳಲ್ಲಿ ತೊಡಗಲು ಅಪೇಕ್ಷಿಸಿದರೂ ಮೇಲ್ವರ್ಗದ ಬಂಡವಾಳಶಾಹಿಗಳು ಅವರು ಅಪರಾಧಿಗಳಾಗಿ ಇರಲೆಂದೇ ಆಶಿಸುತ್ತಾರೆ. ಪ್ರಾಯಶಃ ಈ ರೀತಿಯ ಮನೋಭಾವನೆ ತಾಳಲು ಕಾರಣ ಈ ಸಮುದಾಯಗಳು ಅಪಹರಿಸಿದ ವಸ್ತುಗಳನ್ನು ಅತೀ ಕಡಿಮೆ ಬೆಲೆಗೆ ಕೊಳ್ಳುವುದು ಅವರ ಉದ್ದೇಶವಾಗಿರುತ್ತದೆ. ಸೆಟ್ಲಮೆಂಟ್‌ವಾಸಿ ವಿಮುಕ್ತ ಬುಡಕಟ್ಟುಗಳು ತಮ್ಮ ಸ್ವಂತ ದುಡುಮೆಯಿಂದ ಸಂಪಾದಿಸಿದ ವಸ್ತುಗಳನ್ನು ಮಾರಲು ಹೋದರೂ ಸಮಾಜದ ಇತರ ಸಮುದಾಯಗಳು ಮತ್ತು ವ್ಯಾಪಾರಸ್ಥರು ಅವು ಕಳ್ಳ ಮಾಲೆಂದೇ ಸಂಶಯ ವ್ಯಕ್ತಪಡಿಸುತ್ತಾರೆ.
* ಇಂದಿಗೂ ಇವರು ತಮ್ಮ ಸ್ವ ಶಕ್ತಿಯ ಮೇಲೆ ಬೆಳೆಯಲು ಪ್ರಯತ್ನಿಸಿದರೂ ಇತರ ಸಮುದಾಯಗಳು ಅವರನ್ನು ಹತ್ತಿಕ್ಕುವ ಕಾರ್ಯವನ್ನು ತುಂಬಾ ಸುವ್ಯವಸ್ಥಿತವಾಗಿ ಮಾಡುತ್ತಾರೆ. ಉದಾಹರಣೆಗೆ ರಾಜಕೀಯವಾಗಿ ಈ ಸಮುದಾಯಗಳು ಬೆಳೆಯಲು ಅವಕಾಶಗಳನ್ನೇ ಕೊಡುವುದಿಲ್ಲ. ಮೀಸಲಾತಿ ಕಾರಣಗಳಿಗಾಗಿ ರಾಜಕೀಯ ಪ್ರವೇಶ ಮಾಡಿದರೂ ಈ ಸಮುದಾಯದ ಅಭ್ಯರ್ಥಿಗಳನ್ನು ಮೇಲ್ವರ್ಗದ ಜನ ತಮ್ಮ ಹಿಡಿತದಲ್ಲಿಯೇ ಇರಿಸಿಕೊಳ್ಳುತ್ತಾರೆ.
* ಸಮುದಾಯ-ಸಮುದಾಯಗಳೊಂದಿಗಿನ ಸಂಬಂಧವನ್ನು ನೋಡುವಾಗ ವ್ಯವಸ್ಥೆಯಲ್ಲಿ ಎರಡು ಭಾಗಗಳನ್ನು ನೋಡಬಹುದು. ಒಂದು-ಸೆಟ್ಲಮೆಂಟ್ ಒಳಗಿನ ಪ್ರಪಂಚ, ಇನ್ನೊಂದು ಸೆಟ್ಲಮೆಂಟಿನ

ಹೊರಗಿನ ಪ್ರಪಂಚ. ಸೆಟ್ಲಮೆಂಟಿನ ಒಳಗಿನ ಪ್ರಪಂಚವು ಸೆಟ್ಲಮೆಂಟಿನ ಹೊರಗಿನ ಪ್ರಪಂಚದೊಂದಿಗೆ ಲೀನವಾಗಲು ಪ್ರಯತ್ನಿಸಿದರೂ ಹೊರಗಿನ ಪ್ರಪಂಚವು ಸೆಟ್ಲಮೆಂಟ್ ಪ್ರಪಂಚವನ್ನು ನಿರಾಕರಿಸುತ್ತದೆ. ಮತ್ತು ಅದು ಹತ್ತಿರವಾದಷ್ಟೂ ಅದನ್ನು ದೂರ ಸರಿಸುತ್ತಲೇ ಒಂದು ನಿರ್ಧಿಷ್ಟ ಅಂತರವನ್ನು ಕಾಪಾಡುತ್ತಾ ಸಾಗುತ್ತದೆ.

ಹೀಗಾಗಿ ಸೆಟ್ಲಮೆಂಟಿನ ಸಮುದಾಯಗಳು ಇತರ ಸಮುದಾಯಗಳೊಂದಿಗೆ ಏರ್ಪಡಿಸಿಕೊಳ್ಳುವ ಸಂಬಂಧಗಳು ಅಷ್ಟಕ್ಕಷ್ಟೆ.

- ಸೆಟ್ಲಮೆಂಟ್ ವಿಮುಕ್ತ ಬುಡಕಟ್ಟು ಮತ್ತು ಇತರ ಸಮುದಾಯಗಳ ಸಂಬಂಧ-ಕೆಲಸಗಾರ ಧಣಿಯ ಸಂಬಂಧವಾಗಿದೆ. ಮತ್ತು ಕೇವಲ ವ್ಯವಹಾರಿಕ ಸಂಬಂಧವಾಗಿದೆ.
- ಸೆಟ್ಲಮೆಂಟ್ ಸಮುದಾಯಗಳನ್ನು ತೀರಾ ತುಚ್ಛವಾಗಿ ಇತರ ಸಮುದಾಯಗಳು ಕಾಣುತ್ತವೆ.
- ಸೆಟ್ಲಮೆಂಟ್‌ನಲ್ಲಿ ನೆಲೆಸಿರುವ ವಿಮುಕ್ತ ಬುಡಕಟ್ಟುಗಳು ಇತರ ಸಮುದಾಯಗಳಿಗೆ ಅಸ್ಪೃಶ್ಯ ಸಮುದಾಯಗಳಾಗಿ ಗೋಚರಿಸುತ್ತವೆ.
- ಸಾಧ್ಯವಾದ ಮಟ್ಟಿಗೆ ಮೇಲ್ಜಾತಿ ಜನರಿರುವ ಕಾಲೋನಿಗಳಲ್ಲಿ ಮನೆ ಮಾಡಲು ಸೆಟ್ಲಮೆಂಟಿನಿಂದ ಹೊರ ಸಿಡಿದ ನೌಕರ ಪ್ರಯತ್ನಿಸುತ್ತಾನೆ.
- ತನ್ನ ಮೂಲ ಬುಡಕಟ್ಟನ್ನು ಮರೆಮಾಚುವುದಕ್ಕೋಸ್ಕರ ಮತ್ತು ಅವರಿಂದಾಗುವ ಅವಮಾನಗಳಿಂದ ಪಾರಾಗುವುದಕ್ಕಾಗಿ ಅನ್ಯ ಧರ್ಮಗಳನ್ನು ಅನುಸರಿಸುತ್ತಾನೆ.

ಸಾಮಾಜಿಕ ಕಾರ್ಯಕರ್ತ ಮತ್ತು ಮರಾಠಿ ಲೇಖಕರಾದ ಗಂಟಿ ಚೋರ ಸಮುದಾಯದ ಲಕ್ಷ್ಮಣ ಗಾಯಕ್ವಾಡರು ತಮ್ಮ ಆತ್ಮಕಥೆ 'ಉಚಲ್ಯ'ದಲ್ಲಿ ತಮ್ಮ ಅನುಭವದ ಕತೆಯನ್ನು ಹೀಗೆ ಹೇಳುತ್ತಾರೆ. ಹೊಸ ಬಾಡಿಗೆ ಮನೆ ಹುಡುಕಲಾರಂಭಿಸಿದೆವು. ಹೊರ ಹೋದಲ್ಲಿ ಜನ ಮೊದಲು ಜಾತಿ ಬಗ್ಗೆ ಪ್ರಶ್ನಿಸುತ್ತಿದ್ದರು. ಜಾತಿ ಹೇಳಿದರೆ ಬಾಡಿಗೆ ಮನೆ ಸಿಗುತ್ತಿರಲಿಲ್ಲ. ಕೊನೆಗೆ (ಲಾತೂರ್) ಸಾಳೇಗಲ್ಲಿಯಲ್ಲಿ ಮರಾಠ ಎಂದು ಸುಳ್ಳು ಹೇಳಿ ಬಾಡಿಗೆ ಮನೆ ಹಿಡಿದೆವು (ಲಕ್ಷ್ಮಣ ಗಾಯಕವಾಡ್(ಅನು)ಚಂದ್ರಕಾಂತ ಪೊಕಳೆ: ೧೯೯೭,ಪು.೭೪)

ಇದು ಮಹಾರಾಷ್ಟ್ರದ ಕಥೆ, ಇದಕ್ಕಿಂತ ಹೊರತಾದ ಪರಿಸ್ಥಿತಿಯೇನೂ ಕರ್ನಾಟಕದಲ್ಲಿಲ್ಲ. ಕರ್ನಾಟಕದಲ್ಲಿಯೂ ಇದೇ ಪರಿಸ್ಥಿತಿ ಇದೆ. ಇಂದು ಕೊರಮ ಮತ್ತು ಪಾರ್ಧಿ ಸಮುದಾಯದ ಕೆಲವು ಬೆರಳೆಣಿಕೆಯಷ್ಟು ಜನ ಬಡ್ಡಿಗೆ ಹಣಕೊಡುವ ವ್ಯವಹಾರವನ್ನು ಮಾಡುತ್ತಾರೆ. ಸೆಟ್ಲಮೆಂಟಿನ ಆಚೆ ಬದುಕುವ ಸಮುದಾಯಗಳ ಕೆಲವು ಜನ ಇವರಿಂದ ಬಡ್ಡಿಗೆ ಹಣ ಪಡೆಯುತ್ತಾರೆ. ಹಣದ ವ್ಯವಹಾರದ ಆಚೆ ಅವರು ಇವರನ್ನು ಅಸ್ಪೃಶ್ಯರಾಗಿಯೇ ಕಾಣುತ್ತಾರೆ.

ಅನ್ಯ ಸಮುದಾಯಗಳು ಪ್ರಸ್ತುತ ಸಂದರ್ಭದಲ್ಲಿಯೂ ತಮ್ಮ ಅವಶ್ಯಕತೆಗಳಿಗೆ ತಕ್ಕಂತೆ ಸೆಟ್ಲಮೆಂಟಿನ ವಿಮುಕ್ತ ಬುಡಕಟ್ಟುಗಳನ್ನು ಬಳಸಿಕೊಳ್ಳುತ್ತಾರೆ. ಮುಖ್ಯವಾಗಿ ಹೊಡೆದಾಟ, ದೊಂಬಿ, ತಮಗೆ ಬೇಡಾದವರ ಮೇಲೆ ಹಲ್ಲೆ ನಡೆಸಲು ಈ ಸಮುದಾಯದ ಮುಗ್ಧ ಜನರನ್ನು ಬಳಕೆ ಮಾಡಿಕೊಳ್ಳುವುದನ್ನು ಕಾಣಬಹುದು.

ಇತ್ತೀಚೆಗೆ ಸೆಟ್ಲಮೆಂಟಿನ ವಿಮುಕ್ತ ಬುಡಕಟ್ಟುಗಳು ಪ್ರಜ್ಞಾವಂತಿಕೆಯನ್ನು ಬೆಳೆಸಿಕೊಳ್ಳುತ್ತಿವೆ. ಮೇಲ್ಜಾತಿ ವರ್ಗಗಳ ಆಮಿಷಗಳಿಗೆ ಬಲಿ ಬೀಳದೆ ಸ್ವತಂತ್ರವಾಗಿ ಬದುಕನ್ನು ರೂಪಿಸಿಕೊಳ್ಳುವ ಕಡೆ ಹೆಚ್ಚು ಆಸಕ್ತಿ ಹೊಂದಿರುವುದನ್ನು ಈ ಸಮುದಾಯಗಳನ್ನು ಹತ್ತಿರದಿಂದ ಕಂಡಾಗ ಅರಿವಾಗುತ್ತದೆ.

ಗ್ರಂಥಋಣ

೧. ಲಕ್ಷ್ಮಣ ಗಾಯಕವಾಡ್ (ಅನು) ಚಂದ್ರಕಾಂತ ಪೋಕಳೆ: ಉಚಲ್ಯಾ: ೧೯೯೭.

ಅಧ್ಯಾಯ ಹತ್ತು

ಸಮಾರೋಪ

ಸಮಸ್ಯೆಗಳು

ಫಲಿತಗಳು

ಸಲಹೆಗಳು

ಅಧ್ಯಾಯ ಹತ್ತು

ಸಮಾರೋಪ

ಭಾರತ ತುಂಬಾ ಸಂಕೀರ್ಣವಾದ ದೇಶ, ಇಲ್ಲಿ ಹಲವಾರು ಧಾರ್ಮಿಕ ಪಂಥಗಳು ಹೊಸ ಹೊಸ ಸಮುದಾಯಗಳು ಹುಟ್ಟಲು ಕಾರಣವಾಗಿದೆ. ಹಾಗೇ ಧಾರ್ಮಿಕ ಪಂಥದಷ್ಟೇ ಬಲಿಷ್ಟವಾದ ರಾಜಶಾಹಿ ವ್ಯವಸ್ಥೆಯೂ ಸಹಿತ ಹಲವು ಜಾತಿ ಸಮುದಾಯಗಳ ಹುಟ್ಟಿಗೆ ಕಾರಣವಾದುದನ್ನು ಚರಿತ್ರೆಯ ಮೂಲಕ ಅರಿತಿದ್ದೇವೆ.

ಒಂದು ಕಾಲಕ್ಕೆ ತಮ್ಮ ವೃತ್ತಿಗಳನ್ನು ಅನುಸರಿಸುತ್ತಾ ಅವುಗಳ ಉತ್ಪಾದಕತೆ ಮತ್ತು ವ್ಯವಹಾರಗಳನ್ನು ನಡೆಸುತ್ತಾ ವ್ಯವಸ್ಥೆಯೊಳಗೆ ಒಂದು ಗೌರವದ ಸ್ಥಾನವನ್ನು ಸಂಪಾದಿಸಿದ್ದವು. ತಾವು ಅನುಸರಿಸುವ ವೃತ್ತಿಗಳ ಕಾರಣಕ್ಕಾಗಿಯೇ ಅಧಮ, ಮಧ್ಯಮ, ಉತ್ತಮ ಎಂದು ನಿರ್ಧರಿತಗೊಳ್ಳತೊಡಗಿದವು. ಪಂಥಗಳು–ಪಂಗಡಗಳಾಗಿ, ಪಂಗಡಗಳೇ ಜಾತಿಗಳಾಗಿ ಪರಿವರ್ತಿತಗೊಂಡವು. ತಮ್ಮ ತಮ್ಮ ವೃತ್ತಿಗಳನ್ನು ಮಾಡುತ್ತಾ ನೆಮ್ಮದಿಯಾಗಿದ್ದ ಕುಶಲಕರ್ಮಿ ಆದಿವಾಸಿಗಳ ಶ್ರಮಶಕ್ತಿಯನ್ನು ರಾಜಶಾಹಿ ತನ್ನ ಉಪಯೋಗಕ್ಕೆ ಬಳಸಿಕೊಳ್ಳುವ ಚಾಣಾಕ್ಷತೆ ತೋರತೊಡಗಿತು. ಅಮಾಯಕ ಮುಗ್ಧ ಸಮುದಾಯಗಳು ರಾಜಶಾಹಿಯ ಆಮಿಷಗಳಿಗೆ ಸುಲಭವಾಗಿಯೇ ಬಲಿ ಬಿದ್ದವು. ಕೊನೆಗೊಂದು ದಿನ ರಾಜ ವ್ಯವಸ್ಥೆಯ ಅವನತಿಯಿಂದಾಗಿ ರಾಜಶಾಹಿಯನ್ನೇ ನಂಬಿದ್ದ ಬಹುಪಾಲು ಸಮುದಾಯಗಳು ನೆಲೆ ಕಳೆದುಕೊಂಡು ಕಾಡು ಸೇರುವಂತಾಯಿತು. ಕಾಡೇ ಇವರ ಬದುಕಾಯಿತು, ಕಾಡಿನಿಂದ ಕಾಡಿಗೆ ಅಲೆಯುತ್ತ ಅತಂತ್ರವಾಗಿಯಾದರೂ ಸ್ವತಂತ್ರವಾಗಿ ಬದುಕಿದ್ದ ಸಮುದಾಯಗಳಿಗೆ ರಕ್ತ ಬಿಜಾಸುರನಂತೆ ಕಾಡಿದ್ದು ಮಾತ್ರ ವಸಾಹತುಶಾಹಿ ಬ್ರಿಟಿಷ್ ಆಡಳಿತ. ಬ್ರಿಟಿಷ್ ಆಡಳಿತದಿಂದಾಗಿ ನಿರ್ಗತಿಕವಾದ ಸಮುದಾಯಗಳು ಕೊನೆಗೆ ತಮ್ಮ ಬದುಕಿಗೆ ಮುಳುವಾದ ವ್ಯವಸ್ಥೆಯ ವಿರುದ್ಧವೇ ತಿರುಗಿಬಿದ್ದವು. ಆದರೆ ಆ ವ್ಯವಸ್ಥೆಯನ್ನು ಎದುರಿಸುವಷ್ಟು ಬಲ ಮತ್ತು ಒಗ್ಗೂಡುವಿಕೆಯ ಶಕ್ತಿ ಈ ಸಮುದಾಯಗಳಿಗಿರಲಿಲ್ಲ. ಈ ಸಮುದಾಯಗಳನ್ನು ತಮ್ಮ ಹಿಡಿತದಲ್ಲಿರಿಸಿಕೊಳ್ಳಲು

ಪ್ರಾಯಶಃ ಬ್ರಿಟೀಷರು ಒಡೆದು ಆಳುವ ನೀತಿಯನ್ನೇ ಅನುಸರಿಸಿದರೆನಿಸುತ್ತದೆ. ಯಾವ ಸಮುದಾಯವನ್ನು ಅಪರಾಧಿ ಬುಡಕಟ್ಟು ಎಂದು ಪರಿಗಣಿಸಬೇಕಾಗಿತ್ತೋ ಅಂತಹ ಸಮುದಾಯದಲ್ಲಿಯೇ ಒಬ್ಬನಿಗೆ ಪೋಲೀಸೋ, ಚೌಕೀದಾರನೋ, ಧಫೇದಾರನಂತಹ ಕನಿಷ್ಟ ಕೆಲಸಗಳನ್ನು ಕೊಟ್ಟು ಅವರ ಸಮುದಾಯದ ಮಾಹಿತಿಗಳನ್ನು ಅವರಿಂದಲೇ ಪಡೆಯುತ್ತಿದ್ದರು. ಕೊನೆಗೆ ಆ ಸಮುದಾಯದ ಜನರನ್ನು ಸ್ಥಳೀಯರ ಸಹಾಯದಿಂದ ಅಪರಾಧಿ ಬುಡಕಟ್ಟೆಂಬ ಪಟ್ಟ ಕಟ್ಟಿ ತಾವು ರೂಪಿಸಿದ ಸೆಟ್ಲಮೆಂಟ್‌ಗಳಿಗೆ ತಂದು ಕೂಡಿ ಹಾಕುತ್ತಿದ್ದರು. ಪಂಗಡ ಪಂಗಡಗಳಾಗಿ ಪ್ರತ್ಯೇಕವಾಗಿ ಕಾಡಿನಲ್ಲಿ ಜೀವಿಸುತ್ತಿದ್ದ ಅಲೆಮಾರಿ ಬುಡಕಟ್ಟುಗಳನ್ನು ಒಂದೇ ಕಡೆಗೆ ಕೂಡಿ ಹಾಕುವುದಷ್ಟೇ ಅಲ್ಲ. ತಮ್ಮ ಅವಶ್ಯಕತೆಗಳನ್ನು ಪೂರೈಸುವ ಜೀತದ ಆಳುಗಳಾಗಿಸಿಕೊಂಡರು. ಹೀಗೆ (೧೯೪೭ರವರೆಗೆ) ತಾವು ಭಾರತ ಬಿಟ್ಟು ಹೋಗುವವರೆಗೂ ಈ ಬುಡಕಟ್ಟುಗಳನ್ನು ಬ್ರಿಟೀಷರು ದುಡಿಸಿಕೊಂಡರು. ತರುವಾಯ ಐದು ವರ್ಷಗಳವರೆಗೆ ಸ್ವತಂತ್ರ ಭಾರತದ ಅಧಿಕಾರಿಗಳು ಅವರನ್ನು ಬ್ರಿಟಿಷ್ ರೀತಿಯಲ್ಲಿಯೇ ನಡೆಸಿಕೊಂಡರು. ೧೯೫೨ಕ್ಕೆ ಅಪರಾಧಿ ಬುಡಕಟ್ಟುಗಳು ವಿಮುಕ್ತವಾದವು. ಆದರೆ ವಿಮುಕ್ತ ಬುಡಕಟ್ಟುಗಳ ಪರಿಸ್ಥಿತಿ ಬದಲಾಗಲಿಲ್ಲ.

ದೇಶಕ್ಕೇನೋ ಸ್ವಾತಂತ್ರ್ಯ ಸಿಕ್ಕಿತು. ಆದರೆ ವಿಮುಕ್ತ ಬುಡಕಟ್ಟುಗಳಿಗೆ ಸ್ವಾತಂತ್ರ್ಯ ಸಿಗಲಿಲ್ಲ. ಇಂದಿಗೂ ಈ ಸಮುದಾಯಗಳನ್ನು ಬ್ರಿಟೀಷ್ ಅಧಿಕಾರಿಗಳ ದೃಷ್ಟಿಕೋನದಲ್ಲಿಯೇ ಇಲ್ಲಿನ ಪೋಲೀಷರು, ಮೇಲ್ವರ್ಗದ ಜನ ನೋಡುತ್ತಾರೆ. ಸೆಟ್ಲಮೆಂಟ್‌ಗಳ ಮೇಲ್ವಿಚಾರಣೆ ನಡೆಸುತ್ತಿದ್ದ, ಭಾರತವನ್ನು ಆಳುತ್ತಿದ್ದ ಬ್ರಿಟಿಷರಿಗೆ ಅಲ್ಪ ಸ್ವಲ್ಪವಾದರೂ ಮನುಷ್ಯತ್ವವಿದ್ದಿರಬಹುದು. ನಮ್ಮವರಿಗೆ ಅದೂ ಇಲ್ಲ ಎಂದು ಹಿರಿಯ ವಕ್ತೃವೊಬ್ಬರು ಕ್ಷೇತ್ರಕಾರ್ಯದಲ್ಲಿ ತಿಳಿಸಿದರು. ಅಂದರೆ ಸ್ವತಂತ್ರ ಭಾರತದಲ್ಲಿ ಅವರೆಷ್ಟು ನೋವು ಅನುಭವಿಸಿದ್ದಾರೆಂಬುದು ಅವರ ಮನದಾಳದ ಮಾತುಗಳೇ ತಿಳಿಸಿಕೊಡುತ್ತವೆ.

ಪ್ರಸ್ತುತ ಈ ಅಧ್ಯಯನದಲ್ಲಿ ಕರ್ನಾಟಕದ ಸೆಟ್ಲಮೆಂಟ್‌ಗಳಲ್ಲಿ ವಾಸಿಸುವ ವಿಮುಕ್ತ ಬುಡಕಟ್ಟುಗಳ ಪರಿಸ್ಥಿತಿ ಹೇಗಿದೆ, ಅವುಗಳಿಗೆ ಏನು ಕಾಯಕಲ್ಪ ಒದಗಿಸಬಹುದು ಎಂದು ನೋಡಲು ಪ್ರಯತ್ನಿಸಲಾಗಿದೆ. ಈ ಅಧ್ಯಯನದಿಂದ ಸೆಟ್ಲಮೆಂಟ್‌ನ ವಿಮುಕ್ತ ಬುಡಕಟ್ಟುಗಳಿಗೆ ಕಿಂಚಿತ್ತಾದರೂ ಸಹಾಯವಾದೀತೆಂಬ ಆಶಯವನ್ನು ಈ ಅಧ್ಯಯನವು ಹೊಂದಿದೆ.

ಇಂದು ಕರ್ನಾಟಕದಲ್ಲಿರುವ ಒಟ್ಟು ಸೆಟ್ಲಮೆಂಟಿನಲ್ಲಿ ಕೇವಲ ಆರು ಸಮುದಾಯಗಳು ಮಾತ್ರ ಸೆಟ್ಲಮೆಂಟ್‌ಗಳಲ್ಲಿ ನೆಲೆಸಿವೆ. ಅವರಲ್ಲೂ ಬೋವಿ/ವಡ್ಡರ ಸಮುದಾಯ ಹುಬ್ಬಳ್ಳಿ ಸೆಂಟ್ಲಿಮೆಂಟ್‌ನಲ್ಲಿ ಮಾತ್ರ ನೆಲೆನಿಂತಿದೆ. ಬಹುತೇಕ ಎಲ್ಲಾ ಸೆಟ್ಲಮೆಂಟ್‌ಗಳಲ್ಲಿ ನೆಲೆಸಿದ ಸಮುದಾಯಗಳು ಗಂಟಿಚೋರ್ ಮತ್ತು ಪಾರ್ಧಿಗಳಾಗಿವೆ. ಅದರಲ್ಲೂ ಸೆಟ್ಲಮೆಂಟಿನಲ್ಲಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಸಮುದಾಯ ಪಾರ್ಧಿಯೇ ಆಗಿದೆ.

ಸೆಟ್ಲಮೆಂಟ್ ವಾಸಿಗಳಲ್ಲಿಯೇ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅತೀ ಕೆಳಹಂತದಲ್ಲಿರುವ ಸಮುದಾಯ ಪಾರ್ಧಿಗಳದ್ದೇ ಆಗಿದ್ದೆ. ಇಂದಿಗೂ ಸೆಟ್ಲಮೆಂಟಿನ ಸಮುದಾಯಗಳ ಸಾಮಾಜಿಕಾರ್ಥಿಕ

ಸ್ಥಿತಿ-ಗತಿಗಳಲ್ಲಿ ಯಾವ ಬದಲಾವಣೆಗಳಾಗಿಲ್ಲ. ಅಲ್ಪ ಸ್ವಲ್ಪವಾಗಿ ಅಕ್ಷರ ಕಲಿಯುವುದಕ್ಕೆ ಈಗಿನ ಮಕ್ಕಳು ಶಾಲೆಗೆ ಹೋಗುತ್ತಿವೆಯಾದರೂ ಮಧ್ಯದಲ್ಲಿಯೇ ಶಾಲೆ ಬಿಡುವ ಮಕ್ಕಳ ಪ್ರಮಾಣ ಸೆಟ್ಲಮೆಂಟಿನಲ್ಲಿ ಹೆಚ್ಚಾಗಿದೆ. ರಾಜಕೀಯವಾಗಿ ಬೆಳೆಯಲು ಸೆಟಲಮೆಂಟನ ಈ ಸಮುದಾಯಗಳಿಗೆ ಇನ್ನೂ ಎಷ್ಟು ಶತಮಾನಗಳು ಬೇಕಾಗುತ್ತದೋ ಯಾರಿಗೆ ಗೊತ್ತು.

ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಇನ್ನೂ ಹೀನಾಯ ಸ್ಥಿತಿಯಲ್ಲಿರುವ, ಇಂದಿಗೂ ಅವಮಾನಿತ ಬದುಕನ್ನೇ ನಡೆಸುತ್ತಿರುವ ವಿಮುಕ್ತ ಬುಡಕಟ್ಟುಗಳು ಇನ್ನಾದರೂ ಸಂಘಟನಾತ್ಮಕವಾಗಿ ವ್ಯವಸ್ಥೆಯ ವಿರುದ್ಧ ಧ್ವನಿ ತೆಗೆಯಬಲ್ಲವೇನೋ ಕಾದು ನೋಡಬೇಕಾಗಿದೆ.

ಸೆಟ್ಲಮೆಂಟಿನ ವಿಮುಕ್ತ ಬುಡಕಟ್ಟುಗಳು ಎದುರಿಸುತ್ತಿರುವ ಸಮಸ್ಯೆಗಳು

ಸ್ವಾತಂತ್ರ್ಯ ಪೂರ್ವದ ಬ್ರಿಟೀಷ್ ಆಡಳಿತಾವಧಿಯಲ್ಲಿ ಕರ್ನಾಟಕ ಸೆಟ್ಲಮೆಂಟ್‌ಗಳಲ್ಲಿ ಒಟ್ಟು ೨೪ ಸಮುದಾಯಗಳನ್ನು ಕೂಡಿ ಹಾಕಿದ್ದರು. ೧೯೫೨ರ ಕಾಯ್ದೆ ತರುವಾಯ ೫೦ ರಿಂದ ೭೦ರ ದಶಕದೊಳಗೆ ಸುಮಾರು ೧೮ ಸಮುದಾಯಗಳು ತಮ್ಮ ಹೊಟ್ಟೆ ಪಾಡಿಗಾಗಿಯೇ ಅಥವಾ ಸೆಟ್ಲಮೆಂಟಿನಲ್ಲಿ ನೆಲೆಸುವುದರಿಂದ ತಮ್ಮನ್ನು ತುಂಬಾ ಕೀಳಾಗಿ ಕಾಣುತ್ತಾರೆ ಎಂಬ ಭಾವನೆಯಿಂದಲೋ ಸುಮಾರು ೧೮ ಸಮುದಾಯಗಳು ಹಾಗೂ ಈಗ ನೆಲೆಸಿರುವ ಸಮುದಾಯಗಳಲ್ಲಿ ಬಹಳಷ್ಟು ಕುಟುಂಬಗಳು ಸೆಟ್ಲಮೆಂಟನ್ನು ತೊರೆದು ಬೇರೆ ಬೇರೆ ಕಡೆ ಹೋಗಿ ನೆಲೆಸಿದರು. ಆದರೆ ಭೋವಿ, ಗಂಟಿಚೋರ, ಕಂಜರಭಾಟ್, ಪಾರ್ಧಿ ಚಪ್ಪರಬಂದ, ಕೊರಮ ಸಮುದಾಯಗಳ ಬಹುಪಾಲು ಕುಟುಂಬಗಳು ತಮ್ಮ ಪೂರ್ವಜರನ್ನು ಕೂಡಿ ಹಾಕಿದ್ದ ಸೆಟ್ಲಮೆಂಟಿನಲ್ಲಿಯೇ ನೆಲೆಸಿವೆ. ಈ ಕುಟುಂಬಗಳು ಸೆಟ್ಲಮೆಂಟಿನಲ್ಲಿ ಇಂದಿಗೂ ನೆಲೆಸಲು ಇರುವ ಕಾರಣಗಳೆಂದರೆ,

- ಇವರಿಗೆ ಬ್ರಿಟೀಷ್ ಆಡಳಿತದಲ್ಲಿಯೇ ಉಚಿತವಾಗಿ ನಿವೇಶಗಳನ್ನು ಹಂಚಲಾಗಿತ್ತು.
- ಕೆಲವು ಕುಟುಂಬಗಳಿಗೆ ಸೆಟ್ಲಮೆಂಟಿಗೆ ಹತ್ತಿರದಲ್ಲಿಯೇ ಕೃಷಿಗೆ ಅವಶ್ಯಕವಾದ ಭೂಮಿಯನ್ನು ನೀಡಲಾಗಿತ್ತು.

ಹೀಗಾಗಿ ಹುಬ್ಬಳ್ಳಿ, ಗದಗ, ಬಿಜಾಪುರದಂತಹ ನಗರಗಳಲ್ಲಿ ನೆಲೆಸಿರುವ ಸೆಟ್ಲಮೆಂಟ್ ವಾಸಿ ವಿಮುಕ್ತ ಬುಡಕಟ್ಟುಗಳು ತಮ್ಮ ಪೂರ್ವಜರು ನೆಲೆಸಿದ ಮನೆ, ಭೂಮಿಗಳನ್ನು ಬಿಟ್ಟು ಹೋಗಲಾರದೆ ಅಲ್ಲಿಯೇ ನೆಲೆಸಿದ್ದಾರೆ.

ಆದರೆ ಸೆಟ್ಲಮೆಂಟಿನಲ್ಲಿ ನೆಲೆಸಿದ ಕುಟುಂಬಗಳು ಕಾಲಕಾಲಕ್ಕೆ ದೊಡ್ಡದಾಗುತ್ತಾ ಸಾಗಿದವು. ಹೀಗಾಗಿ ಒಂದು ಕುಟುಂಬವಿದ್ದದ್ದು ಇಂದು ನಾನಾ ಕುಟುಂಬಗಳಾಗಿ ಬೆಳವಣಿಗೆ ಹೊಂದಿವೆ. ಅಂತಹ ಕುಟುಂಬಗಳಿಗೆ ಪೂರ್ವಜರ ಒಂದು ನಿವೇಶನ ಅಥವಾ ಮನೆ ಸಾಲದು. ಇಂದಿಗೂ ಗದಗ ನಗರದ ಸೆಟ್ಲಮೆಂಟ್ ಪ್ರದೇಶದಲ್ಲಿ ಚಪ್ಪರಬಂದ ಸಮುದಾಯದವರಲ್ಲಿ ೧೦ರಿಂದ೨೦ ಅಡಿ ಅಳತೆಯ ಮನೆಯಲ್ಲಿ ೩-೪ ಕುಟುಂಬಗಳು ಜೀವನ ನಿರ್ವಹಣೆ ಮಾಡುವಂತಾಗಿದೆ. ಇದು ಕೇವಲ ಚಪ್ಪರಬಂದ ಸಮುದಾಯದ ಸಮಸ್ಯೆಯೊಂದೇ ಅಲ್ಲ. ಸೆಟ್ಲಮೆಂಟ್‌ಗಳ ಇತರ ಸಮುದಾಯಗಳ ಸಮಸ್ಯೆಯೂ ಇದೇ ಆಗಿದೆ.

ಕ್ಷೇತ್ರಕಾರ್ಯಕ್ಕೆ ಹೋದಾಗ ಸೆಟ್ಲಮೆಂಟ್ ಜನ ತಮಗೆ ನಿವೇಶನ ಮತ್ತು ಸರ್ಕಾರಿ ಮನೆಗಳನ್ನು ದಯಪಾಲಿಸಲೆಂದು ಬಂದ ಸರ್ಕಾರಿ ಅಧಿಕಾರಿಗಳೆಂದು ತಿಳಿದು, ತಮಗೆ ಮನೆ ಇಲ್ಲ, ನಿವೇಶನವಿಲ್ಲ, ನಿವೇಶನ ಕೊಡಿ, ಮನೆ ಕೊಡಿ ಎಂಬ ಅರ್ಜಿಗಳನ್ನು ತಂದು ನಮಗೊಪ್ಪಿಸಲು ಬಂದರು. ಇದರಿಂದಾಗಿ ಸೆಟ್ಲಮೆಂಟ್ ಜನ ಕುಟುಂಬದ ಗಾತ್ರಕ್ಕೆ ತಕ್ಕಂತೆ ಮನೆಗಳನ್ನು ಹೊಂದದೇ ಇರುವುದು ಕಂಡು ಬಂದಿತು.

ಸೆಟ್ಲಮೆಂಟಿನ ಎಷ್ಟೋ ಸಮುದಾಯಗಳು ಇಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಪಟ್ಟಿಯಲ್ಲಿ ಬರುವವಾದರೂ ಇನ್ನೂ ಆ ಪಟ್ಟಿಯಿಂದ ಹೊರಗುಳಿದ ಸಮುದಾಯಗಳು ಸಾಕಷ್ಟಿವೆ. ಮೀಸಲಾತಿ ಪಡೆಯುವ ಸಮುದಾಯಗಳಿಗಿಂತ ಮೀಸಲಾತಿ ಪಡೆಯದ ಸಮುದಾಯಗಳ ಸ್ಥಿತಿ ತುಂಬಾ ಹೀನಾಯವಾಗಿದೆ.

ಆರೋಗ್ಯಕ್ಕೆ ಸಂಬಂಧಿಸಿದಂತೆ ಬ್ರಿಟಿಷ್ ಸರ್ಕಾರವು ನೇರವಾಗಿ ಅಪರಾಧಿ ಬುಡಕಟ್ಟುಗಳ ಕುರಿತು ಕಾಳಜಿ ವಹಿಸುತ್ತಿತ್ತು ಇಲ್ಲವೆ ಸ್ವಯಂ ಸೇವಾ ಸಂಘಗಳು ಅಥವಾ ಮಿಷನರಿಗಳ ಮೂಲಕ ಅಪರಾಧಿ ಬುಡಕಟ್ಟುಗಳ ಆರೋಗ್ಯ ತಪಾಸಣೆ, ಅವರಿಗಾಗಿ ಸೆಟ್ಲಮೆಂಟಿಗೆ ಹೊಂದಿಕೊಂಡಂತೆಯೇ ಆಸ್ಪತ್ರೆಗಳನ್ನು ತೆರೆದಿದ್ದಿತು. ಆದರೆ ಸ್ವಾತಂತ್ರ್ಯ ನಂತರ ಆ ಆಸ್ಪತ್ರೆಗಳು ಸ್ಥಳೀಯ ರಾಜ್ಯ ಸರ್ಕಾರದ ಆಡಳಿತಕ್ಕೆ ಒಳಪಟ್ಟವು. ಉದಾಹರಣೆಗೆ ಗದಗಿನಲ್ಲಿ ಬ್ರಿಟಿಷರು ಹುಟ್ಟು ಹಾಕಿದ ಆಸ್ಪತ್ರೆ ಇಂದು ಆಯುರ್ವೇದ ಆಸ್ಪತ್ರೆಯಾಗಿ ಮಾರ್ಪಟ್ಟಿದೆ. ಆದರೆ ಈ ಆಸ್ಪತ್ರೆಯಲ್ಲಿ ಸಿಬ್ಬಂದಿಯ ಕೊರತೆ ಹಾಗೂ ಮೂಲಭೂತ ಸೌಲಭ್ಯಗಳ ಕೊರತೆ ಇದೆ. ಸೆಟ್ಲಮೆಂಟಿನ ಇಡೀ ಜನಕ್ಕೆ ಈ ಆಸ್ಪತ್ರೆ ಏನೇನೂ ಸಾಲದು. ಇಂದು ಈ ಆಸ್ಪತ್ರೆ ಹೆಸರಿಗೆ ಮಾತ್ರ ಆಸ್ಪತ್ರೆಯಾಗಿ ಉಳಿದಿದೆ. ಇಂಥದ್ದೇ ಸ್ಥಿತಿ (ಆಸ್ಪತ್ರೆಗಳಿಗೆ ಸಂಬಂಧಿಸಿದಂತೆ)ಗಿಂತ ಬೇರೆ ಸೆಟ್ಲಮೆಂಟ್‌ಗಳು ಹೊರತಾಗಿಲ್ಲ.

ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಿಂದೆ ಬ್ರಿಟಿಷ್ ಸರ್ಕಾರವು ಪ್ರತಿ ಸೆಟ್ಲಮೆಂಟಿನೊಳಗೆ ಬಾಲಕ, ಬಾಲಕಿಯರ ಶಾಲೆಗಳನ್ನು ತೆರೆದಿದ್ದಿತು. ಸ್ವಾತಂತ್ರ್ಯಾನಂತರ ಆ ಶಾಲೆಗಳು ಸ್ಥಳೀಯ ಸರ್ಕಾರಗಳ ಹಿಡಿತಕ್ಕೆ ಬಂದವು. ಇಂದಿಗೂ ಈ ಶಾಲೆಗಳು ಸೆಟ್ಲಮೆಂಟ್ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಜೊತೆಗೆ ಇತರೆ ಸಂಘ ಸಂಸ್ಥೆಗಳು ಸೆಟ್ಲಮೆಂಟ್ ಪ್ರದೇಶಗಳಲ್ಲಿ ಬಂದು ತಮ್ಮ ಖಾಸಗಿ ಶಾಲೆಗಳನ್ನು ಪ್ರಾರಂಭಿಸಿವೆ. ಆದರೂ ಸೆಟ್ಲಮೆಂಟ್ ಜನರ ಸಾಕ್ಷರತಾ ಮಟ್ಟ ನಿರೀಕ್ಷಿತ ಮಟ್ಟ ತಲುಪಲು ಸಾಧ್ಯವಾಗಿಲ್ಲ. ಇಂದಿಗೂ ಸರ್ಕಾರ ಕಡ್ಡಾಯ ಶಿಕ್ಷಣ, ಸರ್ವಶಿಕ್ಷಣ ಅಭಿಯಾನ, ಬಿಸಿಯೂಟ ಮುಂತಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ಶಾಲೆಗೆ ಮಕ್ಕಳು ಹಾಜರಾಗುವಂತೆ ಮಕ್ಕಳು ಹಾಗೂ ಪಾಲಕರಿಗೆ ನಾನಾ ಆಕರ್ಷಣೆಗಳನ್ನು ಒಡ್ಡುತ್ತಿದೆ. ಆದರೂ ಆ ಯೋಜನೆಗಳು ವಿಮುಕ್ತ ಬುಡಕಟ್ಟುಗಳನ್ನು ನಿರೀಕ್ಷಿತ ಮಟ್ಟದಲ್ಲಿ ಸಾಕ್ಷರರನ್ನಾಗಿಸುವಲ್ಲಿ ಸೋತಿವೆ.

೧೯೫೨ರಲ್ಲಿ ಅಪರಾಧಿ ಬುಡಕಟ್ಟುಗಳು ವಿಮುಕ್ತಗೊಂಡರೂ ಪೋಲೀಸ್ ಇಲಾಖೆ ಮತ್ತು ಅಬಕಾರಿ ಇಲಾಖೆಗಳ ದೃಷ್ಟಿಯಲ್ಲಿ ಈ ಸಮುದಾಯಗಳು ಇಂದಿಗೂ ಅಪರಾಧಿಗಳಾಗಿಯೇ ಗೋಚರಿಸುತ್ತಿವೆ.

ಸಮಾಜದ ಇತರ ಸಮುದಾಯಗಳು ಮತ್ತು ಈ ಇಲಾಖೆಗಳು ಸೆಟ್ಲಮೆಂಟ್ ಜನರನ್ನು ಮನುಷ್ಯರಿಗಿಂತ ಭಿನ್ನವಾದವರು ಎಂಬ ರೀತಿಯಲ್ಲಿಯೇ ನಡೆದುಕೊಳ್ಳುತ್ತಿವೆ ಮತ್ತು ಅವರನ್ನು ಅಪರಾಧಿಗಳಂತೆಯೇ ನಡೆಸಿಕೊಳ್ಳುತ್ತಿವೆ.

ಪ್ರತಿಯೊಬ್ಬ ಮಾನವರಿಗೂ ಮೂಲಭೂತ ಅವಶ್ಯಕತೆಗಳಾದ ಆಹಾರ, ಶಿಕ್ಷಣ, ಆರೋಗ್ಯ, ವಸತಿಗಳು ಅವಶ್ಯಕವಾಗಬೇಕು. ಮುಖ್ಯವಾಗಿ ಮನುಷ್ಯ ಜೀವಿಸಲು ಅವಶ್ಯಕವಾದ ಆಹಾರ ಮತ್ತು ನೀರು ಅಗತ್ಯವಾಗಿ ಬೇಕು. ಇಂದು ಬಹುತೇಕ ಸೆಟ್ಲಮೆಂಟ್‌ಗಳಲ್ಲಿ ವಾರಕ್ಕೊಮ್ಮೆ ಕುಡಿಯುವ ನೀರು ಬಿಡಲಾಗುತ್ತದೆ. ಹಿಂದೆ ಬ್ರಿಟಿಷರ ಕಾಲಕ್ಕಿದ್ದ ಬಾವಿಗಳು ಇಂದು ಮುಚ್ಚಿ ಹೋಗಿವೆ ಮತ್ತು ಅಂತರ್ಜಲದ ಕೊರತೆಯಿಂದ ಬತ್ತಿ ಹೋಗಿವೆ. ಅವಶ್ಯಕವಾದ ನೀರಿನ ಸೌಲಭ್ಯವೂ ಈ ಸೆಟ್ಲಮೆಂಟ್‌ಗಳಿಗಿಲ್ಲ. ಇಂದು ಆಹಾರ ಪದಾರ್ಥಗಳ ಬೆಲೆ ದಿನದಿಂದ ದಿನಕ್ಕೆ ಗಗನಕ್ಕೇರುತ್ತಿವೆ. ಆದರೆ ಅವರಲ್ಲಿ ಶೇ. ೫೦ರಷ್ಟು ಜನಕ್ಕೆ ಬಿ.ಪಿ.ಎಲ್. ರೇಷನ್ ಕಾರ್ಡ್ ಇಲ್ಲವಾಗಿದೆ. ಕೇವಲ ಬಿಪಿಎಲ್ ಮಾತ್ರವಲ್ಲ, ಅವಶ್ಯಕವಾದ ರೇಷನ್ ಕಾರ್ಡ್ ದೊರಕಿಸಿಕೊಳ್ಳಲು ಸೆಟ್ಲಮೆಂಟ್‌ನ ಬಹುಪಾಲು ಜನರಿಗೆ ಸಾಧ್ಯವಾಗಿಲ್ಲ.

ಬಾಗಲಕೋಟ, ಗದಗ, ಹುಬ್ಬಳ್ಳಿ ಸೆಟ್ಲಮೆಂಟಗಳಲ್ಲಿ ನ್ಯಾಯ ಬೆಲೆ ಅಂಗಡಿಗಳು ಇದ್ದರೂ ಅವುಗಳನ್ನು ಸೆಟ್ಲಮೆಂಟಿನ ಹೊರಗಿನ ಜನರೇ ನಡೆಸಿಕೊಂಡು ಹೋಗುತ್ತಿದ್ದಾರೆ. ಆದರೆ ಸೆಟ್ಲಮೆಂಟ್ ಜನಗಳಿಗೆ ನ್ಯಾಯ ಬೆಲೆ ಅಂಗಡಿಗಳು ದೊರೆಯದೇ ಹೋಗಿವೆ.

- ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿಶೇಷ ಅನುದಾನಗಳನ್ನು ಬಿಡುಗಡೆ ಮಾಡುತ್ತಿವೆ. ಆದರೆ ವಿಶೇಷ ಪ್ಯಾಕೇಜ್‌ಗಳು ಸೆಟ್ಲಮೆಂಟ್ ಸಮುದಾಯಗಳಿಗೆ ಸಿಗದೇ ಹೋಗುತ್ತಿದೆ. ಸಾಮಾನ್ಯವಾಗಿ ಅವುಗಳಲ್ಲಿ ಕೆಲವನ್ನು ಮುಖ್ಯವಾಹಿನಿಯಲ್ಲಿರುವ ಪರಿಶಿಷ್ಟಜಾತಿ-ಪರಿಶಿಷ್ಟಪಂಗಡಗಳು ಪಡೆಯುತ್ತಿವೆ. ಬಹುತೇಕ ಅನುದಾನಗಳು ಎಷ್ಟೋ ಸಾರಿ ಸದುಪಯೋಗಗೊಳ್ಳುವುದೇ ಇಲ್ಲ.
- ಸ್ವಾತಂತ್ರ್ಯಪೂರ್ವದ ಬ್ರಿಟಿಷ್ ಆಡಳಿತ ಕಾಲದಲ್ಲಿ ಕೂಲಿ ಅಥವಾ ಇನ್ನಾವುದೇ ಕೆಲಸವಾಗಲಿ ಇತ್ತು. ಮುಖ್ಯವಾಗಿ ತಮ್ಮ ಅವಶ್ಯಕತೆಗನುಗುಣವಾಗಿ ಸೆಟ್ಲಮೆಂಟ್ ಜನಕ್ಕೆ ವೃತ್ತಿ ಕೌಶಲ್ಯಗಳ ತರಬೇತಿ ನೀಡಲಾಗುತ್ತಿತ್ತು. ಆದರೆ ಬ್ರಿಟಿಷ್ ನಂತರದ ಸ್ವತಂತ್ರ ಭಾರತದಲ್ಲಿ ಆ ರೀತಿಯ ವೃತ್ತಿ ಕೌಶಲ್ಯಗಳನ್ನು ನೀಡುವ ತರಬೇತಿ ಕೇಂದ್ರಗಳನ್ನು ಮುಚ್ಚಲಾಯಿತು. ಇಂದು ಸೆಟ್ಲಮೆಂಟ್ ಜನರಿಗೆ ವೃತ್ತಿ ಕೌಶಲ್ಯಗಳನ್ನು ನೀಡಲಾಗುತ್ತಿಲ್ಲ. ಇತ್ತೀಚಿನ ಹುಡುಗರು ವೃತ್ತಿ ಕೌಶಲ್ಯಗಳನ್ನು ಸರಿಯಾಗಿ ಕಲಿಯದೇ ಇರುವುದುರಿಂದ ಇವರಿಗೆ ಕಟ್ಟಡ, ಬಡಿಗೆತನ ಇತ್ಯಾದಿ ಕೆಲಸ ನಿರ್ವಹಿಸುವುದು ಕಷ್ಟವಾಗಿದೆ. ಜೊತೆಗೆ ಶಿಕ್ಷಣದ ಕೊರತೆಯೂ ಇವರಲ್ಲಿರುವುದರಿಂದ ಬಹುತೇಕ ಸೆಟ್ಲಮೆಂಟ್ ಜನ ನಿರ್ದಿಷ್ಟ ಉದ್ಯೋಗವಿಲ್ಲದೆ ಅತಂತ್ರ ಸ್ಥಿತಿ ಅನುಭವಿಸುವಂತಾಗಿದೆ.
- ಸೆಟ್ಲಮೆಂಟ್‌ಗಳಿಗೆ ಮೂಲಭೂತ ಸೌಲಭ್ಯಗಳಾದ ನೀರು, ಚರಂಡಿ, ಆಸ್ಪತ್ರೆ, ಶೌಚಾಲಯಗಳ ಕೊರತೆ ಅಧಿಕವಾಗಿದೆ. ಆದರೆ ಸೆಟ್ಲಮೆಂಟಿನ ಜನಸಂಖ್ಯೆ ಮಾತ್ರ ವರ್ಷದಿಂದ ವರ್ಷಕ್ಕೆ ಬೆಳೆಯುತ್ತಲೇ

ಇದೆ. ಸೆಟ್ಲಮೆಂಟಿನ ಜನಸಂಖ್ಯೆಗೆ ಸಮಾನ ಅನುಪಾತದಲ್ಲಿ ಸೌಲಭ್ಯಗಳು ದೊರೆಯುತ್ತಿಲ್ಲ. ನಿರ್ಮಲ ಕರ್ನಾಟಕ ಯೋಜನೆಯಡಿ ವೈಯಕ್ತಿಕ ಶೌಚಾಲಯಗಳನ್ನು ನೀಡಲಾಗಿದೆಯಾದರೂ ಅವು ಎಲ್ಲಾ ಸಮುದಾಯಗಳಿಗೆ ದೊರೆಯಲು ಸಾಧ್ಯವಾಗಿಲ್ಲ. ಅಕಸ್ಮಾತ್ ಅವುಗಳನ್ನು ನಿರ್ಮಿಸಿದರೂ ಅವುಗಳನ್ನು ಸಮರ್ಪಕವಾಗಿ ನಿರ್ಮಿಸಿರುವುದಿಲ್ಲ. ಹೀಗಾಗಿ ಸರಿಯಾಗಿ ವಾಸಕ್ಕೆ ಯೋಗ್ಯವಿರದ ಮನೆಗಳಲ್ಲಿ ವಾಸಿಸುತ್ತಿರುವ ಪಾರ್ಧಿಗಳು ನಿರ್ಮಲ ಕರ್ನಾಟಕ ಯೋಜನೆಯಡಿಯಲ್ಲಿ ದೊರೆತ ಶೌಚಾಲಯಗಳನ್ನು ಅಡುಗೆ ಮಾಡುವ ಅಡುಗೆ ಮನೆಯಾಗಿಯೋ, ಸ್ನಾನದ ಕೋಣೆಯಾಗಿಯೋ ಇಲ್ಲವೇ ಉರವಲು ಸೌದೆ, ಕುಳ್ಳುಗಳನ್ನು ಇರಿಸುವ ಸ್ಥಳವಾಗಿಯೋ ಬಳಸಿಕೊಳ್ಳುತ್ತಿರುವುದು ಕಂಡು ಬರುತ್ತದೆ. ಸಾಮೂಹಿಕ ಶೌಚಾಲಯಗಳನ್ನು ಸೆಟ್ಲಮೆಂಟಿನಲ್ಲಿ ಕಾಣಬಹುದಾದರೂ ಅವುಗಳ ಬಳಕೆಯೂ ಸಮರ್ಪಕವಾಗಿ ಆಗುತ್ತಿಲ್ಲ. ಮುಖ್ಯವಾಗಿ ಸಾಮೂಹಿಕ ಶೌಚಾಲಯಗಳು ಸ್ವಚ್ಛತೆಯ ಕೊರತೆಯನ್ನು ಅನುಭವಿಸುತ್ತಿವೆ.

- ಭೋವಿ, ಚಪ್ಪರಬಂದ ಸಮುದಾಯಗಳು ಕ್ರಮವಾಗಿ ಪರಿಶಿಷ್ಟ ಜಾತಿ ಮತ್ತು ಪ್ರವರ್ಗ-೧ರಲ್ಲಿ ಬರುತ್ತವೆ. ಇಂದು ಬಹಳಷ್ಟಿಲ್ಲದಿದ್ದರೂ ಕೆಲವರಾದರೂ ತಾವು ಭೋವಿಗಳಲ್ಲದೆ ಇದ್ದರೂ ಭೋವಿಗಳೆಂದು ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ತೆಗೆದುಕೊಳ್ಳುತ್ತಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳಿದುಬಂದಿತು. ಅದೇ ರೀತಿಯಾಗಿ ಎಷ್ಟೋ ಇತರ ಜಾತಿ ಮತ್ತು ಇತರ ಧರ್ಮೀಯರು ಚಪ್ಪರಬಂದ ಹೆಸರಿನಲ್ಲಿ ಪ್ರವರ್ಗ-೧ರ ಮೀಸಲಾತಿ ಸೌಲಭ್ಯಗಳನ್ನು ಪಡೆಯುತ್ತಿರುವುದು ತಿಳಿದು ಬಂದಿತು. ನ್ಯಾಯಯುತವಾಗಿ ಈ ಸಮುದಾಯದವರಿಗೆ ದೊರೆಯಬೇಕಾದ ಎಷ್ಟೋ ಸೌಲತ್ತುಗಳನ್ನು ಮೀಸಲಾತಿ ಅಡಿಯಲ್ಲಿ ಪರಜಾತಿ/ಸಮುದಾಯಗಳು ಪಡೆಯುತ್ತಿವೆ.
- ಸೆಟ್ಲಮೆಂಟಿನ ಶೇ. ೫೦ರಷ್ಟು ಜನಕ್ಕೆ ಮತದಾನ ಮಾಡುವ ಅವಕಾಶ ಇನ್ನು ದೊರೆತಿಲ್ಲ. ಮುಖ್ಯವಾಗಿ ಅವರು ಮತದಾರರ ಪಟ್ಟಿಯಿಂದಲೇ ಜಾರಿ ಹೋಗಿದ್ದಾರೆ. ಹೀಗಾಗಿ ಅವರಿಗೆ ಮತದಾರರ ಗುರುತಿನ ಚೀಟಿಯೂ ದೊರೆತಿರುವುದಿಲ್ಲ.
- ಬ್ರಿಟೀಷರು ಅಪರಾಧಿ ಬುಡಕಟ್ಟುಗಳ ಕೃಷಿ ಚಟುವಟಿಕೆಗಾಗಿ ಕೆಲವು ಕಡೆ ಭೂಮಿಯನ್ನು ಹಂಚಿತು. ಆದರೆ ಸ್ವಾತಂತ್ರ್ಯ ನಂತರದ ಸ್ಥಳೀಯ ಸರ್ಕಾರಗಳು ಸೆಟ್ಲಮೆಂಟ್ ಸಮುದಾಯಗಳಿಗೆ ಕೃಷಿ ಭೂಮಿ ನೀಡಿಲ್ಲ, ಇರುವ ಕೃಷಿ ಭೂಮಿಗೆ ನೀರಾವರಿ ಮಾಡಬಹುದಾದರೂ ಅಂತಹ (ಗಂಗಾ ಕಲ್ಯಾಣ ಯೋಜನೆ) ಯಾವ ಯೋಜನೆಗಳನ್ನು ಸೆಟ್ಲಮೆಂಟ್ ಸಮುದಾಯಗಳು ಪಡೆಯಲು ಸಾಧ್ಯವಾಗಿಲ್ಲದಿರುವುದನ್ನು ಕಾಣಬಹುದಾಗಿದೆ.
- ಸೆಟ್ಲಮೆಂಟ್ ನಿವಾಸಿ ವಿಮುಕ್ತ ಬುಡಕಟ್ಟುಗಳನ್ನು ಪ್ರತ್ಯೇಕವಾಗಿ ಗಣತಿ ಮಾಡಿಲ್ಲದಿರುವುದು ತಿಳಿದು ಬರುತ್ತದೆ.

ಅಧ್ಯಯನದ ಫಲಿತಗಳು

೧. ಸೆಟ್ಲಮೆಂಟ ಪ್ರದೇಶಗಳು ಕೊಳಚೆ ಪ್ರದೇಶಗಳಂತಿವೆ.

೨. ಹೊರಗಿನ ಸಮುದಾಯದವರು ಹಾಗೂ ಪೋಲೀಸರು ವಿಮುಕ್ತ ಬುಡಕಟ್ಟುಗಳನ್ನು ಈಗಲೂ ಅಪರಾಧಿಗಳೆಂಬ ಗುಮಾನಿಯಿಂದಲೇ ನೋಡುತ್ತಿವೆ.

೩. ಬ್ರಿಟೀಷ ಕಂಪನಿ ಸರ್ಕಾರವು ಕ್ರಿಮಿನಲ್ ಟ್ರೈಬ್ ಆಕ್ಟ್ ಜಾರಿಗೆ ತಂದು ಅಲೆಮಾರಿ ಸಮುದಾಯಗಳನ್ನು ಶೋಷಣೆ ಮಾಡಿದವು.

೪. ಸಂವಿಧಾನಾತ್ಮಕವಾಗಿ ಸಿಗುವ ಸೌಲತ್ತುಗಳು ಈ ಜನರಿಗೆ ಸಮರ್ಪಕವಾಗಿ ಸಿಕ್ಕಿಲ್ಲ.

೫. ಪ್ರಸ್ತುತ ಸಂದರ್ಭದಲ್ಲಿ ಪಾರಂಪರಿಕ ವೃತ್ತಿ ಮಾಡುವವರು ಸೆಟ್ಲಮೆಂಟಗಳಲ್ಲಿ ಇಲ್ಲವೆಂಬಷ್ಟು ಕಡಿಮೆ ಪ್ರಮಾಣದಲ್ಲಿರುವುದು ಕಂಡುಬರುತ್ತದೆ.

೬. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಾಕ್ಷರತೆಗಿಂತಲೂ ವಿಮುಕ್ತ ಬುಡಕಟ್ಟುಗಳ ಸಾಕ್ಷರತೆಯ ಪ್ರಮಾಣವು ಅತ್ಯಂತ ಕಡಿಮೆಯಿರುವುದು ಕಂಡುಬರುತ್ತದೆ.

೭. ಸೆಟ್ಲಮೆಂಟ ಹೊರಗೆ ವಾಸಿಸುವ ಸಮುದಾಯಗಳಿಗಿಂತ ಸೆಟ್ಲಮೆಂಟ ಒಳಗಡೆ ವಾಸಿಸುವ ವಿಮುಕ್ತ ಬುಡಕಟ್ಟುಗಳು ಹೆಚ್ಚು ಅವಮಾನಕ್ಕೆ ಈಡಾಗಿವೆ.

೮. ರಾಜ್ಯದ ಸೆಟ್ಲಮೆಂಟಗಳಲ್ಲಿ ವಾಸಿಸುವ ಸಮುದಾಯಗಳಲ್ಲಿ ಕೆಲವೇ ಕುಟುಂಬಗಳಿಗೆ ಭೂಮಿ ಇದೆ.

೯. ವಿಮುಕ್ತ ಬುಡಕಟ್ಟುಗಳಲ್ಲಿ ಬಹುತೇಕರಿಗೆ ನಿರ್ಧಿಷ್ಟವಾದ ಕೆಲಸವಿಲ್ಲ.

೧೦. ಬ್ರಿಟೀಷ್ ಆಡಳಿತವೇ ಸರಿಯಿತ್ತೆಂಬ ಮನೋಭಾವನೆ ಇದೆ.

೧೧. ರಾಜ್ಯದ ಸೆಟ್ಲಮೆಂಟಗಳಲ್ಲಿ ಬಿಜಾಪುರ ಸೆಟ್ಲಮೆಂಟ್ ಹೆಚ್ಚು ಕೊಳೆಗೇರಿಯಂತೆ ಕಾಣುತ್ತದೆ.

೧೨. ಸೆಟ್ಲಮೆಂಟಗಳಲ್ಲಿ ಸ್ಥಳೀಯ ಸರ್ಕಾರಗಳಲ್ಲಿಯೂ ಕಂಜರಭಾಟ್, ಚಪ್ಪರಬಂದ ಸಮುದಾಯಗಳಿಗೆ ಪ್ರತಿನಿಧಿಗಳಾಗಿ ಆಯ್ಕೆಯಾಗಲು ಸಾಧ್ಯವಾಗಿಲ್ಲ.

೧೩. ಚಪ್ಪರಬಂದ ಮತ್ತು ಕಂಜರಭಾಟ ಸಮುದಾಯಗಳು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಮೀಸಲಾತಿ ಸೌಲಭ್ಯಗಳಿಂದ ವಂಚಿತಗೊಂಡಿವೆ.

೧೪. ಸೆಟ್ಲಮೆಂಟಿನಲ್ಲಿ ನೆಲೆಸಿರುವ ಸಮುದಾಯಗಳಲ್ಲಿ ಪಾರ್ಧಿಗಳು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹೆಚ್ಚು ಹಿಂದುಳಿದಿದ್ದಾರೆ.

೧೫. ಸೆಟ್ಲಮೆಂಟನ ಬಹುತೇಕ ಕುಟುಂಬಗಳಿಗೆ ನಿವೇಶನ, ವಾಸಯೋಗ್ಯ ಮನೆಗಳಿಲ್ಲ.

೧೬. ಚಪ್ಪರಬಂದ ಸಮುದಾಯ ಮತ್ತು ಇತರ ಕೆಲವು ಸಮುದಾಯಗಳು ಚಿಕ್ಕದಾದ ಒಂದೇ ಮನೆಯಲ್ಲಿ ಮೂರು ನಾಲ್ಕು ಕುಟುಂಬಗಳು ವಾಸಿಸುತ್ತಿವೆ.

೧೭. ಸೆಟ್ಲಮೆಂಟ್ ಸಮುದಾಯಗಳಲ್ಲಿ ಶೇಕಡ ೫೦ರಷ್ಟು ಜನರಿಗೆ ಮತದಾರರ ಪಟ್ಟಿಯಲ್ಲಿ ಸೇರಲು ಸಾಧ್ಯವಾಗಿಲ್ಲ.

೧೮. ಸೆಟ್ಲಮೆಂಟವಾಸಿಗಳಲ್ಲಿ ಪಾರ್ಧಿ ಹಾಗೂ ಚಪ್ಪರಬಂದ ಮಹಿಳೆಯರು, ಮಕ್ಕಳು ಹೆಚ್ಚು ರಕ್ತ ಹೀನತೆ ಹಾಗೂ ಇತರ ಖಾಯಿಲೆಗಳಿಂದ ಹೆಚ್ಚು ಬಳಲುತ್ತಾರೆ.

ಸಲಹೆಗಳು

- ವಿಮುಕ್ತ ಬುಡಕಟ್ಟುಗಳ ಅಮೂಲಾಗ್ರ ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸಲು ಸಹಾಯಕವಾಗುವಂತೆ ಬ್ರಿಟೀಷ್ ವಸಾಹತು ಕಾಲಘಟ್ಟದಲ್ಲಿ ಸ್ಥಾಪಿಸಿದ ಅಯ್ಯಂಗಾರ್ ಸಮಿತಿ ವರದಿಯಲ್ಲಿ ಸೂಚಿಸಿದ ಸೆಟ್ಲಮೆಂಟ್‌ಗಳ ಜನಸಂಖ್ಯೆಯನ್ನು ಮೂಲವಾಗಿಟ್ಟುಕೊಂಡು ಸ್ವಾತಂತ್ರ್ಯನಂತರದ ಸೆಟ್ಲಮೆಂಟ್‌ಗಳಲ್ಲಿಯ ಬುಡಕಟ್ಟುಗಳ ಜನಸಂಖ್ಯೆಯನ್ನು ಗಣನೆ ಮಾಡಬೇಕು ಮತ್ತು ಅವುಗಳ ಅಭಿವೃದ್ಧಿಗೆ ಪೂರಕವಾದಂತಹ ಯೋಜನೆಗಳನ್ನು ರೂಪಿಸಬೇಕು.
- ಸೆಟ್ಲಮೆಂಟಿನ ಜನ ೧೯೫೨ರಷ್ಟು ಹಿಂದೆಯೇ ಕರ್ನಾಟಕದಲ್ಲಿ ಅಪರಾಧಿ ಬುಡಕಟ್ಟು ನಿಯಮಗಳಿಂದ ಮುಕ್ತಿ ಹೊಂದಿ ವಿಮುಕ್ತರಾಗಿದ್ದಾರೆ. ಆದರೆ ಪೊಲೀಸ್ ಹಾಗೂ ಇತರ ಕೆಲವು ಇಲಾಖೆಗಳು ಈ ಸಮುದಾಯಗಳನ್ನು ಬ್ರಿಟೀಷ್ ದೃಷ್ಟಿಕೋನದಲ್ಲಿಯೇ ನೋಡುತ್ತವೆ. ಹೀಗಾಗಿ ಇಂದಿಗೂ ಅವರಿಂದ ಸೆಟ್ಲಮೆಂಟ್ ಜನ ಅವಮಾನ, ಕಿರುಕುಳಗಳನ್ನು ಅನುಭವಿಸುವಂತಾಗಿದೆ. ಮುಖ್ಯವಾಗಿ ಆ ರೀತಿ ಅವಮಾನಗಳು ಹಾಗೂ ಕಿರುಕುಳವಾಗದಂತೆ ಸೆಟ್ಲಮೆಂಟ್ ಜನರಿಗೆ ರಕ್ಷಣೆ ದೊರೆಯುವಂತಾಗಬೇಕು.
- ಪ್ರತಿಯೊಂದು ಸೆಟ್ಲಮೆಂಟ್ ಪ್ರದೇಶಗಳಲ್ಲಿ ಮಾನವ ಹಕ್ಕುಗಳ ಸಂರಕ್ಷಣ ಘಟಕಗಳನ್ನು ಸ್ಥಾಪನೆ ಮಾಡಬೇಕು ಮತ್ತು ಅವುಗಳನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಮಾನವ ಹಕ್ಕುಗಳ ಆಯೋಗಕ್ಕೆ ನೀಡಬೇಕು, ಅವಶ್ಯಕತೆಯಿದ್ದಲ್ಲಿ ಆ ಕಾರ್ಯಕ್ಕಾಗಿ ಹೆಚ್ಚುವರಿ ಅಧಿಕಾರಿಗಳನ್ನು ನಿಯೋಜಿಸಬೇಕು. ಮಾನವ ಹಕ್ಕುಗಳ ಉಲ್ಲಂಘನೆ ನಡೆದ ಪಕ್ಷದಲ್ಲಿ ಅವುಗಳಿಗೆ ಸೂಕ್ತ ರೀತಿಯ ಕ್ರಮಗಳನ್ನು ಕೈಗೊಳ್ಳುವ ಜವಾಬ್ದಾರಿಯನ್ನು ಮಾನವ ಹಕ್ಕುಗಳ ಆಯೋಗವೇ ಪರಿಹರಿಸುವಂತಾಗಬೇಕು ಮತ್ತು ಆಯೋಗದಲ್ಲಿ ಸೆಟ್ಲಮೆಂಟಿನ ಯಾರದರೊಬ್ಬರನ್ನು ಸದಸ್ಯರನ್ನಾಗಿ ನೇಮಿಸಬೇಕು.
- ಸೆಟ್ಲಮೆಂಟ್ ಸಮುದಾಯಗಳ ಕುರಿತು ಸರಿಯಾದ ತಿಳುವಳಿಕೆಯನ್ನು ಜನಸಾಮಾನ್ಯರಿಗೆ ಮುಖ್ಯವಾಗಿ ಪೊಲೀಸ್ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ತಿಳಿಸಿಕೊಡಬೇಕು. ಸಾಧ್ಯವಾದರೆ ಪೋಲೀಸ್ ತರಬೇತಿ ಕೇಂದ್ರಗಳಲ್ಲಿ ತರಬೇತಿ ಪಠ್ಯಗಳಲ್ಲಿ ಸೆಟ್ಲಮೆಂಟ್ ಸಮುದಾಯಗಳನ್ನು ಅರ್ಥಮಾಡಿಕೊಂಡು ಅವರನ್ನು ಸಹ ಮನುಷ್ಯರಂತೆ ಕಾಣಬಹುದೆಂಬುದನ್ನು ಪಠ್ಯದ ಮೂಲಕ ಪೊಲೀಸ್ ಇಲಾಖೆಯು ಅರಿವು ಮಾಡಿಕೊಡಬೇಕು.
- ವಿಮುಕ್ತ ಬುಡಕಟ್ಟುಗಳನ್ನು ಇಂದು ಪೊಲೀಸ್ ಮತ್ತು ಅಬಕಾರಿ ಇಲಾಖೆಗಳು ತಮ್ಮ ಸ್ವಲಾಭಕ್ಕಾಗಿ ಬಳಸಿಕೊಳ್ಳುವುದೇ ಹೆಚ್ಚು. ಅಂತಹ ಪೊಲೀಸರ ವಿರುದ್ಧ ಸೂಕ್ತಕ್ರಮ ಕೈಗೊಳ್ಳುವಂತಾಗಬೇಕು ಮತ್ತು ಅವರು ಇನ್ನೊಮ್ಮೆ ತಪ್ಪುಗಳನ್ನು ಮಾಡದಂತೆ ಅಂತಹ ಸಿಬ್ಬಂದಿಯನ್ನು ಕೆಲಸದಿಂದಲೇ ವಜಾ ಮಾಡುವ ಅಧಿಕಾರವನ್ನು ಮೇಲಾಧಿಕಾರಿಗಳಿಗೆ ನೀಡಿದಂತೆ ಮಾನವ ಹಕ್ಕು ಆಯೋಗದ ಅಧಿಕಾರಿಗಳಿಗೂ ನೀಡಬೇಕು.

- ವಿಮುಕ್ತ ಬುಡಕಟ್ಟುಗಳ ಅಭ್ಯುದಯಕ್ಕಾಗಿ ವಿಶೇಷವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರ ವಿಮುಕ್ತ ಬುಡಕಟ್ಟು ಆಯೋಗವನ್ನು ರಚಿಸಬೇಕು.
- ಸೆಟ್ಲಮೆಂಟ್‌ವಾಸಿ ವಿಮುಕ್ತ ಬುಡಕಟ್ಟುಗಳಿಗಾಗಿ ವಿಶೇಷ ಪ್ಯಾಕೇಜ್‌ಗಳನ್ನು ರೂಪಿಸಿ ಅವುಗಳು ಅನುಷ್ಠಾನಗೊಳ್ಳುವಂತೆ ಮಾಡಬೇಕು.
- ವಿಮುಕ್ತ ಬುಡಕಟ್ಟುಗಳಲ್ಲಿ ಹಲವಾರು ಸಮುದಾಯಗಳಿಗೆ ಇಂದಿಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಮೀಸಲಾತಿ ಸೌಲಭ್ಯ ದೊರೆತಿರುವುದಿಲ್ಲ. ಅಂತಹ ಸಮುದಾಯಗಳಿಗೆ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳ ಮೀಸಲಾತಿ ಸೌಲಭ್ಯ ದೊರೆಯುವಂತೆ ಮಾಡಬೇಕು ಇಲ್ಲವೇ ವಿಮುಕ್ತ ಬುಡಕಟ್ಟುಗಳಿಗೆ ವಿಮುಕ್ತ ಬುಡಕಟ್ಟು ಎಂಬ ವಿಶೇಷ ಮೀಸಲಾತಿ ಸೌಲಭ್ಯ ದೊರೆಯುವಂತೆ ಮಾಡಬೇಕು. ಈ ರೀತಿ ಮಾಡುವಾಗ ಅಧಿಕಾರಿಗಳ ಚಮತ್ಕಾರದಿಂದ ಎಷ್ಟೋ ಬದಲಾವಣೆಗಳಾಗುವ ಸಾಧ್ಯತೆ ಇರುತ್ತದೆ. ಅಂದರೆ ವಿಮುಕ್ತ ಬುಡಕಟ್ಟುಗಳಲ್ಲದ ಸಮುದಾಯಗಳು ವಿಮುಕ್ತ ಬುಡಕಟ್ಟುಗಳ ಪಟ್ಟಿಯಲ್ಲಿ ಸೇರುವ ಸಾಧ್ಯತೆ ಇರುತ್ತದೆ. ಆ ರೀತಿ ಸೇರಿಸಲು ಅವಕಾಶ ಮಾಡಿಕೊಡಬಾರದು ಮತ್ತು ಆ ರೀತಿ ಅವಘಡಗಳಾಗದಂತೆ ಮುನ್ನೆಚ್ಚರಿಕೆಯನ್ನು ವಹಿಸಬೇಕು.
- ವಿಮುಕ್ತ (Denotified) ಬುಡಕಟ್ಟುಗಳ ಪ್ರಮಾಣಬದ್ಧ ಸೂಚಿಯನ್ನು ಭಾರತ ಸರಕಾರ ನೇಮಿಸಿದ ಅಯ್ಯಂಗಾರ್ ಸಮಿತಿಯು ತಯಾರಿಸಿತು. (ಆರ್.ಎನ್.೨೨/೧/೧೯೪೯- ಪೊಲೀಸ್-೧ ದಿನಾಂಕ ೨೮.೦೮.೧೯೪೯ರ ಪ್ರಕಾರ ಸ್ಥಾಪನೆಗೊಂಡ ಸಮಿತಿ) ಇದನ್ನೆ ಅಧಿಕೃತ ಪಟ್ಟಿಯೆಂದು ಪರಿಗಣಿಸುವುದು.
- ಸೆಟ್ಲಮೆಂಟಿನ ಪ್ರತಿಯೊಂದು ಕುಟುಂಬಕ್ಕೂ ಪ್ರತ್ಯೇಕ ನಿವೇಶನ ಮತ್ತು ಮನೆಗಳು ದೊರೆಯುವಂತಾಗಬೇಕು. ಮನೆಗಳನ್ನು ನಿರ್ಮಿಸಲೆಂದೇ ಹಲವಾರು ಯೋಜನೆಗಳನ್ನು ಸರ್ಕಾರ ಹಮ್ಮಿಕೊಂಡಿವೆ. ಆ ಯೋಜನೆಯಡಿಯಲ್ಲಿ ಈ ಸಮುದಾಯಗಳಿಗೆ ಮನೆಗಳನ್ನು ಕಟ್ಟಿಸಿಕೊಡಬೇಕು.
- ಇಂದು ಸೆಟ್ಲಮೆಂಟ್‌ಗಳಲ್ಲಿರುವವರಲ್ಲಿ ಸ್ಥಳೀಯ ಮಟ್ಟದಲ್ಲಾದರೂ ರಾಜಕೀಯವಾಗಿ ಕೆಲವು ಸಮುದಾಯದ ಜನ ಸ್ಥಾನ ಗಿಟ್ಟಿಸಿಕೊಳ್ಳುತ್ತಿದ್ದಾರೆ. ಸೆಟ್ಲಮೆಂಟಿನ ಪ್ರತಿಯೊಂದು ವಿಮುಕ್ತ ಬುಡಕಟ್ಟಿಗೂ ರಾಜಕೀಯ ಪ್ರವೇಶಕ್ಕೆ ಅವಕಾಶ ಮಾಡಿಕೊಡಬೇಕು. ಸಂಖ್ಯಾ ಬಲವಿಲ್ಲದೆ ಆ ಸಮುದಾಯದ ಪ್ರತಿನಿಧಿಗಳು ಸೋಲುವ ಸಾಧ್ಯತೆಗಳಿರಬಹುದು. ಆದ್ದರಿಂದ ಅವುಗಳ ಪ್ರತಿನಿಧಿಗಳನ್ನು ಸರ್ಕಾರವೇ ನೇರವಾಗಿ ಘೋಷಿಸಿ ಸದಸ್ಯರನ್ನಾಗಿಸುವಂತಾಗಬೇಕು.
- ಕೆಲವೊಂದು ಸೆಟ್ಲಮೆಂಟ್‌ಗಳಲ್ಲಿ ನೆಪಕ್ಕೆಂಬಂತೆ ಆಸ್ಪತ್ರೆಯೇನೋ ಇವೆ. ಆದರೆ ಅವುಗಳು ಸರಿಯಾದ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿಲ್ಲ. ಹೀಗಾಗಿ ಸುಸಜ್ಜಿತವಾದ ಮೂಲ ಸೌಕರ್ಯಗಳೆಲ್ಲಾ ಇರುವ ಆಸ್ಪತ್ರೆಯೊಂದನ್ನು ಸೆಟ್ಲಮೆಂಟ್ ಜನರಿರುವಲ್ಲಿಯೇ ನಿರ್ಮಿಸಬೇಕು.

- ಸೆಟ್ಲಮೆಂಟವಾಸಿ ವಿಮುಕ್ತ ಬುಡಕಟ್ಟುಗಳಲ್ಲಿ ಇಂದು ಶೇ. ೫೦ಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಅನಕ್ಷರಸ್ಥರಿರುವುದು ಕಂಡು ಬರುತ್ತದೆ. ಆ ಸಮುದಾಯದ ಮಕ್ಕಳು ವಿದ್ಯಾವಂತರಾಗಲು ಅವಶ್ಯವಾದ ಎಲ್ಲಾ ಪ್ಯಾಕೇಜ್‌ಗಳನ್ನು ನೀಡಬೇಕು ಮತ್ತು ಸೈನಿಕ ಶಾಲೆ, ಕೇಂದ್ರೀಯ ಶಾಲೆಗಳ ರೀತಿಯ ವಸತಿ ಶಾಲೆಗಳನ್ನು ಈ ಮಕ್ಕಳಿಗಾಗಿ ಸೆಟ್ಲಮೆಂಟ್ ಹತ್ತಿರದಲ್ಲಿ ಅಥವಾ ವಿಶಾಲವಾದ ಪ್ರದೇಶದಲ್ಲಿ ಪ್ರಾರಂಭಿಸಿ ವಿಮುಕ್ತ ಬುಡಕಟ್ಟಿನ ಪ್ರತಿಯೊಂದು ಮಗುವೂ ಆ ಶಾಲೆಗಳಲ್ಲಿ ಉಚಿತವಾಗಿ ವಿದ್ಯಾಭ್ಯಾಸವನ್ನು ಪಡೆಯುವಂತಾಗಬೇಕು. ಈ ಶಾಲೆಗಳಲ್ಲಿ ಪ್ರಾಥಮಿಕ ಹಂತದಿಂದ ಹಿಡಿದು ಉನ್ನತಮಟ್ಟದವರೆಗೂ ಮಕ್ಕಳಿಗೆ ಶಿಕ್ಷಣ ದೊರೆಯುವಂತಾಗಬೇಕು.
- ಸೆಟ್ಲಮೆಂಟ ಮಕ್ಕಳಿಗೆ ವೃತ್ತಿ ಕೌಶಲ್ಯಗಳನ್ನು ಕಲಿಸುವ ವೃತ್ತಿ ಶಿಕ್ಷಣ ಕೇಂದ್ರಗಳಾದ ಐ.ಟಿ.ಐ., ಡಿಪ್ಲೊಮೋ, ಇಂಜನಿಯರಿಂಗ್ ಮತ್ತು ಐ.ಐ.ಟಿ. ಕಾಲೇಜ್‌ಗಳನ್ನು ಆ ಮಕ್ಕಳಿಗಾಗಿಯೇ ಪ್ರಾರಂಭಿಸಬೇಕು ಮತ್ತು ಆ ಕಾಲೇಜ್‌ಗಳಲ್ಲಿ ವಿಮುಕ್ತ ಬುಡಕಟ್ಟು ಮಕ್ಕಳಿಗೆ ಸಂಪೂರ್ಣವಾಗಿ ಉಚಿತವಾಗಿ ಶಿಕ್ಷಣ ದೊರೆಯುವಂತಾಗಬೇಕು ಹಾಗೂ ಉತ್ತಮ ಗುಣಮಟ್ಟದ ಉಚಿತ ವಸತಿ ನಿಲಯಗಳನ್ನು ವಿಮುಕ್ತ ಬುಡಕಟ್ಟು ಮಕ್ಕಳಿಗಾಗಿಯೇ ವಿಶೇಷವಾಗಿ ಪ್ರಾರಂಭಿಸಬೇಕು.
- ಗೂಂಡಾ ಕಾಯ್ದೆ, ಅಂಟಿಸಿಬೇಟರಿ ಕಾಯ್ದೆಗಳು ವಿಮುಕ್ತ ಬುಡಕಟ್ಟು ಸದಸ್ಯರ ಮೇಲೆ ದುರುಪಯೋಗವಾಗುವ ಸಂದರ್ಭಗಳು ಹೆಚ್ಚು. ಆ ರೀತಿ ಕಾಯ್ದೆಗಳ ದುರುಪಯೋಗವಾಗದಂತೆ ಕಾಯ್ದೆಗಳನ್ನು ರೂಪಿಸಬೇಕು. ಎಷ್ಟೋ ಹೊರಗಿನ ಸಮುದಾಯಗಳು ಮತ್ತು ನಗರ ಸಭೆ, ಮಹಾನಗರ ಸಭೆಯಂತಹ ಆಡಳಿತಾಂಗಗಳು ತಮ್ಮ ಉಪಯೋಗಕ್ಕಾಗಿ ಸೆಟ್ಲಮೆಂಟ್ ಪ್ರದೇಶಗಳನ್ನು ಅತಿಕ್ರಮಿಸುವುದು ಮತ್ತು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುವುದನ್ನು ಮಾಡುತ್ತಿವೆ. ಆ ರೀತಿ ಅತಿಕ್ರಮಣವಾಗದಂತೆ ತಡೆಯಬೇಕು. ಒಟ್ಟಾರೆ ಸೆಟ್ಲಮೆಂಟ್ ಪ್ರದೇಶವನ್ನು ಸೆಂಟ್ಲಮೆಂಟ್ ಜನರಿಗಾಗಿಯೇ ಮೀಸಲಿಡಬೇಕು. ಆ ಪ್ರದೇಶಗಳನ್ನು ರಾಜಕಾರಣಿಗಳಾಗಲಿ, ಆಡಳಿತಾಂಗಗಳಾಗಲಿ, ಸಾರ್ವಜನಿಕರಾಗಲಿ ತಮ್ಮ ಉಪಯೋಗಕ್ಕೆ ಬಳಕೆ ಮಾಡಿಕೊಳ್ಳಬಾರದು.
- ವಸಾಹತು ಕಾಲಘಟ್ಟದಲ್ಲಿ ಸೆಂಟ್ಲಮೆಂಟ್ ಮಕ್ಕಳಿಗಾಗಿಯೇ ಬ್ರಿಟಿಷರು ಆಟದ ಮೈದಾನಗಳನ್ನು ರೂಪಿಸಿದ್ದಾರೆ. ಆದರೆ ಎಷ್ಟೋ ಸೆಟ್ಲಮೆಂಟ್‌ಗಳಲ್ಲಿ ಇಂದು ಆಟದ ಮೈದಾನಗಳು ಕಾಣದಂತಾಗಿವೆ. ಅತಿಕ್ರಮಗೊಂಡ ಆಟದ ಮೈದಾನಗಳನ್ನು ಸೆಟ್ಲಮೆಂಟ್ ಜನರ ಉಪಯೋಗಕ್ಕೆ ಅನುಕೂಲವಾಗುವಂತೆ ತೆರೆವುಗೊಳಿಸಬೇಕು. ಇಲ್ಲವೇ ಸೆಟ್ಲಮೆಂಟ್ ಪಕ್ಕದಲ್ಲಿ ವಿಸ್ತಾರವಾದ ಹೊಸ ಆಟದ ಮೈದಾನವನ್ನು ಸರ್ಕಾರ ಮತ್ತು ಸ್ಥಳೀಯ ಆಡಳಿತವು ನಿರ್ಮಿಸಿಕೊಡಬೇಕು.
- ಬ್ರಿಟೀಷ್ ಅಧಿಕಾರಿಗಳು ಸೆಟ್ಲಮೆಂಟ್ ಮಕ್ಕಳು ದೇಶೀ ಆಟಗಳನ್ನು ಆಡುವಂತೆ ಪ್ರಚೋದಿಸುತ್ತಿದ್ದರು ಮತ್ತು ಹಾಕಿಯಂತಹ ಆಟವನ್ನು ಕಲಿಸಲಾಗುತ್ತಿತ್ತು. ಹೀಗಾಗಿ ಇಂದಿಗೂ ಗದಗ-ಹುಬ್ಬಳ್ಳಿಯಂತಹ ಸೆಟ್ಲಮೆಂಟ್‌ಗಳಲ್ಲಿ ನೂರಾರೂ ಹಾಕಿ ಆಟಗಾರರು ಕಾಣುತ್ತಾರೆ. ಸೆಟ್ಲಮೆಂಟಿನ ಯುವಕರ

ಅಂತಾರಾಷ್ಟ್ರೀಯ ಮಟ್ಟದ ಹಾಕಿ ಆಟಗಾರರಾಗಿ ಯಶಸ್ಸನ್ನು ಸಾಧಿಸಿದ್ದಾರೆ. ಹೀಗಾಗಿ ಸೆಟ್ಲಮೆಂಟ್ ಮಕ್ಕಳಿಗೆ ದೇಶೀ ಆಟಗಳಾದ ಈಜು, ಹಾಕಿ ಅಥ್ಲೆಟಿಕ್ ಆಟಗಳನ್ನು ಆಡಲು, ತರಬೇತಿ ಪಡೆಯಲು ಅವಶ್ಯವಾದ ಆಟದ ಮೈದಾನ ನಿರ್ಮಿಸುವುದರೊಂದಿಗೆ ಕೋಚ್‌ಗಳನ್ನು ಸರ್ಕಾರವು ನೇಮಿಸುವಂತಾಗಬೇಕು. ಮಕ್ಕಳಿಗೆ ಕಡ್ಡಾಯ ಶಿಕ್ಷಣದ ಜೊತೆಗೆ ಆಟದ ತರಬೇತಿಗಳು ಸಹ ಶಿಸ್ತುಬದ್ಧವಾಗಿ ದೊರೆಯುವಂತಾಗಬೇಕು.

- ವಿಮುಕ್ತ ಬುಡಕಟ್ಟುಗಳ ಮಹಿಳೆಯರ ಸುರಕ್ಷತೆಗಾಗಿ ರಾಷ್ಟ್ರೀಯ ಮಹಿಳಾ ಆಯೋಗದ ಮುಖಾಂತರ ವಿಶೇಷ ಘಟಕವನ್ನು ನಿರ್ಮಿಸಬೇಕು.
- ವಿಮುಕ್ತ ಬುಡಕಟ್ಟುಗಳ ಮಹಿಳೆಯರಿಗೆ ಶಿಕ್ಷಣ ದೊರೆಯುವಂತೆ ವಿಶೇಷ ಮಹಿಳಾ ಶಾಲೆಗಳನ್ನು ಪ್ರಾರಂಭಿಸಿ ಸೆಟ್ಲಮೆಂಟಿನ ಪ್ರತಿಯೊಬ್ಬ ವಿಮುಕ್ತ ಬುಡಕಟ್ಟು ಮಹಿಳೆ ಆ ಶಾಲೆಯಲ್ಲಿ ಶಿಕ್ಷಣ ಪಡೆಯುವಂತಾಗಬೇಕು ಮತ್ತು ಮಹಿಳೆಯರಿಗೆ ಅವಶ್ಯಕವಾಗಿ ಉನ್ನತ ಶಿಕ್ಷಣಕ್ಕೆ ಹೋಗಲು ಅವಕಾಶಗಳನ್ನು ಕಲ್ಪಿಸಿಕೊಡಬೇಕು.
- ಸೆಟ್ಲಮೆಂಟ್ ವಿಮುಕ್ತ ಬುಡಕಟ್ಟುಗಳಲ್ಲಿ ಬಾಲ್ಯ ವಿವಾಹವು ಇಂದಿಗೂ ಚಾಲ್ತಿಯಲ್ಲಿದೆ. ಅಕಸ್ಮಾತ್ ಹೆಣ್ಣು ಮಗು ಶಾಲೆಗೆ ಹೋಗುತ್ತಿದ್ದರೂ ಅವಳು ಮೈನೆರದ ತರುವಾಯ ಅಥವಾ ಬಾಲ್ಯದಲ್ಲಿಯೇ ಮದುವೆಯಾಗುವುದರಿಂದ ಅವಳ ವಿದ್ಯಾಭ್ಯಾಸವೂ ಕುಂಠಿತವಾಗುವ ಸಾಧ್ಯತೆ ಇರುತ್ತದೆ. ಹೀಗಾಗಿ ಇವರಲ್ಲಿ ಇಂದಿಗೂ ರೂಢಿಯಲ್ಲಿರುವ ಬಾಲ್ಯವಿವಾಹ ಪದ್ಧತಿಯನ್ನು ಕೈಬಿಡುವಂತೆ ಆ ಸಮುದಾಯಗಳಿಗೆ ತಿಳುವಳಿಕೆ ನೀಡಬೇಕು. ಸಾಧ್ಯವಾದರೆ ಬಾಲ್ಯವಿವಾಹ ಪದ್ಧತಿಯ ವಿರುದ್ಧ ಕ್ರಮಕೈಗೊಂಡು ಅವುಗಳನ್ನು ತಡೆಹಿಡಿಯುವಂತಾಗಬೇಕು.

ಯಾವುದೇ ಬುಡಕಟ್ಟು ಅಥವಾ ಸಮುದಾಯ ಹಿಂದೆ ವಿಮುಕ್ತ ಬುಡಕಟ್ಟಾಗಿದ್ದು ಇಂದು ಒಂದು ಅಥವಾ ಹಲವು ರಾಜ್ಯಗಳಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದ ಪಟ್ಟಿಯಲ್ಲಿ ಪರಿಗಣಿಸಲ್ಪಟ್ಟರೆ ಅಂತಹ ಸಮುದಾಯವನ್ನು ಭಾರತದಾದ್ಯಂತ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ವರ್ಗದ ಪಟ್ಟಿಯಲ್ಲಿ ಪರಿಗಣಿತವಾಗುವಂತೆ ಮಾಡಬೇಕು.

ಅನುಬಂಧಗಳು

೧. ಪರಾಮರ್ಶನ ಗ್ರಂಥಗಳು
೨. ಮಾಹಿತಿದಾರರ ಪಟ್ಟಿ
೩. ದಾಖಲೆಗಳು
೪. ನಕಾಶೆಗಳು
೫. ಅಂಕಿಅಂಶಗಳು
೬. ಛಾಯಾಚಿತ್ರಗಳು

೧. ಪರಾಮರ್ಶನ ಗ್ರಂಥಗಳು

ಅನ್ನಪೂರ್ಣೇಶ್ವರಿ ಎನ್ : ಮಹಿಳಾ ಶಿಕ್ಷಣ ಮತ್ತು ಅಭಿವೃದ್ಧಿ : ಪ್ರಕಾಶಕರು ಮಾನವಾಭಿವೃದ್ಧಿ ಅಧ್ಯಯನಗಳ ಕೇಂದ್ರ, ಮೈಸೂರು, ೨೦೦೨.

ಅಪ್ಪಾಜಿ ಎಸ್ ಸಿಂಧೆ, ಚಾವಡೆ ಲೋಕೇಶ್ : ಗೋಸಂಗಿ : ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಬೆಂಗಳೂರು, ೨೦೦೮.

ಅಶೀಶ್ ನಂದಿ, ಸುಬ್ಬಣ್ಣ ಕೆ ವಿ (ಅನು) : ಅಶೀಶ್ ನಂದಿ ವಿಚಾರಧಾರೆಗಳು : ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೫,

ಇಂದಿರಾ ಆರ್ : ಮಹಿಳೆ ಸಮಾಜ ಮತ್ತು ಸಂಸ್ಕೃತಿ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

ಈಶ್ವರ ಎಂ ಜಿ : ಮ್ಯಾಸಬೇಡರು : ಐಬಿಎಚ್ ಪ್ರಕಾಶನ, ಬೆಂಗಳೂರು, ೧೯೯೮.

ಕನ್ನಡ ವಿಷಯ ವಿಶ್ವಕೋಶ ಸಂ–೧ : ಕುವೆಂಪು ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೨೦೦೫.

ಕನ್ನಡ ವಿಷಯ ವಿಶ್ವಕೋಶ ಸಂ–೨ : ಕುವೆಂಪು ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೨೦೦೭.

ಕರ್ನಾಟಕ ಅಂಕಿ–ಅಂಶಗಳ ನೋಟ ೨೦೦೨–೦೪ : ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು, ೨೦೦೪.

ಕಟ್ಟೀ ವೆಂಕಟರಂಗೋ(ಅನು) : ಗ್ಯಾಝೆಟೀಯರು ಮುಂಬಯೀ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು, ಧಾರವಾಡ ಬೆಳಗಾವಿ ವಿಜಾಪುರ ಕಾನಡಾ ಈ ನಾಲ್ಕು ಜಿಲ್ಲೆಗಳದ್ದು : ಗವರ್ನಮೆಂಟ ಸೆಂಟ್ರಲ್ ಬುಕ್ ಡಿಪೊ, ಮುಂಬಯಿ, ೧೮೯೩.

ಕೊಸಾಂಬಿ ಡಿ ಡಿ, ಟಿ ಎಸ್ ವೇಣುಗೋಪಾಲ್ ಶೈಲಜಾ(ಅನು) : ಪುರಾಣ ಮತ್ತು ವಾಸ್ತವ : ಚಿಂತನ ಪ್ರಕಾಶನ, ಉತ್ತರ ಕನ್ನಡ, ೨೦೦೩.

ಕೊಸಾಂಬಿ ಡಿ ಡಿ, ಶ್ರೀಮತಿ ಎಚ್.ಎಸ್(ಅನು) : ಪ್ರಾಚೀನ ಭಾರತದ ಚರಿತ್ರೆ : ಬೆಳ್ಳಿ ಚುಕ್ಕಿ ಪ್ರಕಾಶನ, ಬೆಂಗಳೂರು, ೧೯೯೮.

ಕರೀಗೌಡ ಬೀಚನಹಳ್ಳಿ : ಕರಕುಶಲ ಕಲೆಗಳು : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

ಕಲ್ಕುಳಿ ವಿಠ್ಠಲ ಹೆಗಡೆ : ಕಾಡು ಕಿರುಕುಳ : ನಮ್ಮನಾಡು ಪ್ರಕಾಶನ, ಶಿವಮೊಗ್ಗ, ೨೦೦೨.

ಕುಮುದ ಬಿ ಸುಶಲಪ್ಪ : ಹಕ್ಕಿಪಿಕ್ಕಿ : ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಬೆಂಗಳೂರು, ೨೦೦೮.

ಕೋಡಿರಾಂಪುರ ರಂಗಾರೆಡ್ಡಿ(ಲೇ) : 'ಚಂಚು, ಚೆಂಚರು' ಲಕ್ಕಪ್ಪಗೌಡ ಎಚ್ ಜೆ (ಪ್ರಸಂ) : ಕರ್ನಾಟಕ ಬುಡಕಟ್ಟುಗಳು, ಸಂಪುಟ ೨ : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ೨೦೦೦

ಕೃಷ್ಣಾನಂದ ಕಾಮತ್ : ಅಕ್ಷತ : ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೯.

ಗಂಟಿ ಎಂ ಎಸ್ : ಸುಡುಗಾಡ ಸಿದ್ಧ : ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಬೆಂಗಳೂರು, ೨೦೦೮.

ಗಂಗಾಧರ ದೈವಜ್ಞ: ಬುಡಕಟ್ಟು ಸಮಾಜ ಹುಟ್ಟು ಸಾವಿನ ನಡುವೆ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

ಗಿರೀಶ್ ಕುಮಾರ್ ಎಂ ಕೆ : ಕರ್ನಾಟಕ ಬುಡಕಟ್ಟು ಚಿತ್ರಕಲೆ : ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

ಗುರುಮೂರ್ತಿ ಕೆ ಜಿ : ವ್ಯಾವಹಾರಿಕ ಮಾನವಶಾಸ್ತ್ರ : ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೨.

ಗೋಪಾಲಕೃಷ್ಣ ಪಿ ನಾಯಕ್ : ಉತ್ತರ ಕನ್ನಡ ದರ್ಶನ : ವಿಜಯಭಾರತಿ ಪ್ರಕಾಶನ, ಗೋಕರ್ಣ, ಉತ್ತರಕನ್ನಡ, ೧೯೯೭.

ಚಂದ್ರಶೇಖರ ಟಿ ಆರ್ : ಕರ್ನಾಟಕ ಅಭಿವೃದ್ಧಿಯ ಸಾಮಾಜಿಕ ನೆಲೆಗಳು : ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೩.

ಚಂದ್ರಶೇಖರ ಟಿ ಆರ್ : ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

ಚಂದ್ರಶೇಖರ ಟಿ ಆರ್ : ಅಮರ್ತ್ಯಸೇನ್ ಅಭಿವೃದ್ಧಿ ಅಧ್ಯಯನಗಳು : ಕನ್ನಡ ಸಂಘ ಕ್ರೈಸ್ಟ್ ಕಾಲೇಜ್ ಕುವೆಂಪು ನಗರ, ಬೆಂಗಳೂರು, ೧೯೯೯.

ಚನ್ನಬಸಪ್ಪ ಗೊ ರು : ಕರ್ನಾಟಕ ಜನಪದ ಕಲೆಗಳು : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೭.

ಜಗದೀಶ್ ಕೆ ಕೆ : ಡುಂಗ್ರಿ ಗರಾಸಿಯಾ : ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಬೆಂಗಳೂರು, ೨೦೦೮.

ಜಾನಕಲ್ ರಾಜಣ್ಣ ಎಂ : ದಕ್ಕಲಿಗ : ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಬೆಂಗಳೂರು, ೨೦೦೮.

ತಿಪ್ಪೇಸ್ವಾಮಿ ಜಿ ಆರ್(ಲೇ) : 'ಅಡವಿಚೆಂಚರು' ಲಕ್ಕಪ್ಪಗೌಡ ಎಚ್ ಜೆ(ಪ್ರಸಂ) : ಕರ್ನಾಟಕ ಬುಡಕಟ್ಟುಗಳು ಸಂಪುಟ ೨ : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೦.

ದಳವಾಯಿ ರಾಜಪ್ಪ : ಹಕ್ಕಿಪಿಕ್ಕಿಯರ ಸಂಸ್ಕೃತಿ : ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೩.

ದಾಸನೂರು ಕೂಸಣ್ಣ : ಶೋಷಿತ ಜಂಗಮರ ಮೀಸಲಾತಿ : ಮಾತಂಗ ಪ್ರಕಾಶನ, ಮೈಸೂರು, ೧೯೯೮.

ದೀಕ್ಷಿತ ಜಿ ಎಸ್(ಅನು) : ಭಾರತದ ಗ್ಯಾಜೆಟಿಯರ್ ಭಾರತದ ದೇಶ ಕೋಶ, ಸಂಪುಟ ೪. : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು, ೧೯೮೭.

ದೇವಿಪ್ರಸಾದ್ ಚಟ್ಟೋಪಾಧ್ಯಾಯ, ರಾಮಕೃಷ್ಣ ಜಿ (ಅನು) : ದರ್ಶನ : ನವಕರ್ನಾಟಕ ಪ್ರಕಾಶನ, ಬೆಂಗಳೂರು. ೧೯೯೫.

ದೊಡ್ಡಮನಿ ಲೋಕ್‌ರಾಜ, ರಾವಲೋಳು ಶ್ರೀನಿವಾಸ : ಸಿಂಧೊಳ್ಳು : ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಬೆಂಗಳೂರು, ೨೦೦೮.

ದೊಡ್ಡಮನಿ ಸಣ್ಣವೀರಣ್ಣ, ಸಾಸನಿಕ್ ಮಹೇಂದ್ರರಾವ್ : ಸಿಳ್ಳೇಕ್ಯಾತ : ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರ್ಕಾರ ಬೆಂಗಳೂರು, ೨೦೦೮.

ನಂಜಮ್ಮಣ್ಣಿ ಎಂ : ಸಮಾಜಶಾಸ್ತ್ರ ಪರಿಚಯ, ಭಾಗ ೧ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೪.

ನಾಗರಾಜ ಟಿ ಆರ್ : ಸಾಹಿತ್ಯ ಕಥನ : ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೬.

ನಾಗೇಗೌಡ ಎಚ್ ಎಲ್ : ವೆರಿಯರ್ ಎಲ್ವಿನರ್ ಗಿರಿಜನ ಪ್ರಪಂಚ : ಸಾಹಿತ್ಯ ಸದನ ಪ್ರಕಾಶನ, ಬೆಂಗಳೂರು, ೧೯೭೯.

ನಾಯಕ ಹಾ ಮಾ (ಪ್ರ.ಸಂ) : ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೯.

ನಾಯಕ್ ಎನ್ ಆರ್ : ಕರಾವಳಿ ಸೋಗುಗಳ ಬಹುರೂಪ : ಜಾನಪದ ಪ್ರಕಾಶನ, ಹೊನ್ನಾವರ, ೧೯೯೮.

ನಾಯಕ್ ಎನ್ ಆರ್ : ಹಾಲಕ್ಕಿ ಒಕ್ಕಲಿಗರ ಸಂಸ್ಕೃತಿ : ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು, ೧೯೯೩.

ನಾಯಕ್ ಎನ್ ಆರ್(ಸಂ) : ಸುಗ್ಗಿಯ ಪದಗಳು : ಜಾನಪದ ಪ್ರಕಾಶನ, ಹೊನ್ನಾವರ, ಉತ್ತರ ಕನ್ನಡ, ೧೯೮೬.

ನಾಯಕ್ ಎನ್ ಆರ್ : ಬಂದಾನೆ ಬಲಿಯಂದ್ರರಾಯ : ಜಾನಪದ ಪ್ರಕಾಶನ, ಹೊನ್ನಾವರ, ಉತ್ತರ ಕನ್ನಡ, ೧೯೮೯.

ನಾಯಕ್ ಎನ್ ಆರ್ : ಹೇಳ್ತೇವೋ ಗುಮ್ಮೆ ಪದನಾಮ : ಜಾನಪದ ಪ್ರಕಾಶನ, ಹೊನ್ನಾವರ, ಉತ್ತರ ಕನ್ನಡ, ೧೯೮೩.

ನಾಯಕ್ ಎನ್ ಆರ್ : ಕೂಸಾಯ್ತು ನಮ್ಮ ಕೊಮರಾಗೆ : ಜಾನಪದ ಪ್ರಕಾಶನ, ಹೊನ್ನಾವರ, ಉತ್ತರ ಕನ್ನಡ, ೧೯೮೩.

ನಾಯಕ್ ಎನ್ ಆರ್ : ತಿಮ್ಮಕ್ಕನ ಪದಗಳು : ಜಾನಪದ ಪ್ರಕಾಶನ, ಉತ್ತರ ಕನ್ನಡ, ೧೯೮೩.

ನಾಯಕ್ ಎನ್ ಆರ್ : ಜಾನಪದ ಕವಳ ಪೇಳಿ : ಜಾನಪದ ಪ್ರಕಾಶನ, ಹೊನ್ನಾವರ, ಉತ್ತರ ಕನ್ನಡ, ೧೯೯೭.

ನಾಯಕ ಡಿ ಬಿ (ಲೇ), ಲಕ್ಕಪ್ಪಗೌಡ ಎಚ್ ಜೆ(ಪ್ರಸಂ) : 'ಹಕ್ಕಿಪಿಕ್ಕಿಯರು' ಕರ್ನಾಟಕ ಬುಡಕಟ್ಟುಗಳು, ಸಂಪುಟ ೨ : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೦.

ಪ್ರಭಾಕರ ಎ ಎಸ್ : ಬುಡಕಟ್ಟು ಅಭಿವೃದ್ಧಿ ಮೀಮಾಂಸೆ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

ಪ್ರಭಾಕರ ಎ ಎಸ್ : ಆದಿವಾಸಿ ಆಖ್ಯಾನ : ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ, ೨೦೦೬.

ಪ್ರಭಾಕರ ಎ ಎಸ್ : ಬುಡಕಟ್ಟು ಬದುಕಿನ ಸ್ಥಿತ್ಯಂತರ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

ಪ್ರಭಾಕರ ಎ ಎಸ್ : ಕರ್ನಾಟಕದ ಡೊಂಬರು : ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

ಪ್ರಶಾಂತ ಎಚ್ ಡಿ (ಸಂ) : ಜನಸಮುದಾಯ ಸಂಪುಟ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೨೦೦೦.

ಪ್ರೀತಿ ಶುಭಚಂದ್ರ : ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳವಳಿಗಳು : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

ಪುಟ್ಟಪ್ಪ ಕೆ ವಿ (ಪ್ರಸಂ) : ಯುಗಯಾತ್ರಿ ಭಾರತಿಯ ಸಂಸ್ಕೃತಿ (ಸಂಪುಟ ೧) : ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೦.

ಪೃಥ್ವಿರಾಜ್ ಲಕ್ಕಿ , ಶಿಕಾರಿ ರಾಮು : ಪಾರ್ಧಿ : ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಬೆಂಗಳೂರು, ೨೦೦೮.

ಫ್ರೆಡರಿಕ್ ಎಂಗೆಲ್ಸ್ (ಅನು) : ಗೋಪಾಲಕೃಷ್ಣರಾವ್ ಕೆ ಎಲ್ : ಕುಟುಂಬ ಖಾಸಗಿ ಆಸ್ತಿ ಮತ್ತು ರಾಜ್ಯ ಇವುಗಳ ಉಗಮ : ಪ್ರಗತಿ ಪ್ರಕಾಶನ, ಮಾಸ್ಕೋ, ೧೯೮೦.

ಬಾಗಡೆ ಜೆ ವಿ : ಕಂಜರ್‌ಭಾಟ್ : ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಬೆಂಗಳೂರು, ೨೦೦೮.

ಬಾಲಗುರುಮೂರ್ತಿ, ಪ್ರತಾಪ ರಾ ಬಹುರೂಪಿ : ಬುಡ್ಗಜಂಗಮ: ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರ್ಕಾರ ಬೆಂಗಳೂರು, ೨೦೦೮.

ಬೇವಿನಕಟ್ಟಿ ಮಂಜುನಾಥ (ಸಂ) : ವ್ಯಾಧ ಚರಿತೆ ಬೇಡ ಕುಲಮೂಲದ ಕಥನಗಳು : ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

ಬೇಂದ್ರೆ ಮಂಜುನಾಥ : ಕರ್ನಾಟಕ ಜಿಲ್ಲಾ ದರ್ಶನ : ಕರಾವಳಿ ಪ್ರಕಾಶನ, ಮಂಗಳೂರು, ೨೦೦೭.

ಭೈರಪ್ಪ ಕೆ : ಪಾಶ್ಚಿಮಾತ್ಯ ಹಾಗೂ ಭಾರತೀಯ ಸಾಮಾಜಿಕ ಚಿಂತನೆ : ಎಸ್ ಬಿ ಎಸ್ ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು, ೧೯೯೪.

ಬೋರಲಿಂಗಯ್ಯ ಹಿ ಚಿ : ಗಿರಿಜನ ನಾಡಿಗೆ ಪಯಾಣ : ರಾಗಿರೊಟ್ಟಿ ಪ್ರಕಾಶನ, ಬೆಂಗಳೂರು, ೧೯೯೧.

ಬೋರಲಿಂಗಯ್ಯ ಹಿ ಚಿ(ಸಂ) : ಕರ್ನಾಟಕದ ಜನಪದ ಕಲೆಗಳ ಕೋಶ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೬.

ಬೋರಲಿಂಗಯ್ಯ ಹಿ ಚಿ : ಬುಡಕಟ್ಟು ದೈವಾರಾಧನೆ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

ಬೋರಲಿಂಗಯ್ಯ ಹಿ ಚಿ : ವಿಸ್ಮೃತಿ ಮತ್ತು ಸಂಸ್ಕೃತಿ : ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೧.

ಬೋರಲಿಂಗಯ್ಯ ಹಿ ಚಿ : ಬುಡಕಟ್ಟು ಲೋಕದೃಷ್ಟಿ : ಅಪ್ರಕಟಿತ ಪಿಎಚ್ ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

ಬೋರಲಿಂಗಯ್ಯ ಹಿ ಚಿ , ಕಾಳೇಗೌಡ ನಾಗವಾರ : ಗಿರಿಜನ ಕಾವ್ಯ : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೪.

ಮಲ್ಲಿನಾಥಯ್ಯ ಡಿ ಹೆಚ್ (ಅನು) : ಸಮಾಜಶಾಸ್ತ್ರ ಕೈಪಿಡಿ : ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೫.

ಮಹೇಶ್ವರಪ್ಪ (ಅನು) : ಸಾಮಾಜಿಕ ಒಪ್ಪಂದ : ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೦.

ಮಾನ್ಪಡೆ ಬಿ ಮಲ್ಲಿಕಾರ್ಜುನ : ಕೊರಮ : ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಬೆಂಗಳೂರು, ೨೦೦೮.

ಮೇತ್ರಿ ಕೆ ಎಂ : ಬುಡಕಟ್ಟು ಕುಲಕಸುಬುಗಳು : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೨.

ಮೇತ್ರಿ ಕೆ ಎಂ, ಚಲುವರಾಜು (ಸಂ) : ಬುಡಕಟ್ಟು ಅಧ್ಯಯನ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೬.

ಮೇತ್ರಿ ಕೆ ಎಂ, ಚಲುವರಾಜು (ಸಂ) : ಬುಡಕಟ್ಟು ಅಧ್ಯಯನ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

ಮೊಗಳ್ಳಿ ಗಣೇಶ್ : ದಲಿತರು ಮತ್ತು ಜಾಗತೀಕರಣ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

ಯಾದಗಿರಿ ಶರ್ಮ : ಜಾನಪದ ಭಿಕ್ಷುಕ ಗಾಯಕಲು : ಉಸ್ಮಾನಿಯಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಸಂಶೋಧನ ಪ್ರಬಂಧ.

ರಂಗನಾಥ ದಿವಾಕರ : ಕರನಿರಾಕರಣೆಯ ವೀರಕಥೆ : ಲೋಕಶಿಕ್ಷಣ ಟ್ರಸ್ಟ್ ಗ್ರಂಥಮಾಲೆ, ಬೆಂಗಳೂರು, ೨೦೦೧.

ರಾಜಶೇಖರಯ್ಯ ಎ ಎ (ಸಂ) : ಡಾ ಬಾಬಾಸಾಹೇಬ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು (ಸಂಪುಟ ೭) : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮.

ರಾಜರಾಮ ಹೆಗಡೆ : ಲೌಖಿಕ ಅಲೌಖಿಕ : ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ, ಚಿತ್ರದುರ್ಗ, ೨೦೦೧.

ರಾಜೇಗೌಡ ಹ ಕ (ಸಂ) : ಜಾನಪದ ಗಂಗೋತ್ರಿ : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೮೬.

ರಾಜರಾಮ ಹೆಗಡೆ (ಸಂ) : ಭಾರತೀಯ ಇತಿಹಾಸ : ಸಮಾಜ ಮತ್ತು ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪.

ರೈ ಎ ಸುಬ್ಬಣ್ಣ (ಸಂ) : ದ್ರಾವಿಡ ನಿಘಂಟು : ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

ಲಕ್ಕಪ್ಪ ಗೌಡ ಹೆಚ್ ಜೆ (ಪ್ರ.ಸಂ) : ಕರ್ನಾಟಕ ಬುಡಕಟ್ಟುಗಳು ಸಂಪುಟ ೧, ಸಂಪುಟ ೨, : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೮, ೨೦೦೦.

ವಂದನಾಶಿವ (ಅನು) : ಮಾಧವ ಐತಾಳ್ : ಬತ್ತದ ಚಿಲುಮೆ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

ವಿಷ್ಣುನಾಯಕ್ : ಅರೆ ಖಾಸಗಿ : ಶ್ರೀ ರಾಘವೇಂದ್ರ ಪ್ರಕಾಶನ, ಅಂಕೋಲಾ, ಉತ್ತರ ಕನ್ನಡ ಜಿಲ್ಲೆ, ೨೦೦೫.

ವಿಷ್ಣುನಾಯಕ್ : ಹದ್ದು ಪಾರಿನ ಹಿಂದೆ ಮುಂದೆ : ಶ್ರೀ ರಾಘವೇಂದ್ರ ಪ್ರಕಾಶನ, ಅಂಕೋಲಾ, ಉತ್ತರ ಕನ್ನಡ ಜಿಲ್ಲೆ, ೧೯೮೨.

ವಿಷ್ಣುನಾಯಕ್ : ದುಡಿಯುವ ಕೈಗಳ ಹೋರಾಟದ ಕತೆ : ದಿನಕರ ದೇಸಾಯಿ ಸ್ಮಾರಕ ಪ್ರತಿಷ್ಠಾನ, ಅಂಕೋಲಾ, ಉತ್ತರ ಕನ್ನಡ, ೨೦೦೪.

ವಿದ್ಯಾಸಾಗರ (ಅನು), ರಘುನಾಥ ಸ : ಕೂಗಿರದ ಪ್ರತಿಧ್ವನಿ : ಮಾತಂಗ ಪ್ರಕಾಶನ, ಮೈಸೂರು, ೨೦೦೫.

ವೀರಭದ್ರಪ್ಪ ಬಿ ವಿ : ದೇವರನ್ನು ಕುರಿತು ಒಂದು ಬಹುಮುಖಿ ನೋಟ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫

ಶಂಕರನಾರಾಯಣ ತೀ ನಂ: ಕಾಡು ಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು : ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೨.

ಶ್ರೀಪಾದ ಅಮೃತ ಡಾಂಗೆ (ಅನು), ಅನಂತಕೃಷ್ಣ ಹೆಬ್ಬಾರ್ ಎಂ : ರಾಮಚಂದ್ರ ಉಡುಪ ಎನ್ : ಭಾರತ ಸಂಘ ಜೀವನದಿಂದ ಗುಲಾಮಗಿರಿಯ : ಅಭಿವ್ಯಕ್ತ ಪ್ರಕಾಶನ, ಮಂಗಳೂರು, ೧೯೮೩.

ಶಂಕರರಾವ್ ಚ ನ : ಸಮಾಜಶಾಸ್ತ್ರ ಪರಿಚಯ : ಜೈಭಾರತ್ ಪ್ರಕಾಶನ, ಮಂಗಳೂರು, ೧೯೯೬.

ಶೈಲಜಾ ಹಿರೇಮಠ : ಮಾತೃ ಪ್ರಧಾನ ಪರಿಕಲ್ಪನೆ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.೨೦೦೪.

ಶಂಕರನಾರಾಯಣರಾವ್, ಎನ್ ಪಿ ಫಣಿ : ಸಮಾಜ ಮತ್ತು ಜಾನಪದ ಇತಿಹಾಸ : ಅಕ್ಷರ ಪ್ರಕಾಶನ, ಹೆಗ್ಗೋಡು ೧೯೯೪.

ಶ್ರೀಮತಿ ಎಚ್ ಎಸ್ : ಹೆಣ್ಣು ಹೆಂಗಸು : ಬ್ಯಾಲದಕೆರೆ ಪ್ರಕಾಶನ, ಬ್ಯಾಲದಕೆರೆ, ಮಂಡ್ಯ ಜಿಲ್ಲೆ, ೨೦೦೪.

ಶ್ರೀಮತಿ ಎಚ್ ಎಸ್ : ಸ್ತ್ರೀವಾದ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.

ಶ್ರೀಕಂಠಶಾಸ್ತ್ರೀ ಎಸ್ : ಸಂಶೋಧನ ಲೇಖನಗಳು : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೫.

ಸಣ್ಣರಾಮ : "ಲಂಬಾಣಿಗಳು : ಒಂದು ಅಧ್ಯಯನ ಸಾಂಸ್ಕೃತಿಕ ಮತ್ತು ಜಾನಪದ" : ಕುವೆಂಪು ವಿಶ್ವವಿದ್ಯಾಲಯಕ್ಕೆ

ಸವಿತಾ ನಾಯಕ : ಬುಡಕಟ್ಟು ಮಹಿಳೆಯರ ಪ್ರದರ್ಶನ ಕಲೆ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ, ೨೦೦೧.

ಸಂಗಮೇಶ ಸವದತ್ತಿಮಠ : ದ್ರಾವಿಡ ಭಾಷ ವ್ಯಾಸಂಗ : ರೂಪರಶ್ಮಿ ಪ್ರಕಾಶನ, ಕಲಬುರ್ಗಿ, ೧೯೯೦.

ಸಿಮೊನ್ ದಬೋವಾ, ಶ್ರೀಮತಿ ಎಚ್ ಎಸ್ (ಅನು) : ದ ಸೆಕೆಂಡ್ ಸೆಕ್ಸ್ : ಅಧ್ಯಯನ ಮಂಡಲ, ಬೆಂಗಳೂರು, ೨೦೦೭.

ಸುಂದರ ಅ (ಸಂ) : ಕರ್ನಾಟಕ ಚರಿತ್ರೆ, ಸಂಪುಟ ೧ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೧೯೯೭

ಸುಂದರ ಅ : ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ : ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು ೧೯೯೪.

ಸೂರ್ಯನಾಥ ಯು ಕಾಮತ್ (ಸಂ) : ಕರ್ನಾಟಕ ರಾಜ್ಯ ಗ್ಯಾಜೆಟಿಯರ್ : ಕರ್ನಾಟಕ ರಾಜ್ಯ ಸರಕಾರ, ಬೆಂಗಳೂರು ೧೯೮೪.

ಹಂಪ ನಾಗರಾಜಯ್ಯ : ದ್ರಾವಿಡಭಾಷಾವಿಜ್ಞಾನ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ೧೯೯೧.

ಹಿಮ್ಮಡಿ ಯಲ್ಲಪ್ಪ : ಚನ್ನದಾಸರ : ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಬೆಂಗಳೂರು, ೨೦೦೮.

ಹಿರೇಮಠ ಎಸ್ ಎಸ್ : ಕರ್ನಾಟಕ ದಲಿತ ಸಂಸ್ಕೃತಿ, ಪರಂಪರೆ, ಜಾತ್ರೆಗಳು, ಭಾಗ ೨ : ಸಮತಾ ಪ್ರಕಾಶನ, ಹೊಸಪೇಟೆ, ೧೯೯೩.

ವರದಿಗಳು

ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿ ಒಕ್ಕಲಿಗರು : ಒಂದು ಸಾಮಾಜಿಕ ಸಮೀಕ್ಷೆಯ ವರದಿ : ದೇವರಾಜ ಅರಸ್ ಸಂಶೋಧನಾ ಸಂಸ್ಥೆ ಕರ್ನಾಟಕ ಸರ್ಕಾರ, ಬೆಂಗಳೂರು.

ದೇಸಾಯಿ ಹೇಮಲತಾ., "ಗದಗಿನ ಕಂಜರ ಭಾಟ ಜನಾಂಗ" *ಬಿಸಿಲ ಬದುಕು*, ದಾವಣಗೆರೆ: ಸೆಪ್ಟೆಂಬರ್ ೧೯೯೭.

ಹಂಪ ನಾಗರಾಜಯ್ಯ., *ದ್ರಾವಿಡ ಭಾಷಾವಿಜ್ಞಾನ*, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೧.

ಹಿತ್ತೈಪಿ., "ಅಭಿವೃದ್ಧಿಯ ನಿರೀಕ್ಷೆಯಲ್ಲಿ ಕಂಜರಭಾಟ ಸಮಾಜ" *ನವೋದಯ* ದಿನಪತ್ರಿಕೆ, ಗದಗ, ೨೧.೧೨.೧೯೯೫.

ಹಿಂದಿ

ದಕ್ಷಿಣ ಭಜರಂಗೆ (ಲೇ)., ಪಾಂಡೆ, ಅನಿಲ್‌ಕುಮಾರ (ಸಂ) : "ಛಾರಾನಗರ ಮೇ ಏಕ್ ದಿನ್ ಬುಧನ ಏಕ ನಾಟಕ" : *ಬುಧನ್*, ಸಂಪುಟ ೧, ಸಂಚಿಕೆ ೨ : ರಾಹುಲ್ ಸಾಂಕೃತ್ಯಾಯನ ಪ್ರತಿಷ್ಠಾನ, ದೆಹಲಿ, ಏಪ್ರಿಲ್ ಜೂನ್ ೨೦೦೧.

ಜಾಟ ಖೂಬಚಂದ್ : *ಕಂಜರ ಭಾಷಾ (ಭಾಂತು ಸಮಾಜ)* : ಕಂಜರ್ ಮೋಹಲ್ಲಾ, ಜಬಲಪುರ, ೨೦೦೩.

ಜಾಟ ಪ್ರಭಾತಚಂದ(ಸಂ) : *ಜಾಟ ಕಂಜರ ಸಮಾಜ ಪಂಚಾಯತ ಸಮಿತಿ* : ಕಂಜರ್ ಮೊಹಲ್ಲಾ, ಜಬಲಪುರ, ೨೦೦೭.

ರಾಮರೂಪ ಭಾನೆರಿಯಾ (ಲೇ)., ಸಿಸೋದಿಯ, ಆರ್ ಸಿ (ಸಂ) : "ಸಾಂಸಿ ಜಾತಿ ಕಿ ಕಹಾನಿ ಉಸಕಿ ಅಪನಿ ಜುಬಾನಿ" : *ಭಾರತ ವರ್ಷ ಮೇ ಜಾತಿಪ್ರಥಾ ಕಾ ಪ್ರಾದುರ್ಭಾವ* : ಸಾಂಸಿ ಸಮಾಜ ಸುಧಾರಣ ಸಂಘ, ಭೂಪಾಲ್, ೧೯೯೪.

ಸಿಸೋದಿಯ ಆರ್ ಸಿ (ಸಂ) : *ಭಾರತ ವರ್ಷ ಮೇ ಜಾತಿಪ್ರಥಾ ಕಾ ಪ್ರಾದುರ್ಭಾವ* , ಸಾಂಸಿ ಸಮಾಜ ಸುಧಾರಣ ಸಂಘ, ಭೂಪಾಲ್, ೧೯೯೪.

ಮರಾಠಿ

ಭಾಟ ಮೋರಚಂದ : ಸಂಸಮಲ್ ಜಾತ ಪಂಚಾಯತ್ ಕಾಯ್ದಾ ಕಾನೂನು ಘಟನಾ ಸಮಿತಿ : ಅಖಿಲ ಭಾರತೀಯ ಸಂಸಮಲ್ ಕಂಜರಭಾಟ ಸಮಾಜ ಸಂಘ, ಪುಣೆ, ೨೦೦೦.

ಮೀಣೆಕರ್ ಅಜೀತ್ : ಫಿರಸ್ತೂ : ಸಲೋನಿ ಅಜೀತ್ ಮೀಣೇಕರ್, ಇಚಲಕರಂಜಿ, ೧೯೯೭.

ರಾಠೋಡ ಮೋತಿರಾಜ : ಪಾಲ ನಿವಾಸಿ ಭಟಕ್ಯಾ ಜಮಾತಿ : ಬಂಜಾರ ಕರಮಚಾರಿ ಸಂಘಟನ ಮಹಾರಾಷ್ಟ್ರ, ಔರಂಗಾಬಾದ, ೨೦೦೭.

ENGLISH

Ananthakrishna Iyer, L K., *The Mysore Tribes and Castes*, The Mysore University, Mysore, 1930, rpt, Mittal Publications, New Delhi , 1998, 5 Vols.

Aparna rao, Michael j casimi., Movements of peoples, Nomads in India, sociology and sociological anthropology, mumbai, 2003.

Arnold David., Dacioty and Rural Crime in Madras. 1860-1940, The Journal of peasant studies, vol.6 No. 2 January, 1979.

Arnold David., policy Power and colonial Rule Madras 1859-1947, OUP, Delhi, 1988.

Balaji Pandey., Displaced Development, 2005, Friedrich Ebert stiftung, New Delhi.

Bhargava B S., The Criminal Tribes A Social and Economic Study of the Principal Criminal Tribes and Castes in North India, Ethnographic and Folk Culture Society, Lucknow,1949.

Blacksmith K R., Nomadic Tribes and social work in India, cambridge university press, cambridge,1978.

Brochure on Reservation and Concessions for Scheduled Castes, Scheduled Tribes and other Backward Classes, Nabhi Publications, New Delhi, 2004.

Brochure on Reservation for Scheduled Castes, Scheduled Tribes and other Categories of Backward Classes in Services and Posts, Government Press, Bangalore,1987.

Chinnappa Reddy., Report of The Karnataka Third Backward Classes Commission, Vol. I., 1990.

Criminal Classes in the Bombay Presidency: Government central press, Bombay, 1908.

CTA Enquiry committee report of 1911, Madras 1912.

Devy G N., Budhan, DNT Rights Group,Vadodara:April-June, 2001.

Devy G N (Chairman)., Technical Advisory Group on Denotified Nomadic and Semi-nomadic Tribes Report, 2006, Ministry of Social Justice and Empowerment, Government of India,NewDelhi.

Elwin, Verrier., *The Religion of an Indian Tribes,* Oxford University Press, Bombay, 1981.

Enthoven R E., *The Tribes and Castes of Bombay,* 3 Vols, Government Central Press, Bombay, 1922., Cosmo Publications, Delhi, rpt. 1975 .

Eustace J Kitts, A Compendium of the Castes and Tribes found in India: Census of India 1881, Education Sociey Press, Byculla, 1885., The Academic Press, Gurgaon, rpt.1982.

Gauri Shankar : Born Criminal, Kishor Vidyaniketan Varanasi, 1979.

Ghurye G H., *The Scheduled Tribes*, Popular Prakashan, Bombay, 1959.

Government of Bombay Report of the Criminal Tribes act Enquiry Committee, Governmant Central Press Bombay, 1939.

Hardiman david., The coming of the Devi – Adivasi Assertion in western India, O U P, New Delhi, 1987.

Hassan S S., *The Castes and Tribes of H E H Nizam's Dominions*, Government Central Press, Bombay, 1920, Asian Educational Services, New Delhi, rpt. 1989.

Havanur L G (Chairman)., *Karnataka Backward Classes Commission Report,* 5 Vols, : Government Press, Bangalore,1975.

Herskovits M J., *Cultural Anthropology*, Inida Book House, New Delhi,1974.

Home judicial department , special G.O. No 2900, Government of Madras,1952.

Home judicial department ,G.O. No 101,dated 15th january 1917. Government central press, Andhra pradesh : 1917.

Jawar Lal Neharu (Ed.)., M.H.Gavit, Attar Chand, 1989, H.K. Publishers and Distributors, New Delhi.

Malli Gandhi., Development of De-notified Tribes Policy and Practice , Sarup & Sons New Delhi, 2006.

Malli Gandhi., De notified Tribes: Demensions of change: Kanishka publishers, New Delhi, 2008.

Meena Radhakrishna., Dishonoured by History 'Criminal Tribes' and British Colonial Policy, Orient longman, New Delhi, 2001.

Misra P K, Rajalakshmi, C R Verghese, I., *Nomads in the Mysore City* , Anthropological Survey of India, Calcutta, 1971.

Nagan Gowda, R (Chairman)., *Mysore Backward Classes Committee Report,* Government Press, Bangalore, 1979.

Nanjundayya H V., *The Ethnographic Survey of Mysore,* Government Press, Bangalore, 1906.

Nirmalkumar Bose., *Tribal Life in India*, National Book Trust, New Delhi, 1971.

Ravivarma Kumar (Chairman)., *The Karnataka State Commission for Backward Classes Special Report -2000,* Government Press, Bangalore, 2000.

Reddy O Chinnappa (Chairman).,Report of the Karnataka Third Backward Classes Commission, 2 Vols, Government Press, Bangalore, 1990.

Risley H H.,*The Caste and Tribes of Bengal,* Bengal Secretariat Press, Calcutta, 1891., Firma Mukhopadhyay Calcutta, rpt, 1981.

Russell R V and Hiralal, *The Tribes and Castes of the Central Provinces of India,* Macmillan and Co., London, 1916., Cosmo Publications, New Delhi, rpt, 1975.

Semhadri Y C., Ex-Criminal Tribes of India, National Publishing House, New Delhi, 1979.

Sharma B.D., Tribal Development, 2003, Sahyog Pustak Kutir (Trust) New Delhi.

Shashi, S S., *The World of Nomads*, Lotus Press, New Delhi ,2006.

Singh, K S., *The Scheduled Castes*, People of Inida National Series, vol. 2, Oxford University, Press, Delhi,1993.

Singh K.S., (General Editor)., *People of India : Karnataka,* Volume XXVI, Anthropological Survey of India, New Delhi, 2003.

...., *India's Communities*, People of Inida National Series, vol.4-6, Oxford University, Press, Delhi, 1998.

...., *The Scheduled Tribes,* People of Inida National Series, vol. 3, Oxford University, Press, Delhi, 1998.

..........., *Castes and Tribes of Southern India,* 7 vols, Government Press, Madrss 1909, Cosmo Publications, Delhi, rpt. 1975.

Suryanath U. Kamath., Gazetter of India, Karnataka State Gazeeteer Uttara Kannada Dist., V.B. Soobbaiah and son's, O.T.C. Road, Bangalore,1985.

The Annual Administration Report on the Working of the Criminal Tribes Act in the Bombay Presidency Part - I, Govt. Central Press, Bombay, 1936

The New Encyclopaedia Britannica , The University of Chicago, 1992.

Thurrston, E., *Ethnographic Notes on Southern India,* Government Press, Madrss, 1906.

Venkataswamy T (Chairman).,Report of the Karnataka Second Backward Classes Commission, 3 Vols, Government Press, Bangalore, 1986.

೨. ಮಾಹಿತಿದಾರರ ವಿವರ

ಸಂ.	ಹೆಸರು	ವಯಸ್ಸು	ಉದ್ಯೋಗ
ಭೋವಿ ಸಮುದಾಯದ ಮಾಹಿತಿದಾರರು			
ವಿಳಾಸ : ಗಂಗಾಧರನಗರ, ಹುಬ್ಬಳ್ಳಿ ಸೆಟ್ಲಮೆಂಟ್			
೧.	ಧರ್ಮು ದೊಡಮನಿ	೫೨	ಕಿರಾಣಿ ಅಂಗಡಿ
೨.	ಭೀಮಣ್ಣ ಬೆಂಗಳೂರು	೭೫	ಮರಣ ಹೊಂದಿದ್ದಾರೆ
೩.	ಲಕ್ಷ್ಮಣ ಬೆಂಗಳೂರು	೪೨	ಡಿಸ್‌ಕೇಬಲ್
೪.	ರಾಜು ದೊಡಮನಿ	೩೦	ಕಿರಾಣಿ ಅಂಗಡಿ
೫.	ಗೋವಿಂದಪ್ಪ ಭೋವಿ	೩೫	ರಿಕ್ಷಾಚಾಲನೆ
೬.	ಪರಶುರಾಮ ನಲಗನಳ್ಳಿ	೫೦	ಸೀಮೆಎಣ್ಣೆ ವ್ಯಾಪಾರ
೭.	ಸಂಗವ್ವ ದೊಡಮನಿ	೭೫	ವಯೋವೃದ್ಧರು
೮.	ರಮೇಶ ದೊಡಮನಿ	೩೫	ರಿಕ್ಷಾಚಾಲಕ
೯.	ಶರಣಪ್ಪ ಭೋವಿ	೬೯	ವಯೋವೃದ್ಧರು
೧೦.	ಶಂಕ್ರಪ್ಪ ದೊಡಮನಿ	೭೫	ವಯೋವೃದ್ಧರು
ಗಂಟಿಚೋರ ಸಮುದಾಯದ ಮಾಹಿತಿದಾರರು			
ವಿಳಾಸ : ಸೆಟ್ಲಮೆಂಟ್, ಸಕ್ರಿ ಹೈಸ್ಕೂಲ್ ಎದರುಗಡೆ, ಬಾಗಲಕೋಟ			
೧.	ವಿಠ್ಠಲ ಗಾಯಕವಾಡ	೪೫	ಲಾರಿಡ್ರೈವರ್
೨.	ರಾಮಣ್ಣ ಕಟ್ನಳ್ಳಿ	೫೦	ಸಮಾಜದ ಮುಖ್ಯಸ್ಥ
೩.	ಪರಮೇಶ ಹೊಸೂರು	೬೦	ಕೂಲಿ
೪.	ವಿಠ್ಠಲ ಹಂಸನೂರ	೪೦	ಆಟೋಡ್ರೈವರ್
೫.	ಶಂಕ್ರಪ್ಪ ಹಂಸನೂರ	೫೫	ಕೃಷಿ
೬.	ಕೃಷ್ಣಪ್ಪ ಹೊಸೂರು	೭೫	ವಯೋವೃದ್ಧರು
೭.	ಈರಪ್ಪ ಹೊಸೂರು	೬೫	ನಿವೃತ್ತ ನೌಕರರು
ವಿಳಾಸ : ಜುಲೈಗಲ್ಲಿ ಸೆಟ್ಲಮೆಂಟ್ ಏರಿಯಾ, ಬಿಜಾಪುರ			
೮.	ಸಿದ್ದುಲೋಹಾರ	೬೦	ಮೆಕಾನಿಕ್ ಕೆಲಸ

೯.	ವಿಜಯಕುಮಾರ ಮಸೂತಿ	೪೫	ಖಾಸಗಿ ಕೆಲಸ
೧೦.	ಹಣಮಂತ ಮಸೂತಿ	೬೫	ನಿವೃತ್ತ ಕಾರ್ಮಿಕ ಅಧೀಕ್ಷಕರು
೧೧.	ಸಿದ್ರಾಮ ಜಾದವ್	೭೦	ವಯೋವೃದ್ಧರು
೧೨.	ಡಿ.ಎಫ್.ಸೀತೋಳೆ	೭೦	ನಿವೃತ್ತ ನೌಕರರು
೧೩.	ಶಿವಾನಂದ ಗಾಯಕವಾಡ	೪೫	ಕೆಎಸ್‌ಆರ್‌ಟಿಸಿ ಡ್ರೈವರ್
೧೪.	ವಿಲಾಸ ಮಸೂತಿ	೫೫	ವ್ಯಾಪಾರ
೧೫.	ವಿನೋದ ಕೆ.ಮಸೂತಿ	೪೧	ಸೆಕ್ಯೂರಿಟಿಗಾರ್ಡ್
೧೬.	ಸದಾನಂದ ಗಾಯಕವಾಡ	೪೨	ಶಿಕ್ಷಕರು
೧೭.	ಶಿವಾಜಿರಾವ್ ಫಿರಸ್ತ ಜಾದವ್	೭೪	ವಯೋವೃದ್ಧರು

ವಿಳಾಸ: ಗಣಪತಿ ಗಲ್ಲಿ, ದಾಂಡೇಲಿ

೧೮.	ಶರಣಪ್ಪ ಗಾಯಕವಾಡ	೩೫	ಆಟೋ ಡ್ರೈವರ್
೧೯.	ತಿಪ್ಪಣ್ಣ ಜಾದವ್	೭೫	ನಿವೃತ ಕೆಎಸ್‌ಆರ್‌ಟಿಸಿ ಡ್ರೈವರ್
೨೦.	ಸಂಗವ್ವ ಗಾಯಕವಾಡ	೬೮	ಮನೆ ಕೆಲಸ
೨೧.	ಸಾಯಿನಾಥಗಾಯಕವಾಡ	೪೫	ಗ್ರಾ.ಪಂ.ಸದಸ್ಯರು

ವಿಳಾಸ: ಗಾಂಧಿನಗರ ಸೆಟ್ಲಮೆಂಟ್, ಬೆಟಗೇರಿ ಗದಗ

೨೨.	ಕಮಲಮ್ಮ ಹಂಸನೂರ	೭೦	ವಯೋವೃದ್ಧರು
೨೩.	ರಾಮಚಂದ್ರ ಲ ಹಂಸನೂರ	೪೫	ಶಿಕ್ಷಕರು
೨೪.	ಎಲ್.ಪಿ.ಕಟ್ನಳ್ಳಿ	೪೪	ಶಿಕ್ಷಕರು
೨೫.	ರಾಮು ಹಾಸಂಗಿ	೪೮	ಅಧ್ಯಕ್ಷರು ಗಂಟಿಚೋರ ಸಮಾಜ
೨೬.	ವೈ.ಎಸ್.ಹಾಸಂಗಿ	೭೨	ವಯೋವೃದ್ಧರು
೨೭.	ಲಕ್ಷ್ಮಣ ಹಾಸಂಗಿ	೫೮	ಆರೋಗ್ಯ ಇಲಾಖೆ
೨೮.	ತಿಪ್ಪಣ್ಣ ಹುಮಚಗಿ	೭೦	ವೃದ್ಯಾಪ
೨೯.	ಬಸವರಾಜ್ ಕಟ್ನಳ್ಳಿ	೬೫	ನಿವೃತ ನೌಕರರು
೩೦.	ಸೋಮು ಚಪ್ಪರಮನಿ	೬೨	ನಿವೃತ ನೌಕರರು
೩೧.	ಯಮನೂರು ಮಲ್ಮನಿ	೭೫	ವಯೋವೃದ್ಧರು
೩೨.	ಯಶೋಧಮ್ಮ ಹಾಸಂಗಿ	೭೨	ವಯೋವೃದ್ಧರು
೩೩.	ಹನುಮವ್ವ ಹಾಸಂಗಿ	೬೮	ಮನೆ ಕೆಲಸ
೩೪.	ಬೈಲವ್ವ ಹಂಸನೂರ	೫೮	ಮನೆ ಕೆಲಸ

ವಿಳಾಸ: ಸೆಟ್ಲಮೆಂಟ್ ಗೋಕಾಕ್ ಪಾಲ್ಸ್

೩೫.	ಭೀಮರಾವ್ ಜಾದವ್, ಸೊಲ್ಲಾಪೂರ,	೬೯	ಮಾಜಿಮಹಾಪೌರ
೩೬.	ಕಲ್ಲೊಳಪ್ಪ ಪಾತ್ರೂಟ	೫೫	ಮಿಲ್ ಕೆಲಸ
೩೭.	ರಮೇಶ ಗಾಯಕವಾಡ	೪೯	ಮಿಲ್ ಕೆಲಸ
೩೮.	ಬಸವರಾಜ ಪಾತ್ರೂಟ	೫೬	ಮಿಲ್ ಕೆಲಸ
೩೯.	ಬಸವ್ವಗಾಯಕವಾಡ	೭೦	ವಯೋವೃದ್ಧರು

ವಿಳಾಸ: ಗಂಗಾಧರ ನಗರ, ಸೆಟ್ಲಮೆಂಟ್, ಹುಬ್ಬಳ್ಳಿ

೪೦.	ಗುಂಡಪ್ಪ ದತ್ತವಾಡ	೯೮	ಬ್ರಿಟಿಷರ ಕಾಲದ ಪೊಲೀಸ್
೪೧.	ಶಿವರಾಯಪ್ಪ ಹಂಸನೂರ	೮೦	ನಿವೃತ ಪಿಎಸ್ಐ
೪೨.	ಕಮಲವ್ವ ಹಂಸನೂರ	೮೨	ವಯೋವೃದ್ಧರು
೪೩.	ಬಾಳವ್ವ ದತ್ತವಾಡ	೭೫	ವಯೋವೃದ್ಧರು
೪೪.	ರತ್ನವ್ವ ದತ್ತವಾಡ	೭೦	ವಯೋವೃದ್ಧರು
೪೫.	ಮುರಳಿ ದತ್ತವಾಡ	೫೦	ಗಂಟಿಚೋರ ಅಧ್ಯಕ್ಷರು
೪೬.	ರಾಜೇಶ ಅಥಣಿ	೩೫	ಗಂಟಿಚೋರ ಕಾರ್ಯದರ್ಶಿ
೪೭.	ಗಂಗಾಧರ ದತ್ತವಾಡ	೪೮	ರೈಲ್ವೆ ಇಲಾಖೆ
೪೯.	ಗೋಪಾಲ ದತ್ತವಾಡ	೩೭	ರಿಕ್ಷಾಚಾಲಕ
೫೦.	ಶ್ರೀಕಾಂತ ದತ್ತವಾಡ	೩೫	ರಿಕ್ಷಾಚಾಲಕ

ಕೊರಮ ಸಮುದಾಯದ ಮಾಹಿತಿದಾರರು

ವಿಳಾಸ : ಗಾಂಧಿನಗರ ಸೆಟ್ಲಮೆಂಟ್, ಬೆಟಗೇರಿ ಗದಗ

೧.	ವೈ.ಜಿ.ಗಡದ	೬೫	ಕೊರಮ ಸಮಾಜ ಅಧ್ಯಕ್ಷರು
೨.	ಸುರೇಶ ಕಟ್ಟಿಮನಿ	೫೫	ನಗರಸಭೆ ಸದಸ್ಯರು
೩.	ಹಣಮಂತ ಕಟ್ಟಿಮನಿ	೭೫	ವಯೋವೃದ್ಧರು
೪.	ರಾಮಣ್ಣ ಬಾಗಲಕೋಟ	೮೯	ವಯೋವೃದ್ಧರು
೫.	ಯಲ್ಲಪ್ಪ ಬಜೆಂತ್ರಿ	೯೧	ವಯೋವೃದ್ಧರು
೬.	ಕೃಷ್ಣಾ ಗೋಕಾವಿ	೭೦	ಮಾಜಿನಗರಸಭೆ ಸದಸ್ಯರು
೭.	ಲಕ್ಷ್ಮಣ್ಣ ಕಟ್ಟಿಮನಿ	೬೮	ವಯೋವೃದ್ಧರು
೮.	ಚಂದ್ರಶೇಖರ ಕಟ್ಟಿಮನಿ	೪೫	ರೈಲ್ವೆ ಇಲಾಖೆ
೯.	ಪ್ರಶಾಂತ ಗೋಕಾವಿ	೪೨	ಕೃಷಿ
೧೦.	ಪರುಶರಾಮ ಗಡದ	೪೫	ಕೃಷಿ
೧೧.	ರೇಣುಕಾ ವೈ. ಗಡದ	೫೪	ಮನೆ ಕೆಲಸ
೧೨.	ನಾಗವ್ವ ಎಲ್.ಕಟ್ಟಿಮನಿ	೬೦	ಮನೆ ಕೆಲಸ

ವಿಳಾಸ : ಗಂಗಾಧರ ನಗರ, ಸೆಟ್ಲಮೆಂಟ್, ಹುಬ್ಬಳ್ಳಿ

೧೩.	ಕೆ.ಜಿ.ಗೋಕಾಕ್	೭೫	ಮಹಾನಗರ ಪಾಲಿಕೆ ಹುಬ್ಬಳ್ಳಿ ಮಾಜಿ ಸದಸ್ಯರು
೧೪.	ಎನ್.ವೈ.ಗೋಕಾಕ್	೭೪	ಹಿರಿಯ ಮುಖಂಡರು
೧೫.	ಸುಭಾಷ ಮಲ್ನಾಡ್	೫೫	ರೈಲ್ವೆ ಇಲಾಖೆ ಹುಬ್ಬಳ್ಳಿ
೧೬.	ಬಸವರಾಜ ಭಜಂತ್ರಿ	೫೨	ರೈತ ಮುಖಂಡರು, ಹುಬ್ಬಳ್ಳಿ
೧೭.	ಪಕೀರಪ್ಪ ಭಜಂತ್ರಿ	೫೦	ಅಧ್ಯಕ್ಷರು, ಕರ್ನಾಟಕ ರಕ್ಷಣಾ ವೇದಿಕೆ, ಹುಬ್ಬಳ್ಳಿ
೧೮.	ಯಮನೂರ ಗುಡಿಹಾಳ	೫೫	ಮಾಜಿ ಸದಸ್ಯರು ಹುಬ್ಬಳ್ಳಿ ಮಹಾನಗರ ಪಾಲಿಕೆ

೧೯.	ಯಮನೂರ ಜಾದವ	೫೦	ಮಾಜಿ ಸದಸ್ಯರು ಹುಬ್ಬಳ್ಳಿ ಮಹಾನಗರ ಪಾಲಿಕೆ

ಪಾರ್ಧಿ ಸಮುದಾಯದ ಮಾಹಿತಿದಾರರು

ವಿಳಾಸ : ಸೆಟ್ಲಮೆಂಟ್ ಸಕ್ರಿ ಹೈಸ್ಕೂಲ್ ಎದರುಗಡೆ, ಬಾಗಲಕೋಟ

೧.	ಲಕ್ಷ್ಮಣ ಚವ್ಹಾಣ	೮೦	ಕೈಗಾರಿಕ ಕಾರ್ಮಿಕ
೨.	ಚಂಪೂ ಕಾಳೆ	೭೫	ಕೃಷಿ
೩.	ಶೊಲಪ್ಪ ಚಂದಪ್ಪ ಕಾಳೆ	೮೦	ಕೃಷಿ
೪.	ದೇವದಾಸ ಎಂಗಪ್ಪ ಚವ್ಹಾಣ	೭೫	ಕೈಗಾರಿಕ ಕಾರ್ಮಿಕ
೫.	ಪದ್ದವ್ವ ಮನಪ್ಪ ಪವಾರ	೭೫	ಬಾಗಲಕೋಟ
೬.	ಭಾಗವ್ವ ಅಂಜಲಪ್ಪ .	೭೩	ವಯೋವೃದ್ಧರು
೭.	ತಾರವ್ವ ಕೃಷ್ಣಾಜಿ ಪವಾರ	೭೨	ಮನೆ ಕೆಲಸ
೮.	ಯಮನವ್ವ ಪವಾರ	೭೪	ವಯೋವೃದ್ಧರು
೯.	ಚಂದ್ರವ್ವ ಬಾಲಪ್ಪ ಕಾಳೆ	೬೫	ಮನೆ ಕೆಲಸ
೧೦.	ಶಂಕರ ಪವಾರ	೪೨	ವ್ಯಾಪಾರ
೧೧.	ಕುಮಾರ ಕೃಷ್ಣಾಜಿ ಪವಾರ	೪೪	ಕಾರ್ಯದರ್ಶಿ
೧೨.	ಶಿವಾಜಿ ಚವ್ಹಾಣ	೬೫	ಅಧ್ಯಕ್ಷರು

ವಿಳಾಸ : ಜುಲೈಗಲ್ಲಿ ಸೆಟ್ಲಮೆಂಟ್ ಏರಿಯಾ, ಬಿಜಾಪುರ

೧೩.	ದೇವದಾಸ್ ಮಾನು ರಾಠೋಡ	೬೫	ಕೂಲಿ
೧೪.	ಲಕ್ಷ್ಮಣ ಲಿಂಗಪ್ಪ ರಾಠೋಡ	೫೫	ಕೂಲಿ
೧೫.	ಮಂಜುಳಾಬಾಯಿ ಈಶ್ವರಪ್ಪ ರಾಠೋಡ	೭೦	ವಯೋವೃದ್ಧರು
೧೬.	ಅರುಣ್ ವಿಕ್ರಮ ಚವ್ಹಾಣ	೪೫	ವ್ಯಾಪಾರ
೧೭.	ತಿಪ್ಪಬಾಯಿ ಲಕ್ಷ್ಮಣ ಕಾಳೆ	೬೦	ಕೂಲಿ
೧೮.	ಸುರೇಶ ರಾಮು ಚವ್ಹಾಣ	೪೮	ಕೂಲಿ
೧೯.	ವೆಂಕಟೇಶ ಚವ್ಹಾಣ	೩೪	ವ್ಯಾಪಾರ
೨೦.	ನಾಮದೇವ ಚವ್ಹಾಣ	೪೫	ವ್ಯಾಪಾರ
೨೧.	ಶಾಂತಿಬಾಯಿ ರಮೇಶ ಕಾಳೆ	೪೯	ಕೂಲಿ

ವಿಳಾಸ : ಗಾಂಧಿನಗರ ಸೆಟ್ಲಮೆಂಟ್, ಬೆಟಗೇರಿ ಗದಗ

೨೨.	ಚಂದ್ರವ್ವ ದೇವಿದಾಸ್ ಪವಾರ್	೫೫	ಮನೆ ಕೆಲಸ
೨೩.	ಗಂಗವ್ವ ಬಸಪ್ಪ ಪವಾರ್	೫೪	ಪಾತ್ರೆ ತೊಳೆಯುವುದು.
೨೪.	ಚಂದು ಈಶಪ್ಪ ಕಾಳೆ	೪೯	ಕೂಲಿ
೨೫.	ರಾಮು ಕಾಳೆ	೫೫	ಕಟ್ಟಡ ಕೆಲಸ
೨೬.	ವಸಂತ ರತ್ನಪ್ಪ ಕಾಳೆ	೪೪	ಕೂಲಿ
೨೭.	ರಾಜು ರಾಬರ್ಟ್	೩೫	ಆಟೋ ಡ್ರೈವರ್
೨೮.	ಈರಮ್ಮ ನಾರಾಯಣ ಚವ್ಹಾಣ	೬೫	ಮನೆ ಕೆಲಸ
೨೯.	ವಿಜಯ ಕಾಳೆ	೪೫	ಕೂಲಿ

೩೦.	ರಮೇಶ ಚವ್ಹಾಣ	೩೦	ಆಟೋ ಡ್ರೈವರ್
೩೧.	ಬಾಬು ಪಕೀರಸಾಬ್	೪೫	ಕೂಲಿ

ವಿಳಾಸ : ಗಂಗಾಧರ ನಗರ, ಸೆಟ್ಲಮೆಂಟ್, ಹುಬ್ಬಳ್ಳಿ

೩೨.	ಮಾರುತಿ ಕಟ್ಟಿಮನಿ	೫೯	ಕೂಲಿ
೩೩.	ತಿಪ್ಪವ್ವ ಗೋವಿಂದಪ್ಪ ಚವ್ಹಾಣ	೬೦	ಕೂಲಿ
೩೪.	ಗೊಪವ್ವ ಬಾಲಪ್ಪ ಅಬ್ಬಿಗೇರಿ	೬೯	ಗೃಹಿಣಿ
೩೫.	ಪಾರ್ವತವ್ವ ಸಜನಿ ರೋಣ	೭೫	ಗೃಹಿಣಿ
೩೬.	ಶಾಹು ಚಂದಪ್ಪ ಕಟ್ಟಿಮನಿ	೩೯	ವ್ಯಾಪಾರ
೩೭.	ರಾಮ ಸಂಗಪ್ಪ ಕಾಳೆ	೫೨	ಕೂಲಿ
೩೮.	ಮಾರುತಿ ರಾಮು ಕಾಳೆ	೪೫	ಕೂಲಿ
೩೯.	ಸಿದ್ದಪ್ಪ ಜಂಪ್ಪಣ್ಣ ಕಟ್ಟಿಮನಿ	೫೨	ಕೂಲಿ
೪೦.	ತಿಪ್ಪವ್ವ ಯಲ್ಲಪ್ಪ ಕಾಳೆ	೫೦	ಮನೆ ಕೆಲಸ

ಚಪ್ಪರಬಂದ ಸಮುದಾಯದ ಮಾಹಿತಿದಾರರು

ವಿಳಾಸ : ಸೆಟ್ಲಮೆಂಟ್ ಸಕ್ರಿ ಹೈಸ್ಕೂಲ್ ಎದರುಗಡೆ, ಬಾಗಲಕೋಟ

೧.	ಹುಸೇನಸಾಬ ಚಪ್ಪರಬಂದ	೫೨	ಶಿಕ್ಷಕ
೨.	ಮಾಬುಸಾಬ ಬಳಬಟ್ಟಿ	೫೫	ವ್ಯಾಪಾರ
೩.	ಇಮಾಮಸಾಬ ಮಹ್ಮದ್ ಅಲಿ ಬಳಬಟ್ಟಿ	೫೨	ಕೃಷಿ
೪.	ಸುಲ್ತಾನಸಾಬ ಬುಡನ್‌ಸಾಬ ಹುನಗುಂದ	೫೪	ಎಫ್‌ಡಿಸಿ
೫.	ರಾಜಾಸಾಬ ಹುಸೇನಸಾಬ ಬುದಿಹಾಳ	೭೫	ನಿವೃತ್ತರು
೬.	ಜನತ್ ಬೀ ಮಹ್ಮದ್ ಅಲಿ ಬಳಬಟ್ಟಿ	೭೦	ಮನೆ ಕೆಲಸ
೭.	ಫಾತಿಮಾ ಬುಡನಸಾಬ ಹುನಗುಂದ	೭೨	ಮನೆ ಕೆಲಸ
೮.	ರಾಜಾಸಾಬ ಬಾಚಾಸಾಬ ಬುದಿಹಾಳ	೩೮	ಕ್ಲೀನರ್
೯.	ರಫಿಕ್ ಮೌಲಸಾಬ ಕಂದಗಲ್	೩೫	ಖಾಸಗಿ
೧೦.	ಫಿರೋಜ್ ಮಹ್ಮದ್ ಅಲಿ ಬಳಬಟ್ಟಿ	೩೯	ನಿರುದ್ಯೋಗ

ವಿಳಾಸ : ಜುಲ್ಲೈಗಲ್ಲಿ ಸೆಟ್ಲಮೆಂಟ್ ಏರಿಯಾ, ಬಿಜಾಪುರ

೧೧.	ಮೌಲಸಾಬ ಹುಸೇನಸಾಬ	೭೦	ವಯೋವೃದ್ದರು
೧೨.	ಜಾಕೀರ ಹುಸೇನ ಮುನ್ನಾ	೩೨	ವ್ಯಾಪಾರ
೧೩.	ರಜಕಸಾಬ ಪಡಕನೂರ್	೬೫	ಕಿರಾಣಿ ಅಂಗಡಿ
೧೪.	ಮೌಲಾಲಿ ಪುಂಗಿಮಲೆ	೪೦	ಕಿರಾಣಿ
೧೫.	ಸುಲ್ತಾನಸಾಬ ಹುಸೇನಸಾಬ	೬೮	ಹಿರಿಯ ಮುಖಂಡ

ವಿಳಾಸ : ಗಾಂಧಿನಗರ ಸೆಟ್ಲಮೆಂಟ್, ಬೆಟಗೇರಿ, ಗದಗ

೧೬.	ಹುಸನ್	೫೪	ಹಾಸ್ಟಲ್ ವಾರ್ಡನ್
೧೭.	ಇಮಾಮ್‌ಸಾಬ	೪೮	ಕೂಲಿ
೧೮.	ಮಹಬೂಬಸಾಬ	೪೬	ಕೂಲಿ

೧೯.	ಮಹಮದ್ ಅಲಿ ರಾಜಾಸಾಬ್, ರಾಜನಾಳ	೫೫	ಗೌಂಡಿ ಕೆಲಸ
೨೦.	ಪಟೇಲಸಾಬ ಬಾಗೆವಾಡಿ	೨೨	ವಿದ್ಯಾರ್ಥಿ

ವಿಳಾಸ: ಗಂಗಾಧರ ನಗರ, ಸೆಟ್ಲಮೆಂಟ್, ಹುಬ್ಬಳ್ಳಿ

೨೧.	ಆರ್.ಡಿ. ಚಪ್ಪರಬಂದ್	೪೯	ಪೊಲೀಸ್
೨೨.	ಬಾತಿಸಾಬ ರಾಜಾಸಾಬ ಮುಜಾವರ್	೩೮	ಕೂಲಿ
೨೩.	ಮಹಿಬೂಬ ರಾಜಾಸಾಬ ಮುಜಾವರ್	೩೩	ಪ್ರಿಂಟಿಂಗ್‌ಪ್ರೆಸ್ ಕೆಲಸ
೨೪.	ವಜಿರಸಾಬ್ ಅಮೀನ್‌ಸಾಬ, ಕೊಡಗನೂರ್	೩೮	ವ್ಯಾಪಾರ
೨೫.	ಹುಸೇನಸಾಬ ಬಿಜಾಪುರ	೪೦	ಕೂಲಿ
೨೬.	ಆಜಿಮಲಂಗ್ ಸಕ್ರುದ್ದಿನ್ ಹೆಬ್ಬಾಳ	೩೮	ಗೌಂಡಿ ಕೆಲಸ
೨೭.	ಗೌಸಮೊದ್ದಿನ್ ಸಕ್ರುದ್ದಿನ್ ಹೆಬ್ಬಾಳ	೩೦	ಗೌಂಡಿ ಕೆಲಸ
೨೮.	ರಮಜಾನ್ ಮಲ್ಲಿಕ್‌ಸಾಬ ಬಳಗನೂರ್	೫೯	ಪ್ರಿಂಟಿಂಗ್‌ಪ್ರೆಸ್ ಕೆಲಸ
೨೯.	ಸುಲ್ತಾನಸಾಬ ಅಮಿನಸಾಬ ಕೊಡಗನೂರ	೬೦	
೩೦.	ಬಾಲೆಪೀರ್ ಅಮಿನಸಾಬ್ ಕೊಡಗನೂರ	೭೦	ಹಿರಿಯ ಮುಖಂಡರು
೩೧.	ರಹಿಮತಬೀ ಕೊಡಗನೂರ	೫೫	ಗಾರೆ ಕೆಲಸ
೩೨.	ಅಮಿನಾಬೀ ನರಸಣಗಿ	೬೦	ಮನೆಕೆಲಸ
೩೩.	ಮಹಿಮೂನ್	೫೫	ಕೃಷಿ ಕೆಲಸ

ಕಂಜರಭಾಟ ಸಮುದಾಯದ ಮಾಹಿತಿದಾರರು

ವಿಳಾಸ : ಗಂಗಾಧರ ನಗರ, ಸೆಟ್ಲಮೆಂಟ್, ಹುಬ್ಬಳ್ಳಿ

೧.	ಅಶೋಕ ಭೀಮ್‌ಸಿಂಗ್ ಬಾಸ್	೩೯	ಕೂಲಿ
೨.	ಗೋಪಿಬಾಯಿ ಬಾಬು	೭೫	ಭೀಕ್ಷಾಟನೆ
೩.	ಪ್ರತಾಪ್ ಚವಾಸಾ ಮಟಕಿ	೬೭	ನಿವೃತ್ತ ನೌಕರ
೪.	ಅಕ್ಕಂಬಯ್ಯ	೬೬	ಕೂಲಿ
೫.	ನರಸಿಂಗಬಾಬು	೬೦	ಕೂಲಿ
೬.	ಸಂದೇಶ ಶಾಂತಿ	೩೦	ಕೂಲಿ
೭.	ಗೋಪಾಲ ವಜೀತ್	೪೪	ರೈಲ್ವೇ ಇಲಾಖೆ
೮.	ನೂರಾಜ್	೩೦	ಕೂಲಿ
೯.	ಗಣೇಶ	೩೯	ಕೂಲಿ
೧೦.	ಕಲ್ಪನ ಸುಭಾಸ ಭಾಟ	೪೫	ಮನೆಗೆಲಸ
೧೧.	ವಜೀರ್ ಸೋಮಪ್ಪ	೭೩	ಹಿರಿಯ ಮುಖಂಡ
೧೨.	ಚಿನ್ನಬಾಯಿ	೬೫	ಭಿಕ್ಷಾಟನೆ

ವಿಳಾಸ: ಗಾಂಧಿನಗರ ಸೆಟ್ಲಮೆಂಟ್, ಬೆಟಗೇರಿ ಗದಗ

೧೩.	ಅನೂಸೂಯ ಅಪ್ಸರಾ	೬೭	ಭಿಕ್ಷಾಟನೆ
೧೪.	ಜೆ.ವಿ. ಭಾಗಡೆ	೬೫	ನಿವೃತ್ತ ಶಿಕ್ಷಕರು
೧೫.	ಮಲ್ಲಶ ಅನಾರ್	೩೬	ಪೊಲೀಸ್
೧೬.	ಮುಕ್ಕೇಶಿ ಅಶೋಕ	೩೫	ಗೌಂಡಿ ಕೆಲಸ

೧೭	ಬೆನುಬಾಲು	೭೬	ನಿವೃತ್ತ ನೌಕರ
೧೮.	ಗಣೇಶ ಸಿಕ್ಕಂದರ್	೩೨	ಆರೋಗ್ಯ ಇಲಾಖೆ
೧೯.	ಶಾಣಬಾಯಿ	೬೦	ಭಿಕ್ಷಾಟನೆ
೨೦.	ರವಿ ಬಾಗಡೆ	೪೦	ಲಾರಿ ಡ್ರೈವರ್
೨೧.	ಮೀನಾಕ್ಷಿ ಅಶೋಕ	೪೫	ಮನೆಗೆಲಸ
೨೨.	ದಿಪಕ್ ಮನ್ನಿಸ್	೩೦	ಆಟೋ ಚಾಲಕ

೩. ದಾಖಲೆಗಳು

ನಂ. ಎವಿಎಸ್‌ಸಿ. ಎಸ್‌ಆರ್: ೩೧/82

ತಹಸೀಲ್ದಾರರ ಕಾರ್ಯಾಲಯ
ಗೋಕಾಕ ದಿನಾಂಕ: 12-5-1982

ವಿ: ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಅಧಿಕಾರಿ
ಬೆಳಗಾಂವ ಇವರಿಗೆ.

ವಿಷಯ:- ಪಾತ್ರೋಟ ಜಾತಿಯವನ್ನು ಗಿರಣಿ ವಡ್ಡರ
ತುಡುಗ ವಡ್ಡರ ಜಾತಿಯ ಲಿಸ್ಟಿನಲ್ಲಿ ಸೇರಿಸುವ
ಕುರಿತು.

ಉಲ್ಲೇಖ:- ತಮ್ಮ ಪತ್ರ ನಂ. ಡಿಸಿಎಮ್ ಇಡಿಎನ್: ಸಿಆರ್: 86:81 -82
ದಿನಾಂಕ. 24-11-1981

ಮಹನೀಯರೇ,

ಪಾತ್ರೋಟ ಜಾತಿಯ ಜನರಿಗೆ ಗಿರಣಿ ವಡ್ಡರು, ತುಡುಗ ವಡ್ಡರು, ಭಾಮಟಾ, ಗಂಟಿಚೋರ, ಟಕಾರಿ ಮತ್ತು ಉಚಲ್ಯಾ ಅಂತಾ ಬೇರೆ ಬೇರೆ ಹೆಸರುಗಳಿಂದಾ ಕರೆಯುತ್ತಾರೆ. ಇವರು ಗೋಕಾಕ ತಾಲ್ಲೂಕು, ಹುಬ್ಬಳ್ಳಿ ಹಾಗೂ ಗದಗ ಭಾಗದಲ್ಲಿ ಜಾಸ್ತಿಯಾಗಿ ವಾಸಿಸುತ್ತಾರೆ. ಇವರ ಜಾತಿಯನ್ನು (ಪಾತ್ರೋಟ) ಬಿಟ್ಟು ಉಳಿದ ಜಾತಿಗಳನ್ನು ಕರ್ನಾಟಕ ಸರಕಾರ ಹಿಂದುಳಿದ ಪಂಗಡ ಮತ್ತು ಪರಿಶಿಷ್ಟ ಜಾತಿ ಲಿಸ್ಟಿನಲ್ಲಿ ತೋರಿಸಲಾಗಿದೆ.

ತುಡುಗ ವಡ್ಡರನ್ನು ಗಿರಣಿ ವಡ್ಡರನ್ನು ವಿಚಾರಿಸಲಾಗಿ ಅವರು ಹಿಂದೆ ತುಡುಗು ಮಾಡುವವರಿಗೆ ತುಡುಗು ವಡ್ಡರೆಂದು, ಗೋಕಾಕ ತಾಲ್ಲೂಕಿನಲ್ಲಿ ಗಿರಣಿಯಲ್ಲಿ ವಡ್ಡರ ಕೆಲಸ ಮಾಡುವವರಿಗೆ ಗಿರಣಿ ವಡ್ಡರ ಎಂದು ಮತ್ತು ಕೆಲವರು ನಾಟಕಗಳಲ್ಲಿ ಬೈಲಾಟಗಳಲ್ಲಿ ವಿವಿಧ ಪಾತ್ರಗಳನ್ನು ಮಾಡಿದವರಿಂದ ಪಾತ್ರೋಟ ಅಂತಾ ಹೆಸರು ಬಂದಿತೆಂದು ಹೇಳುತ್ತಾರೆ.


ಬೆಳಗಾಂವ [illegible] ಮತ್ತು ಬಿಜಾಪೂರ ಜಿಲ್ಲೆಗಳಲ್ಲಿ [illegible] ಸರಕಾರದಲ್ಲಿ ಇದಕ್ಕೆ [illegible] ಒಂದೇ ಎಂದು ಹಿಂದುಳಿದ ಲಿಸ್ಟಿನಲ್ಲಿ ತೋರಿಸಲಾಗಿದೆ.

ಕಂದಾಯ ನಿರೀಕ್ಷಕರು ಅರಭಾವಿ ಇವರು ಸ್ಥಳಿಕ ವಿಚಾರ ಮಾಡಿದಾಗ ಪಾತ್ರೋಟ, ತುಡುಗ ವಡ್ಡರ, ಗಿರಣಿ ವಡ್ಡರ, ಭಾಮಟಾ, ಗಂಟಿಚೋರ, ಮತ್ತು ಟಕಾರಿ, ಜಾತಿಗಳಲ್ಲಿ ಮದುವೆಗಳು ಆಗುತ್ತವೆ. ಅವರು ತಾವೆಲ್ಲ ಒಂದೇ ಜನಾಂಗದವರು ಅಂತಾ ಹೇಳುತ್ತಾರೆ.

ತಮ್ಮ ವಿಶ್ವಾಸಿಕ

ತಹಸೀಲ್ದಾರ ಗೋಕಾಕ

ವಿಮುಕ್ತ ಪೂರ್ವ ಬುಡಕಟ್ಟುಗಳಿಗೆ ಬ್ರಿಟೀಷರು ನೀಡಿದ್ದ ಗುರುತಿನ ಪತ್ರ


3

ಧಾರವಾಡ

295.

K. N. J.

4

5

Manager
Criminal Tribes Settlement
Gadag

6

೧೦. ಕೊನೆಯ ಮುಕ್ತ ಮಾಡಲ್ಪಟ್ಟ ತಾರೀಖು—
22-10-1947

Manager
Criminal Tribes Settlement
Gadag

7

ಟಿಪ್ಪಣಿಗಳು

ಕ್ರಿಮಿನಲ್ ಟ್ರಾಯಿಬ್ಸ ಸೆಟ್ಲಮೆಂಟ ಆಫೀಸರ ಧಾರವಾಡ ಅವರು ೧೯೨೮ರಲ್ಲಿ ಹುಬ್ಬಳ್ಳಿ ಸೆಟ್ಲಮೆಂಟಿನ ವಿಮುಕ್ತ ಪೂರ್ವ ಬುಡಕಟ್ಟುಗಳಿಗೆ ಬ್ರಿಟೀಷ್ ಅಧಿಕಾರಿ ನೀಡಿದ ಕರಾರು ಪತ್ರ

ಸೆ. ಕ್ರಿ. ಧಾ.

ಹೆಸರು. [illegible]

ಜಾತಿ. [illegible]

ರಜಿಸ್ಟರ ನಂಬರು. X. [illegible] ತರಗ ಹುಬ್ಬಳ್ಳಿ ಸೆಟ್ಲಮೆಂಟು ದಿಂದ ಸನ್ ೧೯೨೩ನೇ ಇಸ್ವಿಯ ಮುಂಬಯಿ ಕ್ರಿಮಿನಲ್ ಟ್ರಾಯಿಬ್ಸ ಸೆಟ್ಲಮೆಂಟ ನಿಯಮಗಳ ಕೃತಿ ೧೫ನೇ ನಿಯಮಿನನ್ವಯ ಅವನ ಆಶ್ರಿತರು ಸಹಿತ, ಅವನು ಕೆಳಗೆ ನಮೂದಿಸಿದ ಶರ್ತುಗಳ ಪ್ರಕಾರ ಗೊತ್ತುಪಡಿಸಿದ ಮುದ್ದತ್ತಿನ ವರೆಗೆ ಅಂದರೆ ಆರು ವರ್ಷಗಳ ವರೆಗೆ ತಪ್ಪದೆ ನಡೆಯಲಿಕ್ಕೆ ಕಬೂಲ ಮಾಡಿದಲ್ಲಿ ಬಿಡಬಹುದು.

(ಅ) ಅವನು ಸೆಟ್ಲಮೆಂಟಿನ ಫ್ರೀ ಕಾಲನಿಯಲ್ಲಿ ಹುಬ್ಬಳ್ಳಿ ಸೆಟ್ಲಮೆಂಟ ಮ್ಯಾನೇಜರರು ನಿಯಮಿಸಿದ ಭಾಗದಲ್ಲಿರತಕ್ಕದ್ದು.

(ಬ) ಅವನು ತನ್ನ ಮಕ್ಕಳನ್ನು ಅವರು ಹನ್ನೆರಡು ವರ್ಷದವರಾಗುವ ವರೆಗೆ ಸೆಟ್ಲಮೆಂಟದ ಶಾಲೆಗೆ ಕಳಿಸತಕ್ಕದ್ದು.

(ಕ) ಅವನು ಒಳ್ಳೇ ರೀತಿಯಿಂದ ವರ್ತಿಸಬೇಕು.

(ಡ) ಸೆಟ್ಲಮೆಂಟದ ಮ್ಯಾನೇಜರರು ನಿಯಮಿಸಿದ ಅಧಿಕಾರಿಯ ಮುಂದೆ ಅವನು ಪ್ರತಿವಾರಕ್ಕೊಮ್ಮೆ ಹಾಜರಿ ಕೊಡಬೇಕು.

(ಇ) ರಾತ್ರಿ ೯ ಘಂಟೆ [illegible] ಬೆಳಗು [illegible] ಘಂಟೆ ಇದರ ನಡುವೆ ಫ್ರೀ ಕಾಲನಿಯ ಹದ್ದಿಯಿಂದ [illegible] ಹಾಜರ ಆಗುವ [illegible] ಅವನು ಸೆಟ್ಲಮೆಂಟ ಮ್ಯಾನೇಜರರ ಕಡೆಯಿಂದ ಪಾಸ ತೆಗೆದುಕೊಳ್ಳತಕ್ಕದ್ದು. ಸದರಿ ಮ್ಯಾನೇಜರಿಗೆ ಆರು ತಿಂಗಳದ ತನಕ ಅವನಿಗೆ ಬೇಕಾದ ಸ್ಥಳಕ್ಕೆ ಹೋಗಲಿಕ್ಕೆ ಕೊಡುವ ಅಧಿಕಾರವುಂಟು. ಆರು ತಿಂಗಳದಕಿಂತ ಹೆಚ್ಚು ಮುದ್ದತಿಯ ಪಾಸನ್ನು ಮೆ|| ಕ್ರಿಮಿ ಟ್ರಾಯಿಬ್ಸ ಸೆಟಲ್‌ಮೆಂಟ ಆಫೀಸರರು ಕೊಡುವರು.

ಈ ಮೇಲೆ ನಮೂದಿಸಿದ ಶರ್ತುಗಳ ಪೈಕಿ ಯಾವದಾದರೂ ಒಂದು ಶರ್ತು ಸಹಾ ಉಲ್ಲಂಘಿಸಿದಲ್ಲಿ ಮೆ|| ಕ್ರಿಮಿನ ಟ್ರಾಯಿಬ್ಸ ಸೆಟ್ಲಮೆಂಟ ಆಫೀಸರ ಸಾ|| ಬಹದ್ದೂರವರು ಮರ್ಜಿಯನ್ವಯ ಅವನಿಗೆ ಮಾಡಿದ ಬಿಡುಗಡೆಯ ಹುಕುಮನ್ನು ರದ್ದು ಮಾಡಿ ಅವನು ಪುನಃ ಸೆಟ್ಲಮೆಂಟದಲ್ಲಿ ಇಡಲ್ಪಡಲಿಕ್ಕೆ ಪಾತ್ರನಾಗುವನು. ಈ ಬಾಬಕ್ಕೆ ಮಾಡಿದ ತೀರ್ಪು ಮೆ|| ಕ್ರಿಮಿನಲ ಟ್ರಾಯಿಬ್ಸ ಸೆಟ್ಲಮೆಂಟ ಆಫೀಸರ ಸಾ|| ಬ|| ರವರದ್ದೇ ಕೊನೆಯ ತೀರ್ಪು.

ಮೇಲೆ ನಮೂದಿಸಿದ ಶರ್ತುಗಳಿಗೆ ಕಬೂಲ ಮಾಡಿ ಯಾವ ತಾರೀಖಿಗೆ ಸೆಟ್ಲಮೆಂಟದ ಹದ್ದಿಯನ್ನು ಬಿಟ್ಟು ಫ್ರೀ ಕಾಲನಿಯಲ್ಲಿ ಇರಲಿಕ್ಕೆ ಹೋಗುವನೋ ಆ ತಾರೀಖಿನಿಂದ ಈ "ಲಾಯಸೆನ್ಸ" ದ ಮುದ್ದತ್ತು ಆರಂಭವಾಗುವದು.

[signature]

ತಾರೀಖು ೧೨-೨-೨೮

ಕ್ರಿಮಿನಲ್ ಟ್ರಾಯಿಬ್ಸ ಸೆಟ್ಲಮೆಂಟ
ಆಫೀಸರ ಧಾರವಾಡ.

ಮೇಲೆ ನಮೂದಿಸಿದ ಶರ್ತುಗಳನ್ನು [illegible] ಕಬೂಲ ಇದ್ದೇನೆ.

ಸಹಿ. T. [illegible] Rohany [illegible] 21.2.28

[illegible] ಕಬೂಲ [illegible]

21.2.28 P. L. Bradbury
ಮ್ಯಾನೇಜರ ಸೆಟ್ಲಮೆಂಟು
Hubli

[illegible] ಫ್ರೀ ಕಾಲನಿಯಲ್ಲಿರಲಿಕ್ಕೆ ಸೆಟ್ಲಮೆಂಟದಿಂದ 21-2-1928 ತಾರೀಖ [illegible]

21-2-28 P. L. Bradbury
ಮ್ಯಾನೇಜರ ಸೆಟ್ಲಮೆಂಟು
Hubli

ಬ್ಯಾಕವರ್ಡ ಕ್ಲಾಸ ಆಫೀಸರ ನೀಡಿದ (ಫ್ರೀ ಕಾಲನಿ) ಬಿಡುಗಡೆ ಕರಾರು ಪತ್ರಿಕೆ. (ದಿನಾಂಕ.೨೩.೦೩.೧೯೩೯)

[illegible] (Spl.—B.O.D. 86 [illegible]
[illegible] R.D., No. [illegible] dated [illegible]

[C]ondition Form of License (Free Colony) for Wandering Tribes.

(ಫ್ರೀ ಕಾಲನಿ) ಬಿಡುಗಡೆ ಕರಾರು ಪತ್ರಿಕೆ

ಹೆಸರು [handwritten, illegible]

ಜಾತಿ [handwritten, illegible]

ರಜಿಸ್ಟರ ನಂಬರು [handwritten] ನವರಿಗೆ [handwritten] ಸೆಟ್ಲಮೆಂಟ

ದಿಂದ ಸನ್ ೧೯೩೯ನೇ ಇಸವಿಯ ಮುಂಬಯಿ ಕ್ರಿಮಿನಲ್ ಟ್ರಾಯಿ[ಬ್ಸ] ನಿಯಮಗಳ ಕೈ[illegible] ನಿಯಮಿ ತನ್ನೆಯ ಅವನ ಆಶ್ರಿತರು ಸಹಿತ, ಅವನು ಕೆಳಗೆ ನಮೂದಿಸಿ[ದ] ಪ್ರಕಾರ ಗೊತ್ತುಪಡಿಸಿ[ದ] ಮುದ್ದತ್ತಿನ ವರೆಗೆ ಅಂದರೆ ಎಂಟು ವರ್ಷಗಳ ವರೆಗೆ ತಪ್ಪದೆ ನಡೆಯಲಿಕ್ಕೆ [illegible] ಮಾಡಿದಕ್ಕೆ ಬಿಡ[ಲಾಗು]ವುದು. [illegible] ಮುದ್ದತ್ತು ಮೆ॥ ಬ್ಯಾಕವರ್ಡ ಕ್ಲಾಸ ಆಫೀಸರ ಸಾಹೇಬರವರ ಮ[ರ್ಜಿ] ಅನ್ವಯ ಬೆಳೆಸಲ್ಪಡಬಹುದು.

(ಅ) ಅವನು [handwritten] ಸೆಟ್ಲಮೆಂಟದ ಫ್ರೀ ಕಾಲನಿಯಲ್ಲಿ ಸೆಟ್ಲಮೆಂಟ ಮ್ಯಾನೇಜರರು ನಿಯಮಿಸಿದ ಜಾಗಾದಲ್ಲಿರತಕ್ಕದ್ದು.

(ಬ) ಅವನು ತನ್ನ ಮಕ್ಕಳನ್ನು ಅವರು ಹನ್ನೆರಡು ವರ್ಷದವರಾಗುವವರೆಗೆ ಸೆಟ್ಲಮೆಂಟದ ಶಾಲೆಗೆ ಕಳಿಸತಕ್ಕದ್ದು.

(ಕ) ಅವನು ಚಲೋ ರೀತಿಯಿಂದ ವರ್ತಿಸಬೇಕು.

(ಡ) ಸೆಟ್ಲಮೆಂಟದ ಮ್ಯಾನೇಜರರು ನಿಯಮಿಸಿದ ಅಧಿಕಾರಿಯ [illegible] ಪ್ರಕಾರ ಕ್ಯಾಂಪ್ಯು ಹಾಜರಿ ಕೊಡಬೇಕು.

[illegible] ಘಂಟೆ [illegible] ಘಂಟೆ ಇದರ ಹೊರಗೆ ಫ್ರೀ ಕಾಲನಿಯ ಹದ್ದಿನಿಂದ ಗೈರಹಾಜರ [ಆ]ಗುವ ಅಗತ್ಯವಿದ್ದ ಪ್ರಸಂಗದಲ್ಲಿ ಅವನು ಸೆಟ್ಲಮೆಂಟ ಮ್ಯಾನೇಜರರ [ಕೈ]ಯಿಂದ ಪಾಸ ತೆಗೆದುಕೊಳ್ಳತಕ್ಕದ್ದು. ಸದರೀ ಮ್ಯಾನೇಜರರಿಗೆ ಆರು [ತಿಂಗಳ] [illegible] ಅವನಿಗೆ ಬೇಕಾದ ಸ್ಥಳಕ್ಕೆ ಹೋಗಲಿಕ್ಕೆ ಪಾಸ ಕೊಡುವ ಅಧಿಕಾರವುಂಟು. [ಆ]ರು ತಿಂಗಳಕ್ಕಿಂತ ಹೆಚ್ಚು ಮುದ್ದತಿನ ಪಾಸನ್ನು ಮೆ॥ ಬ್ಯಾಕವರ್ಡ ಕ್ಲಾಸ ಆಫೀಸರರು ಕೊಡುವರು.

(ಇ) ಅವನು ಒಂದು ನೆಟ್ಟಗಿದ್ದ ಮನೆಯನ್ನು ಕಟ್ಟಿದ್ದಾನೆಂದೂ ಮತ್ತು ಮೊದಲಿನಂತೆ ತನ್ನ ಜಾತಿಯ ತಿರುಗಾಟದ ಚಟಗಳನ್ನು ಪುನಃ ಪ್ರಾರಂಭಿಸಲಿಕ್ಕಿಲ್ಲೆಂದೂ ಮೆ॥ ಬ್ಯಾಕವರ್ಡ ಕ್ಲಾಸ ಆಫೀಸರ ಸಾ॥ ಬ॥ ರವರಿಗೆ ಖಾತ್ರಿ ಮಾಡಿಕೊಟ್ಟರೆ, ಅವನು ತನ್ನ 'ಲಾಯಸೆನ್ಸ' ದ ಮುದ್ದತ್ತಿನ ಕಡೆಯ ಎರಡು ವರ್ಷಗಳಲ್ಲಿ ಹಾಜರಿ ಕೊಡುವದಾಗಲಿ ಅಥವಾ ರಾತ್ರಿ ಗೈರಹಾಜರ ಇರುವದಕ್ಕೆ ಪಾಸು ಪಡೆಯುವದಾಗಲಿ ಅವಶ್ಯವಿಲ್ಲ.

ಈ ಮೇಲೆ ನಮೂದಿಸಿದ ಶರ್ತುಗಳ ಪೈಕಿ ಯಾವದಾದರೂ ಒಂದು ಶರ್ತು ಸಹಾ ಉಲ್ಲಂಘಿಸಿದಲ್ಲಿ ಮೆ॥ ಬ್ಯಾಕವರ್ಡ ಕ್ಲಾಸ ಆಫೀಸರ ಸಾ॥ ಬಹದ್ದೂರರವರ ಮರ್ಜಿಯನ್ವಯ ಅವನಿಗೆ ಮಾಡಿದ ಬಿಡುಗಡೆಯ ಹುಕುಮನ್ನು ರದ್ದು ಮಾಡಿ ಅವನು ಪುನಃ ಸೆಟ್ಲಮೆಂಟದಲ್ಲಿ ಇಡಲ್ಪಡಲಿಕ್ಕೆ ಜವಾಬದಾರನಾಗುವನು. ಈ ಬಾಬತ್ತು ಮಾಡಿದ ತೀರ್ಪು ಮೆ॥ ಬ್ಯಾಕವರ್ಡ ಕ್ಲಾಸ ಆಫೀಸರ ಸಾ॥ ಬ॥ ರವರದೇ ಕೊನೆಯ ತೀರ್ಪು.

ಮೇಲೆ ನಮೂದಿಸಿದ ಶರ್ತುಗಳಿಗೆ ಕಬೂಲ ಮಾಡಿ ಯಾವ ತಾರೀಖಿಗೆ ಸೆಟ್ಲಮೆಂಟದ ಹದ್ದನ್ನು ಬಿಟ್ಟು ಫ್ರೀ ಕಾಲನಿಯಲ್ಲಿ ಇರಲಿಕ್ಕೆ ಹೋಗುವನೋ ಆ ತಾರೀಖಿನಿಂದ ಈ "ಲಾಯಸೆನ್ಸ" ದ ಮುದ್ದತ್ತು ಆರಂಭವಾಗುವದು.

ತಾರೀಖು 23-3-1939 [handwritten]

[signature]
ಬ್ಯಾಕವರ್ಡ ಕ್ಲಾಸ ಆಫೀಸರ,
ಪುಣೆ

[illegible]

[illegible thumb impression and signature]


[illegible]

[signature]
[illegible] [handwritten]

[illegible] 8/4/39 [illegible]

[signature]
[illegible] [handwritten]

ಬ್ರಿಟೀಷರು ೧೯೧೯ರಲ್ಲಿ ಹುಬ್ಬಳ್ಳಿ ಸೆಟ್ಲಮೆಂಟಿನ ವಿಮುಕ್ತ ಪೂರ್ವ ಬುಡಕಟ್ಟುಗಳಿಗೆ ನಿವೇಶನ ನೀಡಿದ ದಾಖಲೆ ಪತ್ರ



ಎಸ್ ವಿ ಹಲ್ದಿಪುರ ಅವರು "ಕ್ರಿಮಿನಲ್ ಕ್ಲಾಸಿಸ್ ಇನ್ ಬಾಂಬೆ ಪ್ರಸಿಡೆನ್ಸಿ" ಎಂಬ ಕೃತಿಯ ಆಧಾರದ ಮೇಲೆ ರಚಿಸಿರುವ ಕೃತಿಯಲ್ಲಿರುವ ಮಾಹಿತಿ(ಬಾಸೆಲ್ ಮಿಶನ್ ಪ್ರೆಸ್, ಮಂಗಳೂರು.೧೯೧೪)



೧೭ನೇ ಚಿತ್ರ.

ಕೈಕಾಡಿಯರು.

ಮಹಾರಾಷ್ಟ್ರದಲ್ಲಿ ಕೈಕಾಡಿ ಜನರಲ್ಲಿ ಕೆಳಗೆ ಕಾಣಿಸಿದ ಒಳಭೇದಗಳು ಇರುವವು:—

(೧) 'ಚೋರ ಕೈಕಾಡಿ' (ಅಥವಾ 'ದೊಂಟ್ರೆ, ದೊಂಟಲಮಾರಿ') ಮತ್ತು 'ಫಿರಸ್ತೆ' (ತಿರುಗಾಟದವರು).

(೨) 'ಗಾಂವ ಕೈಕಾಡಿ' (ಅಥವಾ 'ಬೂಟಿ' 'ಗ್ರಾಮ' 'ಟೋಪ್ಲೀಯಾ' ಕೈಕಾಡಿ) ಇವರಲ್ಲಿ ಕೆಲವರು 'ಬಾಜಂತ್ರಿ' ಅಥವಾ 'ಸನಾದಿ' ಕೈಕಾಡಿ ಮತ್ತು 'ಗೃಹಸ್ಥ' ಕೈಕಾಡಿ ಎಂಬವರು ಇರುವರು.

(೩) 'ಕುಚಡಿ' ಕೈಕಾಡಿ ಅಥವಾ 'ಕುಂಚೀವಾಲೆ' (ನೆಯಿಗಾರರಿಗೆ ಬೇಕಾದ ಕುಂಚಿಗೆ ತಯಾರ ಮಾಡುವವರು).

(೪) 'ಮಾಕಡವಾಲೆ' ಕೈಕಾಡಿ (ಮಂಗಗಳನ್ನು ಹಿಡಿಯುವವರು).

(೫) 'ಕೂಥ' ಕೈಕಾಡಿ ('ಮಾಕಡವಾಲೆ'ಯವರಲ್ಲಿ ಒಂದು ಜಾತಿ). ಇವರಿಗೆ 'ಡಾಲ ಬಜಾರವಾಲೆ' ಅಥವಾ 'ಗೂಸೂರ' ಎಂತ ಸಹ ಅನ್ನುತ್ತಾರೆ.

(೬) 'ಕಲಿಂಗಣ' ಕೈಕಾಡಿ (ಮದ್ರಾಸ ಇಲಾಖೆ ಮತ್ತು ಕರ್ನಾಟಕದಿಂದ ಬಂದ 'ಕೊರಚ' 'ಕೊರ್ವ' ಮತ್ತು 'ವಾಮಲೋರ' ಜಾತಿಯವರು. ಇವರಿಗೆ 'ಕಾಮಾಟಿ' ಕೈಕಾಡಿ ಎಂತ ಸಹ ಅನ್ನುತ್ತಾರೆ).

ಮುಂಬಯಿ ಇಲಾಖೆಯ ಕರ್ನಾಟಕದ ಜಿಲ್ಲೆಗಳಲ್ಲಿಯ 'ಕೊರ್ವ'ರ ಅಥವಾ 'ಕೊರಚ'ರ ಜಾತಿಗಳು ಕೆಳಗೆ ಕಾಣಿಸುವವು:—

(೧) 'ಕೊರ್ವ'ರು ಅಥವಾ 'ಕಳ್ಳ ಕೊರ್ವ'ರು.

(೨) 'ಕಡ್ಡಿ' ಅಥವಾ 'ಅಗಡಿ' ಕೊರ್ವರು (ಹುಲ್ಲಿನ ಗುಡಿಸಲುಗಳಲ್ಲಿರುವವರು).

(೩) 'ಕುಂಚೀ ಕೊರ್ವರು' (ನೆಯಿಗಾರರ ಕುಂಚಿಗೆ ಮಾಡುವವರು).

(೪) 'ಕೊರಚ'ರು.

(೫) 'ವಾಮಲೋರರು'.

(೬) 'ಬಾಜಂತ್ರಿ', 'ಸನಾದಿ' ಅಥವಾ 'ಊರ ಕೊರ್ವ'ರು.

ಈ ಜಾತಿಗಳಲ್ಲಿ (೧) ಸಾತಪಾಡಿ, (೨) ಮೇಲಪಾಡಿ, (೩) ಕಾವಾಡಿ, ಮತ್ತು (೪) ಮೇಂದ್ರಗುಟ್ಟಿ ಎಂಬ ಇನ್ನು ಒಳಭೇದಗಳಿರುವವು.

ವಸ್ತಿ.—ಇವರು ಮಹಾರಾಷ್ಟ್ರ, ದಕ್ಷಿಣ ಮಹಾರಾಷ್ಟ್ರ, ನಿಜಾಮನ ರಾಜ್ಯ, ಮದ್ರಾಸ ಇಲಾಖೆ, ಮೈಸೂರ, ವರ್‍ಹಾಡ ಮತ್ತು ಮಧ್ಯಪ್ರಾಂತದಲ್ಲಿರುವರು.

ಗುನ್ಹೆ ಮಾಡುವ ಪ್ರದೇಶಗಳು.—ಕೈಕಾಡಿ ಜಾತಿಯವರು ಬಹಳ ಗುನ್ಹೆ ಮಾಡುವ ಜನರು. ಇವರು ತಮ್ಮ ಠಾವಣೆ ಇದ್ದಲ್ಲಿಂದ ಸುಮಾರು ಮೂವತ್ತು

— ೮೮ —

ಮೈಲಿನ ವರೆಗೆ ಗುನ್ಹೆ ಮಾಡುವರು. ಒಮ್ಮೊಮ್ಮೆ ಅಂಥಾದ್ದೇ ದೊಡ್ಡ ಲಾಭ ಆಗುವ ಹಾಗಿದ್ದರೆ, ನೂರು ಅಥವಾ ಹೆಚ್ಚು ಮೈಲಿನ ವರೆಗೆ ರೇಲ್ವೆಯ ಮೇಲಿಂದ ಸಹ ಹೋಗುವರು. ಇವರು ತಮ್ಮ ಠಾವಣೆಯಿದ್ದ ಅಥವಾ ಹತ್ತರವಿರುವ ಹಳ್ಳಿಯಲ್ಲಿ ಎಂದೂ ಗುನ್ಹೆ ಮಾಡುವದಿಲ್ಲ. ಆದರೂ, ಆ ಹಳ್ಳಿಯಲ್ಲಿ ಒಳ್ಳೇ ಮನೆಯನ್ನು ಕಂಡರೆ, ಅವರು ಅಲ್ಲಿಂದ ಠಾವಣೆ ತೆಗೆದು ಸುಮಾರು ಮೂವತ್ತು ನಾಲ್ವತ್ತು ಮೈಲು ದೂರ ಹೋಗುವರು; ಆ ಮೇಲೆ ಒಂದೆರಡು ತಿಂಗಳು ಬಿಟ್ಟು ಅಲ್ಲಿ ಹೋಗಿ ದರೋಡೆ ಹಾಕುವರು.

ಇವರು ಬಹಳೇ ತಿರುಗಾಟದವರು. ಪುಣೆ ಜಿಲ್ಲೆಯಲ್ಲಿ ಗುನ್ಹೆ ಮಾಡಿದವರನ್ನು ಮಧ್ಯಪ್ರಾಂತದಲ್ಲಿ, ಮತ್ತು ಕೊಲ್ಹಾಪುರ ಜಿಲ್ಲೆಯಲ್ಲಿ ಗುನ್ಹೆ ಮಾಡಿದವರನ್ನು ಬಳ್ಳಾರಿ ಜಿಲ್ಲೆಯಲ್ಲಿ ಹಿಡಿದ ಉದಾಹರಣೆಗಳಿವೆ. ಇವರು ಸುಮ್ಮಸುಮ್ಮನೆ ತಿರುಗಾಡುತ್ತಿರುವದಿಲ್ಲ. ಇವರಿಗೆ ಮಾಹಿತಿ ಕೊಡುವವರು ನಾಲ್ಕೂ ಕಡೆಯಲ್ಲಿಯೂ ಇರುತ್ತಾರೆ. 'ಗಾಂವ ಕೈಕಾಡಿ' ಅಥವಾ 'ಊರ ಕೈಕಾಡಿ' ಮತ್ತು 'ಚೋರ ಕೈಕಾಡಿ' ಹಾಗೂ 'ಕಳ್ಳ ಕೊರ್ವ'ರ ಹೊರತು ಬೇರೆ ಎಲ್ಲ ಕೈಕಾಡಿ ಜಾತಿಯವರು ತಿರುಗಾಟದವರು.

ಜನಸಂಖ್ಯೆ.—ಇವರು ಮುಂಬಯಿ ಇಲಾಖೆಯಲ್ಲಿ ಸುಮಾರು ೨೮,೦೦೦ ಜನರು ಇದ್ದಾರೆ. ಅವರಲ್ಲಿ:—


ಜಿಲ್ಲೆ	ಜಾತಿ	ಗಂಡಸರು	ಹೆಂಗಸರು	ಜುಮಲಾ
ಬೆಳಗಾಂವ	ಕೈಕಾಡಿ	೬	೧೫	೨೧
"	ಕೊರವ	೧೬,೧೧	೧೭,೯೬	[illegible]
"	ಕೊರಚ	೧	೦	೧
ವಿಜಾಪುರ	ಕೈಕಾಡಿ	೩	೪	೭
"	ಕೊರವ	[illegible]	[illegible]	[illegible]
ಧಾರವಾಡ	"	[illegible]	[illegible]	[illegible]
"	ಕೊರಚ	೩೫	೨೫	೬೦
"	ಕೊರಚ	೧	೦	೧
ಕಾನಡಾ	ಕೊರವ	[illegible]	[illegible]	[illegible]

ಈ ಜಾತಿಯ ಜನರು ಯಾವಾಗಲೂ ತಿರುಗಾಟದ ಮೇಲಿದ್ದದರಿಂದ ಮೇಲೆ ಕಾಣಿಸಿದ ಇವರ ಜನಸಂಖ್ಯೆಯಲ್ಲಿ ಹೆಚ್ಚುಕಡಿಮೆ ಇರಲಿಕ್ಕೆ ಸಾಕು.

ಸ್ವರೂಪ ಇತ್ಯಾದಿ.—ಈ ಜನರು ಜಾಸ್ತಿ ತಿರುಗಾಟದವರು. ಇವರು ಚಿಕ್ಕ ದೊಡ್ಡ ಹಿಂಡು ಮಾಡಿ ತಮ್ಮ ಹೆಂಡರುಮಕ್ಕಳನ್ನೂ, ಆಕಳು, ಕುದುರೆ, ಎತ್ತು, ನಾಯಿ, ಮಂಗಗಳನ್ನೂ ಸಂಗಡ ತೆಗೆದುಕೊಂಡು ದೇಶದಲ್ಲಿ ಯಾವತ್ತು ತಿರುಗಾಡಿ ಗುನ್ಹೆ ಮಾಡುವರು. ಇವರು ಠಾವಣೆಯಲ್ಲಿದ್ದಾಗ ಗುಡಿಸಲುಗಳಲ್ಲಿ ಅಥವಾ ಗುಡಾರ ಕಟ್ಟಿ ಇರುವರು; ಮತ್ತು ಪ್ರವಾಸದಲ್ಲಿದ್ದಾಗ ಸಾಮಾನು ಕತ್ತೆಗಳ ಮೇಲೆ ಹೇರಿ ತಮ್ಮ ಸಂಗಡ ಒಯ್ಯುವರು. ಇವರು ನೀರು ಸಮೀಪವಿದ್ದಲ್ಲಿ ಮತ್ತು ದಿನ್ನೆಯ ಮೇಲೆ ಠಾವಣೆ ಮಾಡುತ್ತಾರೆ. ಇವರ ಠಾವಣೆಗಳಲ್ಲಿ ಕೋಳಿ, ನಾಯಿ, ಕತ್ತೆಗಳು ಕೂಡಿರುವವು. ಧಾರವಾಡ, ಬೆಳಗಾಂವ, ಕೊಲ್ಹಾಪುರ, ಮತ್ತು ವಿಜಾಪುರ ಜಿಲ್ಲೆಗಳಲ್ಲಿ ಇವರ ಕಾಟ ಹೆಚ್ಚು. 'ಚೋರ' ಕೈಕಾಡಿಯರು ಮತ್ತು 'ಕಳ್ಳ' ಕೈಕಾಡಿಯರು ತಮ್ಮ ಮೇಲೆ ಏನಾದರೂ ಪ್ರಸಂಗ ಬಂದರೆ ಎಲ್ಲರಿಗೂ ಕೂಡಲೆ ತಿಳಿಯುವಂತೆ ಬಹಳ ಯುಕ್ತಿಯಿಂದ ತಮ್ಮ ಗುಡಿಸಲುಗಳನ್ನು ಕಟ್ಟುವರು. 'ಕಳ್ಳ' ಕೊರ್ವರು ನದಿಯ ಅಥವಾ ಹಳ್ಳದ ಹತ್ತರ ಗಿಡಗಳ ಬುಡಕ್ಕೆ ಠಾವಣೆ ಮಾಡುತ್ತಾರೆ. ಇವರ ಸಂಗಡ ಹೆಂಡರುಮಕ್ಕಳು ಬರುವದಿಲ್ಲ; ಆದರೆ ಒಬ್ಬಿಬ್ಬ ಹೆಂಗಸರು ಅಡಿಗೆ ಮಾಡಲಿಕ್ಕೆ ಅವರ ಸಂಗಡ ಇರುವರು. ಇವರು ಗುನ್ಹೆ ಮಾಡಿದ ಕೂಡಲೆ ಓಡಿ ಹೋಗುವರು. 'ಕಡ್ಡಿ' ಕೊರ್ವರು ಬಿದರಿನ ಅಥವಾ ಹುಲ್ಲಿನ ಗುಡಿಸಲುಗಳನ್ನು ಹಾಕಿ ಹೆಂಡರುಮಕ್ಕಳು, ಕತ್ತೆ, ಆಡು, ನಾಯಿ ಮುಂತಾದವುಗಳ ಸಮೇತ ಇರುವರು. ಇವರು ತಮ್ಮ ಗೋಣಿಗಳ ಹೊರ ಮೈಯಲ್ಲಿ ಕೊಗಲು ಹಾಕಿ ಹೊಲಿಯುತ್ತಾರೆ. 'ಕುಂಚೀ' ಕೊರ್ವರು 'ಕಡ್ಡಿ' ಕೊರ್ವರಂತೆ ಬಿದರಿನ ಅಥವಾ ಹುಲ್ಲಿನ ಗುಡಿಸಲುಗಳಲ್ಲಿ ತಮ್ಮ ಹೆಂಡರುಮಕ್ಕಳ ಕೂಡ ಇರುವರು. ಇವರು ಆಕಳು, ಎತ್ತು, ಕತ್ತೆ, ನಾಯಿ, ಮಂಗ ಮತ್ತು ಹಂದಿಗಳನ್ನು ಸಾಕುತ್ತಾರೆ; ಮತ್ತು ಕಾಲಿಗೆ ಗೆಜ್ಜೆ ಕಟ್ಟಿಕೊಂಡು, ಪುಂಗಿಯನ್ನು ಬಾರಿಸುತ್ತ ಕುಣಿಯುತ್ತಾರೆ, ಹಾಗೂ ಮಂಗಗಳನ್ನು ಕುಣಿಸುತ್ತಾರೆ. ಇವರ ಹೆಂಗಸರು ಊರಲ್ಲಿ ಭವಿಷ್ಯ ಹೇಳುತ್ತ ಮನೆಮನೆ ತಿರುಗುವರು. 'ಕೊರಚ'ರು ಚಾಪೆಯ ಗುಡಿಸಲಿನಲ್ಲಿ ಹೆಂಡರುಮಕ್ಕಳ ಕೂಡ ಇರುವರು. ಅವರ ಹತ್ತರ ಗೋಣಿ ಎತ್ತುಗಳೂ, ಕತ್ತೆ, ಆಕಳು, ಆಡು, ನಾಯಿಗಳೂ ಇರುವವು. 'ವಾಮಲೋರ'ರು ಕಂಬಳಿಯ ಗುಡಿಸಲು ಮಾಡಿ, ಹಿಂದೆ ಮತ್ತು ಮುಂದೆ ಚಾಪೆಗಳ ಪಡದೆ ಕಟ್ಟಿ ತಮ್ಮ ಹೆಂಡರುಮಕ್ಕಳ ಸಹ ಇರುವರು. ಇವರು ಎತ್ತು, ಕುದುರೆ, ಕತ್ತೆ, ಆಕಳು, ನಾಯಿ ಮುಂತಾದವುಗಳನ್ನು ಸಾಕುತ್ತಾರೆ.

ಕೈಕಾಡಿಯ ಜಾತಿಗಳಲ್ಲಿ ಊಟ ವ್ಯವಹಾರ ಆಗುತ್ತದೆ; ಆದರೆ ಕಳ್ಳಕೊರ್ವರ ಮತ್ತು ವಾಮಲೋರರ ಹೊರತು ಬೇರೆ ಜಾತಿಗಳಲ್ಲಿ ಪರಸ್ಪರ ಶರೀರಸಂಬಂಧ ಆಗುವದಿಲ್ಲ.

ಕೈಕಾಡಿಯವರು ಉದ್ದ ಅಥವಾ ಸರಾಸರಿ ಉದ್ದರಾಗಿ, ಗಟ್ಟಿಗರೂ ಚಪಲರೂ ಒಳ್ಳೇ ಮೈಕಟ್ಟಿನವರೂ ಮತ್ತು ಕಷ್ಟ ಸಹಿಸುವವರೂ ಇರುವರು. ಇವರ ಕಿವಿ ಮತ್ತು ಕಣ್ಣುಗಳು ಬಹಳ ತೀಕ್ಷ್ಣವಿರುವವು. ಗಂಡಸರೂ ಮತ್ತು ಹೆಂಗಸರೂ ಕಪ್ಪು ಬಣ್ಣದವರು, ಹೊಲಸು ಮತ್ತು ಮುಗ್ಗಲಗೇಡಿಗಳು ಇರುತ್ತಾರೆ; ಮತ್ತು



— ೪೭ —

ಹೆಂಡ ಅಥವಾ ಸರಾಯಿ ಯಥೇಚ್ಛ ಕುಡಿಯುತ್ತಾರೆ. ಇವರು ಗೋಮಾಂಸ ಮತ್ತು ಎಮ್ಮೆಯ ಮಾಂಸ ಬಿಟ್ಟು ಎಲ್ಲ ಮಾಂಸವನ್ನು ತಿನ್ನುತ್ತಾರೆ.

ಮಹಾರಾಷ್ಟ್ರದಲ್ಲಿ ಗಂಡಸರು ಧೋತರ ಉಡುತ್ತಾರೆ; ಇಲ್ಲವೆ ಚಣ್ಣ ಹಾಕಿಕೊಳ್ಳುತ್ತಾರೆ. ಮೈಯಲ್ಲಿ ಬಾರಾಬಂದಿ, ತೆಗಲಲ್ಲಿ ಉಪ್ಪರಣೆ, ಮತ್ತು ತಲೆಯ ಮೇಲೆ ರುಮಾಲು ಹಾಕಿಕೊಳ್ಳುವರು; ಇವರು ಒಮ್ಮೊಮ್ಮೆ ಕೆಂಪು ಪಟಿದೆಯನ್ನು ಸಂಗಡ ಒಯ್ಯುತ್ತಾರೆ. ಹೆಂಗಸರು ಕುಪ್ಪಸವನ್ನು ತೊಟ್ಟು ಕಚ್ಚೆ ಹಾಕದೆ ಸೀರೆಯನ್ನು ಉಡುತ್ತಾರೆ; ಮತ್ತು ಮೈ ತುಂಬಾ ಹಚ್ಚೆ ಚುಚ್ಚಿಕೊಳ್ಳುತ್ತಾರೆ.

ಕರ್ನಾಟಕದಲ್ಲಿ, ಕಡ್ಡೀ ಕೊರ್ವರು ಮತ್ತು ಕುಂಚೀ ಕೊರ್ವರು ಲಂಗೋಟಿ ಇಲ್ಲವೆ ಕಾಚಾ ಹಾಕಿಕೊಂಡು, ತಲೆಯ ಮೇಲೆ ರುಮಾಲು ಇಟ್ಟುಕೊಂಡು ಧೋತರ ಅಥವಾ ಕಂಬಳಿಯನ್ನು ಮೈಮೇಲೆ ಹೊದ್ದುಕೊಳ್ಳುವರು. ಕೊರ್ಚರು ಚಡ್ಡಿ ಇಲ್ಲವೆ ಚಣ್ಣ ಹಾಕಿ ಮೈಯಲ್ಲಿ ಅಂಗಿಯನ್ನು ತೊಟ್ಟು, ತಲೆಯ ಮೇಲೆ ರುಮಾಲು ಹಾಕಿ ಕಂಬಳಿಯನ್ನು ಅಥವಾ ಹಚ್ಚಡ ಹೊದ್ದುಕೊಳ್ಳುವರು. ಲಂಗೋಟಿ ಹಾಕಿದವರು ಮೇಲೆ ಧೋತರವನ್ನು ಸುತ್ತಿಕೊಳ್ಳುತ್ತಾರೆ. ಪಾಮಲೋರರು ಧೋತರ ಉಟ್ಟು ಮೈಯಲ್ಲಿ ಅಂಗಿ ಮತ್ತು ತಲೆಯ ಮೇಲೆ ರುಮಾಲು ಹಾಕಿಕೊಳ್ಳುತ್ತಾರೆ; ಮತ್ತು ಅವರ ಬಗಲಲ್ಲಿ ಯಾವಾಗಲೂ ಜೋಳಿಗೆ ಇರುವದು. ಕಳ್ಳ ಕೊರ್ವರು ಮತ್ತು ಬಾಜಂತ್ರಿ ಕೊರ್ವರು ಇತರ ಹಳ್ಳಿಯ ಜನರಂತೆ ಗಂಡಸರೂ ಹೆಂಗಸರೂ ಉಡಿಗೆತೊಡಿಗೆಯಲ್ಲಿ ಸ್ವಚ್ಛವಾಗಿರುವರು. ಕಡ್ಡೀ ಕೊರ್ವರ ಮತ್ತು ಕುಂಚೀ ಕೊರ್ವರ ಹೆಂಗಸರು ಕೀಳು ಜಾತಿಯ ಹೆಂಗಸರಂತೆ ಉಡಿಗೆತೊಡಿಗೆಯಲ್ಲಿ ಹೊಲಸು ಇರುವರು. ಕೊರ್ಚರ ಹೆಂಗಸರು ಇತರ ಕೈಕಾಡಿ ಹೆಂಗಸರಂತೆ ಕುಪ್ಪಸ ಹಾಕಿಕೊಳ್ಳುವದಿಲ್ಲ; ಮತ್ತು ಸೀರೆಯ ಒಳಗಿನ ಸೆರಗನ್ನು ಎಡಬದಿಯಿಂದ ಬಲಬದಿಗೆ ತೆಗಲಿನ ಮೇಲಿಂದ ತಂದು ಸ್ತನಗಳನ್ನು ಮುಚ್ಚಿಕೊಳ್ಳುತ್ತಾರೆ. ಇವರು ಗಾಜಿನ ಬಳೆಗಳನ್ನು ಹಾಕಿಕೊಳ್ಳುವದಿಲ್ಲ; ಆದರೆ ಹಿತ್ತಾಳೆಯ ಕಡಗಗಳನ್ನು ಕೈಯಲ್ಲಿ ಇಡುವರು; ಹಾಗೂ ಕೊರಳಲ್ಲಿ ಎಷ್ಟೋ ಮಣಿಗಳ ಸರಗಳನ್ನು ಹಾಕಿಕೊಳ್ಳುತ್ತಾರೆ. ಪಾಮಲೋರರ ಹೆಂಗಸರು ಸೀರೆ ಉಟ್ಟು ಕುಪ್ಪಸ ಹಾಕಿಕೊಳ್ಳುವರು.

ಕೈಕಾಡಿ ಮತ್ತು ಕೊರ್ಚ ಹೆಂಗಸರು ಗಂಡಸರಂತೆ ಕಷ್ಟಾಳುಗಳಾಗಿದ್ದು ಗುನ್ಹೆಯ ಕೆಲಸದಲ್ಲಿ ಗಂಡಸರಿಗೆ ಬೇಕಾದ ಸಹಾಯ ಮಾಡುತ್ತಾರೆ. ಬುಟ್ಟಿಗಳನ್ನು ಮಾರುವ ನೆವದಿಂದ ಮನೆಮನೆಗೆ ಹೋಗಿ ಮಾಹಿತಿಯನ್ನು ತರುವದೂ, ಕಳವಿನ ಸಾಮಾನು ಬಚ್ಚಿಡುವದೂ, ಪೋಲೀಸರು ತಪಾಸಕ್ಕೆ ಬಂದಾಗ ಅವರಿಗೆ ಉಪದ್ರವ ಕೊಡುವದೂ, ಗಂಡಸರಿಗೆ ಊಟ ಮತ್ತು ಪೋಲೀಸರ ಬಾತಮಿ ಮುಟ್ಟಿಸುವದೂ ಮುಂತಾದ ಕೆಲಸಗಳನ್ನು ಹೆಂಗಸರು ಬಹಳ ಚಾತುರ್ಯದಿಂದ ಮಾಡುವರು. ಇವರು ಸ್ವಜಾತಿಯಲ್ಲಿ ವ್ಯಭಿಚಾರ ಮಾಡುತ್ತಾರೆ. ಅವರಲ್ಲಿಯ ಮೋಹಕ ಮತ್ತು ತರುಣ ಹೆಂಗಸಿಗೆ ತಂದಿನ...

— ೪೮ —

...[illegible]ದಿಂದ ಮಾತಾಡುವದಕ್ಕೂ ಮತ್ತು ಉಪದ್ರವ ಕೊಡುವ ಪೋಲೀಸ ಅಥವಾ [illegible]ರ ಅಮಲದಾರರನ್ನು ಮೋಹದಲ್ಲಿ ಹಾಕಿ ತಮ್ಮ ಕೆಲಸ ಸಾಧಿಸಿಕೊಳ್ಳುವದಕ್ಕೂ [illegible]ಚ್ಚುತ್ತಾರೆ; ಆಕೆಯು ಇಂಥ ಕೆಲಸದಲ್ಲಿ ಬಹಳ ಕೈಕೋರಿದವಳೇ ಇರುವಳು.

ಮಹಾರಾಷ್ಟ್ರದಲ್ಲಿ ಕೈಕಾಡಿಯರ ಮುಖ್ಯಸ್ಥನಿಗೆ 'ನಾಯಕ' ಎಂದು ಕರೆಯುತ್ತಾರೆ. ತಮ್ಮಲ್ಲಿ ಗುನ್ಹೆಗಾರಿಕೆಯಲ್ಲಿ ಶ್ರೇಷ್ಠನಾದವನನ್ನು ಬಹುಮತದಿಂದ ಅವರು ನಾಯಕನನ್ನಾಗಿ ಆರಿಸಿಕೊಳ್ಳುತ್ತಾರೆ. ಆತನ ಆಜ್ಞೆಯನ್ನು ಎಲ್ಲರೂ ಪಾಲಿಸುವರು. ಸೋಲಾಪುರ ಜಿಲ್ಲೆಯಲ್ಲಿ ಒಮ್ಮೊಮ್ಮೆ ಹೆಂಗಸರೂ ಸಹ ಮುಖ್ಯಸ್ಥರಾಗಿದ್ದ ಉದಾಹರಣೆಗಳಿವೆ; ಮತ್ತು 'ನಾಯಕ'ನು ಪೋಲೀಸರ ಕೈಯಲ್ಲಿ ಸಿಕ್ಕು ಇಲ್ಲವೆ ಬೇರೆ ಕಾರಣಗಳಿಂದ ತನ್ನ ಕೆಲಸ ಮಾಡುವದಕ್ಕೆ ಅನನುಕೂಲವಾದರೆ, ಅವನ ಹೆಂಡತಿಯು 'ನಾಯಕ'ನ ಕೆಲಸ ಮಾಡುವಳು.

ಕರ್ನಾಟಕದಲ್ಲಿ 'ಕಳ್ಳ' ಕೊರ್ವರ ಮುಖ್ಯಸ್ಥನನ್ನು 'ರಂಗಾಯತ' ಎಂದೂ, [illegible] ಪಾಮಲೋರರಲ್ಲಿ 'ಪುಲಾಕುಂಜಾ' ಎಂದೂ, ಮತ್ತು ಕೊರ್ಚರಲ್ಲಿ 'ಪೀರ ಮುಪಾ' ಎಂದು ಕರೆಯುತ್ತಾರೆ. 'ರಂಗಾಯತ' ಮತ್ತು 'ಪುಲಾಕುಂಜಾ' ಇವರಿಗೆ ಪಟ್ಟ ಕಟ್ಟುವಾಗ ಹೂ ಮತ್ತು 'ಕನ್ನಗತ್ತಿ' (ಕನ್ನ ಕೊರೆಯುವ ಆಯುಧ; ತನೇ ಚಿತ್ರದಲ್ಲಿ Ex. ೬೩ ನೋಡು) ಇವುಗಳ ಕೂಡ ಲಗ್ನದ ಕ್ರಮವನ್ನು ಮಾಡುತ್ತಾರೆ. ಆ ಮೇಲೆ ಇವರಿಗೆ ತಾವು ಸ್ವತಃ ಗುನ್ಹೆ ಮಾಡಲಿಕ್ಕೆ ಹೋಗಿ ಆ ಮೂಲಕ ಸಿಗುವ ಪಾಲಿನ ಹೊರತು ತಂಡಿನಲ್ಲಿ ಗುನ್ಹೆ ಮಾಡಿ ಗಳಿಸಿದ ಹಣದಲ್ಲಿಯೂ ಐದರಲ್ಲಿ ಒಂದು ಪಾಲು ಸಿಗುತ್ತದೆ.

ಭಾಷೆ.— ಮುಂಬಯಿ ಇಲಾಖೆಯಲ್ಲಿ ಕೈಕಾಡಿ ಜನರಿಗೆ, ಮರಾಠಿ ಮತ್ತು ಕನ್ನಡ ಮಾತು ಬರುತ್ತವೆ. ಮಹಾರಾಷ್ಟ್ರದಲ್ಲಿ ಅಥವಾ ತಮ್ಮತಮ್ಮೊಳಗೆ ಮಾತಾಡುವಾಗ, ಅವರು ತೆಲಗು ಅಥವಾ ಅರವಿ ಮಾತುಗಳನ್ನಾಡುತ್ತಾರೆ. ಕರ್ನಾಟಕದಲ್ಲಿ ಕೈಕಾಡಿಯರು ಅರವಿ, ಮತ್ತು ಪಾಮಲೋರರು ತೆಲಗು ಮಾತಾಡುತ್ತಾರೆ. ಇವರಲ್ಲಿ ಗುಪ್ತಭಾಷೆ ಮತ್ತು ಗುಪ್ತ ಸಂಜ್ಞೆಗಳೂ ಉಂಟು.

'ಕಳ್ಳ' ಕೊರ್ವರ ಗುಪ್ತ ಭಾಷೆ.

ಕೊಯಿಣಾ = ಪೋಲೀಸ ಸಿಪಾಯಿ.
ಕೃಂಡು = ಬಂಡೆ.
ಮೂಡಾ ಕೊಳ್ಳು = [illegible] ಆಯುಧ.
ಚೆಟುವಾ = ಕೊಡ್ಲಿ.
ಕವಲ್ದಾ = ಫೌಜದಾರ.
ರಂಗಾಯತ; ಪುಲಾಕುಂಜಾ = ಮುಖ್ಯಸ್ಥ.
ಸುರ್ಲಾ = ಲಾಠಿ.
ಕೆಲಯುಲು = ರೂಪಾಯಿ.
ಯುಲ್ಲಿ = ಬೆಳ್ಳಿ.
ಸೊಂಪು = ಬಂಗಾರ.
ಕುಂಡ್ಸಾ = ಕವಡೆ.
ಚಿಕ್ಕಾಮುಟ್ಟಾ = ದೊಣ್ಣೆ.
ಕೊಟ್ಟುಳ್ಳಿಕ್ಕಾ = ಕಲ್ಲು.
ಯುಯು ಯುಯು = ಕಲ್ಲಿನಿಂದ ಹೊಡೆ.

— ೪೯ —

[illegible]
ಯಲಸು; ಪಿಂಗಳ = ದಿವಟಿಗೆ.
ಸೊಂದ ಬಣ್ಣ = 'ಬಗರ' ಶಬ್ದ.
ಮಂಕಲು = 'ದುಮದುರಿ' ಶಬ್ದ.

ಪಾಮಲೋರರ ಗುಪ್ತ ಭಾಷೆ.

ಮುಕ್ಕವಾಡು ಮಲ್ಲಂಕಿ = ಪೋಲೀಸ ಸಿಪಾಯಿ.
ಸೊಂದ ಬಣ್ಣ = 'ಬಗರ' ಶಬ್ದ.
[illegible]; [illegible] = ಕನ್ನ ಕೊರೆಯುವ ಆಯುಧ.
[illegible] = [illegible].
ಮಂಕಲು = 'ದುಮದುರಿ' ಶಬ್ದ.
[illegible] = ಕಳವಿನ ಸಾಮಾನು.
[illegible] = [illegible].
ಯಲ್ಲಿವು = ಬೆಳ್ಳಿ.
[illegible] = ಬಂಗಾರ.
[illegible] = ಕಳವಿನ ಸಾಮಾನು ಕೊಂಡುಕೊಳ್ಳುವವ.
[illegible] = [illegible].
ಪೆಂಗಡು = ಫೌಜದಾರ.
[illegible] = ದೊಡ್ಡ ಅಮಲದಾರ.
[illegible] = ಓಡಿ ಹೋಗು.
[illegible] = ಅವರು ಬಂದರು.
ಪುಲಾಕುಂಜಾ = ನಾಯಕ.
[illegible] = [illegible].
ಸುರ್ಲಾ = ಲಾಠಿ.
[illegible]; [illegible] = [illegible].
[illegible] = [illegible].
[illegible]; [illegible] = ದಿವಟಿಗೆ.
[illegible] = ಸಹಾಯ ಮಾಡುವವ.
[illegible] = ಹೆಂಡ ಮಾರುವವ.

ಮಹಾರಾಷ್ಟ್ರದಲ್ಲಿಯ ಕೈಕಾಡಿಯವರ ಗುಪ್ತ ಭಾಷೆ.

[illegible]; [illegible] = ಪೋಲೀಸ ಸಿಪಾಯಿ.
[illegible] = ಫೌಜದಾರ.
[illegible]; [illegible]; [illegible] = ಕನ್ನ ಕೊರೆಯುವ ಆಯುಧ.
[illegible] = [illegible].
[illegible] = ಪೋಲೀಸರು ಬಂದರು.
[illegible] = [illegible].
[illegible] = [illegible].
[illegible] = ಅವರು ಬಂದರು.

ಕರ್ನಾಟಕದಲ್ಲಿಯ 'ಕಳ್ಳ' ಕೊರ್ವರು ಮತ್ತು ಪಾಮಲೋರರು ತಮ್ಮೊಳಗೆ ಮಾಡುವ ಸಂಜ್ಞೆಗಳು ಯಾವವೆಂದರೆ:—


ಬಾಯಿ ಮುಚ್ಚಿ ಗೂಗೆಯ ಹಾಗೆ ಶಬ್ದ ಮಾಡಿದರೆ, 'ಪೋಲೀಸರು ಬಂದರು' ಎಂಬ ಅಭಿಪ್ರಾಯವು.


ಮುಂಗೈಯನ್ನು ಬಾಯಿಗೆ ಹಚ್ಚಿ ಗೂಗೆ ಅಥವಾ ನಂಯ ಹಾಗೆ ಶಬ್ದ ಮಾಡಿದರೆ, '[illegible] ಹೋಗು' ಎಂಬ ಅರ್ಥವು.


ಅಂಗೈಯನ್ನು ಬಾಯಿಗೆ ಹಚ್ಚಿ ಮುಂಗಲಿಯ ಹಾಗೆ ಶಬ್ದ ಮಾಡಿದರೆ, ಹಿಂದೆ ಉಳಿದವರಿಗೆ 'ಬೇಗ ಬಾ' ಎಂಬ ಸಂಜ್ಞೆಯು.

ದೂರವಿದ್ದವನನ್ನು ಕರೆಯಬೇಕಾದರೆ, ಮುದಿ ನರಿಯಂತೆ ಕೂಗುವರು.












೧೧ನೇ ಚಿತ್ರ.




೧೧ನೇ ಚಿತ್ರ.








E×23





E:46
E:40
E:41
E×56


E:52




೪. ನಕಾಶೆಗಳು

೧. ಬಾಗಲಕೋಟೆ ಸೆಟ್ಲಮೆಂಟು ನಕಾಶೆ




■ ಸೆಟ್ಲಮೆಂಟ್ ಪ್ರದೇಶ

ಕೃಪೆ: ಗೂಗಲ್‌ನಿಂದ



೨. ಬಿಜಾಪುರ ಸೆಟ್ಲಮೆಂಟ ನಕಾಶೆ




■ ಸೆಟ್ಲಮೆಂಟ್ ಪ್ರದೇಶ

ಕೃಪೆ: ಗೂಗಲ್‌ನಿಂದ




೩. ಗದಗ ಸೆಟ್ಲಮೆಂಟ ನಕಾಶೆ




■ ಸೆಟ್ಲಮೆಂಟ್ ಪ್ರದೇಶ

ಕೃಪೆ: ಗೂಗಲ್‌ನಿಂದ



೪. ಗೋಕಾಕ್ ಫಾಲ್ಸ್ ಸೆಟ್ಲಮೆಂಟ ನಕಾಶೆ




■ ಸೆಟ್ಲಮೆಂಟ್ ಪ್ರದೇಶ

ಕೃಪೆ: ಗೂಗಲ್‌ನಿಂದ



೫. ಹುಬ್ಬಳ್ಳಿ ಸೆಟ್ಲಮೆಂಟ ನಕಾಶೆ



■ ಸೆಟ್ಲಮೆಂಟ್ ಪ್ರದೇಶ

ಕೃಪೆ: ಗೂಗಲ್‌ನಿಂದ

ಅಂಕಿಅಂಶಗಳು

೧. ಸಮೀಕ್ಷೆಗೊಳಪಟ್ಟ ಕರ್ನಾಟಕ ವಿಮುಕ್ತ ಬುಡಕಟ್ಟುಗಳ, ಸೆಟ್ಲಮೆಂಟವಾರು, ಕುಟುಂಬವಾರು, ಲಿಂಗವಾರು, ವಯೋ ಗುಂಪುವಾರು ಜನಸಂಖ್ಯೆ

ಭೋವಿ ಸಮುದಾಯ

ಕ್ರಸಂ.	ಜಿಲ್ಲೆ	ತಾಲೂಕು	ನೆಲೆಗಳು	ಕುಟುಂಬಗಳು	ಒಟ್ಟು ಜನಸಂಖ್ಯೆ			ವಯೋ ಗುಂಪು ೦-೪			೫-೧೭			೧೮-೪೦			೪೧-೬೦			೬೦+		
					ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಧಾರವಾಡ	ಹುಬ್ಬಳ್ಳಿ	ಗಂಗಾಧರ ನಗರ (ಸೆಟ್ಲಮೆಂಟ) ಹುಬ್ಬಳ್ಳಿ	೧೯೯	೬೦೨	೫೧೧	೧೧೧೩	೪೫	೩೨	೭೭	೨೦೬	೧೮೦	೩೮೮	೨೩೦	೧೮೭	೪೧೪	೮೦	೮೦	೧೫೭	೩೩	೩೦	೬೩
			ಒಟ್ಟು	೧೯೯	೬೦೨	೫೧೧	೧೧೧೩	೪೫	೩೨	೭೭	೨೦೬	೧೮೦	೩೮೮	೨೩೦	೧೮೭	೪೧೪	೮೦	೮೦	೧೫೭	೩೩	೩೦	೬೩

ಗಂಟಿಚೋರ ಸಮುದಾಯ

ಕ್ರಸಂ.	ಜಿಲ್ಲೆ	ತಾಲೂಕು	ನೆಲೆಗಳು	ಕುಟುಂಬಗಳು	ಒಟ್ಟು ಜನಸಂಖ್ಯೆ			ವಯೋ ಗುಂಪು ೦-೪			೫-೧೭			೧೮-೪೦			೪೧-೬೦			೬೦+		
					ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಬಾಗಲಕೋಟ	ಬಾಗಲಕೋಟ	ಸಕ್ರಿ ಹೈಸೂಲ್ ಹತ್ತಿರ, ಸೆಟ್ಲಮೆಂಟ, ಬಾಗಲಕೋಟ	೪೯	೧೨೪	೧೨೦	೨೪೪	೧೩	೧೨	೨೫	೪೯	೪೦	೮೯	೪೪	೫೫	೯೯	೧೬	೧೩	೨೯	೨	-	೨
೨	ಬಿಜಾಪುರ	ಬಿಜಾಪುರ	ಸೆಟ್ಲಮೆಂಟ, ಗೋಲ್‌ಗುಂಬಜ್ ಹತ್ತಿರ ಬಿಜಾಪುರ	೮೧	೧೮೦	೧೭೮	೩೫೮	೧೦	೯	೧೯	೫೯	೭೧	೧೩೦	೬೮	೬೬	೧೩೪	೩೨	೨೪	೫೬	೧೧	೮	೧೯
೩	ಕಾರವಾರ	ದಾಂಡೇಲಿ	ಗಣೇಶ ಗಲ್ಲಿ ಹತ್ತಿರ, ಸೆಟ್ಲಮೆಂಟ, ಹಳೆ ದಾಂಡೇಲಿ	೮೯	೨೩೭	೨೩೧	೪೬೮	೯	೧೦	೧೯	೪೮	೩೯	೮೭	೧೨೩	೧೨೪	೨೪೭	೩೯	೩೦	೬೯	೧೮	೨೮	೪೬
೪	ಗದಗ	ಗದಗ	ಗಾಂಧಿ ನಗರ(ಸೆಟ್ಲಮೆಂಟ) ಗದಗ	೧೩೦	೩೬೦	೩೪೭	೭೦೭	೨೩	೨೨	೪೫	೧೨೯	೧೩೨	೨೬೧	೧೩೨	೧೨೬	೨೫೮	೫೧	೪೭	೯೮	೨೫	೨೦	೪೫
೫	ಬೆಳಗಾವಿ	ಗೋಕಾಕ್	ಸೆಟ್ಲಮೆಂಟ, ಮಿಲ್ ಹತ್ತಿರ ಗೋಕಾಕ್ ಫಾಲ್ಸ್	೧೦೬	೨೧೭	೧೯೫	೪೧೨	೧೭	೧೫	೩೨	೪೪	೪೧	೮೫	೧೧೮	೧೦೬	೨೨೪	೩೩	೨೮	೬೧	೫	೫	೧೦
೬	ಧಾರವಾಡ	ಹುಬ್ಬಳ್ಳಿ	ಗಂಗಾಧರ ನಗರ (ಸೆಟ್ಲಮೆಂಟ) ಹುಬ್ಬಳಿ	೧೭೦	೪೧೨	೩೫೫	೭೬೭	೩೬	೩೯	೭೫	೧೬೫	೧೧೮	೨೮೩	೧೫೦	೧೫೩	೩೦೩	೪೨	೩೧	೭೩	೧೯	೧೪	೩೩
			ಒಟ್ಟು	೬೨೫	೧೫೩೦	೧೪೨೬	೨೯೫೬	೧೦೮	೧೦೭	೨೧೫	೪೯೪	೪೪೧	೯೩೫	೬೩೫	೬೩೦	೧೨೬೫	೨೧೩	೧೭೩	೩೮೬	೮೦	೭೫	೧೫೫

ಕೊರಮ ಸಮುದಾಯ

ಕ್ರಸಂ.	ಜಿಲ್ಲೆ	ತಾಲೂಕು	ನೆಲೆಗಳು	ಕುಟುಂಬಗಳು	ಒಟ್ಟು ಜನಸಂಖ್ಯೆ			ವಯೋಃ ಗುಂಪು ೦-೪			೫-೧೪			೧೫-೪೦			೪೧-೬೦			೬೦+		
					ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಗದಗ	ಗದಗ	ಗಾಂಧಿ ನಗರ (ಸೆಟ್ಲಮೆಂಟ) ಗದಗ	೨೮೬	೭೬೮	೬೯೮	೧೪೬೬	೫೫	೪೮	೧೦೩	೨೭೩	೨೬೦	೫೩೩	೨೯೦	೨೫೭	೫೪೭	೧೦೪	೯೮	೨೦೨	೪೬	೩೫	೮೧
೨	ಧಾರವಾಡ	ಹುಬ್ಬಳ್ಳಿ	ಗಂಗಾಧರ ನಗರ (ಸೆಟ್ಲಮೆಂಟ) ಹುಬ್ಬಳ್ಳಿ	೬೯೧	೨೩೦೪	೨೨೦೧	೪೫೦೫	೨೨೦	೧೯೫	೪೧೫	೮೧೩	೭೭೯	೧೫೯೨	೮೭೮	೮೫೭	೧೭೩೫	೨೮೫	೨೬೫	೫೫೦	೧೦೮	೧೦೫	೨೧೩
			ಒಟ್ಟು	೯೭೭	೩೦೭೨	೨೮೯೯	೫೯೭೧	೨೭೫	೨೪೩	೫೧೮	೧೦೮೬	೧೦೩೯	೨೧೨೫	೧೧೬೮	೧೧೧೪	೨೨೮೨	೩೮೯	೩೬೩	೭೫೨	೧೫೪	೧೪೦	೨೯೪

ಪಾರ್ಧಿ ಸಮುದಾಯ

ಕ್ರಸಂ.	ಜಿಲ್ಲೆ	ತಾಲೂಕು	ನೆಲೆಗಳು	ಕುಟುಂಬಗಳು	ಒಟ್ಟು ಜನಸಂಖ್ಯೆ			ವಯೋಃ ಗುಂಪು ೦-೪			೫-೧೪			೧೫-೪೦			೪೧-೬೦			೬೦+		
					ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಬಾಗಲಕೋಟ	ಬಾಗಲಕೋಟ	ಸಕ್ರಿ ಹೈಸೂಲ್ ಹತ್ತಿರ, ಸೆಟ್ಲಮೆಂಟ, ಬಾಗಲಕೋಟ	೨೫೫	೮೪೫	೮೫೪	೧೬೯೯	೯೯	೧೦೫	೨೦೪	೨೮೩	೨೭೮	೫೬೧	೩೦೯	೩೧೬	೬೨೫	೧೧೨	೧೧೧	೨೨೩	೪೨	೪೪	೮೬
೨	ಬಿಜಾಪುರ	ಬಿಜಾಪುರ	ಸೆಟ್ಲಮೆಂಟ, ಗೋಲ್‌ಗುಂಬಜ್ ಹತ್ತಿರ, ಬಿಜಾಪುರ	೨೬೧	೬೭೩	೭೭೦	೧೪೪೩	೯೦	೧೧೮	೨೦೮	೨೩೨	೨೪೯	೪೮೧	೨೭೬	೩೧೦	೫೮೬	೬೨	೭೪	೧೩೬	೧೩	೧೯	೩೨
೩	ಗದಗ	ಗದಗ	ಗಾಂಧಿ ನಗರ (ಸೆಟ್ಲಮೆಂಟ) ಗದಗ	೩೧	೭೯	೮೧	೧೬೦	೫	೫	೯	೩೫	೩೧	೬೬	೨೬	೩೬	೬೨	೧೨	೩	೧೫	೧	೬	೭
೪	ಧಾರವಾಡ	ಹುಬ್ಬಳ್ಳಿ	ಗಂಗಾಧರ ನಗರ (ಸೆಟ್ಲಮೆಂಟ) ಹುಬ್ಬಳಿ	೫೫೯	೧೬೦೬	೧೫೦೭	೩೧೧೩	೧೪೭	೧೨೮	೨೭೫	೫೨೫	೪೪೪	೯೬೯	೭೨೫	೭೨೭	೧೪೫೨	೧೭೦	೧೬೮	೩೩೮	೩೯	೪೦	೭೯
			ಒಟ್ಟು	೧೧೦೬	೩೨೦೩	೩೨೧೨	೬೪೧೫	೩೪೧	೩೫೬	೬೯೬	೧೦೭೫	೧೦೦೨	೨೦೭೭	೧೩೩೬	೧೩೮೯	೨೭೨೫	೩೫೬	೩೫೬	೭೧೨	೯೫	೧೦೯	೨೦೪

ಚಪ್ಪರಬಂದ ಸಮುದಾಯ

ಕ್ರಸಂ.	ಜಿಲ್ಲೆ	ತಾಲೂಕು	ನೆಲೆಗಳು	ಕುಟುಂಬಗಳು	ಒಟ್ಟು ಜನಸಂಖ್ಯೆ ಗಂಡು	ಹೆಣ್ಣು	ಒಟ್ಟು	ವಯೋ ಗುಂಪು ೦–೪ ಗಂಡು	ಹೆಣ್ಣು	ಒಟ್ಟು	೫–೧೭ ಗಂಡು	ಹೆಣ್ಣು	ಒಟ್ಟು	೧೮–೪೦ ಗಂಡು	ಹೆಣ್ಣು	ಒಟ್ಟು	೪೧–೬೦ ಗಂಡು	ಹೆಣ್ಣು	ಒಟ್ಟು	೬೦+ ಗಂಡು	ಹೆಣ್ಣು	ಒಟ್ಟು
೧	ಬಾಗಲಕೋಟ	ಬಾಗಲಕೋಟ	ಸಕ್ರಿ ಹೈಸೂಲ್ ಹತ್ತಿರ, ಸೆಟ್ಲಮೆಂಟ, ಬಾಗಲಕೋಟ	೩೮	೧೩೩	೯೯	೨೩೨	೧೫	೧೪	೨೯	೪೧	೨೪	೬೫	೪೫	೩೭	೮೨	೧೬	೧೮	೩೪	೧೦	೪	೧೪
೨	ಬಿಜಾಪು	ಬಿಜಾಪುರ	ಸೆಟ್ಲಮೆಂಟ, ಗೋಲ್‌ಗುಂಬಜ್ ಹತ್ತಿರ, ಬಿಜಾಪುರ	೧೭೦	೪೪೮	೩೮೮	೮೩೬	೩೬	೪೦	೭೬	೧೬೪	೧೨೦	೨೮೪	೧೫೩	೧೬೧	೩೧೪	೬೩	೪೮	೧೧೧	೨೫	೧೭	೪೨
೩	ಗದಗ	ಗದಗ	ಗಾಂಧಿ ನಗರ (ಸೆಟ್ಲಮೆಂಟ) ಗದಗ	೧೦೧	೨೩೬	೨೦೮	೪೪೪	೧೭	೨೧	೩೮	೮೮	೬೫	೧೫೩	೮೨	೮೮	೧೭೦	೩೫	೨೭	೬೨	೧೪	೭	೨೧
೪	ಧಾರವಾಡ	ಹುಬ್ಬಳ್ಳಿ	ಗಂಗಾಧರ ನಗರ (ಸೆಟ್ಲಮೆಂಟ) ಹುಬ್ಬಳಿ	೨೮	೬೫	೬೦	೧೨೫	೫	೨	೭	೨೯	೧೯	೪೮	೨೪	೨೭	೫೧	೫	೯	೧೪	೨	೩	೫
			ಒಟ್ಟು	೩೩೭	೮೮೨	೭೫೫	೧೬೩೭	೭೩	೭೭	೧೫೦	೩೨೨	೨೨೮	೫೫೦	೩೦೪	೩೧೩	೬೧೭	೧೧೯	೧೦೨	೨೨೧	೫೧	೩೧	೮೨

ಕಂಜರಭಾಟ ಸಮುದಾಯ

ಕ್ರಸಂ.	ಜಿಲ್ಲೆ	ತಾಲೂಕು	ನೆಲೆಗಳು	ಕುಟುಂಬಗಳು	ಒಟ್ಟು ಜನಸಂಖ್ಯೆ ಗಂಡು	ಹೆಣ್ಣು	ಒಟ್ಟು	ವಯೋ ಗುಂಪು ೦–೪ ಗಂಡು	ಹೆಣ್ಣು	ಒಟ್ಟು	೫–೧೭ ಗಂಡು	ಹೆಣ್ಣು	ಒಟ್ಟು	೧೮–೪೦ ಗಂಡು	ಹೆಣ್ಣು	ಒಟ್ಟು	೪೧–೬೦ ಗಂಡು	ಹೆಣ್ಣು	ಒಟ್ಟು	೬೦+ ಗಂಡು	ಹೆಣ್ಣು	ಒಟ್ಟು
೧	ಗದಗ	ಗದಗ	ಗಾಂಧಿ ನಗರ (ಸೆಟ್ಲಮೆಂಟ) ಗದಗ	೪೭	೧೦೩	೧೦೦	೨೦೩	೧೨	೧೩	೨೫	೩೧	೨೭	೫೮	೪೬	೪೧	೮೭	೮	೧೨	೨೦	೫	೫	೧೦
೨	ಧಾರವಾಡ	ಹುಬ್ಬಳ್ಳಿ	ಗಂಗಾಧರ ನಗರ (ಸೆಟ್ಲಮೆಂಟ) ಹುಬ್ಬಳ್ಳಿ	೮೨	೧೯೩	೧೬೧	೩೫೪	೧೭	೧೫	೩೨	೯೨	೬೦	೧೪೬	೬೮	೬೮	೧೩೩	೧೭	೧೬	೩೩	೮	೨	೧೦
			ಒಟ್ಟು	೧೨೯	೨೯೬	೨೬೧	೫೫೭	೨೯	೨೮	೫೭	೧೨೩	೮೭	೨೦೪	೧೧೪	೧೦೯	೨೨೦	೨೫	೨೮	೫೩	೧೩	೭	೨೦

೨. ಸಮೀಕ್ಷೆಗೊಳಪಟ್ಟ ಕರ್ನಾಟಕ ವಿಮುಕ್ತ ಬುಡಕಟ್ಟುಗಳ ವೈವಾಹಿಕ ಸ್ಥಾನಮಾನ

ಭೋವಿ ಸಮುದಾಯ

			ಒಟ್ಟು ಜನಸಂಖ್ಯೆ			ಅವಿವಾಹಿತರು			ವಿವಾಹಿತರು			ವಿದುರರು/ವಿದುವೆಯರು			ಬೇರ್ಪಟ್ಟವರು		
ಕ್ರ ಸಂ.	ನೆಲೆಗಳು	ಕುಟುಂಬಗಳು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಗಂಗಾಧರ ನಗರ(ಸೆಟ್ಲಮೆಂಟ) ಹುಬ್ಬಳ್ಳಿ	೧೯೯	೬೦೨	೫೧೧	೧೧೧೩	೩೭೦	೨೪೪	೬೧೪	೨೨೯	೨೬೫	೪೯೪	೩	೨೩	೨೬			
	ಒಟ್ಟು	೧೯೯	೬೦೨	೫೧೧	೧೧೧೩	೩೭೦	೨೪೪	೬೧೪	೨೨೯	೨೬೫	೪೯೪	೩	೨೩	೨೬			

ಗಂಟಿಚೋರ ಸಮುದಾಯ

			ಒಟ್ಟು ಜನಸಂಖ್ಯೆ			ಅವಿವಾಹಿತರು			ವಿವಾಹಿತರು			ವಿದುರರು/ವಿದುವೆಯರು			ಬೇರ್ಪಟ್ಟವರು		
ಕ್ರ ಸಂ.	ನೆಲೆಗಳು	ಕುಟುಂಬಗಳು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಸಕ್ರಿ ಹೈಸೂಲ್ ಹತ್ತಿರ,ಸೆಟ್ಲಮೆಂಟ,ಬಾಗಲಕೋಟ	೪೯	೧೨೪	೧೨೦	೨೪೪	೭೪	೭೦	೧೪೪	೫೦	೫೦	೧೦೦		೧	೧			
೨	ಸೆಟ್ಲಮೆಂಟ, ಗೋಲ್‌ಗುಂಬಜ್ ಹತ್ತಿರ ಬಿಜಾಪುರ	೮೧	೧೮೦	೧೭೮	೩೫೮	೯೯	೯೬	೧೯೫	೮೧	೮೨	೧೬೩						
೩	ಗಣೇಶ ಗಲ್ಲಿ ಹತ್ತಿರ,ಸೆಟ್ಲಮೆಂಟ,ಹಳೆ ದಾಂಡೇಲಿ	೪೯	೨೩೭	೨೩೧	೪೬೮	೮೧	೭೧	೧೫೨	೧೪೭	೧೪೭	೨೯೪	೯	೧೩	೨೨	೦	೦	೦
೪	ಗಾಂಧಿ ನಗರ(ಸೆಟ್ಲಮೆಂಟ) ಗದಗ	೧೩೦	೩೬೦	೩೪೭	೭೦೭	೨೦೯	೧೯೬	೪೦೫	೧೪೭	೧೪೮	೨೯೫	೪	೩	೭			
೫	ಸೆಟ್ಲಮೆಂಟ, ಮಿಲ್ ಹತ್ತಿರ ಗೊಕಾಕ್ ಫಾಲ್ಸ್	೧೦೬	೨೧೭	೧೯೫	೪೧೨	೭೯	೪೪	೧೨೩	೧೩೫	೧೩೫	೨೭೦	೨	೧೫	೧೭	೧	೧	೨
೬	ಗಂಗಾಧರ ನಗರ(ಸೆಟ್ಲಮೆಂಟ) ಹುಬ್ಬಳ್ಳಿ	೧೭೦	೪೧೨	೩೫೫	೭೬೭	೨೩೦	೧೭೨	೪೦೨	೧೮೦	೧೮೦	೩೬೦	೨	೩	೫			
	ಒಟ್ಟು	೬೨೫	೧೫೩೦	೧೪೨೬	೨೯೫೬	೭೭೨	೬೪೯	೧೪೨೧	೭೪೦	೭೪೨	೧೪೮೨	೧೭	೩೫	೫೨	೧	೧	೨

ಕೊರಮ ಸಮುದಾಯ

			ಒಟ್ಟು ಜನಸಂಖ್ಯೆ			ಅವಿವಾಹಿತರು			ವಿವಾಹಿತರು			ವಿದುರರು/ವಿದುವೆಯರು			ಬೇರ್ಪಟ್ಟವರು		
ಕ್ರ ಸಂ.	ನೆಲೆಗಳು	ಕುಟುಂಬಗಳು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಗಾಂಧಿ ನಗರ(ಸೆಟ್ಲಮೆಂಟ) ಗದಗ	೨೮೬	೭೬೮	೬೯೮	೧೪೬೬	೪೬೪	೩೮೧	೮೪೫	೩೦೧	೩೦೨	೬೦೩	೩	೨೫	೨೮			
೨	ಗಂಗಾಧರ ನಗರ(ಸೆಟ್ಲಮೆಂಟ) ಹುಬ್ಬಳ್ಳಿ	೬೯೧	೨೩೦೪	೨೨೦೧	೪೫೦೫	೧೨೭೧	೧೦೮೪	೨೩೫೫	೧೦೦೩	೧೦೦೩	೨೦೦೬	೨೮	೯೫	೧೨೩	೨	೯	೧೧
	ಒಟ್ಟು	೯೭೭	೩೦೭೨	೨೮೯೯	೫೯೭೧	೧೭೩೫	೧೪೬೫	೩೨೦೦	೧೩೦೪	೧೩೦೫	೨೬೦೯	೩೧	೧೨೦	೧೫೧	೨	೯	೧೧

ಪಾರ್ಧಿ ಸಮುದಾಯ

ಕ್ರ ಸಂ.	ನೆಲೆಗಳು	ಕುಟುಂಬಗಳು	ಒಟ್ಟು ಜನಸಂಖ್ಯೆ			ಅವಿವಾಹಿತರು			ವಿವಾಹಿತರು			ವಿದುರರು/ವಿದುವೆಯರು			ಬೇರ್ಪಟ್ಟವರು		
			ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಸಕ್ರಿ ಹೈಸೂಲ್ ಹತ್ತಿರ,ಸೆಟ್ಲಮೆಂಟ,ಬಾಗಲಕೋಟ	೨೫೫	೮೪೫	೮೫೪	೧೬೯೯	೪೩೯	೪೧೦	೮೪೯	೩೯೩	೩೯೩	೭೮೬	೧೨	೪೫	೫೭	೧	೬	೭
೨	ಸೆಟ್ಲಮೆಂಟ, ಗೋಲ್‌ಗುಂಬಜ್ ಹತ್ತಿರ ಬಿಜಾಪುರ	೨೬೧	೬೭೩	೭೭೦	೧೪೪೩	೩೭೪	೩೬೭	೭೪೧	೨೯೩	೩೧೬	೬೦೯	೨	೩೭	೩೯	೨	೨	೪
೩	ಗಾಂಧಿ ನಗರ(ಸೆಟ್ಲಮೆಂಟ) ಗದಗ	೩೧	೭೯	೮೧	೧೬೦	೪೭	೩೯	೮೬	೩೧	೩೩	೬೪		೯	೯			
೪	ಗಂಗಾಧರ ನಗರ(ಸೆಟ್ಲಮೆಂಟ) ಹುಬ್ಬಳ್ಳಿ	೫೩೯	೧೬೦೬	೧೫೦೭	೩೧೧೩	೮೭೨	೬೬೮	೧೫೪೦	೭೧೨	೭೬೦	೧೪೭೨	೧೯	೮೪	೧೦೩	೨	೧	೩
	ಒಟ್ಟು	೧೧೦೬	೩೨೦೩	೩೨೧೨	೬೪೧೫	೧೭೩೨	೧೫೭೩	೩೩೦೫	೧೪೩೩	೧೪೫೫	೨೮೮೮	೩೩	೧೭೫	೨೦೮	೫	೯	೧೪

ಚಪ್ಪರಬಂದ ಸಮುದಾಯ

ಕ್ರ ಸಂ.	ನೆಲೆಗಳು	ಕುಟುಂಬಗಳು	ಒಟ್ಟು ಜನಸಂಖ್ಯೆ			ಅವಿವಾಹಿತರು			ವಿವಾಹಿತರು			ವಿದುರರು/ವಿದುವೆಯರು			ಬೇರ್ಪಟ್ಟವರು		
			ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಸಕ್ರಿ ಹೈಸೂಲ್ ಹತ್ತಿರ,ಸೆಟ್ಲಮೆಂಟ,ಬಾಗಲಕೋಟ	೩೮	೧೩೩	೯೯	೨೩೨	೭೧	೩೯	೧೧೦	೬೨	೬೧	೧೨೩						
೨	ಸೆಟ್ಲಮೆಂಟ, ಗೋಲ್‌ಗುಂಬಜ್ ಹತ್ತಿರ ಬಿಜಾಪುರ	೧೭೦	೪೪೮	೩೮೮	೮೩೬	೨೫೦	೧೭೬	೪೨೬	೧೯೭	೨೦೪	೪೦೧		೧೧	೧೧			
೩	ಗಾಂಧಿ ನಗರ(ಸೆಟ್ಲಮೆಂಟ) ಗದಗ	೧೦೧	೨೩೬	೨೦೮	೪೪೪	೧೩೨	೯೮	೨೩೦	೧೦೪	೧೧೦	೨೧೪		೨	೨			
೪	ಗಂಗಾಧರ ನಗರ(ಸೆಟ್ಲಮೆಂಟ) ಹುಬ್ಬಳ್ಳಿ	೨೮	೬೫	೬೦	೧೨೫	೪೧	೨೨	೬೩	೨೪	೩೮	೬೨						
	ಒಟ್ಟು	೩೩೭	೮೮೨	೭೫೫	೧೬೩೭	೪೯೪	೩೩೫	೮೨೯	೩೮೭	೪೧೩	೮೦೦		೧೩	೧೩			

ಕಂಜರಭಾಟ ಸಮುದಾಯ

ಕ್ರ ಸಂ.	ನೆಲೆಗಳು	ಕುಟುಂಬಗಳು	ಒಟ್ಟು ಜನಸಂಖ್ಯೆ			ಅವಿವಾಹಿತರು			ವಿವಾಹಿತರು			ವಿದುರರು/ವಿದುವೆಯರು			ಬೇರ್ಪಟ್ಟವರು		
			ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಗಾಂಧಿ ನಗರ(ಸೆಟ್ಲಮೆಂಟ) ಗದಗ	೪೭	೧೦೩	೧೦೦	೨೦೩	೬೩	೪೫	೧೦೮	೪೦	೪೯	೮೯	೧	೩	೪			
೨	ಗಂಗಾಧರ ನಗರ(ಸೆಟ್ಲಮೆಂಟ) ಹುಬ್ಬಳ್ಳಿ	೮೨	೧೯೩	೧೬೧	೩೫೪	೧೨೪	೮೧	೨೦೫	೭೦	೭೮	೧೪೮	೨	೬	೮			
	ಒಟ್ಟು	೧೨೯	೨೯೬	೨೬೧	೫೫೭	೧೮೭	೧೨೬	೩೧೩	೧೧೦	೧೨೭	೨೩೭	೩	೯	೧೨			

೩. ಸಮೀಕ್ಷೆಗೊಳಪಟ್ಟ ಕರ್ನಾಟಕ ವಿಮುಕ್ತ ಬುಡಕಟ್ಟುಗಳ ಸಾಕ್ಷರತೆ ಪ್ರಮಾಣ

ಭೋವಿ ಸಮುದಾಯ

		ಪ್ರಾಥಮಿಕ ಶಿಕ್ಷಣ			ಮಾಧ್ಯಮಿಕ			ಪ್ರೌಢ			ಪದವಿ ಪೂರ್ವ			ಡಿಪ್ಲೊಮಾ			ಪದವಿ			ಸ್ನಾತಕೋತ್ತರ			ಇತರೆ ಪದವಿ		
ಕ್ರಸಂ.	ನೆಲೆಗಳು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಗಂಗಾಧರ ನಗರ(ಸೆಟ್ಲಮೆಂಟ) ಹುಬ್ಬಳ್ಳಿ	೬೩	೪೯	೧೧೨	೫೬	೩೬	೯೨	೭೫	೩೪	೧೦೯	೫೩	೧೨	೬೫				೨೩	೩	೨೬		೧	೧	೨		
	ಒಟ್ಟು	೬೩	೪೯	೧೧೨	೫೬	೩೬	೯೨	೭೫	೩೪	೧೦೯	೫೩	೧೨	೬೫				೨೩	೩	೨೬		೧	೧	೨		೨

ಗಂಟಿಚೋರ ಸಮುದಾಯ

		ಪ್ರಾಥಮಿಕ ಶಿಕ್ಷಣ			ಮಾಧ್ಯಮಿಕ			ಪ್ರೌಢ			ಪದವಿ ಪೂರ್ವ			ಡಿಪ್ಲೊಮಾ			ಪದವಿ			ಸ್ನಾತಕೋತ್ತರ			ಇತರೆ ಪದವಿ		
ಕ್ರಸಂ.	ನೆಲೆಗಳು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಸಕ್ರಿ ಹೈಸೂಲ್ ಹತ್ತಿರ ಸೆಟ್ಲಮೆಂಟ. ಬಾಗಲಕೋಟ	೮	೧೦	೧೮	೧೪	೨೦	೩೪	೯	೮	೧೭	೩	೨	೫					೨	೨				೭		೭
೨	ಸೆಟ್ಲಮೆಂಟ, ಗೋಲ್‌ಗುಂಬಜ್ ಹತ್ತಿರ ಬಿಜಾಪುರ	೨೪	೧೪	೩೮	೨೫	೨೨	೪೭	೨೦	೫	೨೫	೯		೯				೮		೮				೧		೧
೩	ಗಣೇಶ ಗಲ್ಲಿ ಹತ್ತಿರ, ಸೆಟ್ಲಮೆಂಟ, ಹಳೆ ದಾಂಡೇಲಿ	೨೦	೧೪	೩೪	೨೧	೧೫	೩೩	೫೨	೧೫	೬೭	೨೪	೪	೨೮	೦	೦	೦	೯	೦	೯	೨	೦	೨	೩	೧	[illegible]
೪	ಗಾಂಧಿ ನಗರ(ಸೆಟ್ಲಮೆಂಟ), ಗದಗ	೧೪	೨೧	೩೫	೨೦	೨೧	೪೧	೨೨	೧೮	೪೦	೩೨	೫	೩೭	೧		೧	೧೪	೩	೧೭	೧		೧			
೫	ಸೆಟ್ಲಮೆಂಟ, ಮಿಲ್ ಹತ್ತಿರ ಗೊಕಾಕ್ ಫಾಲ್ಸ	೨೯	೧೮	೪೬	೪೦	೨೬	೬೬	೭೬	೩೦	೧೦೬	೧೧	೬	೧೭	೦	೦	೦	೬	೨	೮	೧	೦	೧	೧	೦	೧
೬	ಗಂಗಾಧರ ನಗರ(ಸೆಟ್ಲಮೆಂಟ) ಹುಬ್ಬಳ್ಳಿ	೭೪	೩೨	೧೦೬	೩೨	೧೦	೪೨	೧೨	೬	೧೮	೮	೩	೧೧				೧		೧				೧		೧
	ಒಟ್ಟು	೧೬೯	೧೦೯	೨೭೭	೧೫೨	೧೧೪	೨೬೩	೧೯೧	೮೨	೨೭೩	೮೭	೨೦	೧೦೭	೧	೦	೧	೩೮	೭	೪೫	೪	೦	೪	೧೩	೧	೧೩

ಕೊರಮ ಸಮುದಾಯ

		ಪ್ರಾಥಮಿಕ ಶಿಕ್ಷಣ			ಮಾಧ್ಯಮಿಕ			ಪ್ರೌಢ			ಪದವಿ ಪೂರ್ವ			ಡಿಪ್ಲೊಮಾ			ಪದವಿ			ಸ್ನಾತಕೋತ್ತರ			ಇತರೆ ಪದವಿ		
ಕ್ರಸಂ.	ನೆಲೆಗಳು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಗಾಂಧಿ ನಗರ(ಸೆಟ್ಲಮೆಂಟ) ಗದಗ	೭೪	೫೬	೧೩೦	೬೦	೪೩	೧೦೩	೬೮	೩೭	೧೦೫	೩೫	೧೪	೪೯				೧೨	೩	೧೫				೨		೨
೨	ಗಂಗಾಧರ ನಗರ(ಸೆಟ್ಲಮೆಂಟ) ಹುಬ್ಬಳ್ಳಿ	೨೮೯	೨೧೦	೪೯೯	೧೫೨	೮೮	೨೪೦	೧೪೫	೪೭	೧೯೨	೫೦	೧೦	೬೦	೫		೫	೧೬	೨	೧೮	೩	೩	೬	೮		೮
	ಒಟ್ಟು	೩೬೩	೨೬೬	೬೨೯	೨೧೨	೧೩೧	೩೪೩	೨೧೩	೮೪	೨೯೭	೮೫	೨೪	೧೦೯	೫		೫	೨೮	೫	೩೪	೩	೩	೬	೧೦		೧೦

ಪಾರ್ಧಿ ಸಮುದಾಯ

ಕ್ರಸಂ.	ನೆಲೆಗಳು	ಪ್ರಾಥಮಿಕ ಶಿಕ್ಷಣ			ಮಾಧ್ಯಮಿಕ			ಪ್ರೌಢ			ಪದವಿ ಪೂರ್ವ			ಡಿಪ್ಲೊಮಾ			ಪದವಿ			ಸ್ನಾತಕೋತ್ತರ			ಇತರೆ ಪದವಿ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಸಕ್ರಿ ಹೈಸೂಲ್ ಹತ್ತಿರ ಸೆಟ್ಲಮೆಂಟ, ಬಾಗಲಕೋಟ	೯೮	೭೬	೧೭೪	೫೪	೩೨	೮೬	೩೫	೮	೪೩	೨	೨	೪	೬		೬	೪		೪	೧		೧			
೨	ಸೆಟ್ಲಮೆಂಟ, ಗೋಲ್‌ಗುಂಬಜ್ ಹತ್ತಿರ ಬಿಜಾಪುರ	೧೧೦	೮೧	೧೯೧	೬೯	೨೯	೯೮	೪೫	೧೨	೫೭	೧೧	೩	೧೪				೧೦	೧	೧೧				೨	೨	೪
೩	ಗಾಂಧಿ ನಗರ(ಸೆಟ್ಲಮೆಂಟ) ಗದಗ	೬	೯	೧೫	೪		೪	೭	೩	೧೦	೧		೧												
೪	ಗಂಗಾಧರ ನಗರ(ಸೆಟ್ಲಮೆಂಟ) ಹುಬ್ಬಳ್ಳಿ	೧೭೦	೧೧೮	೨೮೮	೧೩೪	೫೦	೧೮೪	೬೩	೧೧	೭೪	೧೧	೧	೧೨	೧		೧	೫	೨	೭	೧		೧	೩		
	ಒಟ್ಟು	೩೮೪	೨೮೪	೬೬೮	೨೬೧	೧೧೧	೩೭೨	೧೫೦	೩೪	೧೮೪	೨೫	೬	೩೧	೭		೭	೧೯	೩	೨೨	೨		೨	೫	೨	೭

ಚಪ್ಪರಬಂದ ಸಮುದಾಯ

ಕ್ರಸಂ.	ನೆಲೆಗಳು	ಪ್ರಾಥಮಿಕ ಶಿಕ್ಷಣ			ಮಾಧ್ಯಮಿಕ			ಪ್ರೌಢ			ಪದವಿ ಪೂರ್ವ			ಡಿಪ್ಲೊಮಾ			ಪದವಿ			ಸ್ನಾತಕೋತ್ತರ			ಇತರೆ ಪದವಿ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಸಕ್ರಿ ಹೈಸೂಲ್ ಹತ್ತಿರ, ಸೆಟ್ಲಮೆಂಟ, ಬಾಗಲಕೋಟ	೫	೬	೧೧	೭	೪	೧೧	೬	೪	೧೦	೪	೩	೭	೨		೨	೧		೧		೩	೩	೧		೧
೨	ಸೆಟ್ಲಮೆಂಟ, ಗೋಲ್‌ಗುಂಬಜ್ ಹತ್ತಿರ ಬಿಜಾಪುರ	೩೪	೨೨	೫೬	೨೭	೧೨	೩೯	೨೭	೧೪	೪೧	೧೦	೫	೧೭	೨		೨	೧		೧		೩	೩	೧		೧
೩	ಗಾಂಧಿ ನಗರ(ಸೆಟ್ಲಮೆಂಟ) ಗದಗ	೧೭	೧೨	೨೯	೧೦	೮	೧೮	೧೦	೪	೧೪	೭	೨	೯												
೪	ಗಂಗಾಧರ ನಗರ(ಸೆಟ್ಲಮೆಂಟ) ಹುಬ್ಬಳ್ಳಿ	೬	೫	೧೧	೬	೪	೧೦	೪	೩	೭	೨														
	ಒಟ್ಟು	೬೨	೪೫	೧೦೭	೫೦	೨೮	೭೮	೪೭	೨೫	೭೨	೨೩	೧೦	೩೩	೪		೪	೨		೨		೬	೬	೨		೨

ಕಂಜರಭಾಟ ಸಮುದಾಯ

ಕ್ರಸಂ.	ನೆಲೆಗಳು	ಪ್ರಾಥಮಿಕ ಶಿಕ್ಷಣ			ಮಾಧ್ಯಮಿಕ			ಪ್ರೌಢ			ಪದವಿ ಪೂರ್ವ			ಡಿಪ್ಲೊಮಾ			ಪದವಿ			ಸ್ನಾತಕೋತ್ತರ			ಇತರೆ ಪದವಿ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಗಾಂಧಿ ನಗರ(ಸೆಟ್ಲಮೆಂಟ) ಗದಗ	೬	೧೨	೧೮	೧೦	೭	೧೭	೧೭	೭	೨೫	೧೦	೧	೧೧	೨	೧	೩	೨	೧	೩						
೨	ಗಂಗಾಧರ ನಗರ(ಸೆಟ್ಲಮೆಂಟ) ಹುಬ್ಬಳ್ಳಿ	೩	೪	೭	೮	೭	೧೫	೮	೨	೧೦															
	ಒಟ್ಟು	೯	೧೬	೨೫	೧೮	೧೪	೩೨	೨೫	೯	೩೫	೧೦	೧	೧೧	೨	೧	೩	೨	೧	೩						

೪. ಸಮೀಕ್ಷೆಗೊಳಪಟ್ಟ ಕರ್ನಾಟಕ ವಿಮುಕ್ತ ಬುಡಕಟ್ಟುಗಳ ಕಸುಬುಗಳು

ಭೋವಿ ಸಮುದಾಯ

ಕ್ರಸಂ.	ನೆಲೆಗಳು	ಕೃಷಿ			ಕೃಷಿ ಕಾರ್ಮಿಕರು			ಸರಕಾರಿ ನೌಕರರು			ಆಟೋ ಚಾಲಕರು			ವ್ಯಾಪಾರ			ಪಾತ್ರೆ ತೊಳೆಯುವವರರ			ಕಾರಪೇಂಟರ್			ಇತರೆ ಕೆಲಸ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಗಂಗಾಧರ ನಗರ(ಸೆಟ್ಲಮೆಂಟ) ಹುಬ್ಬಳ್ಳಿ			೧೫	೧೨	೨೭	೨೩	೩೨	೫೫	೩	೧	೪	೩೮	೩೮	೧೩	೯	೨೨		೫೩	೫೩	೮	೮	೧೨೪	೧೦೩	೨೨೭
	ಒಟ್ಟು	೧೫	೧೨	೨೭	೨೩	೩೨	೫೫	೩	೧	೪	೩೮		೩೮	೧೩	೯	೨೨		೫೩	೫೩	೮		೮	೧೨೪	೧೦೩	೨೨೭

ಗಂಟಿಚೋರ ಸಮುದಾಯ

ಕ್ರಸಂ.	ನೆಲೆಗಳು	ಕೃಷಿ			ಕೃಷಿ ಕಾರ್ಮಿಕರು			ಸರಕಾರಿ ನೌಕರರು			ಆಟೋ ಚಾಲಕರು			ವ್ಯಾಪಾರ			ಪಾತ್ರೆ ತೊಳೆಯುವವರರ			ಕಾರಪೇಂಟರ್			ಇತರೆ ಕೆಲಸ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಸಕ್ರಿ ಹೈಸೂಲ್ ಹತ್ತಿರ, ಸೆಟ್ಲಮೆಂಟ,ಬಾಗಲಕೋಟ	೧೦	೧೩	೨೩	೫	೬	೧೧	೮	೨	೧೦	೯		೯					೨೫	೨೫	೭		೭	೧೦	೮	೧೮
೨	ಸೆಟ್ಲಮೆಂಟ, ಗೋಲ್‌ಗುಂಬಜ್ ೨ ಹತ್ತಿರ ಬಿಜಾಪುರ			೨																೭೯	೧೬	೯೫			
೩	ಗಣೇಶ ಗಲ್ಲಿ ಹತ್ತಿರ, ಸೆಟ್ಲಮೆಂಟ,ಹಳೆ ದಾಂಡೇಲಿ	೨೩	೧೯	೩೮	೧೦	೨೪	೩೪	೧೭	೧	೧೮	೦	೦	೦	೦	೦	೦	೧	೧	೦	೩	೦	೩	೯೭	೭೬	೧೭೩
೪	ಗಾಂಧಿ ನಗರ (ಸೆಟ್ಲಮೆಂಟ) ಗದಗ	೧		೧																			೨೦೩	೪೭	೨೫೦
೫	ಸೆಟ್ಲಮೆಂಟ, ಮಿಲ್ ಹತ್ತಿರ ಗೊಕಾಕ್ ಫಾಲ್ಸ್	೦	೦	೦	೧	೧	೨	೨	೦	೨	೫	೩	೮	೦	೦	೦	೦	೧	೧	೩	೦	೩	೮೫	೪೫	೧೩೦
೬	ಗಂಗಾಧರ ನಗರ (ಸೆಟ್ಲಮೆಂಟ) ಹುಬ್ಬಳ್ಳಿ	೭		೭										೬೦	೫೩	೧೧೩							೧೬೮	೧೫೬	೩೨೪
	ಒಟ್ಟು	೪೧	೩೨	೬೯	೧೮	೩೧	೪೯	೨೭	೩	೩೦	೧೪	೩	೧೭	೬೦	೫೩	೧೧೩	೧	೨೭	೨೬	೧೩	೦	೧೩	೬೪೨	೩೪೮	೯೯೦

ಕೊರಮ ಸಮುದಾಯ

ಕ್ರಸಂ.	ನೆಲೆಗಳು	ಕೃಷಿ ಗಂಡು	ಕೃಷಿ ಹೆಣ್ಣು	ಕೃಷಿ ಒಟ್ಟು	ಕೃಷಿ ಕಾರ್ಮಿಕರು ಗಂಡು	ಕೃಷಿ ಕಾರ್ಮಿಕರು ಹೆಣ್ಣು	ಕೃಷಿ ಕಾರ್ಮಿಕರು ಒಟ್ಟು	ಸರಕಾರಿ ನೌಕರರು ಗಂಡು	ಸರಕಾರಿ ನೌಕರರು ಹೆಣ್ಣು	ಸರಕಾರಿ ನೌಕರರು ಒಟ್ಟು	ಆಟೋ ಚಾಲಕರು ಗಂಡು	ಆಟೋ ಚಾಲಕರು ಹೆಣ್ಣು	ಆಟೋ ಚಾಲಕರು ಒಟ್ಟು	ವ್ಯಾಪಾರ ಗಂಡು	ವ್ಯಾಪಾರ ಹೆಣ್ಣು	ವ್ಯಾಪಾರ ಒಟ್ಟು	ಪಾತ್ರೆ ತೊಳೆಯುವವರರ ಗಂಡು	ಪಾತ್ರೆ ತೊಳೆಯುವವರರ ಹೆಣ್ಣು	ಪಾತ್ರೆ ತೊಳೆಯುವವರರ ಒಟ್ಟು	ಕಾರಪೇಂಟರ್ ಗಂಡು	ಕಾರಪೇಂಟರ್ ಹೆಣ್ಣು	ಕಾರಪೇಂಟರ್ ಒಟ್ಟು	ಇತರೆ ಕೆಲಸ ಗಂಡು	ಇತರೆ ಕೆಲಸ ಹೆಣ್ಣು	ಇತರೆ ಕೆಲಸ ಒಟ್ಟು
೧	ಗಾಂಧಿ ನಗರ (ಸೆಟ್ಲಮೆಂಟ) ಗದಗ	೩		೩							೩೯		೩೯	೫೦	೫	೫೫		೬೫	೬೫	೧೯		೧೯	೨೫೭	೨೦೦	[illegible]
೨	ಗಂಗಾಧರ ನಗರ (ಸೆಟ್ಲಮೆಂಟ) ಹುಬ್ಬಳ್ಳಿ	೬೫	೪೮	೧೧೩	೧೦೪	೭೩	೧೭೭	೨೧	೭	೨೮	೫೫		೫೫	೭೫	೭	೮೨		೬೭	೬೭	೨೫		೨೫	೩೬೨	೩೯೫	[illegible]
	ಒಟ್ಟು	೬೮	೪೮	೧೧೬	೧೦೪	೭೩	೧೭೭	೨೧	೭	೨೮	೯೪		೯೪	೧೨೫	೧೨	೧೩೭		೧೩೨	೧೩೨	೪೪		೪೪	೬೧೯	೬೦೫	೧೨೪[illegible]

ಪಾರ್ಧಿ ಸಮುದಾಯ

ಕ್ರಸಂ.	ನೆಲೆಗಳು	ಕೃಷಿ ಗಂಡು	ಕೃಷಿ ಹೆಣ್ಣು	ಕೃಷಿ ಒಟ್ಟು	ಕೃಷಿ ಕಾರ್ಮಿಕರು ಗಂಡು	ಕೃಷಿ ಕಾರ್ಮಿಕರು ಹೆಣ್ಣು	ಕೃಷಿ ಕಾರ್ಮಿಕರು ಒಟ್ಟು	ಸರಕಾರಿ ನೌಕರರು ಗಂಡು	ಸರಕಾರಿ ನೌಕರರು ಹೆಣ್ಣು	ಸರಕಾರಿ ನೌಕರರು ಒಟ್ಟು	ಆಟೋ ಚಾಲಕರು ಗಂಡು	ಆಟೋ ಚಾಲಕರು ಹೆಣ್ಣು	ಆಟೋ ಚಾಲಕರು ಒಟ್ಟು	ವ್ಯಾಪಾರ ಗಂಡು	ವ್ಯಾಪಾರ ಹೆಣ್ಣು	ವ್ಯಾಪಾರ ಒಟ್ಟು	ಪಾತ್ರೆ ತೊಳೆಯುವವರರ ಗಂಡು	ಪಾತ್ರೆ ತೊಳೆಯುವವರರ ಹೆಣ್ಣು	ಪಾತ್ರೆ ತೊಳೆಯುವವರರ ಒಟ್ಟು	ಕಾರಪೇಂಟರ್ ಗಂಡು	ಕಾರಪೇಂಟರ್ ಹೆಣ್ಣು	ಕಾರಪೇಂಟರ್ ಒಟ್ಟು	ಇತರೆ ಕೆಲಸ ಗಂಡು	ಇತರೆ ಕೆಲಸ ಹೆಣ್ಣು	ಇತರೆ ಕೆಲಸ ಒಟ್ಟು
೧	ಸಕ್ರಿ ಹೈಸೂಲ್ ಹತ್ತಿರ, ಸೆಟ್ಲಮೆಂಟ, ಬಾಗಲಕೋಟ	೫೫	೩೫	೯೦	೯೯	೬೭	೧೬೬	೬	೪	೧೦	೩೦		೩೦	೫	೨	೭		೪೦	೪೦				೪೫	೮	[illegible]
೨	ಸೆಟ್ಲಮೆಂಟ, ಗೊಲ್ ಗುಂಬಜ್ ಹತ್ತಿರ ಬಿಜಾಪುರ	೩೨	೯	೪೧	೪೯	೧೩	೬೨	೯	೨	೧೧	೨೪		೨೪	೨	೧	೩		೧೫	೧೫				೧೮೬	೭೦	[illegible]
೩	ಗಾಂಧಿ ನಗರ (ಸೆಟ್ಲಮೆಂಟ) ಗದಗ	೩		೩	೩೭	೩೧	೬೮				೫		೫	೫		೫		೧೦	೧೦					೧	[illegible]
೪	ಗಂಗಾಧರ ನಗರ (ಸೆಟ್ಲಮೆಂಟ) ಹುಬ್ಬಳ್ಳಿ	೨೧	೭	೨೮	೨೮೭	೨೨೯	೫೧೬	೧೦	೧	೧೧	೨೬		೨೬	೧೫	೨	೧೭		೫೭	೫೭	೧೫		೧೫			
	ಒಟ್ಟು	೧೧೧	೫೧	೧೬೨	೪೭೨	೩೪೦	೮೧೨	೨೫	೬	೩೧	೮೫		೮೫	೨೭	೫	೩೨		೧೨೨	೧೨೨	೧೫		೧೫	೨೩೧	೭೯	೩೧[illegible]

ಚಪ್ಪರಬಂದ ಸಮುದಾಯ

ಕ್ರಸಂ.	ನೆಲೆಗಳು	ಕೃಷಿ ಗಂಡು	ಕೃಷಿ ಹೆಣ್ಣು	ಕೃಷಿ ಒಟ್ಟು	ಕೃಷಿ ಕಾರ್ಮಿಕರು ಗಂಡು	ಕೃಷಿ ಕಾರ್ಮಿಕರು ಹೆಣ್ಣು	ಕೃಷಿ ಕಾರ್ಮಿಕರು ಒಟ್ಟು	ಸರಕಾರಿ ನೌಕರರು ಗಂಡು	ಸರಕಾರಿ ನೌಕರರು ಹೆಣ್ಣು	ಸರಕಾರಿ ನೌಕರರು ಒಟ್ಟು	ಆಟೋ ಚಾಲಕರು ಗಂಡು	ಆಟೋ ಚಾಲಕರು ಹೆಣ್ಣು	ಆಟೋ ಚಾಲಕರು ಒಟ್ಟು	ವ್ಯಾಪಾರ ಗಂಡು	ವ್ಯಾಪಾರ ಹೆಣ್ಣು	ವ್ಯಾಪಾರ ಒಟ್ಟು	ಪಾತ್ರೆ ತೊಳೆಯುವವರರ ಗಂಡು	ಪಾತ್ರೆ ತೊಳೆಯುವವರರ ಹೆಣ್ಣು	ಪಾತ್ರೆ ತೊಳೆಯುವವರರ ಒಟ್ಟು	ಕಾರಪೇಂಟರ್ ಗಂಡು	ಕಾರಪೇಂಟರ್ ಹೆಣ್ಣು	ಕಾರಪೇಂಟರ್ ಒಟ್ಟು	ಇತರೆ ಕೆಲಸ ಗಂಡು	ಇತರೆ ಕೆಲಸ ಹೆಣ್ಣು	ಇತರೆ ಕೆಲಸ ಒಟ್ಟು
೧	ಸಕ್ರಿ ಹೈಸೂಲ್ ಹತ್ತಿರ ಸೆಟ್ಲಮೆಂಟ, ಬಾಗಲಕೋಟ	೨	೫	೭	೭	೭	೧೪	೨	೧	೩	೫		೫	೨	೧	೩		೧೫	೧೫	೩		೩	೧೫	೫	೨೦
೨	ಸೆಟ್ಲಮೆಂಟ, ಗೋಲ್ ಗುಂಬಜ್ ಹತ್ತಿರ ಬಿಜಾಪುರ	೪		೪	೪	೩	೭	೪	೧	೫	೧೦		೧೦	೩	೨	೫		೮	೮	೪		೪	೧೪೬	೭೦	೨೧೬
೩	ಗಾಂಧಿ ನಗರ (ಸೆಟ್ಲಮೆಂಟ) ಗದಗ	೩	೨	೫	೨	೩	೫	೨		೨					೧	೧		೧೬	೧೬	೮		೮	೧೩೧	೬೪	೧೯೫
೪	ಗಂಗಾಧರ ನಗರ (ಸೆಟ್ಲಮೆಂಟ) ಹುಬ್ಬಳ್ಳಿ	೨	೨	೨	೪	೬	೧		೧				೧		೧		೬	೬	೧೦		೧೦	೨೦	೧೦	೩೦	
	ಒಟ್ಟು	೯	೯	೧೮	೧೫	೧೭	೩೨	೯	೨	೧೧	೧೫		೧೫	೬	೪	೧೦		೪೫	೪೫	೨೫		೨೫	೩೧೨	೧೪೯	೪೬೧

ಕಂಜರಭಾಟ ಸಮುದಾಯ

ಕ್ರಸಂ.	ನೆಲೆಗಳು	ಕೃಷಿ ಗಂಡು	ಕೃಷಿ ಹೆಣ್ಣು	ಕೃಷಿ ಒಟ್ಟು	ಕೃಷಿ ಕಾರ್ಮಿಕರು ಗಂಡು	ಕೃಷಿ ಕಾರ್ಮಿಕರು ಹೆಣ್ಣು	ಕೃಷಿ ಕಾರ್ಮಿಕರು ಒಟ್ಟು	ಸರಕಾರಿ ನೌಕರರು ಗಂಡು	ಸರಕಾರಿ ನೌಕರರು ಹೆಣ್ಣು	ಸರಕಾರಿ ನೌಕರರು ಒಟ್ಟು	ಆಟೋ ಚಾಲಕರು ಗಂಡು	ಆಟೋ ಚಾಲಕರು ಹೆಣ್ಣು	ಆಟೋ ಚಾಲಕರು ಒಟ್ಟು	ವ್ಯಾಪಾರ ಗಂಡು	ವ್ಯಾಪಾರ ಹೆಣ್ಣು	ವ್ಯಾಪಾರ ಒಟ್ಟು	ಪಾತ್ರೆ ತೊಳೆಯುವವರರ ಗಂಡು	ಪಾತ್ರೆ ತೊಳೆಯುವವರರ ಹೆಣ್ಣು	ಪಾತ್ರೆ ತೊಳೆಯುವವರರ ಒಟ್ಟು	ಕಾರಪೇಂಟರ್ ಗಂಡು	ಕಾರಪೇಂಟರ್ ಹೆಣ್ಣು	ಕಾರಪೇಂಟರ್ ಒಟ್ಟು	ಇತರೆ ಕೆಲಸ ಗಂಡು	ಇತರೆ ಕೆಲಸ ಹೆಣ್ಣು	ಇತರೆ ಕೆಲಸ ಒಟ್ಟು
೧	ಗಾಂಧಿ ನಗರ (ಸೆಟ್ಲಮೆಂಟ) ಗದಗ				೨೫	೧೭	೪೨	೩		೩	೧೩		೧೩	೯	೪	೧೩		೨೧	೨೧	೩		೩	೪೮	೧೪	೬೨
೨	ಗಂಗಾಧರ ನಗರ (ಸೆಟ್ಲಮೆಂಟ) ಹುಬ್ಬಳ್ಳಿ				೩೦	೧೯	೪೯	೪	೧	೫	೧೪		೧೪	೧೧	೬	೧೭		೧೯	೧೯	೨		೨	೪೨	೪೧	೮೩
	ಒಟ್ಟು				೫೫	೩೬	೯೧	೭	೧	೮	೨೭		೨೭	೨೦	೧೦	೩೦		೪೦	೪೦	೫		೫	೯೦	೫೫	೧೪೫

೫. ಸಮೀಕ್ಷೆಗೊಳಪಟ್ಟ ಕರ್ನಾಟಕ ವಿಮುಕ್ತ ಬುಡಕಟ್ಟುಗಳ ಪಡೆದ ಸರಕಾರಿ ಸೌಲಭ್ಯಗಳು

ಭೋವಿ ಸಮುದಾಯ

ಪಡೆಯುವವರು		ಒಟ್ಟು ಜನಸಂಖ್ಯೆ			ಮತದಾರರು			ವಿದವಾ ವೇತನದಾರರು			ವದ್ಯಾಪ ವೇತನ			ಶಿಷ್ಯವೇತನ ಪಡೆಯುವವರ ಗುಂಪು		
ಕ್ರಸಂ.	ನೆಲೆಗಳು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಗಂಗಾಧರ ನಗರ(ಸೆಟ್ಲಮೆಂಟ) ಹುಬ್ಬಳ್ಳಿ	೬೦೨	೫೧೧	೧೧೧೩	೨೩೭	೨೩೮	೪೭೫	–	೧೨	೧೨	೧೯	೧೧	೪೦	೭೯	೧೬	೯೫
	ಒಟ್ಟು	೬೦೨	೫೧೧	೧೧೧೩	೨೩೭	೨೩೮	೪೭೫	–	೧೨	೧೨	೧೯	೧೧	೪೦	೭೯	೧೬	೯೫

ಗಂಟಿಚೋರ ಸಮುದಾಯ

ಪಡೆಯುವವರು		ಒಟ್ಟು ಜನಸಂಖ್ಯೆ			ಮತದಾರರು			ವಿದವಾ ವೇತನದಾರರು			ವದ್ಯಾಪ ವೇತನ			ಶಿಷ್ಯವೇತನ ಪಡೆಯುವವರ ಗುಂಪು		
ಕ್ರಸಂ.	ನೆಲೆಗಳು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಸಕ್ರಿ ಹೈಸೂಲ್ ಹತ್ತಿರ,ಸೆಟ್ಲಮೆಂಟ,ಬಾಗಲಕೋಟ	೧೨೪	೧೨೦	೨೪೪	೫೬	೪೫	೧೦೧	–	೩	೩	೪		೪	೨೫	೪	೨೯
೨	ಸೆಟ್ಲಮೆಂಟ, ಗೋಲ್‌ಗುಂಬಜ್ ಹತ್ತಿರ ಬಿಜಾಪುರ	೧೮೦	೧೭೮	೩೫೮				–				೩	೩	೧೩	೨	೧೫
೩	ಗಣೇಶ ಗಲ್ಲಿ ಹತ್ತಿರ,ಸೆಟ್ಲಮೆಂಟ,ಹಳೆ ದಾಂಡೇಲಿ	೨೩೭	೨೩೧	೪೬೮	೧೫೬	೧೪೦	೨೯೬	–	೪	೪	೩	೨	೫	೨೩	೦	೨೩
೪	ಗಾಂಧಿ ನಗರ(ಸೆಟ್ಲಮೆಂಟ) ಗದಗ	೩೬೦	೩೪೭	೭೦೭	೧೭೪	೧೪೭	೩೨೧	–			೨		೨	೩೩	೧೩	೪೬
೫	ಸೆಟ್ಲಮೆಂಟ, ಮಿಲ್ ಹತ್ತಿರ ಗೊಕಾಕ್ ಫಾಲ್ಸ್	೨೧೭	೧೯೫	೪೧೨	೬೫	೯೨	೧೫೭	–	೫	೫	೧	೪	೫	೨೨	೪	೨೬
೬	ಗಂಗಾಧರ ನಗರ(ಸೆಟ್ಲಮೆಂಟ) ಹುಬ್ಬಳ್ಳಿ	೪೧೨	೩೫೫	೭೬೭	೩	೩	೬	–			೩		೩	೨೫	೫	೩೦
	ಒಟ್ಟು	೧೫೩೦	೧೪೨೬	೨೯೫೬	೪೫೪	೪೨೭	೮೮೧	–	೧೨	೧೨	೧೩	೯	೨೨	೧೪೧	೨೮	೧೬೯

ಕೊರಮ ಸಮುದಾಯ

ಕ್ರಸಂ.	ನೆಲೆಗಳು	ಒಟ್ಟು ಜನಸಂಖ್ಯೆ			ಮತದಾರರು			ವಿದವಾ ವೇತನದಾರರು			ವದ್ಯಾಪ ವೇತನ ಪಡೆಯುವವರ ಗುಂಪು			ಶಿಷ್ಯವೇತನ ಪಡೆಯುವವರು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಗಾಂಧಿ ನಗರ(ಸೆಟ್ಲಮೆಂಟ) ಗದಗ	೭೬೮	೬೯೮	೧೪೬೬	೪೫೩	೪೪೫	೮೯೮	–	೩೦	೩೦	೪೯	೩೯	೮೮	೪೬	೧೫	೬೧
೨	ಗಂಗಾಧರ ನಗರ(ಸೆಟ್ಲಮೆಂಟ) ಹುಬ್ಬಳ್ಳಿ	೨೩೦೪	೨೨೦೧	೪೫೦೫	೧೦೩೯	೧೦೪೨	೨೦೮೧	–	೬೫	೬೫	೫೫	೬೦	೧೧೫	೮೫	೨೨	೧೦೭
	ಒಟ್ಟು	೩೦೭೨	೨೮೯೯	೫೯೭೧	೧೪೯೨	೧೪೮೭	೨೯೭೯	–	೯೫	೯೫	೧೦೪	೯೯	೨೦೩	೧೩೧	೩೭	೧೬೮

ಪಾರ್ಧಿ ಸಮುದಾಯ

ಕ್ರಸಂ.	ನೆಲೆಗಳು	ಒಟ್ಟು ಜನಸಂಖ್ಯೆ			ಮತದಾರರು			ವಿದವಾ ವೇತನದಾರರು			ವದ್ಯಾಪ ವೇತನ ಪಡೆಯುವವರ ಗುಂಪು			ಶಿಷ್ಯವೇತನ ಪಡೆಯುವವರು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಸಕ್ರಿ ಹೈಸೂಲ್ ಹತ್ತಿರ,ಸೆಟ್ಲಮೆಂಟ,ಬಾಗಲಕೋಟ	೮೪೫	೮೫೪	೧೬೯೯	೪೦೮	೪೧೦	೮೧೮	–	೧೯	೧೯	೫	೮	೧೩	೨೪	೫	೨೯
೨	ಸೆಟ್ಲಮೆಂಟ, ಗೋಲ್‌ಗುಂಬಜ್ ಹತ್ತಿರ ಬಿಜಾಪುರ	೬೭೩	೭೭೦	೧೪೪೩	೨೭೫	೩೦೧	೫೭೬	–	೧೫	೧೫	೧೩	೯	೨೨	೧೫	೧	೧೬
೩	ಗಾಂಧಿ ನಗರ(ಸೆಟ್ಲಮೆಂಟ) ಗದಗ	೭೯	೮೧	೧೬೦	೩೬	೧೬	೫೨	–	೧೯	೧೯	೬	೧೨	೧೮	೬	೧	೭
೪	ಗಂಗಾಧರ ನಗರ(ಸೆಟ್ಲಮೆಂಟ) ಹುಬ್ಬಳ್ಳಿ	೧೬೦೬	೧೫೦೭	೩೧೧೩	೫೧೨	೪೧೬	೯೨೮	–	೪೫	೪೫	೪೫	೩೫	೮೦	೧೩	೪	೧೭
	ಒಟ್ಟು	೩೨೦೩	೩೨೧೨	೬೪೧೫	೧೨೩೧	೧೧೪೩	೨೩೭೪	–	೯೮	೯೮	೬೯	೬೪	೧೩೩	೫೮	೧೧	೬೯

ಚಪ್ಪರಬಂದ ಸಮುದಾಯ

ಕ್ರ.ಸಂ.	ನೆಲೆಗಳು	ಒಟ್ಟು ಜನಸಂಖ್ಯೆ			ಮತದಾರರು			ವಿದವಾ ವೇತನದಾರರು			ವದ್ಯಾಪ ವೇತನ ಪಡೆಯುವವರ ಗುಂಪು			ಶಿಷ್ಯವೇತನ ಪಡೆಯುವವರು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಸಕ್ರಿ ಹೈಸೂಲ್ ಹತ್ತಿರ,ಸೆಟ್ಲಮೆಂಟ, ಬಾಗಲಕೋಟ	೧೩೩	೯೯	೨೩೨	೨೮	೨೬	೫೪	–	–	–	–	–	–	–	–	–
೨	ಸೆಟ್ಲಮೆಂಟ, ಗೊಲ್‌ಗುಂಬಜ್ ಹತ್ತಿರ ಬಿಜಾಪುರ	೪೪೮	೩೮೮	೮೩೬	೧೩೮	೧೩೫	೨೭೩	–	೦	೦	–	–	–	೨೮	೨೪	೫೨
೩	ಗಾಂಧಿ ನಗರ(ಸೆಟ್ಲಮೆಂಟ) ಗದಗ	೨೩೬	೨೦೮	೪೪೪	೧೧೦	೧೦೯	೨೧೯	–	–	–	–	–	–	೨೮	೨೪	೫೨
೪	ಗಂಗಾಧರ ನಗರ(ಸೆಟ್ಲಮೆಂಟ) ಹುಬ್ಬಳ್ಳಿ	೬೫	೬೦	೧೨೫	೨		೨	–	೧	೧	–	–	–	–	–	–
	ಒಟ್ಟು	೮೮೨	೭೫೫	೧೬೩೭	೨೭೮	೨೭೦	೫೪೮	–	೧	೧	–	–	–	೫೬	೪೮	೧೦೪

ಕಂಜರಭಾಟ ಸಮುದಾಯ

ಕ್ರ.ಸಂ.	ನೆಲೆಗಳು	ಒಟ್ಟು ಜನಸಂಖ್ಯೆ			ಮತದಾರರು			ವಿದವಾ ವೇತನದಾರರು			ವದ್ಯಾಪ ವೇತನ ಪಡೆಯುವವರ ಗುಂಪು			ಶಿಷ್ಯವೇತನ ಪಡೆಯುವವರು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಗಾಂಧಿ ನಗರ(ಸೆಟ್ಲಮೆಂಟ) ಗದಗ	೧೦೩	೧೦೦	೨೦೩	೪೨	೩೩	೭೫	–	೩	೩	–	–	–	–	–	–
೨	ಗಂಗಾಧರ ನಗರ(ಸೆಟ್ಲಮೆಂಟ) ಹುಬ್ಬಳ್ಳಿ	೧೯೩	೧೬೧	೩೫೪	೨೩	೧೬	೩೮	–	೨	೨	–	೧	೧	–	–	–
	ಒಟ್ಟು	೨೯೬	೨೬೧	೫೫೭	೬೫	೪೯	೧೧೩	–	೫	೫	–	೧	೧	–	–	–

೬. ಸಮೀಕ್ಷೆಗೊಳಪಟ್ಟ ಕರ್ನಾಟಕ ವಿಮುಕ್ತ ಬುಡಕಟ್ಟುಗಳ ಮನೆಗಳ ಸ್ವರೂಪ

ಭೋವಿ ಸಮುದಾಯ

ಕ್ರ.ಸಂ.	ನೆಲೆಗಳು	ಕುಟುಂಬಗಳು	ಗುಡಾರ	ಗುಡಿಸಲು	ತಗಡು ಮನೆ	ಮಾಳಿಗೆ ಮನೆ	ಆರ್‌ಸಿಸಿ ಮನೆ	ಹೆಂಚಿನಮನೆ	ಆಶ್ರಯ ಮನೆ	ಬಾಡಿಗೆ ಮನೆ
೧	ಗಂಗಾಧರ ನಗರ(ಸೆಟ್ಲಮೆಂಟ) ಹುಬ್ಬಳ್ಳಿ	೧೯೯		೨೩	೫೪	೩೧	೧೫	೫೯	೧೧	೬
	ಒಟ್ಟು	೧೯೯		೨೩	೫೪	೩೧	೧೫	೫೯	೧೧	೬

ಗಂಟಿಚೋರ ಸಮುದಾಯ

ಕ್ರ.ಸಂ.	ನೆಲೆಗಳು	ಕುಟುಂಬಗಳು	ಗುಡಾರ	ಗುಡಿಸಲು	ತಗಡು ಮನೆ	ಮಾಳಿಗೆ ಮನೆ	ಆರ್‌ಸಿಸಿ ಮನೆ	ಹೆಂಚಿನಮನೆ	ಆಶ್ರಯ ಮನೆ	ಬಾಡಿಗೆ ಮನೆ
೧	ಸಕ್ರಿ ಹೈಸೂಲ್ ಹತ್ತಿರ,ಸೆಟ್ಲಮೆಂಟ,ಬಾಗಲಕೋಟ	೪೯			೯	೨	೪		೩೨	೨
೨	ಸೆಟ್ಲಮೆಂಟ, ಗೋಲ್‌ಗುಂಬಜ್ ಹತ್ತಿರ ಬಿಜಾಪುರ	೮೧	೧	೧೯	೨೪	೨೬	೧		೬	೪
೩	ಗಣೇಶ ಗಲ್ಲಿ ಹತ್ತಿರ,ಸೆಟ್ಲಮೆಂಟ,ಹಳೆ ದಾಂಡೇಲಿ	೪೯	೨	೫	೩೨	೨೭	೪	೧೦	೫	೪
೪	ಗಾಂಧಿ ನಗರ(ಸೆಟ್ಲಮೆಂಟ) ಗದಗ	೧೩೦		೬	೧೯	೮೮	೩	೭	೫	೨
೫	ಸೆಟ್ಲಮೆಂಟ, ಮಿಲ್ ಹತ್ತಿರ ಗೋಕಾಕ್ ಫಾಲ್ಸ್	೧೦೬						೧೦೧		೫
೬	ಗಂಗಾಧರ ನಗರ(ಸೆಟ್ಲಮೆಂಟ) ಹುಬ್ಬಳ್ಳಿ	೧೭೦	೫	೨೪	೪೬	೫೫	೧೧	೭	೨೨	
	ಒಟ್ಟು	೬೨೫	೮	೫೪	೧೩೦	೧೯೮	೨೩	೧೨೫	೭೦	೧೭

ಕೊರಮ ಸಮುದಾಯ

ಕ್ರ.ಸಂ.	ನೆಲೆಗಳು	ಕುಟುಂಬಗಳು	ಗುಡಾರ	ಗುಡಿಸಲು	ತಗಡು ಮನೆ	ಮಾಳಿಗೆ ಮನೆ	ಆರ್‌ಸಿಸಿ ಮನೆ	ಹೆಂಚಿನಮನೆ	ಆಶ್ರಯ ಮನೆ	ಬಾಡಿಗೆ ಮನೆ
೧	ಗಾಂಧಿ ನಗರ(ಸೆಟ್ಲಮೆಂಟ) ಗದಗ	೨೮೬		೧೦	೯೮	೬೯	೨೬	೫೬	೨೫	೨
೨	ಗಂಗಾಧರ ನಗರ(ಸೆಟ್ಲಮೆಂಟ) ಹುಬ್ಬಳ್ಳಿ	೬೯೧		೮	೧೭೩	೨೨೯	೭೮	೮೭	೧೦೯	೭
	ಒಟ್ಟು	೯೭೭		೧೮	೨೭೧	೨೯೮	೧೦೪	೧೪೩	೧೩೪	೯

ಪಾರ್ಧಿ ಸಮುದಾಯ

ಕ್ರಸಂ.	ನೆಲೆಗಳು	ಕುಟುಂಬಗಳು	ಗುಡಾರ	ಗುಡಿಸಲು	ತಗಡು ಮನೆ	ಮಾಳಿಗೆ ಮನೆ	ಆರ್‌ಸಿಸಿ ಮನೆ	ಹೆಂಚಿನಮನೆ	ಆಶ್ರಯ ಮನೆ	ಬಾಡಿಗೆ ಮನೆ
೧	ಸಕ್ರಿ ಹೈಸೂಲ್ ಹತ್ತಿರ,ಸೆಟ್ಲಮೆಂಟ,ಬಾಗಲಕೋಟ	೨೫೫			೩೨	೪	೩೦		೧೮೮	೧
೨	ಸೆಟ್ಲಮೆಂಟ, ಗೊಲ್‌ಗುಂಬಜ್ ಹತ್ತಿರ ಬಿಜಾಪು	೨೬೧	೮	೬೬	೩	೧೫೨	೧೫		೮	೯
೩	ಗಾಂಧಿ ನಗರ(ಸೆಟ್ಲಮೆಂಟ) ಗದಗ	೩೧	೧	೩	೮	೪	೪	೪	೧	೬
೪	ಗಂಗಾಧರ ನಗರ(ಸೆಟ್ಲಮೆಂಟ) ಹುಬ್ಬಳ್ಳಿ	೫೪೯	೨೧	೧೪	೧೪೯	೩೧೨	೩೭	೧	೧೦	೫
	ಒಟ್ಟು	೧೧೦೬	೩೦	೮೩	೨೦೨	೪೭೨	೮೬	೫	೨೦೭	೨೧

ಚಪ್ಪರಬಂದ ಸಮುದಾಯ

ಕ್ರಸಂ.	ನೆಲೆಗಳು	ಕುಟುಂಬಗಳು	ಗುಡಾರ	ಗುಡಿಸಲು	ತಗಡು ಮನೆ	ಮಾಳಿಗೆ ಮನೆ	ಆರ್‌ಸಿಸಿ ಮನೆ	ಹೆಂಚಿನಮನೆ	ಆಶ್ರಯ ಮನೆ	ಬಾಡಿಗೆ ಮನೆ
೧	ಸಕ್ರಿ ಹೈಸೂಲ್ ಹತ್ತಿರ,ಸೆಟ್ಲಮೆಂಟ,ಬಾಗಲಕೋಟ	೩೮		೨	೮	೮	೨	೧೦	೭	೧
೨	ಸೆಟ್ಲಮೆಂಟ, ಗೊಲ್‌ಗುಂಬಜ್ ಹತ್ತಿರ ಬಿಜಾಪುರ	೧೭೦	೧	೪೧	೪೭	೧೨	೬	೩೪	೨೨	೭
೩	ಗಾಂಧಿ ನಗರ(ಸೆಟ್ಲಮೆಂಟ) ಗದಗ	೧೦೧	೧	೨೮	೧೦	೩	೧	೪೩	೧೫	
೪	ಗಂಗಾಧರ ನಗರ(ಸೆಟ್ಲಮೆಂಟ) ಹುಬ್ಬಳ್ಳಿ	೨೮	೨	೩	೧೮	೪	೧			
	ಒಟ್ಟು	೩೩೭	೪	೭೪	೮೩	೨೭	೧೦	೮೭	೪೪	೮

ಕಂಜರಭಾಟ ಸಮುದಾಯ

ಕ್ರಸಂ.	ನೆಲೆಗಳು	ಕುಟುಂಬಗಳು	ಗುಡಾರ	ಗುಡಿಸಲು	ತಗಡು ಮನೆ	ಮಾಳಿಗೆ ಮನೆ	ಆರ್‌ಸಿಸಿ ಮನೆ	ಹೆಂಚಿನಮನೆ	ಆಶ್ರಯ ಮನೆ	ಬಾಡಿಗೆ ಮನೆ
೧	ಗಾಂಧಿ ನಗರ(ಸೆಟ್ಲಮೆಂಟ) ಗದಗ	೪೭	೫	೬	೧೨	೩	೧	೧೨	೨	೬
೨	ಗಂಗಾಧರ ನಗರ(ಸೆಟ್ಲಮೆಂಟ) ಹುಬ್ಬಳ್ಳಿ	೮೨	೭	೨೯	೬	೪	೦	೨೬	೨	೮
	ಒಟ್ಟು	೧೨೯	೧೨	೩೫	೧೮	೭	೧	೩೮	೪	೧೪

೬. ಛಾಯಾಚಿತ್ರಗಳು



೧. ವಿಮುಕ್ತ ಬುಡಕಟ್ಟುಗಳೆ ರಚಿಸಿರುವ ಸಹಕಾರಿ ಸಂಘ(ರಿ) ಬಾಗಲಕೋಟ.



೨. ವಿಮುಕ್ತ ಬುಡಕಟ್ಟುಗಳ ವಾಸಸ್ಥಾನ ಬಾಗಲಕೋಟ.



೩. ಪಾರ್ಧಿಯರ ದಂಡಿನ ದುರ್ಗಮ್ಮನ ಕಟ್ಟೆ.



೪. ಪಾರ್ಧಿಯರ ದಂಡಿನ ದುರ್ಗಮ್ಮನ ಕಟ್ಟೆ. ಬಿಜಾಪುರ.



೫. ಬ್ರಿಟೀಷರು ವಿಮುಕ್ತಪೂರ್ವ ಬುಡಕಟ್ಟುಗಳಿಗೆ ಶಿಕ್ಷೆ ನೀಡುತ್ತಿದ್ದ ಬಂದಿಖಾನೆ. ಬಿಜಾಪುರ.



೬. ಬ್ರಿಟೀಷ್ ಸಮಾಜ ಕಲ್ಯಾಣಾಧಿಕಾರಿಯ ಚಿತ್ರ, ಗದಗ



೭. ಬಡಿಗೇರ ಕಾರಖಾನೆಯ ನಾಮಫಲಕ, ಗದಗ.



೮.ಬ್ರಿಟೀಷರು ವಿಮುಕ್ತ ಪೂರ್ವ ಬುಡಕಟ್ಟುಗಳಿಗಾಗಿ ನಿರ್ಮಿಸಿದ ಬಡಿಗೇರ ಕಾರಖಾನೆ, ಗದಗ.



೯. ಚಪ್ಪರಬಂದರು ಪ್ರಾರ್ಥನೆ ಸಲ್ಲಿಸುವ ಮಸಿದಿ, ಗದಗ.









೧೦. ಸ್ವತಂತ್ರ ಪೂರ್ವದಲ್ಲಿ ಚಪ್ಪರಬಂದರು ತಯಾರಿಸಿದ ನಾಣ್ಯಗಳು.



೧೧. 'ಡಾಲಿ' ಶಾಸ್ತ್ರದಲ್ಲಿ ಪಾಲ್ಗೊಂಡ ಚಪ್ಪರಬಂದ ಮಹಿಳೆಯರು, ಗದಗ.



೧೨. ಮದುವೆ ಸಂದರ್ಭದಲ್ಲಿ ರಂಗೋಲಿಯಿಂದ ಸುರಿಗೆ ಬಿಡಿಸುತ್ತಿರುವ ಚಪ್ಪರಬಂದ ಸಮುದಾಯದ ಮಹಿಳೆಯರು, ಗದಗ.









೧೩. ವಿಮುಕ್ತಬುಡಕಟ್ಟುಗಳ ಏಳು ಮಕ್ಕಳ ತಾಯಿ, ಗದಗ



೧೪. ಬ್ರಿಟೀಷರು ವಿಮುಕ್ತ ಪೂರ್ವ ಬುಡಕಟ್ಟುಗಳಿಗೆ ಶಿಕ್ಷೆ ನೀಡುತಿದ್ದ ಬಂದಿಖಾನೆ, ಹುಬ್ಬಳ್ಳಿ.



೧೫. ಖಾಸಗಿ ಶಿಕ್ಷಣ ಸಂಸ್ಥೆ, ಹುಬ್ಬಳ್ಳಿ ಸೆಟ್ಲಮೆಂಟ.



೧೬. ಬ್ರಿಟೀಷರ ಕಾಲದಲ್ಲಿ ವಿಮುಕ್ತ ಪೂರ್ವ ಬುಡಕಟ್ಟುಗಳೆ ಕಟ್ಟಿರುವ ಚರ್ಚ್, ಹುಬ್ಬಳ್ಳಿ



೧೭. ಯಂಗ್‌ಸ್ಟಾರ್ಸ್ ಸ್ಪೋರ್ಟ್ಸ್ ಕ್ಲಬ್, ಹುಬ್ಬಳ್ಳಿ



೧೮. ವಿಮುಕ್ತ ಬುಡಕಟ್ಟಗಳು ವಾಸಿಸುತ್ತಿರುವ ಮನೆಗಳು, ಹುಬ್ಬಳ್ಳಿ.



೧೯. ಚರ್ಚೆಯಲ್ಲಿ ಪಾಲ್ಗೊಂಡಿರುವ ಚಪ್ಪರಬಂದ ಸಮುದಾಯದ ಹಿರಿಯರು.



೨೦. ಬ್ರಿಟೀಷರು ವಿಮುಕ್ತ ಪೂರ್ವ ಬುಡಕಟ್ಟುಗಳಿಗೆ ಕುಡಿಯುವ ನೀರಿಗಾಗಿ ನಿರ್ಮಿಸಿದ ಬಾವಿ, ಹುಬ್ಬಳ್ಳಿ.



೨೧. ಬ್ರಿಟೀಷರು ವಿಮುಕ್ತ ಪೂರ್ವ ಬುಡಕಟ್ಟುಗಳಿಗಾಗಿ
ನಿರ್ಮಿಸಿದ್ದ ಮುಕ್ತ ತಂತಿ ಬೇಲಿ ಕಂಬದ ಚಿತ್ರ



೨೨. ಬಳ್ಳಾರಿ ದುರ್ಗಮ್ಮನ ಕಟ್ಟೆ, ಹುಬ್ಬಳ್ಳಿ.



೨೩. ಬ್ರಿಟೀಷರ ಕಾಲದಲ್ಲಿ
ಪೊಲೀಸ್ ಆಗಿದ್ದ ಗುಂಡಪ್ಪ
ದತ್ತವಾಡ (ವಯಸ್ಸು ೯೮), ಹುಬ್ಬಳ್ಳಿ.



೨೪. ಕಂಜರಭಾಟ
ಸಮುದಾಯದ
ಹಿರಿಯ ಮಹಿಳೆ.









೨೫. ಕಂಜರಭಾಟ ಆಧುನಿಕ ಶೈಲಿಯ ಕೃಷ್ಣ ಮಂದಿರ



೨೬. ಅಂತ್ಯಸಂಸ್ಕಾರಕ್ಕೆ ಶವ ಹೊತ್ಯೊಯುತ್ತಿರುವ ಕಂಜರಭಾಟರು.



೨೭. ಪಿಂಡ ಬಿಡುವ ಕಾರ್ಯಕ್ರಮದಲ್ಲಿ ಭಾಗಿಯಾದ ಕಂಜರಭಾಟ ಮಹಿಳೆಯರು


ಧಾರವಾಡ ಜಿಲ್ಲಾ




FACTORY
1926
GADAG



